# ಶಂಕರದರ್ಶನ

## (ಬ್ರಹ್ಮಜ್ಞವಚನಗಳು)



ಬ್ರಹ್ಮಜ್ಞಕವಿ ಶ್ರೀದೇವರಾಯ ಕುಲಕರ್ಣಿ (ಹೊಂಬಳ)

ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211

# ಸಂಸ್ಥಾಪಕರ ಸ್ಮರಣೆ



ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯದಿಂದ ಶ್ರೀ ಶಂಕರ ಭಗವತ್ಪಾದರು ಸರ್ವದಾ ಸ್ಮರಣೀಯರು. ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು- ವೈ. ಸುಬ್ಬರಾಯರು, ಜನನ 5.1.1880) ಶ್ರೀಶಂಕರವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ-ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯಭಾಷ್ಯಗಳಿಗೆ ಹತ್ತಿದ್ದ ಕೊಳೆಯನ್ನು, ಮುತ್ತಿದ್ದಧೂಳನ್ನು ತೊಡೆದು ಶಾಂಕರ ವೇದಾಂತದ ನೈಜತಿರುಳನ್ನು ಕಂಡುಕೊಂಡರು. ಶಾಂಕರವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಅಭಿನವಶಂಕರರಾದರು.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು 'ಪುರುಷ ಸರಸ್ವತೀ' ಎಂಬ ಅನ್ವರ್ಥ ನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮ ವಿಚಾರಕರಾದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮದ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರಸಂಪರ್ಕ, ಅಧ್ಯಾತ್ಮಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀಗೋಂದಾವಳಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳಾದ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತಿ ಮಹಾಸ್ವಾಮಿಗಳವರಿಂದ ಕಾಲಟಿಯಲ್ಲಿಯೇ ಭಾಷ್ಯಶಾಂತಿ ಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರಗನ್ನು ನೀಡಿದವು.

1937ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. 1948ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರ ಕೇಂದ್ರವಾಗಿದೆ. ಪೂಜ್ಯರು 1975ನೇ ಆಗಸ್ಟ್ 5ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ. ಈಚೆಗೆ 28.07.2008ರಂದು ಪ್ರತಿಷ್ಠೆಗೊಂಡ ಶ್ರೀ ಶ್ರೀಗಳವರ ಅಮೃತಶಿಲಾವಿಗ್ರಹವು ಹೊಳೆನರಸೀಪುರದ ಸಮಾಧಿಮಂದಿರದಲ್ಲಿ ರಾರಾಜಿಸುತ್ತಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹೀ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥

'' ಓಂ ನಮೋ ಭಗವತೇ ಸಚ್ಚಿದಾನಂದಾಯ ''

**SHANKARA DARSHANA** - Written by
**Sri Devaraya Kulakarni Hombala,**
Published by Adhyatma Prakasha Karyalaya, Public Charitable Trust, Holenarasipur - 573211, Hassan District, Karnataka State, INDIA.
Phone : 08175-273820

1ನೆಯ ಮುದ್ರಣ 1969;
2ನೆಯ ಮುದ್ರಣ 2018 - 500 ಪ್ರತಿಗಳು

ಮುದ್ರಣ ಕಾಗದ : **70 GSM NS Maplitho**

ಪುಟಗಳು : **48+342=390**

ಬೆಲೆ : ರೂ. 150/-

© ಅಧ್ಯಾತ್ಮಪ್ರಕಾಶಕಾರ್ಯಾಲಯವು

*ಪ್ರತಿಗಳು ದೊರೆಯುವ ಸ್ಥಳ :*
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573 211, ದೂರವಾಣಿ 08175-273820
www.adhyatmaprakasha.org.
email: secretary@adhyatmaprakasha.org
coordinator_apk@yahoo.com

ಬೆಂಗಳೂರು ಶಾಖೆ :
ಅಧ್ಯಾತ್ಮಪ್ರಕಾಶಕಾರ್ಯಾಲಯ
ನಂ. 68, (ಹೊಸ ನಂ. 6), ಎ.ಪಿ.ಕೆ. ರಸ್ತೆ, 2ನೇ ಬ್ಲಾಕ್,
ತ್ಯಾಗರಾಜನಗರ, ಬೆಂಗಳೂರು - 560 028.
ದೂ: 080-26765548
email: shankara.bhaskara@gmail.com

ಅಕ್ಷರ ಜೋಡಣೆ ಮತ್ತು ಮುದ್ರಣ ಸ್ಥಾನ:
ಶ್ರೀರಾಮ ಪ್ರಿಂಟರ್ಸ್
ನಂ.25, 15ನೇ ಕ್ರಾಸ್, ಶ್ರೀನಿಧಿಲೇಔಟ್,
ಬೆಂಗಳೂರು - 560 062. ಮೊಬೈಲ್: ೯೮೪೫೩ ೪೬೦೯೭

ಅಧ್ಯಾತ್ಮ ಗ್ರಂಥಾವಳಿ

# ಶಂಕರದರ್ಶನ

## (ಬ್ರಹ್ಮಜ್ಞ ವಚನಗಳು)

ಬರೆದವರು

ಶ್ರೀ ದೇವರಾಯ ಕುಲಕರ್ಣಿ ಹೊಂಬಳ

**ಕ್ರಮಾಂಕ : 148**

**Price List Catalog Sl.No. 203**

**ಅಧ್ಯಾತ್ಮ ಪ್ರಕಾಶ ಕಾರ್ಯಾಲಯ**

**ಹೊಳೆನರಸೀಪುರ - 573 211, ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ**

ದೂರವಾಣಿ 08175-273820

website: www.adhyatmaprakasha.org

E-mail: secretary@adhyatmaprakasha.org
coordinator_apk@yahoo.com

ಬೆಂಗಳೂರು ಶಾಖೆ :

ನಂ. 68, (ಹೊಸ ನಂ. 6), ಎ.ಪಿ.ಕೆ. ರಸ್ತೆ, 2ನೇ ಬ್ಲಾಕ್,

ತ್ಯಾಗರಾಜನಗರ, ಬೆಂಗಳೂರು - 560 028 ದೂ: 080-2676 5548

E-mai: shankara.bhaskara@gmail.com

**2018**

# ಪ್ರಕಾಶಕರ ಮುನ್ನುಡಿ

## (ಮೊದಲನೆ ಮುದ್ರಣ)

ಬೆಂಗಳೂರು ನಗರದ ವಿಶ್ವೇಶ್ವರಪುರದಲ್ಲಿರುವ ಅಧ್ಯಾತ್ಮಮಂದಿರದಲ್ಲಿ ಪರಮಾರ್ಥವಿಚಾರಸಂಘದ ಆಶ್ರಯದಲ್ಲಿ ವೇದಾಂತಪ್ರವಚನಾದಿಗಳನ್ನು ನಡೆಯಿಸುತ್ತಿರುವ ಶ್ರೀಮಾನ್ ದೇವರಾಯಕುಲಕರ್ಣಿ ಹೊಂಬಳ–ಇವರು ಬರೆದು ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರಿಗೆ ಸಮರ್ಪಿಸಿರುವ 'ಶಂಕರದರ್ಶನ' (ಬ್ರಹ್ಮಜ್ಞವಚನ) ಎಂಬ ಈ ಗ್ರಂಥವು ಕಾರ್ಯಾಲಯದ ಮಾಸಪತ್ರಿಕೆಯಾದ 'ಅಧ್ಯಾತ್ಮಪ್ರಕಾಶ'ದಲ್ಲಿ ಸುಮಾರು ಮೂರುವರ್ಷಗಳ ಕಾಲ ಕ್ರಮವಾಗಿ ಪ್ರಕಟವಾಯಿತು. ಅದರ ಮರಿಅಚ್ಚನ್ನು ತೆಗೆದು ಗ್ರಂಥಸಾರ, ಪೀಠಿಕೆ ಮುಂತಾದ ಭಾಗಗಳನ್ನು ಹೊಸದಾಗಿಯೇ ಪ್ರತ್ಯೇಕವಾಗಿ ಗ್ರಂಥಕರ್ತರಿಂದ ಬರೆಯಿಸಿ ಈ ಕೃತಿಯನ್ನು ಈಗಿನ ಪೂರ್ಣರೂಪದಲ್ಲಿ ಮಹಾಜನರ ಮುಂದೆ ಇಡಲಾಗಿದೆ.

ಕಾರ್ಯಾಲಯವು ಪ್ರಧಾನವಾಗಿ ಶ್ರೀಶ್ರೀಗಳವರ ಬರವಣಿಗೆಗಳನ್ನೇ ಹೊರತರುವ ಧ್ಯೇಯವನ್ನು ಇಟ್ಟುಕೊಂಡಿದೆಯಾದರೂ ಪ್ರಕೃತಗ್ರಂಥವು ಶ್ರೀಶ್ರೀಗಳವರ ವೇದಾಂತವಿಚಾರಸರಣಿ, ಪ್ರತಿಪಾದನೆ– ಹಾಗೂ ವಿಷಯಗಳನ್ನೇ ಒಳಗೊಂಡಿದ್ದು ಲಲಿತವಾದ ತ್ರಿಪದಿಯಲ್ಲಿ ರಚಿಸಲ್ಪಟ್ಟಿದೆಯಾದ್ದರಿಂದ ಕಾರ್ಯಾಲಯದ ಪ್ರಕಟಣೆಗಳ ಸಾಲಿಗೆ ಸೇರಲು ಅರ್ಹವಾಗಿದೆಯೆಂಬ ಕಾರಣದಿಂದ ಶ್ರೀಶ್ರೀಗಳವರ ಅನುಮತಿಯನ್ನು ಪಡೆದು ಈಗ ಪ್ರಕಟಿಸಲಾಗಿದೆ.

ಗ್ರಂಥಕರ್ತರು ಇದೇ ಪುಸ್ತಕದ 262ನೆಯ ಪುಟದಲ್ಲಿ ಹೇಳಿಕೊಂಡಿರುವಂತೆ ಈ ಪುಸ್ತಕದ ಮುದ್ರಣ, ಪ್ರಕಟಣೆ – ಮುಂತಾದ ವಿಶಿಷ್ಟಹಕ್ಕುಗಳನ್ನು ಆತ್ಮ ಸಂತೋಷದಿಂದ ಕಾರ್ಯಾಲಯಕ್ಕೆ ಸಮರ್ಪಿಸಿರುತ್ತಾರೆ.

ಮಹಾರಾಜರು ಕಾರ್ಯಾಲಯದ ಈವರೆಗಿನ ಎಲ್ಲಾ ಪ್ರಕಟನೆಗಳಿಗೂ ಕೊಟ್ಟಂತೆಯೇ ಈ ಗ್ರಂಥಕ್ಕೂ ಪ್ರೋತ್ಸಾಹವನ್ನು ನೀಡಿ ಆದರದಿಂದ ಬರಮಾಡಿಕೊಳ್ಳುವರೆಂದು ಆಶಿಸಲಾಗಿದೆ.

ಹೊಳೆನರಸೀಪುರ, **ವೈ. ನರಸಪ್ಪ,**

31–12–1969 ಅಧ್ಯಕ್ಷರು

ಅಧ್ಯಾತ್ಮಪ್ರಕಾಶಕಾರ್ಯಾಲಯ.

# ಪ್ರಕಾಶಕರ ಬಿನ್ನಹ

## (ಎರಡನೆ ಮುದ್ರಣ)

ಶ್ರೀ ದೇವರಾಯಕುಲಕರ್ಣಿಯವರು ಶ್ರೀಶ್ರೀಗಳವರ ಬೋಧೆಯ ಮರ್ಮವನ್ನರಿತು ಶಂಕರದರ್ಶನವನ್ನು ಮಾಡಿದವರು. ಇವರು ಸರ್ವಜ್ಞನ ವಚನಗಳಂತೆ ತ್ರಿಪದಿಗಳಲ್ಲಿ **"ಬ್ರಹ್ಮಜ್ಞವಚನಗಳು"** ಎಂಬ ಪರ್ಯಾಪ್ತ ನಾಮವುಳ್ಳ **"ಶಂಕರದರ್ಶನ"** ಗ್ರಂಥವನ್ನು 1969ರಲ್ಲಿ ರಚಿಸಿ ಕಾರ್ಯಾಲಯಕ್ಕೆ ಸಮರ್ಪಿಸಿದ್ದರು. ಈ ಗ್ರಂಥವು ಶಂಕರಹೃದಯವನ್ನು ತಿಳಿಯಬೇಕೆನ್ನುವವರಿಗೆ ಒಂದು ವರದಂತಿದೆ. ಅನೇಕ ಜಿಜ್ಞಾಸುಗಳ ಅಪೇಕ್ಷೆಯಂತೆ ಈಗ ಎರಡನೆ ಬಾರಿಗೆ ಯಾವುದೇ ಬದಲಾವಣೆಯಿಲ್ಲದೆ ಮುದ್ರಿಸಿದೆ. ಟಿಪ್ಪಣಿಯಲ್ಲಿ ಸೂಚಿಸಿರುವ ಗ್ರಂಥಗಳ ಪುಟದಸಂಖ್ಯೆಗಳು 1969ಕ್ಕಿಂತ ಮೊದಲು ಮುದ್ರಣ ವಾದ ಗ್ರಂಥಗಳ ಪುಟದ ಸಂಖ್ಯೆಯೇ ಆಗಿದೆ. ಮಾಂಡೂಕ್ಯರಹಸ್ಯವಿವೃತಿಃ ಗ್ರಂಥದ ಸಂಖ್ಯೆಗಳು ಮಾತ್ರ ಹೊಸಮುದ್ರಣದವು. ವಾಚಕರು ಗಮನಿಸಬೇಕಾಗಿ ವಿನಂತಿ.

ಈ ಮುದ್ರಣಕ್ಕೆ ಶ್ರೀಯುತರಾದ – 1. ಎಸ್. ಹನುಮಂತರಾವ್‌ರವರು ತಮ್ಮ ಮಾತಾಪಿತೃಗಳಾದ ದಿ॥ ಶ್ರೀಮತಿ ಸಾವಿತ್ರಮ್ಮ ಮತ್ತು ದಿ॥ ಶ್ರೀಮಾನ್ ಸಿ. ಶೇಷಗಿರಿರಾವ್, ಬೆಂ. ಇವರ ಸ್ಮರಣಾರ್ಥವಾಗಿ ವಿಶೇಷ ಧನಸಹಾಯವನ್ನು ನೀಡಿರುತ್ತಾರೆ. 2.ಎಸ್.ಆರ್. ಸರೋಜಾ ನಾರಾಯಣಿ, ಬೆಂ., 3. ಡಾ॥ ಎಚ್.ಎ. ನಾರಾಯಣಿ, ಬೆಂ., 4. ಮಂಗಳಗೌರಮ್ಮ, ಬೆಂ., 5. ಬಿ. ಪಿ. ಶಾರದಾ, ಬೆಂ., 6. ಸುಧಾ ಜಿ ಜೋಶಿ, ಬೆಂ., 7. ಎಸ್. ಗೀತಶ್ರೀ, ಬೆಂ., 8. ಎಸ್. ಆರ್. ಶಾರದಮ್ಮ, ಬೆಂ., 9. ಆರ್. ಬಿ. ಗೋಪಿನಾಥ್, ಬೆಂ., 9. ಪೂರ್ಣಿಮಾ ಆರ್. ನರೇಂದ್ರ, ಬೆಂ., 10. ಚಿಕ್ಕನಾಗಯ್ಯ. ಬೆಂ., 11. ಬ್ಯಾಟ್ರಾಯ. ಬೆಂ., 12. ಗಡ್ಲಬಸಪ್ಪ, ಶಿವಮೊಗ್ಗ – ಈ ಮಹನೀಯರುಗಳಿಗೆ ಕಾರ್ಯಾಲಯದ ಪರವಾಗಿ ಕೃತಜ್ಞತಾ ಪೂರ್ವಕ ಧನ್ಯವಾದಗಳು.

ಜಿಜ್ಞಾಸುಗಳು ಎಂದಿನಂತೆ ಈ ಗ್ರಂಥವನ್ನು ಬರಮಾಡಿಕೊಂಡು ಕಾರ್ಯಾಲಯದ ಗ್ರಂಥಮುದ್ರಣ ಚಟುವಟಿಕೆಗೆ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

**ಸದ್ಗುರುಗಳ 43ನೇ ಆರಾಧನೆ**
**9-8-2018**
**ಹೊಳೆನರಸೀಪುರ**

**– ಪ್ರಕಾಶಕರು**

# ಶ್ರೀ ಪರಮಹಂಸ
# ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತಿಸ್ವಾಮಿಗಳವರ
# ಅನುಗ್ರಹ ಪತ್ರಿಕೆ

ಶ್ರೀಮಾನ್ ದೇವರಾಯ ಕುಲಕರ್ಣಿಯವರು ಬರೆದಿರುವ ಬ್ರಹ್ಮಜ್ಞವಚನ ರೂಪವಾದ 'ಶಂಕರದರ್ಶನ' ಗ್ರಂಥವನ್ನು ನೊಡಿದೆವು. ಶ್ರೀಯುತರು ಇದನ್ನು ಬರೆಯುತ್ತಿದ್ದಾಗಲೇ ನಮ್ಮಲ್ಲಿ ತೋರಿಸಿ ಕೆಲವು ಭಾಗಗಳನ್ನು ಓದಿ ಹೇಳಿದ್ದರು. ವಿಷಯಪ್ರತಿಪಾದನೆ ಹಾಗೂ ಪದ್ಯರಚನೆಯ ಶೈಲಿಗಳು ಸುಗಮವಾಗಿದ್ದು ಜನ ಸಾಮಾನ್ಯರಿಗೂ ಸಹ ಚೆನ್ನಾಗಿ ತಿಳಿಯುವಂತೆ ಈ ಪದ್ಯಗಳನ್ನು ಇವರು ರಚಿಸಿದ್ದಾರೆ.

ಕನ್ನಡದಲ್ಲಿ ಸರ್ವಜ್ಞಮಹಾಕವಿಯ ಪದ್ಯಗಳು, ನೀತಿ, ಧರ್ಮ – ಮುಂತಾದ ಉತ್ತಮವಿಷಯಗಳನ್ನು ಒಳಗೊಂಡಿದ್ದು ಇಂದಿಗೂ ಜನಪ್ರಿಯವಾಗಿದ್ದು ಕನ್ನಡ ಸಾಹಿತ್ಯರಂಗದಲ್ಲಿ ವಿಶಿಷ್ಟಸ್ಥಾನವನ್ನು ಗಳಿಸಿವೆ. ಆದರೆ ವೇದಾಂತಸಿದ್ಧಾಂತವನ್ನೇ ಅದರಲ್ಲೂ ಶ್ರೀಶಂಕರಭಗವತ್ಪಾದರಿಗೆ ಸಮ್ಮತವಾದ ಅದ್ವೈತಸಿದ್ಧಾಂತ – ಹಾಗೂ ಸಾಧನಗಳನ್ನೇ ಅಧಿಕರಿಸಿ ಪದ್ಯಶೈಲಿಯಲ್ಲಿ ಲಲಿತವಾಗಿ ರಚಿಸಲ್ಪಟ್ಟಿರುವ ಗ್ರಂಥಗಳು ಇಲ್ಲವೇಇಲ್ಲವೆನ್ನುವಷ್ಟು ವಿರಳವಾಗಿದೆ. ಈ ಕೊರತೆಯನ್ನು ಶ್ರೀಯುತರ ಗ್ರಂಥವು ತಕ್ಕಮಟ್ಟಿಗೆ ಹೋಗಲಾಡಿಸಿದೆಯೆಂದು ನಾವು ಭಾವಿಸುತ್ತೇವೆ.

ಶ್ರೀಯುತರು ಹೆಚ್ಚಾಗಿ ಸ್ವಪ್ರಯತ್ನದಿಂದಲೇ ವೇದಾಂತದ ಅನೇಕ ವಿಷಯಗಳನ್ನು ಅರಿತುಕೊಂಡು ಚೆನ್ನಾಗಿ ಅಳವಡಿಸಿಕೊಂಡು ತಮ್ಮ ಸ್ವಾಭಿಪ್ರಾಯಗಳನ್ನು ಕೂಡಿಸಿ ಈ ಗ್ರಂಥವನ್ನು ರಚಿಸಿರುತ್ತಾರೆ. ಇವರ ಪ್ರಯತ್ನಕ್ಕೆ ನಮ್ಮ ಹಾರ್ದಿಕ ಶುಭಾಶಯಗಳನ್ನು ನೀಡಲು ನಮಗೆ ಬಹಳ ಸಂತೋಷವಾಗಿದೆ.

ಭಗವಾನ್ ನಾರಾಯಣನು ಇವರಿಗೆ ಇನ್ನೂ ಹೆಚ್ಚಿನ ವೇದಾಂತಗ್ರಂಥ ರಚನಾಸಾಮರ್ಥ್ಯವನ್ನೂ ಆಯುರಾರೋಗ್ಯಾದಿಗಳನ್ನೂ ಅನುಗ್ರಹಿಸಲೆಂದು ನಾವು ನಾರಾಯಣಸ್ಮರಣಪೂರ್ವಕವಾಗಿ ಹರಸುತ್ತೇವೆ.

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ
ತಾ॥ 2–12–1969

ಶ್ರೀಶ್ರೀಗಳವರ ಅಪ್ಪಣೆಯಂತೆ
**ಕೆ. ಜಿ. ಸುಬ್ಬರಾಯಶರ್ಮ,**
ಆಪ್ತಕಾರ್ಯದರ್ಶಿ

# ಅಭಿನಂದನೆ

ಶ್ರೀಮಾನ್ ದೇವರಾಯ ಕುಲಕರ್ಣಿಯವರು ನನ್ನ ಆಪ್ತಮಿತ್ರರು, ಮತ್ತು ದತ್ತಗುರುವಿನ ಉಪಾಸಕರೂ ನಮ್ಮ ಗುರುಗಳ ಪ್ರಿಯಶಿಷ್ಯರೂ ಆಗಿರುತ್ತಾರೆ. ಇವರು ರಚಿಸಿರುವ ಈ ಗ್ರಂಥಕ್ಕೆ ಎರಡು ಮಾತುಗಳನ್ನು ಬರೆಯಬೇಕೆಂಬ ಒತ್ತಾಯದಂತೆ ಈ ಅಭಿನಂದನೆಯನ್ನು ಬರೆದಿರುತ್ತೇನೆ.

ಶ್ರೀಯುತರು ಮುಖ್ಯವಾಗಿ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳವರ ಮೇರು ಕೃತಿಗಳಾದ ಮಾಂಡೂಕ್ಯರಹಸ್ಯವಿವೃತಿಃ, ವೇದಾಂತ ಪ್ರಕ್ರಿಯಾಪ್ರತ್ಯಭಿಜ್ಞಾ ಮತ್ತು ಶಂಕರವೇದಾಂತಸಾರ, ವೇದಾಂತವಿಚಾರದ ಇತಿಹಾಸ – ಈ ಗ್ರಂಥಗಳನ್ನೂ ಕಾರ್ಯಾಲಯದ ಇತರ ಎಲ್ಲಾ ಗ್ರಂಥಗಳನ್ನೂ ಸಹ ಆಳವಾಗಿ ಅಭ್ಯಾಸಮಾಡಿ ಅರಗಿಸಿಕೊಂಡು ಈ ಶಂಕರದರ್ಶನವನ್ನು ತಮ್ಮದೇ ಆದ ವಿಶಿಷ್ಟಶೈಲಿಯಲ್ಲಿ ಬರೆದಿರುತ್ತಾರೆ. ಆದ್ದರಿಂದ ಇದರಲ್ಲಿರುವ ವಿಷಯಗಳ ಬಗ್ಗೆ ನಾನು ಅಭಿಪ್ರಾಯವನ್ನು ಕೊಡುವ ಸಾಮರ್ಥ್ಯವುಳ್ಳವನಾಗಿಲ್ಲ. ಮೇಲಾಗಿ ಶ್ರೀಯುತರು ಹೆಚ್ಚು ಸಂಸ್ಕೃತಭಾಷಾಜ್ಞಾನವಿಲ್ಲದವರಾದರೂ ಎಂಥ ಪಂಡಿತರುಗಳು ಕೂಡ ಶ್ರೀಶ್ರೀಗಳವರ ಬರವಣಿಗೆಗಳನ್ನೂ ಅವರ ದೃಷ್ಟಿಕೋನವನ್ನೂ ಇನ್ನೂ ಅರ್ಥಮಾಡಿಕೊಳ್ಳುವದರಲ್ಲಿಯೇ ಇದ್ದಾರೆಯೋ ಅಂಥ ವಿಚಾರಸರಣಿಗಳನ್ನೂ ವಿಷಯಪ್ರತಿಪಾದನೆಯ ಶುದ್ಧಮಾರ್ಗವನ್ನೂ ಚೆನ್ನಾಗಿಯೇ ಅರಿತುಕೊಂಡು ಅಂಗೈನೆಲ್ಲಿಯಕಾಯಿಯಂತೆ ತಮ್ಮ ಈ ಕೃತಿಯಲ್ಲಿ ಪ್ರತಿಬಿಂಬಿಸಿದ್ದಾರೆ. ಈ ಅಸಾಧಾರಣವಾದ ಶಕ್ತಿಯೂ ಈ ಮಹನೀಯರಿಗೆ ದತ್ತಗುರುವಿನ ಉಪಾಸನೆಯ ಬಲದಿಂದಲೇ ದೊರೆತಿದೆಯೆಂಬುದರ ಬಗ್ಗೆ ಅಭಿಪ್ರಾಯ ಭೇದವಿರಲಾರದು.

ಇನ್ನು ಗ್ರಂಥರಚನೆಯಂಥ ಕಷ್ಟವಾದ ಕಾರ್ಯದಲ್ಲಿಯೂ ಶ್ರೀಯುತರು ಬಹಳ ಅನುಭವಿಗಳಾಗಿದ್ದಾರೆ. ಈ ಗ್ರಂಥವು ಸರ್ವಾಂಗಸುಂದರವಾಗುವಂತೆ ಮಾಡಿರುವ ಇಡೀ ಗ್ರಂಥವನ್ನೇ ಹಿಂಡಿಟ್ಟಿರುವ ಗ್ರಂಥಸಾರ, ವಿಚಾರಪ್ರಚೋದಕವಾದ ಮತ್ತು ಶಂಕರಸಿದ್ಧಾಂತದ ಮುಖ್ಯಪ್ರಮೇಯಗಳ ತಿರುಳನ್ನು ಒಳಗೊಂಡಿರುವ ಪೀಠಿಕೆ, ಗ್ರಂಥಶರೀರದಲ್ಲಿ ಅಲ್ಲಲ್ಲಿ ಜೋಡಿಸಿರುವ ತಲೆಬರಹಗಳು, ಟಿಪ್ಪಣಿ–ಇವುಗಳು ಗ್ರಂಥದ ಘನತೆಯನ್ನು ಹೆಚ್ಚಿಸಿವೆ. ವೇದಾಂತಪ್ರಪಂಚದಲ್ಲಿ, ಅದರಲ್ಲಿಯೂ

ಕನ್ನಡಭಾಷೆಯಲ್ಲಿ ತ್ರಿಪದಿಪದ್ಯರೂಪದಿಂದ ಇಂಥ ಗ್ರಂಥವು ಇತ್ತೀಚೆಗೆ ಹೊರಬಂದಿರಲಿಲ್ಲ. ಈಗ ಶ್ರೀಯುತರು ಕನ್ನಡ ಸಾರಸ್ವತಲೋಕಕ್ಕೆ ತಮ್ಮ ಈ ವೇದಾಂತ ಗ್ರಂಥವನ್ನು ಬರೆದು ಅರ್ಪಿಸಿ ಅಧ್ಯಾತ್ಮವಿದ್ಯಾರಸಿಕರ ಹಾಗೂ ಕನ್ನಡ ನಾಡಿನ ವಿದ್ವಾಂಸರುಗಳ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆಂದರೆ ಅತಿಶಯೋಕ್ತಿಯಾಗಲಾರದು.

ಶ್ರೀಯುತರ ಬಗ್ಗೆ ಮತ್ತೊಂದು ವಿಚಾರವನ್ನು ಇಲ್ಲಿ ಪ್ರಸ್ತಾಪಿಸುವುದು ಆಯುಕ್ತವಾಗಲಾರದು. ಇವರು ಮೊದಲು ಅರ್ವಾಚೀನವೇದಾಂತ ಗ್ರಂಥಗಳಾದ ಪಂಚದಶೀ, ವಿವೇಕಚೂಡಾಮಣಿ, ಲಘುಯೋಗವಾಸಿಷ್ಠ – ಮುಂತಾದ ಗ್ರಂಥಗಳಿಂದ ಪ್ರಭಾವಿತರಾಗಿದ್ದು ಅನಂತರ ಶ್ರೀಶ್ರೀಗಳವರ ಪರಿಚಯವಾದಮೇಲೆ ಶಂಕರಾಭಾಷ್ಯ ಕನ್ನಡ ಅನುವಾದಗ್ರಂಥಗಳ ಪಠನಚಿಂತನಾದಿಗಳಿಂದಲೂ ಆಗಾಗ್ಗೆ ಶ್ರೀಶ್ರೀಗಳವರಲ್ಲಿ ವಿಚಾರವಿನಿಮಯ ಮಾಡಿಕೊಳ್ಳುವದರ ಮೂಲಕವೂ ತಮ್ಮ ವಿಚಾರಸರಣಿಯನ್ನೂ ದೃಷ್ಟಿಕೋನ ವನ್ನೂ ಸಂಪೂರ್ಣವಾಗಿ ಬದಲಾಯಿಸಿಕೊಂಡು ಶುದ್ಧಶಾಂಕರಪ್ರಕ್ರಿಯೆ ಯನ್ನವಲಂಬಿಸಿ ಈ ಗ್ರಂಥವನ್ನು ರಚಿಸುತ್ತಾರೆ. ಈ ಸಂದರ್ಭದಲ್ಲಿ ಶಂಕರ ವಿಜಯದಲ್ಲಿ ಬರುವ, ಮೊದಲು ಅತ್ಯಂತಕರ್ಮನಿಷ್ಠರಾಗಿದ್ದು ಭಗವತ್ಪಾದರ ಶಿಷ್ಯರಾದ ಅನಂತರ ನೈಷ್ಕರ್ಮ್ಯಸಿದ್ಧಿಯೆಂಬ ಕರ್ಮವಾಸನಾರಹಿತವಾದ, ಜ್ಞಾನನಿಷ್ಠೆಯನ್ನೇ ಎತ್ತಿಹಿಡಿಯುವ ಅಮೋಘಗ್ರಂಥವನ್ನು ಬರೆದು ಗುರುಗಳಿಗೆ ಪ್ರಿಯಶಿಷ್ಯರಾದಂಥ ಶ್ರೀಸುರೇಶ್ವರಾಚಾರ್ಯರ ನೆನಪು ನನಗೆ ಬರುತ್ತಿದೆ.

ಶ್ರೀಯುತರು 'ಬ್ರಹ್ಮಜ್ಞ'ನೆಂಬ ಅಂಕಿತದಿಂದ ತ್ರಿಪದಿಯಲ್ಲಿ "ಶ್ರೀಗಣೇಶ ವಿದ್ಯೆ" ಮುಂತಾದ ಇನ್ನೂ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಈ ಮಹನೀಯರ ಸೇವೆಯು ಇನ್ನೂ ಚಿರಕಾಲ ಕನ್ನಡಿಗರಾದ ವೇದಾಂತಪ್ರೇಮಿಗಳಿಗೆ ದೊರಕುತ್ತಿರಲೆಂದು ಈ ಮೂಲಕ ಇವರ ಕೀರ್ತಿಯು ಹರಡಿ ಚಿರಸ್ಥಾಯಿಯಾಗು ವಂತೆಯೂ ಭಗವಾನ್ ಶ್ರೀದಿಗ್ವಿಜಯ ರಾಮಚಂದ್ರನು ಅನುಗ್ರಹಿಸಲೆಂದೂ ನಾನು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

॥ ಇತಿ ಶಮ್ ॥

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ
ತಾ॥ 27–11–1969

**ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ**
(ಅಧ್ಯಾತ್ಮವಿದ್ಯಾಪ್ರವೀಣ)
ಪಂಡಿತ

# ಉಪಕಾರಸ್ಮರಣೆ

ಶ್ರೀಶಂಕರಭಗವತ್ಪಾದರವರ ಪ್ರಸ್ಥಾನತ್ರಯಭಾಷ್ಯಗಳ ಮಹತ್ತ್ವವನ್ನು ತಿಳಿದು ಹೇಳಿ ಶಂಕರದರ್ಶನವನ್ನೇ ಮಾಡಿಸಿದ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳವರ ಉಪಕಾರವನ್ನು ಮೊದಲು ನೆನೆಯಬೇಕಾಗಿದೆ. ಶ್ರೀಶ್ರೀಗಳವರ ಬೋಧದ ಪ್ರಭಾವಕ್ಕೆ ಒಳಗಾದುದರಿಂದಲೇ ಈ 'ಶಂಕರದರ್ಶನ'ವೆಂಬ ಗ್ರಂಥವನ್ನು ರಚಿಸಲು ಸಾಧ್ಯವಾಯಿತು. ಆದ್ದರಿಂದ ಶ್ರೀಗಳವರ ಚರಣಕಮಲಗಳಲ್ಲಿ ನನ್ನ ಅನಂತವಂದನೆಗಳನ್ನು ಮೊಟ್ಟಮೊದಲು ಅರ್ಪಿಸುತ್ತೇನೆ.

ಗ್ರಂಥವನ್ನು ಅರ್ಪಿಸುವ ಮನೋಭಾವವನ್ನು ತೋರಿದೊಡನೆಯೇ ಅಧ್ಯಾತ್ಮಪ್ರಕಾಶಕಾರ್ಯಾಲಯದ ಕಾರ್ಯಕಾರಿಸಮಿತಿಯವರು ನನ್ನ ನಮ್ರಪ್ರಾರ್ಥನೆಯನ್ನಂಗೀಕರಿಸಿ ಅಧ್ಯಾತ್ಮಪ್ರಕಾಶಮಾಸಪತ್ರಿಕೆಯಲ್ಲಿ ಧಾರಾವಾಹಿಯಾಗಿ ಗ್ರಂಥವು ಪ್ರಕಟವಾಗುವಂತೆ ವ್ಯವಸ್ಥೆಮಾಡಿದ್ದಕ್ಕಾಗಿ ಕಾರ್ಯಕಾರಿ ಸಮಿತಿಯವರ ಉಪಕಾರವನ್ನೂ ಹೃತ್ಪೂರ್ವಕವಾಗಿ ಸ್ಮರಿಸುತ್ತೇನೆ.

ಕಾರ್ಯಾಲಯದ ಪಂಡಿತರೂ ಅಧ್ಯಾತ್ಮವಿದ್ಯಾಪ್ರವೀಣರೂ ಆದ ವೇ॥ ಬ್ರ॥ ಶ್ರೀ॥ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ಅಚ್ಚಿನ ಕರಡುಗಳನ್ನು ತಿದ್ದುವದೇ ಮುಂತಾದ ಹೊಣೆಗಾರಿಕೆಯನ್ನು ಹೊತ್ತು ಅತ್ಯಂತ ಶ್ರಮವಹಿಸಿ ಗ್ರಂಥಪ್ರಕಟನೆಗೆ ನೆರವಾದದ್ದೇ ಅಲ್ಲದೆ ತಮ್ಮ 'ಅಭಿನಂದನೆ'ಯನ್ನು ಬರೆಯುವದರ ಮೂಲಕ ಗ್ರಂಥದ ಶೋಭೆಯನ್ನೂ ಹೆಚ್ಚಿಸಿರುತ್ತಾರೆ. ಅಧ್ಯಾತ್ಮಪಥದಲ್ಲಿ ನನಗೆ ಶ್ರೀಗಳವರು ತಂದೆಯಂತಿದ್ದರೆ, ಇವರು ಹಿರಿಯ ಸಹೋದರನಂತಿದ್ದಾರೆ – ಎಂದರೆ ತಪ್ಪಾಗಲಾರದು. ಸರಳಜೀವನ, ಶಾಂತಸ್ವಭಾವ, ವ್ಯವಹಾರದಕ್ಷತೆ, ನಿರಹಂಕಾರ – ಮುಂತಾದ ಉತ್ತಮಗುಣಗಳಿಂದ ಕೂಡಿದ ಸಾತ್ತ್ವಿಕಪಂಡಿತರಾದ ಇವರ ಉಪಕಾರವನ್ನು ಅವಶ್ಯವಾಗಿ ಇಲ್ಲಿ ಸ್ಮರಿಸುತ್ತೇನೆ.

ಸರ್ವಜ್ಞನ ವಿಷಯವಾಗಿ ಹೊರಬಂದ 'ಸರ್ವಜ್ಞಮೂರ್ತಿ' ಎಂಬ ಚಲನಚಿತ್ರವನ್ನು ಕಂಡಾಗ ತ್ರಿಪದಿಯ ಬಗ್ಗೆ ಹೊಸ ಸ್ಫೂರ್ತಿಯು ನನ್ನಲ್ಲಿ ಮೊಳಕೆಯೊಡೆಯಿತು. ಆದರೆ ತ್ರಿಪದಿಯ ಛಂದಸ್ಸಿನ ಬಗ್ಗೆ ಹೆಚ್ಚು ಪರಿಚಯವಿಲ್ಲದಿದ್ದ ನನಗೆ ಸದ್ಗುರು ಶ್ರೀ॥ ಅಗ್ನಿಹೋತ್ರಿ ಶಂಕರಭಟ್ಟರ ಪುತ್ರರಾದ

ಶ್ರೀ॥ ಗಣಪತಿ (ಜಿ.ಎಸ್. ಅಗ್ನಿಹೋತ್ರಿ)ಯವರು ಒಂದು ನಿಶ್ಚಿತ ಅಭಿಪ್ರಾಯ ವನ್ನುಕೊಟ್ಟರು. ಅವರ ಸಲಹೆಯಂತೆಯೇ ಈ ಎಲ್ಲಾ ಪದ್ಯಗಳನ್ನೂ ರಚಿಸಿದ್ದೇನೆ. ಹೀಗೆ ಛಂದಸ್ಸಿನ ಪರಿಚಯಮಾಡಿಕೊಟ್ಟ ಶ್ರೀ॥ ಅಗ್ನಿಹೋತ್ರಿಗಳ ಉಪಕಾರವನ್ನು ಸ್ಮರಿಸದೆ ಮುಂದುವರಿಯುವಂತಿಲ್ಲ. ಹಾಗೂ ಕನ್ನಡನಾಡಿಗೆ 'ತ್ರಿಪದಿ'ಗಳ ಮೂಲಕ ಚಿರಪರಿಚಿತನಾದ ಸರ್ವಜ್ಞಮಹಾಕವಿಯನ್ನೂ ಮನಸಾ ಅಭಿವಂದಿಸುತ್ತೇನೆ.

ಗ್ರಂಥದ ಕೈಬರಹದ ಪ್ರತಿಗಳನ್ನು ಛಂದಸ್ಸು, ವ್ಯಾಕರಣ, ವಿಷಯಗಳ ದೃಷ್ಟಿಯಿಂದ ಪರಿಶೀಲಿಸಿ ತಿದ್ದಿಬರೆಯುವದು, ಗ್ರಂಥಸಾರವನ್ನು ಬಹುಮಟ್ಟಿಗೆ ಶ್ರೀಗಳವರ ಗ್ರಂಥಗಳಿಂದಲೇ ಆಯ್ದ ವಾಕ್ಯಗಳಿಂದ ರಚಿಸುವದು, ಗ್ರಂಥಪೂರ್ತಿಗೆ ಬೇಕಾದ ವಿಷಯಾನುಕ್ರಮಣಿಕಾದಿಪರಿಕರಗಳನ್ನು ಸಿದ್ಧಗೊಳಿಸುವದು – ಮುಂತಾಗಿ ಎಲ್ಲಾ ರೀತಿಯಿಂದಲೂ ಸೇವೆಯನ್ನು ಸಲ್ಲಿಸಿದ ಗುರುಭಗಿನಿ ಕುಮಾರಿ ಜಯಲಕ್ಷ್ಮೀದೇವಿಯವರ ಸಹಾಯವನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಎನಿಸುತ್ತದೆ. ಭಗವಂತನೇ ನನಗೆ ಇಂಥ ಸಹಾಯಸೌಕರ್ಯವನ್ನೊದಗಿಸಿರುವನೆಂದು ಬಗೆದು ಶ್ರೀಶಂಕರರ ಪೂರ್ಣಾನುಗ್ರಹವು ಇವರಿಗೆ ಉಂಟಾಗಲೆಂದು ಹಾರೈಸುತ್ತೇನೆ.

ಕೊನೆಯದಾಗಿ ಉಪಾಸ್ಯನೂ ಇಷ್ಟದೈವನೂ ಆದ ಶ್ರೀದತ್ತಾತ್ರೇಯ ಸದ್ಗುರುವು ಈ ಎಲ್ಲಾ ವಿಧದ ಅನುಕೂಲತೆಗಳನ್ನೂ ಒದಗಿಸಿಕೊಟ್ಟು ಅನುಗ್ರಹಿಸಿದ್ದಾನೆ. ಶ್ರೀದತ್ತನ ಚರಣಕಮಲಗಳನ್ನು ನೆನೆದು ಈ ಗ್ರಂಥದ ಎಲ್ಲಾ ಬಗೆಯ ಹಕ್ಕನ್ನೂ ಅಧ್ಯಾತ್ಮಪ್ರಕಾಶಕಾರ್ಯಾಲಯಕ್ಕೆ ವಹಿಸಿ ಲೇಖನಿಯನ್ನು ಕೆಳಗಿಡುವೆನು.

**– ಶ್ರೀಗುರುದೇವದತ್ತ –**

ಬೆಂಗಳೂರು — ಗುರುಭಕ್ತರಡಿಯಾಳು,

3–12–1969 — **ದೇವರಾಯ ಕುಲಕರ್ಣಿ**

# ಪೀಠಿಕೆ
# ವೇದಾಂತ ಸಂಪ್ರದಾಯ

ಶ್ರೀಶಂಕರಭಗವತ್ಪಾದಾಚಾರ್ಯರು ಸಾವಿರಾರು ವರ್ಷಗಳ ಹಿಂದೆಯೇ ಪ್ರಸ್ಥಾನತ್ರಯಗಳಿಗೆ ಭಾಷ್ಯಗಳನ್ನು ರಚಿಸಿ ಪರಿಶುದ್ಧವಾದ ಅದ್ವೈತವೇದಾಂತದರ್ಶನವನ್ನು ಜಿಜ್ಞಾಸುಗಳ ಮುಂದೆ ಇಟ್ಟು ಲೋಕೋಪಕಾರಮಾಡಿರುವ ಸಂಗತಿಯು ಸರ್ವವಿದಿತವಾಗಿದೆ. ಆಚಾರ್ಯರ ಕಾಲಕ್ಕಾಗಲಿ ಅವರ ಹಿಂದೆಯೇ ಆಗಲಿ ವೈದಿಕರಾಗಿ ತತ್ತ್ವವಿಚಾರವನ್ನು ಮಾಡಿರತಕ್ಕವರೆಲ್ಲರೂ ಜೀವಪರಮಾತ್ಮರ ಐಕ್ಯವನ್ನೇ ಕೊನೆಯ ಮಾತಾಗಿ ಒಪ್ಪಿದ್ದ ಅದ್ವೈತಿಗಳೇ ಆಗಿದ್ದರು ಎಂಬುದು ನಿಸ್ಸಂಶಯ. ಆ ಕಾಲದಲ್ಲಿ ದ್ವೈತಿಗಳೆಂದರೆ ಸಾಂಖ್ಯರು, ಪಾತಂಜಲಯೋಗಿಗಳು, ವೈಶೇಷಿಕರೇ ಮುಂತಾದ ಅವೈದಿಕತಾರ್ಕಿಕರೇ ಹೊರತು ಮಧ್ವರಾಮಾನುಜರಂತೆ ವೇದಾಂತಗಳನ್ನು ಪ್ರಮಾಣವಾಗಿ ಹಿಡಿದು ದ್ವೈತವಿಶಿಷ್ಟಾದ್ವೈತಮತಗಳನ್ನು ಪ್ರತಿಪಾದಿಸುವ ವಾದಿಗಳಾರೂ ಇರಲಿಲ್ಲ. ಇದಕ್ಕೆ **'ಸರ್ವೋಪನಿಷತ್ಸು ಹಿ ವಿಜ್ಞಾನಾತ್ಮನಃ ಪರಮಾತ್ಮನಾ ಏಕತ್ವಪ್ರತ್ಯಯೋ ವಿಧೀಯತ ಇತ್ಯ – ವಿಪ್ರತಿಪತ್ತಿಃ ಸರ್ವೇಷಾ– ಮುಪನಿಷದ್ವಾದಿನಾಮ್'** (ಬೃ.ಭಾ. ೨–೧–೨೦) ಎಂಬ ಆಚಾರ್ಯರ ವಾಕ್ಯವೇ ಪ್ರಮಾಣವಾಗಿದೆ.

ಪ್ರಾಚೀನವೇದಾಂತಿಗಳೆಲ್ಲರೂ ಅದ್ವೈತಿಗಳೇ ಆಗಿದ್ದರೂ (ಅ) ಜ್ಞಾನಕರ್ಮಸಮುಚ್ಚಯದಿಂದ ಮೋಕ್ಷ (ಆ) ಪ್ರಸಂಖ್ಯಾನದಿಂದ ಮೋಕ್ಷ (ಇ) ಜ್ಞಾನವಾದ ಮೇಲೆ ಉಪಾಸನೆಯಿಂದ ಮೋಕ್ಷ (ಈ) ಪ್ರಪಂಚಪ್ರವಿಲಯದಿಂದ ಮೋಕ್ಷ (ಉ) ಸಾಕ್ಷಾತ್ಕಾರದಿಂದ ಮೋಕ್ಷ (ಊ) ವಾಸನಾಕ್ಷಯದಿಂದ ಮೋಕ್ಷ (ಋ) ಚಿತ್ತವೃತ್ತಿನಿರೋಧದಿಂದ ಮೋಕ್ಷ – ಎಂಬಿವೇ ಮುಂತಾದ ಅಭಿಪ್ರಾಯ ಭೇದಗಳುಳ್ಳ ಅನೇಕ ಸಂಪ್ರದಾಯಗಳು ಆಗ ಅವರಲ್ಲಿದ್ದವು. ಅವುಗಳೆಲ್ಲವನ್ನೂ ಖಂಡಿಸಿ 'ಬ್ರಹ್ಮಾತ್ಮೈಕತ್ವಜ್ಞಾನಮಾತ್ರದಿಂದಲೇ ಮೋಕ್ಷ' ಎಂಬ ಪರಿಶುದ್ಧ ವೇದಾಂತಪ್ರಕ್ರಿಯೆಯನ್ನು ತಿಳಿಸುವ ಉದ್ದೇಶದಿಂದಲೇ ಶ್ರೀಶಂಕರರು ತಮ್ಮ ಭಾಷ್ಯಗಳನ್ನು ರಚಿಸಿದರೆಂಬುದು ವೇದಾಂತ ಚಿಂತಕರೆಲ್ಲರಿಗೂ ತಿಳಿದ ವಿಷಯವಾಗಿದೆ.

ಅದ್ವೈತಸಂಪ್ರದಾಯದಲ್ಲಿ ಶ್ರೀಶಂಕರರಿಗಿಂತಲೂ ಹಿಂದೆ ಅನೇಕ ಆಚಾರ್ಯರುಗಳು ಇದ್ದರೆಂಬುದು ಭಾಷ್ಯಗಳಿಂದಲೇ ನಮಗೆ ಗೊತ್ತಾಗುತ್ತದೆ. ಶ್ರೀ ಶಂಕರರ ಅನಂತರ ಸುರೇಶ್ವರಾಚಾರ್ಯರು ಈ ಸಂಪ್ರದಾಯವನ್ನೇ

ಅನುಸರಿಸಿ ಕೆಲವು ಗ್ರಂಥಗಳನ್ನು ರಚಿಸಿದರು. ಮುಂದೆ ಕಾಲಕ್ರಮದಲ್ಲಿ ಪಂಚಪಾದಿಕೆ, ವಿವರಣ, ಭಾಮತೀ – ಮುಂತಾದ ವ್ಯಾಖ್ಯಾನಗಳೂ ಉಪವ್ಯಾಖ್ಯಾನಗಳೂ ಹುಟ್ಟಿ ಈ ಸಂಪ್ರದಾಯದಲ್ಲಿ ನಾನಾಮತಭೇದಗಳಿಗೆ ಅವಕಾಶವಾಯಿತಲ್ಲದೆ ಪರಸ್ಪರ ಭಿನ್ನಾಭಿಪ್ರಾಯಗಳೂ ಭಾಷ್ಯಕ್ಕೆ ವಿರುದ್ಧವಾದ ಅಭಿಪ್ರಾಯಗಳೂ ಸೇರಿ ಸಂಪ್ರದಾಯವು ಒಂದು ದೃಷ್ಟಿಯಿಂದ ಅವನತಿಯನ್ನೇ ಹೊಂದಿದಂತಾಯಿತು. ಈ ಬಗ್ಗೆ ಈ ಗ್ರಂಥದ ಒಂದು, ನಾಲ್ಕು ಹಾಗೂ ಐದನೆಯ ಅಧ್ಯಾಯಗಳಲ್ಲಿ ಪ್ರಸ್ತಾಪಿಸಲಾಗಿದೆ.

## ದ್ವೈತಾದಿಮತಗಳು

ಅದ್ವೈತಸಿದ್ಧಾಂತದಲ್ಲಿ ಉಂಟಾದ ಭಿನ್ನಭಿನ್ನವ್ಯಾಖ್ಯಾನಗಳ ಕೋಲಾಹಲದಿಂದ ದಾರಿತಪ್ಪಿ ಆಚಾರ್ಯರ ಮುಖ್ಯವೇದಾಂತ ಪ್ರಮೇಯಗಳನ್ನು ಅರಿತುಕೊಳ್ಳಲಾರದೆ ಬೇಸತ್ತ ಕೆಲವು ವೈದಿಕರಿಗೆ ಇಷ್ಟೊಂದು ಮತಭೇದಗಳನ್ನೊಪ್ಪಿ ಪೇಚಾಡುವದಕ್ಕಿಂತಲೂ ವೇದಾರ್ಥದಲ್ಲಿಯೇ 'ಭೇದ'ವನ್ನು ತೋರಿಸಿ ಪುರಾಣಾದಿಗಳ ಆಧಾರದಿಂದ ಅದನ್ನೇ ಬಲಪಡಿಸಿ ಜನಗಳಿಗೆ ಭಕ್ತಿವೈರಾಗ್ಯಾದಿಗಳನ್ನು ಬೋಧಿಸಿ ವೇದಾರ್ಥಸ್ಥಾಪನೆಮಾಡಿದರೆ ತಪ್ಪೇನು? ಎಂಬ ಅಭಿಪ್ರಾಯವು ತಲೆದೋರಿತು. ಶ್ರೀಶಂಕರಾಚಾರ್ಯರಿಗಿಂತ ಹಿಂದೆಯೇ ಅದ್ವೈತಿಗಳಲ್ಲಿ ಪ್ರಚಾರದಲ್ಲಿದ್ದ ಭೇದಾಭೇದಮತವನ್ನೂ ಆಚಾರ್ಯರ ಅನಂತರ ಬಂದ ಶುದ್ಧಭೇದಾಭೇದವಾದಿಗಳಾದ ಭಾಸ್ಕರಾಚಾರ್ಯರೇ ಮುಂತಾದವರ ಮತಗಳನ್ನೂ ಸ್ವಲ್ಪಮಟ್ಟಿಗೆ ಮಾರ್ಪಡಿಸಿಕೊಂಡು ಶ್ರೀರಾಮಾನುಜಾಚಾರ್ಯರು 'ವಿಶಿಷ್ಟಾದ್ವೈತ'ವೇ ವೇದಸಮ್ಮತ ಸಿದ್ಧಾಂತವೆಂದು ತೋರಿಸಲು ಸೊಂಟಕಟ್ಟಿದರು. ಈಚೆಗೆ ದ್ವೈತವೇ ವೇದಾಂತಗಳ ತಾತ್ಪರ್ಯವೆಂಬುದನ್ನು ತರ್ಕಬಲದಿಂದ ಶ್ರೀ ಮಧ್ವಾಚಾರ್ಯರೂ ಅವರ ಅನುಯಾಯಿಗಳೂ ಸ್ಥಾಪಿಸಿದರು. ಇಲ್ಲಿಗೆ ನಮ್ಮ ದೇಶದಲ್ಲಿ ವೈದಿಕರಲ್ಲಿ ಮೂರು ಪಂಗಡವಾಗಿ ಮತತ್ರಯದವರೆಂಬ ಅಭಿಧಾನವನ್ನು ಪಡೆಯುವಂತಾಯಿತೆನ್ನಲಡ್ಡಿಯಿಲ್ಲ. ದ್ವೈತ, ವಿಶಿಷ್ಟಾದ್ವೈತ ಮತಗಳ ವಿಚಾರವು ಇಲ್ಲಿಗೆ ಅಪ್ರಕೃತವಾದ್ದರಿಂದ ಅದ್ವೈತತತ್ತ್ವದ ಬಗ್ಗೆ ಹರಡಿಕೊಂಡಿದರುವ ಕೆಲವು ಗ್ರಹಿಕೆಗಳನ್ನು ಮಾತ್ರ ವಿಮರ್ಶಿಸುವೆನು.

# ಚರಿತ್ರೆ ಮತ್ತು ಪ್ರಾಕೃತ ಗ್ರಂಥಗಳು

ಕಾಲಕ್ರಮದಲ್ಲಿ ಅದ್ವೈತಸಂಪ್ರದಾಯದಲ್ಲಿ ವ್ಯಾಖ್ಯಾನಗಳೂ ಶಂಕರರ ಹೆಸರಿನಲ್ಲಿ ಪ್ರಕರಣಗ್ರಂಥಗಳೂ ಹೇರಳವಾಗಿ ಹುಟ್ಟಿಕೊಂಡವಲ್ಲದೆ ಆಚಾರ್ಯರ ಅವತಾರವಾದ ಬಹಳ ಕಾಲದಮೇಲೆ ಶಂಕರಚರಿತ್ರೆಗಳೆಂದು ಪ್ರಸಿದ್ಧವಾದ ಅದ್ಭುತಯೋಗಸಿದ್ಧಿಯ ಚಮತ್ಕಾರ, ಅಲಂಕಾರಾದಿ ಸಾಹಿತ್ಯಗಳಿಂದ ಕೂಡಿ ಜನಸಾಮಾನ್ಯರನ್ನೂ ಪಂಡಿತರನ್ನೂ ಸೆರೆಹಿಡಿಯುವ ಸಂಸ್ಕೃತಕಾವ್ಯಗಳೂ ಹುಟ್ಟುಕೊಂಡವು. ಮುಂದೆ ಶ್ರೀಶಂಕರಚಾರ್ಯರ ಬಗ್ಗೆ ಜನಸಾಮಾನ್ಯರಿಗೆ ಇವೇ ಪ್ರಮಾಣಗ್ರಂಥಗಳೆನಿಸಿದವು. ಚರಿತ್ರೆ, ಪ್ರಕರಣ ಗ್ರಂಥಗಳು, ವ್ಯಾಖ್ಯಾನಗಳು – ಇವುಗಳನ್ನು ದಾಟಿ ಭಾಷ್ಯದವರೆಗೂ ಹೋಗುವದಕ್ಕೆ ಸಾಮಾನ್ಯರಿಗೆ ಎದೆಗಾರಿಗೆ ಇಲ್ಲದಾಯಿತು. ನಮ್ಮ ದೇಶದಲ್ಲಿ ಪರಕೀಯರ ದಬ್ಬಾಳಿಕೆಯ ಪರಿಣಾಮವಾಗಿ ಸಂಸ್ಕೃತಭಾಷೆ ಹಾಗೂ ಶಾಸ್ತ್ರಗಳ ಅಭ್ಯಾಸವು ಕಡಿಮೆಯಾಗುತ್ತಾ ಬಂದಾಗ ದೇಶಭಾಷೆಗಳಲ್ಲಿ ಪ್ರಕರಣ ಗ್ರಂಥಗಳೂ ಶಂಕರರ ಕಲ್ಪಿತಚರಿತ್ರೆಗಳೂ ಹೊರಬಂದವು. ಮತ್ತೆ ಕೆಲವರು ತಮ್ಮ ಮಾತೃಭಾಷೆಗಳಲ್ಲಿಯೇ ಸ್ವತಂತ್ರವೇದಾಂತಗ್ರಂಥಗಳನ್ನೂ ರಚಿಸಿ ಪ್ರಕಟಿಸಿದರು. ಇವೆಲ್ಲವೂ ಮೂಲಪ್ರಸ್ಥಾನತ್ರಯಭಾಷ್ಯದ ಪರಿಶುದ್ಧಪ್ರಕ್ರಿಯೆ ಯನ್ನನುಸರಿಸದೆ ವ್ಯಾಖ್ಯಾನಗಳ ದೋಷಯುಕ್ತಪ್ರಕ್ರಿಯೆಗಳನ್ನೇ ಬಳಸಿ ಕೊಂಡಿರುವದು ಸಹಜವೂ ಅನಿವಾರ್ಯವೂ ಆಗಿದೆ.

ಪ್ರಕೃತ ವ್ಯಾಖ್ಯಾನಗ್ರಂಥಗಳು, ಪ್ರಕರಣಗ್ರಂಥಗಳು, ಪ್ರಾಕೃತಗ್ರಂಥಗಳಲ್ಲಿ ಯಾವ ಸಾರವೂ ಇಲ್ಲ, ಅವು ಸರ್ವಥಾ ತ್ಯಾಜ್ಯವೆಂದೇನೂ ನನ್ನ ಅಭಿಪ್ರಾಯವಲ್ಲ. ಭಾಷ್ಯಗಳ ಅನೇಕ ಭಾಗಗಳಿಗೆ ವ್ಯಾಖ್ಯಾನಕಾರರು ಉತ್ತಮವಾದ ವಿವರಣೆಗಳನ್ನು ನೀಡಿದ್ದರೆಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಆದರೆ ಸಿದ್ಧಾಂತದ ಮುಖ್ಯಭಾಗಗಳನ್ನೇ ವಿಪರ್ಯಾಸದಿಂದ ತಿಳಿಸಿರುವದನ್ನು ಮಾತ್ರವೇ ನಾನಿಲ್ಲಿ ವಿರೋಧಿಸಿದ್ದೇನೆ. ಇದರಂತೆ ಪ್ರಕರಣಗ್ರಂಥಗಳಲ್ಲಾಗಲಿ, ಪ್ರಾಕೃತಗ್ರಂಥಗಳಲ್ಲಾಗಲಿ ಭಾಷ್ಯಾನುಗುಣವಾದ ಅಭಿಪ್ರಾಯಗಳಿದ್ದರೆ ಸಾರಗ್ರಹಣದೃಷ್ಟಿಯಿಂದ ಅವಶ್ಯವಾಗಿ ಸ್ವೀಕರಿಸಬೇಕಾದದ್ದು ನ್ಯಾಯವೇ ಆಗಿದೆ. ನಿಜವು ಹೀಗಿರುವದರಿಂದ ಭಾಷ್ಯಪಕ್ಷಪಾತಿಯಾಗಿ ನಾನು ಮಿಕ್ಕೆಲ್ಲವನ್ನೂ ಅಲ್ಲಗಳೆಯಹೊರಟಿರುವೆನೆಂಬ ತಪ್ಪುಅಭಿಪ್ರಾಯವನ್ನು ಮಾಡಿಕೊಳ್ಳಬಾರ ದಾಗಿಯೂ ಪ್ರತಿಯೊಂದು ಸಂಗತಿಯನ್ನೂ ನಿಷ್ಪಕ್ಷಪಾತಶಾಂತಚಿತ್ತದಿಂದ ಪರಿಶೀಲಿಸಬೇಕೆಂದೂ ಈ ಸಮಯದಲ್ಲಿ ಸಕಲರಿಗೂ ಸೆರಗೊಡ್ಡಿ ಪ್ರಾರ್ಥಿಸುತ್ತೇನೆ.

## ತಪ್ಪುಗ್ರಹಿಕೆಗಳು

ಆಚಾರ್ಯರ ಜೀವನ, ಗ್ರಂಥರಚನೆಯ ಧ್ಯೇಯ ಹಾಗೂ ಸಿದ್ಧಾಂತಗಳ ಬಗ್ಗೆ ಜನರಲ್ಲಿ ಸಾಕಷ್ಟು ತಪ್ಪುಅಭಿಪ್ರಾಯಗಳು ಹರಡಿಕೊಳ್ಳಲು ಮೇಲೆ ವಿವರಿಸಿರುವ ಕಾರಣಗಳೆಲ್ಲವೂ ಸಹಾಯಕವಾದವು. ಅವುಗಳಲ್ಲಿ ಕೆಲವನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸುವದಗತ್ಯ :–

(೧) ಅದ್ವೈತವೆಂಬುದು ವೇದಗಳಲ್ಲಿ ಹೇಳಿದ ಹಾಗೂ ಅನಾದಿಕಾಲದಿಂದ ವೈದಿಕರೆಲ್ಲರೂ ಏಕಕಂಠದಿಂದ ಒಪ್ಪಿದ ತತ್ತ್ವವಿಶೇಷವಾಗಿದೆ. ನಿಜವು ಹೀಗಿದ್ದರೂ ಶಂಕರಾಚಾರ್ಯರು ಅದ್ವೈತವೆಂಬ ಮತವನ್ನು ಸ್ಥಾಪಿಸಿದರು – ಎಂದು ಜನರು ತಿಳಿದುಕೊಂಡಿರುವರಲ್ಲದೆ "ಅದ್ವೈತಮತಸ್ಥಾಪನಾಚಾರ್ಯ" ಎಂಬ ಬಿರುದನ್ನೂ ಅವರಿಗೆ ಗಂಟು ಹಾಕಿರುತ್ತಾರೆ. ಆದರೆ ಮೇಲೆ ತಿಳಿಸಿದಂತೆ ಅದ್ವೈತವು ಒಂದು ಮತವಲ್ಲ. ವೇದದಿಂದ ತಿಳಿದುಬರುವ ಸಾರ್ವತ್ರಿಕವಾದ ಪೂರ್ಣವಾದ ಸತ್ಯ ತತ್ತ್ವವಾಗಿದೆ.

(೨) ಅದ್ವೈತಿಗಳಲ್ಲಿ ತತ್ತ್ವವನ್ನು ನಿರೂಪಿಸುವ ಹಲವು ಸಂಪ್ರದಾಯಗಳು ಮೊದಲಿನಿಂದಲೂ ಇದ್ದವು. ಅವುಗಳಲ್ಲಿ ಸಾರವಾದ ಪರಿಶುದ್ಧಸಂಪ್ರದಾಯವನ್ನು ಆಚಾರ್ಯರು ಶ್ರುತಿವಚನ, ಭದ್ರವಾದ ಸಾರ್ವತ್ರಿಕಾನುಭವ, ಬಲವಾದ ಯುಕ್ತಿ, ಬಲ್ಲವರ ನುಡಿಗಳಿಂದ ಸಮರ್ಥಿಸಿ ಪ್ರತಿಪಾದಿಸಿದ್ದಾರೆ. ನಿಜವು ಹೀಗಿದ್ದರೂ ಸಾಮಾನ್ಯಜನರು ದ್ವೈತ, ವಿಶಿಷ್ಟಾದ್ವೈತಮತಗಳನ್ನು ಖಂಡಿಸಿ ಅದ್ವೈತಮತವನ್ನು ಉದ್ಧರಿಸುವದಕ್ಕೇ ಆಚಾರ್ಯರು ಭಾಷ್ಯಗಳನ್ನು ಬರೆದರೆಂದು ಆಡಿಕೊಳ್ಳುತ್ತಿದ್ದಾರೆ.

(೩) ಪರಿಶುದ್ಧಪ್ರಕ್ರಿಯೆಯನ್ನು ಗೊತ್ತುಪಡಿಸುವಾಗ ಅವೈದಿಕಮತ ಗಳಾದ ಸಾಂಖ್ಯ, ವೈಶೇಷಿಕ, ಬೌದ್ಧ, ಜೈನ – ಮುಂತಾದ ಮತಗಳನ್ನು ಪರಾಮರ್ಶಿಸಿ ಅವುಗಳ ಅಸಾರತೆಯನ್ನು ತೋರಿಸಿ ವೈದಿಕಸಿದ್ಧಾಂತದ ಹೆಚ್ಚುಗಾರಿಕೆಯನ್ನು ಜಿಜ್ಞಾಸುಗಳಿಗೆ ಮನವರಿಕೆಮಾಡಿಕೊಡುವ ಉದ್ದೇಶವು ಭಾಷ್ಯದಲ್ಲಿ ಸ್ಫುಟವಾಗಿ ಕಂಡುಬರುತ್ತದೆ. ನಿಜವು ಹೀಗಿದ್ದರೂ ತಿಳಿದವರೆನಿಸಿಕೊಂಡ ಕೆಲವರು 'ಆಚಾರ್ಯರ ಕಾಲದಲ್ಲಿ ಬೌದ್ಧಾದಿಗಳ ಹಾವಳಿಯಿಂದ ವೈದಿಕಧರ್ಮವು ಅವನತಿಗೆ ಬಂದಿತ್ತು; ಅವರನ್ನೆಲ್ಲ ಖಂಡಿಸಿ ಸನಾತನಧರ್ಮವನ್ನುಳಿಸಲು ಭಾಷ್ಯಗಳನ್ನು ರಚಿಸಿದರು' ಎಂದು ತೀವ್ರವಾಗಿ ಪ್ರತಿಪಾದಿಸುತ್ತಿರುವರು.

(೪) ವೈದಿಕವಾಙ್ಮಯಗಳಾದ ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರಗಳಲ್ಲಿಯೂ ಶ್ರೀಶಂಕರಾಚಾರ್ಯರ ಭಾಷ್ಯಗಳಲ್ಲಿಯೂ ತರ್ಕ, ಅನುಮಾನ, ಸಾಂಖ್ಯ, ಯೋಗ, ಸಮಾಧಿ – ಮುಂತಾದ ಶಬ್ದಗಳು ಉಪಯೋಗಿಸಲ್ಪಟ್ಟಿವೆ. ಆದರೆ ಇವು ವೇದಾಂತಶಾಸ್ತ್ರಗಳಲ್ಲಿ ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿವೆ ಎಂಬುದನ್ನು ಭಾಷ್ಯದ ಆಧಾರದಿಂದ ನೋಡಿ ತಿಳಿದುಕೊಳ್ಳದೆ ಈ ಶಬ್ದಗಳಿಗೆ ರೂಢಿಯಲ್ಲಿರುವ ಅರ್ಥಗಳನ್ನೇ ಇಟ್ಟುಕೊಂಡಿರುವದರಿಂದ ವೇದಾಂತಿಗಳಲ್ಲಿ ಅನೇಕ ತಪ್ಪುಗ್ರಹಿಕೆಗಳು ಹರಡಿಕೊಳ್ಳಲು ಅವಕಾಶವಾಗಿರುತ್ತದೆ.

(೫) ಇದರಂತೆಯೇ ಶ್ರೀಗೌಡಪಾದಾಚಾರ್ಯರ ಕೃತಿಯಾದ ಮಾಂಡೂಕ್ಯಕಾರಿಕೆಯಲ್ಲಿ ಉಪಯೋಗಿಸಿರುವ ಧರ್ಮ, ವಿಜ್ಞಾನ, ಅಜಾತಿ, ಅಗ್ರಹಣ – ಮುಂತಾದ ಶಬ್ದಗಳನ್ನು ನೋಡಿ 'ಗೌಡಪಾದರು ಬೌದ್ಧತತ್ತ್ವಾನುಯಾಯಿಗಳು' ಎಂಬ ತಪ್ಪುಗ್ರಹಿಕೆಗೆ ಕೆಲವು ಪಂಡಿತರೂ ಪಕ್ಕಾಗಿರುವದು ಕಂಡುಬರುತ್ತದೆ.

(೬) ವೇದಾಂತದ ಬೋಧೆಯು ಸಾರ್ವತ್ರಿಕವಾದ ಅನುಭವದ ಆಧಾರದಿಂದಲೇ ಹೊರಟಿದ್ದು ವಿಚಾರವು ಮುಗಿದ ಸಮಕಾಲದಲ್ಲಿಯೇ ಅನುಭವದಲ್ಲಿ ಪರ್ಯವಸಾನವನ್ನು ಹೊಂದುವ ಸಿದ್ಧಾಂತವಾಗಿದೆ. ಆದ್ದರಿಂದ ವೇದಾಂತವಾಕ್ಯಾರ್ಥವಿಚಾರವು ತನ್ನ ಪೂರ್ಣಫಲವನ್ನು ಕೊಡಲು ಮತ್ತೆ ಯಾವ ಸಾಧನ ವಿಶೇಷವನ್ನೂ ಬಯಸುವದಿಲ್ಲ – ಎಂಬುದು ಆಚಾರ್ಯರ ದಿವ್ಯಸಂದೇಶವಾಗಿದೆ. ನಿಜವು ಹೀಗಿದ್ದರೂ ವೇದಾಂತಿಗಳಲ್ಲಿ ಸಮಾಧಿ ಮುಂತಾದ ವೈಯುಕ್ತಿಕಾನುಭವಗಳಿಂದ ತತ್ತ್ವವನ್ನು ಗೊತ್ತುಪಡಿಸುವದು, ಹಾಗೂ ವೇದಾಂತದ ಪ್ರಯೋಜನಕ್ಕಾಗಿ ಮತ್ತೆ ಪಾತಂಜಲಯೋಗಾದಿ ಸಾಧನಗಳನ್ನು ಉಪದೇಶಿಸುವದು – ಇವೇ ಮುಂತಾದ ತಪ್ಪುಗ್ರಹಿಕೆಗಳು ಕಂಡುಬರುತ್ತವೆ.

(೭) ಅದ್ವೈತಿಗಳಲ್ಲಿದ್ದ ಪ್ರಪಂಚಪ್ರವಿಲಯ, ವಾಸನಾಕ್ಷಯ, ಪ್ರಸಂಖ್ಯಾನ – ಈ ಪಕ್ಷಗಳೆಲ್ಲವನ್ನೂ ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ಖಂಡಿಸಿ ಪರಿಶುದ್ಧವೇದಾಂತಸಂಪ್ರದಾಯವನ್ನು ಎತ್ತಿಹಿಡಿದದ್ದು ನಿಜವಾದರೂ ಈಗ್ಗೆ ಪುನಃ 'ಶಂಕರಾಚಾರ್ಯರ ಅದ್ವೈತತತ್ತ್ವ' ಎಂಬ ಹೆಸರಿನಿಂದಲೇ ಈ ವಾದಗಳೆಲ್ಲವೂ ರೂಪಾಂತರದಿಂದ ವೇದಾಂತಪ್ರಪಂಚದಲ್ಲಿ ಪ್ರವೇಶಿಸಿ ಅನೇಕ ಪ್ರಸಿದ್ಧಪುರುಷರ ಗ್ರಂಥಗಳಲ್ಲಿ ನಿರೂಪಿಸಲ್ಪಟ್ಟು 'ಎಲ್ಲವೂ ಅದ್ವೈತವೇ' ಎಂಬ ಭ್ರಾಂತಿಗೆ ವೇದಾಂತಪ್ರಿಯರಲ್ಲಿ ಬಹುಜನರು ಬಲಿಯಾಗುವದಕ್ಕೆ ಅವಕಾಶವಾಗಿರುತ್ತದೆ.

(೮) ಜ್ಞಾನಕರ್ಮಸಮುಚ್ಚಯವಾದದ ಖಂಡನೆಯ ನೆಪದಿಂದ ಕರ್ಮ – ಉಪಾಸನೆಗಳನ್ನು ತೆಗಳಿ ಮನಬಂದಂತೆ ವರ್ತಿಸುತ್ತಲೂ 'ನಾನು ಬ್ರಹ್ಮವು' ಎಂದು ಹೇಳಿಕೊಳ್ಳುತ್ತಲೂ ತಿರುಗುವ ಭ್ರಾಂತಿಯೂ ಕೆಲವರಿಗೆ ಹೊಕ್ಕಿದ್ದು ತಾನು ಜ್ಞಾನಿಯೆಂಬ ದುರಭಿಮಾನಕ್ಕೆ ತುತ್ತಾಗಿರುವವರನ್ನೂ ನಾವೀಗ ಕಾಣಬಹುದಾಗಿದೆ. ಭಾಷ್ಯದಲ್ಲಿ ಕರ್ಮ, ಉಪಾಸನೆ, ವೈದಿಕಾಚರಣೆ, ಆಸ್ತಿಕ್ಯ, ದೇವತೆಗಳ ಅಸ್ತಿತ್ವ, ಪಾಪಪುಣ್ಯ, ಜನ್ಮಾಂತರಗಳ ರಹಸ್ಯ – ಇವುಗಳ ಬಗ್ಗೆ ವ್ಯಾವಹಾರಿಕದೃಷ್ಟಿಯಿಂದ ಯಾವಯಾವ ಸ್ಥಾನಮಾನಗಳನ್ನು ಕೊಡಬೇಕೋ ಆ ಬೆಲೆಯನ್ನು ಕೊಟ್ಟೇ ಬರೆದಿರುವ ವಿಚಾರವು ಈ ವರ್ಗದವರಿಗೆ ತಿಳಿದಿರುವದೇ ಇಲ್ಲ. ಹೀಗಾಗಿ ವೇದಾಂತಿಗಳೆಂದರೆ ಮನಬಂದ ತೆರನಿರುವ ಸ್ವೇಚ್ಛಾಚಾರಿಗಳೆಂಬ ತಪ್ಪುಗ್ರಹಿಕೆಯು ಕೆಲವೆಡೆ ಉಂಟಾಗಿದೆ.

(೯) ವೇದಗಳಲ್ಲಿ ಕರ್ಮ, ಉಪಾಸನೆಗಳನ್ನು ವಿಧಿಸಿರುವ ವಾಕ್ಯಗಳಿಗೆ ಪ್ರಾಮಾಣ್ಯವಿರುವಂತೆ ಯಾವ ಕರ್ಮ ಉಪಾಸನೆಗಳಿಗೂ ಒಳಗಾಗದೆ ಸ್ವತಂತ್ರವಾಗಿಯೇ ಫಲಪರ್ಯವಸಾಯಿಗಳಾದ ಜ್ಞಾನವಾಕ್ಯಗಳಿಗೂ ಸಮಾನ ಬೆಲೆಯಿದೆ. ಹಾಗೂ ಜ್ಞಾನದಿಂದ ಕಾಮವು ತೊಲಗಲು ಕರ್ಮಕ್ಕೆ ಅವಕಾಶವಿಲ್ಲ. ಇದರಿಂದ ಜ್ಞಾನಿಗೆ ಪಾರಮಹಂಸ್ಯ ಅಥವಾ ಸರ್ವಕರ್ಮಸಂನ್ಯಾಸವು ಸಹಜವಾಗಿರುತ್ತದೆ. ಇಂಥ ಜ್ಞಾನನಿಷ್ಠೆಯನ್ನೇ ಬಯಸುವ ಮುಮುಕ್ಷುವಿಗೆ ಇದಕ್ಕನುಗುಣವಾದ ಮುಮುಕ್ಷು ಆಶ್ರಮರೂಪವಾದ ಸಾಧನಸಂನ್ಯಾಸವನ್ನು ವಿಧಿಸುವದು ಯುಕ್ತಿಯುಕ್ತವಾಗಿದೆ. ಆದ್ದರಿಂದ ಸಂನ್ಯಾಸವು ಅಶಾಸ್ತ್ರೀಯ, ಅನಧಿಕಾರಿವಿಚಾರ – ಎಂದು ಆ ಕಾಲದಲ್ಲಿ ವಾದಿಸುತ್ತಿದ್ದ ವೈದಿಕರಿಗೆ ಶ್ರುತಿಯುಕ್ತ್ಯನುಭವಪೂರ್ವಕವಾಗಿ ಸಂನ್ಯಾಸದ ತತ್ತ್ವ ಹಾಗೂ ಸಾರ್ಥಕತೆಗಳನ್ನು ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ಸಿದ್ಧಪಡಿಸಿ ತೋರಿಸಿದ್ದಾರೆ. ನಿಜವು ಹೀಗಿದ್ದರೂ 'ಬೌದ್ಧರನ್ನು ಜಯಿಸಲು ಶಂಕರಾಚಾರ್ಯರು ಸಂನ್ಯಾಸವನ್ನು ಸ್ಥಾಪಿಸಿದರು' ಎಂದು ಕೆಲವರು ತಪ್ಪು ಪ್ರಚಾರಮಾಡುತ್ತಿದ್ದಾರೆ.

(೧೦) ಜ್ಞಾನಿಯು ಪ್ರಾರಬ್ಧಕರ್ಮನಿಮಿತ್ತದಿಂದ ಗೃಹಸ್ಥನಾಗಿರ ಬಹುದಾದರೂ ಅವನು ಸರ್ವಕರ್ಮಸಂನ್ಯಾಸಿಯೇ ಆಗಿದ್ದಾನೆ ಎಂದು ಆಚಾರ್ಯರು ಭಾಷ್ಯಗಳಲ್ಲಿ ಸ್ಪಷ್ಟವಾಗಿ ತಿಳಿಸಿದ್ದರೂ ಈ ನಿಜವನ್ನರಿಯದೆ 'ಸಂನ್ಯಾಸವನ್ನು ತೆಗೆದುಕೊಳ್ಳದೆ ಮೋಕ್ಷವೇ ಇಲ್ಲ' ಎಂದು ಕೆಲವರೂ 'ಸಂನ್ಯಾಸವೆಂಬುದಿಲ್ಲವೇ ಇಲ್ಲ, ಅದೆಲ್ಲ ಬರಿಯ ವೇಷ' ಎಂದು ಕೆಲವರೂ

ಒಬ್ಬರನ್ನೊಬ್ಬರು ನಿಂದಿಸುತ್ತಾ ಹೊರಟಿರುವದೂ ಈಗ್ಗೆ ಕಂಡುಬರುತ್ತಿದೆ.

ಒಟ್ಟಿನಲ್ಲಿ ಭಾಷ್ಯದ ನೇರಾದ ಅಧ್ಯಯನ ಹಾಗೂ ಮುಮುಕ್ಷುಗಳಿಗೆ ಭಾಷ್ಯಾನುಸಾರವಾದ ಬೋಧೆ – ಎರಡೂ ಸುಲಭವಾಗಿ ಸಿಕ್ಕದಹಾಗಾದ್ದರಿಂದ ಎಲ್ಲ ವಿಧದಿಂದಲೂ ಅದ್ವೈತವೇದಾಂತದಲ್ಲಿ ಈಗ್ಗೆ ಅನೇಕ ತಪ್ಪುಗ್ರಹಿಕೆಗಳು ಹೇರಳವಾಗಿ ಬೇರುಬಿಟ್ಟಿರುವದೇನೂ ಆಶ್ಚರ್ಯವಲ್ಲ.

## ಶ್ರೀಶಂಕರರೂ ಯೋಗಸಿದ್ಧಿಗಳೂ

ಶ್ರೀಶಂಕರಭಗವತ್ಪಾದರು ತಮ್ಮ ಭಾಷ್ಯಗಳಲ್ಲಿ ಪರಬ್ರಹ್ಮತತ್ತ್ವವನ್ನು ಸಾರ್ವತ್ರಿಕಪೂರ್ಣಾನುಭವದ ಆಧಾರದಿಂದಲೇ ಪ್ರತಿಪಾದಿಸಿದ್ದಾರಲ್ಲದೆ ವೈಯುಕ್ತಿಕಾನುಭವಗಳಾದ ಸಮಾಧಿ, ಸಿದ್ಧಿ, ಮಹಿಮೆ, ಪವಾಡಗಳ ಆಧಾರದಿಂದ ತತ್ತ್ವನ್ನು ಗೊತ್ತುಪಡಿಸುವದು ಎಂದಿಗೂ ಆಗಲಾರದೆಂದೂ ಹೇಳಿದ್ದಾರೆ. ಏಕೆಂದರೆ ಒಂದು ಸಿದ್ಧಿಯನ್ನು ತೋರಿಸಿದ ಮಹಾಪುರಷ ನೊಬ್ಬನು ಒಂದು ತತ್ತ್ವವನ್ನು ಪ್ರತಿಪಾದಿಸಿ ಅದೇ ಸತ್ಯವೆಂದು ಹೇಳಿರಲಾಗಿ ಇನ್ನೊಬ್ಬ ಯೋಗೀಶ್ವರನು ಇನ್ನೊಂದು ಅದ್ಭುತಪವಾಡವನ್ನು ತೋರಿಸಿ ಹಿಂದಿನ ತತ್ತ್ವವು ನಿಜವಲ್ಲವೆಂದು ಪ್ರತಿಪಾದಿಸಿದರೆ ಆಗ ಯಾವ ತತ್ತ್ವವನ್ನು ನಿಜವೆಂದು ನಂಬಬೇಕು? ತಾರ್ಕಿಕರು ಹೇಳುವ ತತ್ತ್ವಗಳಿಗೆ ಹೇಗೆ ಒಂದು ಕೊನೆಯ ನಿರ್ಣಯವೆಂಬುದಿಲ್ಲವೋ ಹಾಗೆಯೇ ಇಲ್ಲಿಯೂ ಕೊನೆಯ ನಿರ್ಣಯವೆಂಬುದು ಸಿದ್ಧವಾಗುವದಿಲ್ಲ. ಆದ್ದರಿಂದ ಅನುಭವಾನುಸಾರಿಯದ ತತ್ತ್ವವು ವೈಯಕ್ತಿಕಾನುಭವಗಳಿಂದ ಸಿದ್ಧವಾಗಿರದೆ ಸಾರ್ವತ್ರಿಕವಾದ ಎಂದರೆ ಸರ್ವರಿಗೂ ಒಂದೇ ಬಗೆಯಾಗಿರುವ ಅನುಭವದ ಆಧಾರದಿಂದ ನಿರೂಪಿತವಾಗಿದ್ದರೆ ಎಲ್ಲ ಕಾಲದ ಎಲ್ಲ ದೇಶದ ಎಲ್ಲ ಬಗೆಯ ಜನರೂ ಆ ತತ್ತ್ವವನ್ನು ಕೇಳಿದಕೂಡಲೇ ತಮ್ಮಲ್ಲಿಯೇ ಪರೀಕ್ಷಿಸಿ ಮನಗಾಣಬಹುದಾಗಿದೆ. ಇಂಥ ರೀತಿಯಲ್ಲೇ ಆಚಾರ್ಯರು ಪರಮತತ್ತ್ವವನ್ನು ಪ್ರತಿಪಾದಿಸಿದ್ದಾರೆ.

ಇನ್ನು ಆತ್ಮಜ್ಞಾನಕ್ಕೂ ಯೋಗಿಸಿದ್ಧಿಗಳಿಗೂ ಯಾವ ಬಗೆಯ ಸಂಬಂಧವೂ ಇಲ್ಲ. ಆತ್ಮಜ್ಞಾನದಿಂದ ಸಿದ್ಧಿಗಳು ಬರುವವೆಂದಾಗಲಿ, ಸಿದ್ಧಿಗಳಿದ್ದವರಿಗೆ ಆತ್ಮಜ್ಞಾನವಾಗುವದೆಂದಾಗಲಿ ತಿಳಿಯಬಾರದು; ಅಥವಾ ಸಿದ್ಧಿಗಳಿರುವವರಿಗೆ ಆತ್ಮಜ್ಞಾನವಾಗಲಾರದೆಂದೂ ತಿಳಿಯಬಾರದು. ಈಗ್ಗೆ ಅನೇಕರು ಈ ಸತ್ಯವನ್ನು ತಿಳಿಯಲಾರದೆ ಆತ್ಮಜ್ಞಾನವಾದರೆ ಸಿದ್ಧಿಗಳು ಬಂದೇತೀರುವವೆಂದು ಹೇಳುತ್ತಿರುತ್ತಾರೆ. ಹಾಗೆಯೇ ಸಿದ್ಧಪುರುಷರೆಲ್ಲರೂ ಜ್ಞಾನಿಗಳೆಂದೂ ಬಗೆಯುತ್ತಾರೆ. ಈಶ್ವರ ಆತ್ಮ ಬೇರೆ, ಪ್ರಕೃತಿಯು ಸತ್ಯ ಎಂಬ

ದ್ವೈತಶಾಸ್ತ್ರವಾದ ಪಾತಂಜಲಯೋಗ ಶಾಸ್ತ್ರದ ಪ್ರಕಾರವೇ ವಿಚಾರಮಾಡಿದರೂ ಸಹ ಅವರು ಹೇಳುವ ಪ್ರಕೃತಿಪುರುಷರ ಬಿಡುಗಡೆಯ ರೂಪದ ಮೋಕ್ಷಕ್ಕೆ ಕಾರಣವಾದ ಯೋಗಸಾಧನೆಯಲ್ಲಿ ಬರುವ ಅಣಿಮಾದಿಸಿದ್ಧಿಗಳಿಗೆ (ಅವರ ಭಾಷೆಯಲ್ಲಿ ವಿಭೂತಿಗಳು) ಬೆಲೆಯಿಲ್ಲದಿರುವಾಗ ಅದ್ವಯನಾದ ಆತ್ಮನೇ ಪರಮಾರ್ಥಸತ್ಯನು, ಅವನಿಗಿಂತ ಬೇರಾದ ತತ್ತ್ವವೇ ಇಲ್ಲ ಎಂಬುದನ್ನು ಸಾರ್ವತ್ರಿಕಾನುಭವದ ಅಧಾರದಿಂದಲೇ ಮನಗಾಣಬೇಕೆಂದು ಉಪದೇಶಿಸುವ ಅದ್ವೈತಶಾಸ್ತ್ರದಲ್ಲಿ ಈ ಸಿದ್ಧಿಗಳಿಗೆ ಬಲೆ ಇದ್ದೀತೆ? ಇದನ್ನು ಚೆನ್ನಾಗಿ ವಿಚಾರಿಸಬೇಕು.

ಇನ್ನು ಪರಮಾತ್ಮನು ಧರ್ಮೋದ್ಧಾರಕ್ಕಾಗಿ ಲೀಲಾವಿಗ್ರಹ ರೂಪಗಳನ್ನು ಧರಿಸಿ ಅವತಾರಮಾಡಿದಾಗ ದುಷ್ಟಶಿಕ್ಷಣ, ಶಿಷ್ಟರಕ್ಷಣೆಗಾಗಿ ಅಘಟಿತಘಟನೆಗಳನ್ನು ತೋರ್ಪಡಿಸಿದ ಕಥೆಗಳು ಭಾರತ, ರಾಮಾಯಣಾದಿಗಳಲ್ಲಿ ಕೇಳಬರುತ್ತಿವೆಯಷ್ಟೆ. ಆದರೆ ಅವು ಯೋಗಸಿದ್ಧಿಯ ಪವಾಡಗಳೆಂದು ಹೇಳಿಸಿಕೊಳ್ಳಲಾರವು. ಪ್ರಕೃತಿಯ ಅಂದರೆ ಮಾಯೆಯ ಅಧೀಶ್ವರನೇ ಇಲ್ಲಿ ಬಂದಿರುವಾಗ ಆ ಪ್ರಕೃತಿಯೇ ಅವನ ಇಚ್ಛೆಗೆ ತಕ್ಕಂತೆ ವರ್ತಿಸಲು ಸಿದ್ಧವಾಗಿರುವದರಿಂದ ಆ ರೀತಿಯ ಅಘಟಿತಘಟನೆಗಳು ನಡೆಯುತ್ತಿರುತ್ತವೆ. ಯೋಗಿಗಳಾದರೊ, ತಾವು ಸಾಧನೆಮಾಡಿ ಕೆಲವೊಂದು ಸಿದ್ಧಿಗಳನ್ನು ಪಡೆದುಕೊಂಡಿರುತ್ತಾರೆ. ಆದ್ದರಿಂದ ಸಾಧನೆಯಿಂದ ಪಡೆದುಕೊಂಡ ಯೋಗಸಿದ್ಧಿಯ ಪವಾಡಗಳಿಗೂ ಪರಮೇಶ್ವರನಿಗೆ ಅಧೀನವಾಗಿರುವ ಪ್ರಕೃತಿಯಿಂದ ಆತನ ಇಚ್ಛೆಯ ಮೇರೆಗೆ ನಡೆದ ಘಟನೆಗಳಿಗೂ ತುಂಬಾ ಅಂತರವಿದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಭಗವಂತನು ಹೀಗೆ ಧರಿಸಿದ ಅವತಾರಗಳೂ ಆ ಶರೀರದಿಂದ ನಡೆಸಿದ ಕಾರ್ಯಗಳೂ ಸಹ "ದೇಹವಾನಿವ, ಜಾತ ಇವ, ಲೋಕಾನುಗ್ರಹಂ ಕುರ್ವನ್ನಿವ" (ಗೀ. ಭಾ. ಅವ.) ಎಂದು ಅವಿದ್ಯಾಕಲ್ಪಿತ ಮಾಯೆಯ ಮೂಲಕವೇ ತೋರುವವೇ ಹೊರತು ಪರಮಾರ್ಥವಾಗಿಲ್ಲ – ಎಂದು ಹೇಳುವಾಗ ಸಾಧನೆಯಿಂದ ಸಂಪಾದಿಸಿದ ಯೋಗಮಹಿಮೆಗಳು ಪರಮಾರ್ಥ ವಲ್ಲವೆಂಬುದನ್ನು ಹೇಳಬೇಕಾದ್ದೇಇಲ್ಲ. ಹೀಗಿರುವದರಿಂದ ಯೋಗಸಿದ್ಧಿಯ ಪವಾಡಗಳಿಗೂ ಪರಮಾರ್ಥತತ್ತ್ವಜ್ಞಾನಕ್ಕೂ ಯಾವ ಸಂಬಂಧವೂ ಇಲ್ಲ ಎಂಬುದನ್ನೂ ಈಶ್ವರನ ಅನುಗ್ರಹದಿಂದಲೇ ಆ ಸಿದ್ಧಿಗಳೂ ಸಹ ಯೋಗಿಗಳಿಗೆ ಬರುತ್ತವೆಂಬುದನ್ನೂ ಮರೆಯಬಾರದು.

ಈಗಿನ ಕಾಲದಲ್ಲಿ 'ತದಾ ದ್ರಷ್ಟುಸ್ಸ್ವರೂಪೇ ಅವಸ್ಥಾನಮ್' ಮುಂತಾದ

ಪಾತಂಜಲವಾಕ್ಯಗಳನ್ನು ಅದ್ವೈತಸಿದ್ಧಾಂತದ ವಾಕ್ಯಗಳೆಂದೇ ಭ್ರಮಿಸಿ ಪಾತಂಜಲಯೋಗದಿಂದಲೂ ಅದ್ವೈತವನ್ನೇ ಪಡೆಯಬಹುದೆಂದು ಪ್ರತಿಪಾದಿಸುವ ಪಂಡಿತರಿಗೇನೂ ಕೊರತೆ ಇರುವದಿಲ್ಲ. ಇಂಥವರಿಗೆ 'ದ್ವೈತಿನೋ ಹಿ ತೇ ಸಾಂಖ್ಯಾಃ ಯೋಗಿನಶ್ಚ' (ಸೂ. ಭಾ. 2-1-3) ಮುಂತಾದ ಶ್ರೀಶಂಕರಾಚಾರ್ಯರ ಮಾತುಗಳೇ ಕಿವಿಗೆ ಬಿದ್ದಿರುವದಿಲ್ಲವೆಂದರೆ ತಪ್ಪಾಗಲಾರದು.

ಆಚಾರ್ಯರು ತಮ್ಮ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಯೋಗಸಿದ್ಧಿಗಳು ಇಲ್ಲವೇ ಇಲ್ಲ, ಅದೆಲ್ಲಾ ಸುಳ್ಳು ಎಂದೇನೂ ಬರೆದಿರುವದಿಲ್ಲ. ಇಷ್ಟೇ ಅಲ್ಲ, ಆ ಸಿದ್ಧಪುರಷುರ ವಿಷಯದಲ್ಲಿ ಬಹಳ ಗೌರವಯುಕ್ತವಾಗಿಯೇ ಮಾತನಾಡಿದ್ದಾರೆ. ಅಣಿಮಾದ್ಯಷ್ಟಮಹಾಸಿದ್ಧಿಗಳುಂಟು, ಯೋಗಿಗಳಿಗೆ ಭೂತಭವಿಷ್ಯದ್ವರ್ತಮಾನಗಳು ತಿಳಿಯುತ್ತವೆ, ದೂರದರ್ಶನದೂರ ಶ್ರವಣಾದಿಗಳು ಸಂಭವಿಸುತ್ತವೆ – ಇವೇ ಮುಂತಾದ ಸಂಗತಿಗಳನ್ನು ಅವರು ಒಪ್ಪಿರುವದೇ ಅಲ್ಲದೆ ಅಲ್ಲಲ್ಲಿ ಸಮರ್ಥಿಸಿಯೂ ಇದ್ದಾರೆ. ಇಷ್ಟಿದ್ದರೂ ಆತ್ಮಜ್ಞಾನಾನುಭವಕ್ಕೂ ಈ ಯೋಗಸಿದ್ಧಿಗಳಿಗೂ ಸಂಬಂಧವುಂಟೆಂದು ಅವರು ಎಲ್ಲಿಯೂ ಹೇಳಿಲ್ಲ. ಮತ್ತೇನೆಂದರೆ ತತ್ತ್ವವನ್ನು ಪ್ರತಿಪಾದಿಸುವಾಗಲೆಲ್ಲ ಅವರು ಜನಸಾಮಾನ್ಯರನ್ನೇ ಪ್ರತಿನಿಧಿಸಿ ಮಾತನಾಡಿರುತ್ತಾರೆ.[1] ಸಾರ್ವತ್ರಿಕಾನುಭವದ ಆಧಾರದಿಂದ ಶ್ರುತಿಯು ತೋರಿಸಿಕೊಟ್ಟ ರೀತಿಯಲ್ಲಿಯೂ ಅನುಭಾವಿಯಾದ ಗುರುವು ಉಪದೇಶಿಸಿದ ಮೇರೆಗೂ ತನ್ನಲ್ಲಿಯೇ ತನ್ನ ಸ್ವರೂಪವನ್ನು ಕಂಡುಕೊಂಡವನಿಗೆ ಈ ಯೋಗಿಗಳೂ ದೇವತೆಗಳೂ ಸರ್ವವೂ ತಾನೇ ಆಗಿರುವೆನೆಂಬ ಸರ್ವಾತ್ಮಭಾವವು ಬರುವದೆಂದೂ ಈ ಸರ್ವಾತ್ಮಭಾವವು ಪರಿಪೂರ್ಣ ಸರ್ವಜ್ಞಸರ್ವವ್ಯಾಪ್ತವಾದ ಆತ್ಮತತ್ತ್ವವೇ ಆಗಿರುವದೆಂದೂ ಭಾಷ್ಯಗಳಲ್ಲಿ ಪ್ರತಿಪಾದಿಸಿದ್ದಾರೆ. ಆದ್ದರಿಂದ ಜ್ಞಾನಿಯಲ್ಲಿ ವೈಯುಕ್ತಿಕವಾಗಿ ಯೋಗಾದಿಸಿದ್ಧಿಗಳು ಕಾಣಬೇಕಾದ ಅವಶ್ಯಕತೆಯೇ ಇಲ್ಲ. ಸಂಪೂರ್ಣ ವಿಶ್ವವೆಲ್ಲವೂ ತಾನೇ ಆಗಿರುವಂತೆ ತೋರಿಕೊಂಡೂ ಸಹ ತಾನು ಕೇವಲ ನಿಷ್ಪ್ರಪಂಚಸದಾತ್ಮಸ್ವರೂಪನಾಗಿರುವೆನೆಂಬ ಅನುಭವ ಪೂರ್ವಕವಾದ ಅರಿವೇ ಜ್ಞಾನಿಗೆ ಸ್ವಭಾವವಾಗಿರುತ್ತದೆ.

---

1. ಬೃ. ಭಾ. 1-4-2ರಲ್ಲಿ 'ಮನ ಏವ ಕೇವಲಂ... ಅಸ್ಮಾಕಂ ತು....' ಎಂಬ ವಾಕ್ಯಗಳನ್ನೂ ಸೂ. ಭಾ. 1-3-33ರಲ್ಲಿ 'ಭವತಿ ಹಿ ಅಸ್ಮಾಕಮ್ ಅಪ್ರತ್ಯಕ್ಷಮಪಿ... ಯೋಗೋಽಪಿ ಅಣಿಮಾದ್ಯೈಶ್ವರ್ಯಪ್ರಾಪ್ತಿಫಲಃ...' ಎಂಬಿತ್ಯಾದಿ ವಾಕ್ಯಗಳನ್ನೂ ನೋಡಿರಿ.

ಇನ್ನು ಈಚೆಗೆ ಆಗಿಹೋಗಿರುವ ಶ್ರೀರಾಮಕೃಷ್ಣಪರಮಹಂಸರು, ರಮಣಮಹರ್ಷಿಗಳವೇ ಮುಂತಾದವರಲ್ಲಿ ಕಂಡುಬಂದವೆಂದು ತಿಳಿದುಬರುವ ಅದ್ಭುತಯೌಗಿಕಪವಾಡಗಳನ್ನು ಮುಂದುಮಾಡಿ ಅನೇಕ ತಪ್ಪುಗ್ರಹಿಕೆಗಳಿಗೆ ಬಲಿಯಾಗುವ ಎಷ್ಟೋ ಜನರಿದ್ದಾರೆ. ಅವರಿಗೆಲ್ಲಾ ಒಂದೇ ಮಾತೆಂದರೆ ಆ ಮಹಾಪುರುಷರು ತಮ್ಮ ಹಿಂದಿನ ಜನ್ಮದಲ್ಲಿಯೋ ಈ ಜನ್ಮದಲ್ಲಿಯೋ ಆಚರಿಸಿದ ಯೋಗತಪಸ್ಸಿನ ಫಲವೇ ಆ ಮಹಿಮೆಗಳೇ ಹೊರತು ಅವರು ಪಡೆದ ಆತ್ಮಜ್ಞಾನಕ್ಕೂ ಅವರಲ್ಲಿ ತೋರಿದ ಅದ್ಭುತಪವಾಡಗಳಿಗೂ ಯಾವ ಸಂಬಂಧವೂ ಇಲ್ಲ. ಮತ್ತು ಆ ಮಹಾಪುರುಷರಾರೂ ಈ ಪವಾಡಗಳಿಗೆ ತಮ್ಮ ಉಪದೇಶಗಳಲ್ಲಿ ಕವಡೆಯ ಬೆಲೆಯನ್ನೂ ಕೊಟ್ಟಿಲ್ಲವೆಂಬುದನ್ನು ಗಮನಿಸಬೇಕು.

ನಿಜವು ಹೀಗಿದ್ದರೂ ಶ್ರೀಶಂಕರರು ಅದ್ಭುತಪವಾಡಶಕ್ತಿಯುಳ್ಳವರೆಂದು ವರ್ಣಿಸುವ ಶಂಕರದಿಗ್ವಿಜಯಗಳೇ ಅವರ ವಿಷಯಕ್ಕೆ ಪ್ರಮಾಣಗ್ರಂಥಗಳಾಗಿ ಜನರಿಗೆ ಸಿಕ್ಕುತ್ತಿರುವದೂ ಭಾಷ್ಯಗಳ ಅಭ್ಯಾಸದ ಅಲಕ್ಷ್ಯವಾಗಿರುವದೂ ದುರದೃಷ್ಟದ ಸಂಗತಿಗಳೆನಿಸಿವೆ. ಈ ತಪ್ಪುಗ್ರಹಿಕೆಗಳು ಭಾಷ್ಯಗಳನ್ನು ನೇರವಾಗಿ ಮನನಮಾಡಿ ತತ್ತ್ವಗಳನ್ನು ತಿಳಿದುಕೊಳ್ಳುದವರಿಂದಲೇ ತೊಲಗಬೇಕೇ ಹೊರತು ಅನ್ಯಮಾರ್ಗವಿಲ್ಲ.

## ಶಂಕರರ ಹೃದಯವೈಶಾಲ್ಯ

ಈಚೆಗೆ ಕೆಲವರು 'ಶಂಕರರ ಬುದ್ಧಿಯನ್ನು ನಾವು ಮೆಚ್ಚುತ್ತೇವೆ; ಹಾಗೆಯೇ ರಾಮಾನುಜರ ಹೃದಯವನ್ನು ಮೆಚ್ಚುತ್ತೇವೆ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಇದಕ್ಕೆ ಮುಖ್ಯವಾಗಿ ಎರಡು ಕಾರಣಳಿವೆ; ಶ್ರೀಶಂಕರರ ಭಾಷ್ಯದ ಮೇಲೆ ಹೆಣೆಯಲ್ಪಟ್ಟ ತರ್ಕಪ್ರಧಾನವಾಗಿರುವ ವ್ಯಾಖ್ಯಾನಗಳ ಅಭಿಪ್ರಾಯಗಳನ್ನೇ ಶಂಕರರ ಅಭಿಪ್ರಾಯವೆಂದು ಭಾವಿಸಿರುವದು ಮೊದಲನೆಯ ಕಾರಣ. ರಾಮಾನುಜಾಚಾರ್ಯರು ಜಾತ್ಯಂತರರದವರನ್ನೂ ತಮ್ಮ ಧರ್ಮಕ್ಕೆ ಪರಿವರ್ತನಗೊಳಿಸಿಕೊಂಡದ್ದನ್ನೂ ಶಂಕರರು ವೇದೋಕ್ತವರ್ಣಾಶ್ರಮಾದಿ ಗಳನ್ನು ಎತ್ತಿಹಿಡಿದುದೇ ಅಲ್ಲದೆ ಅದಕ್ಕೆ ಪ್ರಾಧಾನ್ಯತೆಯನ್ನು ಕೊಟ್ಟಿರುವದನ್ನೂ ಕಂಡು ಅವರು ಸನಾತನಧರ್ಮಶರಣರೆಂದು ಬಗೆದಿರುವದು ಎರಡನೆಯ ಕಾರಣ. ಆದರೆ ಶಾಂಕರಭಾಷ್ಯಗಳನ್ನು ಚೆನ್ನಾಗಿ ಅಭ್ಯಾಸಿಸಿದಾಗ ಈ ಗ್ರಹಿಕೆಗಳು ಬೆಲೆಯಿಲ್ಲದವು ಗಳೆಂದು ಕಂಡುಬರುವದೇ ಅಲ್ಲದೆ ಶಂಕರರ ಹೃದಯ ವೈಶಾಲ್ಯದ ಸಂಪೂರ್ಣಕಲ್ಪನೆಯೂ ನಮಗೆ ಬರುವದು.

ಶುಷ್ಕತರ್ಕಗಳಿಂದ ಆತ್ಮಲಾಭವಾಗು ವದಿಲ್ಲ, ಶ್ರುತಿಯ ಉಪದೇಶದಂತೆ ಸಾರ್ವತ್ರಿಕವಾದ ಅನುಭವದ ಆಧಾರದಿಂದಲೇ ಆತ್ಮಜ್ಞಾನವು ದೊರಕುವದು ಎಂಬ ಸಂದೇಶದಲ್ಲಿ ಅವರು ಆತ್ಮವಿಜ್ಞಾನವು ಬುದ್ಧಿಗೆ ಒಳಪಟ್ಟ ಅನುಮಾನತರ್ಕಾದಿ ಗಳಿಗೆ ಸೇರಿದ್ದಲ್ಲವೆಂದೂ ಈ ಆತ್ಮಾನುಭವವು ಹೃದಯಗೋಚರವೇ ಆಗಿರುವದರಿಂದ ಬುದ್ಧಿಗಿಂತ ಹಿಂದಿರುವ ಅನುಭವ ಸ್ವರೂಪವೇ ಆಗಿದೆಯೆಂದೂ ಸಾರಿರುತ್ತಾರೆ. ಭಾಷ್ಯಚಿಂತನೆಯಿಂದ ಇದು ಮನದಟ್ಟಾಗುವದರಲ್ಲಿ ಸಂಶಯವೇ ಇಲ್ಲ.

ಇನ್ನು ಭಾಷ್ಯಕಾರರು ಕಟ್ಟಾ ಸನಾತನವರ್ಣಾಶ್ರಮ ಧರ್ಮಾಭಿಮಾನಿ ಗಳೆಂಬುದರಲ್ಲಿ ಸಂದೇಹವಿಲ್ಲ. ವೈದಿಕಧರ್ಮವನ್ನು ಅನುಷ್ಠಿಸಬೇಕೆಂಬುದೇ ಅವರ ಮುಖ್ಯೋಪದೇಶವಾಗಿರುತ್ತದೆ. ಆದರೆ ವೇದಾಧಿಕಾರವಿಲ್ಲವರಿಗೆ, ವರ್ಣಾಶ್ರಮ ಧರ್ಮಗಳಿಲ್ಲದವರಿಗೆ ಬ್ರಹ್ಮವಿದ್ಯೆ ಯಾಗಲಿ ಅದಕ್ಕೆ ಸಾಧನಗಳಾಗಲಿ ಇಲ್ಲ. ಅಂಥವರಿಗೆ ಮೋಕ್ಷವೇ ಇಲ್ಲ – ಎಂದೇನೂ ಶ್ರೀಶಂಕರರು ಹೇಳಿರುವದಿಲ್ಲ.[1] ಸೂತ್ರಭಾಷ್ಯದಲ್ಲಿ ಒಂದುಕಡೆ ಶೂದ್ರನಿಗೆ ವೇದಾಧಿಕಾರವಿಲ್ಲ, ಆದ್ದರಿಂದ ವೈದಿಕಕರ್ಮಗಳಿಲ್ಲ, ಚಿತ್ತಶುದ್ಧಿ ಇಲ್ಲ, ಜ್ಞಾನವೂ ಇಲ್ಲ – ಎಂಬ ಆಕ್ಷೇಪಣೆ ಬಂದಾಗ ವೇದಾಧಿಕರವಿಲ್ಲವೆಂಬುದು ನಿಜವಾದರೂ ವಿದುರಧರ್ಮವ್ಯಾಧಾದಿಗಳು ಆತ್ಮಜ್ಞಾನವನ್ನು ಪಡೆದಿದ್ದರೆಂದು ತಿಳಿದುಬರುವದರಿಂದ ಅವರಿಗೆ ಬ್ರಹ್ಮವಿದ್ಯೆಯ ಪ್ರಯೋಜನವಾದ ಮೋಕ್ಷವೆಂಬ ಫಲವನ್ನು ಅಲ್ಲಗಳೆಯಲು ಸಾಧ್ಯವಿಲ್ಲ; ವೇದಪೂರ್ವಕ ವಲ್ಲದಿದ್ದರೂ ಇತಿಹಾಸಪುರಾಣಗಳಿಂದ ಆತ್ಮವಿಜ್ಞಾನವನ್ನು ಶೂದ್ರರೂ ಪಡೆಯಬಹುದು; ಬ್ರಾಹ್ಮಣನನ್ನು ಮುಂದಿಟ್ಟುಕೊಂಡು ನಾಲ್ಕುವರ್ಣದವರೂ ಶ್ರವಣಾದಿಗಳನ್ನು ಮಾಡಿ ಆತ್ಮವಿಜ್ಞಾನವನ್ನು ಪಡೆದುಕೊಳ್ಳಬಹುದು; **'ಅಶನಾಯಾದ್ಯತೀತಂ ಅಪೇತಬ್ರಹ್ಮಕ್ಷತ್ರಾದಿಭೇದಮ್'** ಎಂದಿರುವ ಬ್ರಹ್ಮವು ಎಲ್ಲರಿಗೂ ಆತ್ಮನಾಗಿರುವದರಿಂದ ಅದನ್ನರಿಯುವ ಹಕ್ಕು ಎಲ್ಲರಿಗೂ ಉಂಟು – ಎಂಬುದಾಗಿ ಆಚಾರ್ಯರು ಘೋಷಿಸಿದ್ದಾರೆ. ಈ ಹೃದಯವೈಶಾಲ್ಯವನ್ನು ಕಾಣದವರು ಕುರುಡರಲ್ಲವೆ ?

ಸಂವರ್ತಾದಿಗಳು ನಗ್ನಚರ್ಯೆಯಲ್ಲಿದ್ದರು, ರೈಕ್ವಾದಿಗಳಿಗೆ ಯಾವ ವರ್ಣಾಶ್ರಮಧರ್ಮವೂ ಇರಲಿಲ್ಲ, ಆದರೂ ಅವರು ಮಹಾಯೋಗಿಗಳೂ

1. ಈ ಎಲ್ಲಾ ವಿಷಯಕ್ಕೆ ಸೂ.ಭಾ. 1–3–38, 3–4–36, 3–4–37ರ ವಾಕ್ಯಗಳನ್ನೂ ತೈ. ಭಾ. 1–10ರಲ್ಲಿ 'ನ ಹಿ ಅಗ್ನಿಹೋತ್ರಾದೀನ್ಯೇವ... ನ ಹಿ ಪ್ರತಿಬನ್ಧಕ್ಷಯಾದೇವ' ಎಂಬ ವಾಕ್ಯಗಳನ್ನು ನೋಡಿರಿ.

ಜ್ಞಾನಿಗಳೂ ಆಗಿದ್ದರೆಂಬುದನ್ನು ಅಲ್ಲಗಳೆಯಲಾಗದು – ಎಂದಿರುವ ಶಂಕರರ ಮಾತುಗಳನ್ನು ಈ ಸಂದರ್ಭದಲ್ಲಿ ಮೆಲಕುಹಾಕಬೇಕು. ಇದರಂತೆಯೇ 'ಚಿತ್ತಶುದ್ಧಿಗೆ ಕೇವಲ ವೈದಿಕವಾದ ಅಗ್ನಿಹೋತ್ರಾದಿಗಳೇ ಆಗಬೇಕೆಂದೇನಿಲ್ಲ. ಸತ್ಯವಚನ, ಬ್ರಹ್ಮಚರ್ಯ, ಶಮದಮಾದಿಗಳೂ ಕಾರಣವಾಗಬಹುದು. ಇಷ್ಟೇ ಅಲ್ಲ, ಶಮದಮಾದಿಗಳೂ ಸತ್ಯಾದಿಗಳೂ ಯಜ್ಞಾದಿಗಳಿಗಿಂತಲೂ ಜ್ಞಾನಕ್ಕೆ ಹತ್ತಿರವಾದ ನೇರಾದ ಸಾಧನಗಳಾಗಿವೆ. ಈಶ್ವರಾನುಗ್ರಹ, ಧ್ಯಾನಧಾರಣಾದಿ ಗಳಿಂದ ಆತ್ಮಜ್ಞಾನವು ಯಾರಿಗಾದರೂ ಉಂಟಾಗಬಹುದು. ಆದ್ದರಿಂದ ಕೇವಲ ವೈದಿಕಕರ್ಮಾದಿಗಳೇ ಆತ್ಮಜ್ಞಾನಕ್ಕೆ ಸಾಧನಗಳೆಂದೇನೂ ತಿಳಿದು ಕೊಳ್ಳಬೇಕಾದದ್ದಿಲ್ಲ" ಎಂಬ ಭಾಷ್ಯವಾಕ್ಯಗಳನ್ನು ಅವಲೋಕಿಸಿದರೆ ಸಾಧನಗಳ ವಿಷಯದಲ್ಲಿಯೂ ಸಹ ಶಂಕರರ ಹೃದಯವೈಶಾಲ್ಯವು ಎಷ್ಟೆಂಬುದು ಸ್ಪಷ್ಟವಾಗಿ ಗೋಚರವಾಗುವದು. ಆದರೆ ವೈದಿಕ ವರ್ಣಾಶ್ರಮಧರ್ಮ ದಲ್ಲಿರುವವರು ಶಾಸ್ತ್ರವನ್ನು ಮೀರಿ ನಡೆಯಬಾರದು. ಅದರಂತೆ ನಡೆಯುವದೇ ಹೆಚ್ಚಿನದು – ಎಂದು ಪ್ರತಿಪಾದಿಸಿದ್ದರಿಂದ ಆ ಧರ್ಮದ ಬಗ್ಗೆ ಅವರ ಅಚಲಶ್ರದ್ಧೆಯೂ ಗೋಚರವಾಗುತ್ತದೆ.[1] ಭಗವದ್ಗೀತಾಭಾಷ್ಯದಲ್ಲಿಯಂತೂ ಭಗವದ್ಭಕ್ತಿಯ ಬಗ್ಗೆ ಬರೆಯುವಾಗ ಆಚಾರ್ಯರು ಪರಾಭಕ್ತಿಯೇ ಆತ್ಮಜ್ಞಾನ ನಿಷ್ಠೆ ಎಂದು ಪ್ರತಿಪಾದಿಸಿ[2] ಆತ್ಮಜ್ಞಾನಕ್ಕೆ ಅವ್ಯಭಿಚರಿತವಾದ ಪ್ರೇಮಪೂರ್ವಕ ವಾದ ಭಗವಂತನ ಭಕ್ತಿಯೇ ಮುಖ್ಯಸಾಧನವಾಗಿದೆ ಎಂದು ಬರೆದಿರುವದನ್ನು ಓದಿ ನೋಡಿಯೇ ಆನಂದಿಸಬೇಕಾಗಿರುತ್ತದೆ.[3] ಆದ್ದರಿಂದ ಶಂಕರರ ಬಗ್ಗೆ ಅನೇಕ ತಪ್ಪುಕಲ್ಪನೆಗಳೂ ಭಿನ್ನಾಭಿಪ್ರಾಯಗಳೂ ಪ್ರಚಾರದಲ್ಲಿ ಬರಲು ನೇರಾಗಿ ಭಾಷ್ಯಗಳನ್ನು ಅಭ್ಯಾಸಮಾಡದಿರುವದೇ ಕಾರಣವಾಗಿರುತ್ತದೆ.

ಇದರಂತೆ ಶ್ರೀಶಂಕರರು ಶ್ರುತಿಗಳ ಪ್ರಮಾಣವನ್ನು ಅಡಿಗಡಿಗೆ ಹೇಳುವದನ್ನೂ ಕೆಲವರು ಆಕ್ಷೇಪಿಸುವದುಂಟು. ಆದರೆ ಸೂತ್ರಭಾಷ್ಯದಲ್ಲಿ "ಧರ್ಮಜಿಜ್ಞಾಸೆಯಂತೆ ಬ್ರಹ್ಮಜಿಜ್ಞಾಸೆಯಲ್ಲಿ ಬರಿಯ ಶ್ರುತಿಯೇ ಪ್ರಮಾಣವಾಗಿರುವದಿಲ್ಲ. ಮತ್ತೇನೆಂದರೆ ಶ್ರುತಿಯೂ ಅನುಭವಾದಿಗಳೂ ಯಥಾಸಂಭವವಾಗಿ ಪ್ರಮಾಣವಾಗಿವೆ" (1–1–2), "ಧರ್ಮಜಿಜ್ಞಾಸೆಯಲ್ಲಿ ಹೇಳಿದ ಕರ್ಮಾದಿಗಳಿಗಾಗುವ ಸ್ವರ್ಗಾದಿಫಲಗಳು ಅನುಭವಕ್ಕೆ ಈಗಲೇ ಬರಲಾರವಾದ್ದರಿಂದ ಆ ಫಲವು ಆದೀತೋ ಇಲ್ಲವೋ ಎಂದು ಒಂದುವೇಳೆ ಶಂಕಿಸಬಹುದು. ಆದರೆ ಶ್ರುತಿಯು ಹೇಳುವ ಬ್ರಹ್ಮವಿದ್ಯೆಯ ಫಲವು ಈಗಲೇ

---

1. ಸೂ. ಭಾ. 3–4–39. 2. ಗೀ. ಭಾ. 18–55.

3. ಗೀ.ಭಾ. 18–68ರಲ್ಲಿಯ 'ಭಕ್ತಿಮಾತ್ರೇಣ ಕೇವಲೇನ...' ಎಂಬ ವಾಕ್ಯವನ್ನು ನೋಡಿರಿ.

ಅನುಭವಕ್ಕೆ ಬರುವದಾದ್ದರಿಂದ ಯಾವ ಶಂಕೆಗೂ ಇಲ್ಲಿ ಅವಕಾಶವಿಲ್ಲ" (3–3–32) ಎಂದು ಹೇಳಿದ ಶಂಕರರು "ಕಣ್ಣು ರೂಪದ ವಿಜ್ಞಾನಕ್ಕೆ ಪ್ರಮಾಣವಾಗಿರುವಂತೆ ಅನುಭವಸ್ವರೂಪವಾದ ಆತ್ಮತತ್ತ್ವವಿಜ್ಞಾನಕ್ಕೆ ಶ್ರುತಿಯೇ ಪ್ರಮಾಣವಾಗಿದೆ" (1–1–3) ಎಂದೂ ಹೇಳಿ ಶ್ರುತಿಯ ಭೋಧವು ಅನುಭವಪರ್ಯವಸಾನವಾಗುವದೆಂದೂ ತಿಳಿಸಿದ್ದಾರೆ. ಗೀತಾಭಾಷ್ಯದಲ್ಲಿ "ನೂರಾರು ಶ್ರುತಿಗಳು ಸೇರಿ ಬೆಂಕಿಯು ತಣ್ಣಗಿದೆ, ಪ್ರಕಾಶವಿಲ್ಲದ್ದಾಗಿದೆ – ಎಂದು ಹೇಳಿದರೂ ಅದು ಅನುಭವಕ್ಕೆ ವಿರೋಧವಾಗಿರುವದರಿಂದ ಅವುಗಳು ಪ್ರಮಾಣವೆನಿಸಲಾರವು" (18–66) ಎಂದು ಅನುಭವಕ್ಕೆ ಕೊಟ್ಟಿರುವ ಪ್ರಾಧಾನ್ಯವನ್ನು ನೋಡಿದರೆ ಶಂಕರರು ಶ್ರುತಿಗಳನ್ನು ಅಡಿಗಡಿಗೆ ಉದಾಹರಿಸುವದಕ್ಕೆ ಕಾರಣವೆಂದರೆ ಶ್ರುತಿಯು ಅನುಭವಸಮ್ಮತ ವಾಗಿರುವದೆಂಬುದೇ ಆಗಿದೆ ಎಂಬ ಸಂಗತಿಯು ಭಾಷ್ಯದಿಂದ ಸ್ಪಷ್ಟವಾಗುತ್ತದೆ. ವಸ್ತುತತ್ತ್ವಪ್ರಧಾನವೂ ಸಾರ್ವತ್ರಿಕ ಪೂರ್ಣಾನುಭವಾನುಸಾರಿಯೂ ಆಗಿರುವ ಬ್ರಹ್ಮತತ್ತ್ವನಿರ್ಣಯಕ್ಕೆ ಅನುಭವದಲ್ಲಿ ಕೊನೆಗಾಣುವದೇ ಫಲವಾಗಿರುವದ ರಿಂದ ಆ ಫಲವು ಉಂಟಾಗದಿರುವ ಯಾವದೂ ಪ್ರಮಾಣವೆನಿಸಲಾರದು. ಶ್ರುತಿಯ ಬೋಧದಿಂದ ಆ ಫಲವು ಉಂಟಾಗುವದಾದ್ದರಿಂದಲೇ ಶಂಕರರು ಶ್ರುತಿಯನ್ನು ಅಷ್ಟರಮಟ್ಟಿಗೆ ಆದರಿಸಿದ್ದಾರೆ. ಬ್ರಹ್ಮವಿದ್ಯೆಯ ಫಲವು ಈಗಲೇ ಅನುಭವಕ್ಕೆ ಬರುವದೆಂಬುದರ ಆಧಾರದಿಂದಲೇ ಅದೇ ಶ್ರುತಿಯಲ್ಲಿ ಹೇಳಿದ ಉಪಾಸನೆಗೆ ಆಗುವ ಕ್ರಮಮುಕ್ತಿಯೇ ಮುಂತಾದ ಲೋಕಾಂತರಫಲಗಳನ್ನೂ ಕರ್ಮಗಳಿಗಾಗುವ ಸ್ವರ್ಗಾದಿಫಲಗಳನ್ನೂ ಒಪ್ಪಬೇಕಾಗಿರುವದೆಂಬ ಅಭಿಪ್ರಾಯವನ್ನು ಶ್ರೀಶಂಕರರು ಸೂತ್ರಭಾಷ್ಯದಲ್ಲಿ (4–4–22) ವ್ಯಕ್ತಪಡಿಸಿ ದ್ದಾರೆ. ಅಂತೂ 'ಶ್ರುತಿಯು ಶ್ರುತಿಯಾದಮಾತ್ರದಿಂದ ಪ್ರಮಾಣವಲ್ಲ, ಅನುಭವಕ್ಕೆ ಹೊಂದಿಗೆಯಾದ್ದರಿಂದಲೇ ಪ್ರಮಾಣ' ಎಂಬುದು ಅವರ ಅಭಿಪ್ರಾಯ. ಹೀಗೆ ಭಾಷ್ಯವನ್ನು ಚೆನ್ನಾಗಿ ಅಭ್ಯಾಸಮಾಡಿದರೆ ಶಂಕರರ ಬಗ್ಗೆ ವ್ಯಕ್ತಪಟ್ಟಿರುವ ಭಿನ್ನಾಭಿಪ್ರಾಯಗಳು ಮರೆಯಾಗಿ ಅವರ ನಿಜವಾದ ಹೃದಯವನ್ನು ಕಂಡುಕೊಳ್ಳಲು ಅನುಕೂಲವಾಗುವದು.

ಇನ್ನು ಸಾಂಖ್ಯ, ಯೋಗ, ಸಮಾಧಿ – ಮುಂತಾದ ಶಬ್ದಗಳಿಗೆ ಭಾಷ್ಯದಲ್ಲಿ ಯಾವಯಾವ ಸಂದರ್ಭಗಳಲ್ಲಿ ಯಾವಯಾವ ಅರ್ಥಗಳು ಬಂದಿವೆಯೆಂಬುದನ್ನು ಗಮನಿಸಿದರೆ ಈಗ್ಗೆ ವೇದಾಂತೋಪಕೇಶಕರನೇಕರು ಭಾಷ್ಯವಿರುದ್ಧವಾದ ಗ್ರಹಿಕೆಗಳನ್ನಿಟ್ಟುಕೊಂಡು ಉಪದೇಶಮಾಡುವ ಅಂಶಗಳಾವುವೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಗೀತೆ, ಮಾಂಡೂಕ್ಯ,

ಸೂತ್ರಾದಿಭಾಷ್ಯಗಳಲ್ಲಿ ವೈದಿಕಸಾಂಖ್ಯ, ಯೋಗಗಳ ಪ್ರಕಾರಗಳನ್ನೂ ಸಮಾಧಿ ಶಬ್ದಕ್ಕೆ ಸಾಂಪ್ರದಾಯಿಕವ್ಯಾಖ್ಯೆಗಳನ್ನೂ ಆಚಾರ್ಯರು ತೋರಿಸಿರುವರಲ್ಲದೆ ದ್ವೈತಿಗಳೂ ಅವೈದಿಕರೂ ಆದ ಕಪಿಲಪತಂಜಲ ಪ್ರಣೀತಶಾಸ್ತ್ರಗಳ ಸಿದ್ಧಾಂತಗಳನ್ನು ಒಪ್ಪಿಲ್ಲವೆಂದೂ ಘೋಷಿಸಿದ್ದಾರೆ. ಹೀಗಿದ್ದರೂ ಅವುಗಳಲ್ಲಿಯೂ ಸಾರಭೂತವಾದ ವೇದಕ್ಕೆ ವಿರುದ್ಧವಲ್ಲದ ಅಂಶಗಳನ್ನು ಸ್ವೀಕರಿಸುವುದಾಗಿ ಹೇಳಿ ತಮ್ಮ ಗುಣಗ್ರಾಹಿಹೃದಯದ ಔದಾರ್ಯವನ್ನು ವ್ಯಕ್ತಪಡಿಸಿದ್ದಾರೆ. "ಯೇನ ತು ಅಂಶೇನ ನ ವಿರುಧ್ಯೇತೇ ತೇನ ಇಷ್ಟಮೇವ ಸಾಂಖ್ಯಯೋಗಸ್ಮೃತ್ಯೋಃ ಸಾವಕಾಶತ್ವಮ್" (ಸೂ.ಭಾ. 2–1–3) ಇತ್ಯಾದಿ ವಾಕ್ಯಗಳಲ್ಲಿ ಈ ಅಭಿಪ್ರಾಯವು ಸ್ಪಷ್ಟವಾಗಿದೆ.

## ಪರಿಹಾರೋಪಾಯಗಳು

ವೇದಾಂತ ಸಂಪ್ರದಾಯದಲ್ಲಿ ಬಂದಿರುವ ಜಾಡ್ಯಗಳೆಲ್ಲವೂ ಪರಿಹಾರವಾಗಿ ಮುಮುಕ್ಷುಗಳಿಗೆ ಪರಿಶುದ್ಧವಾದ ಅದ್ವೈತಜ್ಞಾನ ಹಾಗೂ ಸಾಧನಗಳು ಸುಲಭವಾಗಿ ದಕ್ಕುವಂತಾಗಬೇಕಾದರೆ ಈ ಕೆಳಗಿನ ಪರಿಹಾರೋಪಾಯಗಳನ್ನು ಅನುಸರಿಸಬೇಕಾದದ್ದು ಅತ್ಯವಶ್ಯ :

(1) 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಎಂಬಂತೆ ಮೊಟ್ಟಮೊದಲು ಸರ್ವಗ್ರಂಥಗಳನ್ನೂ ಸದ್ಯಕ್ಕೆ ಬದಿಗಿರಿಸಿ ಶ್ರೀಶಂಕರಭಗವತ್ಪಾದರವರ ಪ್ರಸ್ಥಾನತ್ರಯಭಾಷ್ಯಗಳನ್ನೇ ನೇರಾಗಿ, ಪೂರ್ಣವಾಗಿ ಅಭ್ಯಾಸಮಾಡುವ ಪದ್ಧತಿಯು ರೂಢಿಯಲ್ಲಿ ಬರಬೇಕು.

(2) ಭಾಷ್ಯಕಾರರ ಅಭಿಪ್ರಾಯಗಳನ್ನು ಭಾಷ್ಯಗಳ ವಾಕ್ಯದಿಂದಲೇ ಗ್ರಹಿಸಿ ಸಿದ್ಧಾಂತದ ಪರಮತಾತ್ಪರ್ಯವನ್ನೂ ಸಾಧನಗಳ ಸ್ಥಾನಮಾನವನ್ನೂ ಗ್ರಹಿಸಿಕೊಂಡಮೇಲೆಯೇ ಇತರ ವ್ಯಾಖ್ಯಾನಗಳನ್ನೂ ಪ್ರಕರಣಗ್ರಂಥಗಳನ್ನೂ ತುಲನಾತ್ಮಕದೃಷ್ಟಿಯಿಂದ ಅಭ್ಯಾಸಮಾಡಬೇಕು.

(3) ಇತರ ಮತೀಯರು ಖಂಡನೆಗಾಗಿ ಶಂಕರರದ್ದೆಂದು ಅನುವಾದ ಮಾಡಿಕೊಂಡಿರುವ ತತ್ತ್ವಗಳನ್ನು ನಂಬುವದಕ್ಕಿಂತ ಸಾಕ್ಷಾತ್ ಶಂಕರರ ಭಾಷ್ಯಾಭಿಪ್ರಾಯವನ್ನೇ ಅವಲಂಬಿಸಿ ತತ್ತ್ವವನ್ನು ಗೊತ್ತುಪಡಿಸುವ ದೃಷ್ಟಿಯನ್ನವಲಂಬಿಸಬೇಕು.

(4) ವ್ಯಾಖ್ಯಾನಕಾರರುಗಳು ಭಾಷ್ಯಾರ್ಥವನ್ನು ಬಗೆಬಗೆಯಾಗಿ ವಿವರಿಸುತ್ತಿರುವಾಗ ಅವರ ಅಭಿಪ್ರಾಯಗಳನ್ನು ಗ್ರಹಿಸುವ ಮೊದಲು ಭಾಷ್ಯಕಾರರ ಸಮ್ಮತಿಯು ಈ ಬಗ್ಗೆ ಇದೆಯೆ, ಇಲ್ಲವೆ? ಎಂಬುದನ್ನು

ನಿರ್ಧರಿಸಿಯೇ ಅವರುಗಳ ಮಾತಿಗೆ ಬೆಲೆಕೊಡಬೇಕಲ್ಲದೆ ಮೂಢನಂಬಿಕೆ ಯಿಂದ ಸಂಪ್ರದಾಯಶರಣರಾಗಿ ಹೇಳಿದ್ದನ್ನೆಲ್ಲಾ ಒಪ್ಪುವದನ್ನು ಕೈಬಿಡಬೇಕು.

(5) ಎಲ್ಲಕ್ಕೂ ಮುಖ್ಯವಾಗಿ ತತ್ತ್ವವು ಸಾರ್ವತ್ರಿಕಾನುಭವಾನು ಸಾರಿಯಾಗಿರುವದೆಂದು ಪದೇಪದೇ ಹೇಳುವ ಭಾಷ್ಯಕಾರರ ಉಪದೇಶವನ್ನು ಗಮನಿಸಿ ಅನುಭವಕ್ಕೆ ಹೊಂದುಗೆಯಾಗುವದನ್ನೇ ಸ್ವೀಕರಿಸಬೇಕಲ್ಲದೆ ಬರೀ ಶಾಸ್ತ್ರವಾಕ್ಯಗಳನ್ನು ವಾಕ್ಯವೆಂಬ ಒಂದೇ ಕಾರಣದಿಂದ ನಂಬುವದನ್ನು ಬಿಟ್ಟುಬಿಡಬೇಕು.

ಈ ಐದು ನಿಯಮಗಳನ್ನು ಇಟ್ಟುಕೊಂಡು ಭಾಷ್ಯಾಭ್ಯಾಸವನ್ನು ಮಾಡಲು ಸೊಂಟಕಟ್ಟುವದಕ್ಕೆ ಕೆಲವರಾದರೂ ಸಿದ್ಧರಾದರೆ ವೇದಾಂತಸಂಪ್ರದಾಯದಲ್ಲಿ ಸೇರಿಕೊಂಡಿರುವ ಮೂಢವಿಶ್ವಾಸಗಳನ್ನು ಕಿತ್ತುಹಾಕಲು ಕಾಲವು ಬಂದಂತೆಯೇ ಸರಿ. ಇವು ತತ್ತ್ವಾಭ್ಯಾಸಿಗಳು ಅನುಸರಿಸುವ ಕ್ರಮಗಳಾಗಿರುವಂತೆ ಜನಸಾಮಾನ್ಯರಿಗೆ ಶ್ರೀಶಂಕರಾಚಾರ್ಯರ ಉಪದೇಶಗಳು ಸುಲಭವಾಗಿ ದೊರಕುವದಕ್ಕಾಗಿ ಸಾಮಾಜಿಕವಾಗಿಯೂ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಆಚಾರ್ಯರ ಶಿಷ್ಯರೆಂದು ಹೇಳಿಕೊಳ್ಳುವವರು ಪ್ರಯತ್ನಿಸಬೇಕಾಗಿದೆ. ಉದಾಹರಣೆಗೆ (1) ಕರ್ನಾಟಕದಲ್ಲಿ ಅಲ್ಲಲ್ಲಿ ಶ್ರೀಶಂಕರಾಚಾರ್ಯರ ಜಯಂತ್ಯುತ್ಸವಗಳನ್ನು ವರ್ಷಕ್ಕೊಂದಾವರ್ತಿ ನೆರವೇರಿಸುವ ಸಂಸ್ಥೆಗಳು ಅನೇಕ ಊರುಗಳಲ್ಲಿವೆ. ಈ ಸಂಸ್ಥೆಗಳು ಕೆಲವು ಅನುಷ್ಠಾನಗಳು, ಹರಿಕಥೆ, ದಿಗ್ವಿಜಯಪುರಾಣ, ಪಾನಕಕೋಸಂಬರಿಯ ವಿತರಣೆ ಅಥವಾ ಊಟ– ಮುಂತಾದ ಬಾಹ್ಯಕಾರ್ಯಕ್ರಮಗಳಿಂದಲೇ ಕೃತಾರ್ಥರಾದೆವೆಂಬ ಭಾವನೆಯನ್ನು ಇಟ್ಟುಕೊಳ್ಳದೆ ಶ್ರೀಶಂಕರಭಗವತ್ಪಾದರ ಪ್ರಸ್ಥಾನತ್ರಯಭಾಷ್ಯವೇ ಅವರ ನಿಜವಾದ ಜೀವಂತಪ್ರತಿಮೆ ಎಂಬ ಭಾವನೆಯನ್ನು ಬೆಳೆಸಿಕೊಂಡು ಭಾಷ್ಯವಾಕ್ಯಗಳಿಂದಲೇ ಆರಿಸಿದ ಮುಖ್ಯ ಉಪದೇಶಗಳ ಸಾರವನ್ನು ಚಿಕ್ಕಚಿಕ್ಕ ಗ್ರಂಥಗಳಲ್ಲಿ ಪ್ರಕಟಿಸುವದು, ಭಾಷ್ಯಾಧ್ಯಯನಕ್ಕೆ ಪ್ರೋತ್ಸಾಹವನ್ನು ಕೊಡುವದು – ಮುಂತಾದವುಗಳ ಮೂಲಕ ಭಾಷ್ಯವು ಸಾಮಾನ್ಯ ಮುಮುಕ್ಷುಜನಗಳ ಹೃದಯಕ್ಕೆ ತಲುಪುವಂತೆ ಪ್ರಯತ್ನಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. (2) ಶ್ರೀಶಂಕರಾಚಾರ್ಯರಿಂದ ಸ್ಥಾಪಿತವಾದ ಪರಂಪರೆಯವರೆಂದು ಹೇಳಿ ಕೊಳ್ಳುವ ಅನೇಕ ಮಠಾಧಿಪತಿಗಳೂ ಸಹ ಭಾಷ್ಯಾಧ್ಯಯನಕ್ಕೆ ಪ್ರೋತ್ಸಾಹ ಹಾಗೂ ಜನಸಾಮಾನ್ಯರಿಗೆ ಭಾಷ್ಯದ ಉಪದೇಶಗಳು ಸಾಕ್ಷಾತ್ ಭಾಷ್ಯ ವಾಕ್ಯಗಳಿಂದಲೇ ಸುಲಭವಾಗಿ ದೇಶಭಾಷೆಗಳಲ್ಲಿ ಸಿಕ್ಕುವಂತೆ ಮಾಡುವದು –

ಹೀಗೆ ಮುಂದೆಬರಬೇಕು. ಅಂತೂ ಸರ್ವತೋಮುಖವಾಗಿ ಭಾಷ್ಯಗಳ ಅಭ್ಯಾಸ ಹಾಗೂ ಉಪದೇಶಗಳು ಪ್ರಚಾರಕ್ಕೆ ಬಂದರೆ ವೇದಾಂತದಲ್ಲಿ ಸೇರಿರುವ ತಪ್ಪು ಗ್ರಹಿಕೆಗಳು ತೊಲಗಲು ಅನುಕೂಲವಾಗುವದು.

## ಸಾಂಪ್ರದಾಯಿಕ ಪ್ರಕ್ರಿಯೆ

'ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಂಚಂ ಪ್ರಪಂಚ್ಯತೇ" ಎಂಬುದೇ ಸಾಂಪ್ರದಾಯಿಕಪ್ರಕ್ರಿಯೆ. ಇದರ ತಾತ್ಪರ್ಯವೇನೆಂದರೆ ಪರಮಾರ್ಥತತ್ತ್ವವು ಅದ್ವಯವಾಗಿರುತ್ತದೆ. ಆ ಪರಮಾರ್ಥದೃಷ್ಟಿಯಿಂದ ಇನ್ನೊಂದೆಂಬುದೇ ಇಲ್ಲದ್ದರಿಂದ ಹೇಳುವ, ಕೇಳುವ, ತಿಳಿಯುವ – ಮುಂತಾದ ಯಾವ ವ್ಯವಹಾರವೂ ಇಲ್ಲವೇಇಲ್ಲ. ಇದೇ ನಿಜವಾದ ವಸ್ತುಸ್ಥಿತಿಯು. ಆದರೆ ಈಗ ನಮ್ಮೆಲ್ಲರಿಗೂ ವಿಧವಿಧವಾಗಿ ಹರಡಿಕೊಂಡಿರುವ ದ್ವೈತಪ್ರಪಂಚವೂ ಅನೇಕ ಜೀವರುಗಳೂ ನಾನಾಬಗೆಯ ವ್ಯವಹಾರಗಳೂ ಸ್ಪಷ್ಟವಾಗಿ ಕಾಣುತ್ತಿವೆ. ಈ ದೃಷ್ಟಿಗೆ 'ವ್ಯಾವಹಾರಿಕದೃಷ್ಟಿ' ಎಂದು ಹೆಸರು. ವ್ಯಾವಹಾರಿಕದೃಷ್ಟಿಯಿಂದ ನೋಡಿದರೆ ಪರಮಾರ್ಥದೃಷ್ಟಿಯ ನಿರ್ಣಯವು ಅಸಮಂಜಸವಾಗಿಯೇ ಕಾಣುತ್ತದೆ. ಆದರೆ ಪರಮಾರ್ಥದೃಷ್ಟಿಯ ನಿರ್ಣಯವೇ ಪರಮಸತ್ಯವಾಗಿದೆ. ಉದಾಹರಣೆಗೆ ನಿತ್ಯವೂ ಸೂರ್ಯೋದಯ ಸೂರ್ಯಾಸ್ತಗಳಾಗುತ್ತಲಿದ್ದು ಸೂರ್ಯನು ಪೂರ್ವದಿಂದ ಪಶ್ಚಿಮಕ್ಕೆ ತಿರುಗುವದು ಸ್ಪಷ್ಟವಾಗಿ ಕಾಣುವದಲ್ಲದೆ ಪೃಥ್ವಿಯು ಸ್ಥಿರವಾಗಿರುವಂತೆಯೂ ಕಾಣುತ್ತದೆ. ಆದರೆ ವೈಜ್ಞಾನಿಕದೃಷ್ಟಿಯಿಂದ ನೋಡಿದಾಗ ಸೂರ್ಯನ ಸುತ್ತಲೂ ಪೃಥ್ವಿಯೇ ತಿರುಗುತ್ತಿದೆ ಎಂಬಿದು ಪರಮಾರ್ಥ. ಇದನ್ನು ತಿಳಿದವರೂ ಸಹ ಸೂರ್ಯೋದಯವಾಯಿತು, ಸೂರ್ಯಾಸ್ತವಾಯಿತು ಎಂದು ವ್ಯಾವಹಾರಿಕ ದೃಷ್ಟಿಯನ್ನವಲಂಬಿಸಿ ಮಾತನಾಡುವದುಂಟು. ಇದು ಹೇಗೋ ಹಾಗೆಯೇ ಅದ್ವಿತೀಯ ಆತ್ಮತತ್ತ್ವವೇ ಪರಮಾರ್ಥಸತ್ಯವು. ಮಿಕ್ಕದ್ದೆಲ್ಲ ವ್ಯಾವಹಾರಿಕ ದೃಷ್ಟಿಯಿಂದ ಕಲ್ಪಿಸಿದ್ದು. ಜನಸಾಮಾನ್ಯರು ಈ ವ್ಯವಹಾರಿಕದೃಷ್ಟಿಯನ್ನೇ ಅವಲಂಬಿಸಿ ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಇವರಿಗೆ ಪರಮಾರ್ಥದ ಅರಿವು ಬಂದರೆ ಈ ಕಲ್ಪಿತದೃಷ್ಟಿಯು ಹೋಗಿ ಸತ್ಯವನ್ನು ಮನಗಾಣುವರು. ಹೀಗೆ ಮನಗಾಣಿಸಲು ವೇದಾಂತಶಾಸ್ತ್ರದಲ್ಲಿ ಒಂದು ಯುಕ್ತಿಯನ್ನು ಅವಲಂಬಿಸಿದೆ. ಅದೇ ಅಧ್ಯಾರೋಪ ಮತ್ತು ಅಪವಾದಪ್ರಕ್ರಿಯೆ. ಲೋಕದಲ್ಲಿಯ ಸಾಮಾನ್ಯಜನರೂ ಇತರ ಶಾಸ್ತ್ರಜ್ಞರೂ ಪರಮಾರ್ಥದಲ್ಲಿ ಕಲ್ಪಿಸಿದ ವ್ಯಾವಹಾರಿಕವಾದ ಆರೋಪಗಳನ್ನು ನಿಜವಾಗಿರುವಂತೆ ಒಪ್ಪಿ ತತ್ತ್ವವನ್ನು ತಿಳಿಸಲಾರಂಭಿಸುವದೇ ಅಧ್ಯಾರೋಪವು. ತತ್ತ್ವವನ್ನು

ಮನಗಂಡಾಗ ಹಿಂದೆ ಉಪದೇಶಕ್ಕಾಗಿ ಇಟ್ಟುಕೊಂಡ ಅರೋಪವು ತನ್ನಷ್ಟಕ್ಕೆತಾನೇ ಇಲ್ಲವಾಗಿ ಕೇವಲ ಅದ್ವಯಾನುಭವವೇ ಉಳಿದಿರುತ್ತದೆ. ಆಗ ಹಿಂದೆ ಆರೋಪಿಸಿದ್ದನ್ನು ಅಲ್ಲಗಳೆಯುವದೇ – ತೊಲಗಿಸುವದೇ – ಅಪವಾದವು. ಇದು ವೇದಾಂತಶಾಸ್ತ್ರದ ಒಂದು ವಿಶಿಷ್ಟಬೋಧನ ಶೈಲಿಯಾಗಿದೆ. ಲೋಕವ್ಯವಹಾರದಲ್ಲೂ ಈ ಪದ್ಧತಿಯು ಬಳಕೆಯಲ್ಲಿದೆ ಎಂಬುದನ್ನು ಆಚಾರ್ಯರು ಬೃಹದಾರಣ್ಯಕ ೪-೪-೨೫ರ ಭಾಷ್ಯದಲ್ಲಿ ರೇಖೆಗಳಿಂದ ಅಂಕಿಅಕ್ಷರಗಳ ಜ್ಞಾನಮಾಡಿಕೊಡುವ ಒಂದು ದೃಷ್ಟಾಂತದ ಮೂಲಕ ತಿಳಿಸಿದ್ದಾರೆ. ಒಟ್ಟಿನಲ್ಲಿ ಸತ್ಯವಾಗಿರುವ ಅದ್ವಯತತ್ತ್ವದ ಅನುಭವದಲ್ಲಿ ಜಿಜ್ಞಾಸುವನ್ನು ನೆಲೆನಿಲ್ಲಿಸಿ ಕಲ್ಪಿತವಾದ ದ್ವೈತವನ್ನು ಇಲ್ಲವಾಗಿಸುವದೇ ವೇದಾಂತಪ್ರಕ್ರಿಯೆಯ ಸಾರವಾಗಿದೆ. ಇದೇ ಸಾಂಪ್ರದಾಯಿಕಬೋಧನೆಯ ಪದ್ಧತಿಯು. ಆಚಾರ್ಯಶಂಕರರು ತಮ್ಮ ಹಿಂದಿನ ಸಾಂಪ್ರದಾಯಿಕರ ಉಕ್ತಿಗಳೊಂದಿಗೆ ಇದನ್ನು ಭಾಷ್ಯಗಳಲ್ಲೆಲ್ಲ ವಿವರಿಸುತ್ತಲೇ ಹೋಗಿದ್ದಾರೆ.

## ಅನುಭವ

ಇನ್ನು ಬರೀ ಬುದ್ಧಿಯ ಚಾತುರ್ಯದಿಂದ ಪೂರ್ವಾಪರ ಸಂದರ್ಭಗಳಿಗೆ ಹೊಂದುವಂತೆ ವಿಚಾರಗಳನ್ನು ಜೋಡಿಸಿ ಇದೇ ಪರಮಾರ್ಥ ಎಂದು ನಿರೂಪಿಸುವ ದರ್ಶನಗಳು ನಮ್ಮ ದೇಶ ಹಾಗೂ ಪರದೇಶಗಳಲ್ಲಿ ಎಷ್ಟೋ ಇವೆ. ಆದರೆ ಈ ರೀತಿ ಕಂಡುಹಿಡಿದ ದರ್ಶನಗಳಲ್ಲಿ ಇದೇ ಕೊನೆಯ ತತ್ತ್ವ ಎಂದು ಹೇಳುವ ಎದೆಗಾರಿಕೆ ಯಾರಿಗೂ ಇಲ್ಲ. ಇಂದು ಹೇಳಿದ ಒಂದು ತತ್ತ್ವದರ್ಶನವನ್ನು ನಾಳೆ ಇನ್ನೂ ಹೆಚ್ಚಿನ ಬುದ್ಧಿ ಚಾತುರ್ಯದಿಂದ ಅಲ್ಲಗಳೆಯುವ ಸಂಭವವಿದ್ದೇಇದೆ. ಇನ್ನು ಕೇವಲ ಶ್ರದ್ಧೆಯಿಂದಲೂ ಧರ್ಮಗ್ರಂಥ, ಗುರುಗಳು, ಯೋಗಸಿದ್ಧಿಗಳು – ಮುಂತಾದವುಗಳ ಆಧಾರದಮೇಲೆಯೂ ಒಪ್ಪಿಕೊಂಡಿರುವ ತತ್ತ್ವಗಳು ಸಾರ್ವತ್ರಿಕತತ್ತ್ವಗಳೆನ್ನಲು ಸಾಧ್ಯವಾಗುವದಿಲ್ಲ. ಹಾಗಾದರೆ ತತ್ತ್ವದ ಒರೆಗಲ್ಲು ಯಾವದು? ಎಂಬ ಪ್ರಶ್ನೆಗೆ ಶ್ರೀಶಂಕರಾಚಾರ್ಯರ ಉತ್ತರವೇನೆಂದರೆ : 'ಅಪೌರುಷೇಯವಾದ ವೇದವು ತಿಳಿಸಿಕೊಡುವ ಅದ್ವಯಾತ್ಮತತ್ತ್ವವು ಇಲ್ಲಿಯೇ ಈಗಲೇ ನಮ್ಮ ಅನುಭವಕ್ಕೆ ಬಂದುಬಿಡುತ್ತದೆ. ಈ ತತ್ತ್ವವನ್ನು ಸಾರ್ವತ್ರಿಕವಾದ ಪರಿಪೂರ್ಣವಾದ ಅನುಭವವನ್ನೇ ಪ್ರಮಾಣವಾಗಿಟ್ಟು ಕೊಂಡು ಶ್ರುತಿಯೂ ಬ್ರಹ್ಮನಿಷ್ಠರೂ ಬೋಧಿಸುವರು. ಈ ಅನುಭವವು ನಮ್ಮೆಲ್ಲರ ಸ್ವರೂಪವೇ ಆಗಿದ್ದು ಕಾಲ ದೇಶಕಾರ್ಯಕಾರಣಭಾವಗಳನ್ನೂ

ಇಂದ್ರಿಯಮನಸ್ಸು ಮುಂತಾದವುಗಳನ್ನೂ ಮೀರಿದ, ಯಾವ ಅವಸ್ಥೆಗಳಿಗೂ ಒಳಪಡದ, ಎಲ್ಲವನ್ನೂ ವ್ಯಾಪಿಸಿದ ಅನುಭವವಾಗಿದೆ. ಇದು ಉಪನಿಷತ್ತುಗಳಲ್ಲದೆ ಬೇರೆ ಪ್ರಮಾಣದಿಂದ ತಿಳಿದುಬರುವದೇ ಇಲ್ಲ. ಇದನ್ನೇ ಸಾಕ್ಷ್ಯನುಭವ ಎಂದು ವೇದಾಂತಿಗಳು ಹೇಳುತ್ತಾರೆ. ಎಲ್ಲರಿಗೂ ಆತ್ಮನಾಗಿದ್ದರೂ ಇದರ ಕಡೆಗೆ ಗಮನವಿಲ್ಲದ್ದರಿಂದ ಅದು ಇದ್ದೂ ಇಲ್ಲವಾಗಿದೆ. ಹಾಗೂ ಅದನ್ನರಿಯದಿರುವಾಗ ಅನಾತ್ಮಗಳ ಕಡೆಗೇ ಗಮನವಿರುವದರಿಂದ ಈ ಅನಾತ್ಮಗಳೇ ನಿಜವಾಗಿವೆ ಎಂಬ ಭ್ರಾಂತಿಗೂ ಜನರು ಪಕ್ಕಾಗಿದ್ದಾರೆ. ಶಾಸ್ತ್ರ ಹಾಗೂ ಸದ್ಗುರುಗಳು ಈ ಸಾಕ್ಷ್ಯನುಭವದ ಕಡೆಗೆ ಮುಮುಕ್ಷುವಿನ ಗಮನವನ್ನು ಸೆಳೆದು ಹಿಂದಿರುಗಿ ನೋಡುವ ಕಲೆಯನ್ನು ಬೋಧಿಸಿದಾಗ ಆ ಅನುಭವಸ್ವರೂಪನಾಗಿಯೇ ಮುಮುಕ್ಷುವು ನೆಲೆನಿಲ್ಲುವನು. ಆದ್ದರಿಂದ ಅನುಭವವೇ ಪ್ರಮಾಣ. ಅನುಭವವೇ ಪ್ರಮೇಯ, ಅನುಭವವೇ ಪ್ರಮಿತಿಯಾಗಿ ಕೊನೆಗಾಣುವದು' – ಎಂದಿರುತ್ತಾರೆ. ಈ ವೇದಾಂತ ಬೋಧನೆಯ ವಿಚಿತ್ರಕ್ರಮವನ್ನು ಸಾಂಪ್ರದಾಯಿಕರಿಂದಲೇ ಅರಿಯಬೇಕಲ್ಲದೆ ಬರಿಯ ಬುದ್ಧಿಬಲ, ಅನುಮಾನ, ತರ್ಕಕುಶಲತೆಗಳಿಂದ ಅರಿಯಲಾಗದು. ಬೋಧದ ಕೊನೆಯಲ್ಲಿ ಅನುಭವರೂಪನಾಗಿ ನಿಂತಾಗ ಶಾಸ್ತ್ರ, ಗುರು, ಜಿಜ್ಞಾಸು, ಅವನಿಗಾಗುವ ಜ್ಞಾನ, ಮೊದಲಿದ್ದ ಆಜ್ಞಾನ – ಮುಂತಾದದ್ದೆಲ್ಲವೂ ಕೇವಲ ಆತ್ಮನಾಗಿರುತ್ತದೆ. ಇದೇ ಅಧ್ಯಾರೋಪಾಪವಾದಪ್ರಕ್ರಿಯೆ. ಅಂತೂ ಬುದ್ಧಿಕ್ಷೇತ್ರಕ್ಕೂ ಹಿಂದಿರುವ ಅನುಭವವನ್ನವಲಂಬಿಸಿ ಪರ್ಯವಸಾನಗೊಳ್ಳುವ ಈ ವೇದಾಂತಶಾಸ್ತ್ರದ ಪರಮಸಿದ್ಧಾಂತಕ್ಕೆ ಬುದ್ಧಿಕ್ಷೇತ್ರದ ಈಚೆಗಿರುವ ಅನುಮಾನತರ್ಕಗಳ ಬಾಧೆ ಎಳ್ಳಷ್ಟೂ ಇರುವದಿಲ್ಲ. ಇದು ತರ್ಕಾತೀತ, ಅನುಭವವೇದ್ಯ, ಅನುಭವಪರ್ಯವಸಾಯಿಯಾದ ಶಾಸ್ತ್ರವಾಗಿದೆ. ಈ ಬಗ್ಗೆ ಈ ಗ್ರಂಥದ ಎರಡನೆಯ ಅಧ್ಯಾಯವನ್ನು ನೋಡಿರಿ.

## ತರ್ಕ ಅಥವಾ ಅನುಮಾನ

ಶ್ರೀಶಂಕರರು ಸೂತ್ರಭಾಷ್ಯದಲ್ಲಿ 'ಜನ್ಮಾದ್ಯಸ್ಯ ಯತಃ' ಎಂಬ ಸೂತ್ರಕ್ಕೆ ವ್ಯಾಖ್ಯಾನಮಾಡುವ ಸಂದರ್ಭದಲ್ಲಿ "ಈ ಸೂತ್ರವೂ ಸಹ ಅನುಮಾನದಿಂದ ಬ್ರಹ್ಮವನ್ನು ತೋರಿಸಲು ಬಂದಿದೆಯಲ್ಲವೆ? ಎಂದು ಕೇಳಿದ ಪೂರ್ವಪಕ್ಷಿಗೆ ಉತ್ತರವನ್ನು ಕೊಡುವಾಗ "ಇಲ್ಲ, ವೇದಾಂತವಾಕ್ಯಗಳೆಂಬ ಕುಸುಮಗಳನ್ನು ಹೆಣೆಯುವದಕ್ಕಾಗಿ ಈ ಸೂತ್ರಗಳು ಬಂದಿವೆ. ವೇದಾಂತವಾಕ್ಯಗಳನ್ನು ಕುರಿತೇ ಇಲ್ಲಿ ವಿಚಾರಿಸಲಾಗುತ್ತದೆ. ಆ ರೀತಿಯ ವಿಚಾರದ ಕೊನೆಯಲ್ಲಿ

ಅನುಭವಸ್ವರೂಪವಾದ ಬ್ರಹ್ಮತತ್ತ್ವದಲ್ಲಿ ಪರ್ಯವಸಾನಹೊಂದುವದೆಂಬ (ಕೊನೆಗಾಣುವದೆಂಬ) ಫಲವು ಬರುತ್ತದೆ. ಬರೀ ಅನುಮಾನತರ್ಕಗಳಿಂದ ಈ ಫಲವು ಬರಲಾರದು" ಎಂದು ಹೇಳಿ ಮುಂದಿನ ವಾಕ್ಯದಲ್ಲಿಯೇ "ವೇದಾಂತವಾಕ್ಯಗಳ ವಿಚಾರವೇ ಇಲ್ಲಿ ಪ್ರಾಧಾನ್ಯವಾಗಿದ್ದರೂ ಸಹ ಆ ವಿಚಾರಕ್ಕಾಗಿಯೂ ವಿಚಾರದಿಂದ ಗ್ರಹಿಸಿದ ಅರ್ಥವು ದೃಢವಾಗುವದ ಕ್ಕಾಗಿಯೂ ವೇದಾಂತವಾಕ್ಯಗಳ ಅಭಿಪ್ರಾಯಕ್ಕೆ ವಿರೋಧವಲ್ಲದ ಅನುಮಾನವೂ (ತರ್ಕವೂ) ಪ್ರಮಾಣವಾಗುವದೆಂಬುದನ್ನೇನೂ ಅಲ್ಲಗಳೆಯ ಲಾಗುವದಿಲ್ಲ" ಎಂದಿದ್ದಾರೆ. ಮತ್ತೆ ಇದೇ ಸೂತ್ರದಲ್ಲಿ ವೇದಾಂತ ವಾಕ್ಯವಿಚಾರವು ಅನುಭವದಲ್ಲಿಯೇ ಪರ್ಯವಸಾನವಾಗುವದೆಂಬುದನ್ನು ಪ್ರತಿವಾದಿಸುತ್ತ ಕೊನೆಯಲ್ಲಿ "ಆದ್ದರಿಂದ ಈ ಜನ್ಮಾದಿಸೂತ್ರವು ಅನುಮಾನವನ್ನು ಹೇಳಲು ಬಂದಿಲ್ಲ. ಮತ್ತೇನೆಂದರೆ ವೇದಾಂತವಾಕ್ಯಗಳ ಅರ್ಥವನ್ನು ತೋರಿಸಿ ಕೊಡುವದಕ್ಕೇ ಬಂದಿದೆ" ಎಂದು ವಿಷಯವನ್ನು ಉಪಸಂಹಾರಮಾಡಿದ್ದಾರೆ. ಇನ್ನು ವೇದಾಂತವಾಕ್ಯಗಳಿಗೆ ಅವಿರೋಧಿಯಾದ ತರ್ಕಗಳ ಬಗೆಯನ್ನು ಎಂದರೆ ಅನುಭವಾಂಗತರ್ಕದ ಬಗೆಯನ್ನು ೨-೧-೬ರಲ್ಲಿ ಭಾಷ್ಯಕರರು ತಾವೇ ಬಾಯಿಬಿಟ್ಟು ಹೇಳಿದ್ದಾರೆ.

ಒಟ್ಟಿನಲ್ಲಿ ವೇದಾಂತಕ್ಕೆ ಬೇಕಾದ ಅನುಮಾನ ಅಥವಾ ತರ್ಕ ಎಂಬುದು ವೈಶೇಷಿಕರು ಮತ್ತು ನೈಯಾಯಿಕರು ಹೇಳುವ ಪ್ರಮಾಣತರ್ಕವಾಗಲಿ, ಸಾಂಖ್ಯಾದಿಗಳ ಬೌದ್ಧಿಕ ಅನುಮಾನವಾಗಲಿ ಅಲ್ಲ. ಸಾಕ್ಷ್ಯನುಭವದಲ್ಲಿ ನೆಲೆನಿಲ್ಲಿಸಲು ಶ್ರುತಿಯೂ ಬ್ರಹ್ಮನಿಷ್ಠರೂ ಬೋಧಿಸುವ ಅನುಭವಸಮ್ಮತವಾದ ತರ್ಕಗಳೇ 'ಅನುಮಾನಗಳು' ಎಂಬ ಶಬ್ದಕ್ಕೆ ಅರ್ಥ. ಮುಖ್ಯವಾಗಿ ಆಚಾರ್ಯರು ಅನುಮಾನ ಎಂಬ ಪದವನ್ನು 'ಶ್ರುತ್ಯುಕ್ತಅನುಭವಾಂಗವಾದ ತರ್ಕ' ಎಂಬರ್ಥದ ಪಾರಿಭಾಷಿಕಶಬ್ದವಾಗಿ ಉಪಯೋಗಿಸಿದ್ದಾರೆಂಬುದನ್ನು ಲಕ್ಷಿಸಬೇಕು. ಇದನ್ನು ಸರಿಯಾಗಿ ತಿಳಿಯದಿದ್ದುದರಿಂದಲೇ ಈಚೆಗೆ ವೇದಾಂತದಲ್ಲಿ ಬೌದ್ಧಿಕತರ್ಕಗಳ ಪ್ರವೇಶವಾಗಿ ತರ್ಕಶಾಸ್ತ್ರವನ್ನರಿಯದೆ ವೇದಾಂತವೇ ತಿಳಿಯಲಾರದೆಂಬ ಭಾವನೆಯು ಬೆಳೆದು ಭಾಷ್ಯವಾಕ್ಯಗಳಲ್ಲಿರುವ ಅನುಭವಪರ್ಯವಸಾನವಾದ ಬೋಧೆಯು ಮುಮುಕ್ಷುಗಳ ಪಾಲಿಗೆ ದೊರೆಯದಾಯಿತು. ಈ ಬಗ್ಗೆ ಈ ಗ್ರಂಥದ ಆರನೆಯ ಅಧ್ಯಾಯವನ್ನು ಚೆನ್ನಾಗಿ ನೋಡಿದರೆ ತಿಳಿಯುತ್ತದೆ. ಈ ಬೌದ್ಧಿಕತರ್ಕದ ಹಾವಳಿಯಿಂದ ಸಾಂಪ್ರದಾಯಿಕವಾದ ಅಧ್ಯಾರೋಪಾಪವಾದ ಪ್ರಕ್ರಿಯೆಯೇ ಕೈಬಿಟ್ಟು ಹೋಗಿ ಸರ್ವವನ್ನೂ ವ್ಯಾವಹಾರಿಕದೃಷ್ಟಿಯಿಂದಲೇ

ನೋಡುವದಕ್ಕೆ ಆರಂಭವಾಗಿ ಶ್ರೀಶಂಕರಾಚಾರ್ಯರ ಆಶಯಕ್ಕೆ ವಿರುದ್ಧವಾದ ಪ್ರಕ್ರಿಯೆಗಳು ಪ್ರಚಾರದಲ್ಲಿ ಬಂದವು. ಈ ಬಗ್ಗೆಯೂ ಕೆಲವು ಮಾತುಗಳನ್ನು ಇಲ್ಲಿ ಹೇಳಬೇಕಾಗಿದೆ.

## ವಿದ್ಯಾವಿದ್ಯೆ

ಲೋಕದಲ್ಲಿ ಜನಗಳಿಗೆ ಸ್ವಭಾವಸಿದ್ಧವಾಗಿ ವಸ್ತುಗಳ ಬಗ್ಗೆ ಅರಿಯದಿರುವದು, ತಪ್ಪಾಗಿ ತಿಳಿಯುವದು, ಸಂಶಯಪಡುವದು – ಎಂಬ ಅವಿದ್ಯೆಯು ಇರುತ್ತದೆ. ಪ್ರಯತ್ನದಿಂದ ಆಯಾ ವಸ್ತುವಿನ ಜ್ಞಾನಮಾಡಿಕೊಂಡಾಗ ಮೊದಲಿದ್ದ ಮೂರೂ ಹೊರಟುಹೋಗಿರುತ್ತವೆ. ಇದು ಲೋಕಾನುಭವವು. ಇದನ್ನು ಒಪ್ಪಿಕೊಂಡೇ ಆತ್ಮಸ್ವರೂಪವನ್ನು ಬೋಧಿಸುವ ಶ್ರುತಿ ಹಾಗೂ ಬ್ರಹ್ಮನಿಷ್ಠರು "ಅದ್ವಯಾತ್ಮತತ್ತ್ವವನ್ನು ಅರಿಯದ, ಅದನ್ನು ದೇಹಾದಿಗಳೆಂದು ತಪ್ಪಾಗಿ ಭಾವಿಸಿದ, ಆಬಗ್ಗೆ ಸಂಶಯಪಡುವ ರೂಪದ ಅವಿದ್ಯೆಯು ಬುದ್ಧಿಗೆ ಸ್ವಾಭಾವಿಕವಾಗಿದೆ" ಎಂದು ಆರೋಪಿಸಿ ಅದ್ವಯಾತ್ಮಜ್ಞಾನದಿಂದ ಇದು ತೊಲಗುವದೆಂದೂ ಹೇಳಿ, ಅನಂತರ 'ಅದ್ವಯಾತ್ಮನಲ್ಲಿ ಜ್ಞಾನಾಜ್ಞಾನವ್ಯವಹಾರವಿಲ್ಲ' ಎಂದು ಸುಮ್ಮನಾದಾಗ ಮುಮುಕ್ಷುವು ಕೇವಲ ಅದ್ವಯತತ್ತ್ವನಾಗಿಯೇ ಉಳಿದಿರುತ್ತಾನೆ. ಇಲ್ಲಿಗೆ ಮೊದಲಿನ ಆರೋಪದ ಅಪವಾದವು ಪೂರ್ಣವಾದಂತಾಯಿತು. ಇದು ಭಾಷ್ಯಕಾರರ ನಿಜವಾದ ಆಶಯವು. "ಉಪದೇಶಾದಯಂ ವಾದೋ ಜ್ಞಾತೇ ದ್ವೈತಂ ನ ವಿದ್ಯತೇ" (ಮಾಂ. ಕಾ. ೧–೧೮) ಎಂಬುದೇ ಕೊನೆಯ ಮಾತು. ಸಂಪ್ರದಾಯವು ಹೀಗಿದ್ದರೂ "ಆತ್ಮನಲ್ಲಿ ಅವಿದ್ಯೆ ಇದೆ, ಆತ್ಮನನ್ನಾಶ್ರಯಿಸಿದೆ, ಅದಕ್ಕೆ ಆತ್ಮನೇ ವಿಷಯ, ಅದು ಆತ್ಮನನ್ನಾವರಿಸಿದೆ. ಭಾವರೂಪವಾಗಿದೆ. ಆತ್ಮನ ಶಕ್ತಿರೂಪವಾದ ಅದು ಒಂದಾಗಿದ್ದರೂ ಅದರ ಅಂಶಗಳು ಅನೇಕ, ಅದು ಅನಿರ್ವಚನೀಯ, ಅದು ಅವಸ್ಥಾತ್ರಯದಲ್ಲೂ ಉಂಟು, ಜ್ಞಾನದಿಂದ ಅದು ತೊಲಗುವದಾದರೂ ಕಿಂಚಿತ್ ಶೇಷವು ಉಳಿಯುವದು. ದೇಹಪಾತಾನಂತರವೇ ಪೂರ್ತಿ ಹೋಗುವದು" ಇತ್ಯಾದಿ ಅಭಿಪ್ರಾಯಗಳು ಈಗ್ಗೆ ಬೋಧಕರಲ್ಲಿ ಸೇರಿಕೊಂಡಿರುವದರ ಪರಿಣಾಮವಾಗಿ ಸಾಂಪ್ರದಾಯಿಕ ವಾದ ಅಧ್ಯಾರೋಪಾಪವಾದ ಪ್ರಕ್ರಿಯೆಯೇ ಹೊರಟುಹೋಗಿರುತ್ತದೆ. ಭಾಷ್ಯಕಾರರ ವಾಕ್ಯಗಳನ್ನೇ ಗಮನಿಸಿ ನೋಡಿದಾಗ ಈ ಜೊಳ್ಳುವಾದಗಳ ಬೂಟಾಟಿಕೆಯು ಬಯಲಾಗಿ ನಿಜವಾದ ಶಾಂಕರಪ್ರಕ್ರಿಯೆಯು ಹೊಳೆಯುವದು. ಇದರಂತೆಯೇ ಮಾಯೆಯ ಬಗೆಗೂ ತಿಳಿಯಬೇಕಾದದ್ದಿದೆ.

## ಮಾಯೆ

ನಮಗೆ ವಸ್ತುವಿನ ಸರಿಯಾದ ಜ್ಞಾನವಿಲ್ಲದಿರುವಾಗ ಅದರ ಬಗ್ಗೆ ಅನ್ಯಥಾಕಲ್ಪನೆಗಳನ್ನು ಮಾಡಿಕೊಳ್ಳುತ್ತೇವೆ. ಆಗ ಆ ವಸ್ತುವು ತಾನಿರುವಂತೆ ತೋರುವದರ ಬದಲು ಬೇರೆ ಬಗೆಯಾಗಿ ತೋರಲಾರಂಭಿಸುತ್ತದೆ. ಈ ಬಗೆಯ ಹುಸಿತೋರಿಕೆಗೆ 'ಮಾಯೆ' ಎಂದು ಹೆಸರು. ಈ ತೋರಿಕೆಯು ವಸ್ತುವನ್ನುಳಿದು ಸ್ವತಂತ್ರವಾಗಿರುವದಿಲ್ಲ. ಹಾಗೂ ವಸ್ತುವಿನ ನೈಜಸ್ವಭಾವವೂ ಅಲ್ಲ, ಎಂದರೆ ಸ್ವರೂಪವಲ್ಲ. ಹೀಗೆ ತೋರುವ ದೃಷ್ಟಿಯಲ್ಲಿ ಇದು ಅನಿರ್ವಚನೀಯವಾಗಿದೆ. ಇದನ್ನೇ 'ತತ್ತ್ವಾನ್ಯತ್ವಾಭ್ಯಾಮನಿರ್ವಚನೀಯಮ್' ಎಂಬ ಮಾತಿನಿಂದ ಆಚಾರ್ಯರು ಸೂತ್ರಭಾಷ್ಯದಲ್ಲಿ ವರ್ಣಿಸಿದ್ದಾರೆ. ಈ ಹುಸಿತೋರಿಕೆಯು ಒಮ್ಮೆ ತೋರುತ್ತಲೂ ಮತ್ತೆ ಅಡಗುತ್ತಲೂ, ಅಡಗಿದಾಗ ಬೀಜರೂಪದಿಂದಿರುವಂತೆಯೂ ತೋರಿದಾಗ ವ್ಯಕ್ತವಾದಂತೆಯೂ ಭಾಸವಾಗುವದು. ಇದನ್ನೇ 'ವ್ಯಕ್ತಾವ್ಯಕ್ತ, ವ್ಯಾಕೃತಾವ್ಯಾಕೃತ' ಎಂದು ಭಾಷ್ಯಗಳಲ್ಲಿ ವರ್ಣಿಸಿದ್ದಾರೆ. ಒಟ್ಟಿನಲ್ಲಿ ಈ ವ್ಯಾಕೃತಾವ್ಯಾಕೃತವು ಆತ್ಮವಸ್ತುವಿನಲ್ಲಿ ಇರುವಂತೆ ತೋರಲು ಆತ್ಮವಸ್ತುವನ್ನರಿಯದ, ಅದನ್ನೇ ವಿಪರೀತವಾಗಿ ಕಲ್ಪಿಸಿದ ಅವಿದ್ಯೆಯೇ ಹೊಣೆಯೇ ಹೊರತು ಬೇರಾವದೂ ಹೊಣೆಯಲ್ಲ. ಹೀಗೆ ಅವಿದ್ಯೆಯಿಂದ ಕಲ್ಪಿಸಿದ ಈ ಹುಸಿತೋರಿಕೆಯಿಂದ ಆತ್ಮವಸ್ತುವಿನಲ್ಲೇನೂ ಹೆಚ್ಚು ಕಡಿಮೆಯಾಗುವದಿಲ್ಲ.

ಅದ್ವಯವಾದ ಪರಮಾರ್ಥತತ್ತ್ವವನ್ನರಿಯದಿರುವಾಗ ಆ ತತ್ತ್ವವೇ ನಾಮರೂಪಾತ್ಮಕವಾದ ವ್ಯಾಕೃತಾವ್ಯಾಕೃತಜಗತ್ತಾಗಿ ತೋರುತ್ತದೆಯಷ್ಟೆ. ಅವಿದ್ಯೆಯಿಂದ ಕಲ್ಪಿತವಾದ ಈ ಹುಸಿತೋರಿಕೆಯೇ ಮಾಯೆಯು. ಪರಮಾರ್ಥವಸ್ತುಜ್ಞಾನದಿಂದ ಅವಿದ್ಯೆಯು ತೊಲಗಲು ಅದರಿಂದ ಕಲ್ಪಿತವಾದ ಮಾಯೆಯೂ ತಾನಾಗಿಯೇ ತೊಲಗುತ್ತದೆ. ಅಂದರೆ ಜ್ಞಾನಸಮಕಾಲದಲ್ಲಿಯೇ ಅದ್ವಯಾತ್ಮನೇ ಪರಮಾರ್ಥವು, ವ್ಯಕ್ತಾವ್ಯಕ್ತವಾದ ಪ್ರಪಂಚವೆಂಬುದು ನಿಜವಲ್ಲ – ಎಂಬ ಅನುಭವದಲ್ಲಿ ನಿಲ್ಲುತ್ತೇವೆ. ಬೃಹದಾರಣ್ಯಕವೇ ಮೊದಲಾದ ಭಾಷ್ಯಗಳಲ್ಲಿ ಈ ಅಭಿಪ್ರಾಯವು ಸ್ಫುಟವಾಗಿ ವರ್ಣಿಸಲ್ಪಟ್ಟಿದೆ.

ಹೀಗೆ ಅವ್ಯಾಕೃತ ಮಾಯೆ, ಮೂಲಪ್ರಕೃತಿ, ಈಶ್ವರನ ಶಕ್ತಿ – ಮುಂತಾದ ಹೆಸರಿನ ತತ್ತ್ವವು ಅವಿದ್ಯೆಯಿಂದ ಕಲ್ಪಿಸಿದ್ದು, ಹಾಗೂ ಇದಕ್ಕೂ ಆಧಾರವಾದ ಅದ್ವಯಾತ್ಮತತ್ತ್ವವನ್ನು ತಿಳಿಸಲು ಅಧ್ಯಾರೋಪದೃಷ್ಟಿಯಿಂದ, ವ್ಯಾವಹಾರಿಕದೃಷ್ಟಿಯಿಂದ ಕೃತಪ್ರಣಾಶ – ಅಕೃತಾಭ್ಯಾಗಮಾದಿದೋಷಗಳು ಬಾರದಂತೆ – ಶಾಸ್ತ್ರವೂ ಸದ್ಗುರುಗಳೂ ಬೋಧನಸೌಕರ್ಯಕ್ಕಾಗಿ

ಒಪ್ಪಿಕೊಂಡದ್ದು ಎಂಬಿದು ನಿಜವಾದ ಶಾಂಕರಪ್ರಕ್ರಿಯೆಯು. ಆದರೆ ಈ ಅವ್ಯಾಕೃತಪ್ರಕೃತಿಯು ಸ್ವಾಭಾವಿಕವಾದ ಅವಿದ್ಯೆಗೆ ಉಪಾದಾನಕಾರಣವಾಗಿ ಬ್ರಹ್ಮವನ್ನಾವರಿಸಿರುವದಾಗಿ ಹೇಳುವ ಅಸಾಂಪ್ರದಾಯಿಕವಾದ ಕಲ್ಪನೆಯು ಈಗ್ಗೆ ಹರಡಿಕೊಂಡುಬಿಟ್ಟಿರುವದರಿಂದ ಭಾಷ್ಯಕಾರರ ಮಾತಿನಕಡೆಗೆ ಲಕ್ಷ್ಯವಿಲ್ಲವಾಗಿದೆ.

## ಈಶ್ವರ

ಅದ್ವಯವಾದ ಪರಮಾರ್ಥತತ್ತ್ವದಲ್ಲಿ ಈಶ, ಈಶಿತವ್ಯ, ಈಶಿತೃತ್ವ – ಎಂಬ ಭೇದವು ಇರುವದಕ್ಕೆ ಸಾಧ್ಯವೇ ಇಲ್ಲ. ಆದರೂ ವ್ಯಾವಹಾರಿಕದೃಷ್ಟಿಯ ಅಪೇಕ್ಷೆಯಿಂದ ಮೇಲೆ ವಿವರಿಸಿದ ವ್ಯಾಕೃತಾವ್ಯಾಕೃತವಾದ ಸರ್ವವ್ಯವಹಾರ ಕ್ಕೂ ಈ ಅದ್ವಯಾತ್ಮತತ್ತ್ವವೇ ಆಧಾರವಾಗಿರುವದೆಂಬ ಕಾರಣದಿಂದ ಈ ಅದ್ವಯತತ್ತ್ವದಲ್ಲಿ ಈಶ್ವರತ್ವವು ಕಲ್ಪಿಸಲ್ಪಟ್ಟಿದೆ. ಆಗ ಈ ತತ್ತ್ವವು ಸರ್ವಜ್ಞಸರ್ವೇಶ – ಮುಂತಾದ ಹೆಸರಿನಿಂದ ಕರೆಯಲ್ಪಡುತ್ತದೆ. ಆದರೆ ಸ್ವಾಭಾವಿಕವಾದ ಅವಿದ್ಯೆಯಿಂದ ಕಲ್ಪಿಸಲ್ಪಟ್ಟ 'ಸರ್ವ' ಎಂಬ ಸಂಸಾರವು ಬ್ರಹ್ಮವಿದ್ಯೆಯಿಂದ ತೊಲಗಿಹೋದಾಗ ಈ ಅದ್ವಯನಲ್ಲಿ ಬೋಧಸೌಕರ್ಯಕ್ಕಾಗಿ ಆರೋಪಿಸಲ್ಪಟ್ಟ ಈಶ್ವರತ್ವವೂ ತೊಲಗಿಹೋಗಿ ಕೇವಲ ಅದ್ವಯಾತ್ಮಸ್ವರೂಪವೇ ಉಳಿದುಕೊಳ್ಳುವದು.

ಅವಿದ್ಯಾಕಲ್ಪಿತವಾದ ದೇಹೇಂದ್ರಿಯಗಳ ಉಪಾಧಿಯಿಂದಲೇ 'ಜೀವ'ನೆನಿಸಿದ್ದ ಅದ್ವಯಾತ್ಮನು ಅದೇ ಅವಿದ್ಯೆಯಿಂದ ಕಲ್ಪಿಸಲ್ಪಟ್ಟ ವ್ಯಾಕೃತಾವ್ಯಾಕೃತ ಪ್ರಪಂಚದ ದೃಷ್ಟಿಯಿಂದ 'ಈಶ್ವರ'ನೆನಿಸಿದನು. ಅವಿದ್ಯೆಯು ತೊಲಗಲು ಜೀವತ್ವವೂ ಈಶತ್ವವೂ ಕಲ್ಪಿತಗಳೆಂದಾಗಿ ಕೇವಲಾದ್ವಯ ಪರಮಾರ್ಥವೇ ಉಳಿಯುವದು. ತತ್ತ್ವವು ಹೀಗಿರುವದರಿಂದ ಬೋಧನೆಯ ಸೌಕರ್ಯಕ್ಕಾಗಿ ಬ್ರಹ್ಮದಲ್ಲಿ ಮಾಯಾವಿತ್ವಈಶತ್ವಗಳನ್ನಾರೊಪಿಸಿ ಈ ತೋರಿಕೆಯಕಡೆಗೇ ನೋಡುವ ಸ್ವಾಭಾವಿಕದೃಷ್ಟಿಯಿಂದ ಹಿಂಜಗ್ಗಿ ಈಶ್ವರನಕಡೆಗೆ ಗಮನವನ್ನು ಸೆಳೆದು ಅವನೇ ಪರಮಾರ್ಥನಾದ ಅದ್ವಯಾತ್ಮನು ಎಂದು ತಿಳಿಸಿದಾಗ ಈ ಆರೋಪಗಳು ಸಹಜವಾಗಿ ತೊಲಗಿರುತ್ತವೆ. **'ಸ ಯ ಏಷೋಽಣಿಮೈತದಾತ್ಮ್ಯಮಿದಗ್ಂ ಸರ್ವಂ ತತ್ ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ'** (ಛಾಂ. 6–8–7) ಎಂಬ ವಾಕ್ಯಕ್ಕೆ ಇದೇ ತಾತ್ಪರ್ಯವು. ಅಂತೂ ಈಶತ್ವ–ಜೀವತ್ವ, ಮಾಯೆ – ಮಾಯಾವಿತ್ವ, ಅವಿದ್ಯೆ–ವಿದ್ಯೆ, ಬಂಧಮೋಕ್ಷವ್ಯವಹಾರ, ಉಪಾಸ್ಯೋಪಾಸಕತ್ವಾದಿವ್ಯವಹಾರ ಗಳೆಲ್ಲವೂ ಅಧ್ಯಾರೋಪಿತಗಳೇ ಹೊರತು ಪರಮಾರ್ಥವಲ್ಲ. ಭಾಷ್ಯಾಶಯವು

ಹೀಗಿದ್ದರೂ ಈಗ್ಗೆ ಪರಬ್ರಹ್ಮವನ್ನಾವರಿಸಿದ ಮೂಲಪ್ರಕೃತಿಯಲ್ಲಿ ಸತ್ತ್ವ ರಜೋಂಶಗಳಲ್ಲಿ ಪ್ರತಿಬಿಂಬಿಸಿದ ಬ್ರಹ್ಮಚೈತನ್ಯವು ಈಶ, ಜೀವನಾಗಿದೆ ಎಂದು ಹೇಳಿ ಈಶ್ವರ, ಬ್ರಹ್ಮ ಬೇರೆ ಬೇರೆಯಾಗಿದ್ದಾರೆಂಬಂತೆ ಬೋಧಿಸುವ, ಈಶ್ವರನು ಸಮಷ್ಟಿ ಅಜ್ಞಾನೋಪಾಧಿಯುಳ್ಳವನು ಎಂದು ಹೇಳುವ, ಕೆಲವು ತಪ್ಪುಕಲ್ಪನೆಗಳು ವೇದಾಂತದಲ್ಲಿ ಸೇರಿಕೊಂಡಿವೆ.

## ಪಾಠಾಂತರಗಳು

ಭಾಷ್ಯಕಾರರ ಪ್ರಕ್ರಿಯೆಯ ಸಾರವನ್ನು ಅವರ ಸಾಕ್ಷಾದ್ವಾಕ್ಯಗಳಿಂದ ಮನಗಂಡ ಅನಂತರವೇ ಭಾಷ್ಯಗಳಲ್ಲಿಯ ಕೆಲವು ಪಾಠಾಂತರಗಳ ಬಗ್ಗೆ ವಿಚಾರ ಮಾಡಲು ಅನುಕೂಲವಾಗುತ್ತದೆ. ಈ ಬಗ್ಗೆ ಪಂಡಿತರಾದವರು ಚೆನ್ನಾಗಿ ಪರಿಶೀಲನೆಮಾಡಿ ನಿರ್ಣಯಿಸುವದು ಅವಶ್ಯವೂ ಆಗಿದೆ. ಇಲ್ಲಿ ನನಗೆ ತೋರಿದ ಕೆಲವು ವಿಚಾರಗಳನ್ನು ವಿಮರ್ಶಿಸಿರುತ್ತೇನಾದರೂ ಸೂಕ್ತವಾದುದನ್ನು ತಿಳಿಯಪಡಿಸುವ ಪಂಡಿತರ ಸೂಚನೆಗಳನ್ನು ಕೃತಜ್ಞಪೂರ್ವಕವಾಗಿ ಸ್ವೀಕರಿಸುತ್ತೇನೆ.

(1) ಗೀತೆಯ 18ನೆಯ ಅಧ್ಯಾಯದ 50ನೆಯ ಶ್ಲೋಕದ ಭಾಷ್ಯದಲ್ಲಿ 'ಅತಃ ಲೌಕಿಕೈಃ ದೇಹಮಾತ್ರೇ ಏವ ಆತ್ಮದೃಷ್ಟಿಃ ಕ್ರಿಯತೇ' ಎಂದು ಆರಂಭಿಸಿ ಇಂದ್ರಿಯ, ಮನಸ್ಸು, ಬುದ್ಧಿಚೈತನ್ಯವಾದಿಗಳನ್ನು ಹೇಳಿದ ಮೇಲೆ **'ತತೋಽಪಿ ಆನ್ತರಮ್ ಅವ್ಯಕ್ತಮ್ ಅವ್ಯಾಕೃತಾಖ್ಯಮ್ ಅವಿದ್ಯಾವಸ್ಥಮ್ ಆತ್ಮತ್ವೇನ ಪ್ರತಿಪನ್ನಾಃ ಕೇಚಿತ್'** ಎಂಬ ವಾಕ್ಯವು ಬಂದಿದೆ. ಇದರ ಮುಂದಿನ ಉಪಸಂಹಾರವಾಕ್ಯವು **'ಸರ್ವತ್ರ ಹಿ ಬುದ್ಧ್ಯಾದಿದೇಹಾನ್ತೇ ಆತ್ಮಚೈತನ್ಯಾಭಾಸತಾ ಆತ್ಮಭ್ರಾನ್ತಿಕಾರಣಮ್ ಇತಿ'** ಎಂದಿದೆ. ಇಲ್ಲಿ ವಿಚಾರಣೀಯ ವಿಷಯವೆಂದರೆ; ಮಧ್ಯದಲ್ಲಿ ಬಂದ ಅವ್ಯಕ್ತಪರವಾಕ್ಯವನ್ನು ಭಾಷ್ಯಕಾರರೇ ಬರೆದಿದ್ದರೆ 'ಸರ್ವತ್ರ ಹಿ ಬುದ್ಧ್ಯಾದಿದೇಹಾನ್ತೇ' ಎಂದು ಉಪಸಂಹಾರಮಾಡಿರುವದು ಸಮಂಜಸವಾಗಲಾರದು. 'ಸರ್ವತ್ರ ಹಿ ಅವ್ಯಕ್ತಾದಿದೇಹಾನ್ತೇ' ಎನ್ನಬೇಕಿತ್ತು.

ಕಾಠಕದ 1–3–10–11 ನೆಯ ಮಂತ್ರಗಳಲ್ಲಿ ಬುದ್ಧಿ, ಮಹತ್ತು, ಅವ್ಯಕ್ತ – ಎಂಬ ತತ್ತ್ವಗಳನ್ನು ಹೇಳಿ ಆತ್ಮನು ಅದಕ್ಕೂ ಆಚೆಗಿರುವನೆಂದು ಮೊದಲು ತಿಳಿಸಿದೆ. ಅನಂತರ ಅಲ್ಲಿಯೇ 13ನೆಯ ಮಂತ್ರದಲ್ಲಿ ಅಧ್ಯಾತ್ಮಯೋಗವನ್ನು ಹೇಳುವಾಗ ಇಂದ್ರಿಯ, ಮನಸ್ಸು, ಬುದ್ಧಿ, ಮಹಾನ್ ಆತ್ಮ (ಹಿರಣ್ಯಗರ್ಭ, ಪ್ರಥಮಜ) ಎಂಬುದನ್ನು ಹೇಳಿದ ಮೇಲೆ ಪರಿಶುದ್ಧನಾದ ಅದ್ವಿತೀಯಾತ್ಮನಲ್ಲಿಯೇ ನೆಲೆನಿಲ್ಲಲು ಉಪದೇಶಿಸಿದೆ. ಇದನ್ನು ನೋಡಿದರೆ ಅಧ್ಯಾರೋಪದೃಷ್ಟಿಯಿಂದ ಅವ್ಯಕ್ತತತ್ತ್ವವನ್ನು ಉದ್ದೇಶಿಸಿದ್ದರೂ ಅದು ಅವಿದ್ಯಾಕಲ್ಪಿತವಾಗಿರು

ವದರಿಂದ ಈ ಅಧ್ಯಾತ್ಮಯೋಗದಲ್ಲಿ ಅಪವಾದದೃಷ್ಟಿಯೇ ಪ್ರಧಾನವಾಗಿದ್ದು ಪ್ರಥಮಜನಂತಿರುವ ಅಹಂಪ್ರತ್ಯಯಕ್ಕೆ ಹಿಂದಿರುವ ಸಾಕ್ಷಾದಪರೋಕ್ಷನಾಗಿರುವ ಆತ್ಮನಲ್ಲಿಯೇ ನಿಲ್ಲಲು ಹೇಳಿರುವದು ಸಮಂಜಸವೇ ಆಗಿದೆ. ಗೀತೆಯಲ್ಲೂ ಸಹ 'ಯೋ ಬುದ್ಧೇಃ ಪರತಸ್ತು ಸಃ' (3–42) ಎಂದು ಮಹತ್ತು, ಅವ್ಯಕ್ತಗಳನ್ನು ಹೇಳದೆಯೇ ನಿರೂಪಿದ್ದುಂಟು.

ಅಂತೂ ಇದರಿಂದ ಅವ್ಯಕ್ತತತ್ತ್ವವು ಆತ್ಮನಿಗೆ ನಿಜವಾಗಿ ಅಂಟಿಕೊಂಡದ್ದಲ್ಲ. ಅವಿದ್ಯೆಯಿಂದ ಕಲ್ಪಿಸಿದ್ದು ಎಂಬುದು ಸಿದ್ಧವಾಗುತ್ತದೆ. ಹೀಗಿರುವಲ್ಲಿ ಮೇಲೆ ವಿವರಿಸಿದ ಗೀ. 18–50ರಲ್ಲಿಯ ವಾಕ್ಯವು ಈಚೆಗೆ ಸೇರಿರುವ ಪ್ರಕ್ಷಿಪ್ತವಾಕ್ಯವೆಂದು ನಿರ್ಣಯಿಸಬಹುದಾಗಿದೆ. ಮೂಲಾವಿದ್ಯಾವಾದಿಗಳ ಪ್ರಭಾವಕ್ಕೊಳಗಾದ ಕೆಲವು ಲೇಖಕರು ಅಲ್ಲಿ 'ಅವ್ಯಾಕೃತಾಖ್ಯಂ ಅವಿದ್ಯಾವಸ್ಥಮ್' ಎಂದು ಬರೆದುಕೊಂಡಿರಬೇಕೆಂದು ಕಲ್ಪಿಸಲು ಅವಕಾಶ ವಿದೆ. ಇನ್ನು 'ಅವಿದ್ಯಾವಸ್ಥಮ್' ಎಂದದ್ದರಿಂದ ಅವಿದ್ಯಾವಸ್ಥೆಯಲ್ಲಿ ಮಾತ್ರ ತೋರುವದಾಗಿರುವ – ಎಂದು ಅರ್ಥ ಮಾಡುವದಾದರೆ ಅವ್ಯಾಕೃತವು ಅವಿದ್ಯಾಕಲ್ಪಿತವೇ ಆಗಿರುವದೆಂದು ಏರ್ಪಡುವದರಿಂದ ಸಿದ್ಧಾಂತಕ್ಕೆ ವಿರೋಧವಾಗಲಾರದೆಂಬುದೇನೋ ನಿಜವೇ. ಆದರೂ 'ಬುದ್ಧ್ಯಾದಿ ದೇಹಾನ್ತೇ' ಎಂಬ ಉಪಸಂಹಾರವಾಕ್ಯದ ಬಲದಿಂದ ಈ ಅವ್ಯಾಕೃತಾತ್ಮವಾದವನ್ನು ಹೇಳುವ ವಾಕ್ಯವು ಪ್ರಕ್ಷಿಪ್ತವೆಂದು ಹೇಳಲು ಯಾವ ಅಡ್ಡಿಯೂ ಇರುವದಿಲ್ಲ.

(2) ತೈತ್ತಿರೀಯೋಪನಿಷತ್ತಿನ ಅವತರಣಿಕಾಭಾಷ್ಯದಲ್ಲಿ ಆರಂಭಕ್ಕೆ **'...ಇದಾನೀಂ ಕರ್ಮೋಪಾದಾನಹೇತುಪರಿಹಾರಾಯ ಬ್ರಹ್ಮವಿದ್ಯಾಪ್ರಸ್ತೂಯತೇ'** ಎಂಬ ವಾಕ್ಯವಿದೆ. ಕರ್ಮವನ್ನು ಸ್ವೀಕರಿಸುವದಕ್ಕೆ ಕಾರಣವಾಗಿರುವ ಕಾಮಕ್ಕೆ ಹೇತುವಾದ ಅವಿದ್ಯೆಯನ್ನು ಪರಿಹರಿಸುವದಕ್ಕಾಗಿ ಬ್ರಹ್ಮವಿದ್ಯೆಯನ್ನು ಈಗ ಪ್ರಾರಂಭಿಸಿರುತ್ತದೆ – ಎಂದು ಇದರ ಭಾವ. ಇದರ ಮುಂದಿನ 'ಕರ್ಮಹೇತುಃ ಕಾಮಃ ಸ್ಯಾತ್' ಇತ್ಯಾದಿ ವಾಕ್ಯಗಳಿಂದ ಈ ಅಭಿಪ್ರಾಯವು ಸ್ಪಷ್ಟವಾಗುತ್ತದೆ. ಆದರೆ ಮುಂದೆಮುಂದೆ ಹೋಗುತ್ತ ಇದೇ ಅವತರಣಿಕಾ ಭಾಷ್ಯದಲ್ಲಿ (ಭಾ. ಭಾ. 11) **'ತಸ್ಮಾತ್ ಅವಿದ್ಯಾಕಾಮಕರ್ಮೋಪಾದಾನ ಹೇತುನಿವೃತ್ತೌ ಸ್ವಾತ್ಮನ್ಯವಸ್ಥಾನಂ ಮೋಕ್ಷ ಇತಿ'** ಎಂಬ ವಾಕ್ಯವು ಸಿಕ್ಕುತ್ತದೆ. ಹಿಂದೆ ಹೇಳಿದ ವಾಕ್ಯಕ್ಕೆ ಇದು ಅಸಂಗತವಾಗಿರುತ್ತದೆ. ಏಕೆಂದರೆ ಕರ್ಮಕ್ಕೆ ಕಾಮ, ಕಾಮಕ್ಕೆ ಅವಿದ್ಯೆ ಕಾರಣವಾಗಿದೆ ಎಂಬುದು ಯುಕ್ತ. ಅವಿದ್ಯೆಗೂ ಉಪಾದಾನಕಾರಣ ಎಂಬ ಮಾತು ಹೊಂದುಗೆಯಿಲ್ಲದ್ದು. ಕಾರ್ಯಕಾರಣ

ಭಾವವೇ ಅವಿದ್ಯೆಯಲ್ಲಿರುವಾಗ ಅವಿದ್ಯೆಗೆ ಉಪಾದಾನಕಾರಣ ಎಂಬ ಮಾತಿಗೆ ಅರ್ಥವಿದೆಯೇ? ಅವಿದ್ಯೆಯು ವ್ಯವಹಾರದ ಅವಿಚಾರಿತದೃಷ್ಟಿಯಲ್ಲಿ ಸ್ವಾಭಾವಿಕವಾದದ್ದು. ಇದನ್ನು 'ನೈಸರ್ಗಿಕೋಽಯಮ್' ಎಂದೇ ಆಚಾರ್ಯರು ಸೂತ್ರಭಾಷ್ಯದಲ್ಲಿ ಉಲ್ಲೇಖಿಸಿದ್ದಾರೆ. ಆದ್ದರಿಂದ ಇಲ್ಲಿ 'ಅವಿದ್ಯಾಕಾಮ' ಎಂಬ ಮಾತುಗಳನ್ನು ಈಚಿನ ಮೂಲಾವಿದ್ಯಾವಾದಿಗಳ ಪ್ರಭಾವಕ್ಕೆ ಒಳಗಾದವರು ಭಾಷ್ಯದ ಕೈಬರಹದ ಪ್ರತಿಯನ್ನು ಸಿದ್ಧಪಡಿಸುವಾಗ ಸೇರಿಸಿರಬಹುದೆಂದು ಊಹಿಸುವದಕ್ಕೆ ಅವಕಾಶವಿದೆ. 'ಕರ್ಮೋಪಾದಾನಹೇತುನಿವೃತ್ತೌ' ಎಂದು ಇಷ್ಟೇ ಇದ್ದರೆ ಪ್ರತಿಜ್ಞಾಭಾಷ್ಯಕ್ಕೆ ಅನುಗುಣವಾಗುವದಲ್ಲದೆ ಸರಳವಾಗಿ ಅರ್ಥವನ್ನು ಮಾಡಿಕೊಳ್ಳಬಹುದಾಗಿರುತ್ತದೆ.

(3) ಆಚಾರ್ಯರ ಸಿದ್ಧಾಂತದಲ್ಲಿ ಅವಿದ್ಯೆಯು ವ್ಯಾವಹಾರಿಕದೃಷ್ಟಿಯಿಂದ (ಅಧ್ಯಾರೋಪದೃಷ್ಟಿಯಿಂದ) ಅಂತಃಕರಣದ ಧರ್ಮವು. ಮಾಯೆ ಅಥವಾ ಅವ್ಯಾಕೃತ, ಅವ್ಯಕ್ತ, ಜಗದ್ಬೀಜ, ಈಶಶಕ್ತಿ – ಮುಂತಾದ ಹೆಸರಿನ ತತ್ತ್ವವನ್ನು ಇದೇ ಅಧ್ಯಾರೋಪದೃಷ್ಟಿಯಿಂದ ಒಪ್ಪಿರುವದರಿಂದಲೇ ಅವಿದ್ಯಾಕಲ್ಪಿತವು. ಅವಿದ್ಯೆಯನ್ನು ಮಾಯೆ ಎಂದಾಗಲಿ, ಮಾಯೆಯನ್ನು ಅವಿದ್ಯೆ ಎಂದಾಗಲಿ, ಎರಡೂ ಒಂದೇ ಎಂದಾಗಲಿ, ಅವಿದ್ಯೆಗೆ ಮಾಯೆಯು ಉಪಾದಾನಕಾರಣವೆಂದಾಗಲಿ, ಮಾಯೆಗೆ ಅವಿದ್ಯೆಯೇ ಉಪಾದಾನ ಕಾರಣವೆಂದಾಗಲಿ – ಭಾಷ್ಯಕಾರರು ಎಲ್ಲಿಯೂ ಹೇಳಿರುವದಿಲ್ಲ. ಭಾಷ್ಯಗಳಲ್ಲಿ ಅವಿದ್ಯೆಯನ್ನು ಅಂತಃಕರಣದ ಧರ್ಮ, ಸ್ವಾಭಾವಿಕ, ಸಂಶಯಾತ್ಮಕ, ಅಗ್ರಹಣ, ವಿಪರೀತಗ್ರಹಣಾತ್ಮಕ, ಜ್ಞಾನನಾಶ್ಯ – ಎಂದು ವರ್ಣಿಸಿರುತ್ತಾರೆ. ಮತ್ತು ಆತ್ಮನಲ್ಲಿ ಈ ಜ್ಞಾನಗಳೆರಡೂ ಇಲ್ಲ ಎಂದು ಅಲ್ಲಲ್ಲಿ ಹೇಳುರುವದರಿಂದ ವಿದ್ಯಾವಿದ್ಯೆ ಎಂಬ ವ್ಯವಹಾರವೂ ಆತ್ಮನಲ್ಲಿ ಅಧ್ಯಾರೋಪಿತವಾಗಿದೆ ಎಂದಾಗಿ ಪರಮಾರ್ಥವಾಗಿ ಆತ್ಮನು ಅದ್ವಿತೀಯನೆಂಬುದನ್ನು ಪ್ರತಿಪದಿಸಿದಂತಾಗಿದೆ. ಆತ್ಮಾನುಭವದಲ್ಲಿ ನಿಂತಾಗ ಅವಿದ್ಯೆಯಿಲ್ಲ, ವ್ಯವಹಾರದೃಷ್ಟಿಯಲ್ಲಿರುವಾಗ ಅದು ಸ್ವಾಭಾವಿಕ ಎನ್ನುವದೇ ಭಾಷ್ಯಕಾರರ ನಿಜವಾದ ಅಭಿಪ್ರಾಯವು. ಇದರಂತೆ ಮಾಯೆಯನ್ನು ಅನಿರ್ವಚನೀಯ, ಅವಿದ್ಯಾಕಲ್ಪಿತ, ವ್ಯಕ್ತಾವ್ಯಕ್ತಾತ್ಮಕ ಈಶ್ವರಾಧೀನ, ವಸ್ತುವನ್ನು ತಿಳಿಯುವದಕ್ಕೆ ಅಡ್ಡಿಯಾದ ಹುಸಿತೋರಿಕೆ ಮತ್ತು ಮೋಹಕಾರಕ – ಎಂದು ವರ್ಣಿಸುವದೇ ಆಚಾರ್ಯರ ಪದ್ಧತಿಯಾಗಿದೆ. ಅವಿದ್ಯಾಕಲ್ಪಿತವಾದ ಮಾಯೆಯ ಉಪಾಧಿಯಿಂದಲೇ ಅದ್ವಿತೀಯಾತ್ಮನಿಗೆ ಈಶ್ವರತ್ವವು ಬಂದಿದೆ. ಪರಮಾರ್ಥವಾಗಿ ಈಶ್ವರನ ಈಶತ್ವಕ್ಕೆ ಒಳಪಟ್ಟ ಅನಾತ್ಮವೆಂಬುದಿಲ್ಲವೇಇಲ್ಲ. ಅವಿದ್ಯೆಯಿಂದಲೇ ಅದು ಇದ್ದಂತೆ ತೋರುತ್ತದೆ.

ಹೀಗಿದ್ದರೂ ಅವಿದ್ಯೆ ಮತ್ತು ಮಾಯೆಯ ವಿಷಯಕವಾಗಿ ಒಂದೆರಡು ಸಂದರ್ಭಗಳಲ್ಲಿ ಆಚಾರ್ಯರು ಬೇರೆರೀತಿಯಿಂದ ಹೇಳಿರುವದೂ ಕಂಡುಬರುತ್ತದೆ. ಅದನ್ನು ನೋಡೋಣ.

ಸೂತ್ರಭಾಷ್ಯದಲ್ಲಿ (1–4–3) 'ತದಧೀನತ್ವಾದರ್ಥವತ್' ಎಂಬ ಸೂತ್ರಕ್ಕೆ ವ್ಯಾಖ್ಯಾನಮಾಡುವಾಗ ಒಂದನೆಯ ವರ್ಣದಲ್ಲಿ 'ಅವಿದ್ಯಾತ್ಮಿಕಾ ಹಿ ಬೀಜಶಕ್ತಿಃ' ಮುಂತಾದ ವಾಕ್ಯಗಳಿಂದ ಅವ್ಯಕ್ತವನ್ನು ವರ್ಣಿಸಿದ ಅನಂತರ ಎರಡನೆಯ ವರ್ಣಕದಲ್ಲಿ **'ಯದಾ ತು ಜೀವೋ ಮಹಾನ್ ತದಾಪಿ ಅವ್ಯಕ್ತಾಧೀನತ್ವಾತ್ ಜೀವಭಾವಸ್ಯ'** ಎಂದು ಹೇಳುತ್ತಾ 'ಅವಿದ್ಯಾ ಹಿ ಅವ್ಯಕ್ತಂ' (ಅವಿದ್ಯೆಯೇ ಅವ್ಯಕ್ತವು) ಎಂದು ಬರೆದಿದ್ದಾರೆ. ಜೀವರೆಲ್ಲರಿಗೂ ಸ್ವಾಭಾವಿಕವಾದ ಅವಿದ್ಯೆಯು ಎಂದರೆ ಆತ್ಮಾನಾತ್ಮರ ಅವಿವೇಕರೂಪದ ಅಗ್ರಹಣವು ಇದ್ದದ್ದು ಗೊತ್ತೇಆಗುವದಿಲ್ಲ. ಈ ಕಾರಣದಿಂದ ಇಲ್ಲಿ ಅವಿದ್ಯೆಯನ್ನು ಅವ್ಯಕ್ತವೆನ್ನಬಹುದು ಎಂದು ಭಾಷ್ಯವನ್ನು ಕಲ್ಪಿಸಿಕೊಳ್ಳಬೇಕು. ಇದಲ್ಲದೆ ಇನ್ನೂ ಕೆಲವೆಡೆಗಳಲ್ಲಿ ಅವಿದ್ಯೆಯನ್ನು ಅವ್ಯಕ್ತವೆಂದು ಕರೆದಿರುವದುಂಟು. ಇನ್ನು ತೈತ್ತಿರೀಯದಲ್ಲಿ 2–8ರಲ್ಲಿ (ಭಾ.ಭಾ. 216) **'ತಸ್ಮಾತ್ ನಾಮರೂಪಪಕ್ಷಸ್ಯೈವ ವಿದ್ಯಾವಿದ್ಯೇ। ನಾಮರೂಪೇ ಚ ನಾತ್ಮಧರ್ಮೌ'** ಎಂದು ನಿರ್ಣಯಿಸಿ ವಿದ್ಯಾವಿದ್ಯೆಗಳು ಆತ್ಮನಲ್ಲಿ ಇರುವಂತೆ ತೋರುವ ಹುಸಿತೋರಿಕೆಗಳು ಎಂದು ಪ್ರತಿಪದಿಸಿದ್ದಾರೆ; ಎಂದರೆ ಅಲ್ಲಿ 'ವಿದ್ಯಾವಿದ್ಯೆ' ಎಂಬುದು ಮಾಯೆ ಎಂದು ಹೇಳಿದಂತಾಗಿದೆ.

ಹೀಗೆ ಅವಿದ್ಯೆಯನ್ನು ಮಾಯೆಯೆಂತಲೂ ಮಾಯೆ ಅಥವಾ ಅವ್ಯಕ್ತವನ್ನು ಅವಿದ್ಯೆಯೆಂತಲೂ ಹೇಳಿರುವ ಕಾರಣವೇನೆಂದರೆ ಅವಿದ್ಯೆಯಾಗಲಿ ಮಾಯೆಯಾಗಲಿ ಇರುವ ತತ್ತ್ವಗಳಲ್ಲ. ಅಧ್ಯಾರೋಪಕ್ಕಾಗಿ ಕಲ್ಪಿಸಿದ ತತ್ತ್ವಗಳಿವು. 'ಉಪದೇಶಾದಯಂ ವಾದೋ ಜ್ಞಾತೇ ದ್ವೈತಂ ನ ವಿದ್ಯತೇ' (ಮಾಂ. ಕಾ. 1–18) ಎಂಬುದೇ ಪರಮಸಿದ್ಧಾಂತವು. ಈ ಕಲ್ಪಿತತತ್ತ್ವಗಳು ಹೇಗೂ ಇರುವದಿಲ್ಲ; 'ನಾತ್ಮಭಾವೇನ ನಾನೇದಮ್' (ಮಾಂ. ಕಾ. 2–34) ಎಂದೇ ತಿಳಿಯಬೇಕು. ನಿಜವು ಹೀಗಿರುವದರಿಂದ ಕೆಲವೆಡೆಗೆ ಅವ್ಯಕ್ತವನ್ನು ಅವಿದ್ಯೆ ಎಂದು ಭಾಷ್ಯದಲ್ಲಿ ಬರೆದಾಗ ಅದು ಅವಿದ್ಯಾಕಲ್ಪಿತವಾದದ್ದರಿಂದಲೇ ಅವಿದ್ಯೆ ಎಂದು ಅರ್ಥಮಾಡಬೇಕಾಗುತ್ತದೆ. ಉದಾಹರಣೆಗೆ ಈಶಾವಾಸ್ಯದ 12ನೆಯ ಮಂತ್ರದ ಭಾಷ್ಯದಲ್ಲಿ **"ಅಸಮ್ಭೂತಿಃ ಪ್ರಕೃತಿಃ ಕಾರಣಮ್ ಅವಿದ್ಯಾ ಅವ್ಯಾಕೃತಾಖ್ಯಾ... ಅವ್ಯಾಕೃತಾಖ್ಯಾಂ ಪ್ರಕೃತಿಂ ಕಾರಣಂ ಅವಿದ್ಯಾಮ್"** ಎಂದಿರುವ ವಾಕ್ಯಕ್ಕೆ ಅವಿದ್ಯೆಯಿಂದ

ಕಲ್ಪಿತವಾಗಿರುವದರಿಂದಲೇ ಅವ್ಯಕ್ತವನ್ನು ಅವಿದ್ಯೆಯೆಂದು ಕರೆದಿದೆ ಎಂದು ಅರ್ಥಮಾಡಬೇಕು. ಅಥವಾ 'ಅವಿದ್ಯಾಕಲ್ಪಿತಾಮ್' ಎಂದಿದ್ದ ಮೂಲ ಭಾಷ್ಯವನ್ನು ಈಚಿನವರು ಬರೆಯುವಾಗ ಕೈತಪ್ಪಿನಿಂದ 'ಅವಿದ್ಯಾಮ್' ಎಂದು ಮೂಲಾವಿದ್ಯಾವಾದಿಗಳ ಪ್ರಭಾವಕ್ಕೆ ಒಳಗಾಗಿ ಬರೆದುಕೊಂಡು ಹೊಸ ಪಾಠಾಂತರವನ್ನು ಕಲ್ಪಿಸಿರಬಹುದೆಂದು ಊಹಿಸುವದಕ್ಕೂ ಇಲ್ಲಿ ಅವಕಾಶವಿದೆ.

(4) ಭಾಷ್ಯಗಳಲ್ಲಿ ವೇದಾಂತವಾಕ್ಯ, ವಾಕ್ಯಜನ್ಯಜ್ಞಾನಗಳ ವಿಷಯವಾಗಿ ಅನೇಕ ಸ್ಥಳಗಳಲ್ಲಿ ಚರ್ಚೆಯು ಬಂದಿದೆ. ಅಂಥ ಸ್ಥಲಗಳಲ್ಲಿ ಆಚಾರ್ಯರು ವೇದಾಂತವಾಕ್ಯಗಳ ವ್ಯಾಪಾರವನ್ನು ಕುರಿತು ಈ ರೀತಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ: (ಅ) ವೇದಾಂತವಾಕ್ಯಗಳು ಕ್ರಿಯಾವಾಕ್ಯ ಗಳಂತೆಯೇ ಪ್ರಮಾಣೀಭೂತವಾಗಿವೆ. (ಆ) ಸ್ವರ್ಗಾದಿ ಅಲೌಕಿಕವಸ್ತುಗಳ ಜ್ಞಾನವು ವೇದಾಂತವಾಕ್ಯದಿಂದ ಆಗುವದು ನಿಜವಾದಲ್ಲಿ ಅದೇ ವೇದಾಂತವಾಕ್ಯಗಳಿಂದ ಬ್ರಹ್ಮಜ್ಞಾನವು ಆಗುವದಿಲ್ಲವೆಂಬುದು ಒಪ್ಪುವ ಮಾತಲ್ಲ. (ಇ) ಜ್ಞಾನವನ್ನುಂಟು ಮಾಡುವಲ್ಲಿ ಎರಡೂ ವಾಕ್ಯಗಳಿಗೂ ಸಮಾನವಾದ ಪ್ರಾಮಾಣ್ಯವಿದೆ. (ಈ) ವಸ್ತುಬೋಧಕವಾದ ವೇದಾಂತವಾಕ್ಯಗಳಿಂದಲೇ ಬ್ರಹ್ಮವು ತಿಳಿದುಬರುತ್ತದೆ. (ಉ) ಬ್ರಹ್ಮವು ಭೂತವಸ್ತುವಾಗಿದ್ದರೂ ಧರ್ಮದಂತೆಯೇ ಪ್ರತ್ಯಕ್ಷಾನುಮಾನಕ್ಕೆ ಗೋಚರವಲ್ಲ. ವೇದಾಂತವಾಕ್ಯಕ್ಕೇ ಗೋಚರವಾಗಿದೆ. (ಊ) ಶಬ್ದಕ್ಕೆ ಮೀರಿರುವ ಬ್ರಹ್ಮವನ್ನು ತಿಳಿಸುವಾಗ ವೇದಾಂತವಾಕ್ಯಗಳು ಬ್ರಹ್ಮದಲ್ಲಿ ಕಲ್ಪಿಸಿದ ಅಧ್ಯಾರೋಪಗಳನ್ನು ಕಳೆಯುವ ಮೂಲಕವೇ ಬೋಧಿಸುತ್ತವೆ. (ಋ) ಈ ವಾಕ್ಯಗಳ ಬೋಧೆಯಿಂದ ಜಿಜ್ಞಾಸುವಿಗೆ ಈಗಲೇ ಬ್ರಹ್ಮಾನುಭವದಲ್ಲಿ ನೆಲೆನಿಲ್ಲುವಿಕೆಯು ಉಂಟಾಗುತ್ತದೆ.[1]

ಇನ್ನು ವಾಕ್ಯಜನ್ಯಜ್ಞಾನವನ್ನು ಕುರಿತು ಅವರು ಈರೀತಿ ಹೇಳಿರುತ್ತಾರೆ; (ಅ) ವಾಕ್ಯಜನ್ಯಜ್ಞಾನವು ಆರೋಪಗಳನ್ನು ಪ್ರತಿಷೇಧಮಾಡಿದ ಸಮಕಾಲದಲ್ಲಿಯೇ ಉಂಟಾಗುತ್ತದೆ. (ಆ) ಈ ಜ್ಞಾನವು ಯಾವ ಕರ್ಮ ಅಥವಾ ಉಪಾಸನೆಗೂ ಅಂಗವಾಗಿರುವದಿಲ್ಲ. (ಇ) ಜ್ಞಾನವುಂಟಾದಕೂಡಲೇ ಜ್ಞಾತೃತ್ವಾದಿದ್ವೈತವು ಬಾಧಿತವಾಗಿಬಿಡುವದರಿಂದ ಜ್ಞಾನವೆಂಬ ವೃತ್ತಿಯು ಪ್ರತ್ಯೇಕವಾಗಿ ಉಳಿಯುವದಿಲ್ಲ. (ಈ) ಈ ಜ್ಞಾನವು ಬಾಧ್ಯಬಾಧಕವೆಂಬ ದ್ವೈತವನ್ನೂ ಬಾಧಿಸಿಬಿಟ್ಟಿರುವದರಿಂದ ಇದನ್ನು ಬಾಧಿಸುವ ಮತ್ತೊಂದು ಜ್ಞಾನವು ಹುಟ್ಟಬಹುದೆಂದು ಕಲ್ಪಿಸಲೂ ಸಾಧ್ಯವಿಲ್ಲ. (ಉ) ಈ ಜ್ಞಾನವು

1. ಬೃ.ಭಾ. 1–3–1, ಗೀ. ಭಾ. 2–18, 21 ಸೂ. ಭಾ. 1–1–3,4, 2–1–6.

ಭ್ರಾಂತಿಜ್ಞಾನವಲ್ಲ. (ಊ) ಈ ಜ್ಞಾನವನ್ನು ತಿಳಿದವರು ಉಪದೇಶಿಸುತ್ತಲೂ ಮುಮುಕ್ಷುಗಳು ಗ್ರಹಿಸುತ್ತಲೂ ಇರುವದು ಅನುಭವದಲ್ಲಿಯೇ ಇರುವಾಗ ಇಂಥ ಜ್ಞಾನವೇ ಆಗಲಾರದೆಂದು ವಾದಿಸುವದಕ್ಕೂ ಬರುವದಿಲ್ಲ. (ಋ) ಈ ಜ್ಞಾನವು ಉಂಟಾದೊಡನೆ ಜ್ಞಾತೃಜ್ಞಾನಜ್ಞೇಯಗಳೆಂಬ ತ್ರಿಪುಟಿಯೇ ಬಾಧಿತವಾಗಿಬಿಡುವದಾಗಿ ಮುಂದೆ ಪ್ರಮಾಣವ್ಯವಹಾರವೇ ನಿಲ್ಲಲಾರದಾದ್ದರಿಂದ ಇಂಥ ಜ್ಞಾನವನ್ನು ಉಂಟುಮಾಡುವದಕ್ಕೆ ಕಾರಣವಾದ ವೇದಾಂತ ವಾಕ್ಯವು ಅಂತ್ಯಪ್ರಮಾಣವೆನಿಸಿದೆ. (ೠ) ಅದ್ವೈತಾನುಭವಸ್ಥಿತಿಯಲ್ಲಿ ವೇದವೂ ವೇದವಲ್ಲ; ತಿಳಿದ ನಂತರ ದ್ವೈತವಿರುವದಿಲ್ಲ; ಉಪದೇಶಕ್ಕಾಗಿ ಗುರು, ಶಿಷ್ಯ, ಶಾಸ್ತ್ರ, – ಮುಂತಾದ ಭೇದವನ್ನು ಕಲ್ಪಿಸಲಾಗಿದೆ – ಎಂಬ ಸಾಂಪ್ರದಾಯಿಕರ ವಚನವು ಅಧ್ಯಾತ್ಮ ಜ್ಞಾನದ ನಿಜವಾದ ಸ್ವರೂಪವನ್ನೇ ವಿವರಿಸುತ್ತದೆ.[1]

ಮೇಲೆ ಸೂಚಿಸಿದ ಅಭಿಪ್ರಾಯಗಳನ್ನು ಭಾಷ್ಯಕಾರರು ಹೊರಗೆಡಹಿ ಅದ್ವೈತಸಿದ್ಧಾಂತದಲ್ಲಿ ವೇದಾಂತವಾಕ್ಯ ಹಾಗೂ ವಾಕ್ಯಜನ್ಯಜ್ಞಾನಕ್ಕಿರುವ ಮಹತ್ತ್ವದ ಸ್ಥಾನವನ್ನು ಗೊತ್ತುಪಡಿಸಿರುತ್ತಾರೆ. ಆದರೆ ಮಹಾವಾಕ್ಯ – ಅವೂವೇದಕ್ಕೊಂದರಂತೆ ನಾಲ್ಕು – ಅವುಗಳ ಉಪದೇಶ, ಅವರ್ತನೆ, ಜಪ – ಮುಂತಾದ ಈಚಿನ ಕಲ್ಪನೆಗಳು ಭಾಷ್ಯದಲ್ಲಿ ಎಲ್ಲಿಯೂ ಕಾಣುವದಿಲ್ಲ. ವೇದಕ್ಕೊಂದು ಮಹಾಕಾವ್ಯವೆಂದು ಹೇಳುವವರಿಗೆ "ಅಯಮಾತ್ಮಾ ಬ್ರಹ್ಮ" ಎಂಬುದು ಮಾಂಡೂಕ್ಯ ಹಾಗೂ ಬೃಹದಾರಣ್ಯಕ ಈ ಎರಡು ಉಪನಿಷತ್ತುಗಳಲ್ಲೂ ಅವಾಂತರವಾಕ್ಯವಾಗಿಯೇ ಬಂದಿರುವದೇ ಹೊರತು ಸ್ವತಂತ್ರವಾಕ್ಯವೂ ಆಗಿಲ್ಲ ಎಂಬುದು ಲಕ್ಷ್ಯಕ್ಕೇ ಬಂದಿರುವದಿಲ್ಲ. ಇದಲ್ಲದೆ ವಸ್ತುಬೋಧಕವಾಕ್ಯಗಳು ಮಾನಸಿಕ ಕ್ರಿಯೆಗಾಗಲಿ ದೈಹಿಕಕ್ರಿಯೆಗಾಗಲಿ ಅಂಗವಾಗುವದಿಲ್ಲವೆಂಬ ಆಚಾರ್ಯರ ಸಿದ್ಧಾಂತಕ್ಕೆ ವಿರೋಧವಾಗಿ ಈ ಮಹಾವಾಕ್ಯಗಳ ಉಪದೇಶ, ಜಪ, ಆವರ್ತನೆಗಳನ್ನು ಕೆಲವರು ಹೇಳುತ್ತಾ ಬಂದಿದ್ದಾರೆ. ಇಂಥವರ ಪ್ರಭಾವಕ್ಕೊಳಗಾಗಿ ಭಾಷ್ಯಗಳ ಕೈಬರಹದ ಪ್ರತಿಗಳನ್ನು ತಯಾರಿಸುವವರನೇಕರು ಐತರೇಯಭಾಷ್ಯದ 1–3–13ರಲ್ಲಿ "ವೇದಾನ್ತಮಹಾ ಭೇರ್ಯಾಮ್" ಅಥವಾ "ವೇದಾನ್ತವಾಕ್ಯಮಹಾ ಭೇರ್ಯಾಮ್" ಎಂಬ ಭಾಷ್ಯವಾಕ್ಯಕ್ಕೆ "ವೇದಾನ್ತಮಹಾವಾಕ್ಯಭೇರ್ಯಾಮ್" ಎಂಬ ಪಾಠಾಂತರ ವನ್ನು ಕಲ್ಪಿಸಿ ಬರೆದಿರುತ್ತಾರೆ. ವ್ಯಾಖ್ಯಾನಕಾರರು ಇದೇ

---

1. ಮಾಂ. ಮಂ. 7 ಅವ. ಮಾಂ ಕಾ. 1–18, ಐ.ಅವ. 'ಬ್ರಹ್ಮಾತ್ಮವಿಜ್ಞಾನಸ್ಯ' ಸೂ.ಭಾ. 1–1–4, 2–1–14.

ಪಾಠವನ್ನು ಇಟ್ಟುಕೊಂಡು "ತತ್ತ್ವಮಸಿ" ಮುಂತಾದ ಮಹಾವಾಕ್ಯಗಳೆಂದು ಇದಕ್ಕೆ ಅರ್ಥಮಾಡುತ್ತಿದ್ದಾರೆ. ಆದರೆ ಇತ್ತೀಚೆಗೆ ಕೇಂದ್ರಸರಕಾರದವರು ಹೊರಡಿಸಿದ ಶಾಂಕರಭಾಷ್ಯಮೂಲದಲ್ಲಿ "ವೇದಾನ್ತಮಹಾಭೇಯಾರ್ಣಂ" ಎಂಬ ಶುದ್ಧ ಪಾಠವನ್ನೇ ಅನುಸರಿಸಿದ್ದಾರೆ. ಇದನ್ನೆಲ್ಲ ನೋಡಿದರೆ "ವೇದಾನ್ತಮಹಾ ವಾಕ್ಯಭೇಯಾರ್ಣಂ" ಎಂಬುದು ಪ್ರಕ್ಷಿಪ್ತಪಾಠವೆಂದು ಸಿದ್ಧವಾಗುತ್ತದೆ.

(5) ಈಚಿನ ವೇದಾಂತದ ನಿರೂಪಣೆಯ ಪದ್ಧತಿಯಲ್ಲಿ ಮೂರು ಶರೀರಗಳನ್ನು ಹೇಳುವ ರೂಢಿಯಿದೆ. ಜಾಗ್ರತ್ತಿನಲ್ಲಿ ಸ್ಥೂಲ, ಸೂಕ್ಷ್ಮ, ಕಾರಣವೆಂಬ ಮೂರು ಶರೀರಗಳಿದ್ದರೂ ಸ್ಥೂಲವೇ ಪ್ರಧಾನ; ಸ್ವಪ್ನದಲ್ಲಿ ಸೂಕ್ಷ್ಮ ಮತ್ತು ಕಾರಣಶರೀರವಿದ್ದರೂ ಸೂಕ್ಷ್ಮವೇ ಪ್ರಧಾನ; ಸುಷುಪ್ತಿಯಲ್ಲಿ ಕಾರಣಶರೀರ ಮಾತ್ರವೇ ಇರುವದೆಂದು ಪ್ರತಿಪಾದಿಸುತ್ತಿರುತ್ತಾರೆ. ಈ ಕಾರಣಶರೀರವೇ ಕಾರಣಾವಿದ್ಯೆ ಎಂದೂ ಹೇಳುವವರುಂಟು. ನಿರ್ವಿಕಲ್ಪ ಸಮಾಧಿಯಲ್ಲಿ ಕಾರಣಶರೀರವಿರುವದಿಲ್ಲ ಎಂಬ ಪ್ರತಿಪಾದನೆಯೂ ಈಚಿನ ಕೆಲವು ಅದ್ವೈತಗ್ರಂಥಗಳಲ್ಲಿದೆ. ಆದರೆ ಶಾಂಕರಭಾಷ್ಯದಲ್ಲಿ ಮಾತ್ರ ಈ ವಿವರಣೆಯು ಕಂಡುಬರುವದಿಲ್ಲ. ಸುಷುಪ್ತಿಯನ್ನು ವರ್ಣಿಸುವ ಸಂದರ್ಭಗಳ ನೂರಾರು ವಚನಗಳನ್ನು ಪರಿಶೀಲಿಸಿದರೂ ಇಂಥ ವಿಚಾರಸರಣಿಯೇ ಕಂಡುಬರುವದಿಲ್ಲ. ಬೃಹದಾರಣ್ಯಕಾದಿ ಉಪನಿಷತ್ತುಗಳಲ್ಲಿಯೂ ಸೂತ್ರಭಾಷ್ಯ ದಲ್ಲಿಯೂ ಸ್ಥೂಲಸೂಕ್ಷ್ಮಶರೀರದ್ವಯಗಳನ್ನು ಮಾತ್ರ ನಿರೂಪಿಸಿರುವರೇ ಹೊರತು ಎಲ್ಲಿಯೂ ಶರೀರತ್ರಯಗಳನ್ನು ಹೇಳಿರುವದು ಕಂಡುಬರುದಿಲ್ಲ. ಇನ್ನು ಕಾರಣಾವಿದ್ಯೆ, ಪ್ರಾಜ್ಞತ್ವ, ಈಶ್ವರತ್ವ, ಅವ್ಯಾಕೃತಪ್ರಪಂಚಬೀಜಾದಿಗಳನ್ನು ಸುಷುಪ್ತಿಗೆ ಗಂಟುಹಾಕಿ ವರ್ಣಿಸಿ ಹೇಳಿರುವದುಂಟು. ಆ ಬಗ್ಗೆ ಎರಡುಮಾತು ಗಳನ್ನು ಇಲ್ಲಿ ತಿಳಿಸುವದುತ್ತಮ :

ಶ್ರುತಿ ಹಾಗೂ ಬ್ರಹ್ಮನಿಷ್ಠರ ದೃಷ್ಟಿಯಿಂದ ಎಂದರೆ ಪರಮಾರ್ಥದೃಷ್ಟಿಯಿಂದ ಸುಷುಪ್ತಿಯು ತನಗೆರಡನೆಯದಿಲ್ಲದ ಶುದ್ಧಪರಬ್ರಹ್ಮಸ್ವರೂಪವು. ಇದಕ್ಕೆ ಸೂ.ಭಾ. 1–3–20, 3–2–7, ಛಾಂ.ಭಾ. 6–8–1, ಬೃ.ಭಾ. 2–1–19 – ಈ ಭಾಷ್ಯವಚನಗಳು ಪ್ರಮಾಣವಾಗಿರುತ್ತವೆ. ಇನ್ನು ಎಚ್ಚರದ ಅಧ್ಯಾರೋಪದೃಷ್ಟಿಯಿಂದ ಸುಷುಪ್ತಾತ್ಮನಲ್ಲಿ ಕಾರಣಾವಿದ್ಯೆ, ಪ್ರಾಜ್ಞತ್ವ, ಈಶ್ವರತ್ವಾದಿಗಳನ್ನು ಕಲ್ಪಿಸಿ ಮುಂದೆ ಅವುಗಳನ್ನು ಅಲ್ಲಗಳೆದು ಪರಮಾರ್ಥವನ್ನು ತಿಳಿಸುವದೂ ಸಹ ಶ್ರುತಿಯ ಒಂದು ಪದ್ಧತಿಯೇ ಆಗಿದೆ. ಈ ವಿಷಯದಲ್ಲಿ **"ತಾಮ್ ಅಬೀಜಾವಸ್ಥಾಂ ತಸ್ಯೈವ ಪ್ರಾಜ್ಞಶಬ್ದವಾಚ್ಯಸ್ಯ**

**ತುರೀಯತ್ವೇನ ದೇಹಾದಿಸಮ್ಬನ್ಧರಹಿತಾಂ ಪಾರಮಾರ್ಥಿಕೀಂ ಪೃಥಗ್ ವಕ್ಷ್ಯತಿ"** (ಮಾಂ. ಕಾ. ಭಾ. 1–2) ಇತ್ಯಾದಿ ವಾಕ್ಯಗಳು ಮನನೀಯವಾಗಿವೆ. ಈ ಬಗ್ಗೆ ಇದೇ ಗ್ರಂಥದ ಎಂಟನೆಯ ಅಧ್ಯಾಯವನ್ನು ನೋಡಿರಿ.

ಸುಷುಪ್ತಿಯಲ್ಲಿ ಕಾರಣಶರೀರವಿದೆ ಎಂಬ ಮಾತಂತೂ ಭಾಷ್ಯದಲ್ಲಿ ಇಲ್ಲವೇ ಇಲ್ಲ. ಇನ್ನು ಈಚಿನ ವೇದಾಂತಿಗಳು ಹೇಳುವಂತೆ ನಿರ್ವಿಕಲ್ಪಸಮಾಧಿಯಲ್ಲಿ ಜ್ಞಾನವಾಗುವದೆಂದು ಒಪ್ಪಿದರೆ ಸಾರ್ವತ್ರಿಕಾನುಭವ ವನ್ನು ಕೈಬಿಟ್ಟು ವೈಯಕ್ತಿಕಾನುಭವದ ಬಲದಿಂದ ತತ್ತ್ವವು ನಿಲ್ಲುವದೆಂದಾಗಿ ತತ್ತ್ವಶಾಸ್ತ್ರ ಎಂಬ ಗೌರವವೇ ಹೊರಟುಹೋಗುತ್ತದೆ. ಆಚಾರ್ಯರು ತತ್ತ್ವಪ್ರತಿಪಾದನೆಗೆ ಈ ರೀತಿಯನ್ನು ಎಲ್ಲಿಯೂ ಅನುಸರಿಸಿರುವದಿಲ್ಲ. ವಿಷಯವು ಹೀಗಿದ್ದರೂ ಈಶಾವಾಸ್ಯದ 8ನೆಯ ಮಂತ್ರದ ಭಾಷ್ಯದಲ್ಲಿ 'ಶುದ್ಧಂ ನಿರ್ಮಲಮ್, ಅವಿದ್ಯಾಮಲರಹಿತಮಿತಿ' ಎಂಬ ವಾಕ್ಯವಾದಮೇಲೆ 'ಕಾರಣ ಶರೀರಪ್ರತಿಷೇಧಃ' ಎಂದು ಬರೆದಿದೆ. ಈ ಮಾತು ಪ್ರಕ್ಷಿಪ್ತವೆಂದೇ ನನ್ನ ಮತವು. ಏಕೆಂದರೆ  ಕಾರಣಶರೀರವನ್ನು ಒಪ್ಪುವ ಈಚಿನವರೆಲ್ಲರೂ ತಪ್ಪದೆ ಸುಷುಪ್ತಿಯಲ್ಲಿ ಕಾರಣಶರೀರವಿರುವದಾಗಿ ಹೇಳಿಯೇಹೇಳುತ್ತಾರೆ. ಆಚಾರ್ಯರೂ ಕಾರಣಶರೀರವನ್ನು ಹೇಳುವವರಾಗಿದ್ದರೆ ಸುಷುಪ್ತಿನಿರೂಪಣ ಸ್ಥಲಗಳಲ್ಲಿ ಒಮ್ಮೆಯಾದರೂ ಹೇಳಲಿಲ್ಲವೇಕೆ? ಹಾಗೂ ಅಲ್ಲಲ್ಲಿ ಶರೀರದ್ವಯಗಳನ್ನು ಮಾತ್ರವೇ ಹೇಳಿದ್ದೇಕೆ? ಎಂಬ ಬಲವಾದ ಸಂಶಯವು ನನ್ನನ್ನು ಬಾಧಿಸುತ್ತಿದೆ. ಇನ್ನು, ಶರೀರವೆಂದರೆ ನಾಶವಾಗತಕ್ಕದ್ದು, ಆತ್ಮಜ್ಞಾನದಿಂದ ನಾಶವಾಗುವದರಿಂದಲೂ ನಮಗೆ ಶರೀರಾದಿಗಳಿವೆಯೆಂಬ ಅರಿವಿಗೆ ಕಾರಣವಾಗಿರುವದರಿಂದಲೂ ಅವಿದ್ಯೆಯನ್ನು ಕಾರಣಶರೀರವೆಂದಿದೆ – ಎಂದು ಇದೇ ಭಾಷ್ಯದ ಟಿಪ್ಪಣಿಯಲ್ಲಿ ಶ್ರೀಗಳವರು ಸಮಾಧಾನವನ್ನು ತಿಳಿಸಿರುವರಾದರೂ 'ಕಾರಣಶರೀರ'ವೆಂಬ ಮಾಡು ಪ್ರಸ್ಥಾನತ್ರಯಭಾಷ್ಯದಲ್ಲಿ ಮತ್ತೆಲ್ಲಿಯೂ ಬಂದಿಲ್ಲವಾದ್ದರಿಂದಲೇ ಇಲ್ಲಿ ಇದನ್ನೊಪ್ಪಲು ನನಗೆ ಮನಸ್ಸು ಬಾರದಾಗಿದೆ. ಈಚಿನ ವೇದಾಂತಿಗಳ ಪ್ರಭಾವಕ್ಕೊಳಗಾದವರು ಈ ಮಾತನ್ನು ಬರೆದುಕೊಂಡಿರುಬೇಕೆಂಬುದೇ ನಿಜವೆಂದು ನನಗೆ ತೋರುತ್ತದೆ.

ಹೀಗೆ ಇನ್ನೂ ಎಷ್ಟೋ ಪಾಠಾಂತರಗಳನ್ನು ಕುರಿತು ವಿಚಾರಿಸತಕ್ಕದ್ದಿದೆಯಾದರೂ ದಿಗ್ದರ್ಶನಕ್ಕಾಗಿ ಇಲ್ಲಿ ಕೆಲವನ್ನು ಮಾತ್ರ ಪಂಡಿತರ ಎದುರಿಗೆ ಇಟ್ಟಿದ್ದೇನೆ. ಇವುಗಳನ್ನು ಪರಿಶೀಲಿಸಿ ನಿಜವನ್ನು ಗೊತ್ತುಪಡಿಸಬೇಕಾಗಿ ವಿಚಾರಶೀಲರಾದ ಪಂಡಿತರುಗಳನ್ನು ಪ್ರಾರ್ಥಿಸುತ್ತೇನೆ.

# ಉಪಸಂಹಾರ

ಈಗಾಗಲೇ ಪೀಠಿಕೆಯು ತುಂಬಾ ದೊಡ್ಡದಾಗಿದೆ. ಇದನ್ನು ಕೇವಲ ಪ್ರಕೃತಗ್ರಂಥದ ದೃಷ್ಟಿಯಿಂದ ಮಾತ್ರವೇ ಬರೆಯದೆ ಶ್ರೀಶಂಕರರ ಪರಿಶುದ್ಧ ವೇದಾಂತಪ್ರಕ್ರಿಯೆ, ಈಗ್ಗೆ ಸಾಮಾನ್ಯಜನರಲ್ಲಿ ಈ ಬಗ್ಗೆ ಹೆಚ್ಚಾಗಿ ಹಬ್ಬಿರುವ ತಪ್ಪುಭಾವನೆ, ಅದರ ಕಾರಣಗಳು, ನನಗೆ ತೋರಿದಂತೆಯೇ ಅದಕ್ಕೆ ಪರಿಹಾರೋಪಾಯಗಳು – ಮುಂತಾದ ವಿಷಯಗಳನ್ನು ಲಕ್ಷಿಸಿ ಇಡೀ ಪ್ರಸ್ಥಾನತ್ರಯಭಾಷ್ಯಗಳನ್ನೇ ಗುರಿಪಡಿಸಿಕೊಂಡು ಇಲ್ಲಿ ಬರೆದಿರುವೆನಾದ್ದರಿಂದ ಇದರಲ್ಲಿ ಅನಿವಾರ್ಯವಾಗಿ ಕೆಲವು ಹೆಚ್ಚಿನ ವಿಷಯಗಳು ಬಂದಿರುತ್ತವೆ. ಒಟ್ಟಿನಲ್ಲಿ ಪ್ರಸ್ಥಾನತ್ರಯಭಾಷ್ಯಗಳ ನೇರವಾದ ಅಭ್ಯಾಸ, ಭಾಷ್ಯಕಾರರ ಮಾತುಗಳಿಂದಲೇ ಅದ್ವೈತತತ್ತ್ವ ಹಾಗೂ ಸಾಧನಗಳನ್ನು ತಿಳಿಸುವ ಕ್ರಮ – ಇವೆರಡೂ ಮುಖ್ಯವಾಗಿ ಈಗ್ಗೆ ಪ್ರಚಾರಕ್ಕೆ ಬರುವಂತೆ ಮಾಡುವದು ಅತ್ಯವಶ್ಯಕವಾಗಿರುವ ಕೆಲಸ. ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀಮಹಾಸ್ವಾಮಿಗಳವರು ಶ್ರೀಶಂಕರಭಗವತ್ಪಾದರ ಅಪರಾವತಾರಿಗಳೆನಿಸಿ ಶುದ್ಧಶಂಕರಪ್ರಕ್ರಿಯೆಯನ್ನೇ ಜನಗಳಲ್ಲಿ ಹರಡಲು ಕನ್ನಡ, ಇಂಗ್ಲೀಷು, ಸಂಸ್ಕೃತ ಭಾಷೆಗಳಲ್ಲಿ ಅನೇಕಗ್ರಂಥಗಳನ್ನು ರಚಿಸಿ ಇಡೀ ವೇದಾಂತಪ್ರಪಂಚಕ್ಕೇ ಮಹದುಪಕಾರ ಮಾಡಿರುತ್ತಾರೆ. ಈ ಮಹಾತ್ಮರ ದಿಗ್ದರ್ಶನದಲ್ಲಿ ನನ್ನ ಅಲ್ಪಶಕ್ತಿಗನುಸರಿಸಿ ಅಭ್ಯಾಸಮಾಡಿದ್ದರ ಫಲವಾಗಿ ನಾನು ಮನಗಂಡ ಸಂಗತಿಗಳನ್ನೇ **'ಶಂಕರ ದರ್ಶನ'**[1]ವೆಂಬೀ ಗ್ರಂಥದಲ್ಲಿ ಪ್ರತಿಪಾದಿಸುವದಕ್ಕೆ ಯತ್ನಿಸಿದ್ದೇನೆ. ಶ್ರೀಶಂಕರರ ಅನುಯಾಯಿಗಳೆಂದು ಹೇಳಿಕೊಳ್ಳುವ ಕೆಲವರಾದರೂ ನನ್ನಂತೆಯೇ ಶ್ರೀಗಳವರ ದಿಗ್ದರ್ಶನದಂತೆ ನೇರವಾಗಿ ಭಾಷ್ಯಾಭ್ಯಾಸಮಾಡಿ ಭಾಷ್ಯಪ್ರಕ್ರಿಯೆಗಳನ್ನು ಪ್ರಚಾರಮಾಡಲು ಸೊಂಟಕಟ್ಟಿದರೆ ನನ್ನ ಈ ಗ್ರಂಥರಚನೆಯ ಪ್ರಯತ್ನವು ಸಾರ್ಥಕವಾಯಿತೆಂದುಕೊಳ್ಳುತ್ತೇನೆ. ಸರ್ವಾತ್ಮಸ್ವರೂಪರಾದ ಶ್ರೀಶಂಕರರು ಸರ್ವರಿಗೂ ಸದ್ಬುದ್ಧಿಯನ್ನು ದಯಪಾಲಿಸಲೆಂದು ಬೇಡಿಕೊಂಡು ಈ ಪೀಠಿಕೆಯನ್ನು ಮುಗಿಸುತ್ತೇನೆ.

ಸೌಮ್ಯಸಂವತ್ಸರ
ಮಾರ್ಗಶಿರ ಕೃಷ್ಣ 11

**ದೇವರಾಯ ಕುಲಕರ್ಣಿ**

---

1. ಶಂಕರಾಚಾರ್ಯರವರಿಗೆ ಒಪ್ಪಾದ ವೇದಾಂತದರ್ಶನವನ್ನು ಇದರಲ್ಲಿ ತಿಳಿಸುವದರಿಂದ ಇದಕ್ಕೆ ಈ ಹೆಸರನ್ನು ಕೊಟ್ಟಿರುತ್ತೇನೆ.

# ವಿಷಯಾನುಕ್ರಮಣಿಕೆ

ಸೂಚನೆ : ಕಂಸದಲ್ಲಿ ಕೊಟ್ಟಿರುವ ಸಂಖ್ಯೆಗಳು ಪುಟಗಳನ್ನು ಸೂಚಿಸುವವು.

ಒಂದನೆಯ ಅಧ್ಯಾಯ

**(ಮಂಗಳಾಚರಣೆ – ಪ್ರಮಾಣಗ್ರಂಥಗಳ ನಿರ್ಣಯ)**

ಶ್ರೀ ಆದಿಶಂಕರಾಚಾರ್ಯರ ಸ್ತುತಿ (1)– ಪೂರ್ವಗುರುಗಳ ಸ್ಮರಣೆ (2)– ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ಸ್ಮರಣೆ (3)– ಸರ್ವಜ್ಞ ಮಹಾಕವಿಯ ಸ್ತುತಿ (4)– ಶ್ರೀದತ್ತಗುರುಸ್ತುತಿ (5)– ಬ್ರಹ್ಮಜ್ಞರಿಗೆ ವಂದನೆ (6)– ಅರಿಕೆ (6)– ಜಿಜ್ಞಾಸುಗಳಿಗೆ ಸೂಚನೆ (8)– ಆಚಾರ್ಯರ ಚರಿತ್ರೆಯ ಸ್ಥಾನ (8)– ಸಾಂಪ್ರದಾಯಿಕಗ್ರಂಥಗಳ ನಿರ್ಣಯ (8)– ವಾರ್ತಿಕಪ್ರಸ್ಥಾನ (9)– ಪ್ರಕರಣಗ್ರಂಥಗಳ ಸ್ಥಾನ (9)– ವ್ಯಾಖ್ಯಾನಪ್ರಸ್ಥಾನಗಳ ಸ್ಥಾನ (ಪಂಚಪಾದಿಕೆ) (10)– ಭಾಮತೀ (11)– ಉಪವ್ಯಾಖ್ಯಾನಗಳ ಸ್ಥಾನ (12)– ಭಾಷ್ಯದ ಹೆಚ್ಚಳ (14)–
ಪುಟ 1–14

ಎರಡನೆಯ ಅಧ್ಯಾಯ

**(ಸಿದ್ಧಾಂತದ ರೂಪರೇಖೆ)**

ಶಾಸ್ತ್ರಪ್ರಾಮಾಣ್ಯ (17)– ಅನುಭವದ ಸ್ವರೂಪ (20)– ಬುದ್ಧಿಯ ಉಪಯೋಗ (22)– ಪ್ರಮಾಣದ ಕೃತ್ಯ (23)– ಅಧ್ಯಾರೋಪ ಅಪವಾದ (25)–
ಪುಟ 15–30

ಮೂರನೆಯ ಅಧ್ಯಾಯ

**(ಅಧ್ಯಾಸ)**

ಆಕ್ಷೇಪ (32)– ಉತ್ತರ (33)– ಹೆಸರು–ಕಾರ್ಯ ಪರಿಹಾರದ ಉಪಾಯ (34)– ಅವಿದ್ಯೆ (35)– ಅವಿದ್ಯೆಗೆ ಕಾರಣವೇನು (37)– ಅವಿದ್ಯೆ ಯಾರಿಗೆ ? (38)– ಅವಿದ್ಯೆಗೆ ಪ್ರಮಾಣವೇನು? (39)– ಅವಿದ್ಯಾಕಾರ್ಯ (40)– ಮಾಯೆ (40)– ಮಾಯೆಯ ವ್ಯಕ್ತಾವ್ಯಕ್ತತ್ವ (40)– ಮಾಯೆಯ ಅನಿರ್ವಚನೀಯತ್ವ (42)– ಮಾಯೆಯ ಅವಿದ್ಯಾಕಲ್ಪಿತತ್ವ (42)– ಅಜ್ಞರಿಗೆ ಮೋಹಕಾರಕ (43)– ಜೀವೇಶಭೇದ (44)– ಈಶಜೀವ ವ್ಯವಹಾರವು ಅಧ್ಯಸ್ತ (45)–. ಪುಟ 30–48

ನಾಲ್ಕನೆಯ ಅಧ್ಯಾಯ

**(ಭಿನ್ನಮತಗಳು)**

ಮಂಡನಮಿಶ್ರನ ಮತ (51)– ಭಾಷ್ಯದ ಮತ (51)– ಮಂಡನನಿಂದಾದ ಪರಿಣಾಮ (52)– ಪಂಚಪಾದಿ ಕಾಮತ (53)– ಯುಕ್ತಿವಿರೋಧಗಳು (54)–

ಸಂಪ್ರದಾಯ ವಿರೋಧ (55)– ಭಾಷ್ಯವಿರೋಧ (55)– ತಪ್ಪುವಾಕ್ಯಾಯಾರ್ಥ (57)– ಅರ್ಥಾಧ್ಯಾಸವು ಭಾಷ್ಯ ಅನುಭವವಿರುದ್ಧ (53)– ಪಂಚಪಾದಿಕೆಯಲ್ಲಿ ಅರ್ಥಾಧ್ಯಾಸನಿರೂಪಣೆ (59)– ಇದರ ಪರಿಣಾಮ (60)– ಭಾಮತೀಪ್ರಸ್ಥಾನ (61)– ಬೀಜಾಂಕುರನ್ಯಾಯ (61)– ಭಾಷ್ಯವಿರೋಧ (61)– ಅವಿದ್ಯಾನಾನಾತ್ವ (62)– ಇಷ್ಟಸಿದ್ಧಿಯ ವಿಮರ್ಶೆ (64)– ಅವಿದ್ಯಾಲೇಶವಾದ (64)– ಶ್ರುತಿಭಾಷ್ಯಗಳಿಗೆ ವಿರೋಧ (66)– ಪ್ರಾರಬ್ಧವಿಚಾರ (66)– ಇದರ ಪರಿಣಾಮ (66)– ಈಗಿನ ಸ್ಥಿತಿ (66)– ಅನಿರ್ವಚನೀಯತತ್ತ್ವ (67)– ಅಜ್ಞಾನ ನಾಶಕ್ಕೆ ತರ್ಕ (67)– ಅನುಭವವಿರೋಧ (68)–. ಪುಟ 49–70

## ಐದನೆಯ ಅಧ್ಯಾಯ

### (ವಿವರಣಪ್ರಸ್ಥಾನ)

ಪ್ರತಿಬಿಂಬವಾದಸಮರ್ಥನೆ (71)– ಪಾತಂಜಲಯೋಗದ ಮಿಶ್ರಣ (72)– ಭಾಷ್ಯಾಭಿಪ್ರಾಯ (72)– ತಾರ್ಕಿಕರ ಮತ (73)– ತಾರ್ಕಿಕರ ಅನುಸರಣೆ (74)– ಮುಂದಿನ ವೇದಾಂತದ ಸ್ಥಿತಿ (75)– ಸಾಮಾನ್ಯಬೋಧಪರ ಗ್ರಂಥಗಳು (75)– ಪ್ರಚಲಿತ ವೇದಾಂತ (ಜೀವ–ಈಶವಿಭಾಗ) (76)– ಅಜ್ಞಾನಾದಿಸಪ್ತಾವಸ್ಥೆಗಳು (78)– ಈ ಬೊಧೆಯಲ್ಲಿಯ ದೋಷ (ಈಶತ್ವ–ಜೀವತ್ವ) (79)– ಸಪ್ತಾವಸ್ಥೆಗಳ ವಿಮರ್ಶೆ (79)– ಶ್ರೀಗಳವರ ಉಪಕಾರ (80)– ಪ್ರಕೃತವಿಚಾರ (83)–.

ಪುಟ 71–83

## ಆರನೆಯ ಅಧ್ಯಾಯ

### (ತರ್ಕ – ಭೌತಿಕವಿಜ್ಞಾನ)

ವೇದಾಂತದಲ್ಲಿ ತರ್ಕದ ಸ್ಥಾನ (84)– ತರ್ಕದ ಪ್ರಕಾರಗಳು (85)– ಪ್ರಮಾಣತರ್ಕ (86)– ತರ್ಕಕ್ಕೆ ಕೊನೆಯಿಲ್ಲ (88)– ಹಿಂದಿನ ತಾರ್ಕಿಕರು (89)– ಪಾಶ್ಚಾತ್ತ್ಯಪದ್ಧತಿ (90)– ಆಧುನಿಕ ವಿಜ್ಞಾನಶಾಸ್ತ್ರ (90)– ವಿಜ್ಞಾನಶಾಸ್ತ್ರದ ದೋಷಗಳು (91)– ಪ್ರಮಾಣತರ್ಕದ ಉಪಸಂಹಾರ (93)– ಶ್ರೌತತರ್ಕ (94)– ಶ್ರೌತತರ್ಕದ ಸ್ವರೂಪ (94)– ಶ್ರೌತತರ್ಕದ ವೈಶಿಷ್ಟ (95)– ಶ್ರೌತತರ್ಕದ ನಮೂನೆಗಳು (96)– ಶ್ರೌತತರ್ಕಗಳ ರಹಸ್ಯ (97)– ಶ್ರೌತತರ್ಕವು ಅಬಾಧ್ಯ (98)– ಪ್ರಮಾಣತರ್ಕದ ಎಲ್ಲೆಕಟ್ಟು (99)– ಪ್ರಮಾಣತರ್ಕಕ್ಕೆ ಉದಾಹರಣೆ (99)– ಭಾಷ್ಯದಲ್ಲಿ ತರ್ಕದ ಸ್ಥಾನ (100)– ಮುಂದಿನ ಸ್ಥಿತಿ (101)– ಶ್ರೀಗಳವರ ಉಪಕಾರ (101)–. ಪುಟ 84–102

## ಏಳನೆಯ ಅಧ್ಯಾಯ

### (ಆತ್ಮವಿಜ್ಞಾನದಿಂದಲೇ ಮೋಕ್ಷ)

ಆತ್ಮವಿಜ್ಞಾನಕ್ಕೆ ಸಾಧನಗಳು (104)– ಉತ್ತಮಾಧಿಕಾರಿಯ ಲಕ್ಷಣ (105)– ಮಧ್ಯಮಾಧಿಕಾರಿಯ ಲಕ್ಷಣ (106)– ಶ್ರವಣದ ಸ್ವರೂಪ (106)– ಅವಸ್ಥಾತ್ರಯ ವಿವೇಕ (107)– ಎಲ್ಲವೂ ಓಂಕಾರವೇ (108)– ವೈಶ್ವಾನರಪಾದ (ಸಾಮಾನ್ಯಗ್ರಹಿಕೆ) (109)– ವೇದಾಂತದ ದೃಷ್ಟಿ (109)– ಅವಸ್ಥೆಯ ವೈಶಾಲ್ಯ (110)– ಸಪ್ತಾಂಗಗಳು (111)– ಹತ್ತೊಂಬತ್ತು ಮುಖಗಳು (112)– ಈಚಿನ ವೇದಾಂತ (112)– ವೈಶ್ವಾನರನೇ ತುರೀಯನು (113)– ತೈಜಸಪಾದ (ಆರೋಪದೃಷ್ಟಿ) (115)– ಅಪವಾದದೃಷ್ಟಿ (116)– ಎಚ್ಚರದ ಆಕ್ಷೇಪ (117)– ಕನಸಿನ ಪರಿಹಾರ (118)– ವಾಸನಾದಿಗ್ರಹಿಕೆಗಳು (119)– ಉಪಸಂಹಾರ (121)–. ಪುಟ 103–123

## ಎಂಟನೆಯ ಅಧ್ಯಾಯ

### (ಪ್ರಾಜ್ಞಪಾದ)

ಆನಂದಮಯ (126)– ಆನಂದಭುಕ್ (127)– ಚೇತೋಮುಖಃ (128)– ಪ್ರಾಜ್ಞಃ (129)– ಸರ್ವೇಶ, ಸರ್ವಜ್ಞ ಅಂತರ್ಯಾಮಿ, ಭೂತಯೋನಿ – ಇವುಗಳ ಅರ್ಥ (130)– ವಿಶ್ವಾದಿಗಳು ಮೂವರಲ್ಲ, ಒಬ್ಬನೇ (131)– ಈಗಲೇ ದೇಹದಲ್ಲಿ ಮೂರೂ ಇವೆ (132)– ಅಪವಾದಪ್ರಕ್ರಿಯೆ (132)– ತುರ್ಯವು ನಿಷ್ಪ್ರಯೋಜಕವಸ್ತುವಲ್ಲ (133)– ಮೂರವಸ್ಥೆಗಳಿಗಿಂತ ಬೇರೆಯಲ್ಲ (133)– ತುರೀಯಪಾದ (135)– ಆಕ್ಷೇಪ, ಸಮಾಧಾನ (135–136)– ಉಪನಿಷತ್ತು (136)– ಏಕಾತ್ಮಪ್ರತ್ಯಯಸಾರ (136)– ಸಾಮಾನ್ಯವಿಶೇಷಭಾವಗಳು (139)– ಕಾರಣಾವಿದ್ಯೆ – ಕಾರ್ಯಾವಿದ್ಯೆ (140)– ಇದು ಮೂಲಾವಿದ್ಯೆ ಅಥವಾ ಕಾರಣಶರೀರವಲ್ಲ (140)– ಶಂಕೆ (141)– ಪರಿಹಾರ (ಶುದ್ಧ ಬ್ರಹ್ಮ, ಪ್ರಾಜ್ಞ, ಸರ್ವೇಶ್ವರ, ಅವ್ಯಾಕೃತಾತ್ಮ, ಈಶ್ವರ) (142)– ತುರೀಯ–ಪ್ರಾಜ್ಞರಲ್ಲಿಯ ಸಾಮಾನ್ಯವಿಶೇಷಗಳು (144)– ವ್ಯಾಖ್ಯಾನಪ್ರಸ್ಥಾನದವರ ಮತ (145)– ಭಾಷ್ಯಕಾರರ ಮತ (142)– ಆಕ್ಷೇಪ–ಸಮಾಧಾನ (143)– ಶ್ರುತಿಯ ಅಭಿಪ್ರಾಯ (145)– ಸಮಾಧಿಕಲ್ಪನೆ ವ್ಯರ್ಥ (147)– ತುರೀಯನ ಜ್ಞಾನ (147)–.

ಪುಟ 124–148

## ಒಂಬತ್ತನೆಯ ಅಧ್ಯಾಯ

### (ತುರೀಯಪ್ರತಿಪತ್ತಿ)

ಪ್ರಮಾತೃತ್ವನಿರಾಕರಣೆ (149)– ಅಗ್ರಹಣನಿರಾಕರಣೆ (150)– ಬೀಜಸದ್ಭಾವ ನಿರಾಕರಣೆ (150)– ಅನೇಕಾತ್ಮತ್ವನಿರಾಕರಣೆ (150)– ಸ್ಥಾನಿಧರ್ಮ ಸದ್ವಿತೀಯತ್ವ ನಿರಾಕರಣೆ (152)– ಮನನದ ಸ್ವರೂಪ (152)– ಮನನದ ಫಲ

(153)– ಮನನಕ್ಕೆ ತಕ್ಕ ಸ್ಥಿತಿ (153)– ನಿದಿಧ್ಯಾಸನದ ಅವಶ್ಯಕತೆ (154)– ಸಾಂಖ್ಯಯೋಗಗಳ ಅರ್ಥ (154)– ವೈದಿಕಧ್ಯಾನದ ಬಗೆ (155)– ಆಸನ (156)– ಸ್ಥಲ (156)– ಸಂನ್ಯಾಸ (157)– ಆಹಾರಾದಿನಿಯಂತ್ರ (157)– ಧ್ಯಾನದ ಸ್ವರೂಪ (158)– ಆತ್ಮಸತ್ಯ ನುಬೋಧ (159)– ಧ್ಯಾನದ ಫಲ (159)– ಪ್ರತಿಬಂಧಗಳು (160)– ವಿಕ್ಷೇಪ (160)– ಲಯ (160)– ಕಷಾಯ (161)– ರಸಾಸ್ವಾದ (163)– ಅಧ್ಯಾತ್ಮಯೋಗ (163)– ವಿಷಯಗಳಿಗೆ ಇಂದ್ರಿಯವೇ ಆತ (164)– ಇಂದ್ರಿಯಗಳಿಗೆ ಮನಸ್ಸೇ ಆತ್ಮ (164)– ಮನಸ್ಸಿಗೆ ಬುದ್ಧಿಯೇ ಆತ್ಮ (164)– ಬುದ್ಧಿಗೆ ಅಹಂಕಾರವೇ ಆತ್ಮ (164)–ಅಹಂಕಾರಕ್ಕೆ ತಾನೇ ಆತ್ಮ (164)– ಆತ್ಮನನ್ನು ತಿಳಿಯುವದರ ಅರ್ಥ (165)– ನಿದಿಧ್ಯಾಸನದ ಬಗೆ (167)–. ಪುಟ 149–168

## ಹತ್ತನೆಯ ಅಧ್ಯಾಯ

### (ಜ್ಞಾನನಿಷ್ಠೆ)

ತಪ್ಪುಗ್ರಹಿಕೆಗಳು (164)– ಸರಿಯಾದ ಅರ್ಥ (171)– ತುರೀಯದ ಅರ್ಥ (171)– ಸಮಾಧಿಯ ಅರ್ಥ (171)– ಯೋಗದ ಅರ್ಥ (1171)– ಸಾರಾಂಶ (173)– ಜ್ಞಾನದ ಮಹತ್ವ (175)– ಜ್ಞಾನನಿಷ್ಠೆ (178)– ನಿಷ್ಠಾಸಾಧನ (180)– ನಿಷ್ಠೆಯ ಫಲ (181)– ಪುಟ 169–183

## ಹನ್ನೊಂದನೆಯ ಅಧ್ಯಾಯ

### (ಜ್ಞಾನಿಗಳ ಇರವು)

ಸಾಧನ ಹಾಗೂ ಸಾಧ್ಯ (185)– ನೇರಸಂನ್ಯಾಸ (186)– ಕ್ರಮಸಂನ್ಯಾಸ (187)– ಗೃಹಸ್ಥಾಜ್ಞಾನಿಗಳು (187)– ಮುಕ್ತಿಜ್ಞಾನಗಳು ಸಮಾನ (187)– ಈಗಲೂ ಜ್ಞಾನವಾಗುವದು ಸಾಧ್ಯ (189)– ಆಕ್ಷೇಪ–ಸಮಾಧಾನ (198)– ತಪ್ಪುಗ್ರಹಿಕೆಗಳು (190)– ಜ್ಞಾನಿ ಎಂದರೇನು? (191)– ಪ್ರಾರಬ್ಧವಿಚಾರ (192)– ನಿಷಿದ್ಧಾಚರಣೆ ಸಲ್ಲದು (193)– ಸುರೇಶ್ವರರ ವಚನ (194)– ಪುರಾಣಗಳ ಅರ್ಥ (195)– ಪ್ರಾರಬ್ಧನಿಮಿತ್ತಗಳು (195)– ತಪ್ಪುಗ್ರಹಿಕೆಗಳು (196)– ಛಾಂದೋಗ್ಯದ ಸಂದರ್ಭ (197)– ವಿಪರೀತ ಗ್ರಹಿಕೆ (199)– ಸಾರಾಂಶ (200)–. ಪುಟ 184–201

## ಹನ್ನೆರಡನೆಯ ಅಧ್ಯಾಯ

### (ಉಪಾಸನೆ)

ವೇದ, ಉಪಾಸ್–ಶಬ್ದಗಳು (202)– ಉಪಾಸನೆ ಎಂದರೇನು ? (203)– ಅಕ್ಷರೋಪಾಸನೆ (204)– ಕರ್ತೃತಂತ್ರದ ಉಪಾಸನೆಗಳು (204)– ಓಂಕಾರೋಪಾಸನೆ (205)– ಭಕ್ತಿಯ ಬಗೆ (208)– ಜೀವರ ಸಹಜಸ್ವಭಾವ (209)– ಇಂದಿನ ಸ್ಥಿತಿ (210)– ಕಾಮ್ಯಭಕ್ತಿ (212)– ನಿಷ್ಕಾಮಕ್ಕೆ ದಾರಿ (217)– ವಿಶ್ವರೂಪ ಉಪಾಸನೆ (214)– ಜ್ಞಾನಿಭಕ್ತರ ಚರ್ಯೆ (215)– ಭಕ್ತಿಯು ಸುಲಭ

(219)– ಭಕ್ತಿ ಇಲ್ಲದಿದ್ದರೆ ವ್ಯರ್ಥ (219)– ಶ್ರೀಗಳ ಉಪಕಾರ (221)– ಪ್ರಕೃತವಿಚಾರ (222)–. ಪುಟ 201–222

## ಹದಿಮೂರನೆಯ ಅಧ್ಯಾಯ

### (ಕರ್ಮಯೋಗ)

ಗೀತೆಯ ಮೂರು ಮರ್ಮಗಳು (223)– ನಿವೃತ್ತಿಲಕ್ಷಣಧರ್ಮ (224)– ಪ್ರವೃತ್ತಿಲಕ್ಷಣಧರ್ಮ (225)– ಯೋಗಶಬ್ದಾರ್ಥ (226)– ಕರ್ಮ, ವಿಕರ್ಮ, ಅಕರ್ಮ (227)– ಕರ್ಮಯೋಗ (228)– ಫಲತ್ಯಾಗ, ಸಮತ್ವಬುದ್ಧಿ, ಈಶ್ವರಾರ್ಪಣ (229)– ಸಂನ್ಯಾಸ–ಯೋಗ (230)– ಜ್ಞಾನಿಯ ಸಹಜತೆ, ಸಾಧಕನ ಸಾಧನೆ (235)–. ಪುಟ 223–238

## ಹದಿನಾಲ್ಕನೆಯ ಅಧ್ಯಾಯ

### (ಸಾಧಕರಿಗೆ ಕಿವಿಮಾತು)

ವೇಷದ ಗುರು (243)– ಲೇಸಾದ ಗುರು (244)– ಸಾಧಕರ ಕರ್ತವ್ಯ (246)– ಚಿತ್ತಶುದ್ಧಿಗೆ ಸಾಧನ (243)– ನಿತ್ಯಕರ್ಮಾದಿಗಳನ್ನು ಬಿಡಲಾಗದು (249)– ನೋಡಬೇಕಾದ ಗ್ರಂಥಗಳು (250)– ಕೊನೆಯ ಮಾತು (249)–.
ಪುಟ 239–251

## ಹದಿನೈದನೆಯ ಅಧ್ಯಾಯ

### (ಉಪಸಂಹಾರ)

ಭಾಷ್ಯದ ಸ್ತುತಿ (252)– ಭಾಷ್ಯಕಾಲದ ಸ್ಥಿತಿ (253)– ಇಂದಿನ ಸ್ಥಿತಿ (255)– ನಿವೇದನೆ (257)– ಫಲಶ್ರುತಿ (264)– ಮಮಗಲ (265)–.
ಪುಟ 252–269

ಗ್ರಂಥಸಾರ ಪುಟ 270–341

———————

# ಈ ಗ್ರಂಥದಲ್ಲಿ ಬಂದಿರುವ ಕಠಿಣಶಬ್ದಗಳ ಅರ್ಥ

ಅಧ್ಯಸ್ತ = ತಪ್ಪು ತಿಳಿವಳಿಕೆಯಿಂದ ಹುಟ್ಟುಗಟ್ಟಿದ್ದು
ಅವಗಡಿಸು = ಅವಸರಪಡು
ಈಸು = ಇಷ್ಟು
ಈಹೆ = ಇಚ್ಛೆ
ಉದ್ದರಿ = ಸಾಲ
ಐಸಲೇ = ಹಾಗೇ
ಒದರಿ = ಝಾಡಿಸಿ
ಕೂರ್ಮೆ = ಪ್ರೇಮ
ಕೆಂಚ = ಅನಾಗರಿಕ
ಕೇಣ = ಮಿತಿ
ಗತ್ತು = ಧೋರಣೆ
ಗೋಮು = ಕುಂದು
ಚಾಗ = ತ್ಯಾಗ
ತತಿ = ಸಾಲು
ತರಬು = ಅಡ್ಡಗಟ್ಟು
ನುರಿಸು = ಅರಗಿಸು
ನೆಗಳೆ = ಮಾಡುತ್ತಿರಲಾಗಿ
ಪಾಕ್ಷಿಕ = ಅಪೂರ್ಣ
ಬಟ್ಟೆ = ದಾರಿ
ಬೀತು = ಬೇರುಸಹಿತ
ಬೀಯ = ಆಹಾರ (ವ್ಯಾಖ್ಯಾನಕಾರರಿಗೆ ಆಹಾರದೋಪಾದಿ ಯಲ್ಲಿರುವ, ಪುಟ 47)
ಬೇತು = ಉಪಾಯ
ಬೇಹಾರ = ವ್ಯವಹಾರ
ವಿಗಡತನ = ಕೇಡಿಗತನ
ಸುಮ್ಮಾನ = ಸುಮ್ಮನಿರುವಿಕೆ
ಸೋಹೆ = ಗುರುತು
ಸ್ರಷ್ಟೃತ್ವ = ಹುಟ್ಟಿಸುವಿಕೆ
ಹುಲು = ಅಲ್ಪ

# ಸಂಕೇತಾಕ್ಷರಗಳ ವಿವರಣೆ

| | |
|---|---|
| ಅ. ಭಾ.<br>ಅಧ್ಯಾ. ಭಾ. | ಅಧ್ಯಾಸಭಾಷ್ಯ, ಬ್ರಹ್ಮಸೂತ್ರಕ್ಕೆ ಶ್ರೀಶಂಕರಾಚಾರ್ಯರು ಬರೆದಿರುವ ಅವತರಣಿಕೆ. |
| ಈಶ. | ಈಶಾವಾಸ್ಯೋಪನಿಷತ್ತು. |
| ಐತ. | ಐತರೇಯೋಪನಿಷತ್ತು |
| ಐ. ಭಾ. | ಐತರೇಯೋಪನಿಷತ್ತಿನ ಶಾಂಕರಭಾಷ್ಯ |
| ಐ. ಅವ. ಭಾ. | ಐತರೇಯ ಅವತರಣಿಕಾಭಾಷ್ಯ |
| ಕ.<br>ಕಾ. | ಕಠೋಪನಿಷತ್ತು. |
| ಕ. ಭಾ.<br>ಕಠ. ಭಾ. | ಕಠೋಪನಿಷತ್ತಿನ ಶಾಂಕರಭಾಷ್ಯ |
| ಕೇ. | ಕೇನೋಪನಿಷತ್ತು. |
| ಕೇ. ಭಾ. | ಕೇನೋಪನಿಷತ್ತಿನ ಶಾಂಕರಭಾಷ್ಯ |
| ಗೀ. | ಭಗವದ್ಗೀತೆ. |
| ಗೀ. ಅವ. | ಭಗವದ್ಗೀತಾ ಅವರತಣಿಕೆ |
| ಗೀ. ಭಾ. | ಭಗವದ್ಗೀತಾ ಶಾಂಕರಭಾಷ್ಯ |
| ಗೌ. ಮಾಂ. ಕಾ. | ಗೌಡಪಾದರ ಮಾಂಡೂಕ್ಯಕಾರಿಕೆಗಳು. |
| ಛಾಂ. | ಛಾಂದೋಗ್ಯೋಪನಿಷತ್ತು. |
| ಛಾಂ. ಅವ. | ಛಾಂದೋಗ್ಯ ಅವತರಣಿಕೆ. |
| ತೈ. ಭಾ. | ತೈತ್ತಿರೀಯೋಪನಿಷತ್ತಿನ ಶಾಂಕರಭಾಷ್ಯ. |
| ತೈ. ವಾರ್ತಿಕ | ತೈತ್ತಿರಿಯ ವಾರ್ತಿಕ (ಸುರೇಶ್ವರವಿರಚಿತ) |
| ನೈ. ಸಿ. | ನೈಷ್ಕರ್ಮ್ಯಸಿದ್ಧಿ. (ಸುರೇಶ್ವರವಿರಚಿತ) |
| ಪಂ. | ಪಂಚದಶೀ |
| ಪ್ರಶ್ನ. | ಪ್ರಶ್ನೋಪನಿಷತ್ತು. |
| ಪ್ರ. ಭಾ. | ಪ್ರಶ್ನೋಪನಿಷತ್ತಿನ ಶಾಂಕರಭಾಷ್ಯ. |
| ಬೃ. | ಬೃಹದಾರಣ್ಯಕೋಪನಿಷತ್ತು |
| ಬೃ ಭಾ. | ಬೃಹದಾರಣ್ಯಕೋಪನಿಷತ್ತಿನ ಶಾಂಕರಭಾಷ್ಯ. |
| ಬೃ. ಸಂ. ವಾ. | ಬೃಹದಾರಣ್ಯಕ ಸಂಬಂಧವಾರ್ತಿಕ (ಸುರೇಶ್ವರವಿರಚಿತ) |
| ಭ. ಗೀ. | ಭಗವದ್ಗೀತಾ. |

| | |
|---|---|
| ಭ. ಗೀ. ಉ. | ಭಗವದ್ಗೀತೆಯ ಉಪನ್ಯಾಸಗಳು. |
| ಭಾ.ಭಾ. | ಭಾಷ್ಯ ಭಾಗ. |
| ಮಾಂ. | ಮಾಂಡೂಕ್ಯೋಪನಿಷತ್ತು. |
| ಮಾಂ. ಕಾ. | ಮಾಂಡೂಕ್ಯಕಾರಿಕೆಗಳು |
| ಮಾಂ. ಕಾ. ಭಾ. | ಮಾಂಡೂಕ್ಯಕಾರಿಕಾ ಶಾಂಕರಭಾಷ್ಯ. |
| ಮಾಂ. ರ.ವಿ. | ಮಾಂಡೂಕ್ಯರಹಸ್ಯವಿವೃತ್ತಿಃ ಎಂಬ ಸಂಸ್ಕೃತಗ್ರಂಥ. |
| ಮುಂ. | ಮುಂಡಕೋಪನಿಷತ್ತು |
| ಮುಂ. ಭಾ. | ಮುಂಡಕೋಪನಿಷತ್ತಿನ ಶಾಂಕರಭಾಷ್ಯ. |
| ವೇ. ಪ್ರ. ಪ್ರ. | ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ – ಎಂಬ ಸಂಸ್ಕೃತಗ್ರಂಥ. |
| ಶಾಂ. ವೇ. ಪ್ರ. | ಶಾಂಕರವೇದಾಂತಪ್ರಕ್ರಿಯೆ, |
| ಶಾಂ. ವೇ. ಸಾರ | ಶಂಕರವೇದಾಂತಸಾರ. |
| ಶ್ವೇ. | ಶ್ವೇತಾಶ್ವತರೋಪನಿಷತ್ತು. |
| ಸ. ಸ. ಉ. | ಶಂಕರಭಗವತ್ಪಾದರವರ ಸರ್ವಸಮ್ಮತೋಪದೇಶಗಳು. |
| ಸೂ. ಭಾ. / ಬ್ರ. ಸೂ.ಭಾ. | ಬ್ರಹ್ಮಸೂತ್ರಶಾಂಕರಭಾಷ್ಯ. |

॥ ಓಮ್ ॥

# ಶಂಕರದರ್ಶನ

## (ಬ್ರಹ್ಮಜ್ಞ ವಚನಗಳು)

## (ತ್ರಿಪದಿ)

* * *

## ಒಂದನೆಯ ಅಧ್ಯಾಯ

### ಮಂಗಳಾಚರಣೆ – ಪ್ರಮಾಣಗ್ರಂಥಗಳ ನಿರ್ಣಯ

### ಶ್ರೀ ಆದಿಶಂಕರಾಚಾರ್ಯರ ಸ್ತುತಿ

ಆದಿಶಂಕರರಡಿಗೆ । ಆದರದಿ ವಂದಿಸುವೆ
ಮೋದದಲಿ ಭಾಷ್ಯ ರಚಿಸುತ್ತ । ವೇದಾಂತ
ಬೋಧೆ ಗೈದಿಹರು । ಬ್ರಹ್ಮಜ್ಞ ॥ 1 ॥

ಹತ್ತು ಶ್ರುತಿಶಿರ ಮೇಣು । ಸೂತ್ರಗಳು ವ್ಯಾಸಕೃತ
ಮತ್ತಿನ್ನು ಗೀತೆ ಇವು ಮೂರು ಗ್ರಂಥಗಳು
ಪ್ರಸ್ಥಾನವೆಂದ । ಬ್ರಹ್ಮಜ್ಞ ॥ 2 ॥

ಪ್ರಸ್ಥಾನ[1] ಮೂರಕ್ಕೆ । ವಿಸ್ತರದ ವ್ಯಾಖ್ಯಾನ
ಸತ್ಯವನು ತೋರಿ ಅನುಭವದಿ ನಿಲಿಸುವದ–
ಕುತ್ತಮದ ಬರಹ । ಬ್ರಹ್ಮಜ್ಞ ॥ 3 ॥

ಕಾಶಕೃತ್ಸ್ನ ದ್ರವಿಡ । ದೇಶಿಕೇಂದ್ರರು ಗೌಡ
ವ್ಯಾಸ ಶುಕ ಮೊದಲು ಉಪವರ್ಷರೀ ಪಥದ
ಶಾಶ್ವತದ ಬರಹ । ಬ್ರಹ್ಮಜ್ಞ ॥ 4 ॥

ಇಂಥ ಭಾಷ್ಯವ ರಚಿಸಿ । ಪಂಥ ತಪ್ಪದೆ ನಿಲಿಸಿ
ಶಾಂತಿಪಥ ತೋರ್ದ ಗುರುವರ್ಯ ಶಂಕರ–
ನೆಂತು ಬಣ್ಣಿಪುದು । ಬ್ರಹ್ಮಜ್ಞ ॥ 5 ॥

---

1. ಪ್ರಸ್ಥಾನ ಎಂದರೆ ಹೊರಡುವದು ಎಂದರ್ಥ. ಇಲ್ಲಿ ಜೀವ, ಈಶ, ಜಗತ್ತುಗಳ ತತ್ತ್ವವನ್ನು ನಿರ್ಣಯಿಸುವದಕ್ಕೆ ಹೊರಟಿರುವ ಗ್ರಂಥಗಳು ಎಂದರ್ಥ.

ಈ ಭಾಷ್ಯವೇ ಮೂಲ । ಶೋಭೆ ಅದ್ವೈತಕ್ಕೆ
ಈ ಭೂಮಿಯೊಳಗೆ ಇದು ಮಾನ್ಯ । ಶಂಕರರ
ಈ ಭವ್ಯಬರಹ । ಬ್ರಹ್ಮಜ್ಞ ॥ 6 ॥

ಭಾಷ್ಯರೂಪದಿ ನಮಗೆ । ದರ್ಶನವನಿತ್ತಿಹರು
ಭಾಷ್ಯವನೆ ಹಿಡಿದು ಹೇಳುವದೆ । ಈ ಕೃತಿಯ
ಆಶಯವು ಕೇಳಿ । ಬ್ರಹ್ಮಜ್ಞ ॥ 7 ॥

ಅದರಿಂದೆ ಈ ಕೃತಿಗೆ । ಬುಧರು ನಲಿವಂದದಲಿ
ಒದಗಿಹುದು ನಾಮ **ಶಂಕರರ ದರ್ಶನವು**[1]
ವಿದುಷರಿದನರಿಗು । ಬ್ರಹ್ಮಜ್ಞ ॥ 8 ॥

ಶಂಕರರ ದರ್ಶನಕೆ । ಶಂಕರರೆ ಪ್ರೇರಕರು
ಕಿಂಕರನು ನಾನು ಬರೆಯುವೆನು ಎಂಬುದೊಣ –
ಬಿಂಕವೇ ಅಹುದು । ಬ್ರಹ್ಮಜ್ಞ ॥ 9 ॥

ಇನ್ನೊಮ್ಮೆ ಶಂಕರರ । ಘನ್ನಪದಗಳಿಗೆರಗಿ
ಎನ್ನಿಂದೆ ಬರೆಸಿ ಕೈಪಿಡಿದು ನೀವೆಂದು
ಬಿನ್ನಹವ ಗೈವೆ । ಬ್ರಹ್ಮಜ್ಞ ॥ 10 ॥

## ಪೂರ್ವಗುರುಗಳ ಸ್ಮರಣೆ

ಆದಿಯಲಿ ವೇದಾಂತ । ಬೋಧೆಯನು ಎನಗಿತ್ತು
ಹಾದಿಯನು ತೋರಿ ಕಲಿಸಿರುವ ಗುರುಗಳನು
ಮೋದದಲಿ ನೆನೆವೆ । ಬ್ರಹ್ಮಜ್ಞ ॥ 11 ॥

ಗ್ರಾಮ ಹೊಂಬಳದಲ್ಲಿ । ನಾಮ ಶಂಕರರೆಂದು
ಸೀಮೆಗೇ ಗೊತ್ತು ಇವರಗ್ನಿಹೋತ್ರಿಗಳು[2]
ಈ ಮಹಾತುಮರು । ಬ್ರಹ್ಮಜ್ಞ ॥ 12 ॥

ಪಂಚದಶಿ ಮುಂತಾದ । ಮುಂಚಿನಾ ಗ್ರಂಥಗಳ
ಹಂಚಿಕೆಯ ಮೇಲೆ ತಿಳಿಸಿದರು । ಗುರುಗಳೀ
ಕೆಂಚನನು ಕರೆದು । ಬ್ರಹ್ಮಜ್ಞ ॥ 13 ॥

---

1. ಈ ಗ್ರಂಥಕ್ಕೆ 'ಶಂಕರದರ್ಶನ' ವೆಂದು ಹೆಸರು.
2. ಧಾರವಾಡ ಜಿಲ್ಲೆ ಗದಗ ತಾಲ್ಲೂಕ್ ಹೊಂಬಳ ಗ್ರಾಮದವರಾದ ಸದ್ಗುರು ಶ್ರೀಶಂಕರಭಟ್ಟ ಅಗ್ನಿಹೋತ್ರಿಗಳು.

ಸಚ್ಚಿದಾತ್ಮರು[1] ಪೇಳ್ದ । ಉಚ್ಚತಮ ಬೋಧೆಯಾ
ಹೆಚ್ಚಳವನರಿಯೆ ಅಡಿಪಾಯವಾಯ್ತಿವರ
ಮೆಚ್ಚಿನುಪದೇಶ । ಬ್ರಹ್ಮಜ್ಞ ॥ 14 ॥

ಮರೆಯೆ ನಾನಿವರನ್ನು । ಗುರುಗಳೆನಗಾದುದನು
ಬರಿ ಜರೆವ ಜನರ ಮಾತೇನು ? ಗುರುಗಳಾ
ಚರಣಕ್ಕೆ ನಮಿಪೆ । ಬ್ರಹ್ಮಜ್ಞ ॥ 15 ॥

## ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ಸ್ಮರಣೆ

ಸಚ್ಚಿದಾನಂದೇಂದ್ರ । ಉಚ್ಚತಮ ಯತಿವರರು
ಮೆಚ್ಚುತ್ತ ಬೋಧೆ ನೀಡಲ್ಕೆ । ಭಾಷ್ಯದಾ
ಹೆಚ್ಚಳವ ಕಂಡೆ । ಬ್ರಹ್ಮಜ್ಞ ॥ 16 ॥

ಕನ್ನಡದ ಕುವರರಿಗೆ । ಸನ್ನುತದ ಭಾಷ್ಯವನು
ಕನ್ನಡಿಸಿಕೊಟ್ಟ ಯತಿಚಕ್ರವರ್ತಿಗಳು
ಪುಣ್ಯಾತ್ಮರಿವರು । ಬ್ರಹ್ಮಜ್ಞ ॥ 17 ॥

ಹಿಂದೆ ಓದಿದ ವಿದ್ಯೆ । ಅಂದು ಪೂರ್ಣವದಾಯ್ತು
ಒಂದುದಿನ ಶರಣುಬಂದಿವರ ಚರಣಕ್ಕೆ
ವಂದಿಸುತ ನಿಲಲು । ಬ್ರಹ್ಮಜ್ಞ ॥ 18 ॥

ಶಾಂತಿಪಾಠವ ಹಾಡಿ । ಭ್ರಾಂತಿಸಂಶಯ ಕಳೆದು
ಸಂತಸದಿ ಭಾಷ್ಯ ಹೇಳುತ್ತ । ಗುಟ್ಟು ತಿಳಿ–
ವಂತೆ ಹರಸಿದರು । ಬ್ರಹ್ಮಜ್ಞ ॥ 19 ॥

ತಿದ್ದಿಕೊಂಡೆನು । ಸದ್ದಿಲ್ಲದಲೆ ಇವರ
ಶುದ್ಧನುಡಿ ನಡತೆ ಸುವಿಚಾರಕನುಸರಿಸಿ
ಉದ್ಧಾರವಾದೆ । ಬ್ರಹ್ಮಜ್ಞ ॥ 20 ॥

---

1. ಈ ಗ್ರಂಥದಲ್ಲಿ ಅಲ್ಲಲ್ಲಿ ಬಂದಿರುವ 'ಸಚ್ಚಿದಾತ್ಮ, ಸಚ್ಚಿದಾನಂದ, ಶ್ರೀಗಳು'– ಎಂಬಿತ್ಯಾದಿ ಸಂಕೇತಶಬ್ದಗಳು ಹೊಳೆನರಸೀಪುರದ ಅಧ್ಯಾತ್ಮ ಪ್ರಕಾಶಕಾರ್ಯಾಲಯದ ಸಂಸ್ಥಾಪಕರಾದ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳವರಿಗೆ ಅನ್ವಯಿಸುತ್ತವೆ.

ಹೊಳೆಯು ಹೇಮಾವತಿಯ । ಬಳಿಯ ಪಟ್ಟಣವಿಲ್ಲಿ
ಕುಳಿತಿರುವ ಸ್ವಾಮಿ ನರಸಿಂಹನಿದಕಾಗಿ
ಹೊಳೆಸರಸಿಪುರವು[1] । ಬ್ರಹ್ಮಜ್ಞ ॥ 21 ॥

ಅಧ್ಯಾತ್ಮವಿದ್ಯೆಯೇ । ಶುದ್ಧ ಬೆಳಕಿನ ಮಾರ್ಗ
ಶ್ರದ್ಧೆಯಲಿ ಇದನು ಬೀರಲ್ಕೆ । ಈ ಹೆಸರ
ಸಿದ್ಧಪಡಿಸಿದರು । ಬ್ರಹ್ಮಜ್ಞ ॥ 22 ॥

ಮಾಸಪತ್ರಿಕೆಗಿದನು[2] । ಲೇಸಾಗಿ ಹೆಸರಿಡುತ
ಭಾಷ್ಯದೊಳಗುಟ್ಟು ತಿಳಿಸಲ್ಕೆ । ಗ್ರಂಥಗಳ
ರಾಶಿ ಹಾಕಿದರು । ಬ್ರಹ್ಮಜ್ಞ ॥ 23 ॥

ಕಾರ್ಯಾಲಯವ ಮಾಡಿ । ಸರ್ವರಿಗೆ ಅರ್ಪಿಸುತ
ನಿರ್ವೇದಹೊಂದಿ ನೆಲೆನಿಂತ । ಪರಮಯತಿ-
ವರ್ಯರನು ನಮಿಪೆ । ಬ್ರಹ್ಮಜ್ಞ ॥ 24 ॥

## ಸರ್ವಜ್ಞಮಹಾಕವಿಯ ಸ್ತುತಿ

ಕನ್ನಡದ ತ್ರಿಪದಿಯಲಿ । ಇನ್ನಿಲ್ಲ ಸರಿ ಇವಗೆ
ಕನ್ನಡಿಗ ಧೀರ ಸರ್ವಜ್ಞ ನಿವಗಿನ್ನು
ಬಿನ್ನವಿಸಿ ಬರೆವೆ । ಬ್ರಹ್ಮಜ್ಞ ॥ 25 ॥

ಸರ್ವಜ್ಞನಾತ ನಿಜ । ಶರ್ವನವತಾರಿ ತಾ
ಉರ್ವಿಯೊಳು ಜ್ಞಾನಿ ಬ್ರಹ್ಮಜ್ಞನೀತನಿಗೆ
ಸರ್ವತ್ರ ನಮಿಪೆ । ಬ್ರಹ್ಮಜ್ಞ ॥ 26 ॥

ಅವನೆಲ್ಲಿ ನಾನೆಲ್ಲಿ? । ಭುವಿ ಎಲ್ಲಿ ಬಾನೆಲ್ಲಿ?
ಅವನಂತೆ ನಾನು ಎನಬೇಡಿ । ಶರಣಶಿವ
ನವನಡಿಗೆ ನಮಿಪೆ । ಬ್ರಹ್ಮಜ್ಞ ॥ 27 ॥

ಅವಗಿರುವ ವೈರಾಗ್ಯ । ಅವನ ಜ್ಞಾನದ ಭಾಗ್ಯ
ಲವಲೇಶವಿಲ್ಲ ಎನ್ನಲ್ಲಿ । ಈ ಕೃತಿಗೆ
ಅವನ ಕೃಪೆ ಮೂಲ । ಬ್ರಹ್ಮಜ್ಞ ॥ 28 ॥

---

1. ಈ ಊರನ್ನು ಪುರಾಣಗಳಲ್ಲಿ "ಭಕ್ತಿವರ್ಧನಕ್ಷೇತ್ರ"ವೆಂದು ಕರೆದಿದ್ದಾರೆ.
2. "ಅಧಾತ್ಮಪ್ರಕಾಶ"

ಹಲವು ಗ್ರಂಥದೊಳಿವನ । ಬಲುಚರಿತ್ರವ ಕಂಡು
ಬಲವಾಯ್ತು ಬಯಕೆ 'ತ್ರಿಪದಿಯಲಿ' । ಇದರಿಂದೆ
ಕಳೆ ಏರಿತಿದಕೆ । ಬ್ರಹ್ಮಜ್ಞ ॥ 29 ॥

ಮಾಸೂರ ಮಣ್ಣಿನಲಿ । ಲೇಸಾಗಿ ನಲಿದ ಕವಿ[1]
ಮಾಸೂರಿಗಳಿಯನಾಗಿರುವ[2] । ಎನ್ನನ್ನು
ತೋಷದಿಂ ಪೊರೆಗೆ । ಬ್ರಹ್ಮಜ್ಞ ॥ 30 ॥

ಸರ್ವಜ್ಞನಾಶಿಷವ । ಸರ್ವಭಾವದಿ ಬೇಡಿ
ಗರ್ವವನು ತೊರೆದು ಈ ಕೃತಿಯ ರಚನೆಯಾ
ನಿರ್ವಾಹವಕ್ಕೆ । ಬ್ರಹ್ಮಜ್ಞ ॥ 31 ॥

## ಶ್ರೀ ದತ್ತಗುರುಸ್ತುತಿ

ದತ್ತಗುರು ಸ್ಮರಣೆಯಲಿ । ಚಿತ್ತ ನಿರ್ಮಲವಲ್ತೆ
ತತ್ತ್ವವಿದು ಮಿಂಚಿ ಭಾವದಲಿ । ಕವಿತೆ ಹೊರ-
ಬಿತ್ತು ವಚನದಲಿ । ಬ್ರಹ್ಮಜ್ಞ ॥ 32 ॥

ಬರೆಸುವವ ದತ್ತಗುರು । ಬರಿಯ ಕರಣಿಕ ನಾನು[3]
ಗುರುತಿಲ್ಲ ಶಾಸ್ತ್ರ ಛಂದಸ್ಸು । ಗುರುಗಳಾ
ಕರುಣೆ ಈ ಕೃತಿಯು । ಬ್ರಹ್ಮಜ್ಞ ॥ 33 ॥

ದತ್ತಗುರು ಶ್ರೀಪಾದ । ಸತ್ಯವಲ್ಲಭನಾಗಿ
ಇತ್ತಂತೆ ಮತಿಯ ಮೂರ್ಖಂಗೆ[4] । ಎನ್ನನ್ನು
ಮತ್ತೆ ಕರುಣಿಸಲಿ । ಬ್ರಹ್ಮಜ್ಞ ॥ 34 ॥

---

1. ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ 'ಅಬಲೂರು' ಎಂಬ ಗ್ರಾಮದಲ್ಲಿ ಹುಟ್ಟಿ ಅದೇ ತಾಲ್ಲೂಕಿನ 'ಮಾಸೂರು' ಎಂಬ ಗ್ರಾಮದಲ್ಲಿ ಸರ್ವಜ್ಞಕವಿಯು ಬೆಳೆದನೆಂದು ಇತಿಹಾಸ.

2. ಪ್ರಕೃತಗ್ರಂಥಕಾರರು ಮಾಸೂರಿನ ಸಂಬಂಧವನ್ನು ಬೆಳೆಸಿದ್ದಾರೆ.

3. ಕುಲಕರ್ಣಿ ಮನೆತನಕ್ಕೆ ಸೇರಿದವನು.

4. ಶ್ರೀದತ್ತಾತ್ರೇಯನು ಶ್ರೀಪಾದಶ್ರೀವಲ್ಲಭನಾಗಿ ಅವತರಿಸಿದಾಗ 'ಕುರುಗಡ್ಡೆ' ಎಂಬಲ್ಲಿ ಮೂರ್ಖನಾದ ಬ್ರಾಹ್ಮಣಪುತ್ರನಿಗೆ ಅನುಗ್ರಹಮಾಡಿದೊಡನೆಯೇ ಅವನು ಮಹಾಪಂಡಿತನಾದನೆಂದು ಶ್ರೀಗುರುಚರಿತ್ರಗ್ರಂಥದ ಐದನೆಯ ಅಧ್ಯಾಯದಲ್ಲಿ ಬರುತ್ತದೆ.

ಎರಡನೆಯ ಅವತಾರ । ನರಸಿಂಹ ಸರಸತಿಯು
ವರದಿಂದೆ ವೇದ ಶೂದ್ರನಿಂ ಹೇಳಿಸಿದ[1]
ಪರಿಯೊಳುಸುರಿಸಲಿ । ಬ್ರಹ್ಮಜ್ಞ ॥ 35 ॥

## ಬ್ರಹ್ಮಜ್ಞರಿಗೆ ವಂದನೆ

ಬ್ರಹ್ಮಜ್ಞ ವಚನವಿದು । ಹಮ್ಮಿನಿಂ ಬಂದಿಲ್ಲ
ಒಮ್ಮನದಿ ಕೇಳಿದಾ ಬೋಧೆ । ತಾನಾಗಿ
ಚಿಮ್ಮಿರುವ ಬುಗ್ಗೆ । ಬ್ರಹ್ಮಜ್ಞ ॥ 36 ॥

ಬ್ರಹ್ಮಜ್ಞ ನಾನಲ್ಲ । ಬ್ರಹ್ಮಜ್ಞರಡಿಯಾಳು
ನೆಮ್ಮಿರುತ ಅವರ ಗಿಣಿಯಂತೆ ನುಡಿಗಲಿತು
ಒಮ್ಮನದಿ ನುಡಿವೆ । ಬ್ರಹ್ಮಜ್ಞ ॥ 37 ॥

ಬ್ರಹ್ಮಜ್ಞ ವಚನದಲಿ । ಬ್ರಹ್ಮಜ್ಞ ಪದದರ್ಥ
ಬ್ರಹ್ಮಜ್ಞ ಮೌಳಿ ಸಚ್ಚಿದಾನಂದೇಂದ್ರ
ಬ್ರಹ್ಮವೇ ನಿಜವು । ಬ್ರಹ್ಮಜ್ಞ ॥ 38 ॥

ದತ್ತಗುರು ಬ್ರಹ್ಮಜ್ಞ । ಮತ್ತೆ ಶಂಕರ ಗುರುವು
ಮತ್ತಿನ್ನು ರಮಣ್ಯೃಷಿವರ್ಯ[2] ಬ್ರಹ್ಮಜ್ಞ
ಸತ್ಯಸರ್ವಜ್ಞ । ಬ್ರಹ್ಮಜ್ಞ ॥ 39 ॥

ಅಲ್ಲಲ್ಲಿ ಲೋಕದಲಿ । ಉಳ್ಳ ಬ್ರಹ್ಮಜ್ಞರಿಗೆ
ಎಲ್ಲರಿಗು ನಮಿಸಿ ಈ ಕೃತಿಯ ಹರಸಿರೆಂ-
ದಿಲ್ಲಿ ಬೇಡುವೆನು । ಬ್ರಹ್ಮಜ್ಞ ॥ 40 ॥

ಬ್ರಹ್ಮಜ್ಞರೆಲ್ಲರನು । ಒಮ್ಮನದಿ ಬೇಡುವೆನು
ನಿಮ್ಮಲ್ಲಿ ತೂಗಿ ಒರೆಹಚ್ಚಿ ವಚಗಳ
ಸಮ್ಮತಿಸಬೇಕು । ಬ್ರಹ್ಮಜ್ಞ ॥ 41 ॥

## ಅರಿಕೆ

ವ್ಯಾಕರಣ ಛಂದಸ್ಸು । ಬೇಕಾದ ಪದ ಪ್ರಾಸ
ಏಕಿಲ್ಲ ಮತ್ತೆ ಎನ್ನದಲೆ । ಭಾವದಾ
ಪಾಕವನೆ ನೋಡಿ । ಬ್ರಹ್ಮಜ್ಞ ॥ 42 ॥

1. ಅದೇ ಗುರುಚರಿತ್ರೆಯ ಇಪ್ಪತ್ತೇಳನೆಯ ಅಧ್ಯಾಯದ ಕಥೆಯಿದು.
2. ತಿರುವಣ್ಣಾಮಲೆಯಲ್ಲಿದ್ದ ಭಗವಾನ್ ರಮಣಮಹರ್ಷಿಗಳು.

ಹಾಸ್ಯಮಾಡಲು ಬೇಡಿ । ಕೂಸು ಬರೆದುದ ಕಂಡು
ಲೇಸನ್ನೆ ಕೊಂಡು ಗುರು ಪೇಳ್ದ ವಚನದುಪ-
ದೇಶನೆ ಕೇಳಿ । ಬ್ರಹ್ಮಜ್ಞ ॥ 43 ॥

ಹೆಚ್ಚು ಮಾತನು ಬೆಳಸಿ । ಹುಚ್ಚುಬಡಿಯಲು ಒಲ್ಲೆ
ನೆಚ್ಚಿನಾ ಬರಹ ಗುರುವರ್ಯ ಬರೆದುದನೆ
ಬಿಚ್ಚಿ ಹೇಳುವೆನು । ಬ್ರಹ್ಮಜ್ಞ ॥ 44 ॥

ಕನ್ನಡದಿ ಸಂಸ್ಕೃತದಿ । ಮುನ್ನವಾಂಗ್ಲದಲೆಲ್ಲ
ಚೆನ್ನಾದ ಗ್ರಂಥ ರಚಿಸಿರಲು । ಸಾರಾಂಶ
ವಿನ್ನು ಪೇಳುವೆನು । ಬ್ರಹ್ಮಜ್ಞ ॥ 45 ॥

ಸಚ್ಚಿದಾನಂದೇಂದ್ರ । ಮೆಚ್ಚಿಗೆಯ ಗುರುವರ್ಯ
ಸ್ವಚ್ಛದಲಿ ಬರೆದು ತಿಳಿಸಿರುವರೀ ನಿಜವ
ಬಚ್ಚಿಡದೆ ಪೇಳ್ವೆ । ಬ್ರಹ್ಮಜ್ಞ ॥ 46 ॥

ಇವರಲ್ಲಿ ಕೇಳಿರುವ । ಇವರಲ್ಲಿ ತಿಳಿದಿರುವ
ಇವರ ಕೃತಿ ನೋಡಿ ಮನನಕ್ಕೆ ತಂದಿರುವ
ವಿವರಗಳನೊರೆವೆ । ಬ್ರಹ್ಮಜ್ಞ ॥ 47 ॥

ಆಂಧ್ರದೇಶದ ಯಾತ್ರೆ । ಸಂದಿತ್ತು ಇವರೊಡನೆ[1]
ಬಂದಿತ್ತು ಭಾಗ್ಯ ಯತಿಸೇವೆ । ಎನಗಾಗ
ಹೊಂದಿತ್ತು ಸಂಗ । ಬ್ರಹ್ಮಜ್ಞ ॥ 48 ॥

ಶಂಕರರ ಸಪ್ತಾಹ । ಶಂಕರರ ದಯದಿಂದೆ
ಕಿಂಕರನ ಗೃಹದಿ ನಡೆಸಿರಲು[2] । ಯತಿಚರಣ
ಸೋಂಕು ಸಂದಿತ್ತು । ಬ್ರಹ್ಮಜ್ಞ ॥ 49 ॥

ಹೀಗೆ ನಾನಾರೀತಿ । ಆಗಿತ್ತು ಇವರ ಕೃಪೆ
ಆಗಾಗ ಎನಗೆ ತಿಳಿಸಿದ್ದ ವಿಷಯಗಳೆ
ಈಗಿಲ್ಲಿ ಬಹವು । ಬ್ರಹ್ಮಜ್ಞ ॥ 50 ॥

---

1. ತಾ॥ 31–10–1963 ರಿಂದ ತಾ॥ 8–12–1963ರವರೆಗೆ ಕೈಗೊಂಡಿದ್ದ ಆಂಧ್ರಪ್ರವಾಸದ ವಿವರವನ್ನು "ಅಧ್ಯಾತ್ಮಪ್ರಕಾಶ" ಮಾಸಪತ್ರಿಕೆಯ 1964ನೆಯ ಜನವರಿಯಿಂದ ಡಿಸೆಂಬರ್‌ವರೆಗಿನ ಸಂಚಿಕೆಗಳಲ್ಲಿ ಕೊಡಲಾಗಿದೆ.

2. ತಾ॥ 6–5–1965 ರಿಂದ 12–5–1965 ಪೂರ ಶಂಕರಸಪ್ತಾಹವು ಬೆಂಗಳೂರಿನಲ್ಲಿ ಗ್ರಂಥಕಾರರ ಮನೆಯಲ್ಲಿಯೇ ನಡೆಯಿತು.

## ಜಿಜ್ಞಾಸುಗಳಿಗೆ ಸೂಚನೆ

ತತ್ತ್ವಜಿಜ್ಞಾಸುಗಳು । ತತ್ತ್ವದೀ ವಚನಗಳ
ಚಿತ್ತದೊಳು ನಿಲಿಸಿ ಅನುಭವದಿ । ನಿಮ್ಮೊಳಗೆ
ಆತ್ಮರಾಗುವದು । ಬ್ರಹ್ಮಜ್ಞ ॥ 51 ॥

ಒಮ್ಮೆ ಆಲಿಸಿ ಮನದಿ । ಬ್ರಹ್ಮಜ್ಞವಚನಗಳ
ನಿಮ್ಮಲ್ಲಿ ಇಣಿಕಿ ನೋಡುತ್ತಲನುಭವಕೆ
ಸಮ್ಮತಿಸಿಕೊಳ್ಳಿ । ಬ್ರಹ್ಮಜ್ಞ ॥ 52 ॥

## ಆಚಾರ್ಯರ ಚರಿತ್ರೆಯ ಸ್ಥಾನ

ವರುಷ ಸಾಸಿರ ಮೀರಿ । ಉರುಳಿಹವು ಶಂಕರರು
ವರ ಭಾಷ್ಯ ರಚಿಸಿ ಆದಡೆಯು ಚರಿತೆಯದು
ಅರಿಯದಾಗಿಹುದು । ಬ್ರಹ್ಮಜ್ಞ ॥ 53 ॥

ಹಲವು ಚರಿತೆಗಳಿಹವು । ಬಲು ಭಿನ್ನವಾಗಿಹವು
ಸಲೆದೋಷಪೂರ್ಣವಾಗಿರುವ । ಇವುಗಳಿಗೆ
ಬಲಿಯಾಗಬೇಡಿ । ಬ್ರಹ್ಮಜ್ಞ ॥ 54 ॥

ಶಂಕರರ ನಿಜಚರಿತೆ । ಶಂಕರರ ಭಾಷ್ಯವೇ
ಮಂಕುತನ ಬಿಟ್ಟು ಪಠಿಸುವದೆ ನಿಜಪೂಜೆ
ಶಂಕೆಯೇ ಬೇಡ । ಬ್ರಹ್ಮಜ್ಞ ॥ 55 ॥

ವೃತ್ತಾಂತ ಸಾರದಲಿ[1] । ಇತ್ತಿಹರು ಸರ್ವಸ್ವ
ಸತ್ಯವನು ತಿಳಿಯಬಯಸುವರು । ಈ ಗ್ರಂಥ
ಮತ್ತೆ ಓದುವದು । ಬ್ರಹ್ಮಜ್ಞ ॥ 56 ॥

## ಸಾಂಪ್ರದಾಯಿಕಗ್ರಂಥಗಳ ನಿರ್ಣಯ

ಚರಿತೆ ಮುಖ್ಯವಿದಲ್ಲ । ವರ ಭಾಷ್ಯವೇ ಮುಖ್ಯ[2]
ಗುರುತರದ ತತ್ತ್ವನಿರ್ಣಯಕೆ । ನಿಜದ ಹೆ-
ಗ್ಗುರುತು ಸಿಕ್ಕುವದು । ಬ್ರಹ್ಮಜ್ಞ ॥ 57 ॥

1. "ಶ್ರೀಶಂಕರಭಗವತ್ಪಾದವೃತ್ತಾಂತಸಾರಸರ್ವಸ್ವ" ಎಂಬ ಗ್ರಂಥ. ಇಲ್ಲಿ ಸೂಚಿಸಿರುವ ಗ್ರಂಥಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದ ಪ್ರಕಟನೆಗಳು.

2. "ಶ್ರೀಜಯಚಾಮರಾಜೇಂದ್ರ ಗ್ರಂಥರತ್ನಮಾಲೆ"ಗೆ ಸೇರಿದಂತೆ ಶ್ರೀಗಳವರೇ ಆಚಾರ್ಯರ ಪ್ರಸ್ಥಾನತ್ರಯಭಾಷ್ಯಗಳನ್ನು ಸಮಗ್ರವಾಗಿ ಕನ್ನಡಿಸಿರುತ್ತಾರೆ.

ಪೂರ್ಣ ಭಾಷ್ಯವನೋದಿ । ನಿರ್ಣಯಿಸಲಾಗದಿರೆ
ಇನ್ನು ಇದನೋದಿ ಶಂಕರರ ವೇದಾಂತ
ಘನ್ನ ಸಾರವನು[1] । ಬ್ರಹ್ಮಜ್ಞ ॥ 58 ॥

ಕನ್ನಡದ ಭಾಷೆಯಲೆ । ಚೆನ್ನಾದ ಗ್ರಂಥವಿದು
ಕನ್ನಡಿಯ ನೋಡಿ ತಿಳಿವಂತೆ ಮುಖವನ್ನು
ತನ್ನೊಳಗೆ ತಿಳಿಗು । ಬ್ರಹ್ಮಜ್ಞ ॥ 59 ॥

## ವಾರ್ತಿಕಪ್ರಸ್ಥಾನ

ಶಂಕರರ ನಿಜಶಿಷ್ಯ । ರಂಕಿತ ಸುರೇಶ್ವರರು
ಶಂಕರರ ಪದವ ಸ್ಮರಿಸುತ್ತ ಬರೆದುದಾ-
ತಂಕವೇ ಇಲ್ಲ । ಬ್ರಹ್ಮಜ್ಞ ॥ 60 ॥

ತಿತ್ತಿರಿಯ ವಾರ್ತಿಕವು । ಮತ್ತೆ ಬೃಹದಾರಣ್ಯ
ಗೊತ್ತಿರಲಿ ಗ್ರಂಥ ನೈಷ್ಕರ್ಮ್ಯಸಿದ್ಧಿ[2] ಮೇಣ್
ಮತ್ತೇನು ಇಲ್ಲ । ಬ್ರಹ್ಮಜ್ಞ ॥ 61 ॥

ಮಿಕ್ಕಿನವು ಇವರ ಕೃತಿ[3] । ಇಕ್ಕಿದವು ಈ ನಾಮ
ಸಿಕ್ಕಿರಲು ಸಲ್ಲ ಅವು ಸಾಂಪ್ರದಾಯದಾ
ಲೆಕ್ಕದಲ್ಲಿಲ್ಲ । ಬ್ರಹ್ಮಜ್ಞ ॥ 62 ॥

ಗೌಡಪದರ ಕೃತಿಯ । ಕೂಡ ಶಂಕರಭಾಷ್ಯ
ಜೋಡಿಸುತ ನೋಡೆ ವಾರ್ತಿಕವ । ತತ್ತ್ವದಾ
ಗೂಢ ಸಿಕ್ಕುವದು । ಬ್ರಹ್ಮಜ್ಞ ॥ 63 ॥

## ಪ್ರಕರಣಗ್ರಂಥಗಳ ಸ್ಥಾನ

ಉಪದೇಶಸಾಹಸ್ರಿ[4] । ಸುಪರಿಚಿತ ಶ್ರೇಷ್ಠಕೃತಿ
ಕಪಟವೇ ಇಲ್ಲ ಶಂಕರರದೀ ರಚನೆ
ಸುಪಥಕ್ಕೆ ಮೂಲ । ಬ್ರಹ್ಮಜ್ಞ ॥ 64 ॥

---

1. "ಶಂಕರವೇದಾಂತಸಾರ"ವೆಂಬ ಗ್ರಂಥ, ಇದೂ ಕಾರ್ಯಾಲಯದಲ್ಲಿ ದೊರೆಯುತ್ತದೆ.

2. 'ನೈಷ್ಕರ್ಮ್ಯಸಿದ್ಧಿ'ಯನ್ನು ಶ್ರೀಗಳವರ ಕನ್ನಡ ಅನುವಾದಸಹಿತ ಕಾರ್ಯಾಲಯ ದವರು ಪ್ರಕಟಿಸಿರುತ್ತಾರೆ.

3. "ಮಾನಸೋಲ್ಲಾಸ, ಪಂಚೀಕರಣವಾರ್ತಿಕ" ಮುಂತಾದ ಇತರ ಕೃತಿಗಳು.

4. ಪ್ರಕರಣಗಳು, ಸಂಪುಟ 1– ಎಂಬ ಹೆಸರಿನಿಂದ "ಉಪದೇಶಸಾಹಸ್ರಿ"ಯು ಗದ್ಯ-ಪದ್ಯ ಪೂರ ಮೂಲ ಅನುವಾದಸಹಿತವಾಗಿಯೂ ಪ್ರತ್ಯೇಕವಾಗಿ ವಿವರಣೆಸಹಿತ ವಾಗಿಯೂ ಕಾರ್ಯಾಲಯದಲ್ಲಿ ಪ್ರಕಾಶಿತವಾಗಿದೆ.

ಚಿಕ್ಕಗ್ರಂಥಗಳಿನ್ನು[1] । ಲೆಕ್ಕವಿಲ್ಲದಲಿಹವು
ಒಕ್ಕಣಿಕೆ ಇಲ್ಲಿ ಶಂಕರರದಿದ್ದರೂ
ಲೆಕ್ಕಕ್ಕೆ ಇಲ್ಲ । ಬ್ರಹ್ಮಜ್ಞ ॥ 65 ॥

ಇಷ್ಟು ಕೃತಿಗಳೆ ನಿಜದಿ । ಶ್ರೇಷ್ಠವಾಗಿರುತಿರಲು
ದೃಷ್ಟಿಯಿದ ಹೊಂದಿ ನೋಡಿದರೆ । ತತ್ತ್ವವಿದು
ಸ್ಪಷ್ಟವಾಗುವದು । ಬ್ರಹ್ಮಜ್ಞ ॥ 66 ॥

ಮಿಕ್ಕಿರುವ ಗ್ರಂಥಗಳ । ತಿಕ್ಕಿ ನೋಡುವದಿದಕೆ
ಸಿಕ್ಕಿರಲು ಸಾರ ಗ್ರಹಿಸುವದು । ಸಿಕ್ಕದಿರ–
ಲಿಕ್ಕುವದು ಬದಿಗೆ । ಬ್ರಹ್ಮಜ್ಞ ॥ 67 ॥

## ವ್ಯಾಖ್ಯಾನಪ್ರಸ್ಥಾನಗಳ ಸ್ಥಾನ
### (ಪಂಚಪಾದಿಕೆ)

ಪಂಚಪಾದಿಕೆ[2] ಯೊಂದು । ಹೊಂಚಿನಾ ವ್ಯಾಖ್ಯಾನ
ಮುಂಚೆಯೇ ಭಾಷ್ಯ ತಿಳಿದವಗೆ । ಇದರ ಒಳ–
ಸಂಚು ಗೊತ್ತಹುದು । ಬ್ರಹ್ಮಜ್ಞ ॥ 68 ॥

ತನ್ನ ಮತವದು ಜನರ । ಮನ್ನಣೆಯ ಪಡೆಯಲ್ಕೆ
ಮುನ್ನವೇ ತಿರಿಚಿ ವಾಕ್ಯಗಳನರ್ಥದಲ್ಲಿ
ಬನ್ನ ಬಡಿಸಿಹುದು । ಬ್ರಹ್ಮಜ್ಞ ॥ 69 ॥

ಪದ್ಮಪಾದರದೆಂದು । ಸದ್ದು ಮಾಡಿಹರಿದನು
ಛದ್ಮದಲಿ ಮೋಡಿಹಾಕಿಹರು । ನಂಬುವನ
ಬುದ್ಧಿ ಕುರುಡಾಯ್ತು । ಬ್ರಹ್ಮಜ್ಞ ॥ 70 ॥

---

1. "ವಿವೇಕಚೂಡಾಮಣಿ"ಯೇ ಮುಂತಾದ ಅನೇಕ ಪ್ರಕರಣಗಳನ್ನು ಶೋಧಿಸಿ ಕನ್ನಡ ಅನುವಾದಸಹಿತ ಪ್ರಕಟಿಸಲಾಗಿದೆ. ವಿವರಗಳಿಗೆ ಕಾರ್ಯಾಲಯಕ್ಕೆ ಬರೆಯಿರಿ.

2. ಬ್ರಹ್ಮಸೂತ್ರಭಾಷ್ಯದಮೇಲೆ ಬರೆಯಲ್ಪಟ್ಟಿರುವ ಪ್ರಾಚೀನವ್ಯಾಖ್ಯಾನ. ಇದರಲ್ಲಿ ನಾಲ್ಕು ಸೂತ್ರಗಳಿಗೆ ಮಾತ್ರ ವ್ಯಾಖ್ಯಾನವಿದ್ದು ಇದು ಪದ್ಮಪಾದರ ಕೃತಿಯೆಂದು ಪ್ರಚಾರದಲ್ಲಿದೆ. ಕಾರ್ಯಾಲಯದ "ಪಂಚಪಾದಿಕೆ" ಎಂಬ ಕನ್ನಡ ಗ್ರಂಥವನ್ನು ನೋಡಿ. ಈಚೆಗೆ ಸಂಸ್ಕೃತದಲ್ಲಿ **"ಪಂಚಪಾದಿಕಾಪ್ರಸ್ಥಾನಮ್"** ಎಂಬ ವಿಮರ್ಶಾತ್ಮಕ ಗ್ರಂಥ ವೊಂದನ್ನೂ ಶ್ರೀಗಳವರು ಬರೆದಿದ್ದಾರೆ.

ಭಾಷ್ಯಕ್ಕೆ ಹೊಂದದಿಹ । ಭಾಷ್ಯಬಾಹಿರವಾದ
ದೋಷಗಳ ಮುಂದೆ ಅಲ್ಲಲ್ಲಿ ಸಮಯದಲಿ
ಲೇಸಾಗಿ ತೋರ್ಪೆ । ಬ್ರಹ್ಮಜ್ಞ ॥ 71 ॥

ಮತಭೇದ ಹೊಂದಿಹುದು । ಅತಿಮುಖ್ಯವಿಷಯದಲಿ
ಇತರ ಕೆಲವಿಷಯ ವಿಹಿತದಲಿ ಬರೆದರೂ
ಪಥವ ಬಿಟ್ಟಿಹುದು । ಬ್ರಹ್ಮಜ್ಞ ॥ 72 ॥

ಲೇಸಲ್ಲ ವ್ಯಾಖ್ಯಾನ । ಈಸು ಕಾರಣದಿಂದೆ
ದೂಷಣವ ಮಾಳ್ಪನಿವನೆಂದು । ಸುಮ್ಮನೆಯೆ
ದೂಷಿಸದೆ ನೋಡಿ । ಬ್ರಹ್ಮಜ್ಞ ॥ 73 ॥

## (ಭಾಮತೀ)

ಮಂಡನನ ಸಿದ್ಧಿಯಲಿ[1] । ಕಂಡಿರ್ದ ವಿಷಯಗಳ
ಖಂಡಿತದಿ ಭಾಷ್ಯಕೃತಿಯಲ್ಲಿ ತೂರಿಸಲು
ಅಂಡಲೆದ ಬರಹ । ಬ್ರಹ್ಮಜ್ಞ ॥ 74 ॥

ಮಿಶ್ರನೀ ವ್ಯಾಖ್ಯಾನ[2] । ಮಿಶ್ರಕುಲವಾಗಿಹುದು
ಸುಶ್ರುತರು ತಿಳಿದು ನೋಡಿದರೆ । ಇದರ ನಿಜ
ವೇಷ ಗೊತ್ತಹುದು । ಬ್ರಹ್ಮಜ್ಞ ॥ 75 ॥

ಭಾಮತೀ ಸತಿಯ ನಿಜ । ನಾಮದೀ ವ್ಯಾಖ್ಯಾನ[3]
ಹೇಮಸಮ ಭಾಷ್ಯವೆಲ್ಲವನು ಕುಲಗೆಡಿಸಿ
ಗೋಮು ತಂದಿಹುದು । ಬ್ರಹ್ಮಜ್ಞ ॥ 76 ॥

ಇಲ್ಲಿಯೂ ಕೆಲವಿಷಯ । ಸಲ್ಲಲಿತವಾಗಿಹವು
ಎಲ್ಲಕ್ಕು ಮುಖ್ಯವಿಷಯಗಳೆ । ವ್ಯತ್ಯಾಸ–
ವುಳ್ಳವಾಗಿಹವು । ಬ್ರಹ್ಮಜ್ಞ ॥ 77 ॥

---

1. ಮಂಡನಮಿಶ್ರನು ಬರೆದಿರುವ **"ಬ್ರಹ್ಮಸಿದ್ಧಿ"** ಎಂಬ ಸ್ವತಂತ್ರಪ್ರಕರಣ.
2. ವಾಚಸ್ಪತಿಮಿಶ್ರರು ಬ್ರಹ್ಮಸೂತ್ರಭಾಷ್ಯದ ಮೇಲೆ ಬರೆದ ವ್ಯಾಖ್ಯಾನ.
3. 'ಭಾಮತಿ' ಎಂಬುವಳು ವಾಚಸ್ಪತಿಮಿಶ್ರರ ಪತ್ನಿ. ವ್ಯಾಖ್ಯಾನರಚನಾಕಾರ್ಯದಲ್ಲಿ ಸಹಕರಿಸಿದ್ದರಿಂದ ತಮ್ಮ ಪತ್ನಿಯ ಹೆಸರನ್ನೇ ಇದಕ್ಕಿಟ್ಟಿರುವರೆಂದು ಪ್ರಸಿದ್ಧಿ.

ಸಂದರ್ಭ ಬಂದಂತೆ । ಮುಂದೆ ಹೇಳುವೆನಿಂತೆ[1]
ಬಂಧುರದ ಭಾಷ್ಯವ್ಯತ್ಯಾಸವನ್ನೆಲ್ಲ
ಚಂದಾಗಿ ಕೇಳಿ । ಬ್ರಹ್ಮಜ್ಞ ॥ 78 ॥

ನಿಂದೆಮಾಡುವೆನೆಂದು । ನೊಂದುಕೊಳದಿರಿ ಬುಧರು
ಕಂದೆರೆದು ಭಾಷ್ಯಪ್ರಕ್ರಿಯೆಯ ತಿಳಿಯಲಾ-
ಚಂದವೇ ಬೇರೆ । ಬ್ರಹ್ಮಜ್ಞ ॥ 79 ॥

## ಉಪವ್ಯಾಖ್ಯಾನಗಳ ಸ್ಥಾನ

ಪಾದಿಕೆಗೆ ವಿವರಣವು । ಆದುದುಪವ್ಯಾಖ್ಯಾನ[2]
ಈ ದಿನದಿ ಮೂಲ ಅದ್ವೈತಬೋಧನೆಗೆ
ಆದುದಿದೆ ಅಧಿಕ । ಬ್ರಹ್ಮಜ್ಞ ॥ 80 ॥

ಹೆಚ್ಚಿನಾ ಗ್ರಂಥಗಳು । ಮೆಚ್ಚಿದವು ಈ ಬಣವ
ಹೆಚ್ಚುಜನ ಬೋಧೆಮಾಡಲ್ಕೆ । ಭಾವುಕರು
ಮೆಚ್ಚಿಹರು ಇದನೆ । ಬ್ರಹ್ಮಜ್ಞ ॥ 81 ॥

ಭಾಮತೀಗ್ರಂಥಕ್ಕೆ । ನೇಮದಲಿ ವ್ಯಾಖ್ಯಾನ
ನಾಮವಿದ ಕೇಳಿ ಕಲ್ಪತರು[3] । ಈ ಬಣಕೆ
ಭಾಮತಿಯೆ ಮೂಲ । ಬ್ರಹ್ಮಜ್ಞ ॥ 82 ॥

ಇಬ್ಬಣವು ತಮ್ಮಲ್ಲಿ । ಒಬ್ಬರೊಬ್ಬರ ಮೇಲೆ
ಹಬ್ಬಿಸುತ ದೋಷ ಶಂಕರರ ಶಿಷ್ಯರೆಂ-
ದುಬ್ಬಿದುದ ನೋಡಿ । ಬ್ರಹ್ಮಜ್ಞ ॥ 83 ॥

ವ್ಯಾಖ್ಯಾನವೆರಡಕ್ಕೆ । ಮುಖ್ಯಭೇದಗಳಿಹವು
ವ್ಯಾಖ್ಯಾನ ಮತ್ತೆ ವ್ಯಾಖ್ಯೇಯ ಭೇದ ಬಹು-
ದುಃಖದಾಯಕವು । ಬ್ರಹ್ಮಜ್ಞ ॥ 84 ॥

---

1. 4, 5ನೇ ಅಧ್ಯಾಯಗಳಲ್ಲಿ.

2. ಪ್ರಕಾಶಾತ್ಮರೆಂಬುವರು ಪಂಚಪಾದಿಕೆಗೆ ಬರೆದ ವ್ಯಾಖ್ಯಾನಕ್ಕೆ 'ವಿವರಣ' ಎಂದು ಹೆಸರು. ಇವರನ್ನು ವಿವರಣಾಚಾರ್ಯರೆಂದೇ ಕರೆಯುತ್ತಾರೆ.

3. ಅಮಲಾನಂದರು ಬರೆದಿರುವ 'ಭಾಮತಿ'ಯ ಮೇಲಿನ ಟೀಕೆ.

ಟೀಕೋಪಟೀಕೆಗಳು । ಬೇಕಾದ ಹಾಗೆ ಬರೆ
ಬೇಕಾದ ಕಡೆಗೆ ಒಲಿಯುತ್ತ ವಾದಿಸುವ
ಕಾಕುಮತಿ ಬಂತು । ಬ್ರಹ್ಮಜ್ಞ ॥ 85 ॥

ಅದ್ವೈತತತವೀ ಪರಿಯ । ಗುದ್ದಾಟವಾಯ್ತೀಗ
ಬಿದ್ದಿಹರು ತರ್ಕಜಾಲದಲಿ ಪಂಡಿತರು
ಒದ್ದಾಡುತಿಹರು । ಬ್ರಹ್ಮಜ್ಞ ॥ 86 ॥

ಮೆಚ್ಚಿದರು ಶಾಸ್ತ್ರಿಗಳು । ಹೆಚ್ಚಾಗಿ ತರ್ಕವನು
ಹೆಚ್ಚೇನು? ಹೆಸರಿಗದ್ವೈತ । ನಿಜವಾಗಿ
ಕಚ್ಚಾಟವಾಯ್ತು । ಬ್ರಹ್ಮಜ್ಞ ॥ 87 ॥

ಅರ್ಚಕರು ಬಡಿದಾಡಿ । ಅರ್ಚನೆಯೆ ನಿಂತಿರಲು
ಮುಚ್ಚಿದರು ದೇವಮಂದಿರವನೆಂಬಂತೆ
ಮುಚ್ಚಿಹುದು ಭಾಷ್ಯ । ಬ್ರಹ್ಮಜ್ಞ ॥ 88 ॥

ಕೈಗೆ ಸಿಕ್ಕಿಹ ಗ್ರಂಥ । ಈಗ ವೇದವಿದೆಂದು
ಸಾಗಿಸುತ ವಾದಭೇದಗಳನಲ್ಲಲ್ಲಿ
ಕೂಗಾಡುತಿಹರು । ಬ್ರಹ್ಮಜ್ಞ ॥ 89 ॥

ಎಲ್ಲರೂ ದೊಡ್ಡವರು । ಎಲ್ಲರದ್ವೈತಿಗಳು
ಇಲ್ಲ ನಿಜ ಭೇದವೆನ್ನುತ್ತೆ । ಭಾವುಕರು
ನಿಲ್ಲುವಂತಾಯ್ತು । ಬ್ರಹ್ಮಜ್ಞ ॥ 90 ॥

ಒಟ್ಟಿನಲ್ಲದ್ವೈತ । ಪಟ್ಟಾಗಿ ಹೇಳುವರು
ಇಟ್ಟಿರಲು ರೀತಿ ತಪ್ಪೇನು? ಬೇರೆ ತೆರ–
ವಿಷ್ಟು ಹೇಳುವರು । ಬ್ರಹ್ಮಜ್ಞ ॥ 91 ॥

ಸಾಧನೆಯ ಮಾರ್ಗದಲಿ । ಬೋಧಿಸುವ ಕ್ರಮಗಳಲಿ
ವೇದಾಂತಿ ಜನರ ಆಚರಣೆಗಳಲೆಲ್ಲ
ಭೇದ ಬಂದಿಹುದು । ಬ್ರಹ್ಮಜ್ಞ ॥ 92 ॥

ಸಾಧಕರು ದಿಕ್ಕೆಟ್ಟು । ಬಾಧೆಬಡುವಂತಾಗಿ
ಶೋಧನೆಗೆ ಶಾಂತಿವ್ಯವಧಾನವಿಲ್ಲದಲೆ
ಹಾದಿ ತಪ್ಪಿಹುದು । ಬ್ರಹ್ಮಜ್ಞ ॥ 93 ॥

ಲೆಕ್ಕದುತ್ತರವನ್ನು । ಚೊಕ್ಕಾಗಿ ನೋಡಿರ್ದು
ಸಿಕ್ಕಂತೆ ಇಟ್ಟು ಅಂಕೆಗಳ ಮೇಳವಿಸೆ
ಲೆಕ್ಕವೆನಿಸುವದೆ? । ಬ್ರಹ್ಮಜ್ಞ ॥ 94 ॥

ವೈಕಲ್ಪ್ಯ ಕರ್ಮಕ್ಕೆ । ಬೇಕಾಗಿ ಬರಬಹುದು
ಏಕತ್ವ ಜ್ಞಾನಕಿರಬೇಕು । ವಸ್ತುವಿಗೆ
ಏಕೆ ವ್ಯತ್ಯಾಸ? । ಬ್ರಹ್ಮಜ್ಞ ॥ 95 ॥

ವೇದಾಂತದಿತಿಹಾಸ[1] । ಓದಬೇಕಿದಕಾಗಿ
ಆದರದಿ ಪಠಿಸೆ ಶಂಕರರ ಸಿದ್ಧಾಂತ[2]
ಹಾದಿ ಸಿಕ್ಕುವದು । ಬ್ರಹ್ಮಜ್ಞ ॥ 96 ॥

ಪ್ರತ್ಯಭಿಜ್ಞೆಯು[3] ಇದಕೆ । ಪ್ರತ್ಯೇಕ ನಿರ್ಮಾಣ
ಗೊತ್ತಿರಲಿ ಗ್ರಂಥ ಸಂಸ್ಕೃತವಿದಪ್ರತಿಮ
ರತ್ನದಂತಿಹುದು । ಬ್ರಹ್ಮಜ್ಞ ॥ 97 ॥

### ಭಾಷ್ಯದ ಹೆಚ್ಚಳ

ಭಾಷ್ಯವೇ ಶಂಕರರು । ದೇಶಿಕೇಂದ್ರರು ಇರಲು
ಲೇಸಾಗಿ ಅವರ ಸೇರುತ್ತೆ । ತತ್ತ್ವದುಪ-
ದೇಶ ಕೇಳುವದು । ಬ್ರಹ್ಮಜ್ಞ ॥ 98 ॥

ಸಗ್ಗದಂತಿಹ ಭಾಷ್ಯ । ಅಗ್ರಪೂಜೆಗೆ ಯೋಗ್ಯ
ನುಗ್ಗಿರುವ ತರ್ಕವೆಲ್ಲವನು ಬದಿಗಿರಿಸಿ
ಹಿಗ್ಗನ್ನೆ ಪಡೆಗು । ಬ್ರಹ್ಮಜ್ಞ ॥ 99 ॥

ಭಾಷ್ಯಕಾರರ ಮತದ । ಕೌಶಲವನನುಸರಿಸಿ
ತೋಷದಲಿ ಪೇಳ್ವೆ ತತ್ತ್ವವನು ನಾನಿನ್ನು
ಲೇಸಾಗಿ ಕೇಳಿ । ಬ್ರಹ್ಮಜ್ಞ ॥ 100 ॥

---

1. ಅದ್ವೈತಪ್ರಸ್ಥಾನಭೇದಗಳ ವಿವರವನ್ನು ತಿಳಿಯಲು "ವೇದಾಂತವಿಚಾರದ ಇತಿಹಾಸ" ಎಂಬ ಕಾರ್ಯಾಲಯದ ಪ್ರಕಟನೆಯನ್ನು ನೋಡಿರಿ.

2. "ಶಂಕರಸಿದ್ಧಾಂತ"ವೆಂಬ ಗ್ರಂಥ. ಇದೂ ಕಾರ್ಯಾಲಯದಲ್ಲಿ ದೊರಕುತ್ತದೆ.

3. "ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ" ಎಂಬ ಶ್ರೀಶ್ರೀಗಳವರ ಸ್ವತಂತ್ರ ಸಂಸ್ಕೃತಗ್ರಂಥ.

# ಎರಡನೆಯ ಅಧ್ಯಾಯ

## ಸಿದ್ಧಾಂತದ ರೂಪರೇಖೆ

ನಮ್ಮೆಲ್ಲರಾತ್ಮವೂ । ಬ್ರಹ್ಮವೇ ಆಗಿಹುದು
ನಿರ್ಮಲವು ನಿತ್ಯ ನಿರ್ಧರ್ಮ ಪರಮಾರ್ಥ
ಬ್ರಹ್ಮವೇ ನಿಜವು । ಬ್ರಹ್ಮಜ್ಞ ॥ 1 ॥

ಅಜವಾದ ಬ್ರಹ್ಮವೇ । ನಿಜವಾದ ಪರತತ್ತ್ವ
ತ್ರಿಜಗತ್ತು ಜೀವ ಜಡರೆಂಬ ಈ ಭೇದ
ನಿಜವಾಗಿ ಇಲ್ಲ । ಬ್ರಹ್ಮಜ್ಞ ॥ 2 ॥

ಇದ್ದ ಬೊಮ್ಮವ ನರನು । ಇದ್ದಂತೆ ತಿಳಿಯದಿರೆ
ಎದ್ದಿಹುದು ಘೋರಸಂಸಾರ ಹುಸಿರೂಪ
ಗದ್ದಲವು ನೋಡಿ । ಬ್ರಹ್ಮಜ್ಞ ॥ 3 ॥

ದಾರಿಯಲಿ ಬಿದ್ದಿರುವ । ನಾರಿನಾ ಹಗ್ಗವದು
ತೋರುವದು ಹಾವು ಕುಳಿತಂತೆ ಕತ್ತಲಲಿ
ಭಾರಿ ಭಯವಹುದು । ಬ್ರಹ್ಮಜ್ಞ ॥ 4 ॥

ಅರಿಯದಗೆ ಇದರಂತೆ । ಪರಮಾತ್ಮತತ್ತ್ವವೇ
ಪರಿಪರಿಯ ಭೇದ ಸಂಸಾರವೆಂಬಂತೆ
ಸ್ಫುರಿಸುವದೆ ಭ್ರಾಂತಿ । ಬ್ರಹ್ಮಜ್ಞ ॥ 5 ॥

ಕೇಳಿ ಆಪ್ತನ ವಚನ । ಮೇಲೆ ಬೆಳಕನು ಬೀರಿ
ಮೈಳೈಸಿ ಹಗ್ಗ ಹಾವಲ್ಲವೆಂದರಿಯೆ
ಕೀಳುವುದು ಭಯವು । ಬ್ರಹ್ಮಜ್ಞ ॥ 6 ॥

ಇಲ್ಲಿಯೂ ಇದರಂತೆ । ಬಲ್ಲ ಸದ್ಗುರುವಾಪ್ತ
ಸಲ್ಲಲಿತ ಶ್ರುತಿಯ ಬೋಧನೆಯ ಬೆಳಕು ಬರೆ
ಎಲ್ಲವೂ ಬೊಮ್ಮ । ಬ್ರಹ್ಮಜ್ಞ ॥ 7 ॥

ಗುರುಶಾಸ್ತ್ರಗಳ ಮುಖದಿ । ಅರಿಯಲ್ಕೆ ನಿಜತತ್ತ್ವ
ಉರುತರದ ಭೇದ ನಿಗ್ಗರದ ಸಂಸಾರ
ಪರಿಹಾರವಕ್ಕು । ಬ್ರಹ್ಮಜ್ಞ ॥ 8 ॥

ಶಾಸ್ತ್ರವೆಂದರೆ ಶ್ರುತಿಯು । ಮತ್ತೆ ಬೇರೊಂದಿಲ್ಲ
ಶ್ರೋತ್ರಿಯನು ಬ್ರಹ್ಮನಿಷ್ಠೆಯಲಿ ನೆಲೆನಿಂತ
ವ್ಯಕ್ತಿಯೇ ಗುರುವು । ಬ್ರಹ್ಮಜ್ಞ ॥ 9 ॥

ಅನುಭಾವಿ ಗುರುವಾಗೆ । ಮನನಕ್ಕೆ ಶ್ರುತಿಯಾಗೆ
ಮನದಲ್ಲಿ ಶ್ರದ್ಧೆ ವೈರಾಗ್ಯ ಬಲವಾಗೆ
ಅನುಭವವೆ ಬಕ್ಕು । ಬ್ರಹ್ಮಜ್ಞ ॥ 10 ॥

ವೇದಾಂತಗಳು ಎಂಬ । ಮೋದದಾ ಶ್ರುತಿಗಳಲಿ
ಬೋಧವಿದು ನೆಲೆಸಿ ನಿಂತಿಹುದು । ತಾತ್ಪರ್ಯ
ಶೋಧನೆಯ ಮಾಡೆ । ಬ್ರಹ್ಮಜ್ಞ ॥ 11 ॥

ಚಿತ್ತಶುದ್ಧಿಗೆ ಕರ್ಮ । ಮತ್ತೆ ನಿಷ್ಕಾಮದಲಿ
ನಿತ್ಯದಲಿ ಮಾಡಿ ಪರಮಾತ್ಮಗರ್ಪಿಸಲು
ಇತ್ತಿಹುದು ವೇದ । ಬ್ರಹ್ಮಜ್ಞ ॥ 12 ॥

ಮನಸಿನೇಕಾಗ್ರತೆಗೆ । ಅನುನಯದುಪಾಸನೆಯ
ಘನತೆಯಲಿ ಪೇಳಿ ಶ್ರುತಿಯಲ್ಲಿ । ಜ್ಞಾನಕ್ಕೆ
ಅಣಿಮಾಡುತಿಹುದು । ಬ್ರಹ್ಮಜ್ಞ ॥ 13 ॥

ಶುದ್ಧಚಿತ್ತಗೆ ವಿರತಿ । ಶ್ರದ್ಧಾದಿಗಳು ಬರಲು
ಸದ್ಗುರುವು ಜ್ಞಾನ ಬೋಧಿಪನು । ಜ್ಞಾನದಿಂ
ದು ದ್ವಾರವಕ್ಕೂ । ಬ್ರಹ್ಮಜ್ಞ ॥ 14 ॥

ಜ್ಞಾನ ಒಂದೇ ಬೇಕು । ತಾನು ಮೋಕ್ಷವ ಪಡೆಯೆ
ಜ್ಞಾನವನು ಬಿಟ್ಟು ಮಿಕ್ಕಿನದು । ಸಿದ್ಧತೆಯು
ಜ್ಞಾನಕ್ಕೆ ನೋಡಿ । ಬ್ರಹ್ಮಜ್ಞ ॥ 15 ॥

ಅನುಸರಿಸಿ ಶಾಸ್ತ್ರವನು । ಅನುಭವದಿ ಮನನವನು
ಘನತರದಿ ಮಾಡಿ ಮುಗಿಸಲ್ಕೆ । ಜಿಜ್ಞಾಸು
ಚಿನುಮಯನೆ ಅಕ್ಕು । ಬ್ರಹ್ಮಜ್ಞ ॥ 16 ॥

ಜೀವಂತ ಮುಕ್ತಿಯೇ । ಭಾವದಲಿ ನೆಲಸುವದು
ಸಾವು ಭಯ ಕಾಮ ತೊಲಗುವವು । ಈಗಲೇ
ದೇವನಾಗುವನು । ಬ್ರಹ್ಮಜ್ಞ ॥ 17 ॥

ಇದಕ್ಕಾಗಿ ಶಾಸ್ತ್ರವನು । ಮುದದಿಂದಲಾದರಿಸಿ
ಬದಿಗಿರಿಸಿ ಮಿಕ್ಕ ಮಾತುಗಳ । ಮನದಲ್ಲಿ
ಇದನೆ ಚಿಂತಿಪುದು । ಬ್ರಹ್ಮಜ್ಞ ॥ 18 ॥

## ಶಾಸ್ತ್ರಪ್ರಾಮಾಣ್ಯ

ಪ್ರತ್ಯಕ್ಷವನುಮಾನ । ಮತ್ತೆ ಅರ್ಥಾಪತ್ತಿ
ಎತ್ತಣವು ಬ್ರಹ್ಮವರಿಯಲ್ಕೆ? ಈ ತರ್ಕ
ವೆತ್ತಲೇ ಬೇಡ[1] । ಬ್ರಹ್ಮಜ್ಞ ॥ 19 ॥
ಕ್ಷೌರಗತ್ತಿಯನೆತ್ತಿ । ಬೋರುಗಲ್ಲಿಗೆ ಹೊಡೆಯೆ
ಕ್ಷೌರದಾ ಕತ್ತಿ ಮುರಿವಂತೆ[2] । ಇವು ಎಲ್ಲ
ದೂರವಾಗುವವು । ಬ್ರಹ್ಮಜ್ಞ ॥ 20 ॥
ನಯನವೇ ರೂಪವನು । ನಯವಾಗಿ ತಿಳಿಸುವದು[3]
ನಯನವನು ಬಿಟ್ಟು ಇನ್ನಿಲ್ಲ ರೂಪಕ್ಕೆ
ನಯನವೇ ಮಾನ । ಬ್ರಹ್ಮಜ್ಞ ॥ 21 ॥
ಶಾಸ್ತ್ರವೇ ಬ್ರಹ್ಮಕ್ಕೆ । ಉತ್ತಮದ ಮಾನವಿದು[4]
ಮತ್ತೇನು ಬೇಡ ತಿಳಿಯಲ್ಕೆ ನಿಶ್ಚಯದಿ
ಮುಕ್ತಿಯೇ ಬಕ್ಕು । ಬ್ರಹ್ಮಜ್ಞ ॥ 22 ॥
ಪ್ರಾಮಾಣ್ಯ ವೇದಕ್ಕೆ । ಈ ಮಾಳ್ಕೆಯಿಂದಿಹುದು
ಈ ಮಾತ 'ಶಾಸ್ತ್ರಯೋನಿತ್ವ' ಭಾಷ್ಯದಲಿ
ಸಾಮದಿಂ ನೋಡಿ । ಬ್ರಹ್ಮಜ್ಞ ॥ 23 ॥
ಶಬ್ದವಾಗಿಹ ಶ್ರುತಿಯು । ಶುದ್ಧ ಬೊಮ್ಮವ ತಿಳಿಸೆ
ಇದ್ದ ಒಂದೇ ದಾರಿ ಹೇಗೆನುತ ಚಿಂತಿಪರು
ಶ್ರದ್ಧೆಯಿಂ ಕೇಳಿ । ಬ್ರಹ್ಮಜ್ಞ ॥ 24 ॥
ಶಬ್ದವಾದರು ಶ್ರುತಿಯು । ಶಬ್ದಕ್ಕೆ ನಿಲುಕದಿಹ
ಸಿದ್ಧ ನಿಜರೂಪದನುಭವವ ತೋರಲ್ಕೆ
ಇದ್ದಿರುವ ಮಾನ । ಬ್ರಹ್ಮಜ್ಞ ॥ 25 ॥

---

1. ಸೂ. ಭಾ. 1–1–2, (ಭಾ. ಭಾ. 27) ಈ ಭಾಷ್ಯಭಾಗಸಂಖ್ಯೆಗಳು ಕಾರ್ಯಾಲಯದಲ್ಲಿ ಪ್ರಕಟವಾಗಿರುವ ಗ್ರಂಥದ ಸಂಖ್ಯೆಗಳಾಗಿವೆ.
2. ಸೂ. ಭಾ. 1–1–4. (ಭಾ. ಭಾ. 51)
3. ಸೂ. ಭಾ. 1–1–10. (ಭಾ. ಭಾ. 87)
4. ಸೂ. ಭಾ. 1–1–3. (ಭಾ. ಭಾ. 32)

ಸಾಮಾನ್ಯಶಬ್ದಕ್ಕೆ । ಈ ಮಾತು ಸಲ್ಲದಿದು
ನೇಮದಿಂ ಶ್ರುತಿಗೆ ಮೀಸಲಿದು । ಅನುಭವದ
ಸೀಮೆಗೊಯ್ಯುವದು । ಬ್ರಹ್ಮಜ್ಞ ॥ 26 ॥

ಮಾತೃ ಮಾನವು ಮೇಯ । ಮಾತು ಮನ ಮುಟ್ಟದಿಹ
ಆತುಮನ ಬಗೆಯ ತಿಳಿಸಲ್ಕೆ । ಶ್ರುತಿಯೊಂದು
ಕೌತುಕದ ಮಾನ । ಬ್ರಹ್ಮಜ್ಞ ॥ 27 ॥

ನಾನೆನ್ನುವದೆ ಮಾತೃ । ಮಾನವಿಂದ್ರಿಯ ಹೊರಗೆ
ಕಾಣುವದೆ ಮೇಯ ಇವು ಮೂರು । ಸಾಮಾನ್ಯ
ಜ್ಞಾನಕ್ಕೆ ಬೇಕು । ಬ್ರಹ್ಮಜ್ಞ ॥ 28 ॥

ವೇದಾಂತವನ್ನುಳಿದು । ಆದ ಶಾಸ್ತ್ರಗಳೆಲ್ಲ
ಭೇದವಿದ ಹಿಡಿದು ನಡೆಯುವವು । ಮಾತೃವನು
ಮೋದಿಸುತಲಿಹವು । ಬ್ರಹ್ಮಜ್ಞ ॥ 29 ॥

ಶ್ರುತಿಯು ಬಳಿಸಾರಿದರೆ । ಅತಿವಿಲಕ್ಷಣದಿಂದೆ
ಅತಿಗಳೆದು ಮಾತೃಮಾನಗಳ[1] । ಅನುಭವ
ಪಥವನ್ನೆ ತೋರ್ಕು । ಬ್ರಹ್ಮಜ್ಞ ॥ 30 ॥

ಅಂತ್ಯಪ್ರಮಾಣವಿದು । ಎಂತಲೇ ಕರೆದಿಹರು
ನಿಂತಿರದು ಮುಂದೆ ವ್ಯವಹಾರ ಮುಕ್ಕುಂಪೆ-
ಗಂತ್ಯವೇ ಅಕ್ಕು[2] । ಬ್ರಹ್ಮಜ್ಞ ॥ 31 ॥

ಗೀತೆಗಿಹ ಭಾಷ್ಯದಲಿ । ಈ ತೆರದಿ ಪೇಳಿಹರು
ಖ್ಯಾತ ಶ್ರುತಿಸಹಿತ ಎಲ್ಲವೂ ತಾನಾದ
ಮಾತನ್ನೆ ಪೇಳ್ಗು[3] । ಬ್ರಹ್ಮಜ್ಞ ॥ 32 ॥

ಮಾತೃಮಾನಗಳೆಲ್ಲ । ಆತ್ಮನೇ ಆಗುವವು
ಮಾತು ಮನವಳಿದು ತಾನುಳಿಯೆ । ಶ್ರುತಿಯ ನಿಜ-
ಹೇತು ಸಾಧಿಸಿತು । ಬ್ರಹ್ಮಜ್ಞ ॥ 33 ॥

---

1. ಗೀ. ಭಾ. 2–69 (ಭಾ. ಭಾ. 135)
2. ಗೀ. ಭಾ. 2–18 (ಭಾ. ಭಾ. 29)
3. ಬೃ. 4–5–15.

ಕರ್ಮಪರ ವಾಕ್ಯದಲಿ । ನೆಮ್ಮಿ ಸ್ವರ್ಗಾದಿಗಳ
ಸುಮ್ಮನೆಯೆ ಕರ್ಮ ಮಾಡುವದು । ಅನುಭವಕೆ
ಸಮ್ಮತಿಸಬರದು[1] । ಬ್ರಹ್ಮಜ್ಞ ॥ 34 ॥

ವಸ್ತುಪರ ವಾಕ್ಯದಲಿ । ಮತ್ತೆ ಶ್ರುತಿಯಲ್ಲದಲೆ
ಚಿತ್ತದಲಿ ನಿಂದು ಅನುಭವಕೆ ಈಗಲೇ
ಗೊತ್ತಾಗಬೇಕು[2] । ಬ್ರಹ್ಮಜ್ಞ ॥ 35 ॥

ನಾರಿಯಗ್ನಿಯು ಎಂದು । ಸಾರಿರಲು ಶ್ರುತಿಯಲ್ಲಿ[3]
ನೀರಿನಾ ಪಾತ್ರೆ ಶಿರದಲಿ ಹೆರಿಸಡಲು
ನೀರು ಕಾಯುವದೆ ? । ಬ್ರಹ್ಮಜ್ಞ ॥ 36 ॥

ನಿದ್ದೆಯಲಿ । ನಾನೆಂಬ । ಬುದ್ಧಿ ಮೊದಲೇನೊಂದು
ಇದ್ದಿಲ್ಲ ಎನುವ ಅನುಭವವನರಿಯಲ್ಕೆ
ಉದ್ದರಿಯೆ ಇಲ್ಲ । ಬ್ರಹ್ಮಜ್ಞ ॥ 37 ॥

ನೂರು ಶ್ರುತಿಗಳು ಒಟ್ಟು । ಸೇರುತ್ತ ಬೆಂಕಿಯನು
ಸಾರುತ್ತ ಶೀತ ಬೆಳಕಿಲ್ಲವೆಂದೆನಲು[4]
ಆರು ಒಪ್ಪುವರು ? ಬ್ರಹ್ಮಜ್ಞ ॥ 38 ॥

ಅನುಭವಕ್ಕೆ ಬರುವಂತೆ । ಅನುನಯದಿ ಪೇಳ್ವುದೇ
ಘನಶ್ರುತಿಯ ಮುಖ್ಯಪ್ರಾಮಾಣ್ಯ । ಬೊಮ್ಮವದು
ಅನುಭವದ ರೂಪ । ಬ್ರಹ್ಮಜ್ಞ ॥ 39 ॥

ಮಾತೃ ಮಾನವ ಕಳೆಯೆ । ಆತ್ಮನನುಭವ ಉಳಿಯೆ
ಮಾತೇನು ಇಲ್ಲವಾದಾಗ । ಶ್ರುತಿಸಹಿತ
ಆತ್ಮನೇ ಅಕ್ಕು । ಬ್ರಹ್ಮಜ್ಞ ॥ 40 ॥

ಪ್ರತ್ಯಕ್ಷ ಮೊದಲಾದ । ಉತ್ತಮದ ಮಾನಕ್ಕೆ
ಮತ್ತೆದುರು ಶ್ರುತಿಯು ಸರಿ ಹೇಗೆ? ಎಂಬುದನು
ಎತ್ತಿ ಕೇಳದಿರಿ । ಬ್ರಹ್ಮಜ್ಞ ॥ 41 ॥

---

1. ಸೂ. ಭಾ. 3–3–32 (ಭಾ. ಭಾ. 381)
2. ಸೂ. ಭಾ. 1–1–2 (ಭಾ. ಭಾ. 28)
3. ಛಾ. 5–8–1.
4. ಗೀ. ಭಾ. 18–66 (ಭಾ. ಭಾ. 1140)

ತನ್ನ ತನ್ನಯ ವಿಷಯ । ಇನ್ನು ತಿಳಿಸಲು ಮಾತ್ರ
ಚೆನ್ನಾಗಿ ಬಲ್ಲ ಇವುಗಳನು । ಎದುರಾಳಿ
ಎನ್ನುವದು ಹೇಗೆ[1]? । ಬ್ರಹ್ಮಜ್ಞ ॥ 42 ॥

ಕಾಷ್ಠದಲಿ ಮಾಡಿರುವ । ಶ್ರೇಷ್ಠ ಮಾವಿನಹಣ್ಣು
ದೃಷ್ಟಿಗದು ಸತ್ಯವೆನಿಸಿದರು । ಸ್ಪರ್ಶಕ್ಕೆ
ಕಾಷ್ಠವೇ ಅಕ್ಕು । ಬ್ರಹ್ಮಜ್ಞ ॥ 43 ॥

ವ್ಯವಹಾರಕ್ಷೇತ್ರದಲಿ । ಇವು ಸತ್ಯಪ್ರತ್ಯಕ್ಷ
ಇವುಗಳನು ಮೀರ್ದ ಪರಮಾರ್ಥತತ್ತ್ವಕ್ಕೆ
ಇವುಗಳಿಂದೇನು[2] । ಬ್ರಹ್ಮಜ್ಞ ॥ 44 ॥

ಅನುಭವವ ತೋರಿಸಲು । ಘನಶ್ರುತಿಯೆ ಮಾನವಿದು
ಚಿನುಮಯನ ಉಸಿರು ಶ್ರುತಿ ನಿತ್ಯವಾಗಿರ್ದ
ಅನುಭವವ ಹೇತು । ಬ್ರಹ್ಮಜ್ಞ ॥ 45 ॥

## ಅನುಭವದ ಸ್ವರೂಪ

ಅನುಭವವು ಎಂಬಲ್ಲಿ । ಅನುಸರಿಸಿರರ್ಥವನು
ಘನವಾದ ಪೂರ್ಣದನುಭವವು । ಎಲ್ಲರಿಗೆ
ಸನುಮತದ ಮಾತು । ಬ್ರಹ್ಮಜ್ಞ ॥ 46 ॥

ಕಾಲದೇಶಕೆ ಕಟ್ಟು । ಬೀಳದಿರುವನುಭವವು
ಮೇಲಾಗಿ ವ್ಯಕ್ತಿಗೊಂದೊಂದು ಬಗೆಯಿರದ
ಮುಲಾನುಭವವು । ಬ್ರಹ್ಮಜ್ಞ ॥ 47 ॥

ರೂಢಿಯಲಿ ಕರ್ಮಕ್ಕೆ । ಕೂಡುವದು ವೈಕಲ್ಪ್ಯ[3]
ಮಾಡುವದು ಮಾಡದಿರುಬಹುದು । ಅನ್ಯಥಾ
ಮಾಡಲೂಬಹುದು । ಬ್ರಹ್ಮಜ್ಞ ॥ 48 ॥

ಪರಮಾರ್ಥದನುಭವಕೆ । ಸರಿಬರದು ಈ ರೀತಿ
ಸರುವರಿಗು ಒಂದೆ ಬಗೆಯಾಗಿ । ವಸ್ತುವನು-
ಸರಿಸಿಯೇ ತಿಳಿಗು[4] । ಬ್ರಹ್ಮಜ್ಞ ॥ 49 ॥

1. ಬೃ. ಭಾ. 2–1–20 (ಭಾ. ಭಾ. 325)
2. ಸೂ. ಭಾ. 2–1–3 (ಭಾ. ಭಾ. 417)
3. ಸೂ. ಭಾ. 1–1–2 (ಭಾ. ಭಾ. 28)
4. ಸೂ. ಭಾ. 1–1–2 (ಭಾ. ಭಾ. 28)

ತರ್ಕದಿಂದಲ್ಲೆನಲು । ದಕ್ಕುವಾ ಮಾತಲ್ಲ
ತರ್ಕದಿಂ ನಿಲಿಸಳವಲ್ಲ । ಸತ್ಯಕ್ಕೆ
ಧಕ್ಕೆಯೇ ಇಲ್ಲ । ಬ್ರಹ್ಮಜ್ಞ ॥ 50 ॥

ಪಾವಕನು ಬಿಸಿ ಎಂಬ । ಭಾವವೆಲ್ಲೆಡೆ ಸಮವು[1]
ಆವಾಗ ಮಿಥ್ಯವಾದೀತು? ಸತ್ಯವಿದ
ನೀವು ಗುರುತಿಸಿರಿ । ಬ್ರಹ್ಮಜ್ಞ ॥ 51 ॥

ಇಂತು ತರ್ಕವ ಮೀರಿ । ಸ್ವಂತದನುಭವ ಬೀರಿ
ಎಂತಿಹುದೊ ಎಂಬ ಸಂಶಯಕೆ । ಎಡೆಯಿಲ್ಲ-
ದಂತಿಹುದೆ ನಿಜವು । ಬ್ರಹ್ಮಜ್ಞ ॥ 52 ॥

ವಿಷಯಗಳಿಗಿಂದ್ರಿಯದ । ಬೆಸುಗೆ ಬರುವನುಭವಕೆ
ಹೆಸರಿಹುದು ಕೇಳಿ **ಪ್ರತ್ಯಯ**ದ ಅನುಭವವು
ಎಸೆದೊಂದು ಜಾತಿ । ಬ್ರಹ್ಮಜ್ಞ ॥ 53 ॥

ಮನದಲ್ಲಿ ಮತ್ರವೇ । ಅನುಭವಕೆ ಬರುವಂಥ
ಘನ ಶಾಂತಿ ಕೋಪ ಇವು ಎಲ್ಲ । ವೇದನೆಗ-
ಳೆನುತಿಹರು ಕೇಳಿ । ಬ್ರಹ್ಮಜ್ಞ ॥ 54 ॥

ಎರಡನ್ನು ಮೀರಿರುವ । ಬರಿ **ಸ್ವಾನುಭವ**[2]**ವಾದ**
ಅರಿವಿನಾ ರೀತಿ ಬೇರುಂಟು । ಎಲ್ಲರಿಗು
ಗುರುತಿಲ್ಲ ನೋಡಿ । ಬ್ರಹ್ಮಜ್ಞ ॥ 55 ॥

ಸಾಕ್ಷಿಯನುಭವವಿದುವು । ಪಾಕ್ಷಿಕವು ತಾನಲ್ಲ
ಸಾಕ್ಷಾತ್ತು ನಿಜವು ನಿಶ್ಚಲವು । ಇದು ನಮ್ಮ
ಲಕ್ಷ್ಯದಲ್ಲಿಲ್ಲ । ಬ್ರಹ್ಮಜ್ಞ ॥ 56 ॥

ನಿದ್ದೆಯಲಿ ಸುಖವಾಗಿ । ಇದ್ದೆನೆನ್ನುವ ಮಾತು
ಬುದ್ಧಿಗಿದು ವೇದ್ಯ ತಾನಲ್ಲ । ಇದು ನಮ್ಮ
ಸಿದ್ಧಾನುಭವವು । ಬ್ರಹ್ಮಜ್ಞ ॥ 57 ॥

---

1. ಸೂ. ಭಾ. 2-1-11 (ಭಾ. ಭಾ. 429)

2. ಸ್ವಾನುಭವ, ಸಾಕ್ಷ್ಯನುಭವ, ಸಿದ್ಧಾನುಭವ, ಮೂಲಾನುಭವ – ಇವುಗಳೆಲ್ಲವೂ ಪರ್ಯಾಯಶಬ್ದಗಳು, ಪ್ರತ್ಯಯ, ವೇದನೆ, ಸಾಕ್ಷ್ಯನುಭವಗಳ ವಿಷಯಕ್ಕೆ **"ಪರಮಾರ್ಥ ಚಿಂತಾಮಣಿ"** ಪುಟ 37ನ್ನು ನೋಡಿ.

ಕನಸು ಕಂಡೆನು ನಾನು । ನನಸು ಬಂದಿತು ಈಗ
ಎನುತಿಹುದು ಸಾಕ್ಷಿಯನುಭವದ ಬಲದಿಂದೆ
ಎನುವುದರಿವಿಲ್ಲ । ಬ್ರಹ್ಮಜ್ಞ ॥ 58 ॥

ಬುದ್ದಿ ಇಲ್ಲದುದನ್ನು । ಬುದ್ಧಿ ಇದ್ದುದುದನ್ನು
ಸಿದ್ಧನಿವ ಬೆಳಗಿಹೊರಪಡಿಸೆ । ಇವಗೀಗ
ಬುದ್ಧಿ ಸಾಧನವು । ಬ್ರಹ್ಮಜ್ಞ ॥ 59 ॥

ಬಿಡಿಸಿ ತಿಳಿಯದೆ ಇದನು । ಒಡನೆ ನಿದ್ರೆಯ ಕನಸ
ಜಡಬುದ್ಧಿ ಬೆಳಗಿತೆನ್ನುವದು । ಕಡುಮೋಸ
ಬಡಿವಾರವಕ್ಕು । ಬ್ರಹ್ಮಜ್ಞ ॥ 60 ॥

ತಾರ್ಕಿಕರು ಲೌಕಿಕರು । ಮಿಕ್ಕ ದರ್ಶನದವರು
ದಿಕ್ಕೆಟ್ಟು ಸಾಕ್ಷಿರೂಪವನೆ ಕೈಬಿಡುತ
ಲೆಕ್ಕ ತಪ್ಪಿಹರು[1] । ಬ್ರಹ್ಮಜ್ಞ ॥ 61 ॥

ಮೀಸಲಾಗಿರುವ ನಿಜ । ಘೋಷವಿದು ಶ್ರುತಿಗಳಲಿ
ದೇಶಿಕನ ಬೋಧೆಯನುಸರಿಸಿ ಶೋಧಿಸಲು
ಭಾಸವಾಗುವದು । ಬ್ರಹ್ಮಜ್ಞ ॥ 62 ॥

ನಾನೆಂಬ ಭಾವವಿದು । ಕಾಣಿಸುವುದಡಗುವದು
ನಾನೆಂಬ ಭಾವವಿದ್ದುದನು ಇರದುದನು
ತಾನೆ ಅರಿವವನು । ಬ್ರಹ್ಮಜ್ಞ ॥ 63 ॥

ತಾನೆಂಬುದೇ ಸಾಕ್ಷಿ । ನಾನೆಂಬುದೇ ಬುದ್ಧಿ
ತಾನೆಂಬ ಸಾಕ್ಷಿಯನುಸರಿಸಿ । ವೇದಾಂತ
ತಾನೆ ಬೋಧಿಪುದು । ಬ್ರಹ್ಮಜ್ಞ ॥ 64 ॥

## ಬುದ್ಧಿಯ ಉಪಯೋಗ

ಸಾಕ್ಷಿಯನುಭವವನ್ನು। ಲಕ್ಷಿಸುತ ಸಂತತವು
ಶಿಕ್ಷಿಸುತ ಮತ್ತೆ ಬುದ್ಧಿಯನು । ಬೇರೇನು
ಈಕ್ಷಿಸಲು ಬೇಡಿ । ಬ್ರಹ್ಮಜ್ಞ ॥ 65 ॥

ಆತ್ಮನೆಂದರೆ ಸಾಕ್ಷಿ । ಆತ್ಮನನು ಕಾಣುವದು
ಏತರಿಂ ? ಬೇರೆ ಏನಿಲ್ಲ । ಬುದ್ಧಿಯೇ
ಈ ತೆರದ ಕರಣ । ಬ್ರಹ್ಮಜ್ಞ ॥ 66 ॥

1. ಸೂ.ಭಾ. 1–1–4 (ಭಾ.ಭಾ. 54)

ಮನಸಿನಿಂದಲೆ ಹೊಂದು । ಎನುತಿರುವುದಾ ಶ್ರುತಿಯು[1]
ಮನ ಮೇಣು ಬುದ್ಧಿ ಎರಡಲ್ಲವೆನುತಿರ್ಕೆ
ಅನುಮಾನ ಬೇಡ । ಬ್ರಹ್ಮಜ್ಞ ॥ 67 ॥

ಗುರುಶಾಸ್ತ್ರದುಪದೇಶ । ವರ ಶಮಾದ್ಯಭ್ಯಾಸ
ಪರಿಶುದ್ಧಿ ಪಡೆದ ಮನಮಾತ್ರ । ತಿಳಿಯಲ್ಕೆ
ಕರಣವೆನಿಸುವದು[2] । ಬ್ರಹ್ಮಜ್ಞ ॥ 68 ॥

ಗೀತೆಯಲಿ ಶಂಕರರು । ಮಾತಿದನು ಬರೆದಹರು
ಆತುಮನ ನಿಜವನನುಸರಿಸೆ । ಬುದ್ಧಿಯಿದು
ಆತುಮನೆ ಅಕ್ಕು । ಬ್ರಹ್ಮಜ್ಞ ॥ 69 ॥

ಆತ್ಮನಲಿ ಕಲ್ಪಿಸಿದ । ಮಿಥ್ಯೆ ಬುದ್ಧಿಯ ಕಳೆಯೆ
ಆತ್ಮನೇ ತಾನು ಆದಾಗ । ಈ ಬುದ್ಧಿ
ಪ್ರತ್ಯೇಕವಿರದು । ಬ್ರಹ್ಮಜ್ಞ ॥ 70 ॥

## ಪ್ರಮಾಣದ ಕೃತ್ಯ

ಇಂತು ಕಲ್ಪಿತದಿಂದೆ । ಹಿಂತೆಗೆಸಿ ಬುದ್ಧಿಯನು
ಅಂತ್ಯದೊಳು ತಾನು ನಿಜರೂಪ ಪಡೆಯೆ ಶ್ರುತಿ-
ಶಾಂತಿ ಹೊಂದುವದು । ಬ್ರಹ್ಮಜ್ಞ ॥ 71 ॥

ಕಳೆಯಲಜ್ಞಾನವನು । ಬಳಸಿರ್ದ ಮಾನವದು
ಬಳಿಕಾಗ ಕ್ರಿಯೆಯು ತಿಳಿಸುವದು ಬೇರಿರದು
ಇಳೆಯೊಳಗೆ ನೋಡಿ । ಬ್ರಹ್ಮಜ್ಞ ॥ 72 ॥

ಕತ್ತಲೆಯೊಳಿಹ ಘಟವ । ಮತ್ತೆ ಬೆಳಗಿದ ದೀಪ
ಕತ್ತಲೆಯ ಕಳೆದ ಬಳಿಕಲ್ಲಿ ಮಾಡಿರ್ದ
ಕೃತ್ಯವೇನಿಹುದು[3] । ಬ್ರಹ್ಮಜ್ಞ ॥ 73 ॥

---

1. ಕ. 1-3-13 ಬೃ. 4-4-19
2. ಗೀ. ಭಾ. 2-21 (ಭಾ. ಭಾ. 45)
3. ಮಾಂ. 7 (ಭಾ.ಭಾ. 39)

ಬೇಡವಾಗಿಹ ತಮವ । ಓಡಿಸುವದೇ ಕಾರ್ಯ
ರೂಢಿಯಲಿ ದೀಪಕಿದರಂತೆ । ಶ್ರುತಿಯು ಸಹ
ದೂಡುವದು ಸಟೆಯ[1] । ಬ್ರಹ್ಮಜ್ಞ ॥ 74 ॥

ಆತ್ಮನನ್ನರಿಯದವ । ಆತ್ಮನಲಿ ಕಲ್ಪಿಸಿದ
ಮಿಥ್ಯೆಯನು ಕಳೆಯೆ ಶ್ರುತಿ ಬಳಿಕ । ಉಳಿದಿರುವ-
ದಾತ್ಮನೇ ಇಹುದು । ಬ್ರಹ್ಮಜ್ಞ ॥ 75 ॥

ಸ್ಥಳವ ಮಾಡಿರಿ ನಮಗೆ । ಉಳಿದುಕೊಳ್ಳಲು ಎನಲು
ಘಳಿಲನೇ ಮೊದಲು ಒಟ್ಟಿರುವ ವಸ್ತುಗಳ
ತೊಲಗಿಸಿದರಾಯ್ತು । ಬ್ರಹ್ಮಜ್ಞ ॥ 76 ॥

ತೆಗೆಯಲ್ಕೆ ವಸ್ತುಗಳ । ಮಿಗೆ ಸ್ಥಳವ ಮಾಳ್ಪುದದು
ಬಗೆಯಲ್ಕೆ ಬೇರೆ ಇರದಂತೆ । ಆತ್ಮನನು
ಮಿಗೆ ತಿಳಿಯಹೊಲ್ಲ । ಬ್ರಹ್ಮಜ್ಞ ॥ 77 ॥

ತಿಳಿವವನು ನಾನೆಂಬ । ತಿಳಿವಳಿಕೆ ತೊಲಗಲ್ಕೆ
ತಿಳಿವಾಗಿ ತಾನು ನಿಂದಿರಲು । ಜ್ಞಾನ ಬೇ-
ರುಳಿಯದಿದು ನೋಡಿ । ಬ್ರಹ್ಮಜ್ಞ ॥ 78 ॥

ಜ್ಞಾತೃವನ್ನಾಶ್ರಯಿಸಿ । ವೃತ್ತಿಜ್ಞಾನವದಿಹುದು
ಜ್ಞಾತೃತ್ವ ಬಾಧೆಯಾಗಲ್ಕೆ । ಜ್ಞಾನದಾ
ವೃತ್ತಿ ಎತ್ತಣದು[2] ? । ಬ್ರಹ್ಮಜ್ಞ ॥ 79 ॥

ಇಂತು ಎಲ್ಲವ ಕಳೆದು । ಸ್ವಂತದನುಭವ ಉಳಿದು
ನಿಂತಿರುವವರೆಗೆ ಬೆಂಬಿಡದೆ । ಶ್ರುತಿನೇತಿ-
ಯೆಂತಲೇ ಇಹುದು । ಬ್ರಹ್ಮಜ್ಞ ॥ 80 ॥

ಜಿಜ್ಞಾಸು ತನ್ನೊಳಿಹ । ಅಜ್ಞಾನವನು ನೀಗಿ
ಸುಜ್ಞಾನರೂಪ ತಾನಾಗೆ । ಶ್ರುತಿಸಹಿತ
ಪ್ರಜ್ಞಾನವಕ್ಕು । ಬ್ರಹ್ಮಜ್ಞ ॥ 81 ॥

---

1. ಮಾ. 7, (ಭಾ. ಭಾ. 39)
2. ಮಾಂ. 7, (ಭಾ.ಭಾ. 39ರಲ್ಲಿರುವ ಪುಟ 54ರ ಎರಡನೆಯ ಟಿಪ್ಪಣಿ ನೋಡಿರಿ.)

ಆತ್ಮನಲಿ ನಿಂತಾಗ । ವ್ಯರ್ಥವಾಗಲಿ ಶಾಸ್ತ್ರ
ಸಾರ್ಥಕವು ದೋಷವಲ್ಲೆಂದು । ಭಾಷ್ಯದಲಿ[1]
ಒತ್ತಿ ಬರೆದಿಹರು । ಬ್ರಹ್ಮಜ್ಞ ॥ 82 ॥

ಬೋಧ ತಲೆದೋರ್ದಾಗ । ವೇದ ವೇದವದಲ್ಲ
ವೇದವೇ ಹೀಗೆ ಹೇಳಿಹುದು । ಇದರಿಂದೆ
ವೇದ ಕೊನೆ ಮಾನ । ಬ್ರಹ್ಮಜ್ಞ ॥ 83 ॥

## ಅಧ್ಯಾರೋಪ – ಅಪವಾದ

ಈ ಕೆಲಸ ಮಾಡಲ್ಕೆ । ಜೋಕೆಯಲಿ ಶ್ರುತಿಯೊಂದು
ಸೌಕರ್ಯ ಮಾಡಿಕೊಂಡಿಹುದು । ಬೋಧಕಿದು
ಬೇಕಾದ ರೀತಿ । ಬ್ರಹ್ಮಜ್ಞ ॥ 84 ॥

ತತ್ತ್ವವನ್ನರಿಯದಲೆ । ತತ್ತ್ವದಲಿ ಕಲ್ಪಿಸಿದ
ಮಿಥ್ಯದಾ ವಸ್ತು ಉಂಟೆಂದು ಒಪ್ಪಿದುದೆ
ಮತ್ತಿದಾರೋಪ । ಬ್ರಹ್ಮಜ್ಞ ॥ 85 ॥

ಮಿಥ್ಯೆಯನು ಕಳೆಯುವದು । ತತ್ತ್ವದಲಿ ನಿಲಿಸುವದು
ಉತ್ತಮದ ರೀತಿಯಪವಾದ ಶ್ರುತಿಯ ಈ
ಗತ್ತನ್ನು ನೋಡಿ[2] । ಬ್ರಹ್ಮಜ್ಞ ॥ 86 ॥

ಲೆಕ್ಕಣಿಕೆ ಕರಿಹಲಗೆ । ಇಕ್ಕುತಲಿ ಅಕ್ಷರವ
ಅಕ್ಕರದಿ ಕಲಿತುಕೊಂಡಾಗ । ಇವುಗಳಾ
ಲೆಕ್ಕವೇ ಇಲ್ಲ । ಬ್ರಹ್ಮಜ್ಞ ॥ 87 ॥

ರೇಖೆಗಳನೆಳೆದೆಳೆದು । ಹಾಕುತಲಿ ವರ್ಣಗಳ
ಬೇಕಾದ ಹಾಗೆ ಕಲಿಸಿರಲು । ರೇಖೆ ತಾ
ಮುಖ್ಯವೇ ಅಲ್ಲ[3] । ಬ್ರಹ್ಮಜ್ಞ ॥ 88 ॥

---

1. ಗೀ. ಭಾ. 13–2 (ಭಾ. ಭಾ. 762)
2. ಗೀ. 13–13 (ಭಾ. ಭಾ. 797) 3. ಬೃ. ಭಾ. 4–4–25 (ಭಾ. ಭಾ. 321)

ಸಾರುವೆಯ ಕಟ್ಟುವರು । ಭಾರಿ ಕಟ್ಟಡಕಾಗಿ
ಪೂರೈಸಿ ಕೆಲಸ ಕಟ್ಟಡವು ಮುಗಿದಾಗ
ಸಾರುವೆಯೆ ವ್ಯರ್ಥ । ಬ್ರಹ್ಮಜ್ಞ ॥ 89 ॥

ಇದು ಸಂಪ್ರದಾಯದಲಿ । ಮುದರಿಂದ ಬಂದಿಹುದು
ಹದವರಿತು ಹಿಂದೆ ಬೋಧಿಸಿದ ಜ್ಞಾನಿಗಳು
ಇದನೆ ಸಾರಿಹರು । ಬ್ರಹ್ಮಜ್ಞ ॥ 90 ॥

ಸಿದ್ಧವಾಗಿಹ ತತ್ತ್ವ । ಬುದ್ಧಿಯಲಿ ಹೊಳೆಯಲ್ಕೆ
ಇದ್ದ ಪ್ರತಿಬಂಧ ಕಳೆಯುವದೆ ಮಾರ್ಗವಿದು[1]
ಬುದ್ಧರದೆ ಉಕ್ತಿ । ಬ್ರಹ್ಮಜ್ಞ ॥ 91 ॥

ಇದುವೆ ದ್ರವಿಡಾಚಾರ್ಯ । ಬುಧರ ಸೂತ್ರವು ಇದನು
ಉದಹರಿಸಿ ಭಾಷ್ಯ ಬರೆದಿಹರು ಅಲ್ಲಲ್ಲಿ
ಮುದದಿ ಶಂಕರರು । ಬ್ರಹ್ಮಜ್ಞ ॥ 92 ॥

ಕಿಡಕಿ ಕದಗಳ ತೆಗೆಯೆ । ಒಡನೆ ಬೆಳಕೊಳಬರ್ಕು
ಬಡಿದಾಟ ಬೇಡ ರವಿಯೊಡನೆ । ಬೆಳಕಿಂಗೆ
ತಡೆ ತೆಗೆದರಾಯ್ತು । ಬ್ರಹ್ಮಜ್ಞ ॥ 93 ॥

ರೀತಿ ಇದನರಿಯದವ । ಪೂತ ಶಾಸ್ತ್ರವನೋದಿ
ಖ್ಯಾತಿಯಲಿ ತಾನು ಮೆರೆದರೂ । ಮೂರ್ಖನೇ
ಈತನೆಂದಿಹರು । ಬ್ರಹ್ಮಜ್ಞ ॥ 94 ॥

ಗೀತೆಯಲ್ಲಿರುತಿರುವ । ಕ್ಷೇತ್ರಜ್ಞನಧ್ಯಾಯ
ಕಾತರದಿ ಭಾಷ್ಯದೆರಡನೆಯ ಶ್ಲೋಕದಲಿ
ಮಾತಿದುವೆ ಬರ್ಕು[2] । ಬ್ರಹ್ಮಜ್ಞ ॥ 95 ॥

ವೇದಾಂತದಲ್ಲೆಲ್ಲ । ಬೋಧಿಸಿಹ ಪ್ರಕ್ರಿಯೆಯ
ಹಾದಿಯದು ಬೇರೆ ಇನ್ನಿಲ್ಲ । ಇದ ಬಿಟ್ಟು
ಬೋಧೆಯೇ ಇಲ್ಲ । ಬ್ರಹ್ಮಜ್ಞ ॥ 96 ॥

---

1. ಮಾಂ. ಕಾ. ಭಾ. 2–32 (ಭಾ. ಭಾ. 115)
2. ಗೀ. ಭಾ. 13–2, (ಭಾ. ಭಾ. 769)

ಬೇರೆ ಬೇರೆಯ ರೀತಿ । ತೋರಿದರು ಶ್ರುತಿಯಲ್ಲಿ
ಬೇರೆಲ್ಲ ರೂಪ ಇದರವೇ । ಅವು ಎಲ್ಲ
ಆರೋಪ ನೋಡಿ । ಬ್ರಹ್ಮಜ್ಞ ॥ 97 ॥

ಕೆಲವನ್ನು ಈಗಿಲ್ಲಿ । ಬಳಸಿ ತೋರಿಸಲಾಗಿ
ಉಳಿದದ್ದ ರೀತಿ ತಿಳಿದವರು ತಮ್ಮಲ್ಲಿ
ಸಲೆ ಬಳಸಿಕೊಳ್ಳಿ । ಬ್ರಹ್ಮಜ್ಞ ॥ 98 ॥

ಬ್ರಹ್ಮವೇ ಜ್ಞೇಯವಿದು । ಒಮ್ಮೆ ಶ್ರುತಿ ಪೇಳಲ್ಕೆ[1]
ಒಮ್ಮನದಿ ಮಿಕ್ಕ ಜ್ಞೇಯಗಳ ಕೈಬಿಡಲು
ಹಮ್ಮಿರ್ದ ಯುಕ್ತಿ । ಬ್ರಹ್ಮಜ್ಞ ॥ 99 ॥

ಆತ್ಮನನ್ನರಿಯದುದೆ । ಮತ್ತೆ ನಾನಾತ್ವಕ್ಕೆ
ಸೂಕ್ತವಹ ಮೂಲಕಾರಣವು ಎಂಬುದಕೆ
ಉಕ್ತಿ ಇದು ಬಂತು । ಬ್ರಹ್ಮಜ್ಞ ॥ 100 ॥

ಅರಿಯಲಾ ಬ್ರಹ್ಮವನು । ಅರಿಯಲ್ಕೆ ಬೇರೊಂದು
ಇರದಾಗಿ ಎಲ್ಲವರಿತಂತೆ ಎಂಬುದನು
ಅರುಹುವುದೆ ಯುಕ್ತಿ। ಬ್ರಹ್ಮಜ್ಞ ॥ 101 ॥

ತಿಳಿಯಲಾತ್ಮನ । ತಿಳಿವವನು ಮೊದಲಾದ
ಬಳುವಳಿಯ ಭೇದ ನಶಿಸುತ್ತಲಜ್ಞಾನ
ಉಳಿಯದಿಹ ಯುಕ್ತಿ[2] । ಬ್ರಹ್ಮಜ್ಞ ॥ 102 ॥

ಈ ರೀತಿ ಜ್ಞೇಯತ್ವ । ಅರೋಪ ಮಾಳ್ಪ ಶ್ರುತಿ
ಸಾರಾಂಶ ಜ್ಞಾನಿಗಳ ಮುಖದಿ ಅರಿಯಲ್ಕೆ[3]
ದೂರಕ್ಕು ಭವವು । ಬ್ರಹ್ಮಜ್ಞ ॥ 103 ॥

ಮುಂದಿನೊಂದೊಂದನ್ನು । ಹಿಂದಿನಂತೆಯೆ ವಿವಿಧ
ಬಂಧುರದ ಯುಕ್ತಿ ಹೂಡುತ್ತ । ಬೋಧೆಯನು
ಮುಂದೂಡಬಹುದು । ಬ್ರಹ್ಮಜ್ಞ ॥ 104 ॥

1. ಶ್ವೇ. 1–12.

2. ಸೂ. ಭಾ. 1–1–4 (ಭಾ. ಭಾ. 47)

3. ಈ ವಿಷಯಕ್ಕೆ ಶಂಕರವೇದಾಂತಸಾರ ಪುಟ 45–46 ಮತ್ತು ವೇದಾಂತ ಪ್ರಕ್ರಿಯಾಪ್ರತ್ಯಭಿಜ್ಞಾ ಪುಟ 28ನ್ನು ನೋಡಿ.

ಜ್ಞಾತೃವಾತುಮನೆಂದು । ಮತ್ತೆ ಶಾಸ್ತ್ರವು ಪೇಳಿ
ಕಿತ್ತುವದು ಜ್ಞೇಯವೆಂದಿರ್ದ ಆರೋಪ
ಯುಕ್ತಿಯಿಂದ ನೋಡಿ । ಬ್ರಹ್ಮಜ್ಞ ॥ 105 ॥

ಇಲ್ಲಿವಗೆ ಜ್ಞಾತೃತ್ವ । ಎಲ್ಲ ಜೀವಿಗಳಾತ್ಮ
ಮೆಲ್ಲನೆಯೆ ತಿಳಿಸಿ ಜ್ಞಾತೃತ್ವ ದೂಡುವದು
ಸಲ್ಲಲಿತ ಶಾಸ್ತ್ರ । ಬ್ರಹ್ಮಜ್ಞ ॥ 106 ॥

ಇವನು ಸಾಕ್ಷಿಯು ವ್ಯಾಪಿ[1]। ಇವ ದೇಹಕೊಳಪಡನು
ಇವನಲ್ಲಿ ತೋರಿ ಅಡಗುವದು ದ್ವೈತವೆಂ-
ದಿವನ ತಿಳಿಸುವದು । ಬ್ರಹ್ಮಜ್ಞ ॥ 107 ॥

ಹೇಳಿ ಸಾಕ್ಷಿತ್ವವನು । ಕೀಳುವದು ಜ್ಞಾತೃತ್ವ
ಪೇಳುತ್ತ ದ್ವೈತ ಹುಸಿಯೆಂದು । ಸಾಕ್ಷಿತ್ವ
ಹಳಿಯುವದು ಮತ್ತೆ । ಬ್ರಹ್ಮಜ್ಞ ॥ 108 ॥

ವೇದಾಂತವಾಕ್ಯದಾ । ಬೋಧೆಗೆ ಗಮ್ಯನಿವ[2]
ಆದರದಿ ಪೇಳಿ ಪ್ರತ್ಯಕ್ಷವನುಮಾನ
ವೇದ್ಯತ್ವ ಕಳೆಗು । ಬ್ರಹ್ಮಜ್ಞ ॥ 109 ॥

ವಾಣಿಮನಗಳು ಇವನ । ಕಾಣಲಾರವು[3] ಎಂದು
ತಾ ನುಡಿದು ವಾಕ್ಯಗಮ್ಯತ್ವ ಕಳೆಯುತ್ತ
ಸ್ವಾನುಭವ ತೋರ್ಕು । ಬ್ರಹ್ಮಜ್ಞ ॥ 110 ॥

ಕಾರಣನು ಜಗಕೆಂದು । ಆರೋಪಿಸಲ್ಕಾಗ
ತೋರಿಕೆಯು ಮಿಥ್ಯೆ ಇವ ಕಾರ್ಯನಲ್ಲೆಂಬ
ಧೋರಣೆಯ ನೋಡಿ । ಬ್ರಹ್ಮಜ್ಞ ॥ 111 ॥

ಕಾರ್ಯ ಮೀಥ್ಯೆಯಿದೆಂದು । ಧೈರ್ಯದಲಿ ಹೇಳುತಿರೆ
ಕಾರ್ಯವೂ ಅಲ್ಲ ಕಾರಣನು ತಾನಲ್ಲ
ಪರ್ಯಾಯದುಕ್ತಿ । ಬ್ರಹ್ಮಜ್ಞ ॥ 112 ॥

---

1. ಶ್ವೇ. 6–11
2. ಸೂ. ಭಾ. 1–1–4 (ಭಾ. ಭಾ. 54)
3. ತೈ. ಭಾ. 2–9 (ಭಾ. ಭಾ. 220)

ಹೇಳಿ ಜೀವತ್ವವನು । ಕೀಳುವದು ಜಾಡ್ಯವನು
ಹೇಳುತ್ತುಪಾಸ್ಯನಿವನೆಂದು ಮತ್ತೆ । ಜೀವತ್ವ
ಹಾಳುಮಾಡುವದು । ಬ್ರಹ್ಮಜ್ಞ ॥ 113 ॥

ಇದು ಎಂದುಪಾಸಿಪುದು । ಒದಗಿ ಬ್ರಹ್ಮವದಲ್ಲ[1]
ಇದರಿಂದೆ ಬೊಮ್ಮವಿದುಪಾಸ್ಯನೆಂಬುದನು
ಬದಿಗಿರಿಸುತಿಹುದು । ಬ್ರಹ್ಮಜ್ಞ ॥ 114 ॥

ಮೂರವಸ್ಥೆಯ ಹೇಳಿ । ಆರೋಪದಿಂದಲೇ
ಮೂರನ್ನು ಮೀರ್ದ ತುರ್ಯನಿವನೆನ್ನುತ್ತೆ
ಮೂರನ್ನು ಕಳೆಗು । ಬ್ರಹ್ಮಜ್ಞ ॥ 115 ॥

ಮೂರು ಸ್ವಪ್ನಗಳೆಂದು[2] । ಸಾರಿ ಹುಸಿಗೈದಾಗ
ಮೂರಿಲ್ಲ ಇವನು ನಾಲ್ಕೆಂತು । ಎನ್ನುತ್ತೆ
ತುರಿಯತ್ವ ಕಳೆಗು । ಬ್ರಹ್ಮಜ್ಞ ॥ 116 ॥

ಈಶತ್ವವನು ಹೇಳಿ । ದಾಸ್ಯತ್ವ ಕಳೆಯುವದು
ಲೇಸಿನಲಿ ಇವನು ಅದ್ವಯನು ಎನ್ನುತ್ತೆ
ಈಶತ್ವ ಕಳೆಗು । ಬ್ರಹ್ಮಜ್ಞ ॥ 117 ॥

ಹೀಗೆ ನಾನಾರೀತಿ । ತೂಗಿ ಹೇಳುವ ಶ್ರುತಿಗೆ
ಈ ಗುರಿಯು ನಿರುತವಾರೋಪವಪವಾದ
ಸಾಗಿಹುದು ಹೀಗೆ । ಬ್ರಹ್ಮಜ್ಞ ॥ 118 ॥

ಕೊನೆಗೆ ನಾನೆನ್ನುವದು । ಕೊನೆಗೊಂಡು ತಾನಾಗೆ
ತನಗಿಂತ ಬೇರೆ ಇರದಾಗೆ, ಶ್ರುತಿಗಾಗ
ಘನಮಾನವಕ್ಕು । ಬ್ರಹ್ಮಜ್ಞ ॥ 119 ॥

ಮೀರಿಹುದು ಪರಮಾರ್ಥ । ಕಾರ್ಯಕಾರಣಭಾವ
ಮೀರಿಹುದು ಜ್ಞಾನವಜ್ಞಾನಗಳನೆಲ್ಲ
ಮೀರಿಹುದು ಮನವ । ಬ್ರಹ್ಮಜ್ಞ ॥ 120 ॥

1. ಕೇ. 1–5
2. ಐ. ಭಾ. 1–3–12 (ಭಾ. ಭಾ. 56)

ಮಾಯೆ ಮಾಯಾಕಾರ್ಯ । ಮಾಯಾವಿತನ ಮೀರ್ದ
ಧ್ಯೇಯ ನಿಜ ಧ್ಯಾನ ಧ್ಯಾತೃತ್ವಗಳ ಮೀರ್ದ
ಸ್ಥಾಯಿಯೆನಿಸಿಹುದು । ಬ್ರಹ್ಮಜ್ಞ ॥ 121 ॥

ಈ ರೀತಿ ವ್ಯವಹಾರ । ಮೀರಿರ್ದ ವಸ್ತುವಿದು
ತೋರಿಸಲು ಬರದ ಅನುಭವದ ರೂಪವನು
ಸಾರುವದದೆಂತು ? । ಬ್ರಹ್ಮಜ್ಞ ॥ 122 ॥

ವ್ಯವಹಾರಕ್ಷೇತ್ರದಲಿ । ಸವನಿಸುವ ರೀತಿಗಳ
ವ್ಯವಹಾರವಿರದ ವಸ್ತುವಿನಲಿರುವಂತೆ
ತವೆ ಭಾವಿಸುವದು । ಬ್ರಹ್ಮಜ್ಞ ॥ 123 ॥

ಬೋಧೆಮಾಡಲು ಮೊದಲು । ಆದರಿಪುದಿವುಗಳನು
ಶೋಧವದು ಮುಗಿದು ಅನುಭವದಿ ನಿಲಲಾಗ
ವಾದವೇ ಹೋಯ್ತು । ಬ್ರಹ್ಮಜ್ಞ ॥ 124 ॥

ವೇದಾಂತಪ್ರಕ್ರಿಯೆಯ । ಹಾದಿ ಶಂಕರರದಿದು
ಬೋಧನೆಯ ನಿಜದಿ ಬರೆದಿಹರು ಶ್ರೀಗಳಿದ[1]
ನಾದರಿಸಿ ನೋಡಿ । ಬ್ರಹ್ಮಜ್ಞ ॥ 125 ॥

---

1. ಶ್ರೀಗಳವರು ಸಂಸ್ಕೃತಭಾಷೆಯಲ್ಲಿ ಬರೆದಿರುವ "ವೇದಾಂತಪ್ರಕ್ರಿಯಾ ಪ್ರತ್ಯಭಿಜ್ಞಾ" ಎಂಬ ಗ್ರಂಥದಲ್ಲಿ ಈ ಅಧ್ಯಾರೋಪಾಪವಾದಪ್ರಕ್ರಿಯೆಯ ಸ್ವರೂಪವನ್ನೆಲ್ಲ ವಿಸ್ತಾರವಾಗಿ ವಿವರಿಸಿದೆ. ಇದೇ ವಿಚಾರವನ್ನು ಇಂಗ್ಲಿಷು ಬಲ್ಲವರಿಗಾಗಿ " How to Recognize the Method of Vedanta" " ಎಂಬ ಶ್ರೀಗಳವರ ಗ್ರಂಥದಲ್ಲಿ ಸಂಕ್ಷೇಪವಾಗಿ ವಿವರಿಸಿದೆ.

# ಮೂರನೆಯ ಅಧ್ಯಾಯ

## ಅಧ್ಯಾಸ

ಅಧ್ಯಾಸದಿಂದಲೇ । ಬದ್ಧನಾಗಿಹ ಜೀವ
ವಿದ್ಯೆಯನು ನೀಡಿ ಅಧ್ಯಾಸ ಕಳೆಯುವದೆ
ಉದ್ದೇಶ ಶ್ರುತಿಗೆ । ಬ್ರಹ್ಮಜ್ಞ ॥ 1 ॥

ಒಂದನ್ನು ಇನ್ನೊಂದು । ಎಂದಾಗಿ ಕಲ್ಪಿಸುವ
ನಿಂದಿರುವ ತಪ್ಪುತಿಳಿವನ್ನೆ । ಅಧ್ಯಾಸ
ವೆಂದಿಹರು[1] ಬುಧರು । ಬ್ರಹ್ಮಜ್ಞ ॥ 2 ॥

ಹಾವೆಂದು ಹಗ್ಗವನು । ಭಾವಿಸುವರಿದರಂತೆ
ಭಾವಿಪರು ಬೆಳ್ಳಿ ಎನ್ನುತ್ತೆ ಸಿಂಪನ್ನು
ಭಾವನೆಯು ಭ್ರಾಂತಿ । ಬ್ರಹ್ಮಜ್ಞ ॥ 3 ॥

ಆತ್ಮನನು ಇದರಂತೆ । ಮತ್ತನಾತ್ಮನು ಎನಲು
ಈ ತೆರದ ತಪ್ಪುತಿಳಿವನ್ನೆ ಸಾರುತಿಹ
ರೀತಿಯಧ್ಯಾಸ । ಬ್ರಹ್ಮಜ್ಞ ॥ 4 ॥

ಸತ್ಯದಲಿ ಕಲ್ಪಿಸುತ । ಮಿಥ್ಯವಾಗಿಹುದನ್ನು[2]
ಸತ್ಯಕ್ಕೆ ಇದ್ದ ಧರ್ಮಗಳ, ಮಿಥ್ಯಕ್ಕೆ
ಮತ್ತೆ ಹಚ್ಚುವರು । ಬ್ರಹ್ಮಜ್ಞ ॥ 5 ॥

ಇದರಂತೆ ಕಲ್ಪಿತಕೆ । ಒದಗಿದ್ದ ಧರ್ಮಗಳ
ಹದನಾಗಿ ಸತ್ಯವಸ್ತುವಿಗೆ ಹಚ್ಚುವರು
ಇದುವೆ ಅಧ್ಯಾಸ । ಬ್ರಹ್ಮಜ್ಞ ॥ 6 ॥

ಇದು ಹಾವು ಎಂದಾಗ । ಇದು ಎಂಬ ಪದ ನಿಜದಿ
ಒದಗುವದು ಸತ್ಯರಜ್ಜುವಿಗೆ, ಸರ್ಪಕ್ಕೆ
ಒದಗದಿದು ನೋಡಿ । ಬ್ರಹ್ಮಜ್ಞ ॥ 7 ॥

---

1. ಅ. ಭಾ. 1–1–1 (ಅಧ್ಯಾ. ಭಾ. ಭಾ. 8).
2. ಅ. ಭಾ. (ಭಾ. ಭಾ. 1) 'ಸತ್ಯಾನೃತೇ ಮಿಥುನೀಕೃತ್ಯ' ಎಂಬುದನ್ನು ಗಮನಿಸಿರಿ.

ಸರ್ಪದಾ ಹೆಡೆಬಾಲ । ದಪ್ಪ ಹಗ್ಗಕ್ಕಿಲ್ಲ
ಇರ್ಪಂತೆ ತೋರಿ ಭಯವನ್ನು ಹಗ್ಗದಲಿ
ಒಪ್ಪಿಸಿತು ಭ್ರಾಂತಿ । ಬ್ರಹ್ಮಜ್ಞ ॥ 8 ॥

ಆತ್ಮನಲ್ಲದುದೆಲ್ಲ । ಮಿಥ್ಯೆ ಕಲ್ಪಿತ ಜಡವು
ಆತ್ಮನೇ ಸತ್ಯ ಎರಡನ್ನು ಸಲೆ ಬೆರೆಸಿ
ಮತ್ತೆ ನಾನೆನುವ । ಬ್ರಹ್ಮಜ್ಞ ॥ 9 ॥

ನಾನು ಬ್ರಾಹ್ಮಣನೆಂದು । ಮೇಣಿನ್ನು ನುಡಿವಾಗ
ತಾನಾತ್ಮ ನಿಜವು ತನ್ನಿರವ ದೇಹದಲಿ
ಕಾಣುವದು ಭ್ರಾಂತಿ[1] । ಬ್ರಹ್ಮಜ್ಞ ॥ 10 ॥

ಸಾವವನು ನಾನೆಂಬ । ಭಾವನೆಯ ತಳೆದಾಗ
ಸಾವುದಿದು ದೇಹ ತನ್ನಲ್ಲಿ ಅದನಿಡುವ
ಭಾವವಧ್ಯಾಸ । ಬ್ರಹ್ಮಜ್ಞ ॥ 11 ॥

ಹಾವೆಂದು ಭಾವಿಸಲು । ಭಾವದಲಿ ಭಯಬಹುದು
ಭಾವಿಸಿದ ಬೆಳ್ಳಿ ಪಡೆಯಲ್ಕೆ ಶೀಘ್ರದಲಿ
ಧಾವಿಪುದು ಸಹಜ । ಬ್ರಹ್ಮಜ್ಞ ॥ 12 ॥

ಈ ವಿಧದಿ ಆತ್ಮನನು । ಭಾವಿಸಲು ಜಗವೆಂದು
ಭಾವಕ್ಕೆ ತಕ್ಕ ಭಯಕಾಮ ಬಂದಿಹವು
ಜೀವನದಿ ನೋಡಿ । ಬ್ರಹ್ಮಜ್ಞ ॥ 13 ॥

## ಆಕ್ಷೇಪ

ಎದುರಿಗಿಹ ವಸ್ತುವಿಗೆ । ಒದಗಬಹುದೀ ಮಾತು
ಇದು ಹೇಗೆ ಬಂತು ಆತ್ಮನಿಗೆ? ವಿಷಯನೇ
ಮೊದಲಲ್ಲವಿವನು[2] । ಬ್ರಹ್ಮಜ್ಞ ॥ 14 ॥

ಸತ್ಯವಾಗಿದೆ ಹಗ್ಗ । ಮತ್ತೊಂದು ಕಡೆಯಲ್ಲಿ
ಸತ್ಯವಹ ಸರ್ಪ ಕಂಡಿರ್ದ ಸ್ಮೃತಿಯಿಂದ
ವ್ಯರ್ಥ ಭಯವಕ್ಕು । ಬ್ರಹ್ಮಜ್ಞ ॥ 15 ॥

---

1. ಅಧ್ಯಾ. ಭಾ. ಭಾ. 8
2. ಅಧ್ಯಾ. ಭಾ. ಭಾ. 3

ಸತ್ಯನಾತ್ಮನು ಮತ್ತೆ । ಮಿಥ್ಯೆಯೇ ಮಿಕ್ಕಿನದು
ಎತ್ತಣದು ಎರಡಕಧ್ಯಾಸ? ಎನಲೇಕೆ
ಚಿತ್ತವಿಸಿ ಕೇಳಿ । ಬ್ರಹ್ಮಜ್ಞ ॥ 16 ॥

**ಉತ್ತರ**

ತಾನಾದ ಆತ್ಮನಿವ । ನಾನೆಂಬ ಪ್ರತ್ಯಯಕೆ
ಕಾಣುವನು ವಿಷಯನಾಗಿರ್ದು । ಅನುಭವದಿ
ಮೇಣಕ್ಕು ಭ್ರಾಂತಿ । ಬ್ರಹ್ಮಜ್ಞ ॥ 17 ॥

ಪ್ರತ್ಯಕ್ಷವಲ್ಲದಿಹ । ವಸ್ತುವಾಕಾಶವದು
ಮತ್ತಿನ್ನು ನೀಲಿ ಕೊಪ್ಪರಿಗೆಯಾಕಾರ
ವೆತ್ತಿ ಕಾಣುವದು । ಬ್ರಹ್ಮಜ್ಞ ॥ 18 ॥

ಸತ್ಯಕ್ಕು ಮಿಥ್ಯೆಗೂ । ಯುಕ್ತವಲ್ಲಧ್ಯಾಸ
ಯುಕ್ತವಿದು ನಿಜದಿ ಆಕ್ಷೇಪವಾದೊಡೇಂ?
ಮತ್ತಿದನುಭವವು । ಬ್ರಹ್ಮಜ್ಞ ॥ 19 ॥

ಎಲ್ಲರನುಭವದಲ್ಲಿ । ಬಲ್ಲಂತೆ ಕಂಡಿರಲು
ಸಲ್ಲದಿದು ತರ್ಕ ಹೇಗಾಯ್ತು ಎನ್ನುವದು[1]
ಬಲ್ಲಿದರು ನೋಡಿ । ಬ್ರಹ್ಮಜ್ಞ ॥ 20 ॥

ಎಲ್ಲರೂ ಲೋಕದಲಿ । ಎಲ್ಲ ವ್ಯವಹಾರದಲಿ[2]
ಬಲ್ಲಂತೆ ನಾನು ಎನುವಾಗ ಅಧ್ಯಾಸ-
ವಲ್ಲಿಯೇ ಇಹುದು । ಬ್ರಹ್ಮಜ್ಞ ॥ 21 ॥

ನಾನು ಕುಳ್ಳನು ಉದ್ದ । ನಾನು ಕುಳಿತಿಹೆ ನಿಂತೆ
ತಾ ನುಡಿಯೆ ಮಾತು ಇಂತೀಗ ದೇಹವೇ
ತಾನೆಂದು ಬಗೆವ[3] । ಬ್ರಹ್ಮಜ್ಞ ॥ 22 ॥

ಇಂದ್ರಿಯದ ಧರ್ಮಗಳ । ಮುಂದೆ ಮನಸಿನ ಧರ್ಮ
ಒಂದಾಗಿ ತನ್ನ ಸೇರಿಸದೆ ವ್ಯವಹಾರ
ವೆಂದಿಗೂ ಇಲ್ಲ । ಬ್ರಹ್ಮಜ್ಞ ॥ 23 ॥

---

1. 'ನ ಹಿ ದೃಷ್ಟೇ ಅನುಪಪನ್ನಂ ನಾಮ' – ಎಂಬ ಭಾಷ್ಯವಾಕ್ಯವನ್ನು ನೋಡಿ. ಬೃ. ಭಾ. 1–4–10 (ಭಾ. ಭಾ. 154)

2. ಅಧ್ಯಾ. ಭಾ. ಭಾ. 8 3. ಅಧ್ಯಾ. ಭಾ. ಭಾ. 5.

ಜ್ಞಾನಿಗಳಿಗೂ ಸಹಿತ । ನಾನೆಂಬ ವ್ಯವಹಾರ
ತಾಣಕ್ಕೆ ಬರಲು ಸಹಜವಿದು ಅಧ್ಯಾಸ
ಸ್ವಾನುಭವವೇದ್ಯ । ಬ್ರಹ್ಮಜ್ಞ ॥ 24 ॥

ಇದರಿಂದ ಲೌಕಿಕದ । ವೈದಿಕದ ವ್ಯವಹಾರ
ವಿಧಿಸಿರುವ ಬೇಡವೆಂದಿರುವ ಎಲ್ಲಕ್ಕು
ಇದೆ ಮೂಲ ಭ್ರಾಂತಿ । ಬ್ರಹ್ಮಜ್ಞ ॥ 25 ॥

ಮೋಕ್ಷವನು ಪಡೆಯಲ್ಕೆ । ಶಿಕ್ಷಿಸುವ ಶಾಸ್ತ್ರಕ್ಕು
ಕುಕ್ಷಿಯಲೆ ಬಂತು ಅಧ್ಯಾಸ ಸರ್ವರೂ
ಈಕ್ಷಿಸಿರಿ ಸತ್ಯ । ಬ್ರಹ್ಮಜ್ಞ ॥ 26 ॥

ಯಾವ ಕಾರಣದಿಂದೆ । ಈ ವಿಧದಲಧ್ಯಾಸ
ಭವದೊಳು ಜನಕೆ ಬಂದಿಹುದು ಎಂದೆನಲು
ಈವರುತ್ತರವ । ಬ್ರಹ್ಮಜ್ಞ ॥ 27 ॥

ಆತ್ಮಸ್ವರೂಪವನು । ಮತ್ತನಾತ್ಮವನಿದನು
ಚಿತ್ತದಲಿ ಬಿಡಿಸಿ ತಿಳಿಯದುದೆ ಕಾರಣವು
ಮತ್ತೇನು ಇಲ್ಲ[1]। ಬ್ರಹ್ಮಜ್ಞ ॥ 28 ॥

## ಹೆಸರು–ಕಾರ್ಯ–ಪರಿಹಾರದ ಉಪಾಯ

ಅಧ್ಯಾಸವನ್ನಿದನು । ಬುದ್ಧರೆನುವರವಿದ್ಯೆ[2]
ಇದ್ದಿಹುದು ಎಲ್ಲ ದುಃಖಕ್ಕೆ ಕಾರಣವು
ಅಧ್ಯಾಸ ಮೂಲ । ಬ್ರಹ್ಮಜ್ಞ ॥ 29 ॥

ತನ್ನ ತಾನಲ್ಲದುದ । ತನ್ನಲ್ಲಿ ವಿಂಗಡಿಸಿ
ತನ್ನ ನಿಜರೂಪ ನಿಶ್ಚಯವ ಮಾಡುವದೆ
ಇನ್ನು ಇದು ವಿದ್ಯೆ[3] । ಬ್ರಹ್ಮಜ್ಞ ॥ 30 ॥

ಆವ ವಸ್ತುವಿನಲ್ಲಿ । ಆವುದನೆ ಭಾವಿಪರೊ
ಭಾವಿಸಿದ ಸಟೆಯ ಗುಣದೋಷವಾಧಾರ–
ಕಾವಗುಂ ಬರದು[4] । ಬ್ರಹ್ಮಜ್ಞ ॥ 31 ॥

1. ಅಧ್ಯಾ. ಭಾ. ಭಾ. 1ರಲ್ಲಿರುವ 'ಇತರೇತರಾವಿವೇಕೇನ' ಎಂಬುದನ್ನೂ ಗೀ. ಭಾ. 13–26 (ಭಾ. ಭಾ. 826)ರಲ್ಲಿರುವ 'ವಿವೇಕಾಭಾವನಿಬನ್ಧನಃ' ಎಂಬುದನ್ನೂ ನೋಡಿರಿ.
2. ಅಧ್ಯಾ. ಭಾ. ಭಾ. 4 3–4. ಅಧ್ಯಾ. ಭಾ. ಭಾ. 4

ಹಗ್ಗವನು ಹಾವೆನಲು । ಒಗ್ಗಿರದು ವಿಷವದಕೆ
ಹಿಗ್ಗಿ ಹೂಮಾಲೆ ಎಂದೆನಲು ಸೌಗಂಧ
ಹಗ್ಗಕ್ಕೆ ಬರದು । ಬ್ರಹ್ಮಜ್ಞ ॥ 32 ॥

ಮರುಳುಗಾಡನು ಕಂಡು । ಕೆರೆಯ ಜಲವೆಂದೆನಲು
ಮರಳುನೆಲ ತೇವಗೊಳದಂತೆ ಇಲ್ಲಿಯೂ
ಅರಿಯಬೇಕಿದನು । ಬ್ರಹ್ಮಜ್ಞ ॥ 33 ॥

ಬ್ರಹ್ಮದಲಿ ಸಂಸಾರ । ಸುಮ್ಮನೆಯೆ ಕಲ್ಪಿಸಲು
ಬ್ರಹ್ಮಕ್ಕೆ ಭವವು ಸೋಂಕಿಲ್ಲವೆಂದಿಗೂ
ಬ್ರಹ್ಮ ನಿರ್ಧರ್ಮ । ಬ್ರಹ್ಮಜ್ಞ ॥ 34 ॥

ಅಧ್ಯಾಸ ಕಳೆಯಲ್ಕೆ । ವಿದ್ಯೆಯೇ ಘನಮದ್ದು
ವಿದ್ಯೆಯಿಂದಿದುವೆ ತೊಲಗಲ್ಕೆ ಶೀಘ್ರದಲಿ
ಸಿದ್ಧವೇ ಮುಕ್ತಿ । ಬ್ರಹ್ಮಜ್ಞ ॥ 35 ॥

ವ್ಯಾಸಸೂತ್ರಂಗಳಿಗೆ । ಭಾಷ್ಯರಚಿಸುವ ಮೊದಲು
ಲೇಸಾಗಿ ಬರೆದ ಪೀಠಿಕೆಗೆ ಅಧ್ಯಾಸ-
ಭಾಷ್ಯವೆನ್ನುವರು । ಬ್ರಹ್ಮಜ್ಞ ॥ 36 ॥

ಅದರ ಸಾರವನಿಲ್ಲಿ । ಇದುವರೆಗೆ ಹೇಳಿರುವೆ
ಮುದದಿಂದ ವಿವರ ತಿಳಿಯಲ್ಕೆ ಗ್ರಂಥಗಳ
ನಿದಕೆ ನೋಡುವದು । ಬ್ರಹ್ಮಜ್ಞ ॥ 37 ॥

ಅಧಿಕರಣಪಂಚಕವು । ಇದು ಕನ್ನಡದ ಗ್ರಂಥ[1]
ಇದು ಬೇರೆ 'ಸುಗಮ'[2] ಸಂಸ್ಕೃತದಿ ಬರೆದಿಹುದು
ಸದಮಲದ ರತ್ನ । ಬ್ರಹ್ಮಜ್ಞ ॥ 38 ॥

## ಅವಿದ್ಯೆ

ಇದ್ದುದನು ವಿಪರೀತ । ಬುದ್ಧಿಯಲಿ ಕಾಣುವದು
ಅಧ್ಯಾಸವೆನುತ ಹೇಳಿತ್ತು ಅದನಿಲ್ಲಿ
ತಿದ್ದಿ ಹೇಳುವೆನು । ಬ್ರಹ್ಮಜ್ಞ ॥ 39 ॥

---

1. ಶ್ರೀಶ್ರೀಗಳವರು ಬ್ರಹ್ಮಸೂತ್ರದ ಮೊದಲನೆಯ ಅಧ್ಯಾಯದ ಒಂದನೆಯ ಪಾದದ ಐದು ಸೂತ್ರಗಳಿಗೆ ಮಾತ್ರ ಬರೆದಿರುವ ವಿಸ್ತಾರವಾದ ಪರಿಶಿಷ್ಟದ್ವಯಸಹಿತವಾದ ಕನ್ನಡ ಅನುವಾದಗ್ರಂಥವನ್ನಿಲ್ಲಿ ಪರಾಮರ್ಶಿಸಿದೆ.

2. ಇದು ಈಚೆಗೆ ಶ್ರೀಗಳವರು ಸಂಸ್ಕೃತಭಾಷೆಯಲ್ಲಿ ಬರೆದಿರುವ ಅಧ್ಯಾಸಭಾಷ್ಯದ ಮೇಲಿನ ಹೊಸ ವ್ಯಾಖ್ಯಾನ.

ತಿಳಿಯದಿರುವದು ಮತ್ತೆ । ತಿಳಿಯುವದು ತಪ್ಪಾಗಿ
ಬಳಿಕಲ್ಲಿ ಬರುವ ಸಂಶಯುವವಿದ್ಯೆಯಾ
ಬಳಗ ನೋಡೆಂದ[1] । ಬ್ರಹ್ಮಜ್ಞ ॥ 40 ॥

ಅಗ್ರಹಣ ವಿಪರೀತ । ನಿಗ್ಗರದ ಸಂಶಯವು
ವ್ಯಗ್ರದೀ ಮುಸುಕು ಮತಿಗಿದುವೆ ಹುಟ್ಟುಗುಣ
ಒಗ್ಗಿಹುದು ನೋಡಿ । ಬ್ರಹ್ಮಜ್ಞ ॥ 41 ॥

ತಿಳಿಯಲ್ಕೆ ತಪ್ಪಾಗಿ । ಬಳಿಕ ಸಂಶಯಮಾಡೆ
ತಿಳಿಯದುದೆ ಮೂಲ ಸರುವರಿಗೆ ಲೋಕದಲಿ
ತಿಳಿದ ಮಾತಿಹುದು । ಬ್ರಹ್ಮಜ್ಞ ॥ 42 ॥

ಅರಿವು ತಾ ಬುದ್ಧಿಯಲಿ । ಬರಲಾಗಿ ಇವು ಮೂರು
ಭರದಿಂದೆ ಕರಗಿಹೋಗುವವು ಅನುಭವದಿ
ಸರುವರಿಗು ಉಂಟು । ಬ್ರಹ್ಮಜ್ಞ ॥ 43 ॥

ಕಣ್ಣಪರೆ ಬರಲಾಗಿ । ಇನ್ನು ಈ ಮೂರು ಸಹ
ತನ್ನಲ್ಲಿ ತೋರಿಬಂದರೂ ತನಗಲ್ಲ
ಕಣ್ಣಿಗೇ ದೋಷ । ಬ್ರಹ್ಮಜ್ಞ ॥ 44 ॥

ಪರೆಯನ್ನು ತೆಗೆಯಲ್ಕೆ । ಹರಿಯುವವು ಇವು ಮೂರು
ಸರಿಯಗಿ ಕಣ್ಣು ಕಾಣಲ್ಕೆ ಅದನು ಸಹ
ಅರಿವವನು ತಾನು । ಬ್ರಹ್ಮಜ್ಞ ॥ 45 ॥

ಆತ್ಮನಲಿ ಈ ಮೂರು । ಎತ್ತಣವು? ಚೈತನ್ಯ
ನಿತ್ಯ ನಿಜರೂಪನವನಿಗಿವು ಎಂದಿಗೂ
ಹತ್ತುವದೆ ಇಲ್ಲ । ಬ್ರಹ್ಮಜ್ಞ ॥ 46 ॥

ಅರಿವಿಲ್ಲ ನನಗೆಂಬ । ಅರಿವೆ ನಮ್ಮೊಳು ಸಾಕ್ಷಿ
ಅರಿಯಲ್ಕೆ ಮತಿಗೆ ಬಂತೀಗ ಜ್ಞಾನವೆಂ-
ಬರಿವು ಸಹ ಸಾಕ್ಷಿ । ಬ್ರಹ್ಮಜ್ಞ ॥ 47 ॥

ಹೀಗಿದ್ದರೂ ಶ್ರುತಿಯು । ಸಾಗಿಸಲು ಬೋಧವನು
ಆಗಿರುವ ಬಂಧ ಆತ್ಮನನ್ನರಿಯದಿಹ
ರೋಗವೆಂದಿಹುದು । ಬ್ರಹ್ಮಜ್ಞ ॥ 48 ॥

---

1. ಗೀ. ಭಾ. 13–2 (ಭಾ. ಭಾ. 761). ಈ ಭಾಗವು 47ನೆಯ ಪದ್ಯದವರೆಗೂ ಅನ್ವಯಿಸುತ್ತದೆ.

ಆತ್ಮನನ್ನರಿತವನು । ಮುಕ್ತ ತಾನಾಗುವನು
ಮಾತು ಇದು ಲೋಕಬೇಹಾರವನುಸರಿಪ
ರೀತಿಯಾರೋಪ[1] । ಬ್ರಹ್ಮಜ್ಞ ॥ 49 ॥

ತಿಳಿದೆ ಬೊಮ್ಮವನೆಂದು । ತಿಳಿದವನು ತಿಳಿದಿಲ್ಲ
ತಿಳಿದಿಹೆನು ತಿಳಿಯೆ ಎರಡನ್ನು ಮೀರಿರುವ
ಉಳಿಮೆಯೇ ಬೊಮ್ಮ । ಬ್ರಹ್ಮಜ್ಞ ॥ 50 ॥

ಇಂತು ವಿದ್ಯಾವಿದ್ಯೆ । ಅಂತ್ಯವನು ಹೊಂದಿರಲು
ಹಿಂತೆಗೆದು ಇಲ್ಲಿ ಆರೋಪವನು ಶ್ರುತಿಯು
ಶಾಂತಿಹೊಂದುವದು । ಬ್ರಹ್ಮಜ್ಞ ॥ 51 ॥

ಬೊಮ್ಮವನು ತಿಳಿದವನು । ಬೊಮ್ಮವೇ ಆಗುವನು[2]
ಬೊಮ್ಮಕ್ಕೆ ಜ್ಞಾನವಜ್ಞಾನ ಸವನಿಪುದೆ ?
ಸುಮ್ಮನಾರೋಪ । ಬ್ರಹ್ಮಜ್ಞ ॥ 52 ॥

ಅರಿಯೆ ವಿದ್ಯಾವಿದ್ಯೆ । ಎರಡು ಬ್ರಹ್ಮದಲಿಲ್ಲ
ಎರಡಾಗಿ ತೋರ್ಪ ವ್ಯವಹಾರ ಮಿಥ್ಯೆಯೆಂ-
ದರಿಯುವದೆ ವಿದ್ಯೆ । ಬ್ರಹ್ಮಜ್ಞ ॥ 53 ॥

ಉಪದೇಶಮಾಡಲ್ಕೆ । ಸುಪಥವಾದವು ಎಂಬ
ವ್ಯಪದೇಶ ಪರಮಗುರುಗಳದು[3] । ಕಾರಿಕೆಯ
ಗುಪಿತವಿದು ನೋಡಿ । ಬ್ರಹ್ಮಜ್ಞ ॥ 54 ॥

## (ಅವಿದ್ಯೆಗೆ ಕಾರಣವೇನು?)

ಈ ಗುಟ್ಟನರಿಯದಲೆ । ಹೇಗೆ ಬಂದಿತವಿದ್ಯೆ?
ಬೇಗನೇ ಹೇಳಿ ಕಾರಣವನೆನ್ನುವರ
ಹೇಗೆ ತಿದ್ದುವದು? । ಬ್ರಹ್ಮಜ್ಞ ॥ 55 ॥

ಕಾರ್ಯಕಾರಣವೆಂಬ । ಸರ್ವವ್ಯವಹಾರವೂ
ಉರ್ವಿಯೊಳು ಕಾಲವಿಲ್ಲದಲೆ ಕಾಣಿಸದು
ಸರ್ವರೂ ನೋಡಿ[4]। ಬ್ರಹ್ಮಜ್ಞ ॥ 56 ॥

1. ಶು.ಶಾಂ. ಪ್ರಭಾ. **"ಶುದ್ಧಶಾಂಕರಪ್ರಕ್ರಿಯಾಭಾಸ್ಕರ"** ಎಂಬ ಸಂಸ್ಕೃತ ಗ್ರಂಥದ ಐದನೆಯ ಕಿರಣವನ್ನು ನೋಡಿರಿ.

2. ಮುಂ. ಭಾ. 3-2-9 (ಭಾ. ಭಾ. 123)

3. ಗೌ. ಮಾಂ. ಕಾ. 1-18 (ಭಾ. ಭಾ. 57)

4. ಪದ್ಯ 56 ರಿಂದ 59 ಪೂರ ವಿವರಕ್ಕೆ **"ಶಂಕರಸಿದ್ಧಾಂತ"** ಪುಟ 88ನ್ನು ನೋಡಿರಿ.

ಕಾರಣವು ಮೊದಲಿದ್ದು । ಕಾರ್ಯ ತಾನಾಮೇಲೆ
ತೋರುವದು ನೇಮ, ಕಾಲವಜ್ಞಾನದೊಳು
ತೋರುತಿಹ ಭಾವ । ಬ್ರಹ್ಮಜ್ಞ ॥ 57 ॥

ಕಾರಣವನಜ್ಞತೆಗೆ । ತೋರಿಸಿರಿ ಎಂದಿನ್ನು
ಈ ರೀತಿ ಕೇಳಿ ಹೇಳುವವರಿಬ್ಬರೂ
ದಾರಿತಪ್ಪಿಹರು । ಬ್ರಹ್ಮಜ್ಞ ॥ 58 ॥

ತಾತನುಪನಯನದಲಿ । ಆತನಾ ಮೊಮ್ಮಗನು
ಪ್ರೀತಿಯಲಿ ತುಪ್ಪ ಬಡಿಸಿದನು ಎಂಬುದೀ
ಮಾತಿನಂತಾಯ್ತು । ಬ್ರಹ್ಮಜ್ಞ ॥ 59 ॥

ನೈಸರ್ಗಿಕಾವಿದ್ಯೆ[1] । ಭಾಷ್ಯದಲಿ ಪೇಳಿಹರು
ಲೇಸಲ್ಲ ಮೊದಲು ಕೊನೆಯಿದಕೆ ಮಿಥ್ಯದಾ-
ಭಾಸ ತಾನಿದುವೆ । ಬ್ರಹ್ಮಜ್ಞ ॥ 60 ॥

ಈ ನುಡಿಯು ಕಾರಣವ । ತಾನೆ ಕಿತ್ತೊಗೆಯುವದು
ಸ್ವಾನುಭವ ಬೆಳಗಿ ತೋರಿಸುವದಜ್ಞತೆಯ
ಮಾನ ಬೇರುಂಟೆ । ಬ್ರಹ್ಮಜ್ಞ ॥ 61 ॥

## (ಅವಿದ್ಯೆ ಯಾರಿಗೆ?)

ಯಾರಿಗೀ ಅಜ್ಞಾನ । ಸಾರಿ ಬಂದಿಹುದೆನಲು
ಯಾರು ಇದನಿಲ್ಲಿ ಕೇಳುವರೋ ಅವರಿಗೇ
ಸೇರಿರುವದೆನಲು[2] । ಬ್ರಹ್ಮಜ್ಞ ॥ 62 ॥

ಜ್ಞಾನರೂಪದ ಬೊಮ್ಮ । ನಾನಲ್ಲವೇ ಮತ್ತೆ?
ಈ ನಿಯಮ ಶ್ರುತಿಯ ಮತದಂತೆ ದಿಟವಾಗೆ
ನಾನೆಂತು ಮೂಢ? ಬ್ರಹ್ಮಜ್ಞ ॥ 63 ॥

ತಿಳಿದೆಯಾದರೆ ಹೀಗೆ । ಬಳಿಕಿಲ್ಲವಜ್ಞಾನ
ಉಳಿಯದದು ಭೇದ ಆ ಮೇಲೆ ಯಾರಿಗೂ
ಕಳವಳವೆ ಇಲ್ಲ । ಬ್ರಹ್ಮಜ್ಞ ॥ 64 ॥

---

1. 'ನೈಸರ್ಗಿಕೋಽಯಂ ಲೋಕವ್ಯವಹಾರಃ' ಎಂಬ ಅಧ್ಯಾಸಭಾಷ್ಯವನ್ನು ನೋಡಿರಿ.

2. ಸೂ. ಭಾ. 4–1–3 (ಭಾ. ಭಾ. 510) 62 ರಿಂದ 65 ಪೂರ ಪದ್ಯಗಳಿಗೆ ಈ ಭಾಗವು ಅನ್ವಯಿಸುವದು.

ಭಾಷ್ಯದೊಳಗೀ ರೀತಿ । ಲೇಸಾಗಿ ಅನುಭವವ
ಸೂಸುತ್ತ ಬರೆದ ಮಾತಿದನು ಅರಿಯಲ್ಕೆ
ನಾಶಿಪುದು ಪ್ರಶ್ನೆ । ಬ್ರಹ್ಮಜ್ಞ ॥ 65 ॥

ಇಲ್ಲಿಯೂ ಬಂದಿಹುದು । ಮೆಲ್ಲನಧ್ಯಾರೋಪ
ಅಲ್ಲಗಳೆ ಮತ್ತೆ ಏನಿಲ್ಲ ಬ್ರಹ್ಮದಲಿ
ಬಲ್ಲವರ ನುಡಿಯು । ಬ್ರಹ್ಮಜ್ಞ ॥ 66 ॥

ಕೇಳುವಗೆ ಪ್ರಶ್ನೆಯನು । ಮೇಳವಿಸಿತಜ್ಞಾನ
ಕೇಳುವದು ಮುಗಿದು ತನ್ನೊಳಗೆ ಸರಿದಾಗ
ಹೇಳಲೇನಿಹುದು । ಬ್ರಹ್ಮಜ್ಞ ॥ 67 ॥

ಕರಣಕ್ಕವಿದ್ಯೆಯನು । ಬರೆದದ್ದು ವ್ಯವಹಾರ
ಅರಿಯಲ್ಕೆ ಪೇಳ್ದ ಮಾತಾಯ್ತು ಆದೊಡಿದು
ಪರಮಾರ್ಥವಲ್ಲ । ಬ್ರಹ್ಮಜ್ಞ ॥ 68 ॥

## ಅವಿದ್ಯೆಗೆ ಪ್ರಮಾಣವೇನು?

ಬುದ್ಧಿಯಲ್ಲಿ ಅವಿದ್ಯೆ । ಇದ್ದುದನು ಹೋದುದನು
ಸಿದ್ಧವಿಹ ಅರಿವೆ ಬೆಳಗಲ್ಕೆ । ಇನ್ನೊಂದು
ಗದ್ದಲವೆ ಬೇಡ । ಬ್ರಹ್ಮಜ್ಞ ॥ 69 ॥

ಹೀಗಿದ್ದರೂ ಕೆಲರು । ಕೂಗುವರವಿದ್ಯೆಗೂ
ಈಗೇನು ಮಾನವೆನ್ನುತ್ತೆ ಇಂತಿವರ
ಹೇಗೆ ತಿಳಿಪುವದು । ಬ್ರಹ್ಮಜ್ಞ ॥ 70 ॥

ಮಾತೃ ಮಾನವು ಮೇಯ । ಮತ್ತವಿದ್ಯಾಕಾರ್ಯ
ಎತ್ತಣದು ಶಂಕೆ ಉತ್ತರವನೀಯೆ ಅದು
ವ್ಯರ್ಥಪ್ರಲಾಪ । ಬ್ರಹ್ಮಜ್ಞ ॥ 71 ॥

ಕರದಿ ದೀವಿಗೆ ಹಿಡಿದು । ಅರಸುವರೆ ಕತ್ತಲೆಯ[1]?
ಉರವಣಿಸಿ ಶಂಕೆಗುತ್ತರವ ಹೇಳುವದು
ಮರುಳುತನವೆಂದ । ಬ್ರಹ್ಮಜ್ಞ ॥ 72 ॥

1. 'ದೀಪೇನ ದ್ರಷ್ಟುಮಿಚ್ಛನ್ತಿ ಗುಹಾಕುಕ್ಷಿಗತಂ ತಮಃ' ಎಂಬ ವಾಕ್ಯದ ಅರ್ಥವಿದು.

ಅನುಭವಕೆ ವೇದ್ಯವಹ । ಅನುನಯದ ವಿಷಯಗಳ
ಮನದೂಹೆಮಾಡಿ ನಿರ್ಣಯಿಸಹೋಗುವದು
ಒಣತರ್ಕವಲ್ತೆ ? । ಬ್ರಹ್ಮಜ್ಞ ॥ 73 ॥

## (ಅವಿದ್ಯಾಕಾರ್ಯ)

ಆತ್ಮನಲ್ಲೆಂದಿಗೂ । ಸತ್ಯವಾಗಿರದಿರುವ
ಮಿಥ್ಯೆಯನು ತಂದು ಒಡ್ಡುತ್ತಲದರಲ್ಲಿ
ಸುತ್ತವರಿಸುವದು[1] । ಬ್ರಹ್ಮಜ್ಞ ॥ 74 ॥

ಮರೆತು ಆತ್ಮನ ನಿಜವ । ಬೆರೆತು ತೋರಿಕೆಯಲ್ಲಿ
ನಿರುತವದು ಕಾಮಕರ್ಮಾದಿಗಳಲೆಲ್ಲ
ತಿರುಗಹಚ್ಚುವದು । ಬ್ರಹ್ಮಜ್ಞ ॥ 75 ॥

ಇದನೆ ಮಾಯೆಯು ಎಂದು । ಮುದದಿಂದ ಕರೆದಿಹರು
ಇದರಾಟ ಮುಂದೆ ವಿವರಿಸುವೆ ತತ್ತ್ವವನು
ಹದನಾಗಿ ಕೇಳಿ । ಬ್ರಹ್ಮಜ್ಞ ॥ 76 ॥

ವಿದ್ಯೆಯಿಂದಲೆ ಇದರ । ಗದ್ದಲವು ಅಡಗುವದು
ಇದ್ದಂತೆ ತನ್ನ ನಿಜವನ್ನು ತಿಳಿಸುವದೆ
ವಿದ್ಯೆಯಾ ಕಾರ್ಯ । ಬ್ರಹ್ಮಜ್ಞ ॥ 77 ॥

## ಮಾಯೆ

ಅರಿಯದಿರಲಾತ್ಮನೊಳು । ಪರಿಪರಿಯ ಸಂಸಾರ
ಇರುವಂತೆ ತೋರ್ಪ ಹುಸಿಯಾದ ಕಲ್ಪಿತದ
ವರನಾಮ 'ಮಾಯೆ' । ಬ್ರಹ್ಮಜ್ಞ ॥ 78 ॥

## (ಮಾಯೆಯ ವ್ಯಕ್ತಾವ್ಯಕ್ತತ್ವ)

ಒಡನೆ ತೋರ್ಪುದು ಒಮ್ಮೆ ಅಡಗುವದು ಮತ್ತೊಮ್ಮೆ
ಅಡಗಿರ್ದ ಬಗೆಯ ಅವ್ಯಕ್ತವೆನ್ನುವರು
ಕಡು ತೋರ್ಕೆ ವ್ಯಕ್ತ । ಬ್ರಹ್ಮಜ್ಞ ॥ 79 ॥

---

1. ಪದ್ಯ 74 ರಿಂದ 76 ಪೂರ ಬೃ. ಭಾ. 4–3–20 (ಭಾ. ಭಾ. 212)ನ್ನು ಪರಾಮರ್ಶಿಸುತ್ತವೆ.

ಹಗ್ಗವನು ಹಾವೆಂದು । ಕಗ್ಗತ್ತಲೊಳು ತಿಳಿಯೆ
ನಿಗ್ಗರದ ಹಾವು ಅಡಗುವದು ತೋರುವದು
ವೆಗ್ಗಳದ ಭ್ರಾಂತಿ[1] । ಬ್ರಹ್ಮಜ್ಞ ॥ 80 ॥

ಮರೆಯಾಗೆ ಹಾವು ತಾ । ಅರಿಯದಿರೆ ಹಗ್ಗವನು
ಅರಿಯುವರು ಹಾವು ಅಡಗಿಹುದು ಎನ್ನುತ್ತೆ
ಬರಿಭ್ರಾಂತಿ ಆದುವೆ । ಬ್ರಹ್ಮಜ್ಞ ॥ 81 ॥

ಭ್ರಾಂತಿಕಾಲದಿ ಸರ್ಪ । ನಿಂತು ಅಡಗಿದ ಪರಿಯೆ
ಭ್ರಾಂತಿಯಲಿ ಸತ್ಯ ಅವ್ಯಕ್ತ ವ್ಯಕ್ತವಿವು
ಅಂತೆಯೇ ತೋರ್ಕು। ಬ್ರಹ್ಮಜ್ಞ ॥ 82 ॥

ತೋರುವದು ಜಾಗರದಿ । ತೋರದಿದು ನಿದ್ರೆಯಲಿ
ತೋರುವದು ಜನಿಸೆ, ಮೃತಿಯಲ್ಲಿ ಅಡಗಿರುತ
ಸೇರಿಕೊಂಡಿಹುದು । ಬ್ರಹ್ಮಜ್ಞ ॥ 83 ॥

ಪ್ರಳಯದಲಿ ಅಡಗುತ್ತೆ । ಬಳಿಕ ಸೃಷ್ಟಿಲಿ ತೋರಿ
ಮಲಗಿದವ ಎದ್ದ ಪರಿಯಂತೆ ತಾ ತಿರುಗಿ
ಹೊಳೆಯತೊಡಗುವದು । ಬ್ರಹ್ಮಜ್ಞ ॥ 84 ॥

ಅವ್ಯಕ್ತವೆನ್ನುವರು । ಅವ್ಯಾಕೃತವು ಮತ್ತೆ
ಅವ್ಯಯವು ಬೀಜವಾಕಾಶವಕ್ಷರವು
ಸವಿನಿಸುವುದಿದಕೆ । ಬ್ರಹ್ಮಜ್ಞ ॥ 85 ॥

ಈಶಶಕ್ತಿಯು ಮತ್ತೆ । ಲೇಸು ತ್ರಿಗುಣದ ಕೂಟ
ವಾಶನೆಯ ಬೀಜ ಮಾಸುಪ್ತಿ ಪ್ರಕೃತಿಯೆಂ–
ದೀಸು ಹೆಸರಿಹವು । ಬ್ರಹ್ಮಜ್ಞ ॥ 86 ॥

ಅಡಗಿರಲು ಪ್ರಕೃತಿ ಇದು । ಗಡತೋರೆ ಮಾಯೆ ಇದು
ಸಡಗರದ ಸತ್ಯತತ್ತ್ವವನು ತಿಳಿಯಲ್ಕೆ
ತೊಡರುಮಾಡಿಹುದು । ಬ್ರಹ್ಮಜ್ಞ ॥ 87 ॥

ತೋರ್ಪಾಗ ಆತ್ಮನಿಂ । ಬೇರ್ಪಟ್ಟ ತೆರನಂತೆ
ಬೇರ್ಪಡದ ತೆರದಿ ಅಡಗುವದು ಆತ್ಮನಲಿ
ಇರ್ಪುದಿದು ಮಾಯೆ । ಬ್ರಹ್ಮಜ್ಞ ॥ 88 ॥

---

1. ಪದ್ಯ 80 ರಿಂದ 88ರ ಪೂರ ಅಭಿಪ್ರಾಯವು **"ಶಂಕರಸಿದ್ಧಾಂತ"** ಪುಟ 81 ರಿಂದ 84ರ ಪೂರ ವಿಷಯವನ್ನು ಪರಾಮರ್ಶಿಸುತ್ತದೆ.

**(ಮಾಯೆಯ ಅನಿರ್ವಚನೀಯತ್ವ)**

ಆತ್ಮನನ್ನುಳಿದಿದಕೆ । ಮತ್ತೆ ಇರವಿಲ್ಲಾಗಿ
ಆತ್ಮನೇ ಅಲ್ಲ ಬರಿತೋರ್ಕೆಯಹುದಾಗಿ
ಮತ್ತನಿರ್ವಾಚ್ಯ[1] । ಬ್ರಹ್ಮಜ್ಞ ॥ 89 ॥

ತೋರುತಿಹುದಜ್ಞರಿಗೆ । ಭೂರಿ ಸತ್ಯವನಂತ
ಸಾರವಿಲ್ಲದ ಹುಸಿಯು ತಿಳಿದರಿಗೆ ಮಾಯೆಯಿದ-
ನಾರು ಬಣ್ಣಿಪರು? । ಬ್ರಹ್ಮಜ್ಞ ॥ 90 ॥

ಜ್ಞಾನ ಬರದಿದ್ದಾಗ । ಮಾಣಿಸದು ಯುಗಯುಗಕೆ
ಕಾಣುತ್ತ ಕಾಣದಾಗುತ್ತಲಿರುವಿದಕೆ
ಕೇಣವೇ ಇಲ್ಲ । ಬ್ರಹ್ಮಜ್ಞ ॥ 91 ॥

**(ಮಾಯೆಯ ಅವಿದ್ಯಾಕಲ್ಪಿತತ್ವ)**

ಬಗೆಯಜ್ಞಾನದಲಿ । ಜಗವು ಕಲ್ಪಿತವಾಗೆ
ಜಗಬೀಜವೆನುವ ಅವ್ಯಕ್ತತತ್ತ್ವವೂ
ಜಗದಂತೆ ಮಿಥ್ಯೆ । ಬ್ರಹ್ಮಜ್ಞ ॥ 92 ॥

ಕಾರಣವು ಅವ್ಯಕ್ತ । ಕಾರಿಯವು ವ್ಯಕ್ತವಿದು
ತೋರುವದು ಇರುವ ಪರಿಯಂತೆ ಆತ್ಮನಲಿ
ಸಾರುವದು ಶಾಸ್ತ್ರ । ಬ್ರಹ್ಮಜ್ಞ ॥ 93 ॥

ಕ್ಷರಪುರುಷ ವ್ಯಕ್ತವಿದು । ಅರಿಯಲಕ್ಷರವೆನುವ
ಪುರುಷನಿಗೆ ನಾಮ ಅವ್ಯಕ್ತ ಕಲ್ಪಿಸಿತು
ಪರಮಪುರುಷನಲಿ[2] । ಬ್ರಹ್ಮಜ್ಞ ॥ 94 ॥

ವಿದಿತವೆನೆ ವ್ಯಕ್ತವಿದು । ಒದಗಿ ಹೆಸರವಿದಿತವು
ಮುದದಿಂದೆ ಕೇಳಿ ಅವ್ಯಕ್ತತತ್ತ್ವಕ್ಕೆ
ಇದು 'ಕೇನ' ಶ್ರುತಿಯು[3] । ಬ್ರಹ್ಮಜ್ಞ ॥ 95 ॥

ಅಜ್ಞರಾ ದೃಷ್ಟಿಯಲಿ । ಅಜ್ಞಾನವಾತ್ಮನಲಿ
ಸುಜ್ಞಾನ ಪಡೆಯೆ ಕಲ್ಪಿಸಿದ ಪರಿಯೆಂದು
ಪ್ರಾಜ್ಞರಿದನರಿಗು । ಬ್ರಹ್ಮಜ್ಞ ॥ 96 ॥

1. ಸೂ. ಭಾ. 2-1-14 (ಭಾ. ಭಾ. 440)
2. ಗೀ. 15-16.
3. ಕೇ. ಭಾ. 1-4ನ್ನು ನೋಡಿ.

ನಾಟಕದ ರಾಮನಿಗೆ । ನಾಟಕದ ದಶರಥನು
ಆಟಕ್ಕೆ ತಂದೆ ಮಗನೆಂಬ ರೀತಿಗಿದು
ಸಾಟಿಯಾಗಿಹುದು । ಬ್ರಹ್ಮಜ್ಞ ॥ 97 ॥

ಸ್ಥಿತಿಕಾಲದೊಳ್ ದ್ವೈತ । ಅತಿಸತ್ಯವೆನ್ನುವರ
ಮತಿಯನನುಸರಿಸಿ ಪ್ರಳಯದಲಿ ಬೀಜಸಂ-
ತತಿ ಇಹುದು ನೋಡಿ । ಬ್ರಹ್ಮಜ್ಞ ॥ 98 ॥

ಸತ್ಯವಿದು ಸಾಂಖ್ಯನಿಗೆ । ಹೊತ್ತಿಹುದು ಸ್ವಾತಂತ್ರ್ಯ
ಆತ್ಮನಿಗೆ ಭೋಗ ಕೊಡುವುದಕೆ ಇದ್ದ ಜಡ-
ತತ್ತ್ವವಾಗಿಹುದು । ಬ್ರಹ್ಮಜ್ಞ ॥ 99 ॥

ವೇದಾಂತಶಾಸ್ತ್ರದಲಿ । ಆದುದೀಶ್ವರಶಕ್ತಿ
ಆಧೀನವೀಶಗಾಗಿಹುದು[1] ಆತ್ಮನಲಿ
ಆದುದಾರೋಪ । ಬ್ರಹ್ಮಜ್ಞ ॥ 100 ॥

ಇದು ಅನಿರ್ವಚನೀಯ । ಇದು ಬೀಜಶಕ್ತಿಯಿದ
ಉದಹರಿಸಿ ಮತ್ತೆ ಕಲ್ಪಿತವು ಎಂದಿಹರು
ಮುದದಿಂದೆ ಕೇಳಿ । ಬ್ರಹ್ಮಜ್ಞ ॥ 101 ॥

ಅಜ್ಞಾನ ಕಲ್ಪಿತವು । ಸುಜ್ಞಾನದಿಂ ತೊಲಗೆ
ವಿಜ್ಞಾನ ನೆಲಸಿ ನಿಲಲಾಗ ಎಲ್ಲವೂ
ಪ್ರಜ್ಞಾನಮಾತ್ರ । ಬ್ರಹ್ಮಜ್ಞ ॥ 102 ॥

### (ಅಜ್ಞರಿಗೆ ಮೋಹಕಾರಕ)

ಮೋಹಕಾರಕವಿದುವೆ । ದೇಹಿಗಳಿಗೆಲ್ಲರಿಗೆ
ದಾಹವನು ಬೆಳಸಿ ವಿಷಯಗಳ ಸೇವನೆಯ
ಈಹೆ ಹೆಚ್ಚಿಪುದು । ಬ್ರಹ್ಮಜ್ಞ ॥ 103 ॥

ಪಾರಗಾಣರು ಜನರು । ತೊರುವೀ ಮಾಯೆಯಲಿ
ಹೀರಿಹುದು ಚಿತ್ತ ಹೊರಗಡೆಯ ನೋಟ ಬಲು
ಘೋರವೀ ಜಾಲ । ಬ್ರಹ್ಮಜ್ಞ ॥ 104 ॥

1. ಬ್ರ. ಸೂ. ಭಾ. 1-4-3 (ಭಾ. ಭಾ. 339)

ಆತ್ಮರೂಪದ ಕಡೆಗೆ । ಚಿತ್ತವನು ಬಿಡಗೊಡದೆ
ಮಿಥ್ಯದಲಿ ಸತ್ಯವೆಂಬಂತೆ ನಂಬಿಕೆಯ–
ನೆತ್ತಿ ತಂದಿಹುದು । ಬ್ರಹ್ಮಜ್ಞ ॥ 105 ॥

ಮಲಿನ ದುಃಖವನಿತ್ಯ । ಸಲೆ ದೋಷವಹ ವಸ್ತು
ಬಲುಸೊಗಸು ಸುಖವು ಸುಸ್ಥಿರವು ಗುಣವೆನಿಸಿ
ಬಳಲಿಸುತ್ತಿಹುದು । ಬ್ರಹ್ಮಜ್ಞ ॥ 106 ॥

ಪರಮಾರ್ಥವಸ್ತುವನು । ಇರದೆಂದು ಭಾವಿಸುವ
ಪರಿಪರಿಯ ಭೇದ ನಿಜವೆನುವ ಮಾಯೆಯಲಿ
ಮುರಳಾದ ಮನುಜ[1] । ಬ್ರಹ್ಮಜ್ಞ ॥ 107 ॥

ಕಷ್ಟವೆನಿಸುವದಿವಗೆ । ಶ್ರೇಷ್ಠಸಾಧನಮಾರ್ಗ
ಕಷ್ಟವೇ ಇರಲು ಸಂಸಾರ ಸುಲಭವೀ
ನಿಷ್ಠೆಯೇ ಮಾಯೆ । ಬ್ರಹ್ಮಜ್ಞ ॥ 108 ॥

ಕಾಮಾದಿಭಾವಗಳ । ನೇಮದಿಂದೆಬ್ಬಿಸುತ
ಛೀಮಾರಿಯಪ್ಪ ಕೃತಿಗಳನು ಮಾಡಿಸುವ
ದೀ ಮಾಯೆಯಾಟ । ಬ್ರಹ್ಮಜ್ಞ ॥ 109 ॥

ನಾನು ನನ್ನದೆನುತ್ತ । ಪ್ರಾಣಿಗಳು ತಿಳಿದಿರುವ
ಪ್ರಾಣಮನದೇಹ ಮೊದಲಾದನಾತ್ಮಗಳ
ಭಾನವಿದು ಮಾಯೆ । ಬ್ರಹ್ಮಜ್ಞ ॥ 110 ॥

ನನ್ನ ಮಾಯೆಯು ಇದುವೆ । ಇನ್ನು ದಾಂಟಲು ಘೋರ
ಎನ್ನುವೀ ಮಾತು ಭಗವಂತ ಪೇಳ್ದುದಕೆ
ಇನ್ನಿದೇ ಮೂಲ[2] । ಬ್ರಹ್ಮಜ್ಞ ॥ 111 ॥

ಈಶ್ವರನ ಮಾಯೆಯನು । ಈಶ್ವರಗೆ ಶರಣಾಗಿ
ಲೇಸಿನಲಿ ಜ್ಞಾನ ಪಡೆದವರೆ ದಾಂಟುವರು
ಘಾಸಿಪಡರಿನ್ನು । ಬ್ರಹ್ಮಜ್ಞ ॥ 112 ॥

**(ಜೀವೇಶಭೇದ)**

ಆತ್ಮನೇ ಈಶ್ವರನು[3] । ಆತ್ಮನೇ ಸರ್ವಜ್ಞ
ಈತ ನಿಜ ನಿತ್ಯ ನಿರ್ಧರ್ಮಿ ಮಾಯೆಯಿಂ–
ದೀ ತೆರದಿ ತೋರ್ಪ । ಬ್ರಹ್ಮಜ್ಞ ॥ 113 ॥

1. ಕಠ. ಭಾ. 1–3–12ನ್ನು ನೋಡಿ.
2. ಗೀ. ಭಾ. 7–14 (ಭಾ. ಭಾ. 471)
3. "ಉಪದೇಶಸಾಹಸ್ರಿ" (ಪದ್ಯ) 3ನೇ ಪ್ರಕರಣವನ್ನು ನೋಡಿರಿ.

ಸರ್ವವಿದು ಇದ್ದಾಗ । ಸರ್ವೇಶನೆನಿಸುವನು
ಸರ್ವವಿದು ಮಾಯೆ ಜ್ಞಾನದಿಂ ತೊಲಗಲ್ಕೆ
ಸರ್ವೇಶನೆಂತು ? । ಬ್ರಹ್ಮಜ್ಞ ॥ 114 ॥

ಇದರಿಂದಲಾತ್ಮನಿಗೆ । ಒದಗಿಹುದು ಈಶತ್ವ
ಇದಕಾಗಿ ಶಕ್ತಿ ಈಶ್ವರನದಿದು ಎಂದು
ವಿಧಿಸಿಹುದು ಶ್ರುತಿಯು । ಬ್ರಹ್ಮಜ್ಞ ॥ 115 ॥

ಶಕ್ತಿಶಕ್ತರ ಭೇದ । ಮತ್ತವಿದ್ಯಾಕಾರ್ಯ
ಎತ್ತಣದು ಭೇದವದ್ವಯದ ತತ್ತ್ವಕ್ಕೆ
ಮತ್ತಿದಾರೋಪ । ಬ್ರಹ್ಮಜ್ಞ ॥ 116 ॥

ಅದ್ವಯಾತ್ಮನು ತಾನು । ಇದ್ದಂತೆ ಇರುವಾಗ
ಎದ್ದಿಹುದು ಜಗವು ಎಂತೆಂದು ಕೇಳುವನ
ಬುದ್ಧಿಗಿದು ಮದ್ದು । ಬ್ರಹ್ಮಜ್ಞ ॥ 117 ॥

ಮಾಯಾವಿಯಂತೆ[1] ಮೇಣ್ । ಆ ಯೋಗಿಜನರಂತೆ
ಮಾಯೆಯಿಂ ತತ್ತ್ವ ವಿವಿಧಾಯ್ತು ಇಂತೆಂಬ
ಈ ಯುಕ್ತಿ ಬಂತು । ಬ್ರಹ್ಮಜ್ಞ ॥ 118 ॥

ನಿನ್ನವಿದ್ಯೆಯೆ ಹೊಣೆಯು । ಮುನ್ನ ಮಾಯೆಗೆ ನೋಡೆ
ಇನ್ನಿಲ್ಲ ನಿಜದಿ ಪರಮಾತ್ಮನೊಳು ಮಾಯೆ
ಬನ್ನ ಬಡಹೊಲ್ಲ । ಬ್ರಹ್ಮಜ್ಞ ॥ 119 ॥

### (ಈಶಜೀವವ್ಯವಹಾರವು ಅಧ್ಯಸ್ತ)

ಸರ್ವವಿದು ಬ್ರಹ್ಮವೇ । ನಿರ್ವಿಕಾರವು ನಿಜವು
ಸರ್ವವನು ನೇತಿಗಳೆದಾತ್ಮನಾದಾಗ
ನಿರ್ವಚನವೆಂತು ? । ಬ್ರಹ್ಮಜ್ಞ ॥ 120 ॥

ಶ್ರೇಷ್ಠ ವಿದ್ಯೆಯು ಬಂದು । ನಷ್ಟವಾಗಲವಿದ್ಯೆ
ಸುಟ್ಟಿಹುದು ಜೀವತನ ಮತ್ತೆ ಬ್ರಹ್ಮದಾ
ಸ್ರಷ್ಟೃತ್ವ ಹೋಯ್ತು[2] । ಬ್ರಹ್ಮಜ್ಞ ॥ 121 ॥

---

1. ಮಾಂ. ಕಾ. 1–7 (ಭಾ. ಭಾ. 31)ನ್ನು ನೋಡಿ.
2. ಸೂ. ಭಾ. 2–1–14 (440) ಮತ್ತು 2–1–22 (ಭಾ. ಭಾ. 456)

ಭರದ ಮಾಯೋಪಾಧಿ । ಇರದು ನಿಜದಾತ್ಮನಲಿ
ಅರಿಯಲ್ಕೆ ಅಜ್ಞರಾರೋಪವನುಸುರಿಸಿ
ಬರೆದಿರುವ ಮಾತು । ಬ್ರಹ್ಮಜ್ಞ ॥ 122 ॥

ಮಾಯೆಯಿದು ಅಧ್ಯಸ್ತ । ಮಾಯಾಧಿಪತ್ಯ ಸಹ
ಸಾಯಲ್ಕೆ ತಪ್ಪುತಿಳಿವಳಿಕೆ ಜ್ಞಾನದಿಂ
ಮಾಯೆಯೂ ಹೋಯ್ತು । ಬ್ರಹ್ಮಜ್ಞ ॥ 123 ॥

ಈ ವಿವರ ಭಾಷ್ಯದಲಿ । ಟೀಖಿಯಲಿ ಬರೆದಿಹರು
ಈ ವಿಷಯ ತಿಳಿಯೆ ಶಂಕರರ ಭಾಷ್ಯವ-
ನ್ನಾವಗಂ ಪಠಿಸಿ[1] । ಬ್ರಹ್ಮಜ್ಞ ॥ 124 ॥

ತಾನೆ ಸೃಷ್ಟಿಸಿ ಮತ್ತೆ । ತಾನೆ ಒಳೊಕ್ಕಿಹನು[2]
ನಾನಾತ್ವವಿಲ್ಲ ಒಳಹೊರಗು ಅಜನಾತ್ಮ
ವಾಣಿಯಿದು ಶ್ರುತಿಯು । ಬ್ರಹ್ಮಜ್ಞ ॥ 125 ॥

ಈಶತ್ವ ಜೀವತ್ವ ವೇಷಗಳ ಆರೋಪ
ಈಸು ಪರಿ ಸಲ್ಲ ನಿಜವಾಗಿ ಆತ್ಮನಲಿ
ದೋಷವೇ ಇಲ್ಲ । ಬ್ರಹ್ಮಜ್ಞ ॥ 126 ॥

ದೇಹದೋಳು ನಾನೆಂಬ । ಮೋಹವೇ ಜೀವತ್ವ
ಈ ಹದದಿ ಕಾಮಸಂಸಾರವಲ್ಪತನ-
ದೂಹೆ ತನ್ನೊಳಗೆ । ಬ್ರಹ್ಮಜ್ಞ ॥ 127 ॥

ಜಗದ ಜನ್ಮಸ್ಥಿತಿಗೆ । ಮಿಗೆ ಲಯಕೆ ಸಹಿತಾಗಿ
ನಿಗಮೋಕ್ತಿಯಂತೆ ಕಾರಣನು[3] ಎಂದಾಗ
ಜಗದೀಶನಾತ್ಮ । ಬ್ರಹ್ಮಜ್ಞ ॥ 128 ॥

ನಿಜವಾಗಿ ಅಶರೀರಿ[4] । ಅಜನಿವನು[5] ಅದ್ವಯನು
ತ್ರಿಜಗತ್ತು ಮಾತು ಮಾತ್ರವೇ[6] ಎಂಬ ಶ್ರುತಿ
ನಿಜವಚನ ಕೇಳಿ । ಬ್ರಹ್ಮಜ್ಞ ॥ 129 ॥

---

1. ಸೂ. ಭಾ. 1-1-12 (ಭಾ. ಭಾ. 90, 91)ನ್ನು ನೋಡಿ.
2. ತೈ. ಭಾ. 2-6 (ಭಾ. ಭಾ. 168)ನ್ನು ನೋಡಿ.
3. ತೈ. ಭಾ. 3-1 (ಭಾ. ಭಾ. 229)ನ್ನು ನೋಡಿ.
4. ಕ. 1-2-22.
5. ಮುಂ. 2-1-2.
6. ಛಾಂ. 6-1-4.

ಇದರಿಂದ ಜೀವತ್ವ । ಒದಗಿರ್ದ ಈಶತ್ವ
ಇದು ಇಲ್ಲವೆನುತ ಅತುಮನ ತಿಳಿಸಿಯಿದ
ಬದಿಗಿರಿಸುತಿಹುದು । ಬ್ರಹ್ಮಜ್ಞ ॥ 130 ॥

ಪರಮಾರ್ಥಸತ್ಯದಲಿ । ಇರದು ಜೀವೇಶತ್ವ
ಬರಿಯಾತ್ಮ ಮಾತ್ರನದ್ವಯನು ಅರುಹಲ್ಕೆ
ಬರದಿರುವ ತತ್ತ್ವ । ಬ್ರಹ್ಮಜ್ಞ ॥ 131 ॥

ವ್ಯವಹಾರದೃಷ್ಟಿಯಲಿ । ಶಿವಜೀವಭೇದವಿದು
ಅವಿರತವು ಜ್ಞಾನ ಬರುವನಕ ಸತ್ಯವನು-
ಭವದಿ ನೋಡೀಗ । ಬ್ರಹ್ಮಜ್ಞ ॥ 132 ॥

'ನಾನು' ಎಂದಾಗೆಲ್ಲ । ಮೇಣು ಜಗವಿದು ಬಹುದು
ನಾನು ನರನೆನಲು ಈಶನಿವ ಬೇರಾಗಿ
ತಾನಿರ್ಪನಲ್ಲಿ । ಬ್ರಹ್ಮಜ್ಞ ॥ 133 ॥

ನಾನೆಂಬುದಿರದಾಗ । ಈ ನಿಖಿಳ ಜಗವಿಲ್ಲ
ಏನೊಂದು ಇಲ್ಲ ನೋಡಲ್ಕೆ ಆವಗುಂ
ತಾನಿಲ್ಲದಿಲ್ಲ । ಬ್ರಹ್ಮಜ್ಞ ॥ 134 ॥

ಏನೊಂದು ತೋರದಾ । ತಾನುಮಾತ್ರವೆ ಸತ್ಯ
'ನಾನು, ಇದು' ಎನುವ ತೋರಿಕೆಯ ಮೂಲನೀ-
ತಾನೆ ಅದ್ವಯನು । ಬ್ರಹ್ಮಜ್ಞ ॥ 135 ॥

ಮೋಡಗಳು ಸೂರ್ಯನಲಿ । ಗಾಢದಲಿ ಆವರಿಸಿ
ರೂಢಿಯಲಿ ಬೆಳಕು ತಡೆದಂತೆ ಆತ್ಮನಲಿ
ಕೂಡಿಹುದು ಮಾಯೆ । ಬ್ರಹ್ಮಜ್ಞ ॥ 136 ॥

ಆತ್ಮ ನಿಜ ನಿರ್ಮಾಯ । ಎತ್ತಣದು ಆವರಣ
ಮತ್ತಿನ್ನು ಮೂಢಜನದೃಷ್ಟಿಗನುಸರಿಸಿ
ಸುತ್ತಿಹುದು ಮಾಯೆ । ಬ್ರಹ್ಮಜ್ಞ ॥ 137 ॥

ಇಂತು ಜೀವೇಶತ್ವ । ಭ್ರಾಂತಿಕಲ್ಪಿತವೆಂದು
ಸ್ವಾಂತದೊಳು ಶಾಂತಿ ಪಡೆಯಲ್ಕೆ ಶ್ರುತಿಯಲ್ಲಿ
ಬಂತಿದಾರೋಪ । ಬ್ರಹ್ಮಜ್ಞ ॥ 138 ॥

ಈವರೆಗೆ ಭಾಷ್ಯಗಳ । ಭಾವವನ್ನನುಸರಿಸಿ
ಜೀವೇಶಭೇದ ಅಜ್ಞಾನಮಾಯೆಗಳ
ಸಾವರಿಸಿ ಪೇಳ್ದೆ । ಬ್ರಹ್ಮಜ್ಞ ॥ 139 ॥

ಇನ್ನುಮೇಲೀ ಬಗೆಗೆ । ಭಿನ್ನಮತಗಳ ಪೇಳ್ವೆ
ಚೆನ್ನಾಗಿ ಲಕ್ಷ್ಯ ಪೂರೈಸಿ ಬುದ್ಧಿಯಲಿ
ನಿರ್ಣಯಿಸಿಕೊಳ್ಳಿ । ಬ್ರಹ್ಮಜ್ಞ ॥ 140 ॥

ಪ್ರತ್ಯಭಿಜ್ಞಾಗ್ರಂಥ[1] । ಪ್ರತ್ಯಕ್ಷ ನೋಡಿದರೆ
ಎತ್ತಣದು ಭಾಷ್ಯವೆತ್ತಣವು ವ್ಯಾಖ್ಯಾನ
ವ್ಯತ್ಯಯವು ತಿಳಿಗು । ಬ್ರಹ್ಮಜ್ಞ ॥ 141 ॥

ಮುಂದಿನಧ್ಯಾಯದಲಿ । ಚಂದದಿಂದೀ ವಿಷಯ
ಬಂಧುರದ ಭೇದಮತಗಳನು ಭಾಷ್ಯಕ್ಕೆ
ಹೊಂದಿಸುತ ತೋರ್ಪೆ । ಬ್ರಹ್ಮಜ್ಞ ॥ 142 ॥

---

1. ಸಂಸ್ಕೃತಭಾಷೆಯ **'ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ'** ಗ್ರಂಥವನ್ನು.

# ನಾಲ್ಕನೆಯ ಅಧ್ಯಾಯ

## ಭಿನ್ನಮತಗಳು

ಮಾಯೆ ವಿದ್ಯಾವಿದ್ಯೆ । ಈಯನಿರ್ವಚನೀಯ
ಬೀಯವಹ ಶಬ್ದವಧ್ಯಾಸಗಳ ಬಗೆಗೆ
ಧ್ಯೇಯ ಬದಲಾಯ್ತು । ಬ್ರಹ್ಮಜ್ಞ ॥ 1 ॥

ಅನುಭವವನನುಸರಿಸಿ । ಅನುನಯದಿ ಭಾಷ್ಯದಲಿ
ಸನುಮತದಿ ಬರೆದ ಇವುಗಳನು । ತರ್ಕದಲಿ
ಹೆಣೆದು ಜಗ್ಗಿದರು । ಬ್ರಹ್ಮಜ್ಞ ॥ 2 ॥

ಕಾರ್ಯಕಾರಣವಾದ । ಸರ್ವವೂ ಪರಮಾರ್ಥ
ಧೈರ್ಯದಲಿ ಹೊಗಿಸಿ ತತ್ತ್ವದೊಳು ಬೋಧಿಸೆ ವಿ-
ಪರ್ಯಾಸವಾಯ್ತು । ಬ್ರಹ್ಮಜ್ಞ ॥ 3 ॥

ಇದನೀಗ ತೋರಿಸುವೆ । ಬುಧರು ನಲಿವಂದದಲಿ
ಹದನಾದ ಸಹನೆ ನಿಷ್ಪಕ್ಷಪಾತದಲಿ
ಇದನೆಲ್ಲ ಕೇಳಿ । ಬ್ರಹ್ಮಜ್ಞ ॥ 4 ॥

ಭಾಷ್ಯಕಾರರ ಪಥದ । ಲೇಸನ್ನು ತಿಳಿಸಲ್ಕೆ
ದೋಷಗಳ ಸಹನೆ ನಿಷ್ಪಕ್ಷಪಾತದಲಿ
ಇದನೆಲ್ಲ ಕೇಳಿ । ಬ್ರಹ್ಮಜ್ಞ ॥ 5 ॥

ಇಷ್ಟೆಲ್ಲ ಹೇಳಿದರು । ಸಿಟ್ಟಿಗೇಳುವ ಕೆಲರು
ಬಿಟ್ಟಿಹರು ವಿನಯಶಮೆದಮೆಯ ಮಾರ್ಗವನು
ಪಟ್ಟು ಹಿಡಿದಿಹರು । ಬ್ರಹ್ಮಜ್ಞ ॥ 6 ॥

ತೋರಿಪರು ಗ್ರಂಥಗಳ । ಭಾರಿಗುಂಪನು ನಮಗೆ
ದೂರುವರು ಸರಳಪ್ರಕ್ರಿಯೆಯನಿದಕಿನ್ನು
ಯಾರು ಹೊಣೆಯಹರು ? । ಬ್ರಹ್ಮಜ್ಞ ॥ 7 ॥

ವರುಷ ಸಾಸಿರದಾಚೆ ಬರೆದಿರುವ ಗ್ರಂಥಗಳೆ
ಭರದಿಂದ ದಾರಿಬಿಟ್ಟಿರಲು । ಮಿಕ್ಕಿನವು
ನೆರಳಿನಂತಿಹವು । ಬ್ರಹ್ಮಜ್ಞ ॥ 8 ॥

ಹೆಚ್ಚು ಮತವಿದ್ದುದನು । ಮೆಚ್ಚಿನದು ಎಂಬ ಬಗೆ
ಹಚ್ಚುವದು ಸಲ್ಲ ತತ್ತ್ವಕ್ಕೆ ಈ ರೀತಿ
ಹುಚ್ಚುತನವಹುದು । ಬ್ರಹ್ಮಜ್ಞ ॥ 9 ॥

ಯಾರು ಹೇಳಿದರೇನು । ಚಾರುತರ ಸತ್ಯವನು
ಮಾರಲ್ಕೆ ಬಂದ ಚಿನ್ನಕ್ಕೆ ಒರೆಬರದೆ
ಆರು ಒಪ್ಪುವರು ? । ಬ್ರಹ್ಮಜ್ಞ ॥ 10 ॥

ಕೇಳಿರೀಗೀ ವಿಷಯ । ತಾಳಿ ಶಾಂತಿಯ ಮನದಿ
ಹೇಳಿಹರು ಧೀರತನದಿಂದೆ ಶ್ರೀಗಳಿದ
ಮೇಳವಿಸಿಕೊಳ್ಳಿ । ಬ್ರಹ್ಮಜ್ಞ ॥ 11 ॥

ಗೊತ್ತಹುದು ನಿಮಗಾಗ । ಸತ್ಯಶಂಕರರಿವರು
ಮತ್ತಿನ್ನು ಬಂದು ಅವತರಿಸಿ ಭಾಷ್ಯದೊಳ-
ತಥ್ಯ ತೋರಿದುದು । ಬ್ರಹ್ಮಜ್ಞ ॥ 12 ॥

ಮೂಲದಲಿ ಕೆಟ್ಟಿರುವ । ಕೀಲವನು ತೋರಿಸುವೆ
ಲೀಲೆಯಲಿ ಬರೆದ ಗ್ರಂಥಗಳಲೆಲ್ಲದರ
ಸ್ಥೂಲ ಸಾರಂಶ । ಬ್ರಹ್ಮಜ್ಞ ॥ 13 ॥

ಪ್ರತ್ಯಭಿಜ್ಞಾಗ್ರಂಥ[1] । ಮತ್ತೆ ಶಂಕರಹೃದಯ[2]
ವಿಸ್ತರದ ಬರಹ ಮಾಂಡೂಕ್ಯವಿವೃತಿಯು[3]
ಮತ್ತಿಹವು ಬೇರೆ । ಬ್ರಹ್ಮಜ್ಞ ॥ 14 ॥

ತಿಳಿದವರು ಸಂಸ್ಕೃತವ । ಬಳಿಸಾರಿ ನೋಡುವದು
ತಿಳಿಯದಿರೆ ಕೇಳಿ ಕನ್ನಡದಿ ಭಾಷ್ಯಗಳ
ಬಲು ಮೊದಲು ನೋಡಿ । ಬ್ರಹ್ಮಜ್ಞ ॥ 15 ॥

ಶಂಕರರ ಸಿದ್ಧಾಂತ[4] । ಮಂಕುತನ ಬಿಡಿಸುವದು
ಶಂಕೆಯೇ ಇಲ್ಲ ವೇದಾಂತದಿತಿಹಾಸ[5]
ಬಿಂಕ ಕಳೆಯುವದು । ಬ್ರಹ್ಮಜ್ಞ ॥ 16 ॥

---

1. **'ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ'** ಎಂಬ ಸಂಸ್ಕೃತಗ್ರಂಥ.
2. **'ಮೂಲಾವಿದ್ಯಾನಿರಾಸಃ ಅಥವಾ ಶ್ರೀಶಂಕರಹೃದಯಮ್'** ಎಂಬ ಸಂಸ್ಕೃತಗ್ರಂಥ.
3. **'ಮಾಂಡೂಕ್ಯರಹಸ್ಯವಿವೃತಿಃ'** ಎಂಬ ಸಂಸ್ಕೃತಗ್ರಂಥ.
4. ಶ್ರೀಗಳವರು ಕನ್ನಡದಲ್ಲಿ ಬರೆದಿರುವ **'ಶಂಕರಸಿದ್ಧಾಂತ'**ವೆಂಬ ಗ್ರಂಥ.
5. **'ವೇದಾಂತವಿಚಾರದ ಇತಿಹಾಸ'** ಎಂಬ ಕನ್ನಡಪುಸ್ತಕ. ಇದರಲ್ಲಿ ಹನ್ನೊಂದು ಜನ ಅದ್ವೈತವೇದಾಂತಾಚಾರ್ಯರುಗಳ ಚರಿತ್ರೆ ಹಾಗೂ ಪ್ರಕ್ರಿಯೆಗಳ ವಿವರವಿದೆ.

ಇನ್ನು ಹೊಗಳಿಕೆ ಸಾಕು । ಮುನ್ನ ತೆಗಳಿಕೆ ಸಾಕು
ಚೆನ್ನಾಗಿ ತಿಳಿಸು ನೀ ಪೇಳಬಯಸಿದುದ
ಎನ್ನುವರು ಕೇಳಿ । ಬ್ರಹ್ಮಜ್ಞ ॥ 17 ॥

(ಮಂಡನಮಿಶ್ರನ ಮತ)

ಮೊದಲು ಮಂಡನ ಮತವು । ಒದಗಿಹುದು ಸಿದ್ಧಿಯಲಿ[1]
ಹದನಾದ ಮಾತು ವಿಪರೀತ ತಿಳಿವೀಗ
ಲಾದುದಜ್ಞಾನ । ಬ್ರಹ್ಮಜ್ಞ ॥ 18 ॥

ಈಯವಿದ್ಯೆಯೆ ನಿಜದಿ । ಮಾಯೆಯಾಗಿಹುದೆಂದು
ಬಾಯ್‌ಬಡೆದ ಮಾತು ಭಾಷ್ಯಕ್ಕೆ ಹೊಂದದಿದು
ಆಯ ತಪ್ಪಿಹುದು । ಬ್ರಹ್ಮಜ್ಞ ॥ 19 ॥

(ಭಾಷ್ಯದ ಮತ)

ಹುಸಿಕಲ್ಪಿತವು ಮಾಯೆ । ಎಸೆದವಿದ್ಯಾಕಾರ್ಯ
ಹಸನಾಗಿ ತಪ್ಪುಕಲ್ಪನೆಗೆ ಕಾಣುತಿಹ
ಹುಸಿತೋರ್ಕೆ ಮಾಯೆ । ಬ್ರಹ್ಮಜ್ಞ ॥ 20 ॥

ಬುದ್ಧಿಯಲ್ಲಜ್ಞಾನ । ಇದ್ದ ಸಹಜದ ದೋಷ
ಬದ್ಧತೆಯ ಮೂಲ ವಿಪರೀತ ಸಂಶಯದ
ಮುದ್ದೆಯಜ್ಞಾನ । ಬ್ರಹ್ಮಜ್ಞ ॥ 21 ॥

ಬುದ್ಧಿಯಲ್ಲಿ ಅವಿದ್ಯೆ । ಇದ್ದಾಗಲೇ ಮಾಯೆ
ಇದ್ದಿಹುದು ಎಂಬ ಕತದಿಂದೆ ಮಾಯೆಯನ-
ವಿದ್ಯೆ ಎನ್ನುವರು । ಬ್ರಹ್ಮಜ್ಞ ॥ 22 ॥

ತದಧೀನಸೂತ್ರದಲಿ[2] । ಮುದದ ವರ್ಣಕವೆರಡು
ಒದಗಿಸಿದ ಭಾಷ್ಯ ಬರಹದಲಿ ಈ ನುಡಿಯ
ಹದನವನು ನೋಡಿ । ಬ್ರಹ್ಮಜ್ಞ ॥ 23 ॥

ಈ ರೀತಿ ಅಜ್ಞಾನ । ಚಾರುತರ 'ಮಾಯೆ' ಎನೆ
ತೋರಿಬಹ ಜ್ಞಾನ ಅಜ್ಞಾನವೆರಡು ಸಹ
ಸೇರಿಹವು ಹುಸಿಗೆ । ಬ್ರಹ್ಮಜ್ಞ ॥ 24 ॥

---

1. ಮಂಡನಮಿಶ್ರರು ಬರೆದಿರುವ **'ಬ್ರಹ್ಮಸಿದ್ಧಿ'** ಎಂಬ ಗ್ರಂಥ.
2. ಸೂ. ಭಾ. 1-4-3 (ಭಾ.ಭಾ. 340).

ತಿತ್ತಿರಿಯ ಭಾಷ್ಯದಲಿ । ಎತ್ತಿ ವಿದ್ಯಾವಿದ್ಯೆ
ಮತ್ತಿನ್ನು ನಾಮರೂಪಕ್ಕೆ ಸೇರಿಸಿಹ
ಯುಕ್ತಿಯನು ನೋಡಿ[1]। ಬ್ರಹ್ಮಜ್ಞ ॥ 25 ॥

ಹೀಗಿದ್ದರೂ ನಿಜದಿ । 1ಆಗದಿದು ಎಂದಿಗೂ
ಸಾಗಿಸಲು ಮಾಯೆ ಅಜ್ಞಾನ ಒಂದೆಂಬ
ಸೋಗು ಸರಿಯಲ್ಲ । ಬ್ರಹ್ಮಜ್ಞ ॥ 26 ॥

ಮಿಗೆ ಅನಿರ್ವಚನೀಯ । ಬಗೆಯಲ್ಕವಿದ್ಯೆಯಿದು
ಅಗಣಿತದಿ ಇದನು ತರ್ಕಿಸಿಹ ಮಂಡನನ
ವಿಗಡತನ ನೋಡಿ । ಬ್ರಹ್ಮಜ್ಞ ॥ 27 ॥

ಹುಸಿಕೋರ್ತೋಯಹ ಮಾಯೆ । ಮಿಸುಪನಿರ್ವಚನೀಯ
ಎಸೆದಿದನು ಬರೆದ ಶಂಕರರ ಭಾಷ್ಯದಾ
ಹಸನತನ ನೋಡಿ । ಬ್ರಹ್ಮಜ್ಞ ॥ 28 ॥

ತೋರುವಾ ತೋರಿಕೆಯು । ಬೇರಿರದು ಸತ್ಯದಿಂ-
ಬೇರಿರ್ಪ ತೆರದಿ ತೋರುವದು ನಿರ್ವಚನ
ದೂರವಹ ತತ್ತ್ವ । ಬ್ರಹ್ಮಜ್ಞ ॥ 29 ॥

ಆತ್ಮನೂ ಅಲ್ಲವಿದು । ಮತ್ತೆ ಅನ್ಯವಿದಲ್ಲ
ಉತ್ತಮದ ಭಾಷ್ಯವಾಕ್ಯವಿದು ಮಾಯೆಗಿಹ
ಉಕ್ತಿಯನು ನೋಡಿ । ಬ್ರಹ್ಮಜ್ಞ ॥ 30 ॥

ಕರಣಧರ್ಮವವಿದ್ಯೆ । ನೆರೆ ಕಲ್ಪಿತವು ಮಾಯೆ
ಇರೆ ಹೀಗೆ ಮತ್ತೆ ಎರಡನ್ನು ಒಂದೆನುವ
ಬರಹವೇ ತಪ್ಪು[2] । ಬ್ರಹ್ಮಜ್ಞ ॥ 31 ॥

**(ಮಂಡನನಿಂದಾದ ಪರಿಣಾಮ)**

ಪೇಳೆ ಮಾಯೈಕತ್ವ । ಮೇಲನಿರ್ವಾಚ್ಯತ್ವ
ಮೇಳೈಸಿತೀಗ ಅಜ್ಞಾನವೆಂಬುದಕೆ
ಗೋಳಾಯ್ತು ಬೋಧ । ಬ್ರಹ್ಮಜ್ಞ ॥ 32 ॥

---

1. ತೈ. ಭಾ. 2-8 (ಭಾ. ಭಾ. 216) ನ್ನು ನೋಡಿರಿ.

2. ಮಂಡನಪ್ರಸ್ಥಾನದ ಅವಿದ್ಯಾವಿಷಯದ ವಿವರಕ್ಕೆ ವೇ. ಪ್ರ. ಪ್ರ. ಪುಟ 185 ರಿಂದ 188ರವರೆಗೆ ನೋಡಿರಿ.

ಅನುಭವವ ಕೈಬಿಟ್ಟು । ಒಣತರ್ಕ ಮಾಡುತ್ತ
ಮನವಾರೆ ಬರೆದ ಇವುಗಳನೆ ಮುಂದಿನವ-
ರನುಸರಿಸುತಿಹರು । ಬ್ರಹ್ಮಜ್ಞ ॥ 33 ॥

**(ಪಂಚಪಾದಿಕಾ ಮತ)**

ಪಾದಿಕೆಗವಿದ್ಯೆಯಿದು । ಆದುದಾತ್ಮನ ಶಕ್ತಿ
ಆದರಿಸಿ ಮತ್ತೆ ಆತುಮನ ಮುಸುಕಿರುವ
ವಾದವಿದು ಬಂತು[1] । ಬ್ರಹ್ಮಜ್ಞ ॥ 34 ॥

ಜಡವಸ್ತುಗಳನು ಸಹ । ಬಿಡದೆ ಆವರಿಸಿಹುದು
ಒಡನದರ ಜ್ಞಾನ ಬರಲಲ್ಲಿ ನಾಶವನು
ಪಡೆವುದಷ್ಟಷ್ಟು । ಬ್ರಹ್ಮಜ್ಞ ॥ 35 ॥

ಇದುವೆ ಮೂಲಾವಿದ್ಯೆ । ಇದು ಮತ್ತುಪಾದಾನ
ಒದಗಿರುವ ಸಹಜದಧ್ಯಾಸರೂಪಕ್ಕೆ
ಇದು ಕಾರಣಹುದು । ಬ್ರಹ್ಮಜ್ಞ ॥ 36 ॥

ಭಾಷ್ಯದಲಿ ಬಂದಿದ್ದ । ಈಶಶಕ್ತಿಯೆ ಇಲ್ಲಿ
ಲೇಸಾಗಿ ಮೂಲದಜ್ಞಾನವಾಯ್ತಿದರ
ಭಾಷೆ ಗುರುತಿಸಿರಿ । ಬ್ರಹ್ಮಜ್ಞ ॥ 37 ॥

ಮಂಡನನು ಉದಹರಿಸಿ । ಕೊಂಡಿರುವ ಈ ವಾದ
ಖಂಡಿತದಿ ಭಾಷ್ಯದೊಳಹೊಗಿಪ ಈತನಾ
ಪಾಂಡಿತ್ಯ ಭಾಪು । ಬ್ರಹ್ಮಜ್ಞ ॥ 38 ॥

ಭಾವರೂಪದವಿದ್ಯೆ । ದೇವನನ್ನಾಶ್ರಯಿಸಿ
ಜೀವಕ್ಕೆ ಜಗಕೆ ಕಾರಣವು ಪರಿಣಾಮಿ-
ಭಾವವಿದು ಕೇಳಿ । ಬ್ರಹ್ಮಜ್ಞ ॥ 39 ॥

ಜ್ಞಾನನಾಶ್ಯವು ಎನಿಸಿ । ಮೇಣು ಜೀವನ್ಮುಕ್ತಿ
ತಾಣದಲಿ ಶೇಷ ಉಳಿಯುವದು ಸತ್ತಾಗ
ಪೂರ್ಣ ಹೋಗುವದು । ಬ್ರಹ್ಮಜ್ಞ ॥ 40 ॥

---

1. ಈ ಪ್ರಸ್ಥಾನದಂತೆ ಅವಿದ್ಯಾವಿಚಾರವನ್ನು ತಿಳಿಯಲು ವೇ. ಪ್ರ. ಪ್ರ. ಪುಟ 277 ರಿಂದ 282ರ ಪೂರ ನೋಡಿರಿ.

ಸಿದ್ಧಿಪಡಿಸಲು ಇದನು । ಉದ್ಧರಿಸಿ ಮಾನಗಳ
ರಾದ್ಧಾಂತ ತರ್ಕ ತಂದಿಹುದು ಮುಂದಿನಾ
ಅದ್ವೈತಿಜನಕೆ । ಬ್ರಹ್ಮಜ್ಞ ॥ 41 ॥

ಮಾಯೆ ಮೂಲಾವಿದ್ಯೆ । ಈಯೆರಡು ಒಂದಾಗೆ
ಈಯರ್ಥವೀಗ ಭಾಷ್ಯಕ್ಕೆ ಬರಲಾಗೆ
ಆಯ ತಪ್ಪಿಹುದು । ಬ್ರಹ್ಮಜ್ಞ ॥ 42 ॥

ಈಗಿದರ ದೋಷಗಳ । ಭಾಗಭಾಗದಿ ತೋರ್ಪೆ
ಆಗಾಗ ಯುಕ್ತಿ ಅನುಭವದ ವಾಕ್ಯಗಳ
ಸಾಗಿಸುತಲೊರೆವೆ । ಬ್ರಹ್ಮಜ್ಞ ॥ 43 ॥

**(ಯುಕ್ತಿವಿರೋಧಗಳು)**

ಆತ್ಮನನ್ನಾಶ್ರಯಿಸಿ । ಆತ್ಮಶಕ್ತಿಯೆ ಎನಿಸಿ
ಮತ್ತಿರಲು ಮೂಲದಜ್ಞಾನ ಜ್ಞಾನದಿಂ
ಕಿತ್ತುವದು ಹೇಗೆ? । ಬ್ರಹ್ಮಜ್ಞ ॥ 44 ॥

ಬುದ್ಧಿಯಿಂದಾಚೆಗಿದು । ಇದ್ದಿರುವುದಾತ್ಮನಲಿ
ಬುದ್ಧಿಗೇ ಮೂಲಕಾರಣವು ತಾನಾಗಿ
ಇದ್ದಿರುವದಲ್ತೆ ? । ಬ್ರಹ್ಮಜ್ಞ ॥ 45 ॥

ಜ್ಞಾನವಿದು ಬುದ್ಧಿಯಲಿ । ತಾನೆ ಬರುತಿಹ ವೃತ್ತಿ
ಏನಹುದು ಮೂಲದಜ್ಞಾನಕಿದರಿಂದ
ಹಾನಿ ಹೇಳಯ್ಯ । ಬ್ರಹ್ಮಜ್ಞ ॥ 46 ॥

ಹೀಗಿದ್ದರೂ ಜ್ಞಾನ । ಈಗಿದನು ಕಳೆಯುವದು
ಆಗಿಹುದು ಇದುವೆ ಅಜ್ಞಾನವೆಂದೆನಲು
ಆಗದಿಹ ಮಾತು । ಬ್ರಹ್ಮಜ್ಞ ॥ 47 ॥

ಬುದ್ಧಿಯಲಿ ಬಹ ಜ್ಞಾನ । ಬುದ್ಧಿಯಲ್ಲಿಹ ತಮನ
ಉದ್ಧರಿಸಿ ಕಳೆವುದೆಲ್ಲರಿಗೆ ಅನುಭವದಿ
ಸಿದ್ಧವಾಗಿಹುದು । ಬ್ರಹ್ಮಜ್ಞ ॥ 48 ॥

ಬುದ್ಧಿಗೂ ಆಚೆಗಿಹ । ಶುದ್ಧಾತ್ಮನಾಶ್ರಯದಿ
ಇದ್ದಿರುವ ಮೂಲದಜ್ಞಾನ ಕಳೆಯಲ್ಕೆ
ಸಾಧ್ಯವೇ ಹೇಳಿ ? । ಬ್ರಹ್ಮಜ್ಞ ॥ 49 ॥

ಅಜ್ಞಾನವಾದುದಕೆ । ಸುಜ್ಞಾನವಿದ ಕಳೆಗು
ಅಜ್ಞಾನ ಮತ್ತೆ ಜ್ಞಾನಕ್ಕೆ ವೈರವೆನೆ
ಸುಜ್ಞತನವಲ್ಲ । ಬ್ರಹ್ಮಜ್ಞ ॥ 50 ॥

ಹಸಿರು ಸೀರೆಯನುಟ್ಟು । ವಸುಧೆಯೊಳು ತಿರುಗುವಳೆ
ಎಸೆವೆನ್ನ ಮಡದಿ ಎಂದಿರುವ ಗಾಂಪನಾ
ದೆಶೆಯಾಯ್ತು ನೋಡಿ । ಬ್ರಹ್ಮಜ್ಞ ॥ 51 ॥

ಕುರುಡು ನಂಬಿಕೆಯಾಯ್ತು । ಬರದು ಯುಕ್ತ್ಯನುಭವಕೆ
ಇರಲೆಂದು ಹೀಗೆ ನಡೆವವರ ನಾವೇನು
ತರಬುವೆವೆ ಹೇಳಿ । ಬ್ರಹ್ಮಜ್ಞ ॥ 52 ॥

ಸಾರಿ ಮೂಲಾವಿದ್ಯೆ । ಕಾರಣವು ಜಗಕೆಂದು
ಸಾರಲ್ಕೆ ಜ್ಞಾನದಿಂ ನಾಶವಹುದೆಂದು
ಭಾರಿ ಬಡಿವಾರ । ಬ್ರಹ್ಮಜ್ಞ ॥ 53 ॥

ಜೀವನೊಬ್ಬನ ಜ್ಞಾನ । ಈ ವಿಶ್ವಕಾರಣವ
ತೀವಿ ತಾ ಕಳೆವ ಈ ಮಾತು ಒಪ್ಪದಿದು
ಆವಕಾಲಕ್ಕು1 । ಬ್ರಹ್ಮಜ್ಞ ॥ 54 ॥

ಹಿಂದೆ ಒಬ್ಬಾತನಿಗೆ । ಬಂದಾಗ ಜ್ಞಾನವಿದು
ಅಂದೆಯೇ ನಾಶಹೊಂದಿರುವ ಅಜ್ಞಾನ
ಇಂದಿಗಿಹುದೇಕೆ ಬ್ರಹ್ಮಜ್ಞ ॥ 55 ॥

ಅಧ್ಯಾಸಕಾರಣವು । ಅಧ್ಯಸ್ತವಾಗದಿದು
ಅಧ್ಯಸ್ತವಿರದ ಏತಕ್ಕು ಜ್ಞಾನದಿಂ
ಸಿದ್ಧಿಸದು ನಾಶ । ಬ್ರಹ್ಮಜ್ಞ ॥ 56 ॥

ಕಾರ್ಯಕಾರಣಭಾವ । ಸರ್ವವೂ ವ್ಯವಹಾರ
ಉರ್ವಿಯಲಿ ಕಾಲದೊಳು ತೋರ್ಪ ಭಾವವಿದು
ಸರ್ವರೂ ನೋಡಿ । ಬ್ರಹ್ಮಜ್ಞ ॥ 57 ॥

ಆತ್ಮನಲಿ ಕಾಲವಿದು । ಮತ್ತೆ ಕಲ್ಪಿತವಾಗಿ
ಸುತ್ತಿಹುದು ನಿತ್ಯವಧ್ಯಾಸದಿಂದಲೇ
ಸತ್ಯದನುಭವವು । ಬ್ರಹ್ಮಜ್ಞ ॥ 58 ॥

1. **"ವೇದಾಂತವಿದ್ವದ್‌ಗೋಷ್ಠಿ"** – ಎಂಬ ಸಂಸ್ಕೃತ ಗ್ರಂಥದ ಪೂರ್ವಪೀಠಿಕಾ ಪುಟ 8ರಲ್ಲಿರುವ ಎರಡನೆಯ ಪ್ಯಾರಾವನ್ನು ನೋಡಿರಿ.

ಬಾಳುವೆಚ್ಚರದಲ್ಲಿ । ಮೇಲೆ ಸ್ವಪ್ನಗಳಲ್ಲಿ
ಮೈಳೈಸಿ ತೋರಿ ನಿದ್ರೆಯಲಿ ಇರದಿರುವ
ಕಾಲ ನಿಜವೆಂತು ? । ಬ್ರಹ್ಮಜ್ಞ ॥ 59 ॥

ಕಾಲವಿರೆ ತೋರುತಿಹ । ಮೇಳ ಕಾರಣಕಾರ್ಯ
ಬಾಳುವದು ಮತ್ತೆ ಅಧ್ಯಾಸದಾಚೆ ಎನೆ
ತಾಳಿಲ್ಲದುಕ್ತಿ । ಬ್ರಹ್ಮಜ್ಞ ॥ 60 ॥

**(ಸಂಪ್ರದಾಯವಿರೋಧ)**

ಆರೋಪವಪವಾದ । ದಾರಿಯೇ ಹೋಯ್ತಿಲ್ಲಿ
ಆರೋಪಕಿಂತ ಮೊದಲಿಹುದು ಜಡಶಕ್ತಿ
ಬೇರಾಯ್ತು ಪಂಥ । ಬ್ರಹ್ಮಜ್ಞ ॥ 61 ॥

ಶಕ್ತಿಶಕ್ತರ ಭೇದ । ಮತ್ತವಿದ್ಯಾಕಾರ್ಯ
ಮತ್ತಿಹುದು ಬುದ್ಧಿಗಜ್ಞಾನ ಸಹಜದಲಿ
ಸತ್ಯವಿದು ಉಕ್ತಿ । ಬ್ರಹ್ಮಜ್ಞ ॥ 62 ॥

ಇನ್ನೊಮ್ಮೆ ನೀವಿಲ್ಲಿ । ಚೆನ್ನಾಗಿ ಕಣ್ದೆರೆದು
ಮುನ್ನವೇ ಬರೆದ ಮೂರನೆಯ ಅಧ್ಯಾಯ
ಮನ್ನಿಸುತ ನೋಡಿ । ಬ್ರಹ್ಮಜ್ಞ ॥ 63 ॥

**(ಭಾಷ್ಯವಿರೋಧ)**

ಇಲ್ಲ ಮೂಲಾವಿದ್ಯೆ । ಸೊಲ್ಲು ಭಾಷ್ಯಗಳಲ್ಲಿ
ಎಲ್ಲೆಲ್ಲಿ ಇಹುದು ಅಧ್ಯಾಸಮಾತ್ರವೇ
ಬಲ್ಲಿದರು ನೋಡಿ । ಬ್ರಹ್ಮಜ್ಞ ॥
64 ॥

ಅಧ್ಯಾಸವಾರೋಪ । ಬುದ್ಧಿಗಿಹ ಅಜ್ಞಾನ
ಇದ್ದಿಹವು ಎಲ್ಲ ಸಮನಾಗಿ ಭಾಷ್ಯದಲಿ
ಬುದ್ಧರಿದನರಿಗು । ಬ್ರಹ್ಮಜ್ಞ ॥ 65 ॥

ಅಧ್ಯಾಸವಾಗಲ್ಕೆ । ಇದ್ದುದಾತ್ಮನ ಶಕ್ತಿ
ಸದ್ದಿಲ್ಲ ಹೀಗೆ ಭಾಷ್ಯದಲುಪಾದಾನ
ಸುದ್ದಿಯೇ ಇಲ್ಲ । ಬ್ರಹ್ಮಜ್ಞ ॥ 66 ॥

ಅಧ್ಯಾಸವಾಗಲ್ಕೆ । ಇದ್ದಿಹುದು ಕಾರಣವು
ಬುದ್ಧಿಯಲಿ ಬಿಡಿಸಿ ತಿಳಿಯದುದೆ ಆಗ್ರಹಣ
ಶುದ್ಧಪ್ರಕ್ರಿಯೆಯು[1] । ಬ್ರಹ್ಮಜ್ಞ ॥ 67 ॥

ತಪ್ಪರಿವು ಸಂಶಯಕೆ । ಇಪ್ಪುದಿದು ಅಗ್ರಹಣ
ತಪ್ಪದೇ ತತ್ತ್ವವಾರ್ತಿಕದ ಈ ನುಡಿಯ
ನೆಪ್ಪಿಟ್ಟುಕೊಳ್ಳಿ[2] । ಬ್ರಹ್ಮಜ್ಞ ॥ 68 ॥

ಪರಿಣಾಮ ಹೊಂದುತಿಹ । ಮೆರೆದುಪಾದಾನವೆನೆ
ಬರೆದಿಲ್ಲವಿಲ್ಲಿ ಅಗ್ರಹಣವಧ್ಯಾಸ
ಬರಲಿದು ನಿಮಿತ್ತ । ಬ್ರಹ್ಮಜ್ಞ ॥ 69 ॥

ತಪ್ಪರಿವು ಬಂದಾಗ । ತಪ್ಪೆಂದು ತೋರದದು
ಒಪ್ಪಾಗಿ ಎಲ್ಲ ವ್ಯವಹಾರ ನಡೆಯುವದು
ಅಪ್ಪಟದ ಮಾತು । ಬ್ರಹ್ಮಜ್ಞ ॥ 70 ॥

ಸರಿಯಾದ ತಿಳಿವು ಬರೆ । ಜರುಗಿದುದು ತಪ್ಪೆಂದು
ಅರಿಯದುದೆ ಮೂಲವಿದಕೆಂದು ಕಡೆಯಲ್ಲಿ
ಮರುಗುವವರು ಜನರು । ಬ್ರಹ್ಮಜ್ಞ ॥ 71 ॥

ಜ್ಞಾನ ಬರೆ ಎಲ್ಲವೂ । ತಾನು ತೊಲಗುವ ಕತದಿ
ಮೇಣೀಗ ಶಬ್ದವಜ್ಞಾನದಲಿ ಮೂರು
ಮಾನಿಪುದು ನ್ಯಾಯ । ಬ್ರಹ್ಮಜ್ಞ ॥ 72 ॥

ಆದೊಡಿದು ಅಧ್ಯಾಸ । ಪ್ರಾಧಾನ್ಯವಾಗಿಹುದು
ಆದರಿಸಿ ಭಾಷ್ಯಗಳಲೆಲ್ಲ ಮತ್ತಿದನೆ
ಬೋಧೆಗೈದಿಹರು । ಬ್ರಹ್ಮಜ್ಞ ॥ 73 ॥

**(ತಪ್ಪುವಾಕ್ಯಾರ್ಥ)**

ಅಧ್ಯಾಸಭಾಷ್ಯದಲಿ । ಇದ್ದ ವಾಕ್ಯವ ಬೇರೆ
ಪದ್ಧತಿಯ ಬಲೆಗೆ ಹಾಕಿರುವ ಜಾಣತನ
ಬುದ್ಧಿಯಿದ ನೋಡಿ । ಬ್ರಹ್ಮಜ್ಞ ॥ 74 ॥

1. ಗೀ. ಭಾ. 13–26 (ಭಾ. ಭಾ. 826ರಲ್ಲಿ) 'ವಿವೇಕಾಭಾವನಿಬನ್ಧನಃ' ಎಂಬ ವಾಕ್ಯವನ್ನು ನೋಡಿರಿ; ಮತ್ತು ಅಧ್ಯಾ. ಭಾ. 1ನ್ನೂ ನೋಡಿ.

2. ತೈ. ವಾರ್ತಿಕ 2–176, 178 179ನ್ನು ನೋಡಿ.

ಪದವು ಮಿಥ್ಯಾಜ್ಞಾನ । ಇದಕರ್ಥ ತಪ್ಪರಿವು
ಇದನೊಡೆದು ಮಿಥ್ಯದಜ್ಞಾನವೆಂದುಸುರಿ
ಹದಗೆಡಸಲಾಯ್ತು[1] । ಬ್ರಹ್ಮಜ್ಞ ॥ 75 ॥

ಮಿಥ್ಯೆ ಎನ್ನುವ ಪದಕೆ । ಮತ್ತನಿರ್ವಚನೀಯ
ಅರ್ಥವಿದು ಮತ್ತೆ ಅಜ್ಞಾನ ಜಡಶಕ್ತಿ
ಯುಕ್ತಿಯಿದು ಕುಹಕ । ಬ್ರಹ್ಮಜ್ಞ ॥ 76 ॥

ಆದುದು ನಿಮಿತ್ತವಿದು । ವಾದಕ್ಕುಪಾದಾನ[2]
ಶೋಧವಿದು ಮತ್ತೆ ಕಾರಣವು ಅಧ್ಯಾಸ-
ವಾದುದಕೆ ಎನುತ । ಬ್ರಹ್ಮಜ್ಞ ॥ 77 ॥

ಎಲ್ಲಿಯೂ ಭಾಷ್ಯದಲಿ । ಇಲ್ಲವೀ ತೆರದರ್ಥ
ಇಲ್ಲದುದ ತಂದು ಹೊಗಿಸಲ್ಕೆ ಅದ್ವೈತ-
ವೆಲ್ಲ ತಲೆಕೆಳಗು । ಬ್ರಹ್ಮಜ್ಞ ॥ 78 ॥

## (ಅರ್ಥಾಧ್ಯಾಸವು ಭಾಷ್ಯ-ಅನುಭವವಿರುದ್ಧ)

ಹಗ್ಗ ಹಾವೆಂದಾಗ । ನಿಗ್ಗರದ ಸರ್ಪ ತಾ
ಹಗ್ಗದಲಿ ಹುಟ್ಟಿ, ಅರಿಯಲ್ಕೆ ಸಾಯದಿದು
ಒಗ್ಗಿರುವ ಮಾತು । ಬ್ರಹ್ಮಜ್ಞ ॥ 79 ॥

ಅಧ್ಯಾಸಕರ್ಥವಿದು । ಇದ್ದಿಹುದು ತಪ್ಪರಿವು
ಅಧ್ಯಾಸಮಾಡಿಕೊಂಡಾಗ ತೋರಿದುದು
ಶುದ್ಧ ಹುಸಿತೋರ್ಕೆ । ಬ್ರಹ್ಮಜ್ಞ ॥ 80 ॥

ತಿಳಿದಾಗ ಹಗ್ಗವನು । ಹೊಳೆದ ಹಾವಿಗೆ ಮರಣ
ಬಲವಾಗಿ ಬಂತು ಎನ್ನುವರೆ? ಹಾವೆಂಬ
ತಿಳಿವಳಿಕೆ ತಪ್ಪು । ಬ್ರಹ್ಮಜ್ಞ ॥ 81 ॥

---

1. ಪಂಚಪಾದಿಕಾಗ್ರಂಥದಲ್ಲಿ 'ಮಿಥ್ಯಾ ಚ ತತ್ ಅಜ್ಞಾನಂ ಚ' ಎಂದು ಬಿಡಿಸಿ ಮಿಥ್ಯಾಜ್ಞಾನಶಬ್ದವನ್ನು ತಪ್ಪಾಗಿ ಅರ್ಥಮಾಡಿದೆ.

2. ಮಿಥ್ಯೆ ಎಂದರೆ ಅನಿರ್ವಚನೀಯವೆಂದೂ ನಿಮಿತ್ತವೆಂದರೆ ಅಧ್ಯಾಸೋಪಾದಾನ ವೆಂದೂ ಅಜ್ಞಾನವೆಂದರೆ ಜಡಾತ್ಮಕವಾದ ಅವಿದ್ಯಾಶಕ್ತಿಯೆಂದೂ ಅರ್ಥಮಾಡಿದ್ದಾರೆ.

ಲೋಕಾನುಭವವಿದನು । ಬೇಕಾದವರ ಕೇಳಿ
ಏಕಿದಕೆ ವಾದ? ಕಲ್ಪಿತದ ತೋರಿಕೆಯು
ಜೋಕೆಯಲಿ ನೋಡಿ । ಬ್ರಹ್ಮಜ್ಞ ॥ 81 ॥

ಹೀಗಿರಲು ಅನುಭವವು । ಈಗಿದನೆ ಭಾಷ್ಯದಲಿ
ಸಾಗಿಸುತ ಬರೆದ ವಾಕ್ಯಗಳು ಬೇಕಾದ-
ಹಾಗೆ ಸಿಕ್ಕುವವು । ಬ್ರಹ್ಮಜ್ಞ ॥ 83 ॥

ಮಾಂಡೂಕ್ಯಭಾಷ್ಯದಲಿ । ಮಂಡಿಸುತ ಪೇಳಿಹರು
ಕಂಡಾಗ ಹಗ್ಗ ಹಾವೆಂಬ ತಿಳಿವಳಿಕೆ
ಖಂಡಿತದಿ ತಪ್ಪು । ಬ್ರಹ್ಮಜ್ಞ ॥ 84 ॥

ಮನಸಿನಲಿ ಹಗ್ಗದಲಿ । ಮನಹಗ್ಗವೆರಡರಲಿ
ಫಣಿ ಮತ್ತೆ ಹುಟ್ಟಿ ಸತ್ತಿಲ್ಲ ಮನಸಿನಾ
ಒಣಭ್ರಾಂತಿಯದುವೆ[1] । ಬ್ರಹ್ಮಜ್ಞ ॥ 85 ॥

### (ಪಂಚಪಾದಿಕೆಯಲ್ಲಿ ಅರ್ಥಾಧ್ಯಾಸನಿರೂಪಣೆ)

ಪಾದಿಕೆಯಲೀ ಬಗೆಗೆ । ವಾದಗಳು ಎದ್ದಿಹವು
ಮೋದದಲಿ ಖ್ಯಾತಿಬಾಧೆಗಳ ಚರ್ಚೆಗಳು
ಸಾದರದಿ ತರ್ಕ । ಬ್ರಹ್ಮಜ್ಞ ॥ 86 ॥

ಅಧ್ಯಾಸಕಾಲಕ್ಕೆ । ಅಧ್ಯಸ್ತವಸ್ತುವದು
ಸದ್ಯಕ್ಕೆ ಹುಟ್ಟಿ ತೋರುತ್ತ ಸಾಯುವದು
ವಿದ್ಯೆ ಬಂದಾಗ । ಬ್ರಹ್ಮಜ್ಞ[2] ॥ 87 ॥

ದುಷ್ಟಕರಣವು ಮತ್ತೆ । ಪಟ್ಟಾದ ಸಂಸ್ಕಾರ
ಇಷ್ಟಾಗಿ ಸೇರಿ ಅಜ್ಞಾನಶಕ್ತಿಯಲಿ
ಹುಟ್ಟುವದು ವಸ್ತು । ಬ್ರಹ್ಮಜ್ಞ ॥ 88 ॥

ಇದುವೆ ಅರ್ಥಾಧ್ಯಾಸ[3] । ಇದನಿಂತೆ ಕರೆಯುವರು
ಇದಕೆಲ್ಲ ತೂಲದಜ್ಞಾನ ಕಾರಣವು
ಅದರ ಪರಿಣಾಮ । ಬ್ರಹ್ಮಜ್ಞ ॥ 89 ॥

---

1. ಮಾ. ಭಾ. 2-32 (ಭಾ. ಭಾ. 113)ನ್ನು ನೋಡಿರಿ.

2. ಇಲ್ಲಿಂದ 92ನೆಯ ಪದ್ಯದವರೆಗಿನ ವಿಷಯಕ್ಕೆ ವೇ.ಪ್ರ.ಪ್ರ. ಪುಟ 287ರಲ್ಲಿ 3ನೆಯ ಪ್ಯಾರಾ ನೋಡಿರಿ.

3. ಅರ್ಥಾಧ್ಯಾಸವೆಂದರೆ ಭ್ರಾಂತಿಕಾಲದಲ್ಲಿ ಕಾಣುವ ಸರ್ಪಾದಿಗಳು ತತ್ಕಾಲಕ್ಕೆ ಅವಿದ್ಯಾಶಕ್ತಿಯೇ ಮುಂತಾದ ದೋಷತ್ರಯಗಳಿಂದ ಹುಟ್ಟಿ ಜ್ಞಾನ ವುಂಟಾಗಲು ನಾಶವಾಗುವವು- ಎಂಬ ವಾದ.

ಮೂರರೀ ದೋಷದಲಿ । ತೋರುವುದನಿರ್ವಾಚ್ಯ
ಸಾರವಿದು ಅರ್ಥದಧ್ಯಾಸ ವಸ್ತುತಾ
ತೋರಲ್ಕೆ ಕೇಳಿ । ಬ್ರಹ್ಮಜ್ಞ ॥ 90 ॥

ಇದು ಅನಿರ್ವಚನೀಯ । ಇದು ಮತ್ತೆ ನಿಜವಲ್ಲ
ಹದನಾಗಿ ಜ್ಞಾನ ಬರುತಲೇ ತೊಲಗುವದೆ
ಇದಕೀಗ ಸಾಕ್ಷಿ । ಬ್ರಹ್ಮಜ್ಞ ॥ 91 ॥

ವಿಷಯವಿಲ್ಲದೆ ಜ್ಞಾನ । ಬೆಸಗೊಳದು ಇದರಿಂದೆ
ಹುಸಿಯಲ್ಲ ವಸ್ತು ತೋರ್ಪಾಗ ಸತ್ಯವೇ
ಹುಸಿನಿಜಕೆ ಬೇರೆ । ಬ್ರಹ್ಮಜ್ಞ ॥ 92 ॥

**(ಇದರ ಪರಿಣಾಮ)**

ಇದು ವಿವಾದಗ್ರಸ್ತ । ಕದನದಾ ಕಣವಾಯ್ತು
ಮುದದಿಂದ ಎಲ್ಲರೊಪ್ಪಿರುವ ದೃಷ್ಟಾಂತ
ಹದಗೆಟ್ಟುಹೋಯ್ತು । ಬ್ರಹ್ಮಜ್ಞ ॥ 93 ॥

ಈ ರೀತಿ ತರ್ಕಗಳ । ಸೇರಿಸುತ ವೇದಾಂತ
ದಾರಿಯಲಿ ಖ್ಯಾತಿಬಾಧಾದಿ[1] ವಿಷಯಗಳ
ತೂರಿಸಿದರಿಲ್ಲಿ । ಬ್ರಹ್ಮಜ್ಞ ॥ 94 ॥

ಸತ್ಯಮಿಥ್ಯೆಯ ಬಿಟ್ಟು । ಮತ್ತೊಂದು ಜಾತಿಯದು
ಸತ್ಯದಲಿ ಇಹುದು ಎನಲನಿರ್ವಚನೀಯ[2]
ಮತ್ತಿನ್ನು ಬಂತು । ಬ್ರಹ್ಮಜ್ಞ ॥ 95 ॥

ಭಾಷ್ಯಬಾಹಿರವಾದ ಭಾಷೆಗಳು ಒಳಹೊಕ್ಕು
ಐಸಲೇ ಮುಂದೆ ಬರೆವವರು ಈ ಜಾಡು
ಲೇಸು ಬೆಳಸಿದರು । ಬ್ರಹ್ಮಜ್ಞ ॥ 96 ॥

ಪಾದಿಕೆಯ ದೆಶೆಯಿಂದ । ಹಾದಿಯೇ ಬೇರಾಗಿ
ಆದರದ ಭಾಷ್ಯದನುಭವವು ದೂರಾಗಿ
ವಾದ ಮೊದಲಾಯ್ತು । ಬ್ರಹ್ಮಜ್ಞ ॥ 97 ॥

---

1. ಖ್ಯಾತಿಬಾಧಾದಿವಾದಗಳು ಇಲ್ಲಿಂದ ಮುಂದಕ್ಕೆ ವೇದಾಂತದರ್ಶನದಲ್ಲಿ ಸ್ಥಾನವನ್ನು ಪಡೆದವು.

2. ಭಾಷ್ಯಕಾರರು ಹೇಳಿರುವ ಅನಿರ್ವಚನೀಯಶಬ್ದದ ಅಭಿಪ್ರಾಯಕ್ಕಿಂತ ವಿಲಕ್ಷಣ ವಾದ ಸತ್, ಅಸತ್, ಸದಸದ್ವಿಲಕ್ಷಣವದ ಇರುವಿಕೆಯೊಂದು ಉಂಟೆಂದು ತಿಳಿಯು ವಂತಾಯಿತು ಎಂದರ್ಥ.

(ಭಾಮತೀಪ್ರಸ್ಥಾನ)

ಭಾಮತಿಯ ಮತ ಒಂದು । ನೇಮನಿಶ್ಚಿತವಿಲ್ಲ
ಸಾಮಾನ್ಯದೊಲವು ಮಂಡನನ ಕಡೆ ಮತ್ತೆ
ಈ ಮಾತೆ ನಿಲದು । ಬ್ರಹ್ಮಜ್ಞ ॥ 98 ॥

ಒಮ್ಮೆ ಮೂಲಾವಿದ್ಯೆ । ಒಮ್ಮೆ ತಪ್ಪಾದರಿವು
ಸಮ್ಮತಿಪ ಮತ್ತೆ ಎರಡನ್ನು[1] ಏಕೆನಲು
ಬೊಮ್ಮನೇ ಬಲ್ಲ । ಬ್ರಹ್ಮಜ್ಞ ॥ 99 ॥

ಮಾಯೆ ಎಂದರವಿದ್ಯೆ । ಈಯನಿರ್ವಾಚ್ಯತ್ವ
ಬಾಯ್ಬಿಟ್ಟು ಮತ್ತೆ ಹೇಳಿಹನು ಜ್ಞಾನದಿಂ
ಸಾಯುವದು ಎಂದು । ಬ್ರಹ್ಮಜ್ಞ ॥ 100 ॥

(ಬೀಜಾಂಕುರನ್ಯಾಯ)

ಅಧ್ಯಾಸ ಜೀವತ್ವ । ಇದ್ದಿಹವನಾದಿಯಿಂ
ಸಿದ್ಧವದು ಬೀಜಗಿಡದಂತೆ ಎಂದೀತ
ಉದ್ಧರಿಸಿ ಬರೆವ । ಬ್ರಹ್ಮಜ್ಞ ॥ 101 ॥

ಬೀಜಾಂಕುರದ ನ್ಯಾಯ । ಮೋಜಿನಲ್ಲಿ ಹೇಳುವನು
ಈ ಜಗದಿ ಇವಗೆ ಬ್ರಹ್ಮಾಸ್ತ್ರವಿದು[2] ಮತ್ತೆ
ಸೋಜಿಗವ ನೋಡಿ । ಬ್ರಹ್ಮಜ್ಞ ॥ 102 ॥

(ಭಾಷ್ಯವಿರೋಧ)

ಬೀಜವೃಕ್ಷದ ನ್ಯಾಯ । ಈ ಜಗದಿ ಸಾಧ್ಯಸಮ
ಯೋಜಿಸಲು ಬರದು ದೃಷ್ಟಾಂತ ಈ ಮತವು
ಪೂಜ್ಯಪಾದರದು । ಬ್ರಹ್ಮಜ್ಞ ॥ 103 ॥

ಆದಿಯಿಲ್ಲದುದಕ್ಕೆ । ಆದುದಲ್ಲವು ಸಮವು
ಮೋದದಾ ಬೀಜ ಅಂಕುರಗಳೆರಡಕ್ಕು
ಆದಿಯೇ ಇಹುದು । ಬ್ರಹ್ಮಜ್ಞ ॥ 104 ॥

---

1. ಭಾಮತೀಕಾರನು ಮಂಡನನಂತೆ ಅಗ್ರಹಣವಿಪರೀತಗ್ರಹಣಗಳನ್ನು ಅವಿದ್ಯೆಯೆಂದೂ ಮತ್ತು ಪಂಚಪಾದಿಕೆಯಂತೆ ಜಡಾತ್ಮಕಾವಿದ್ಯಾಶಕ್ತಿಯನ್ನು ಅವಿದ್ಯೆಯೆಂದೂ ಒಪ್ಪಿರುತ್ತಾನೆ. ಇದರ ವ್ಯಾಖ್ಯಾನವಾದ ಕಲ್ಪತರುಗ್ರಂಥದಲ್ಲಿ ಭಾಮತೀಕಾರನಿಗೆ ಮೂಲಾವಿದ್ಯೆಯು ಅಭಿಮತವೆಂದೇ ಕಂಠೋಕ್ತವಾಗಿ ಬರೆದಿದೆ.

2. ಭಾಮತೀಕಾರನಿಗೆ ಬೀಜಾಂಕುರನ್ಯಾಯವು ತುಂಬ ಮೆಚ್ಚು.

ಬೀಜಾಂಕುರವ ಬಿಟ್ಟು । ಬೀಜಾಂಕುರದ ತತಿಯು
ಈ ಜಗದಿ ಇಲ್ಲ ಬೇರಿನ್ನನಾದಿಗಿದೆ
ಯೋಜಿಸಲು ಹೊಲ್ಲ । ಬ್ರಹ್ಮಜ್ಞ ॥ 105 ॥

ಮಾಂಡೂಕ್ಯಕಾರಿಕೆಯ । ಖಂಡಿತದ ಭಾಷ್ಯದಲಿ
ಮಂಡಿಸಿದ ವಿಷಯದರಿವಿಲ್ಲವೀ ಮಿಶ್ರ
ಪಂಡಿತಗೆ ನೋಡಿ । ಬ್ರಹ್ಮಜ್ಞ ॥ 106 ॥

ಆ ಪರಂಪರೆಯನ್ನು । ಕಾಪಾಡಿಕೊಳ್ಳದಿಹ
ಈ ಪರಿಯ ಪಂಥ ವಿಪರೀತ ವ್ಯಾಖ್ಯಾತೃ[1]
ಭಾಪು ಭಾಮತಿಯು । ಬ್ರಹ್ಮಜ್ಞ ॥ 107 ॥

### (ಅವಿದ್ಯಾನಾನಾತ್ವ)

ಇನ್ನೊಂದು ದೊಡ್ಡಕಥೆ । ಮುನ್ನ ನಗೆಗೀಡಹುದು
ಚೆನ್ನಾಗಿಕೇಳಿ ಪಾಂಡಿತ್ಯಲೇಖನಿಯ
ಭಿನ್ನಪಂಥವನು । ಬ್ರಹ್ಮಜ್ಞ ॥ 108 ॥

ಆತ್ಮನನ್ನಾಶ್ರಯಿಸಿ । ಆತ್ಮಶಕ್ತಿಯೆ ಎನಿಸಿ
ಮತ್ತಿರುವ ಮೂಲದಜ್ಞಾನ ಹೋಗೆ, ಭವ
ಮತ್ತೇಕೆ ಇಹುದು[2] ಬ್ರಹ್ಮಜ್ಞ ॥ 109 ॥

ಓರ್ವನಿಗೆ ಮುಕ್ತಿ ಬರೆ । ಸರ್ವರಿಗೂ ಬರಬೇಕು
ನಿರ್ವಾಣವೆಂಬ ಸಂಶಯವನೆಬ್ಬಿಸುತ
ನಿರ್ವಹಿಪನಿಲ್ಲಿ । ಬ್ರಹ್ಮಜ್ಞ ॥ 110 ॥

ಬೇರೆಬೇರೆಯವಿದ್ಯೆ । ಸೇರಿಹವು ಜೀವರಿಗೆ
ಯಾರು ಈ ವಿದ್ಯೆ ಪಡೆಯುವರೊ ಅವರಿಗೇ
ತೀರುವದವಿದ್ಯೆ । ಬ್ರಹ್ಮಜ್ಞ ॥ 111 ॥

ಆದರಿಂದ ನಾನಾತ್ವ । ಒದಗಿಹುದವಿದ್ಯೆಯಲಿ
ಇದೆ ನ್ಯಾಯ ಶಂಕೆಗುತ್ತರವು ಎಂಬುದೀ
ಬುಧನುಕ್ತಿ ಕೇಳಿ । ಬ್ರಹ್ಮಜ್ಞ ॥ 112 ॥

ನಾನಾತ್ವವೆನ್ನುವದು । ಜ್ಞಾನವಿಲ್ಲದುದಕ್ಕೆ
ಕಾಣುತಿಹ ಬರಿಯ ಕಲ್ಪನೆಯು ಎಂಬುದಿದು
ಜ್ಞಾನಿಗಳ ಪಂಥ । ಬ್ರಹ್ಮಜ್ಞ ॥ 113 ॥

---

1. ವೇ. ಪ್ರ. ಪ್ರ. ಪುಟ 403 ರಿಂದ 405ನ್ನು ನೋಡಿರಿ.
2. ಅವಿದ್ಯೆಯು ಪ್ರತಿಜೀವನಿಗೂ ಭಿನ್ನವಾಗಿದೆ– ಎಂಬುದು ಈತನ ಮತ.

ಕಲ್ಪಿತವು ನಾನಾತ್ವ । ಅಲ್ಪರಜ್ಞಾನದಲಿ
ಸ್ವಲ್ಪವೂ ಇಲ್ಲ ನಾನಾತ್ವವೆಂಬ ಶ್ರುತಿ
ಅಲ್ಪವೇ ಹೇಳಿ ? । ಬ್ರಹ್ಮಜ್ಞ ॥ 114 ॥

ನಾನಾತ್ವವಜ್ಞಾನ । ಎನುವುದಿದು ಭಾಷ್ಯಮತ
ಮಾನಿಸದೆ ಪೇಳ್ವ ಅಜ್ಞಾನನಾನಾತ್ವ
ತಾನೆ ತಲೆಕೆಳಗು[1] । ಬ್ರಹ್ಮಜ್ಞ ॥ 115 ॥

ಶ್ರುತಿಸಂಪ್ರದಾಯಕ್ಕೆ ಅತಿಶಯದ ವಿಪರೀತ
ಮತಿಯನ್ನು ಈತ ಹುಟ್ಟಿಸುತ ಪಂಡಿತರ
ಗತಿಗೆಡಿಸಿಬಿಟ್ಟ । ಬ್ರಹ್ಮಜ್ಞ ॥ 116 ॥

ಮನನಶ್ರವಣಂಗಳಿಗೆ । ಘನನಿದಿಧ್ಯಾಸಕ್ಕೆ
ಅನುನಯದಿ ಪೇಳ್ವ ಧಾರಣಧ್ಯಾನ ಮೇಣ್
ಘನಸಮಾಧಿಯನು[2] । ಬ್ರಹ್ಮಜ್ಞ ॥ 117 ॥

ಪತಾಂಜಲದ ಯೋಗ । ಈತ ವೇದಾಂತದಲಿ
ಬೇತಿನಲಿ ಹೊಗಿಸಿ ವೇದಾಂತಸಾಧನೆಯ
ರೀತಿ ಕೆಡಿಸಿಹನು । ಬ್ರಹ್ಮಜ್ಞ ॥ 118 ॥

ದ್ವೈತದರ್ಶನಯೋಗ । ಪಾತಂಜಲಿಯದೆಂದು
ಸಾತಿಶಯ ಭಾಷ್ಯದೊಳಗೆಲ್ಲ ಖಂಡಿಸಿದ
ಮಾತೆ ಹೊಯ್ತಿಲ್ಲಿ । ಬ್ರಹ್ಮಜ್ಞ ॥ 119 ॥

ಚಿತ್ತರೋಧನ ಬೇಕೆ ? ಮತ್ತೆ ಮೋಕ್ಷಕ್ಕೆಂದು
ಎತ್ತಿರುತ ಶಂಕೆ ಭಾಷ್ಯದಲಿ ಪರಿಹರಿಸಿ–
ದುತ್ತರವ ನೋಡಿ[3] । ಬ್ರಹ್ಮಜ್ಞ ॥ 120 ॥

ಇನ್ನು ಎಷ್ಟೋ ವಿಷಯ । ಭಿನ್ನವಾಗಿಯೆ ಬರೆದು
ಚೆನ್ನಾಗಿ ಭಾಷ್ಯದರ್ಥಗಳ ಕುಲಗೆಡಿಸಿ
ಬನ್ನ ಬಡಿಸಿಹನು । ಬ್ರಹ್ಮಜ್ಞ ॥ 121 ॥

ಹೆಚ್ಚಿನಾ ವಿಷಯಗಳ । ಬಿಚ್ಚಿ ತಿಳಿಬಯಸುವರು
ಉಚ್ಚತಮ ಗ್ರಂಥಗಳ ಹಿಂದೆ ಹೇಳಿರಲು
ನಿಚ್ಚಳದಿ ನೋಡಿ । ಬ್ರಹ್ಮಜ್ಞ ॥ 122 ॥

---

1. ವೇ. ಪ್ರ. ಪ್ರ. ಪುಟ 406, 407ನ್ನು ನೋಡಿರಿ.
2. ವೇ. ಪ್ರ. ಪ್ರ. ಪುಟ 451, 452ನ್ನು ನೋಡಿರಿ.
3. ಬೃ. ಭಾ. 1–4–7 (ಭಾ. ಭಾ. 139)ನ್ನು ನೋಡಿರಿ.

ಸಾಕು ಈತನ ವಿಷಯ । ಜೋಕೆ ಜಿಜ್ಞಾಸುಗಳು
ನೂಕಿರುವ ಇಂಥ ಬೋಧೆಗಳ ಸೆಳೆತಕ್ಕೆ
ತಾಕದಿರಲೆನುವೆ । ಬ್ರಹ್ಮಜ್ಞ ॥ 123 ॥

(ಇಷ್ಟಸಿದ್ಧಿಯ ವಿಮರ್ಶೆ)

ಇಷ್ಟಸಿದ್ಧಿ[1]ಯಲೀಗ । ಗಟ್ಟಿಗೊಳಿಸಿದ ಭಾಗ
ಶಿಷ್ಟವಹ ಮೂಲದಜ್ಞಾನ ತತ್ತ್ವವನು
ಸ್ಪಷ್ಟದಲಿ ಕೇಳಿ । ಬ್ರಹ್ಮಜ್ಞ ॥ 124 ॥

ಇದ್ದನಿರ್ವಾಚ್ಯತ್ವ । ಸಿದ್ಧಗೊಳಿಸಲು ಈತ
ಬುದ್ಧಿಯಲಿ ಬಹಳ ತರ್ಕವನು ತಂದೊಡ್ಡಿ
ಗುದ್ದಾಡಿ ಬರೆದ । ಬ್ರಹ್ಮಜ್ಞ ॥ 125 ॥

ಜಗದನಿರ್ವಚನೀಯ । ಬಗೆಯನ್ನೆ ತಿಳಿವುದಕೆ
ಬಿಗುಹಿನಲಿ ಬಳಸಿಬರೆದಿಹನು[2] ಬಹುಭಾಗ
ಅಗಣಿತದ ತರ್ಕ । ಬ್ರಹ್ಮಜ್ಞ ॥ 126 ॥

ಭಾಮತಿಯ ತೆಗಳುತಲಿ । ಪ್ರೇಮದಲಿ ಪಾದಿಕೆಯ
ಸೀಮೆಯನು ಬಿಡದೆ ಅನುಸರಿಸಿ ವಾದಿಪು-
ದ್ದಾಮ ಪಂಡಿತನು । ಬ್ರಹ್ಮಜ್ಞ ॥ 127 ॥

ಈತನಲಿ ಮುಖ್ಯದಾ । ಮಾತನೆರಡನು ಪೇಳ್ವೆ
ಖ್ಯಾತವಹ ಭಾಷ್ಯಪಂಥಕ್ಕೆ ಹೊಂದದಿಹ
ರೀತಿ ತೋರಿಸುವೆ । ಬ್ರಹ್ಮಜ್ಞ ॥ 128 ॥

(ಅವಿದ್ಯಾಲೇಶವಾದ)

ಜ್ಞಾನವಿದು ಬರಲಾಗಿ । ಪೂರ್ಣ ಹೋಗದವಿದ್ಯೆ
ಮೇಣೀಗ ಶೇಷ ಉಳಿಯುವದು[3] ಪ್ರಾರಬ್ಧ-
ಮಾನ ಪರ್ಯಂತ । ಬ್ರಹ್ಮಜ್ಞ ॥ 129 ॥

ಇದುವೆ ಜೀವನ್ಮುಕ್ತಿ । ಮೊದಲಿನದು ಗೌಣವಿದು
ಒದಗಿತಾ ಮರಣ ಜ್ಞಾನಗದು ಬರಲಾಗಿ
ಬದಿಗಹುದು ಲೇಶ । ಬ್ರಹ್ಮಜ್ಞ ॥ 130 ॥

---

1. ವಿಮುಕ್ತಾತ್ಮಯತಿಗಳು ಬರೆದಿರುವ ಸ್ವತಂತ್ರಗ್ರಂಥ.
2. ವೇ॥ ಪ್ರ. ಪ್ರ. ಪುಟ 471, 472ನ್ನು ನೋಡಿರಿ.
3. ಈ ವಿಷಯಕ್ಕೆ ವೇ. ಪ್ರ. ಪ್ರ. ಪುಟ 522 ರಿಂದ 524ನ್ನು ನೋಡಿರಿ.

ಇದು ವಿದೇಹದ ಮುಕ್ತಿ । ಇದು ಮುಖ್ಯವಾಗಿಹುದು
ಇದು ಬರಲು ಮತ್ತೆ ಹುಟ್ಟಿಲ್ಲ ಶಾಸ್ತ್ರವೇ
ಇದಕೆಲ್ಲ ಮಾನ । ಬ್ರಹ್ಮಜ್ಞ ॥ 131 ॥

### (ಶ್ರುತಿಭಾಷ್ಯಗಳಿಗೆ ವಿರೋಧ)

ಬರಲು ಜ್ಞಾನವು ಮತ್ತೆ । ಇರದವಿದ್ಯೆ ಎನುತ್ತೆ
ವರಭಾಷ್ಯ ಬರಹ ಸಾರಿರಲು । ಲೇಶವನು
ಒರೆಯುವದೆ ತಪ್ಪು । ಬ್ರಹ್ಮಜ್ಞ ॥ 132 ॥

ಗೀತೆ[1]ಬೃಹದಾರಣ್ಯ[2] । ಖ್ಯಾತಭಾಷ್ಯಗಳಲ್ಲಿ
ಮಾತಿದನು ತಿಳಿಸಿಕೊಟ್ಟಿಹರು ವಿದ್ಯೆ ಬರೆ
ಏತರದು ಶೇಷ ? । ಬ್ರಹ್ಮಜ್ಞ ॥ 133 ॥

ಎರಡನೆಯ ಚಂದ್ರನೂ । ಬರಿಭ್ರಮೆಯ ಸರ್ಪವೂ
ಇರುತಿಹವೆ ಶೇಷ ಅರಿಯಲ್ಕೆ ಸತ್ಯವನು
ಅರಿತಿದನು ಹೇಳಿ । ಬ್ರಹ್ಮಜ್ಞ ॥ 134 ॥

ಪೂರ್ಣಮುಕ್ತಿಯು ಈಗ । ಕಾಣದಾಗಲು ಬೇಗ
ಪ್ರಾಣವೇ ಹೋಗೆ ಆಗಲದು ಬರ್ಪುದೆನೆ
ಮಾನವೇನಿದಕೆ ? । ಬ್ರಹ್ಮಜ್ಞ ॥ 135 ॥

ಶ್ರುತಿಯೆ ಇದಕಾಧಾರ । ಮತವಿದೆನ್ನಲು ಮತ್ತೆ
ಇತರಮತವಾದಿಗಳ ತೆರದಿ ನಂಬಿಕೆಯ
ಮತವಾಯ್ತು ಇದುವೆ । ಬ್ರಹ್ಮಜ್ಞ ॥ 136 ॥

ಈಗಲೇ ಅನುಭವಕೆ । ತಾಗುವದು ಅದ್ವೈತ
ಆಗುವದು ಇಲ್ಲಿ ಬಿಡುಗಡೆಯು ಎಂಬ ನುಡಿ
ಈಗ ಸುಳ್ಳಹುದು । ಬ್ರಹ್ಮಜ್ಞ ॥ 137 ॥

ಅಶರೀರಿ ಅಪ್ರಾಣ । ಎಸೆವಾತ್ಮನಿತ್ಯದಲಿ
ಉಸುರುವೀ ಶ್ರುತಿಯ ವಚನವಿದು ಅನುಭವಕೆ
ಮಿಸುಕದಾಯ್ತಾಗ । ಬ್ರಹ್ಮಜ್ಞ ॥ 138 ॥

ಬರಿಯ ನಂಬಿಕೆಯಲ್ಲ । ಬರುವದೀಗನುಭವಕೆ
ವರಶ್ರುತಿಯ ಬೋಧೆ ಎಂದಿರುವ ಶಂಕರರ
ಬರಹ ಸಟೆಯಾಯ್ತು । ಬ್ರಹ್ಮಜ್ಞ ॥ 139 ॥

---

1. ಗೀ. ಭಾ. 18–48 (ಭಾ. ಭಾ. 1091)ನ್ನು ನೋಡಿರಿ.
2. ಬೃ. ಭಾ. 1–4–10 (ಭಾ. ಭಾ. 173)ನ್ನು ನೋಡಿರಿ.

ಗೌಣಮುಕ್ತಿಯು ಮತ್ತೆ । ಪ್ರಾಣ ಹೋದಾಗಿನದು
ತಾನೀಗ ಮುಖ್ಯ ಜೀವಂತಮುಕ್ತಿ ಎನೆ
ಮಾನಿಪುದು ಭಾಷ್ಯ । ಬ್ರಹ್ಮಜ್ಞ ॥ 140 ॥

ಹದನ ತಲೆಕೆಳಗಾಯ್ತು । ಬದಲಾಯ್ತು ಅದ್ವೈತ
ಸದರದಲಿ ಮೋಸಹೊಂದಿಹರು ಜನರೆಲ್ಲ
ಇದುವೆ ದುರ್ದೈವ । ಬ್ರಹ್ಮಜ್ಞ ॥ 141 ॥

(ಪ್ರಾರಬ್ಧವಿಚಾರ)

ಪ್ರಾರಬ್ಧವೆಂಬುದುನು । ಸಾರಿಹರು ಅಜ್ಞರಿಗೆ
ತೋರಿಕೆಯ ದೇಹ ಜ್ಞಾನಿಯಲಿ ಕಾಣುತಿರೆ
ತೀರಿಸಲು ಶಂಕೆ । ಬ್ರಹ್ಮಜ್ಞ ॥ 142 ॥

ಜ್ಞಾನಿಗಳ ದೃಷ್ಟಿಯಲಿ । ತಾನಿದೆಲ್ಲವು ಬ್ರಹ್ಮ
ಮಾನಿಸರು ದ್ವೈತವಿಹುದೆಂದು ಈಗಲೇ
ಜ್ಞಾನಿಯಶರೀರಿ । ಬ್ರಹ್ಮಜ್ಞ ॥ 143 ॥

ಮರಣ ಬೇಕಾಗಿಲ್ಲ । ವರಮುಕ್ತಿ ಪಡೆಯಲ್ಕೆ
ಬರೆದಿಹರು ಇದನು ಸೂತ್ರಗಳ ಭಾಷ್ಯದಲಿ
ಸರಿಯಾಗಿ ನೋಡಿ । ಬ್ರಹ್ಮಜ್ಞ ॥ 144 ॥

ಭಾಷ್ಯದೊಳಗಿಲ್ಲದುದ । ಲೇಸಾಗಿ ಹೊಗಿಸಿದರು
ಈಸು ಜನ ತರ್ಕಪಂಡಿತರು ವೇದಾಂತ–
ದಾಶಯವೆ ಹೋಯ್ತು । ಬ್ರಹ್ಮಜ್ಞ ॥ 145 ॥

(ಇದರ ಪರಿಣಾಮ)

ಇಲ್ಲಿಂದ ಈ ವಾದ । ಮೆಲ್ಲನೆಯೆ ಪ್ರಚುರಕ್ಕೆ
ಎಲ್ಲರಲಿ ಬಂದು ಪ್ರಾರಬ್ಧಚರ್ಚೆಗಳ
ಗುಲ್ಲು ಬಲವಾಯ್ತು । ಬ್ರಹ್ಮಜ್ಞ ॥ 146 ॥

(ಈಗಿನ ಸ್ಥಿತಿ)

ವೇದಾಂತಮಾತುಗಳ । ವಾದ ಕಲಿತವರೀಗ
ಮೋದದಲಿ ಮುಕ್ತರಾವೆಂದು ವರ್ತಿಪರು
ಹಾದಿಯನೆ ಬಿಟ್ಟು । ಬ್ರಹ್ಮಜ್ಞ ॥ 147 ॥

ಈ ರೀತಿ ಏಕೆನಲು । ಮಾರುತ್ತರವು ಸರಳ
ಬೇರೇನು ? ನಮ್ಮ ಪ್ರಾರಬ್ಧವೆಂಬುದಕೆ
ದಾರಿಯಾಯ್ತಿದುವೆ । ಬ್ರಹ್ಮಜ್ಞ ॥ 148 ॥

### (ಅನಿರ್ವಚನೀಯತತ್ತ್ವ)

ಬ್ರಹ್ಮಾಸ್ತ್ರ ಭಾಮತಿಗೆ । ನೆಮ್ಮಿ ಬೀಜಾಂಕುರವು
ಬ್ರಹ್ಮಾಸ್ತ್ರ ಮತ್ತೆ ಈತಂಗನಿರ್ವಾಚ್ಯ
ಸಮ್ಮಿತಿಪನಿಲ್ಲಿ । ಬ್ರಹ್ಮಜ್ಞ ॥ 149 ॥

ಅವುದೇ ತರ್ಕದಲಿ । ಆವ ವ್ಯತ್ಯಯ ಬರಲಿ
ಈವುದೀ ಗ್ರಂಥ ಉತ್ತರವನಿರ್ವಾಚ್ಯ
ಭಾವನೆಯ[1] ನಿರುತ । ಬ್ರಹ್ಮಜ್ಞ ॥ 150 ॥

### (ಅಜ್ಞಾನನಾಶಕ್ಕೆ ತರ್ಕ)

ಸತ್ತಲ್ಲಸತ್ತಲ್ಲ । ಮತ್ತೆ ಎರಡೂ ಅಲ್ಲ[2]
ಎತ್ತಣದು ಇಂಥ ಅಜ್ಞಾನನಾಶನವು
ಎತ್ತಿಹುದು ಪ್ರಶ್ನೆ । ಬ್ರಹ್ಮಜ್ಞ ॥ 151 ॥

ಉತ್ತರವನೀವಾಗ । ಉತ್ತಮದ ಮಾತೊಂದು
ಒತ್ತಿ ತಾ ಪೇಳ್ವ ಜ್ಞಾನವೇ ಅಜ್ಞಾನ
ಕಿತ್ತುವದು ಎಂದು । ಬ್ರಹ್ಮಜ್ಞ ॥ 152 ॥

ಬಿದಿರುಗಳ ಘರ್ಷಣದಿ । ಉದುಭವಿಸಿದಗ್ನಿಯದು
ಬಿದಿರುಗಳ ಸುಟ್ಟು ತಾ ನೊಂದು ಹೋಹಂತೆ
ಇದು ನಡೆವುದೆನುವ[3] । ಬ್ರಹ್ಮಜ್ಞ ॥ 153 ॥

ಇದಕಾಗಿ ತರ್ಕಗಳ । ಒದಗಿಸಿಹುದೀ ಬಗೆಗೆ
ಬದಿಗಿರಿಸಿ ಸರಳದನುಭವವ ಬುದ್ಧಿ ಬಲ-
ಕಿದು ಸಾಕ್ಷಿಯಲ್ತೆ ? । ಬ್ರಹ್ಮಜ್ಞ ॥ 154 ॥

---

1. ವೇ॥ ಪ್ರ. ಪ್ರ. ಪುಟ 470, 471ನ್ನು ನೋಡಿರಿ.
2. ಇಷ್ಟಸಿದ್ಧಿ ಪುಟ 208, 209ನ್ನು ನೋಡಿರಿ.
3. ಇಷ್ಟಸಿದ್ಧಿ ಪುಟ 69, 70ನ್ನು ನೋಡಿರಿ.

## (ಅನುಭವವಿರೋಧ)

ಅಜ್ಞಾನ ನಾಶನವು । ಸುಜ್ಞಾನದುದಯವಿದು
ಅಜ್ಞಾನಕ್ಷೇತ್ರದೊಳಗಿನದು ಎನ್ನುವೀ
ಪ್ರಜ್ಞೆ ಮರೆಯಾಯ್ತು । ಬ್ರಹ್ಮಜ್ಞ ॥ 155 ॥

ಯಾವ ಜ್ಞಾನವು ಬರಲು । ಯಾವ ಅಜ್ಞತೆ ಇರದೊ
ಭಾವದಲಿ ನೋಡೆ ಅಜ್ಞತೆಯು ಜ್ಞಾನದ ಅ-
ಭಾವವೇ ಅಕ್ಕು[1] । ಬ್ರಹ್ಮಜ್ಞ ॥ 156 ॥

ಜ್ಞಾನ ಬರಲಜ್ಞಾನ । ತಾನೆ ತೊಲಗುವದಿದುವೆ
ಮಾನವರ ನಿತ್ಯದನುಭವವು ತರ್ಕವಿದ-
ಕೇನು ಬೇಕಿಹುದು ? । ಬ್ರಹ್ಮಜ್ಞ ॥ 157 ॥

ಅಜ್ಞಾನವಿದ್ದರೇಂ? ಸುಜ್ಞಾನ ಬಂದರೇಂ ?
ಪ್ರಜ್ಞಾನರೂಪನಾತ್ಮನಿವ ಇದರಿಂದೆ
ಭಗ್ನನೇ ಅಲ್ಲ । ಬ್ರಹ್ಮಜ್ಞ ॥ 158 ॥

ಇದಕಾಗಿ ಪೇಳಿಹುದು । ಮುದದಿ ವಿದ್ಯಾವಿದ್ಯೆ
ಒದಗಿಹವು ಬುದ್ಧಿಗೆಂದೆನುತ[2] ಆತ್ಮನಲಿ
ಹುದುಗಿಲ್ಲವೆನುತ । ಬ್ರಹ್ಮಜ್ಞ ॥ 159 ॥

ಈ ರಹಸ್ಯವ ಬಿಟ್ಟು । ಸೇರಿರುವದಾತ್ಮನಲಿ
ಘೋರಾದ ಮಾಯೆ ಅಜ್ಞಾನವೆಂಬುದರ
ಹಾರಾಟ ನೋಡಿ । ಬ್ರಹ್ಮಜ್ಞ ॥ 160 ॥

ಅನುಭವವೆ ಔಷಧವು । ಒಣತರ್ಕ ಜ್ವರದಿಂದೆ
ಘನವಾಗಿ ಕೂಗಿ ಬಡಬಡಿಪ ತರ್ಕಪ್ರಿಯ
ಜನಕೆಲ್ಲ[3] ಕೇಳಿ । ಬ್ರಹ್ಮಜ್ಞ ॥ 161 ॥

ಹೀಗೆ ನಾನಾರೀತಿ । ಸಾಗಿಸಲು ತರ್ಕವನು
ಈಗಿಲ್ಲಿ ಭಾಷ್ಯದೊಳಗುಟ್ಟು ತಿಳಿಯಲ್ಕೆ
ಆಗಿಹುದು ತೊಡಕು । ಬ್ರಹ್ಮಜ್ಞ ॥ 162 ॥

---

1. ಅಧ್ಯಾತ್ಮಪ್ರಕಾಶ 5ನೆಯ ಸಂಪುಟದ ಪುಟ 147ನ್ನು ನೋಡಿರಿ.

2. ತೈ. ಭಾಷ್ಯ 2–8 (ಭಾ. ಭಾ. 216) ಮತ್ತು ಗೀ. ಭಾ. 13–2 (ಭಾ. ಭಾ. 761)ನ್ನು ನೋಡಿರಿ.

3. ನೈಷ್ಕರ್ಮ್ಯಸಿದ್ಧಿ 2–59ನ್ನು ನೋಡಿರಿ.

ಇಷ್ಟಸಿದ್ಧಿಯ ಬಗೆಗೆ । ಇಷ್ಟೆಲ್ಲ ಪೇಳ್ದುದಕೆ
ದುಷ್ಟನೆನಬೇಡಿ ಭಾಷ್ಯಕ್ಕೆ ಸರಿಹಚ್ಚಿ
ಇಷ್ಟನ್ನು ನೋಡಿ । ಬ್ರಹ್ಮಜ್ಞ ॥ 163 ॥

ಕಂಡದ್ದು ಹೇಳಿದರೆ । ಕೆಂಡದಂತಹ ಕೋಪ
ಕಂಡಿರುವ ಗಾದೆ ಇದಕಂಜಿ ಸಟೆಯನ್ನು
ಕೊಂಡಾಡಲಾರೆ । ಬ್ರಹ್ಮಜ್ಞ ॥ 164 ॥

ಲೋಕದೊಳು ನಿಂದೆ ಸ್ತುತಿ । ಬೇಕಾದ ಹಾಗಿರಲಿ
ಏಕದರ ಗೊಡವೆ ಪರಮಾರ್ಥಸಾಧಕಗೆ
ಬೇರು ಸುಜ್ಞಾನ । ಬ್ರಹ್ಮಜ್ಞ ॥ 165 ॥

ತಲೆಯ ತೆಗೆಯಲಿ ಮತ್ತೆ । ಬಲುಬಗೆಯ ಬಯ್ಗಳಲಿ
ಛಲಿಸಿದರು ಸತ್ಯಮಾರ್ಗವನು ಬಿಡದಿರುವ
ಛಲವಿದನು ಕೇಳಿ । ಬ್ರಹ್ಮಜ್ಞ ॥ 166 ॥

ಮರಣ ದೇಹದ ಧರ್ಮ । ಸ್ಥಿರವಲ್ಲವಾವುದೂ
ಇರುತಿರುವ ಮೂರು ದಿನದಲ್ಲಿ ಸತ್ಯವನು
ಒರೆಯುವದೆ ಕಾರ್ಯ । ಬ್ರಹ್ಮಜ್ಞ ॥ 167 ॥

ದತ್ತಗುರುಕೃಪೆಯಿಂದ । ಮತ್ತೆ ಶ್ರೀಗಳ ದಯದಿ
ಚಿತ್ತಕ್ಕೆ ಬಂತು ಈ ಬೋಧ ಹೆದರದಲೆ
ಬಿತ್ತರಿಪೆ ಕೇಳಿ । ಬ್ರಹ್ಮಜ್ಞ ॥ 168 ॥

ಹೀಗೆ ಎಷ್ಟೋ ವಿಷಯ । ಸಾಗಿಹುವು ವಿಪರೀತ
ಭಾಗಗಳು ಇಲ್ಲಿ ಅವು ಎಲ್ಲ ಹೇಳಲ್ಕೆ
ಜಾಗವೇ ಇಲ್ಲ । ಬ್ರಹ್ಮಜ್ಞ ॥ 169 ॥

ಮುಂದೆ ವಿವರಣಮತವ । ಇಂದಿನಾ ಪದ್ಧತಿಯ
ಅಂದದಲಿ ಹೇಳಿ ತೋರಿಸುವೆ ಭೇದಗಳ
ಚಂದದಲಿ ನೋಡಿ । ಬ್ರಹ್ಮಜ್ಞ ॥ 170 ॥

ಭಾಷ್ಯ ಪೇಳ್ವುದ ಬಿಟ್ಟು । ಬೇಸರಿಕೆ ಬರುವಂತೆ
ದೋಷಗಳನೆತ್ತಿ ಪೇಳುವದಿದೇಕೆನಲು
ಲೇಸಾಗಿ ಕೇಳಿ । ಬ್ರಹ್ಮಜ್ಞ ॥ 171 ॥

ರನ್ನದಾ ಜೊತೆಯಲ್ಲಿ । ಮುನ್ನ ಗಾಜಿನ ಮಣಿಯ
ಚೆನ್ನಾಗಿ ಇಟ್ಟು ತೋರಿಸಲು ರನ್ನದಾ
ಘನ್ನತೆಯು ತೋರ್ಕು । ಬ್ರಹ್ಮಜ್ಞ ॥ 172 ॥

ಭಾಷ್ಯಗಳ ಬೆಲೆಯನ್ನು । ತೋಷದಲಿ ತೋರಲ್ಕೆ
ಈಸು ವಿಧವಿಲ್ಲಿ ತೋರಿಸುವೆ ಇದಕಾಗಿ
ಬೇಸರಿಸಬೇಡಿ । ಬ್ರಹ್ಮಜ್ಞ ॥ 173 ॥

1. ಅನುಭೂತಿಯು ಸ್ವಯಂಪ್ರಕಾಶವಲ್ಲ; ವಿಷಯಾನುಭವಲಿಂಗದಿಂದ ಊಹಿಸಲ್ಪಡುತ್ತದೆ ಎಂಬುದು ಆಕ್ಷೇಪಣೆಯ ಸಾರ.

# ಐದನೆಯ ಅಧ್ಯಾಯ

## ವಿವರಣಪ್ರಸ್ಥಾನ

ವಿವರಣದ ಮತದಲ್ಲಿ । ವಿವರಿಸುವೆ ಸಾರಾಂಶ
ವಿವರಣವು ಪಂಚಪಾದಿಕೆಗೆ ವಾರ್ತಿಕವ
ವಿವರಿಸಿದ ಪರಿಯು । ಬ್ರಹ್ಮಜ್ಞ ॥ 1 ॥

ಆತ್ಮನನ್ನಾಶ್ರಯಿಸಿ । ಆತ್ಮನನ್ನಾವರಿಸಿ
ಆತ್ಮನಾ ಶಕ್ತಿ ಮಾಯೆ ಜಡವಜ್ಞಾನ-
ವೀತನಾ ಮತವು । ಬ್ರಹ್ಮಜ್ಞ ॥ 2 ॥

### (ಪ್ರತಿಬಿಂಬವಾದಸಮರ್ಥನೆ)

ಚಿತ್ಸ್ವರುಪಕೆ ಮನವು । ಸುತ್ತಿರಲುಪಾಧಿಯಲಿ
ಹತ್ತಿಹುದು ಜೀವತನವೆಂಬ ಭಾಮತಿಯ
ಮತ್ತೆ ಖಂಡಿಸುವ । ಬ್ರಹ್ಮಜ್ಞ ॥ 3 ॥

ಗಡಿಗೆಯೊಳ ಬಯಲಿಂಗೆ । ನುಡಿವರು ಘಟಾಕಾಶ
ನುಡಿಯಲ್ಲಿ ಬಂತು ವಾದಕ್ಕೆ ಶಬ್ದವಿದು
ಗಡನವಚ್ಛೇದ । ಬ್ರಹ್ಮಜ್ಞ ॥ 4 ॥

ಜೀವತ್ವ ಕಲ್ಪಿತವು । ದೇವನಲಿ ಎಂದೆನುವ
ಭಾವವನು ತಿಳಿಸೆ ಬರೆದಿಹರು ದೃಷ್ಟಾಂತ
ಕೋವಿದರು ಇದನು । ಬ್ರಹ್ಮಜ್ಞ ॥ 5 ॥

ಇದರಂತೆ ಜೀವರಿಗೆ । ಒದಗಿರುವ ಸುಖದುಃಖ
ಸದಯಾತ್ಮಗಿಲ್ಲವೆಂಬುದಕೆ ಪ್ರತಿಬಿಂಬ
ವಿದುವೆ ದೃಷ್ಟಾಂತ । ಬ್ರಹ್ಮಜ್ಞ ॥ 6 ॥

ಎರಡಕ್ಕು ತಾತ್ಪರ್ಯ । ಪರಮಾತತತ್ತ್ವದಲಿ
ಬರಲಿಲ್ಲ ನಿಜದಿ ಸಂಸಾರವೆಂಬುದನು
ಅರುಹುವುದೆ ಮುಖ್ಯ । ಬ್ರಹ್ಮಜ್ಞ ॥ 7 ॥

ಅದ್ವಯದ ಆತ್ಮನಿವ । ಇದ್ದಿರದು ಇನ್ನೊಂದು
ಸಾಧ್ಯವೇ ಮತ್ತೆ ಪ್ರತಿಬಿಂಬವಾಗಲ್ಕೆ
ಬುದ್ಧರಿದ ಹೇಳಿ । ಬ್ರಹ್ಮಜ್ಞ ॥ 8 ॥

ಇದರಂತವಚ್ಛೇದ । ಒದಗದದ್ವೈತಕ್ಕೆ
ಇದು ನಿಜವು ಮತ್ತೆ ತಿಳಿಯಲ್ಕುಪಾಯವಿವು
ಮುದದಿ ದೃಷ್ಟಾಂತ । ಬ್ರಹ್ಮಜ್ಞ ॥ 9 ॥

ಈ ರಹಸ್ಯ ಬಿಟ್ಟು ಭಾರಿ ತರ್ಕವನಿಟ್ಟು
ದೂರುತ್ತ ಒಬ್ಬರೊಬ್ಬರನು ವಾದಕ್ಕೆ
ದಾರಿಮಾಡಿಹರು । ಬ್ರಹ್ಮಜ್ಞ ॥ 10 ॥

ಪ್ರತಿಬಿಂಬ ನಿಜವಾಗಿ । ಮತಿಯಲ್ಲಿ ಆದಂತೆ
ಅತಿಯಾಗಿ ಬರೆದು ತರ್ಕವನು ಬೆಳೆಸಿದುದು
ಹಿತವಿಲ್ಲ ತಿಳಿಯೆ । ಬ್ರಹ್ಮಜ್ಞ[1] ॥ 11 ॥

**(ಪಾತಂಜಲಯೋಗದ ಮಿಶ್ರಣ)**

ಹೀಗೆಯೇ ಇದರಲ್ಲಿ । ಯೋಗ ಪಾತಂಜಲದ
ಭಾಗಗಳ ಬೆರಸೆ ವೇದಾಂತಪ್ರಕ್ರಿಯೆಯ
ಯೋಗ ಕೆಟ್ಟಿಹುದು । ಬ್ರಹ್ಮಜ್ಞ ॥ 12 ॥

ವೃತ್ತಿ ಸಂಪ್ರಜ್ಞಾತ । ಮತ್ತಸಂಪ್ರಜ್ಞಾತ
ಹತ್ತಿಸಿಹನೀತ ಈಗೀ ಸಮಾಧಿಗಳ
ಅರ್ಥ ಜ್ಞಾನಕ್ಕೆ । ಬ್ರಹ್ಮಜ್ಞ ॥ 13 ॥

ಇನ್ನೊಂದ ಹೇಳುವೆನು । ಚೆನ್ನಾಗಿ ಲಕ್ಷಿಪುದು
ಮುನ್ನವೀ ಬಂಧಮೋಕ್ಷಗಳ ಬಗೆಯಲ್ಲಿ
ಭಿನ್ನಮತವನ್ನು[2] । ಬ್ರಹ್ಮಜ್ಞ ॥ 14 ॥

**(ಭಾಷ್ಯಾಭಿಪ್ರಾಯ)**

ಬಂಧಮೋಕ್ಷಗಳಿಲ್ಲ । ಎಂದಿಗೂ ಆತ್ಮನಲಿ
ಸಂದಿರ್ದ ಜ್ಞಾನವಜ್ಞಾನ ವ್ಯವಹಾರ–
ದಿಂದೆ ಆರೋಪ । ಬ್ರಹ್ಮಜ್ಞ ॥ 15 ॥

ಬಂಧವೆಂಬುದನಾದಿ । ಒಂದು ದಿನ ಪೋಪುದೆನೆ
ಬಂದಿಪುದು ನಾಶ ಲೋಕದೊಳಗನಾದಿಗು
ಎಂದಂತೆ ಅಕ್ಕು । ಬ್ರಹ್ಮಜ್ಞ ॥ 16 ॥

---

1. ಪದ್ಯ 3 ರಿಂದ 11 ಪೂರ ಇರುವ ವಿಷಯಕ್ಕೆ ವೇ. ಪ್ರ. ಪ್ರ. 548 ರಿಂದ 551 ಪೂರ ನೋಡಿರಿ. 2. ಈ ವಿಷಯಕ್ಕೆ ವೇ. ಪ್ರ. ಪ್ರ. ಪುಟ 598ನ್ನು ನೋಡಿರಿ.

ಹೊಸದಾಗಿ ಮೋಕ್ಷ ಬರೆ । ಎಸೆದಿಹುದು ಸಾದಿತ್ವ
ಬಸವಳಿಯದಿರ್ಕು ಕೊನೆಯಿಲ್ಲದೆನ್ನುವದು
ಸಹನಲ್ಲ ಮಾತು । ಬ್ರಹ್ಮಜ್ಞ ॥ 17 ॥

ಬಂಧದಿಂ ಮೋಕ್ಷಕ್ಕೆ । ಬಂದಪನು ಆತ್ಮನೆನೆ
ಬಂದಿಹುದು ಖತಿಯು ಅವಿಕಾರಿ ಎಂಬುದಕೆ
ಹೊಂದದಾಯ್ತಿದುವೆ । ಬ್ರಹ್ಮಜ್ಞ ॥ 18 ॥

ನಿತ್ಯಮುಕ್ತನು ಆತ್ಮ । ಮತ್ತವಿದ್ಯಾಕಾರ್ಯ
ಸುತ್ತಿರುವ ಬಂಧಮೋಕ್ಷಗಳ ವ್ಯವಹಾರ-
ವೆತ್ತಣದ ನಿಜವು[1] ? ಬ್ರಹ್ಮಜ್ಞ ॥ 19 ॥

**(ತಾರ್ಕಿಕರ ಮತ)**

ಈಗಿಲ್ಲಿ ತಾರ್ಕಿಕರು । ಸಾಗಿಸಿಹ ಕಲ್ಪನೆಯ
ಲಾಗಗಳ ನೋಡಿ ಮರುಳಾದ ಪಂಡಿತರು
ಹೋಗಿಹರು ಮೋಸ । ಬ್ರಹ್ಮಜ್ಞ ॥ 20 ॥

ಘಟವು ಹುಟ್ಟುವ ಮುನ್ನ । ಘಟಪ್ರಾಗಭಾವವಿದೆ
ದಿಟವಿದುವೆ ಮತ್ತೆ ಇರುತಿಹುದನಾದಿಯಿಂ
ಘಟ ಹುಟ್ಟೆ ಇರದು । ಬ್ರಹ್ಮಜ್ಞ ॥ 21 ॥

ಒಡೆಯಲಾ ಘಟವಾಗ । ಗಡ ಬಂತು ಪ್ರಧ್ವಂಸ
ಬಿಡದೆ ತಾ ಸಾದಿ ಅರಿಯಲ್ಕಭಾವವಿದು
ಪಡೆಯುವದು ಸ್ಥಿರತೆ । ಬ್ರಹ್ಮಜ್ಞ ॥ 22 ॥

ಹೀಗನಾದಿಗೆ ಅಂತ್ಯ । ಹೀಗೆ ಸಾದಿಗೆ ನಿತ್ಯ
ಸಾಗಿಹುದು ಎನಲು ಶಂಕರರು ಈ ನುಡಿಗೆ
ಹೋಗಿಲ್ಲ ಮೋಸ । ಬ್ರಹ್ಮಜ್ಞ ॥ 23 ॥

ಗೀತೆ ಕೊನೆಯಧ್ಯಾಯ । ಖ್ಯಾತ 'ಸಹಜಂ ಕರ್ಮ'
ಮಾತಿರುವ ಶ್ಲೋಕ ಭಾಷ್ಯದಲಿ ತಿಳಿಸಿಹರು
ರೀತಿ ತಪ್ಪೆಂದು[2] । ಬ್ರಹ್ಮಜ್ಞ ॥ 24 ॥

---

1. ಪದ್ಯ 15 ರಿಂದ ಈವರೆಗಿನ ವಿಷಯಕ್ಕೆ ಗೀ. ಭಾ. 13–2 (ಭಾ.ಭಾ.763) ನ್ನು ನೋಡಿರಿ.

2. ಪದ್ಯ 20 ರಿಂದ 24 ಪೂರ ವಿಷಯಕ್ಕೆ ಗೀ. ಭಾ. 18–48 (ಭಾ.ಭಾ.1088) ಮತ್ತು ತೈ. ಭಾ.ಭಾ. 9ನ್ನೂ ನೋಡಿರಿ.

ಪೇಳುವುದಭಾವವನು । ಮೇಳೈಸಿ ಅದರೊಳಗೆ
ಹೇಳುವದು ತಪ್ಪು ಈ ವಿಧ ವಿಶೇಷಗಳ
ಕೇಳಿರೀ ಮಾತು । ಬ್ರಹ್ಮಜ್ಞ ॥ 25 ॥

ಮಕ್ಕಳೇನಿತಿಹರೆಂದು । ಅಕ್ಕರದಿ ಕೇಳಲ್ಕೆ
ಮಕ್ಕಳೇ ಇಲ್ಲ ನಮಗೆಂದು ಪೇಳೆ ಆ
ಲೆಕ್ಕ ಕೇಳುವರೆ ? । ಬ್ರಹ್ಮಜ್ಞ ॥ 26 ॥

ಯಾವ ಮಕ್ಕಳು ನಿಮಗೆ । ಯಾವಾಗ ಆಗಿಲ್ಲ?
ನಾವೀಗ ಲೆಕ್ಕ ಬರೆಯುವೆವು ಎನ್ನುವೀ
ಭಾವವಾಯ್ತಿದುವೆ । ಬ್ರಹ್ಮಜ್ಞ ॥ 27 ॥

ಹೆಸರು ಮೊದಲೆ ಅಭಾವ । ಎಸೆದಿಲ್ಲದಿಹ ವಸ್ತು
ಮುಸುಗಿರುವ ಭೇದವದರಲ್ಲಿ ಬರಿತರ್ಕ
ಹುಸಿಮಾತು ನೋಡಿ । ಬ್ರಹ್ಮಜ್ಞ ॥ 28 ॥

ಹೀಗೆ ಅನುಭವವನ್ನೆ । ಬೇಗನೆಯೆ ಅನುಸರಿಸಿ
ಸಾಗಿಸಿಹ ಭಾಷ್ಯಪಂಥವನೆ ಲೆಕ್ಕಿಸದೆ
ಹೋಗಿಹುದು ಇಲ್ಲಿ । ಬ್ರಹ್ಮಜ್ಞ ॥ 29 ॥

**(ತಾರ್ಕಿಕರ ಅನುಸರಣೆ)**

ತರ್ಕದಾ ಮಾತುಗಳ । ತರ್ಕಿಸುತ ಹೇಳಿಹರು
ಇರ್ಕುಮೀ ಬಂಧಮೋಕ್ಷಗಳು ಈ ಪರಿಯೆ
ಬರ್ಕುಮಿವು ಸತ್ಯ[1]। ಬ್ರಹ್ಮಜ್ಞ ॥ 30 ॥

ಇದು ಸಂಪ್ರದಾಯಕ್ಕೆ ।ಹದಗೆಟ್ಟ ಮಾತಿಹುದು
ಇದ ಕಂಡು ಮತ್ತೆ ಕಾಣದಿಹ ಪರಿಯಲ್ಲಿ
ಇದನೊಪ್ಪುತಿಹರು । ಬ್ರಹ್ಮಜ್ಞ ॥ 31 ॥

ಇಂತು ನಾನಾರೀತಿ । ಬಂತು ತರ್ಕವು ಒಳಗೆ
ಎಂತಿನ್ನು ನೈಜ ವೇದಾಂತ ? ಭಾಷ್ಯಕ್ಕೆ
ಅಂತರವೆ ಬಂತು । ಬ್ರಹ್ಮಜ್ಞ ॥ 32 ॥

ಇಂದು ವೇದಾಂತದಲಿ । ಹೊಂದಿಹುದು ಹೆಚ್ಚಳವ
ಕಂದೆರೆದು ನೋಡದೀ ಮತವು ಶಂಕರರ–
ದೆಂದೆ ನಂಬಿಹರು । ಬ್ರಹ್ಮಜ್ಞ ॥ 33 ॥

---

1. ಈ ವಿಷಯಕ್ಕೆ ವೇ.ಪ್ರಪ್ರ. ಪುಟ 572ನ್ನು ನೋಡಿರಿ.

## (ಮುಂದಿನ ವೇದಾಂತದ ಸ್ಥಿತಿ)

ಮುಂದೆ ಬರೆದವರಿನ್ನು । ಒಂದೊಂದು ಗ್ರಂಥಗಳು
ಹಿಂದೆಯೇ ಇಲ್ಲಿ ಹೇಳಿರುವ ದೋಷಗಳ
ಹೊಂದಿಯೇ ಇಹವು । ಬ್ರಹ್ಮಜ್ಞ ॥ 34 ॥

ಭಾಷ್ಯವನು ಲಕ್ಷಿಸುತ । ಈಸು ಮತಗಳನೊರೆಗೆ
ಲೇಸಾಗಿ ತಿಕ್ಕಿನೋಡುವದಕೊಬ್ಬರೂ
ಆಶೆಪಡಲಿಲ್ಲ । ಬ್ರಹ್ಮಜ್ಞ ॥ 35 ॥

ಎಲ್ಲ ತಲೆಕೆಳಗಾಯ್ತು । ಮೆಲ್ಲನನುಭವ ಹೋಯ್ತು
ಬಲ್ಲಿದರು ಸಹಿತ ಬಲಿಬಿದ್ದು ಮೂಲಪಥ-
ವಿಲ್ಲದಂತಾಯ್ತು । ಬ್ರಹ್ಮಜ್ಞ ॥ 36 ॥

ಇನ್ನಿಷ್ಟು ತರ್ಕಗಳ । ಚೆನ್ನಾಗಿ ಬೆಳೆಸುತ್ತ
ಮುನ್ನ ಬಲು ವಾದಸಂವಾದ ಮಾಳ್ಪುದನೆ
ಮನ್ನಿಸಿದರಿಲ್ಲಿ[1] । ಬ್ರಹ್ಮಜ್ಞ ॥ 37 ॥

ಮಾಧ್ವರಾಮಾನುಜರ । ರಾದ್ಧಾಂತ ಖಂಡನೆಯೆ
ಅದ್ವೈತವೆನಿಸಿ ಹೋಯ್ತಿನ್ನು ಇದರಿಂದ
ಉದ್ಧಾರವೆಂತು? । ಬ್ರಹ್ಮಜ್ಞ ॥ 38 ॥

ಅದ್ವೈತಶಾಸ್ತ್ರವನು । ಅಧ್ಯಯನಮಾಡಿರುವ
ಬುದ್ಧಿಯುತರಾದ ಶಾಸ್ತ್ರಿಗಳು ನಡೆಸಿರುವ
ಗುದ್ದಾಟ ನೋಡಿ । ಬ್ರಹ್ಮಜ್ಞ ॥ 39 ॥

ಒಂದನೆಯ ಅಧ್ಯಾಯ । ಹಿಂದೆ ಬರೆದುದ ತೆಗೆದು
ಅಂದದಲಿ ನೋಡಿ ಪದ್ಯಗಳ ಪಠಿಸುತ್ತ
ಇಂದಿದರ ಬಗೆಗೆ । ಬ್ರಹ್ಮಜ್ಞ ॥ 40 ॥

## (ಸಾಮಾನ್ಯಬೋಧಪರಗ್ರಂಥಗಳು)

ಕೆಲರು ಬೋಧನೆಗಾಗಿ । ಹಲವು ಕೃತಿಗಳ ರಚಿಸಿ
ತಿಳಿಹಿದರು ತತ್ತ್ವ ತಮತಮಗೆ ತಿಳಿದಂತೆ
ಕೆಲರೀತಿ ಸಾಗಿ । ಬ್ರಹ್ಮಜ್ಞ ॥ 41 ॥

---

1. ನ್ಯಾಯಮಕರನ್ದ, ಖಂಡನಖಂಡಖಾದ್ಯ, ಚಿತ್ಸುಖೀ, ಸಂಕ್ಷೇಪಶಾರೀರಕ, ಅದ್ವೈತಸಿದ್ಧಿ, ಸಿದ್ಧಾಂತಲೇಶಸಂಗ್ರಹ – ಮುಂತಾದ ಗ್ರಂಥಗಳು.

ಅದ್ವೈತವೇ ಸತ್ಯ । ಸಿದ್ಧಾಂತವೆಂಬ ಈ
ಶುದ್ಧವಹ ಶ್ರದ್ಧೆಯನುಸರಿಸಿ ಗ್ರಂಥ ರಚಿ-
ಸಿದ್ದಿಹುದು ಕೆಲರು । ಬ್ರಹ್ಮಜ್ಞ ॥ 42 ॥

ಸತ್ಯವದು ಬ್ರಹ್ಮವೇ । ಮಿಥ್ಯವೀ ಜಗವೆಂದು
ಮತ್ತೆ ಈ ಜೀವ ಬ್ರಹ್ಮವೇ ಸಿದ್ಧಾಂತ-
ದುತ್ತರವು ಬಂತು । ಬ್ರಹ್ಮಜ್ಞ ॥ 43 ॥

ಉತ್ತರಕ್ಕೆ ಮೇಳೈಸಿ । ಒತ್ತರಿಸಿ ಪ್ರಕ್ರಿಯೆಯ
ಚಿತ್ತಕ್ಕೆ ತಿಳಿದ ರೀತಿಗಳಲದ್ವೈತ
ಬಿತ್ತರಿಸಲಾಯ್ತು । ಬ್ರಹ್ಮಜ್ಞ ॥ 44 ॥

ಕಾಂಡಿತದ ಭಷ್ಯವಿದು । ಪಂಡಿತರ ಸ್ವತ್ತಾಯ್ತು
ಮಂಡಿಸಿದ ಚಿಕ್ಕ ಗ್ರಂಥಗಳೆ ಬೋಧನೆಗೆ
ಕೊಂಡುದಾಯ್ತೀಗ । ಬ್ರಹ್ಮಜ್ಞ ॥ 45 ॥

ಪ್ರಕ್ರಿಯೆಗೆ ಸಾಂಖ್ಯವನು । ಇಕ್ಕಿರಲು ಸಾಧನೆಗೆ
ಸಿಕ್ಕಂತೆ ಯೋಗ ಪಾತಂಜಲವ ಬೆರಸಿ
ಮುಕ್ಕಾಯ್ತು ಪಂಥ । ಬ್ರಹ್ಮಜ್ಞ ॥ 46 ॥

ಪಾದಿಕೆಯಲಾರಂಭ । ಈದಿನದವರೆಗಿಲ್ಲಿ
ವೇದಾಂತಪಂಥ ನಿರ್ಧಾರವಿಲ್ಲದಲೆ
ಬೋಧೆ ನಡೆದಿಹುದು । ಬ್ರಹ್ಮಜ್ಞ ॥ 47 ॥

ದುಂಡುಸುತ್ತುತ ಬೋಧೆ । ಅಂಡಲೆದು ನಡೆಸಿದರು
ಖಂಡಿತದ ಭಾಷ್ಯನೋಡದಲೆ ಕೆಲರಿಲ್ಲಿ
ಮೊಂಡತನದಿಂದೆ । ಬ್ರಹ್ಮಜ್ಞ ॥ 48 ॥

ಬತ್ತಲೆಯೆ ತಿರುಗುವಾ । ಚಿತ್ರತರ ದೇಶದಲಿ
ಮತ್ತಿನ್ನು ಬಟ್ಟೆಯುಟ್ಟವಗೆ ಕಲ್ಲೊಗೆವ
ಕೃತ್ಯವಿದು ಸತ್ಯ । ಬ್ರಹ್ಮಜ್ಞ ॥ 49 ॥

ಇದರಂತೆ ಭಾಷ್ಯಗಳ । ಹದನವನು ಹೇಳಿದರೆ
ಒದೆಯಲ್ಕೆ ಬಹರು ಕೋಪದಲಿ ಇದು ಸಹಜ-
ವಿದೆ ಕಾಲಗತಿಯು । ಬ್ರಹ್ಮಜ್ಞ ॥ 50 ॥

ಪ್ರಚಲಿತದ ವೇದಾಂತ । ರುಚಿಯನ್ನು ತೋರಿಸುವೆ
ಅಚಲ ಮನದಿಂದೆ ಸರಿದೂಗಿ ಭಾಷ್ಯದಾ-
ವಚನಗಳ ನೋಡಿ । ಬ್ರಹ್ಮಜ್ಞ ॥ 51 ॥

ಜೀವೇಶಭೇದಗಳ । ಭಾವನೆಯ ನಾನಿಲ್ಲಿ
ಈವೇನೀ ದಿನದಿ ಹೇಳುತಿಹ ಪರಿಯನ್ನು
ನೀವು ಕೇಳುವದು । ಬ್ರಹ್ಮಜ್ಞ ॥ 52 ॥

ಇಂತಿವರ ದೋಷಗಳ । ಅಂತ್ಯದಲಿ ತೋರಿಸುತ
ಸಂತರಲಿ ಶ್ರೇಷ್ಠ ಶ್ರೀಗಳುಪಕಾರವನು
ಸಂತಸದಿ ಪೇಳ್ವೆ । ಬ್ರಹ್ಮಜ್ಞ ॥ 53 ॥

ಎಲ್ಲವನು ವಿಸ್ತರಿಸೆ । ಇಲ್ಲಿ ಸಮಯವೆ ಇಲ್ಲ
ಬಲ್ಲವರು ಇಲ್ಲಿ ಹೇಳಿರುವ ಪರಿ ನೆನೆದು
ಎಲ್ಲವನು ತಿಳಿಗು । ಬ್ರಹ್ಮಜ್ಞ ॥ 54 ॥

## ಪ್ರಚಲಿತವೇದಾಂತ
### (ಜೀವ-ಈಶ ವಿಭಾಗ)

ಮೂರು ಗುಣ ಪ್ರಕೃತಿಯೇ । ನೇರಾಗಿ ಆತ್ಮನಲಿ
ಸೇರಿಹುದು ಮತ್ತೆ ಇದೆ ಮೂಲದಜ್ಞಾನ
ಕಾರಣವು ಜಗಕೆ । ಬ್ರಹ್ಮಜ್ಞ ॥ 55 ॥

ಸತ್ತ್ವಗುಣ ಪ್ರತಿಬಿಂಬ । ಮತ್ತೆ ಈಶ್ವರನಕ್ಕು
ಸತ್ತ್ವವೇ ಹೆಚ್ಚು ತುಂಬಿರುವ ಈ ಪ್ರಕೃತಿ
ತತ್ತ್ವವೇ ಮಾಯೆ । ಬ್ರಹ್ಮಜ್ಞ ॥ 56 ॥

ಗುಣ ರಜವು ಹೆಚ್ಚಾದ । ಘನಪ್ರಕೃತಿ ಭಾಗವನೆ
ಗುಣಿಸುವರು ಮುಲದಜ್ಞಾನವಿದರಲ್ಲಿ
ಮಿನುಗಿಹನು ಜೀವ । ಬ್ರಹ್ಮಜ್ಞ ॥ 57 ॥

ತತ್ತ್ವಮಸಿ ವಾಕ್ಯದಲಿ । 'ತತ್'ಪದವು ಈಶ್ವರನು
ಮತ್ತೆ 'ತ್ವಂ' ಎಂಬ ಪದ ಜೀವ ಪ್ರಕೃತಿಯೇ
ಸತ್ಯ ಮೂಲಾಯ್ತು । ಬ್ರಹ್ಮಜ್ಞ ॥ 58 ॥

ಜ್ಞಾನದಿಂದಜ್ಞಾನ । ಮೇಣು ಮಾಯೆಯ ಕಳೆಯೆ
ಕಾಣುವದು ಮೋಕ್ಷ 'ಅಸಿ'ಪದದಿ ಎನುವ ಸಂ-
ಧಾನವಿದು ಬಂತು[1]। ಬ್ರಹ್ಮಜ್ಞ ॥ 59 ॥

1. ಉದಾಹರಣೆಗೆ ಪಂಚದಶೀ 1–15 ರಿಂದ 43ರವರೆಗಿನ ಶ್ಲೋಕಗಳನ್ನು ನೋಡಬಹುದು.

## (ಅಜ್ಞಾನಾದಿಸಪ್ತಾವಸ್ಥೆಗಳು)

ಆತ್ಮನಲ್ಲಜ್ಞಾನ । ಮತ್ತೆ ಅದರಾವರಣ
ಸುತ್ತಿಹುದು ಹುಟ್ಟಿ ಇದರಿಂದ ವಿಕ್ಷೇಪ
ಮತ್ತೆ ಇದೆ ಜೀವ । ಬ್ರಹ್ಮಜ್ಞ ॥ 60 ॥

ಬೊಮ್ಮವಿದೆ ಎಂದರಿಯೆ । ಸಮ್ಮತ ಪರೋಕ್ಷವಿದು
ಬೊಮ್ಮವೇ ನಾನು ಎಂದರಿಯಲಪರೋಕ್ಷ
ಒಮ್ಮತವಿದಾಯ್ತು । ಬ್ರಹ್ಮಜ್ಞ ॥ 61 ॥

ಶೋಕದ ನಿವೃತ್ತಿಯನು । ಸಾಕೆನಿಪ ತೃಪ್ತಿಯನು
ಲೋಕದಲಿ ಪಡೆವನಾತಂಕವಿಲ್ಲದಲೆ
ಜೋಕೆಯಲಿ ಕೇಳಿ[1]। ಬ್ರಹ್ಮಜ್ಞ ॥ 62 ॥

ಜ್ಞಾನದಿಂದಜ್ಞಾನ । ತಾನು ಹೋಗಲು ಮತ್ತೆ
ಮಾನವನು ಮುಕ್ತನಾಗುವನು ಮೋಕ್ಷಕ್ಕೆ
ಜ್ಞಾನವೇ ಬೇಕು । ಬ್ರಹ್ಮಜ್ಞ ॥ 63 ॥

ಶ್ರವಣಮನನಂಗಳಿಂ । ತವೆ ನಿದಿಧ್ಯಾಸದಿಂ
ಸವನಿಸುತ ನಿಲಲು ಆಗಲೆ ಸಮಾಧಿಯಲಿ
ಸವನಿಪುದು ಮೋಕ್ಷ । ಬ್ರಹ್ಮಜ್ಞ ॥ 64 ॥

ಇಲ್ಲಿ ನಾನಾಬಗೆಯ । ಗುಲ್ಲುಗಳು ಎದ್ದಿಹವು
ಬಲ್ಲಂತೆ ಜ್ಞಾನದಭಿಮಾನ ಕೆಲವರಿಗೆ
ಇಲ್ಲಿಹುದು ಕೇಳಿ । ಬ್ರಹ್ಮಜ್ಞ ॥ 65 ॥

ಮತ್ತೆ ಕೆಲಬೋಧಕರು। ಎತ್ತಿರೆ ಸಮಾಧಿಯನು
ಹತ್ತಿಹುದು ಕಲಹವಿಬ್ಬರಲಿ । ಇತರ ಜನ
ಮತ್ತೆ ನಗದಿಹರೆ ? । ಬ್ರಹ್ಮಜ್ಞ ॥ 66 ॥

ಒಂದೆಡೆ ಸಮಾಧಿಯನು । ಚಂದದಲಿ ಹೊಗಳಿರುವ
ಬಂಧುರದ ಗ್ರಂಥವಿನ್ನೊಂದು ಕಡೆಯಲ್ಲಿ
ನಿಂದೆಮಾಡುವದು[2]। ಬ್ರಹ್ಮಜ್ಞ ॥ 67 ॥

---

1. ಸಪ್ತಾವಸ್ಥೆಗಳ ವಿವರಕ್ಕೆ ಪಂಚದಶಿ 7–28 ರಿಂದ 38ರವರೆಗೆ ನೋಡಿರಿ.

2. ಪಂಚದಶಿಯಲ್ಲಿ 1–55 ರಿಂದ 61ರವರಗೆ ಸಮಾಧಿಯನ್ನು ಹೇಳಿದೆ. ಆದರೆ ಅದೇ ಗ್ರಂಥದ 7–185 ರಿಂದ 89ರವರೆಗೆ ಸಮಾಧಿಯನ್ನು ಖಂಡಿಸಿದೆ.

ಇಂತು ನಾನಾರೀತಿ । ಬಂತು ಬೋಧಕ್ರಮವು
ಎಂತೆಂದು ಎಲ್ಲ ವರ್ಣಿಸಲು ಸ್ಥಳವಿಲ್ಲ
ಇಂತೆಯೇ ಸಾಕು । ಬ್ರಹ್ಮಜ್ಞ ॥ 68 ॥

ಮುಂದೆ ಆಯಾ ವಿಷಯ । ಬಂದಾಗ ತಿಳಿಸುವೆನು
ಹಿಂದಿಲ್ಲಿ ಬರೆದ ವಿಷಯಗಳ ಬಗೆಗೀಗ
ಕುಂದ ತೋರಿಸುವೆ । ಬ್ರಹ್ಮಜ್ಞ ॥ 69 ॥

## ಈ ಬೋಧೆಯಲ್ಲಿಯ ದೋಷ

### (ಈಶತ್ವ – ಜೀವತ್ವ)

ಜಗಕೆ ಜೀವಕ್ಕೆಲ್ಲ । ಮಿಗೆ ಕಾರಣಾಗಿರ್ದು
ಜಗದೀಶನಲ್ಲಿ ಸೇರಿರ್ದ ಅಜ್ಞಾನ
ಬಗೆಹರಿವುದೆಂತು ? । ಬ್ರಹ್ಮಜ್ಞ ॥ 70 ॥

ಜ್ಞಾನವಿದು ಬುದ್ಧಿಯಲಿ । ಮಾನವಗೆ ಬರುತಿಹುದು
ಏನಹುದು ಬುದ್ಧಿಯಾಚೆಗಿಹ ಮೂಲಕ್ಕೆ
ಹಾನಿ ಇದರಿಂದ । ಬ್ರಹ್ಮಜ್ಞ ॥ 71 ॥

ತತ್ತ್ವಮಸಿವಾಕ್ಯಕ್ಕೆ । ಮತ್ತೆ ಈ ರೀತಿಯಲಿ
ಇತ್ತಿಲ್ಲವರ್ಥ ಛಾಂದೋಗ್ಯಭಾಷ್ಯದಲಿ
ಮತ್ತಿದನು ನೋಡಿ । ಬ್ರಹ್ಮಜ್ಞ ॥ 72 ॥

### (ಸಪ್ತಾವಸ್ಥೆಗಳ ವಿಮರ್ಶೆ)

ಆವರಣವಜ್ಞಾನ । ಭಾವಗಳು ಬ್ರಹ್ಮದಲಿ
ಆವರಿಸಿ ನಿಂತ ಬಳಿಕಿನ್ನು । ಅದ್ವೈತ
ಭಾವವೇ ಹೋಯ್ತು । ಬ್ರಹ್ಮಜ್ಞ ॥ 73 ॥

ವಿಕ್ಷೇಪ ಪೂರ್ವದಲಿ । ವಿಕ್ಷೇಪ ಸಂಸ್ಕಾರ
ಕುಕ್ಷಿಯಲಿ ಆತ್ಮಗಾದಂತೆ ಆಯಿತಿದು
ಲಕ್ಷಿಸಲು ಬೇಕು । ಬ್ರಹ್ಮಜ್ಞ ॥ 74 ॥

ಹೀಗಾದರೂ ಸಹಿತ । ಹೋಗಿಲ್ಲವದ್ವೈತ
ಆಗಿಹನು ಆತ್ಮನಾಶ್ರಯನು ಇದಕೆಲ್ಲ
ಹೀಗೆನಲು ಕೇಳಿ । ಬ್ರಹ್ಮಜ್ಞ ॥ 75 ॥

ಇತ್ತಿರುವದಾಶ್ರಯವ । ಮತ್ತೆ ಇದು ಪರಿಶುದ್ಧ
ಎತ್ತಣದು ನ್ಯಾಯವಿದು ಬರಿಯ ನಂಬಿಕೆಯು
ತತ್ತ್ವವೇನಲ್ಲ । ಬ್ರಹ್ಮಜ್ಞ ॥ 76 ॥

ಆತ್ಮನಲಿ ಇವು ಎಲ್ಲ । ಮತ್ತೆ ಕಲ್ಪಿತಗಳೆನೆ
ಮಿಥ್ಯೆಯೇ ಹಿಂದೆ ಹೇಳಿದ್ದುಪಾದಾನ
ವ್ಯರ್ಥ ಕಾರಣವು । ಬ್ರಹ್ಮಜ್ಞ ॥ 77 ॥

ಹೆಜ್ಜೆಹೆಜ್ಜೆಗೆ ದೋಷ । ಉಜ್ಜುಗಿಸಿ ಕಾಣುವವು
ಸಜ್ಜಲ್ಲ ರೀತಿ ಭಾಷ್ಯಕ್ಕೆ ಹೊಂದದಿದು
ಸಜ್ಜನರು ಅರಿಗು । ಬ್ರಹ್ಮಜ್ಞ ॥ 78 ॥

ಇಂಥ ಗೊಂದಲದಲ್ಲಿ । ಪಂಥವಿವಿಧಾಗಿಲ್ಲಿ
ಇಂಥದೇ ಸರಿಯು ಎಂದೆನುವ ನಿರ್ಣಯಕೆ
ಅಂತವಿರದಾಯ್ತು । ಬ್ರಹ್ಮಜ್ಞ ॥ 79 ॥

ಹಲವು ಗ್ರಂಥಗಳಾಯ್ತು । ಹಲವು ಗುರುಪಥವಾಯ್ತು
ಬಲುವಿಧದ ಬೋಧೆ ಸಾಧನೆಯ ಕ್ರಮವಾಯ್ತು
ನೆಲೆ ಇಲ್ಲದಾಯ್ತು । ಬ್ರಹ್ಮಜ್ಞ ॥ 80 ॥

**(ಶ್ರೀಗಳವರ ಉಪಕಾರ)**

ಧರ್ಮಕ್ಕೆ ಚ್ಯುತಿಬರಲು । ಮರ್ಮ ತಿಳಿಯದಲಿರಲು
ಧರ್ಮವನು ಮತ್ತೆ ಉದ್ಧರಿಸೆ । ಭಗವಂತ
ಪೇರ್ಮೆಯಿಂ ಬಪ್ಪ । ಬ್ರಹ್ಮಜ್ಞ ॥ 81 ॥

ವೇದಾಂತಧರ್ಮದಲಿ । ಆದ ಗ್ಲಾನಿಯ ಕಂಡು
ಈ ಧರೆಗೆ ಮತ್ತೆ ಶಂಕರರೆ ಬಂದಿಲ್ಲಿ
ಬೋಧೆ ಮಾಡಿಹರು । ಬ್ರಹ್ಮಜ್ಞ ॥ 81 ॥

ಆದಿಗುರು ಶಂಕರರೆ । ಹಾದಿ ತೋರಿಸಲೆಂದು
ಮೋದದಲಿ ಮರಳಿ ಬಂದಿಹರು । ಶ್ರೀಗಳಾ
ಈ ದೇಹ ಧರಿಸಿ । ಬ್ರಹ್ಮಜ್ಞ ॥ 83 ॥

ಕನ್ನಡದ ಜನಗಳಾ । ಪುಣ್ಯಪರಿಪಾಕದಲಿ
ಕನ್ನಡದಿ ಬಂದ ಶಂಕರರೆ ಪೂಜ್ಯಪದ
ರಿನ್ನಿವರು ಕೇಳಿ । ಬ್ರಹ್ಮಜ್ಞ ॥ 84 ॥

ಆ ದಿನದಿ ಶಂಕರರ । ಪಾದಸೇವೆಯ ಗೈದು
ಬೋಧೆಯನು ಪಡೆದ ಶ್ರೀಮತ್ ಸುರೇಶ್ವರರು
ಹಾದಿ ತೋರಿದರು । ಬ್ರಹ್ಮಜ್ಞ ॥ 85 ॥

ಅಲ್ಲಿಂದ ಮುಂದಕ್ಕೆ[1]। ಮೆಲ್ಲನೆಯೆ ವೇದಾಂತ
ಸಲ್ಲದಿಹ ತರ್ಕ ಕಲಬೆರಕೆಯಾಗಿ ನಿಜ-
ವೆಲ್ಲ ಮರೆಯಾಯ್ತು । ಬ್ರಹ್ಮಜ್ಞ ॥ 86 ॥

ಕಾಲ ಕಳೆದಿರುವಂತೆ । ಹಾಳಾಯ್ತು ಈ ಯೋಗ
ಶ್ರೀಲೋಲ ಮತ್ತೆ ಪಾರ್ಥಂಗೆ ಗೀತೆಯಲಿ
ಹೇಳಿದಂತಾಯ್ತು । ಬ್ರಹ್ಮಜ್ಞ ॥ 87 ॥

ಸಾಸಿರದ ವರುಷದಿಂ । ಘಾಸಿಗೊಂಡಿಹ ತತ್ತ್ವ
ಲೇಸಾಗಿ ಈಗ ಹೊರಬಿತ್ತು ಮತ್ತೆ ಈ
ದೇಶಿಕರ ಮುಖದಿ । ಬ್ರಹ್ಮಜ್ಞ ॥ 88 ॥

ಶೋಧಿಸಿದರೆಲ್ಲವನು । ಬೋಧಿಸಿದರೀಗದನು
ತೇದು ನಿಜಜೀವವಿದಕಾಗಿ ಮುಡುಪಿಟ್ಟ
ಸಾಧುಗಳೇ ಇವರು । ಬ್ರಹ್ಮಜ್ಞ ॥ 89 ॥

ಭಾಷ್ಯಪಠಣಕ್ಕೆ ಮತ್ತೆ । ಲೇಸಾಗಿ ಹಚ್ಚುತ್ತ
ದೋಷಗಳ ಮಿಕ್ಕ ಪಂಥದಲಿ ತೋರುತ್ತ
ತೋಷಗೊಳಿಸಿದರು । ಬ್ರಹ್ಮಜ್ಞ ॥ 90 ॥

ಸಂಸ್ಕೃತವ ತಿಳಿಯಲ್ಕೆ । ಸಂಸ್ಕಾರಮಾಡಿದರು
ಸಂಸ್ಕೃತದ ಭಾಷ್ಯ ಕನ್ನಡದಿ ಬರಲೆಮಗೆ
ಸಂಸ್ಕಾರವಾಯ್ತು । ಬ್ರಹ್ಮಜ್ಞ ॥ 91 ॥

ಬರಿಯ ಭಾಷಾಂತರದ । ಬರಹವಲ್ಲಿದರಲ್ಲಿ
ಪರಿಶೋಧ ಮಾಡಿ ತಿಳಿಸಿಹರು ಹಲವು ವಿಧ
ಪರಿಕರಗಳೊಡನೆ । ಬ್ರಹ್ಮಜ್ಞ ॥ 92 ॥

ಪಂಡಿತರಿಗೋಸುಗವೆ । ಖಂಡಿತದ ಸಂಸ್ಕೃತದಿ
ಮಂಡಿಸಿಹ ಗ್ರಂಥ ನೋಡಿದರೆ । ಪಂಡಿತರ
ಮೊಂಡತನ ನಿಲದು । ಬ್ರಹ್ಮಜ್ಞ ॥ 93 ॥

---

1. 'ಮೂಲಾವಿದ್ಯಾನಿರಾಸಃ' ಎಂಬ ಗ್ರಂಥದಲ್ಲಿ ಶ್ರೀ ಕೆ. ಎ. ಕೃಷ್ಣಸ್ವಾಮಿ ಅಯ್ಯರ್‌ರವರು ಬರೆದಿರುವ ಮುನ್ನುಡಿಯನ್ನು ನೋಡಿರಿ.

ಆಧುನಿಕ ಜನಕ್ಕಾಗಿ । ಬೋಧೆಯಾಂಗ್ಲದಲ್ಲೆಲ್ಲ
ಆದರಿಸಿ ಬರೆದು ಪರದೇಶಗಳಿಗೆಲ್ಲ[1]
ಬೋಧೆ ಇತ್ತಿಹರು । ಬ್ರಹ್ಮಜ್ಞ ॥ 94 ॥

ದುರ್ಮಾರ್ಗ ಖಂಡಿಸುತ । ಸನ್ಮಾರ್ಗ ಹಿಡಿಸುತ್ತ
ಮರ್ಮಗಳ ತಿಳಿಸಿ ಸಾಧನೆಯ ಸಾಧ್ಯಗಳ
ಧರ್ಮ ನಿಲಿಸಿದರು । ಬ್ರಹ್ಮಜ್ಞ ॥ 95 ॥

ನೀತಿ ಕರ್ಮಗಳನ್ನು । ಈ ತೆರದ ಅಡಿಪಾಯ
ಖ್ಯಾತವಹ ತತ್ತ್ವ ಅದ್ವೈತವೆಂಬ ಈ
ಮಾತು ನಿಲಿಸಿದರು । ಬ್ರಹ್ಮಜ್ಞ ॥ 96 ॥

ಸ್ತುತ್ಯ ಧರ್ಮಕ್ಕೆಲ್ಲ । ಮತ್ತೆ ಎತ್ತಿದರಿನ್ನು
ಸತ್ಯವಹ ನಡತೆ ವೈರಾಗ್ಯನೆಲೆನಿಂತ
ಸತ್ಯಾತ್ಮರಿವರು । ಬ್ರಹ್ಮಜ್ಞ ॥ 97 ॥

ನಾವೆ ಜ್ಞಾನಿಗಳೆನುತೆ । ಠೀವಿಯಲಿ ನಡೆಯುತ್ತೆ
ಭಾವುಕರ ಮೋಸಗೊಳಿಸುತಿಹ ಗುರುಗಳಾ
ಜೀವ ಹೋಯ್ತೀಗ । ಬ್ರಹ್ಮಜ್ಞ ॥ 98 ॥

ಅರಿಯದಿರೆ ಸಂಸ್ಕೃತವ । ಮರುಳುಗೊಳಿಸುತ ಜನರ
ಪರಿಪರಿಯ ಬೋಧೆ ಮಾಡುತಿಹ ಪಂಡಿತರ
ಹುರುಳು ಬಯಲಾಯ್ತು । ಬ್ರಹ್ಮಜ್ಞ ॥ 99 ॥

ಕುರುಡು ನಂಬಿಕೆಗಳಿಗೆ । ಮರಣವೇ ಬಂತೀಗ
ಮರುಕಳಿಸಿ ಬಂತು ಸುವಿವೇಕ ಜಿಜ್ಞಾಸು
ನರರಿಂಗೆ ಕೇಳಿ । ಬ್ರಹ್ಮಜ್ಞ ॥ 100 ॥

ಕಾರ್ಯಾಲಯಕೆ ಬಂದು । ಸರ್ವವನು ನೋಡಲ್ಕೆ
ಸರ್ವವೂ ವಿದಿತವಾಗುವದು ಇದರಲ್ಲಿ
ಗರ್ವವೇನಿಲ್ಲ । ಬ್ರಹ್ಮಜ್ಞ ॥ 101 ॥

ಬಿತ್ತರಿಸಲಳವಲ್ಲ । ಮತ್ತಿವರ ಉಪಕಾರ
ಕತ್ತೆತ್ತಿ ನೋಡೆ ಹೊಳೆಯುವದು ಈ ನುಡಿಯ
ಸತ್ಯತೆಯು ನಿಮಗೆ । ಬ್ರಹ್ಮಜ್ಞ ॥ 102 ॥

---

1. ಶ್ರೀಗಳವರ ಸಂಸ್ಕೃತ – ಇಂಗ್ಲಿಷ್ ಗ್ರಂಥಗಳನ್ನು ಇಂಗ್ಲೆಂಡ್, ಜರ್ಮನಿ, ಅಮೆರಿಕಾ – ಮುಂತಾದ ದೇಶಗಳವರು ತರಿಸಿಕೊಳ್ಳುತ್ತಿದ್ದಾರೆ.

ಒಂದೊಂದು ಗ್ರಂಥವದು । ಬಂಧುರದ ರತ್ನವಲೆ
ಸುಂದರದ ಸರಳ ಶೈಲಿಯಲಿ ಬರೆದಿರುವ
ಚಂದವನು ನೋಡಿ । ಬ್ರಹ್ಮಜ್ಞ ॥ 103 ॥
ಸಚ್ಚಿದಾನಂದೇಂದ್ರ । ಸಚ್ಚರಿತ ಯತಿವರರ
ಅಚ್ಚರಿಯ ಕೆಲಸ ಕಣ್ಣಾರೆ ನೋಡಿದರೆ
ಮೆಚ್ಚುವಿರಿ ದಿಟಕು । ಬ್ರಹ್ಮಜ್ಞ ॥ 104 ॥
ಮೊದಮೊದಲು ಬಡಿದಾಡಿ । ಕದನ ಮಾಡಿವರೊಡನೆ
ಹದವರಿಯೆ ಎನಗೆ ಕಡುಕಷ್ಟವಾಯ್ತೆನ್ನ
ಮದವನೇಂ ಪೇಳ್ವೆ । ಬ್ರಹ್ಮಜ್ಞ ॥ 105 ॥
ಶರಣಾಗಿ ದತ್ತನಿಗೆ । ಅರುಹಿಸಿದನೆಂದೆನುತ
ಕರುಣೆಯಂ ಬೇಡಿ ನಿಲಲಾಗ ಬುದ್ಧಿಯಲಿ
ಸ್ಫುರಿಸಿತ್ತು ತತ್ತ್ವ । ಬ್ರಹ್ಮಜ್ಞ ॥ 106 ॥
ಪೇಳಿರುವೆನನುಭವವ । ತಾಳದಿರಿ ಸಂಶಯವ
ಮೇಳವಿಸಿ ನೋಡಿ ಶ್ರೀಗಳನು ಪ್ರತ್ಯಕ್ಷ
ಹೇಳುವದೆ ಬೇಡ । ಬ್ರಹ್ಮಜ್ಞ ॥ 107 ॥

**(ಪ್ರಕೃತ ವಿಚಾರ)**

ಇನ್ನು ಭಾಷ್ಯಗಳಂತೆ । ಸನ್ನುತದ ಬೋಧೆಯನು
ಚೆನ್ನಾಗಿ ಹೇಳಿ ತಿಳಿಪುದಕೆ ಯತ್ನಿಸುವೆ
ಮನ್ನಿಸುತ ಕೇಳಿ । ಬ್ರಹ್ಮಜ್ಞ ॥ 108 ॥
ಮಾಯೆ ವಿದ್ಯಾವಿದ್ಯೆ । ಈಯೆರಡು ಬಗೆಯಲ್ಲಿ
ಸಾಯಸದಿ ಭಾಷ್ಯದುಕ್ತಿಯನು ತಿಳಿಸಿರುವ
ಆಯವನು ನೋಡಿ । ಬ್ರಹ್ಮಜ್ಞ ॥ 109 ॥
ಬಂದು ತರ್ಕಗಳಿಲ್ಲಿ । ಹಿಂದಾಯ್ತು ಅನುಭವವು
ಎಂದಿರುವ ಮಾತು ನೆನೆಯತ್ತ ಮನದಲ್ಲಿ
ಮುಂದಿದನು ಕೇಳಿ । ಬ್ರಹ್ಮಜ್ಞ ॥ 110 ॥
ಏನು ತಾಣವು ಮತ್ತೆ । ಜ್ಞಾನದಲಿ ತರ್ಕಕ್ಕೆ
ಈ ನುಡಿಯ ಕೇಳುತುತ್ತರವನಿತ್ತಿಹರು
ಜ್ಞಾನಿಗಳು ಕೇಳಿ । ಬ್ರಹ್ಮಜ್ಞ ॥ 111 ॥
ಮುಂದಿನಧ್ಯಾಯದಲಿ । ಚಂದದಲಿ ತರ್ಕಗಳ
ಬಂಧುರದ ಬಗೆಯ ತಿಳಿಸುತ್ತ ಸತ್ತರ್ಕ
ದಂದವನು ತೋರ್ಪೆ । ಬ್ರಹ್ಮಜ್ಞ ॥ 112 ॥

# ಆರನೆಯ ಅಧ್ಯಾಯ

## ತರ್ಕ – ಭೌತಿಕವಿಜ್ಞಾನ

### (ವೇದಾಂತದಲ್ಲಿ ತರ್ಕದ ಸ್ಥಾನ)

ವೇದಾಂತಶಾಸ್ತ್ರದಲ್ಲಿ । ಆದರದಲನುಭವವೆ
ಪ್ರಾಧಾನ್ಯವಾಗೆ ತರ್ಕಕ್ಕೆ ಎಡೆ ಏನು?
ಆದರಿಸಿ ಪೇಳ್ವೆ । ಬ್ರಹ್ಮಜ್ಞ ॥ 1 ॥

ಯಾವ ವಿಧ ತರ್ಕವೂ । ಯಾವಾಗಲೂ ಬೇಡ[1]
ಈ ವಿಧದ ಭಾವವಿದಕಿಲ್ಲ ಶ್ರುತಿಯಲೇ
ತೀವಿ ಪೇಳಿಹುದು । ಬ್ರಹ್ಮಜ್ಞ ॥ 2 ॥

ಗಂಧಾರದೇಶವನು । ಅಂದದಲಿ ಪಡೆಯಲ್ಕೆ
ಮಂದಿಯನು ಕೇಳಿ ಹೊರಟಿರುವ ಪಥಿಕನಾ
ಸಂಧಿಯಲಿ[2] ಬಹುದು । ಬ್ರಹ್ಮಜ್ಞ ॥ 3 ॥

ಆಚಾರ್ಯನಲಿ ಕೇಳಿ । ಯೋಚಿಸುತ ಮನದಲ್ಲಿ
ಆಚರಿಸೆ ಮನನ ತರ್ಕವಿದು ಬೇಕೆಂಬು–
ದಾಚಾರ್ಯರುಕ್ತಿ[3]। ಬ್ರಹ್ಮಜ್ಞ ॥ 4 ॥

ತರ್ಕದಿಂದಲೇ ಮನನ । ಬರ್ಕುಮೆಂದಿಹರಿಲ್ಲಿ
ಇರ್ಕುಮಿದು ತಾಣ ವೇದಾಂತಶಾಸ್ತ್ರದಲಿ
ತರ್ಕಕ್ಕೆ ಕೇಳಿ । ಬ್ರಹ್ಮಜ್ಞ ॥ 5 ॥

ಶ್ರುತಿಯಂತೆ ಅನುಭವಕೆ । ಮತಿಯಲ್ಲಿ ತರ್ಕಿಪುದೆ
ಅತಿಶಯದ ತರ್ಕವೆನಿಸುವದು ಶ್ರೌತವಿದು
ಅತಿಮುಖ್ಯ ಕೇಳಿ । ಬ್ರಹ್ಮಜ್ಞ ॥ 6 ॥

ಇದುವೆ ವೇದಾಂತಕ್ಕೆ । ಹದನಾದ ಸಾಧನೆಯು
ಇದರಿಂದೆ ಮನನ ಮಾಡುತ್ತಲನುಭವವ
ಮುದದಿಂದ ಪಡೆಗು । ಬ್ರಹ್ಮಜ್ಞ ॥ 7 ॥

---

1. ಶಾಂ. ವೇ. ಸಾರ ಪುಟ 62ನ್ನು ನೋಡಿರಿ.
2. ಛಾಂ. 6–14–2.
3. ಬೃ. ಭಾ. 2–4–5 (ಭಾ. ಭಾ. 359)ನ್ನು ನೋಡಿರಿ.

ಮಿಕ್ಕಿನಾ ತರ್ಕಗಳು । ಮುಕ್ಕರಿಸಿಹೋಗುವವು
ಇಕ್ಕುವದು ಬದಿಗೆ ಅವುಗಳೀ ತತ್ತ್ವದಾ
ಲೆಕ್ಕಕ್ಕೆ ಇಲ್ಲ[1]। ಬ್ರಹ್ಮಜ್ಞ ॥ 8 ॥

### (ತರ್ಕದ ಪ್ರಕಾರಗಳು)

ತರ್ಕದಲಿ ಮೂರು ಬಗೆ । ಇರ್ಕುಮವ ತಿಳಿಯಲ್ಕೆ
ತಕ್ಕೈಸಿ ಪೇಳ್ವೆ ಆ ಮೂರು ಬಗೆಗಳನು
ಅಕ್ಕರದಿ ಕೇಳಿ । ಬ್ರಹ್ಮಜ್ಞ ॥ 9 ॥

### (1) ಕುತರ್ಕ

ಕೇವಲ ಕುತರ್ಕವದು । ಭಾವಿಸಲು ಮೊದಲ ಬಗೆ
ಆವಗಂ ಲೋಕದನುಭವಕೆ ಎದುರಾದ
ಭಾವನಾಮಾತ್ರ । ಬ್ರಹ್ಮಜ್ಞ ॥ 10 ॥

ನಾಗರದ ಹಾವೆನಲು । ಈಗ ವಿಷವಿಹುದೆಂದು
ಬೇಗನೆಯೆ ಗೊತ್ತು ಮಾಡುವದು ಅನುಭವವೆ
ಆಗಿಹುದು ಸಹಜ । ಬ್ರಹ್ಮಜ್ಞ ॥ 11 ॥

ನೀರಹಾವೆನ್ನುವದು । ಸೇರಿಹುದು ಹಾವ್ಗಳಲಿ
ಸೇರಿಲ್ಲ ವಿಷವು ಇದಕೆಂಬ ಈ ಮಾತು
ತೋರಿದನುಭವವು । ಬ್ರಹ್ಮಜ್ಞ ॥ 12 ॥

ನೀರಹಾವೆನ್ನುವದು । ಸೇರಿಹುದು ಹಾವ್ಗಳಲಿ
ಕಾರಣವು ಇದುವೆ ವಿಷಜಂತುವೆಂದೆನುತ
ಸಾರುವುದು ತಪ್ಪು । ಬ್ರಹ್ಮಜ್ಞ ॥ 13 ॥

ನಾಗರವು ತಾನೀಗ । ಆಗಿಹುದು ಹಾವೆಂದು
ಈಗಿದಕೆ ಇಲ್ಲ ವಿಷ ನೀರಹಾವಿನೊಲು
ಆಗದೀ ಮಾತು । ಬ್ರಹ್ಮಜ್ಞ ॥ 14 ॥

ಇದು ಈ ಕುತರ್ಕಕ್ಕೆ । ಉದಹರಿಸಿರುವ ವಾಕ್ಯ
ಮುದದಿಂದೆ ಭಾಷ್ಯದೊಳಗಿದನು ಬರೆದಿಹರು
ಬುಧರು ನೋಡುವದು[2]। ಬ್ರಹ್ಮಜ್ಞ ॥ 15 ॥

---

1. ಪದ್ಯ 6 ರಿಂದ 8 ಪೂರ ವಿಷಯಕ್ಕೆ ಸೂ. ಭಾ. 2–1–6 (ಭಾ.ಭಾ. 418) ನ್ನು ನೋಡಿರಿ.

2. ಪದ್ಯ 11 ರಿಂದ 15 ಪೂರ ವಿಷಯಕ್ಕೆ ಸೂ. ಭಾ. 2–2–10 (ಭಾ.ಭಾ. 20) ನ್ನು ನೋಡಿರಿ.

ಒಟ್ಟಿನಲ್ಲಿ ಅನುಭವವ । ಬಿಟ್ಟಿರುವ ತರ್ಕಕ್ಕೆ
ಕೊಟ್ಟಿಹರು ಹೆಸರು ಈಗೀ ಕುತರ್ಕವಿದು
ಕೆಟ್ಟ ಬಗೆ ತರ್ಕ । ಬ್ರಹ್ಮಜ್ಞ ॥ 16 ॥

## (2) ಪ್ರಮಾಣತರ್ಕ

ಎರಡನೆಯ ಬಗೆಯದುವೆ । ಬರುವದು ಪ್ರಮಾಣಕ್ಕೆ
ಸರಿಯಾದ ವಾದವೆನಿಸಿರುವ ತರ್ಕವಿದು
ಇರುವ ಬಗೆ ಪೇಳ್ವೆ । ಬ್ರಹ್ಮಜ್ಞ ॥ 17 ॥
ಅಡುಗೆಯಾ ಮನೆಯಲ್ಲಿ ।ಗಡನೆ ಒಲೆ ಹೊತ್ತಿಸಲು
ಇಡುಗುವದು ಹೊಗೆಯು ಮನೆಯಲ್ಲಿ ಕಂಡ ಈ
ನುಡಿಯು ಪ್ರತ್ಯಕ್ಷ । ಬ್ರಹ್ಮಜ್ಞ ॥ 18 ॥
ಇನ್ನೊಂದು ಕಡೆಯಲ್ಲಿ । ಮುನ್ನ ಹೊಗೆ ಹೊರಟಲ್ಲಿ
ತನ್ನೊಳಗೆ ಬರ್ಕು ಕಲ್ಪನೆಯು ಇದರಡಿಗೆ
ಇನ್ನಿಹುದು ಬೆಂಕಿ । ಬ್ರಹ್ಮಜ್ಞ ॥ 19 ॥
ಇಲ್ಲಿ ಬೆಂಕಿಯ ಊಹೆ । ಮೆಲ್ಲನೆಯೆ ಬಂದಿಹುದು
ಇಲ್ಲವದು ನಮಗೆ ಪ್ರತ್ಯಕ್ಷವಾದೊಡೆಯು
ಒಳ್ಳಿತೀ ತರ್ಕ । ಬ್ರಹ್ಮಜ್ಞ ॥ 20 ॥
ಇರದಿರಲು ಬೆಂಕಿಯದು । ಬರದು ಹೊಗೆಯದರಿಂದೆ
ಸರಿಯಾದುದಿಲ್ಲಿ ಅನುಮಾನವೆಂಬುವೀ
ನೆರವು ಬಂತೀಗ । ಬ್ರಹ್ಮಜ್ಞ ॥ 21 ॥
ಹೀಗೆ ತರ್ಕದ ಬಲವು । ಸಾಗಿರೆ ಪ್ರಮಾಣಕ್ಕೆ
ಆಗಿಹುದು ಮಾನ ಸರಿಯೆಂಬನುಗ್ರಹವು[1]
ಈಗ ತರ್ಕದಲಿ । ಬ್ರಹ್ಮಜ್ಞ ॥ 22 ॥
ಎಲ್ಲ ಮಾನಕು ಹೀಗೆ । ಬಲ್ಲ ಈ ತರ್ಕವೇ
ಒಳ್ಳೆ ಬಲ ಕೊಡುವ ಸಾಧನೆಯು ಎಂಬಿದನೆ
ಎಲ್ಲರೊಪ್ಪಿಹರು । ಬ್ರಹ್ಮಜ್ಞ ॥ 23 ॥
ಇದು ಪ್ರಮಾಣದ ತರ್ಕ । ಇದೆ ವಾದಿಗಳ ಶಸ್ತ್ರ
ಇದರಿಂದೆ ಬಂತು ಈ ಶಾಸ್ತ್ರವಿದರ ಬಗೆ
ಮುದದಿಂದ ತಿಳಿಪೆ । ಬ್ರಹ್ಮಜ್ಞ ॥ 24 ॥
ದೇಶಕಾಲಗಳಲ್ಲಿ । ಭಾಸಿಸುವ ವಸ್ತುಗಳ
ಆಸರೆಯು ಕಾರ್ಯಕಾರಣದ ಭಾವಗಳ
ಲೇಸು ಬೇಕಿದಕೆ । ಬ್ರಹ್ಮಜ್ಞ ॥ 25 ॥

---

1. ಪ್ರಮಾಣಾನುಗ್ರಾಹಕಸ್ತರ್ಕಃ.

ಇಂದ್ರಿಯಕೆ ಗೋಚರಿಸಿ । ಮುಂದೆ ಬುದ್ಧಿಗೆ ನಿಲುಕಿ
ಬಂಧುರದ ನಿಯಮಕೊಳಪಟ್ಟು ನಡೆಯುತಿಹ
ಚಂದದಾ ತರ್ಕ । ಬ್ರಹ್ಮಜ್ಞ ॥ 26 ॥
ಈ ನಿಯಮಕನುಸರಿಸಿ । ಕಾಣುತಿಹ ದೋಷಗಳ
ಮಾನಿತರು ತರ್ಕಶಾಸ್ತ್ರದಲ್ಲಿ ಪೇಳಿಹರು
ಜಾಣತನದಿಂದೆ । ಬ್ರಹ್ಮಜ್ಞ ॥ 27 ॥
ತನ್ನ ಹೆಗಲನು ತಾನು । ಮುನ್ನವೇರಿದನೆನಲು
ಚೆನ್ನಾದ ತಪ್ಪು ಆತ್ಮಾಶ್ರಯದ ದೋಷ-
ವೆನ್ನುವರು ಇದಕೆ । ಬ್ರಹ್ಮಜ್ಞ ॥ 28 ॥
ಗಿಡದಿಂದ ಬೀಜವೂ । ಗಿಡ ಬೀಜದಿಂದಲೂ
ಗಡಗಹುವು ಎಂಬುದಿದು ದೊಷವನ್ಯೋನ್ಯ
ಬಿಡದಿಹುದು ಇಲ್ಲಿ । ಬ್ರಹ್ಮಜ್ಞ ॥ 29 ॥
ಆಶೆಯಿಂ ಕರ್ಮವೂ । ಲೇಸಾಗಿ ಭೋಗವೂ
ದೋಷವಿದು ಭೋಗದಿಂದಾಶೆ ಹೆಚ್ಚುವದು
ದೋಷಚಕ್ರಿಕೆಯು। ಬ್ರಹ್ಮಜ್ಞ ॥ 30 ॥
ಇದಕೆ ಕಾರಣ ಅದುವೆ । ಅದಕೆ ಇನ್ನೊಂದಿಹುದು
ಅದಕಿನ್ನು ಬೇರೆ ನಲೆಯಿಲ್ಲದೀ ರೀತಿ
ಇದುವೆ ಅನವಸ್ಥೆ[1]। ಬ್ರಹ್ಮಜ್ಞ ॥ 31 ॥
ಇದರಂತೆ ವಾದಕ್ಕೆ । ಹದನಾದ ನಿಯಮಗಳ
ಒದಗಿಸುತ ತರ್ಕಪಂಡಿತರು ತಮ್ಮಲ್ಲಿ
ಕದನಮಾಡುವರು । ಬ್ರಹ್ಮಜ್ಞ ॥ 32 ॥
ಕೆಲವನ್ನು ನಾನಿಲ್ಲಿ । ತಿಳಿಸಿರುವೆನಿದರಂತೆ
ಬಲುಬಗೆಯ ನಿಯಮವಿರುತಿಹವು ಅವು ಎಲ್ಲ
ತಿಳಿಸೆ ಸ್ಥಳವಲ್ಲ। ಬ್ರಹ್ಮಜ್ಞ ॥ 33 ॥
ಪೌರ್ವಾತ್ಯ ಪಾಶ್ಚಾತ್ತ್ಯ । ಈರ್ವರೂ ಬಗೆಬಗೆಯ
ಸರ್ವವಿಧ ತರ್ಕನಿಯಮಗಳ ತಮ್ಮಲ್ಲಿ
ನಿರ್ವಹಿಸುತಿಹರು[2]। ಬ್ರಹ್ಮಜ್ಞ ॥ 34 ॥

1. ಪದ್ಯ 28 ರಿಂದ 31 ಪೂರ, ಆತ್ಮಾಶ್ರಯ, ಅನ್ಯೋನ್ಯಾಶ್ರಯ, ಚಕ್ರಿಕಾಪತ್ತಿ, ಅನವಸ್ಥಾ- ಎಂಬ ನಾಲ್ಕು ತರ್ಕದೋಷಗಳನ್ನು ವರ್ಣಿಸಿದೆ.

2. ಪಾಶ್ಚಾತ್ತ್ಯರ ತರ್ಕನಿಯಮಗಳ ಬಗ್ಗೆ **'ಅನುಭವಪರ್ಯಂತವಾದ ಆತ್ಮವಿಚಾರ'** ಎಂಬ ಪುಸ್ತಕದ ಪುಟ 33–34ನ್ನು ನೋಡಿರಿ.

ತಮತಮಗೆ ತೋಚಿರುವ । ಸಮವಾದ ಕೆಲನಿಯಮ
ಗಮನದಲಿ ತಂದು ವಾದಿಸಲು ಬುದ್ಧಿಬಲ
ಶ್ರಮಗಳೇ ಮುಖ್ಯ । ಬ್ರಹ್ಮಜ್ಞ ॥ 35 ॥
ಪ್ರಬಲ ಮಾನವು ಬರಲು । ಅಬಲವದು ಬೀಳುವದು
ಸೊಬಗಿದುವೆ ತರ್ಕಶಾಸ್ತ್ರದಲಿ ಪರಿಣತರ
ಸಭೆಯ ಕಾದಾಟ । ಬ್ರಹ್ಮಜ್ಞ ॥ 36 ॥
ನಿಲಿಸಿರಲು ಟಗರೆರಡ । ಬಳಿಕ ಕಾಳಗಕಾಗಿ
ಬಲವಾದ ಟಗರು ಗೆಲಿಯುವದು ಇದರಂತೆ
ಗೆಲುವು ತರ್ಕಕ್ಕೆ। ಬ್ರಹ್ಮಜ್ಞ ॥ 37 ॥
ಪ್ರತ್ಯಕ್ಷವಾಧಾರ । ಮತ್ತಿಹುದು ತರ್ಕಕ್ಕೆ
ಪ್ರತ್ಯಕ್ಷ ಬರಲು ವ್ಯತ್ಯಾಸ ತರ್ಕಕ್ಕೆ
ಮತ್ತಹುದು ಹಾನಿ । ಬ್ರಹ್ಮಜ್ಞ ॥ 38 ॥
ಹೊಗೆಸೊಪ್ಪು ಸೇದುವಗೆ । ಹೊಗೆಬಹುದು ಮುಖದಿಂದ
ಹೊಗೆಯಂತೆ ಆವಿ ಚಳಿಯಲಿ ಹೊರಬರಲು
ಹೊಗೆ ಎನಲು ಹೊಲ್ಲ । ಬ್ರಹ್ಮಜ್ಞ ॥ 39 ॥
ಸೇದಿಹರು ಶಾಸ್ತ್ರಿಗಳು । ಮೋದದಿಂ ಹೊಗೆಸೊಪ್ಪು
ವಾದಿಪುದು ಆವಿ ಹೊಗೆಯೆಂಬ ತರ್ಕವಿದು
ಬಾಧೆಯಾಗುವುದು । ಬ್ರಹ್ಮಜ್ಞ ॥ 40 ॥

**(ತರ್ಕಕ್ಕೆ ಕೊನೆಯಿಲ್ಲ)**

ಕರ್ಕ[1]ಕ್ಕೆ ಸರಳನಡೆ । ಮರ್ಕಟಕೆ ಸ್ಥಿರಮನವು
ತರ್ಕಕ್ಕೆ ಕೊನೆಯು ಇರಹೊಲ್ಲ ಬಾನ್ಗೇಣಿ[2]
ಇಕ್ಕುವದು ಸಲ್ಲ । ಬ್ರಹ್ಮಜ್ಞ ॥ 41 ॥
ಇಂದೊಬ್ಬ ಹೇಳಿದ್ದ । ಚಂದದಾ ತರ್ಕವನು
ಮುಂದೊಬ್ಬ ಬಂದು ಹಳಿಯುವನು ಬುದ್ಧಿಬಲ-
ದಿಂದ ಹಿಂದಿನದ । ಬ್ರಹ್ಮಜ್ಞ ॥ 42 ॥
ಅದಕಿಂತ ಮುಂದಿನವ । ಅದನು ಸಹ ಅತಿಗಳೆವ
ಇದಕಿನ್ನು ಇಲ್ಲ ಕೊನೆ ಹೀಗೆ ಪರಮಾರ್ಥ
ಇದರಿಂದೆ ಸಿಗದು । ಬ್ರಹ್ಮಜ್ಞ ॥ 43 ॥

1. ಕರ್ಕ ಎಂದರೆ ಏಡಿ ಎಂಬ ಪ್ರಾಣಿ. ಇದು ನೇರಾಗಿ ನಡೆಯುವದಿಲ್ಲ.
2. ಬಾನ್ ಎಂದರೆ ಆಕಾಶ.

ಹಿಂದಿನಾ ತಾರ್ಕಿಕರ । ಮುಂದೆ ಬರತಕ್ಕವರ
ಇಂದಿರುವ ಎಲ್ಲರೊಡಗೂಡಿ ಚರ್ಚಿಪುದು
ಎಂದಿಗೂ ಹೊಲ್ಲ[1]। ಬ್ರಹ್ಮಜ್ಞ ॥ 44 ॥

ಪರಮಾರ್ಥ ನಿರ್ಣಯಕೆ । ಬರಲಾರದಿದು ತರ್ಕ
ಪರಿಪರಿಯ ಭೇದದೃಷ್ಟಿಯೇ ಆಧಾರ
ಅರಿಯಲ್ಕೆ ಇದಕೆ । ಬ್ರಹ್ಮಜ್ಞ ॥ 45 ॥

**(ಹಿಂದಿನ ತಾರ್ಕಿಕರು)**

ಸಾಂಖ್ಯನನು ಕಾಣಾದ । ಶಂಕಿಸುವ ತರ್ಕದಲಿ
ಸಾಂಖ್ಯನಿವ ಮತ್ತೆ ಅವನನ್ನು ಬೇರೆ ವಿಧ
ಶಂಕಿಸುತಲಿಹನು[2]। ಬ್ರಹ್ಮಜ್ಞ ॥ 46 ॥

ವಸ್ತು ನಿಜವೆಂಬುದರ । ಕತ್ತನ್ನು ಹಿಸುಕುವರು
ಮತ್ತಿನ್ನು ಸತ್ಯ ವಿಜ್ಞಾನವೆಂಬುವರು
ಒತ್ತುತ್ತ ತರ್ಕ । ಬ್ರಹ್ಮಜ್ಞ ॥ 47 ॥

ಇದರಂತೆ ಬೌದ್ಧರೂ । ಎದುರಾಗಿ ಜೈನರೂ
ಮದವೇರಿ ತಮ್ಮತಮ್ಮಲ್ಲಿ ತರ್ಕದಿಂ
ಕದನಮಾಡುವರು । ಬ್ರಹ್ಮಜ್ಞ ॥ 48 ॥

ಶೂನ್ಯವನು ಹೇಳುವರು । ಮನ್ನಿಸರು ವಿಜ್ಞಾನ
ಮನ್ನಿಸರು ಶೂನ್ಯ ವೈದಿಕರು ಚಾರ್ವಾಕ
ಮನ್ನಿಸನು ವೇದ । ಬ್ರಹ್ಮಜ್ಞ ॥ 49 ॥

ಅವನ ಹೊಡೆತಕೆ ಇವನು । ಇವನ ಹೊಡೆತಕೆ ಅವನು
ಭವಣೆಯನು ಪಡುತ ಬಿದ್ದಿಹರು ತಾರ್ಕಿಕರು[3]
ಭವಜಾಲದಲ್ಲಿ । ಬ್ರಹ್ಮಜ್ಞ ॥ 50 ॥

ಸತ್ತ ದನವಿನ ಮಾಂಸ । ಕಿತ್ತು ತಿನ್ನುವದಕ್ಕೆ
ಅತ್ತಿತ್ತ ಎಳೆವ ಪ್ರಾಣಿಗಳ ತೆರನಂತೆ
ಕಿತ್ತಾಡುತಿಹರು[4]। ಬ್ರಹ್ಮಜ್ಞ ॥ 51 ॥

---

1. ಪದ್ಯ 42 ರಿಂದ 44 ಪೂರ ವಿಷಯಕ್ಕೆ ಸೂ. ಭಾ. 2–1–11 (ಭಾ.ಭಾ. 429)ನ್ನು ನೋಡಿರಿ.

2. ಸೂ. ಭಾ. 2–1–11 (ಭಾ.ಭಾ. 427)ನ್ನು ನೋಡಿರಿ.

3. ಪ್ರ. ಭಾ. 6–3 (ಭಾ.ಭಾ. 104)ನ್ನು ನೋಡಿರಿ.

4. ಪ್ರ. ಭಾ. 6–3 (ಭಾ.ಭಾ. 104)ರಲ್ಲಿ **"ಆಮಿಷಾರ್ಥಿನ ಇವ ಪ್ರಾಣಿನಃ...."** ಎಂಬ ವಾಕ್ಯವನ್ನು ನೋಡಿರಿ.

**(ಪಾಶ್ಚಾತ್ತ್ಯ ಪದ್ಧತಿ)**

ಹಿಂದುಮುಂದಿನ ಮಾತು । ಸಂದರ್ಭ ತಪ್ಪದಲೆ
ಬಂಧುರದ ಯುಕ್ತಿಗನುಸರಿಸಿ ಪೇಳಲದು
ಇಂದು ಪರಮಾರ್ಥ । ಬ್ರಹ್ಮಜ್ಞ ॥ 52 ॥

ಈ ರೀತಿ ಆಂಗ್ಲಜನ । ತೂರಿಹರು ತರ್ಕಗಳ
ಬೇರಾಗಿ ರೀತಿ ಒಬ್ಬೊಬ್ಬರೊಂದು ಬಗೆ
ಸಾರಿಹರು[1]। ಬ್ರಹ್ಮಜ್ಞ ॥ 53 ॥

ಆಂಗ್ಲದೇಶದ ಜನರ । ಏಂಗಡದ ತರ್ಕಗಳ
ಸಿಂಗರದಿ ಓದಿ ಭಾರತದ ಜನರ ಮತಿ
ಕಂಗೆಟ್ಟು ಹೋಯ್ತು । ಬ್ರಹ್ಮಜ್ಞ ॥ 54 ॥

ತತ್ತ್ವನಿಶ್ಚಯ ಬರದೆ । ಮತ್ತೆ ತರ್ಕಗಳಿಂದೆ
ಕಿತ್ತಾಡಿ ತತ್ತ್ವ ಶೋಧಿಸಲು ಅದರ ನೆಲೆ
ಹತ್ತದಲೆ ಇಹುದು । ಬ್ರಹ್ಮಜ್ಞ ॥ 55 ॥

ಇಲ್ಲಿರುವ ಜನರಂತೆ । ಅಲ್ಲಿಯೂ ತಾರ್ಕಿಕರು
ಬಲ್ಲಂತೆ ತಿಳಿಸಿಕೊಟ್ಟುದನೆ ತತ್ತ್ವವೆಂ-
ದಿಲ್ಲಿ ತಿಳಿಯುವರು । ಬ್ರಹ್ಮಜ್ಞ ॥ 56 ॥

ಆದರೇನಾಯ್ತು । ಬಾರದದು ಲೆಕ್ಕಕ್ಕೆ
ಮೀರಿಹುದು ಸತ್ಯ ಈ ತರ್ಕಶಾಸ್ತ್ರಕ್ಕೆ
ಸೇರದಿರುತಿಹುದು । ಬ್ರಹ್ಮಜ್ಞ ॥ 57 ॥

ಕಷ್ಟಪಡುತೋದುವರು । ಇಷ್ಟುವಿಧ ತರ್ಕಗಳ
ಮುಟ್ಟರೀ ಜನರು ಪರಮಾರ್ಥಸತ್ಯವನು
ಬಟ್ಟೆಗೆಟ್ಟಿಹರು । ಬ್ರಹ್ಮಜ್ಞ ॥ 58 ॥

**(ಆಧುನಿಕವಿಜ್ಞಾನಶಾಸ್ತ್ರ)**

ಆದರದೋಳಾಲಿಸಿರಿ । ಆಧುನಿಕ ವಿಜ್ಞಾನ
ಶೋಧಗಳ ಮಾಡಿ ಈ ವಿಶ್ವತತ್ತ್ವವನು
ಭೇದಿಸಲು ಬರದು। ಬ್ರಹ್ಮಜ್ಞ ॥ 59 ॥

ಹೊರಗಿನಾ ವಸ್ತುಗಳ । ಪರಿಪರಿಯ ಶೋಧದಲಿ
ಬೆರಗನ್ನು ತಂದ ಇದರಿಂದ ಈ ಜಗದ
ಪರಮಾರ್ಥ ಸಿಗದು । ಬ್ರಹ್ಮಜ್ಞ ॥ 60 ॥

---

1. ಪಾಶ್ಚಾತ್ತ್ಯರ ತರ್ಕಸರಣಿಗಳ ವಿವರಕ್ಕೆ 'ಪರಿಪೂರ್ಣದರ್ಶನ' ಎಂಬ ಪುಸ್ತಕದ ಪುಟ 17 ರಿಂದ 20ನ್ನು ಪೂರ ನೋಡಿರಿ.

ವಸ್ತುಗಳನೀಕ್ಷಿಸುತ । ಮತ್ತೆ ಪ್ರಾಯೋಗಿಕದಿ
ವಿಸ್ತರದಿ ತಿಳಿದು ಮೇಳವಿಸಿ ಶೋಧಗಳ
ಗೊತ್ತುಪಡಿಸುವದು[1]। ಬ್ರಹ್ಮಜ್ಞ ॥ 61 ॥

ಈ ಕ್ರಮದಿ ನಡೆದಿರುತ । ವಿಕ್ರಮವ ಸಾಧಿಸುತ
ಸಕ್ರಿಯಾಶಾಸ್ತ್ರವೆನೆ ಮೆರೆವ ಇದಕು ಸಹ
ವಕ್ರಿಸಿದೆ ದೋಷ। ಬ್ರಹ್ಮಜ್ಞ ॥ 62 ॥

ನೀರು ಒಂದೇ ವಸ್ತು । ಸಾರಿತ್ತು ಮೊದಲಿದನು
ತೋರಿಸಿತು ಮುಂದೆ ಎರಡನಿಲಸಂಯೋಗ
ನೀರೆಂದು ಶಾಸ್ತ್ರ । ಬ್ರಹ್ಮಜ್ಞ ॥ 63 ॥

ಅಣುಮೂಲವಿನ್ನಿದುವೆ । ತುಣುಕಾಗದೆನ್ನುತ್ತೆ
ಗೊಣಗಿದರು ಮತ್ತೆ ಒಡೆಯಲ್ಕೆ ಅಣುಶಸ್ತ್ರ
ಕಣವಾಯ್ತು[2] ಜಗವು । ಬ್ರಹ್ಮಜ್ಞ ॥ 64 ॥

ಹೀಗೆ ನೆಲೆಯಿಲ್ಲದಲೆ ಸಾಗಿಹುದು ವಿಜ್ಞಾನ
ಆಗಾಗ ಭಿನ್ನಮತ ಬಹುದು ಇದನೆಲ್ಲ
ತೂಗಿ ನೋಡುವದು । ಬ್ರಹ್ಮಜ್ಞ ॥ 65 ॥

ಎಲ್ಲವನು ಹೇಳಲ್ಕೆ । ಇಲ್ಲ ಸಾಧ್ಯವು ಇಲ್ಲಿ
ಅಲ್ಲವಿದು ಪೂರ್ಣದರ್ಶನವು[3] ಎಂಬುದಕೆ
ಇಲ್ಲಿ ಕೆಲವೇಳ್ವೆ । ಬ್ರಹ್ಮಜ್ಞ ॥ 66 ॥

**(ವಿಜ್ಞಾನಶಾಸ್ತ್ರದ ದೋಷಗಳು)**

ಹೊರಗಿನ ವಿಷಯಗಳ । ಪರಿಕಿಸುತಲೇ ಸಾಗಿ
ನಿರುಕಿಸುವದೆಂದಿಗೋ ವಿಷಯಿಯನು ಮುಖ್ಯ
ಕೊರತೆ ಇದರಲ್ಲಿ। ಬ್ರಹ್ಮಜ್ಞ ॥ 67 ॥

ಮನದ ವಿಜ್ಞಾನಿಗಳು । ಮನಸುಗಳ ಪರಿಕಿಸುತ
ಎಣಿಸಿದರು ಶೋಧಮಾಡಿಹೆವು ವಿಷಯಿಯನು
ಅನುಚಿತವಿದಾಯ್ತು । ಬ್ರಹ್ಮಜ್ಞ ॥ 68 ॥

---

1. ವಿಜ್ಞಾನಶಾಸ್ತ್ರದಂತೆ ವಸ್ತುತತ್ತ್ವನಿರ್ಣಯಕ್ಕೆ ನಿರೀಕ್ಷಣ (Observation), ಪರೀಕ್ಷಣ (Experiment), ಸಂವಾದೀಕರಣ (Verification)– ಇವು ಮೂರೂ ಅಗತ್ಯವಾಗಿವೆ.

2. ಪ್ರಪಂಚವು ಅಣ್ವಸ್ತ್ರಗಳ ಯುದ್ಧಕ್ಷೇತ್ರವಾಯಿತೆಂದರ್ಥ.

3. ಈ ವಿಷಯಕ್ಕೆ **'ಜೀವಂತವೇದಾಂತ'** ಎಂಬ ಗ್ರಂಥದ ಪುಟ 12 ರಿಂದ 15 ನೋಡಿರಿ.

ಇದರಂತೆ ಕನಸುಗಳ । ವಿಧಗಳನು ನಿದ್ರೆಯನು
ಹದನಾಗಿ ಶೋಧಮಾಡಿದೆವು ಎಂದೆನಲು
ಇದು ಕೇಳಿ ತಪ್ಪು । ಬ್ರಹ್ಮಜ್ಞ ॥ 69 ॥

ಹೊರಗಿರುವ ಜನರುಗಳ । ಪರಿಪರಿಯ ಮನಸುಗಳ
ಅರಿಯುವದು ನಮ್ಮ ಮನವಿದಕೆ ವಿಷಯವವು
ಪೆರತೇನು ನೋಡಿ । ಬ್ರಹ್ಮಜ್ಞ ॥ 70 ॥

ಶೋಧಿಪರು ಎಚ್ಚರದ । ಭೇದದೃಷ್ಟಿಯನಿಟ್ಟು
ಆದರದಿ ನಿದ್ರೆಕನಸುಗಳ ಇತರರಾ
ಬೋಧೆಗನುಸರಿಸಿ । ಬ್ರಹ್ಮಜ್ಞ ॥ 71 ॥

ಚಂದ್ರಸೂರ್ಯರ ಮುಟ್ಟಿ । ಬಂದರೂ ಈ ಶಾಸ್ತ್ರ
ಎಂದಿಗೂ ಪೂರ್ಣ ಪರಮಾರ್ಥತತ್ತ್ವವನು
ಹೊಂದದಿದು ಸತ್ಯ । ಬ್ರಹ್ಮಜ್ಞ ॥ 72 ॥

ಲೌಕಿಕದಿ ಕೆಲವೊಂದು । ಸೌಕರ್ಯಕೊಟ್ಟಿಹುದು
ಸಾಕೆನಲು ಮತ್ತೆ ಬೇಡಾದ ಭಯವನೂ
ತಾಕಿಸುವದಿದುವೆ । ಬ್ರಹ್ಮಜ್ಞ ॥ 73 ॥

ಹೊರದೃಷ್ಟಿಯವರಿಗಿದು । ಪರಮದೇವತೆಯಾಗಿ
ಪರಿಪರಿಯ ಕಾಮಸಂಸ್ಕೃತಿಯ ಚಕ್ರದಲಿ
ತಿರುಗಿಸುತ್ತಿಹುದು । ಬ್ರಹ್ಮಜ್ಞ ॥ 74 ॥

ಮುಂದರಿದು ಇದರಲ್ಲಿ । ನಿಂದ ದೇಶಗಳನ್ನು
ಕಂದೆರೆದು ನೋಡಿ ಸುಖಶಾಂತಿ ನೆಲೆಸಿಹವೆ?
ಎಂದಿಗೂ ಇಲ್ಲ । ಬ್ರಹ್ಮಜ್ಞ ॥ 75 ॥

ಬೇಕು ಇದು ಎಲ್ಲರಿಗೂ । ಲೌಕಿಕದಿ ನಿಜ ಮತ್ತೆ
ಏಕೆ ಕಕ್ಕುಲಿತೆ ಇದೆ ನಮ್ಮ ಜೀವಿತವೆ?
ಸಾಕು ಈ ಮಂಕು । ಬ್ರಹ್ಮಜ್ಞ ॥ 76 ॥

ಜೀವನದ ಒಂದಂಗ । ಯಾವುದೋ ಮೂಲೆಯಿದು
ಜೀವನವ ಪೂರ್ಣರೂಪದಲಿ ತೋರಿಸಲು
ಠಾವಿಲ್ಲವಿಲ್ಲಿ । ಬ್ರಹ್ಮಜ್ಞ ॥ 77 ॥

ದ್ವೇಷವಿಲ್ಲೆಮಗಿದರ । ಲೇಸು ಸ್ವೀಕರಿಸಲ್ಕೆ
ಆಶಿಪೆವು ಇದನೆ ನಂಬುತ್ತ ತತ್ತ್ವದುಪ-
ದೇಶ ಬಿಡಬೇಡಿ । ಬ್ರಹ್ಮಜ್ಞ ॥ 78 ॥

ವಿಜ್ಞಾನಶಾಸ್ತ್ರದೀ । ಪ್ರಜ್ಞೆಗೂ ಸಿಲುಕದಾ
ಸುಜ್ಞಾನ ಭೂಮಿ ಬೇರಿಹುದು ಅನುಭವದ
ಪ್ರಜ್ಞೆಗೇ ಸೇರಿ । ಬ್ರಹ್ಮಜ್ಞ ॥ 79 ॥

ಅದನೆ ತಿಳಿಸಲ್ಕೀಗ । ಒಗದಿಹುದು ಈ ಗ್ರಂಥ
ಬದಿಗಿರಿಸಿ ಪಕ್ಷಪಾತಗಳ ಪೂರ್ಣತೆಯ
ಪದದಿರವ । ಬ್ರಹ್ಮಜ್ಞ ॥ 80 ॥

## (ಪ್ರಮಾಣತರ್ಕದ ಉಪಸಂಹಾರ)

ವೇದಾಂತವನ್ನುಳಿದು । ಆದ ಶಾಸ್ತ್ರಗಳೆಲ್ಲ
ಭೇದವನೆ ನಂಬಿ ಹೊರಟಿಹವು ಪೂರ್ಣತೆಯ
ಹಾದಿತುಳಿಯದಲೆ । ಬ್ರಹ್ಮಜ್ಞ ॥ 81 ॥

ಅರಿಯೆ ವ್ಯವಹಾರದಲಿ । ಬರುವ ಕೆಲತರ್ಕಗಳು
ಸರಿಯಾಗಬಹುದು ಕೆಲದೂರ ಪರಿಯಂತ[1]
ಎರಡಿಲ್ಲವಿದಕೆ । ಬ್ರಹ್ಮಜ್ಞ ॥ 81 ॥

ಪರಮಾರ್ಥನಿರ್ಣಯಕೆ । ವರ ಶ್ರೌತತರ್ಕವೇ
ಗುರುತರದ ಮಾನವಿದು ನಿತ್ಯವೀ ವೇದ
ತರುವ ವಿಜ್ಞಾನ[2]। ಬ್ರಹ್ಮಜ್ಞ ॥ 83 ॥

ಅಳವಲ್ಲ ಊಹಿಸಲು । ಬಳಿಕಿನ್ನು ಪರಮಾರ್ಥ
ನಿಲುಕದಿದು ಪುರುಷಮತಿಗೆಂದೆ ಶ್ರುತಿಯಲ್ಲಿ
ತಿಳಿಸಿಹುದು ಕೇಳಿ[3]। ಬ್ರಹ್ಮಜ್ಞ ॥ 84 ॥

---

1. ಸೂ. ಭಾ. 2-1-11 (ಭಾ. ಭಾ. 428)ರಲ್ಲಿ 'ಯದ್ಯಪಿ ಕ್ವಚಿದ್ ವಿಷಯೇ ತರ್ಕಸ್ಯ' ಎಂಬ ಭಾಗವನ್ನು ನೋಡಿರಿ.

2. ಸೂ. ಭಾ. 2-1-11 (ಭಾ. ಭಾ. 429)ರಲ್ಲಿ 'ವೇದಸ್ಯ ತು ನಿತ್ಯತ್ವೇ' ಎಂಬ ವಾಕ್ಯವನ್ನು ಗಮನಿಸಿರಿ.

3. ಸೂ. ಭಾ. ಭಾ. 428ರಲ್ಲಿಯೇ ಇರುವ 'ನ ಹಿ ಇದಮತಿಗಂಭೀರಮ್' ಎಂಬ ವಾಕ್ಯವನ್ನು ಗಮನಿಸಿರಿ.

ಪುರುಷಬುದ್ಧಿಗೆ ಮತ್ತೆ । ಪರಿಪರಿಯ ಮಾರ್ಪಾಡು
ಬರುತಿಹುದು ಕಾಲದೇಶಕ್ಕೆ ತಕ್ಕಂತೆ
ಪರಿವಿಡಿದು ಜಗದಿ । ಬ್ರಹ್ಮಜ್ಞ ॥ 85 ॥

ತರ್ಕದಿಂ ತಿಳಿಯಲ್ಕೆ । ತಕ್ಕುದಲ್ಲಿದು ತತ್ತ್ವ
ತಕ್ಕಂತೆ ಗುರುವು ತಿಳಿಸಿದರೆ ತಿಳಿವುದೆಂ-
ಬುಕ್ತಿ ಕಾಠಕವು[1]। ಬ್ರಹ್ಮಜ್ಞ ॥ 86 ॥

ಶ್ರುತಿಯಲ್ಲಿ ಸತ್ತರ್ಕ । ತತಿಗಳನ್ನು ತಿಳಿಸಿಹುದು
ಮತಿಯಲ್ಲಿ ಅದನು ಅನಸರಿಸೆ ಜಿಜ್ಞಾಸು
ಕೃತಕೃತ್ಯನಕ್ಕು । ಬ್ರಹ್ಮಜ್ಞ ॥ 87 ॥

## (3) ಶ್ರೌತತರ್ಕ

ಮೂರನೆಯ ಬಗೆಯದೀ । ಸಾರ ಶ್ರೌತದ ತರ್ಕ
ತೋರಿಹರು ಇದನು ಸತ್‌ಸಾಂಪ್ರದಾಯಿಕರು
ಧೀರತನದಿಂದೆ । ಬ್ರಹ್ಮಜ್ಞ ॥ 88 ॥

ಹೇಳುವೆನು ಇನ್ನಿದರ । ಮೂಲತತ್ತ್ವಗಳನ್ನು
ಮೇಲಿದನು ಶ್ರುತಿಯು ಸಾಗಿಸುವ ಕ್ರಮವನ್ನು
ಕೇಳಿ ತರ್ಕವನು । ಬ್ರಹ್ಮಜ್ಞ ॥ 89 ॥

ಗರೆದಿಹರು ಭಾಷ್ಯದಲಿ । ಗುರುವರ್ಯ ಶಂಕರರು
ಪರಿಪರಿಯ ಗ್ರಂಥಗಳಲಿದನು ಶ್ರೀಗಳೀ-
ಗರುಹಿದರು ಬರೆದು । ಬ್ರಹ್ಮಜ್ಞ ॥ 90 ॥

### (ಶ್ರೌತತರ್ಕದ ಸ್ವರೂಪ)

ಕಾಲದೇಶಕೆ ಕಟ್ಟು । ಬೀಳದಿಹ ತರ್ಕವಿದು
ಮೇಲಾದ ಕರಣ ಪ್ರತ್ಯಕ್ಷ ಮೊದಲಾದ
ಜಾಲ ಮೀರಿಹುದು । ಬ್ರಹ್ಮಜ್ಞ ॥ 91 ॥

'ನಾನು' ಎಂಬುದನಿಟ್ಟು । ಮಾನಗಳ ಮುಂದಿಟ್ಟು
ಕಾಣುತಿಹ ವಸ್ತುಗಳ ಪರಿಕ್ಷಿಸುವ-
ದೇನಿಲ್ಲವಿಲ್ಲಿ । ಬ್ರಹ್ಮಜ್ಞ ॥ 92 ॥

1. ಕ. ಭಾ. 1-2-9 (ಭಾ. ಭಾ. 59)ನ್ನು ನೋಡಿರಿ.

ಇದಕೆ ಹಿಂದೆಯೆ ಇಲ್ಲಿ1 ಮುದದಿಂದ ತಿಳಿಸಿರುವ
ಪದಗಳನ್ನು ನೋಡಿ ಅನುಭವದ ಬಗೆಯಲ್ಲಿ
ಅದೆ ಮೂಲವಿದಕೆ । ಬ್ರಹ್ಮಜ್ಞ ॥ 93 ॥

ಸಾಕ್ಷಿಯನುಭವವಿದರ । ಲಕ್ಷ್ಯವಾಗಿರುತಿರಲು
ಈಕ್ಷಿಪುದು ತರ್ಕವನುಭವದ ನೆರಳಿನ ಸು-
ರಕ್ಷಿತದ ಮಾರ್ಗ । ಬ್ರಹ್ಮಜ್ಞ ॥ 94 ॥

ಬುದ್ಧಿಯನು ಸಾಕ್ಷಿಯಾ । ಶುದ್ಧದನುಭವದಲ್ಲಿ
ಅದ್ದದ್ದಿ ಕೊನೆಗೆ ಕರಗಿಪುದೆ ಈ ತರ್ಕ
ದುದ್ದೇಶವಿಹುದು । ಬ್ರಹ್ಮಜ್ಞ ॥ 95 ॥

ಉಪ್ಪಿನಾ ಬೊಂಬೆಯದು । ಅಪ್ಪಿರಲು ಸಾಗರವ
ತಪ್ಪದಲೆ ಜಲವೆ ಆದಂತೆ ಈ ಬುದ್ಧಿ-
ಯಪ್ಪುದಾ ಸಾಕ್ಷಿ । ಬ್ರಹ್ಮಜ್ಞ ॥ 96 ॥

ಈ ರೀತಿ ತೋರಿಸಲು । ಕಾರಣವು ಶ್ರುತಿಯಿರಲು
ಧೀರನಾ ಗುರುವು ತಿಳಿಪನದ ಜಿಜ್ಞಾಸು
ಸೇರುವನು ಸಾಕ್ಷಿ । ಬ್ರಹ್ಮಜ್ಞ ॥ 97 ॥

ಗುರುಶಾಸ್ತ್ರವಿಲ್ಲದಿರೆ । ಬರದು ಈ ಸತ್ತರ್ಕ
ಹೊರನೋಟ ಸಹಜಬುದ್ಧಿಗದು ಒಳನೋಟ
ಪರಮದುರ್ಲಭವು । ಬ್ರಹ್ಮಜ್ಞ ॥ 98 ॥

ಬಲುಬುದ್ಧಿ ಇದ್ದರೂ । ತಿಳಿದು ಓದಿದ್ದರೂ
ತಿಳಯಲ್ಕೆ ಬರದು ಆಚಾರ್ಯನಿಲ್ಲದಲೆ
ಬಲು ಯತ್ನ ವ್ಯರ್ಥ । ಬ್ರಹ್ಮಜ್ಞ ॥ 99 ॥

ಈ ಮಾತು ಮುಂಡಕದ । ಆ ಮಹಾಭಾಷ್ಯದಲಿ
ನೇಮದಿಂ ಬರೆದು ತಿಳಿಸಿಹರು ಶಂಕರರು
ಪ್ರೇಮದಿಂ ನೋಡಿ । ಬ್ರಹ್ಮಜ್ಞ ॥ 100 ॥

### (ಶ್ರೌತತರ್ಕದ ವೈಶಿಷ್ಟ್ಯ)

ಲೋಕ ಬೇಹಾರದಲಿ । ಬೇಕಿರುವ ಶಬ್ದಗಳ
ಲೋಕವನು ಮೀರ್ದ ಅನುಭವವ ತಿಳಿಸಲ್ಕೆ
ಹಾಕಿಹುದು ಶ್ರುತಿಯು । ಬ್ರಹ್ಮಜ್ಞ ॥ 101 ॥

1. ಇದೇ ಗ್ರಂಥದ ಎರಡನೆಯ ಅಧ್ಯಾಯದಲ್ಲಿ 46 ರಿಂದ 64 ರವರೆಗಿನ ಪದ್ಯಗಳನ್ನು ನೋಡಿರಿ. 2. ಮುಂ. ಭಾ. 1-2-12 (ಭಾ. ಭಾ. 47)ನ್ನು ನೋಡಿರಿ.

ಆ ಶಬ್ದಗಳ ಹಿಡಿದು । ಆಶಯವ ಗ್ರಹಿಸಲ್ಕೆ
ತಾ ಸರಿದು ಹಿಂದೆ ಸಾಕ್ಷಿಯೇ ಆಗುವನು
ಲೇಸಾಗಿ ನೋಡಿ । ಬ್ರಹ್ಮಜ್ಞ ॥ 102 ॥

ಇದರಂತೆ ಲೋಕದಲಿ । ಒದಗಿರುವ ಭಾವಗಳ
ಇದೆ ಯುಕ್ತಿ ಹೂಡಿ ತಿಳಿಸಲ್ಕೆ ಸಾಕ್ಷಿಯನೆ
ಹದನಾಗಿ ಸೇರ್ವ । ಬ್ರಹ್ಮಜ್ಞ ॥ 103 ॥

ದೃಷ್ಟಾಂತಗಳ ಪೇಳೆ । ಶಿಷ್ಟವಹ ಶ್ರುತಿಯಲ್ಲಿ
ಇಟ್ಟಿಹುದು ತತ್ತ್ವತಾನಾಗಿ ನೆಲಸಲ್ಕೆ
ಗುಟ್ಟಿದನು ತಿಳಿಗು । ಬ್ರಹ್ಮಜ್ಞ ॥ 104 ॥

ಬಾಧೆಯಿಲ್ಲದ ಪೂರ್ಣ । ಬೋಧೆ ಬರುವೀ ತರ್ಕ
ಶೋಧನೆಯ ಬಿಡದೆ ಜಿಜ್ಞಾಸು ನಡೆಸುವದೆ
ಹಾದಿಯಿದು ಮನನ । ಬ್ರಹ್ಮಜ್ಞ ॥ 105 ॥

ಈಗ ಕೆಲತರ್ಕಗಳ । ರಾಗದಿಂ ತಿಳಿಸುವೆನು
ಸಾಗಿಸಿಹುದಿದನೆ ಎಲ್ಲೆಡೆಗು ಶ್ರುತಿಯಲ್ಲಿ
ಹೀಗೆಯೇ ಬಳಸಿ । ಬ್ರಹ್ಮಜ್ಞ ॥ 106 ॥

**(ಶ್ರೌತತರ್ಕದ ನಮೂನೆಗಳು)**

ಇರುಲು ಎಚ್ಚರ ತನಗೆ । ಇರದು ಕನಸಾವಾಗ
ಇರಲಾಗಿ ಕನಸು ಎಚ್ಚರವು ಇರದೆಂಬು-
ದರಿಯಬೇಕಿದನು । ಬ್ರಹ್ಮಜ್ಞ ॥ 107 ॥

ತಾನು ಇರದವನಲ್ಲ । ತಾನೆ ಇವಕಾಧಾರ
ತಾನೆ ಇವು ಆಗಿ ತೋರಿಹನು ತನಗಿನ್ನು
ಏನಿಲ್ಲ ಬಾಧೆ । ಬ್ರಹ್ಮಜ್ಞ ॥ 108 ॥

ಇದರಿಂದೆ ತರ್ಕಿಪುದು । ಮುದದಿ ಆತ್ಮನು ತಾನು
ಒದಗಿಲ್ಲ ಕನಸು ಎಚ್ಚರದ ಲೇಪ ತನ-
ಗಿದನು ಅರಿಯಲ್ಕೆ । ಬ್ರಹ್ಮಜ್ಞ ॥ 109 ॥

ಗಾಢನಿದ್ರೆಯು ಬರಲು । ಓಡುವವು ಮಿಕ್ಕೆರಡು
ನೋಡಲ್ಕೆ ತನ್ನ ಅನುಭವವ ತಾನಿರುವ
ಗೂಢ ತಿಳಿಯುವದು । ಬ್ರಹ್ಮಜ್ಞ ॥ 110 ॥

ಇಲ್ಲ ತನ್ನೊಳಗಾಗ । ಬಲ್ಲಂತೆ ಸಂಸಾರ
ಇಲ್ಲವಿವು 'ನಾನು, ಇದು' ಎಂಬ ಭಾವಗಳು
ಎಲ್ಲಿಹವು ನೋಡೆ । ಬ್ರಹ್ಮಜ್ಞ ॥ 111 ॥

ಇದರಿಂದ ತರ್ಕಿಪುದು । ಒದಗಿಲ್ಲ ಸಂಸಾರ
ಇದು ನಿಜದಿ ತನಗೆ ತಾ ನಿಷ್ಪ್ರಪಂಚನಿಹ
ಇದನರಿವುದಿಲ್ಲಿ । ಬ್ರಹ್ಮಜ್ಞ ॥ 112 ॥

ಕಾರಣವ ಬಿಟ್ಟಿರದು । ಕಾರಿಯವು ನಿತ್ಯದಲಿ
ತೋರುತಿಹ ಘಟವು ಮಣ್ಣಿನಿಂದೆಂದಿಗೂ
ಬೇರಿರದ ತೆರದಿ । ಬ್ರಹ್ಮಜ್ಞ ॥ 113 ॥

ಬೊಮ್ಮವೇ ಕಾರಣವು । ಹಮ್ಮಿದೀ ಜಗಕೆಲ್ಲ
ಒಮ್ಮೆ ಶ್ರುತಿ ಸಾರಿ ತಿಳಿಸಲ್ಕೆ ತರ್ಕಿಪುದು
ಬೊಮ್ಮವೇ ನಿಜವು । ಬ್ರಹ್ಮಜ್ಞ ॥ 114 ॥

ತಾನಿಲ್ಲದಿಲ್ಲ ಜಗ । ತಾನು ಜಗವಿಲ್ಲದಿಹ
ಸ್ವಾನುಭವ ನೋಡಿ ಜಗಕೆಲ್ಲ ಕಾರಣನು
ತಾನ್ಯೆಸೆ ತಿಳಿಯೆ[1]। ಬ್ರಹ್ಮಜ್ಞ ॥ 115 ॥

**(ಶ್ರೌತತರ್ಕದ ರಹಸ್ಯ)**

ಇಲ್ಲಿ ಗುಟ್ಟೊಂದಿಹುದು । ಬಲ್ಲವರು ಈಕ್ಷಿಸಿರಿ
ಇಲ್ಲಿರುವ ಶಬ್ದ ಲೌಕಿಕದವಾಗಿರಲು
ಸಲ್ಲದಾ ಭಾವ । ಬ್ರಹ್ಮಜ್ಞ ॥ 116 ॥

ಇರುವಾಗ ಎಚ್ಚರವು । ಇರಲಾರದಾ ಸ್ವಪ್ನ
ಇರುವದೀ ವಾಕ್ಯದೊಳು ಕಾಲವಾಚಕದ
ವರಶಬ್ದ 'ಆಗ' । ಬ್ರಹ್ಮಜ್ಞ ॥ 117 ॥

ಈ ಶಬ್ದಕರ್ಥವದು । ಲೇಸಲ್ಲ ಕಾಲ ಮೇಣ್
ಭಾಸಿಸುವದಿದುವೆ ಕಾಲಕ್ಕೆ ಮಿರ್ದ ನಿಜ
ಲೇಸಿನನುಭವವ । ಬ್ರಹ್ಮಜ್ಞ ॥ 118 ॥

ಎಲ್ಲಿ ನಿದ್ರಿಸುತಿಹನೊ । ಅಲ್ಲಿ ಇನ್ನೊಂದಿರದು
'ಎಲ್ಲಿ' ಎನೆ ದೇಶವಾಚಕವು ತಾನಲ್ಲ
ಮೆಲ್ಲನಿದ ನೋಡಿ । ಬ್ರಹ್ಮಜ್ಞ ॥ 119 ॥

1. ಪದ್ಯ 107 ರಿಂದ 115ರ ವಿಷಯಕ್ಕೆ ಸೂ. ಭಾ. 2-1-6 (ಭಾ. ಭಾ. 418) ನ್ನು ನೋಡಿರಿ.

ಲೋಕದಾ ಶಬ್ದಗಳ । ಜೋಕೆಯಲಿ ಹೇಳುತಿರೆ
ಲೋಕವನು ದಾಟಿ ನಿಂತಿರುವ ಅನುಭವದ
ಸ್ವೀಕಾರ ಮುಖ್ಯ । ಬ್ರಹ್ಮಜ್ಞ ॥ 120 ॥
ದೇಶಕಾಲಗಳೆಲ್ಲ । ಮೀಸಲೆಚ್ಚರದಲ್ಲಿ
ಲೇಸಾಗಿ ಕನಸು ಕಾಂಬಾಗ ಕನಸಿಗೂ
ಮೀಸಲಾಗಿಹವು[1] । ಬ್ರಹ್ಮಜ್ಞ ॥ 121 ॥
ನಿದ್ದೆಯಲಿ ಏನೊಂದು ಸುದ್ದಿ ಇರದಿವುಗಳದು
ಇದ್ದಿಹುದು ಇಂತು ಅನುಭವವು ಎಲ್ಲರಿಗೂ
ಸದ್ಯದಲಿ ನೋಡಿ । ಬ್ರಹ್ಮಜ್ಞ ॥ 122 ॥
ಅದರಿಂದೆ ಈ ಶೃತಿಯು । ಒದಗಿಸಿದ ಶಬ್ದಗಳು
ಹದವರಿತು ಮತಿಯನನುಭವದಿ ಮುಳುಗಿಸುವ-
ವಿದು ಗುರಿಯು ದಿಟಕೆ । ಬ್ರಹ್ಮಜ್ಞ ॥ 123 ॥
ಕಾರಣವು ಎಂದೊಡನೆ । ತೋರ್ಪುದರ ಪರಮಾರ್ಥ[2]
ಸೇರಿಹುದು ಇಲ್ಲಿ ಈ ಅರ್ಥ ಸಾರ್ಥಕವು
ಬೇರೆ ಬಗೆ ವ್ಯರ್ಥ । ಬ್ರಹ್ಮಜ್ಞ ॥ 124 ॥
ಕಾರ್ಯವೆನೆ ಹುಸಿತೋರ್ಕೆ । ಸರ್ವರೂ ಇದನರಿಗು
ಕಾರ್ಯವಿದು ಮಾತು ಮಾತ್ರವೇ ಎಂಬ ಶ್ರುತಿ
ಸರ್ವತ್ರ ಮಾನ್ಯ । ಬ್ರಹ್ಮಜ್ಞ ॥ 125 ॥
ಈರೀತಿ ತರ್ಕಗಳ । ದಾರಿಯನುಸರಿಸುತ್ತ
ಮೀರುತ್ತ 'ನಾನು, ಇವು'ಗಳನು ಜಿಜ್ಞಾಸು
ಸೇರುವನು ನಿಜವ । ಬ್ರಹ್ಮಜ್ಞ ॥ 126 ॥

**(ಶ್ರೌತತರ್ಕದ ಆಬಾಧ್ಯ)**

ಇಂಥ ತರ್ಕದಿ ಬಂದ । ಸ್ವಂತದನುಭವಗಳನು
ಮುಂತಿನ್ನು ಕೆಡಿಸಿ ತೋರಿಸುವ ತರ್ಕವಿ-
ನ್ನೆಂತು ಬಾಳುವದು ? । ಬ್ರಹ್ಮಜ್ಞ ॥ 127 ॥

---

1. ಈ ವಿಷಯಕ್ಕೆ **"ಪರಮಾರ್ಥಚಿಂತಾಮಣಿ"** ಪುಟ 34 ರಿಂದ 37ನ್ನು ನೋಡಿರಿ.

2. ವೇದಾಂತದರ್ಶನದಲ್ಲಿ ಕಾರಣ ಎಂದರೆ ಹುಸಿತೋರಿಕೆಗೆ ಆಧಾರವಾಗಿರುವ ಪರಮಾರ್ಥವೆಂದೂ ಕಾರ್ಯವೆಂದರೆ ಹುಸಿತೋರಿಕೆಯೆಂದೂ ಅರ್ಥ.

3. ಸೂ. ಭಾ. 2-1-11 (ಭಾ.ಭಾ. 429)ರಲ್ಲಿ "ಜ್ಞಾನಸ್ಯ ಸಮ್ಯಕ್ತ್ವಮ್ ಅತೀತಾನಾಗತವರ್ತಮಾನೈಃ ಸರ್ವೈರಪಿ ತಾರ್ಕಿಕೈಃ ಅಪಹ್ನೋತುಮಶಕ್ಯಮ್" ಎಂಬ ವಾಕ್ಯವನ್ನು ನೋಡಿರಿ

ಪ್ರಬಲವೀ ಶ್ರುತಿತರ್ಕ । ಅಬಲ ಮಿಕ್ಕಿನದೆಲ್ಲ
ಕಬಳಿಪುದು ದ್ವೈತವೆಲ್ಲವನು ಈ ತರ್ಕ
ಅಭಯಪದ ತಿಳಿಯೆ । ಬ್ರಹ್ಮಜ್ಞ ॥ 128 ॥

(ಪ್ರಮಾಣತರ್ಕದ ಎಲ್ಲೆಕಟ್ಟು)

ಬರಬಹುದು ವ್ಯತ್ಯಾಸ । ಬರಿ ತರ್ಕಶಾಸ್ತ್ರದಲಿ
ಇರಿಸಿರುವ ನಿಯಮಗಳಿಗೆಲ್ಲ ಆದಡಿದು
ಪರಮಾರ್ಥ ಸತ್ಯ । ಬ್ರಹ್ಮಜ್ಞ ॥ 129 ॥

ವ್ಯವಹಾರಕ್ಷೇತ್ರದಲಿ । ಇವಕೆಲ್ಲ ಬೆಲೆಯುಂಟು
ವ್ಯವಹಾರ ಮೀರ್ದ ಅನುಭವದ ಕ್ಷೇತ್ರದಲಿ
ಇವಕೇನು ಬೆಲೆಯು ? । ಬ್ರಹ್ಮಜ್ಞ ॥ 130 ॥

(ಪ್ರಮಾಣತರ್ಕಕ್ಕೆ ಉದಾಹರಣೆ)

ಆತ್ಮನದ್ವಯನಿಹನು । ಮತ್ತೆ ಅವ ಜಗವಾಗಿ
ಮತ್ತಿಹನು ತನ್ನ ನಿಜರೂಪದಿಂದಲೂ
ಸತ್ಯವಿದು ಕೇಳಿ । ಬ್ರಹ್ಮಜ್ಞ ॥ 131 ॥

ಆತ್ಮಾಶ್ರಯದ ದೋಷ । ಹತ್ತುವದು ಎನಬಹುದು
ಮತ್ತಿನ್ನು ತರ್ಕಶಾಸ್ತ್ರಿಗಳು ಆದೊಡೇಂ
ಹತ್ತದೀ ದೋಷ । ಬ್ರಹ್ಮಜ್ಞ ॥ 132 ॥

ತಾನು ಅದ್ವಯನಿಹನು । ಕಾಣುವನು ಕನಸನ್ನು
ತಾನಾಗಿ ಇಹನು ಕನಸಿನಲಿ ಎಲ್ಲವೂ
ತಾನೆ ತಾನಿಹನು । ಬ್ರಹ್ಮಜ್ಞ ॥ 133 ॥

ಅನುಭವವು ಹೀಗಿರಲು । ಕೆಣಕುವದು ತರವಲ್ಲ
ಮಣಿಯದಿದು ಲೋಕತರ್ಕಕ್ಕೆ ಪರಮಾರ್ಥ
ಘನವಾದುದಿಲ್ಲಿ । ಬ್ರಹ್ಮಜ್ಞ ॥ 134 ॥

ವೇದಾಂತತತ್ತ್ವವನು । ಆದರದಿ ತಿಳಿಯಲ್ಕೆ
ವೈದಿಕದ ಇಂಥ ತರ್ಕವೇ[1] ಬೇಕು ಮಿ–
ಕ್ಕುದದು ಬರಿ ತಕ್ರ[2]। ಬ್ರಹ್ಮಜ್ಞ ॥ 135 ॥

---

1. ಸೂ. ಭಾ. 2–1–6 (ಭಾ.ಭಾ. 418)ರಲ್ಲು "ಶ್ರುತ್ಯನುಗೃಹೀತ ಏವ ಹ್ಯತ್ರ ತರ್ಕಃ" ಎಂಬ ವಾಕ್ಯವನ್ನು ನೋಡಿರಿ.

2. ಶ್ರೌತತರ್ಕವನ್ನುಳಿದು ಮಿಕ್ಕ ತರ್ಕವೆಲ್ಲ ಬರೀಹುಳಿಮಜ್ಜಿಗೆಗೆ ಸಮಾನ ಎಂದರ್ಥ.

## (ಭಾಷ್ಯದಲ್ಲಿ ತರ್ಕಕ್ಕೆ ಸ್ಥಾನ)

ಭಾಷ್ಯಪ್ರಕ್ರಿಯೆ ತಿಳಿಯೆ । ಲೇಸು ಈ ಸತ್ತರ್ಕ
ಭಾಸಿಯಹ ಇತರ ವಾದಿಗಳ ತರ್ಕದಾ
ವಾಸನೆಯೆ ಬೇಡ । ಬ್ರಹ್ಮಜ್ಞ ॥ 136 ॥

ವಾದಿಗಳ ಜೊತೆಯಲ್ಲಿ । ಕಾದುವದು ಬೇಕಿಲ್ಲ
ಭೇದಿಸುತ ಅವರ ತಪ್ಪುಗಳ ತಿಳಿಸಲ್ಕೆ
ವಾದ ಮಾಡಿಹುದು । ಬ್ರಹ್ಮಜ್ಞ ॥ 137 ॥

ಹಟದಿಂದೆ ವಾದಿಸುವ । ಚಟವಿಲ್ಲವೆಮಗಿನ್ನು
ಶಠರನ್ನು ತಡೆದು ತೋರಿಸೆ ಮುಮುಕ್ಷುಗಳು
ದಿಟಕೆ ಹೊರಳುವರು । ಬ್ರಹ್ಮಜ್ಞ ॥ 138 ॥

ಈಗ ಜಿಜ್ಞಾಸುಗಳು । ತಾಗಬಾರದು ಬಲೆಗೆ
ಹೀಗೆಂದು ತರ್ಕ ತೋರಿಹೆವು ಅನುಭವಕೆ
ಆಗಿಲ್ಲ ಗುರಿಯು । ಬ್ರಹ್ಮಜ್ಞ ॥ 139 ॥

ಬಂದಿಹುದು ಈ ಮಾತು । ಒಂದುಸಲ ನಿಚ್ಚಳದಿ
ಚಂದದಲಿ ಪ್ರಶ್ನೆಯುಪನಿಷತ್ತಿನ ಕೊನೆಗೆ
ಬಂಧುರದ ಭಾಷ್ಯ[1]। ಬ್ರಹ್ಮಜ್ಞ ॥ 140 ॥

ವಾದವಿಲ್ಲದ್ದಿದುವು । ಆದುದಿಲ್ಲ ವಿರುದ್ಧ
ಶೋಧಿಸಲು ಯಾವ ಭಾವಕ್ಕೂ ಒಳಪಡದ
ಬೋಧೆಯಿದ ಕೇಳಿ[2]। ಬ್ರಹ್ಮಜ್ಞ ॥ 141 ॥

ಮದ್ದಾನೆ ಏರಿದನ । ಬುದ್ಧಿಗೆಟ್ಟಿಹ ಹುಚ್ಚ
ಗುದ್ದಾಡ ಕರೆಯೆ ಹೋಗುವನೆ ಮಾವಟಿಗ?
ಇದ್ದಿಹುದು ಹೀಗೆ[3]। ಬ್ರಹ್ಮಜ್ಞ ॥ 142 ॥

ಶ್ರೌತತರ್ಕವ ತಿಳಿಯೆ । ಏತರದು ಗುದ್ದಾಟ
ಪ್ರೀತಿಯಲಿ ಬರೆದ ಕಾರಿಕೆಯ ಭಾಷ್ಯಗಳ
ರೀತಿಯನು ನೋಡಿ । ಬ್ರಹ್ಮಜ್ಞ ॥ 143 ॥

---

1. ಪದ್ಯ 136 ರಿಂದ 140ರ ವಿಷಯಕ್ಕೆ ಪ್ರ. ಭಾ. 6–3 (ಭಾ. ಭಾ. 104)ರಲ್ಲಿ **"ಅತಸ್ತನ್ಮತಮನಾದೃತ್ಯ..."** ಇತ್ಯಾದಿ ವಾಕ್ಯವನ್ನು ನೋಡಿರಿ..
2. ಮಾಂ. ಕಾ. 4–2 (ಭಾ.ಭಾ. 216)ನ್ನು ನೋಡಿರಿ.
3. ಮಾಂ. ಕಾ. 3–18 (ಭಾ.ಭಾ. 163)ನ್ನು ನೋಡಿರಿ.

## (ಭಾಷ್ಯದಲ್ಲಿ ತರ್ಕಕ್ಕೆ ಸ್ಥಾನ)

ಭಾಷ್ಯಪ್ರಕ್ರಿಯೆ ತಿಳಿಯೆ । ಲೇಸು ಈ ಸತ್ತರ್ಕ
ಘಾಸಿಯಹ ಇತರ ವಾದಿಗಳ ತರ್ಕದಾ
ವಾಸನೆಯೆ ಬೇಡ । ಬ್ರಹ್ಮಜ್ಞ ॥ 136 ॥

ವಾದಿಗಳ ಜೊತೆಯಲ್ಲಿ । ಕಾದುವದು ಬೇಕಿಲ್ಲ
ಭೇದಿಸುತ ಅವರ ತಪ್ಪುಗಳ ತಿಳಿಸಲ್ಕೆ
ವಾದ ಮಾಡಿಹುದು । ಬ್ರಹ್ಮಜ್ಞ ॥ 137 ॥

ಹಟದಿಂದೆ ವಾದಿಸುವ । ಚಟವಿಲ್ಲವೆಮಗಿನ್ನು
ಶಠರನ್ನು ತಡೆದು ತೋರಿಸೆ ಮುಮುಕ್ಷುಗಳು
ದಿಟಕೆ ಹೊರಳುವರು । ಬ್ರಹ್ಮಜ್ಞ ॥ 138 ॥

ಈಗ ಜಿಜ್ಞಾಸುಗಳು । ತಾಗಬಾರದು ಬಲೆಗೆ
ಹೀಗೆಂದು ತರ್ಕ ತೋರಿಹೆವು ಅನುಭವಕೆ
ಆಗಿಲ್ಲ ಗುರಿಯು । ಬ್ರಹ್ಮಜ್ಞ ॥ 139 ॥

ಬಂದಿಹುದು ಈ ಮಾತು । ಒಂದುಸಲ ನಿಚ್ಚಳದಿ
ಚಂದದಲಿ ಪ್ರಶ್ನೆಯುಪನಿಷತ್ತಿನ ಕೊನೆಗೆ
ಬಂಧುರದ ಭಾಷ್ಯ[1]। ಬ್ರಹ್ಮಜ್ಞ ॥ 140 ॥

ವಾದವಿಲ್ಲದ್ದಿದುವು । ಆದುದಿಲ್ಲ ವಿರುದ್ಧ
ಶೋಧಿಸಲು ಯಾವ ಭಾವಕ್ಕೂ ಒಳಪಡದ
ಬೋಧೆಯಿದ ಕೇಳಿ[2]। ಬ್ರಹ್ಮಜ್ಞ ॥ 141 ॥

ಮದ್ದಾನೆ ಏರಿದನ । ಬುದ್ಧಿಗೆಟ್ಟಿಹ ಹುಚ್ಚ
ಗುದ್ದಾಡ ಕರೆಯೆ ಹೋಗುವನೆ ಮಾವಟಿಗ?
ಇದ್ದಿಹುದು ಹೀಗೆ[3]। ಬ್ರಹ್ಮಜ್ಞ ॥ 142 ॥

ಶ್ರೌತತರ್ಕವ ತಿಳಿಯೆ । ಏತರದು ಗುದ್ದಾಟ
ಪ್ರೀತಿಯಲಿ ಬರೆದ ಕಾರಿಕೆಯ ಭಾಷ್ಯಗಳ
ರೀತಿಯನು ನೋಡಿ । ಬ್ರಹ್ಮಜ್ಞ ॥ 143 ॥

---

1. ಪದ್ಯ 136 ರಿಂದ 140ರ ವಿಷಯಕ್ಕೆ ಪ್ರ. ಭಾ. 6–3 (ಭಾ. ಭಾ. 104)ರಲ್ಲಿ **"ಅತಸ್ತನ್ಮತಮನಾದೃತ್ಯ..."** ಇತ್ಯಾದಿ ವಾಕ್ಯವನ್ನು ನೋಡಿರಿ..
2. ಮಾಂ. ಕಾ. 4–2 (ಭಾ.ಭಾ. 216)ನ್ನು ನೋಡಿರಿ.
3. ಮಾಂ. ಕಾ. 3–18 (ಭಾ.ಭಾ. 163)ನ್ನು ನೋಡಿರಿ.

**(ಮುಂದಿನ ಸ್ಥಿತಿ)**

ಗುರು ಸುರೇಶ್ವರರುಳಿದು । ಬರೆದವರು ಮುಂದರಿಯ
ಮರೆತರೀ ತತ್ತ್ವ ವೇದಾಂತ ಶಾಸ್ತ್ರಕ್ಕೆ
ಬರೆಸಿದರು ತರ್ಕ । ಬ್ರಹ್ಮಜ್ಞ ॥ 144 ॥

ಆನುಶಾಂಕರರೆಲ್ಲ । ಮಾನಿಸುತ ತರ್ಕಗಳ
ಕಾನನವ ಹೊಗಿಸಿ ಜಿಜ್ಞಾಸು ಜನರಿಂಗೆ
ಹಾನಿ ಮಾಡಿದರು । ಬ್ರಹ್ಮಜ್ಞ ॥ 145 ॥

ಭೇದಿಸಲು ಭಾಷ್ಯವನು । ಓದುವದು ತರ್ಕವನು
ಓದಿದರೆ ತಿಳಿಯದಿದು ಎಂಬ ಭಾವನೆಯು
ಬಾಧಿಸಿತು ಜನಕೆ । ಬ್ರಹ್ಮಜ್ಞ ॥ 146 ॥

**(ಶ್ರೀಗಳವರ ಉಪಕಾರ)**

ಭಾಷ್ಯಗಳ ಕನ್ನಡಕೆ । ವೇಷಾಂತರದಿ ಬರಲು
ದೋಷವಿದು ತೊಲಗಿ ಜಿಜ್ಞಾಸು ವ್ರಾತಕ್ಕೆ
ಆಶ್ರಯವು ಬಂತು । ಬ್ರಹ್ಮಜ್ಞ ॥ 147 ॥

ದ್ವಾರವನು ತೆರೆದಾಯ್ತು । ಧೀರ ಶ್ರೀಗಳು ಇದನು
ಸಾರದಿರೆ ಇವರು ಭಾಷ್ಯಗಳ ತಿಳಿಯುವದು
ದೂರವೇ ಇತ್ತು । ಬ್ರಹ್ಮಜ್ಞ ॥ 148 ॥

ಸಂಸ್ಕೃತವು ತಿಳಿಯದಿರೆ । ಸಂಸ್ಕಾರ ಸ್ವಲ್ಪವಿರೆ
ಅಸ್ಖಲಿತವಾಗಿ ತಿಳಿವಂತೆ ಭಾಷ್ಯಗಳ
ಸುಸ್ಪಷ್ಟ ಬರಹ । ಬ್ರಹ್ಮಜ್ಞ ॥ 149 ॥

ಸದ್ಯಕ್ಕೆ ತರ್ಕಗಳ । ಸಿದ್ಧಾಂತಗಳ ಬಗೆಗೆ
ಉದ್ಧರಿಸಿ ಇಲ್ಲಿ ಹೇಳಿರುವ ಗ್ರಂಥಗಳೆ
ಮದ್ದುಗಳು ನೋಡಿ । ಬ್ರಹ್ಮಜ್ಞ ॥ 150 ॥

---

1. **'ಜೀವಂತವೇದಾಂತ'** ಎಂಬ ಶ್ರೀಗಳವರ ಗ್ರಂಥ.
2. **'ಪರಿಪೂರ್ಣದರ್ಶನ'** ಎಂಬ ಶ್ರೀಗಳವರ ಗ್ರಂಥ.

'ಜೀವಂತವೇದಾಂತ'[1] । ಸಾವಧಾನದಿ ನೋಡಿ
ಈವುದಿದು ಗ್ರಂಥ 'ಪರಿಪೂರ್ಣದರ್ಶನ'ವ[2]
ಜೀವಕಳೆ ಬಕ್ಕು । ಬ್ರಹ್ಮಜ್ಞ ॥ 151 ॥

ಶಂಕರರ ವೇದಾಂತ । ಅಂಕಿತದ ಪ್ರಕ್ರಿಯೆಯ[1]
ಶಂಕೆಯನು ಬಿಟ್ಟು 'ಸಾರ'[2] ವನು ಸಹ ನೋಡಿ
ಮಂಕು ತೊಲಗುವದು । ಬ್ರಹ್ಮಜ್ಞ ॥ 152 ॥

ಆಂಗ್ಲದಲಿ ಸಂಸ್ಕೃತದಿ । ಇಂಗಿತವನರಿಯಲ್ಕೆ
ಏಂಗಡದ ಬರಹ ಬಹಳಿಹವು ಬಲ್ಲವರ
ಸಂಗದಿಂದರಿಗು । ಬ್ರಹ್ಮಜ್ಞ ॥ 153 ॥

ಮುಂದೆ ವೇದಾಂತದಲಿ । ಬಂದಿರುವ ಪ್ರಕ್ರಿಯೆಯ
ಚಂದಗಳ ತಿಳಿಸೆ ಯತ್ನಿಸುವೆ । ಕೇಳುವದು
ಒಂದೆ ಮನದಿಂದೆ । ಬ್ರಹ್ಮಜ್ಞ ॥ 154 ॥

---

1. **'ಶಾಂಕರವೇದಾಂತಪ್ರಕ್ರಿಯೆ'** ಎಂಬ ಶ್ರೀಗಳವರ ಗ್ರಂಥ.
2. **'ಶಾಂಕರವೇದಾಂತಸಾರ'** ಎಂಬ ಶ್ರೀಗಳವರ ಗ್ರಂಥ. ಇವೆಲ್ಲವೂ ಕಾರ್ಯಾಲಯದಲ್ಲಿ ದೊರೆಯುವವು.

# ಏಳನೆಯ ಅಧ್ಯಾಯ

## ಆತ್ಮವಿಜ್ಞಾನದಿಂದಲೇ ಮೋಕ್ಷ

ತಾನು ತನ್ನನ್ನು ತಿಳಿಯೆ । ಹಾನಿಯಪ್ಪುದು ಭವವು
ಏನಿಲ್ಲ ಶೋಕಮೋಹಗಳು ಏಕತ್ವ
ತಾನಾದಮೇಲೆ[1]। ಬ್ರಹ್ಮಜ್ಞ ॥ 1 ॥

ಮನಕೆ ಮನವೀ ತತ್ತ್ವ । ಪ್ರಾಣಕ್ಕೆ ಪ್ರಾಣವಿದು
ಅನುಮಾನವಿಲ್ಲ ಇದೆ ಬೊಮ್ಮವಿದೆ ನೀನು
ಮನುಜನಿದನರಿಗು[2]। ಬ್ರಹ್ಮಜ್ಞ ॥ 2 ॥

ನಾನಾತ್ವವಿಲ್ಲವಿದು । ತಾನೊಂದೆ ತೋರುವದು
ನಾನಾತ್ವವಾದ ತೆರನಂತೆ ನಿಜವಾಗಿ
ಏನಾಗಲಿಲ್ಲ[3]। ಬ್ರಹ್ಮಜ್ಞ ॥ 3 ॥

ಅರಿವೆಂಬುದೇ ಬೊಮ್ಮ । ಅರಿವೆ ತಾನಾಗಿಹನು
ಅರಿತವನು ತಾನೆ ಪರಬೊಮ್ಮ ನಿಜವೆಂದು
ಮರಳನೀ ಭವಕೆ[4]। ಬ್ರಹ್ಮಜ್ಞ ॥ 4 ॥

ಬೊಮ್ಮವನು ತಿಳಿದವನು । ಬೊಮ್ಮವೇ ಆಗುವನು
ಬೊಮ್ಮವೇ ಪರವು ಆನಂದವದರಿಂದೆ
ಬೊಮ್ಮವನ್ನರಿಗೆ[5]। ಬ್ರಹ್ಮಜ್ಞ ॥ 5 ॥

ಪರವಿದ್ಯೆ ಎಂಬುದಿದೆ । ಬರಿ ವೇದಗಳ ಕಲಿಯೆ
ಬರದಿದುವೆ ಗುರುವಿನುಪದೇಶ ತನ್ನೊಳಗೆ
ಅರಿಯಲ್ಕೆ ಬಕ್ಕು[6]। ಬ್ರಹ್ಮಜ್ಞ ॥ 6 ॥

ಹದಿನಾರು ಕಲೆಗಳಲಿ । ಹುದುಗಿರ್ದ ನಿಷ್ಕಲನೆ
ಸದಸತ್ತು ಭಾವಗಳ ಮೀರಿ ತಾನಾದ
ಹದವನರಿಯುವದು[7]। ಬ್ರಹ್ಮಜ್ಞ ॥ 7 ॥

---

1. ಈಶ, 7.
2. ಕೇನ, 1–2–, 1–5.
3. ಕಠ, 2–1–11.
4. ಐತ. 3–1–3.
5. ತೈ. 2–1.
6. ಮುಂ. 1–1–5.
7. ಪ್ರಶ್ನ. 6–2.

ಸತ್ಯವೆಲ್ಲವು ಬೊಮ್ಮ । ಆತ್ಮವೇ ಈ ಬ್ರಹ್ಮ
ತತ್ತ್ವವಿದನೊಂದರಿಯಲ್ಕೆ ಎಲ್ಲವನು
ಮತ್ತರಿದ ತೆರವೆ[1]। ಬ್ರಹ್ಮಜ್ಞ ॥ 8 ॥

ಎಲ್ಲಕ್ಕು ಮೂಲಾಗಿ । ಎಲ್ಲವೂ ತಾನಾಗಿ
ಉಳ್ಳ ನಿಜ ಸೂಕ್ಷ್ಮತತ್ತ್ವವದೆ ನೀನಾಗಿ
ಇಲ್ಲಿ ನಿಂದಿರುವಿ[2]। ಬ್ರಹ್ಮಜ್ಞ ॥ 9 ॥

ಆತ್ಮನಾ ಬಗೆ ಕೇಳು । ಮತ್ತೆ ಮನನವ ಮಾಡು
ಆತ್ಮನಲೆ ಲಕ್ಷ್ಯ ನಿಲಿಸುವದೆ ದರ್ಶನಕೆ
ಉತ್ತಮದ ಮಾರ್ಗ[3]। ಬ್ರಹ್ಮಜ್ಞ ॥ 10 ॥

ಸರುವ ಕ್ಷೇತ್ರಗಳಲ್ಲಿ । ಇರುತಿರುವ ಕ್ಷೇತ್ರಜ್ಞ
ಅರಿ ನಾನೆ ನಿಜದಿ ಪರಮಾತ್ಮರೂಪವೇ
ಅರಿಯಲಿದ ಮುಕ್ತಿ[4]। ಬ್ರಹ್ಮಜ್ಞ ॥ 11 ॥

### (ಆತ್ಮವಿಜ್ಞಾನಕ್ಕೆ ಸಾಧನಗಳು)

ಹೀಗೆ ಶ್ರುತಿಸ್ಮೃತಿ ಪೇಳ್ವೇ । ಹೇಗೆ ನಮಗನುಭವಕೆ
ತಾಗುವದು ತತ್ತ್ವವೆನೆ ಸಾಧನೆಗಳಿಂದೆ
ಆಗುವದು ಇದುವೆ । ಬ್ರಹ್ಮಜ್ಞ ॥ 12 ॥

ಬರುವದೀ ವಿಜ್ಞಾನ । ಸರಿಯಾದ ಸಾಧನದಿ
ವರಶ್ರುತಿಯು ಪೇಳ್ದ ಪರಿ ನಡೆಯಲೀಗ ತಾ
ಪರಮಪದವಕ್ಕು । ಬ್ರಹ್ಮಜ್ಞ ॥ 13 ॥

ಬೇರಿಲ್ಲ ಜ್ಞಾನಕ್ಕೆ । ನೇರಸಾಧನೆ ಮತ್ತೆ
ಮೂರಾದ ಮುಖ್ಯವಿವು ಅಂತರಂಗಕ್ಕೆ[5]
ಸೇರಿಹವು ಸತ್ಯ । ಬ್ರಹ್ಮಜ್ಞ ॥ 14 ॥

ಶ್ರವಣಮನನವು ಮೇಣು । ತವೆ ನಿದಿಧ್ಯಾಸನವು
ಅವಿರತದಿ ನಡೆಯೆ ವಿಜ್ಞಾನದುತ್ಪತ್ತಿ
ಸವನಿಪುದು ದಿಟದಿ। ಬ್ರಹ್ಮಜ್ಞ ॥ 15 ॥

---

1. ಮಾಂ. 2. 2. ಛಾಂ. 6-8-7.

3. ಬೃ. 2-4-5 4. ಗೀ. 12-2

5. ತೈ. 1-11 (ಭಾ.ಭಾ. 85) ಮತ್ತು ಸೂ. ಭಾ. 4-1-18 (ಭಾ.ಭಾ. 537) ರಲ್ಲಿ 'ಶ್ರವಣಮನನಶ್ರದ್ಧಾತಾತ್ಪರ್ಯಾದ್ಯನ್ತರಙ್ಗಕಾರಣಾಪೇಕ್ಷಮ್' ಎಂಬುದನ್ನು ನೋಡಿರಿ.

ಇವುಗಳೊಟ್ಟಿಗೆ ಸೇರಿ । ಸವನಿಪುದು ನಿಶ್ಚಲತೆ
ಇವುಗಳಾ ಕೊನೆಯೆ ಸಹಜಾತ್ಮನಿಷ್ಠೆಯನು–
ಭವಕಿದುವೆ ವೇದ್ಯ । ಬ್ರಹ್ಮಜ್ಞ ॥ 16 ॥

## (ಉತ್ತಮಾಧಿಕಾರಿಯ ಲಕ್ಷಣ)

ಉತ್ತಮದ ಅಧಿಕಾರಿ । ಮತ್ತೆ ತಾನಾಗಿರಲು
ಉಕ್ತಿಯಿದ ಕೇಳಿ ಲಕ್ಷಿಸಿದಮಾತ್ರಕ್ಕೆ
ತತ್ತ್ವದಲಿ ನಿಲುವ[1] । ಬ್ರಹ್ಮಜ್ಞ ॥ 17 ॥

ಶ್ರವಣಕಾಲದಿ ಮನನ । ಅವಗೆ ನಡೆದಿರುತಿಹುದು
ತವೆ ಲಕ್ಷ್ಯಕೊಡಲು ತನ್ನೊಳೆ ನಿದಿಧ್ಯಾಸ
ಇವು ಎಲ್ಲ ನಡೆಗು । ಬ್ರಹ್ಮಜ್ಞ ॥ 18 ॥

ಮತ್ತೆ ಬೋಧಕನಿಲ್ಲಿ । ತತ್ತ್ವಕ್ಕನನ್ಯದಲಿ
ನಿತ್ಯವೂ ನಿಂತು ಬೋಧಿಸಲು ಕೇಳುವವ–
ನಾತ್ಮನೇ ಅಕ್ಕು[2] । ಬ್ರಹ್ಮಜ್ಞ ॥ 19 ॥

ಹೇಳುವವ ಕೇಳುವವ । ಮೇಳೈಸಿ ನಾನೆಂಬ
ಗೀಳನ್ನು ಬಿಟ್ಟು ನಿಂದಿರಲು ಶ್ರವಣದಲಿ
ತಾಳ್ವನನುಭವವ । ಬ್ರಹ್ಮಜ್ಞ ॥ 20 ॥

ಮುಂದೆ ಸಾಧನೆ ಬೇಡ । ಅಂದಿಗೇ ಮುಕ್ತನವ
ಎಂದೆಂದಿಗಾತ್ಮ ಭವವೆನಗೆ ಬಂದಿಲ್ಲ–
ವೆಂದೆ ಅರಿಯುವನು । ಬ್ರಹ್ಮಜ್ಞ ॥ 21 ॥

ನಾನೆಂಬ ಭಾವವಿದು । ಮಾನವಗೆ ದೇಹದಲಿ
ತಾನಿರುವ ತೆರದಿ ಆತ್ಮನೇ ತಾನೆಂಬ
ಭಾನವಿಹುದಿವಗೆ[3] । ಬ್ರಹ್ಮಜ್ಞ ॥ 22 ॥

ನೆಲೆನಿಂತು ಸಹಜದಲಿ । ಉಲಿದಿರುವದೇ ನಿಷ್ಠೆ
ಕಳವಳವೆ ಇಲ್ಲ ಅವಗಿನ್ನು ದ್ವೈತವಿದು
ಉಳಿಯಲೇ ಇಲ್ಲ । ಬ್ರಹ್ಮಜ್ಞ ॥ 23 ॥

1. ಸೂ.ಭಾ. 4–1–2 (ಭಾ.ಭಾ. 506)ರಲ್ಲಿ 'ಯೇಷಾಂ ಪುನರ್ನಿಪುಣಮತೀನಾಂ' ಎಂಬ ವಾಕ್ಯವನ್ನು ನೋಡಿರಿ.

2. ಕಠ. ಭಾ. 1–2–8 (ಭಾ.ಭಾ. 57) ನ್ನು ನೋಡಿರಿ.

3. ಉಪದೇಶಸಾಹಸ್ರಿ (ಪದ್ಯ) 4–5ನ್ನು ನೋಡಿರಿ.

ಎಲ್ಲಿ ಆತ್ಮನೆ ಆಗಿ । ಎಲ್ಲವೂ ತೋರುವದೊ
ಅಲ್ಲಿ ಅವ ಏನ ನೋಡುವನು, ಕೇಳುವನು?
ಇಲ್ಲ ವ್ಯವಹಾರ[1]। ಬ್ರಹ್ಮಜ್ಞ ॥ 24 ॥

(ಮಧ್ಯಮಾಧಿಕಾರಿಯ ಲಕ್ಷಣ)

ಚಿತ್ತದಲಿ ಪ್ರತಿಬಂಧ । ಮತ್ತಿರಲು ನಿಲ್ಲದೀ
ತತ್ತ್ವದಾ ಶ್ರವಣದನುಭವವು ಮರಳಿ ನಾ-
ನಾತ್ವವೇ ಬಹುದು । ಬ್ರಹ್ಮಜ್ಞ ॥ 25 ॥

ಇನ್ನಿವಗೆ ಮನನವನು । ಚೆನ್ನಾಗಿ ಪೇಳಿಹುದು
ಮುನ್ನವೇ ಕೇಳ್ದ ಅನುಭವವನನುಸರಿಸಿ
ತನ್ನಲ್ಲಿ ನಡೆಸೆ। ಬ್ರಹ್ಮಜ್ಞ ॥ 26 ॥

ಮನನದಿಂದಲು ಸಹಜ । ಘನನಿಷ್ಠೆ ನಿಲ್ಲದಿರೆ
ಅನವರತ ಯತ್ನಮಾಡುತ ನಿದಿಧ್ಯಾಸ-
ವನು ಮಾಳ್ಪುದಿವನು[2]। ಬ್ರಹ್ಮಜ್ಞ ॥ 27 ॥

ವರ ನಿದಿಧ್ಯಾಸನವ । ನೆರೆ ನಿಷ್ಠೆಯನುಭವವ
ಅರುಹುವೆನು ಮುಂದೆ[3] ಸದ್ಯಕ್ಕೆ ಶ್ರವಣವನು
ಕುರಿತು ಹೇಳುವೆನು । ಬ್ರಹ್ಮಜ್ಞ ॥ 28 ॥

(ಶ್ರವಣದ ಸ್ವರೂಪ)

ಇಲ್ಲಿ ಹೇಳುವದನ್ನು । ನಿಲ್ಲುತೇಕಾಗ್ರದಲಿ
ಎಲ್ಲವನು ತೊರೆದು ತನ್ನಲ್ಲಿ ನೋಳ್ಪುದೇ
ಸಲ್ಲಲಿತ ಶ್ರವಣ । ಬ್ರಹ್ಮಜ್ಞ ॥ 29 ॥

ಲಕ್ಷ್ಯವನ್ನಾತ್ಮನಲಿ । ಶಿಕ್ಷಿಪುದು ಕ್ರಮವರಿತು
ಲಕ್ಷ್ಯ ಬರಿ ಶಬ್ದಗಳಲಿಲ್ಲ ಅನುಭವವ
ಲಕ್ಷಿಪುದೆ ಶ್ರವಣ । ಬ್ರಹ್ಮಜ್ಞ ॥ 30 ॥

---

1. ಬೃ. 4–4–15.

2. ಪದ್ಯ 25 ರಿಂದ 27ರವರೆಗಿನ ವಿಷಯಗಳಿಗೆ ಸೂ. ಭಾ. 1–1–4 (ಭಾ.ಭಾ. 61)ನ್ನು ನೋಡಿರಿ.

3. 9 ಮತ್ತು 10ನೆಯ ಅಧ್ಯಾಯಗಳಲ್ಲಿ.

ಇದು ನೋಡು ಇದ ಕೇಳು । ಇದ ಲೌಕಿಕದಿ ಪೇಳೆ
ಮುದದಿಂದ ಚಿತ್ತಗೊಡು ಎಂಬುದೇ ಮುಖ್ಯ-
ವಿದೆ ಶ್ರವಣತತ್ತ್ವ । ಬ್ರಹ್ಮಜ್ಞ ॥ 31 ॥
ಹೊರಗಿರುವ ವಸ್ತುಗಳ । ಬರುವ ಬಲು ಭಾವಗಳ
ನೆರೆಕೇಳೆ ತಾನೆ ಆದಂತೆ ಪರತತ್ತ್ವ-
ದರಿವಾಗೆ ಶ್ರವಣ । ಬ್ರಹ್ಮಜ್ಞ ॥ 32 ॥
ಅನುಭವವ ತೋರಿಸಲು । ಅನುಭವವೆ ಆಗುವನು
ಅನವರತವಿರುವ ಪರತತ್ತ್ವ ಕೇಳ್ದದನೆ
ಅನುಸರಿಸೆ ಶ್ರವಣ[1] । ಬ್ರಹ್ಮಜ್ಞ ॥ 33 ॥
ಇಂತು ಶ್ರವಣಕ್ಕಾಗಿ । ಮುಂತೆ ಮನನಕ್ಕಾಗಿ
ಎಂತೊ ಬಗೆ ಬೋಧೆ ಶ್ರುತಿಗಳಲಿ ಇರಲೊಂದ
ಸಂತಸದಲೊರೆವೆ । ಬ್ರಹ್ಮಜ್ಞ ॥ 34 ॥

### ಅವಸ್ಥಾತ್ರಯವಿವೇಕ

ಮೂರವಸ್ಥೆಗಳನ್ನು । ತೋರಿಸುತ ಮೊದಲಲ್ಲಿ
ಮೂರನ್ನು ಮುಂದೆ ಹುಸಿಗೈದು ಅದ್ವಯನ
ಸೇರಿಸುವದಿದುವೆ । ಬ್ರಹ್ಮಜ್ಞ ॥ 35 ॥
ಅಪ್ರತಿಮವೀ ರೀತಿ । ಸುಪ್ರಸಿದ್ಧವು ಮತ್ತೆ
ಕ್ಷಿಪ್ರದಲಿ ಇದಕೆ ಆಗುವದು ಜ್ಞಾನವೆಂ-
ಬೀ ಪ್ರಯೋಜನವು । ಬ್ರಹ್ಮಜ್ಞ ॥ 36 ॥
ಇದಕಾಗಿ ಮೀಸಲವು । ಸದಮಲದ ಮಾಂಡೂಕ್ಯ
ಇದನೆ ಬಲು ಸುಲಭ ಸಾರಾಂಶದಲಿ ಪೇಳೆ
ಮುದದಲೆತ್ತಿಸುವೆ। ಬ್ರಹ್ಮಜ್ಞ ॥ 37 ॥
ಗೌಡಪಾದರು ಇದಕೆ । ಗೂಢ ತಿಳಿಸಲು ಜನಕೆ
ಪ್ರೌಢತರ ಶ್ರೇಷ್ಠಕಾರಿಕೆಯ ರಚಿಸಿ ಪಥ-
ಮಾಡಿಹರು ತಿಳಿಯೆ । ಬ್ರಹ್ಮಜ್ಞ ॥ 38 ॥
ಕಾರಿಕೆಗು ಮೂಲಕ್ಕು । ಭಾರಿ ಭಾಷ್ಯವ ಬರೆದು
ತೋರಿದರು ಪಂಥ ಶಂಕರರು ಶ್ರೀಗಳದ
ಬೀರಿಹರು ನಮಗೆ । ಬ್ರಹ್ಮಜ್ಞ ॥ 39 ॥

---

1. ಪದ್ಯ 29 ರಿಂದ 33 ಪೂರ ವಿಷಯಕ್ಕೆ ಸೂ. ಭಾ. 3-2-21 (ಭಾ.ಭಾ. 291) ರಲ್ಲಿ 'ಲೋಕೇಽಪಿ ಇದಂ ಪಶ್ಯ, ಇದಮಾಕರ್ಣಯ' ಎಂಬ ಭಾಷ್ಯವಾಕ್ಯವನ್ನು ನೋಡಿರಿ.

ಸ್ವಂತಕೃತಿ ವಿವೃತಿಯು[1]। ಬಂತು ಸಂಸ್ಕೃತದಲ್ಲಿ
ಅಂತರವ ಬೌದ್ಧ, ವೇದಾಂತದಲಿ ತಿಳಿಯೆ
ಮುಂತೆ ಇದು ರತ್ನ । ಬ್ರಹ್ಮಜ್ಞ ॥ 40 ॥

ಗೌಡಪಾದರ ಹೃದಯ[2] । ಮಾಂಡೂಕ್ಯಮಂಜರಿಯು[3]
ಗೂಢವನು ತಿಳಿಯೆ ಕನ್ನಡದ ಕೃತಿಗಳಿವು
ನೋಡಿಯೇ ತಿಳಿಗು । ಬ್ರಹ್ಮಜ್ಞ ॥ 41 ॥

ಇಲ್ಲಿ ಸಂಕ್ಷೇದಲಿ । ಎಲ್ಲವೂ ಬರುವಂತೆ
ಮೆಲ್ಲನೆಯೆ ತಿಳಿಸಲೆತ್ನಿಪೆನು ಗುರುಕೃಪೆಯೆ
ಇಲ್ಲಿ ಮತಿ ಈಗೆ । ಬ್ರಹ್ಮಜ್ಞ ॥ 42 ॥

## (ಎಲ್ಲವೂ ಓಂಕಾರವೇ)

ಓಂಕಾರವೆಲ್ಲವೂ । ಓಂಕಾರವೇ ಬ್ರಹ್ಮ
ಓಂಕಾರ ನಮ್ಮ ನಿಜದಾತ್ಮನಿದನರಿಯ-
ಲೋಂಕಾರನಕ್ಕು । ಬ್ರಹ್ಮಜ್ಞ ॥ 43 ॥

ಇದು ಉಪಾಸನೆಯಲ್ಲ । ಇದು ಜ್ಞಾನ ಪ್ರತ್ಯಕ್ಷ[4]
ವಿದಿತವಿದು ಇಲ್ಲಿ ಹೇಳಿರುವ ಅನುಭವವ
ಹೃದಯದಲಿ ನೋಳ್ಕೆ । ಬ್ರಹ್ಮಜ್ಞ ॥ 44 ॥

ಅಭಿಧಾನ ಓಂಕಾರ । ಅಭಿಧೇಯನಾತ್ಮನಿವ
ಉಭಯವೂ ಇಲ್ಲದೀತನಲಿ ಆರೋಪ
ದಭಿನಯವು ಮೊದಲು । ಬ್ರಹ್ಮಜ್ಞ ॥ 45 ॥

ಪಾದಗಳು ನಾಲ್ಕಿವಗೆ । ಆದವಾರೋಪದಲಿ
ಭೇದಗಳು ಇಲ್ಲ ನಿಜವಾಗಿ ತಿಳಿಸಲ್ಕೆ
ಹಾದಿಯಿದು ನೋಡಿ[5]। ಬ್ರಹ್ಮಜ್ಞ ॥ 46 ॥

1. 'ಮಾಂಡೂಕ್ಯರಹಸ್ಯವಿವೃತಿಃ' ಎಂಬ ಸಂಸ್ಕೃತಗ್ರಂಥ.
2. 'ಗೌಡಪಾದಹೃದಯ' ಎಂಬ ಕನ್ನಡಗ್ರಂಥ.
3. 'ಮಾಂಡೂಕ್ಯೋಪನ್ಯಾಸಮಂಜರಿ' ಎಂಬ ಕನ್ನಡಗ್ರಂಥ.
4. ಈ ವಿಷಯಕ್ಕೆ 'ಗೌಡಪಾದಹೃದಯ' ಪುಟ 10 ರಿಂದ 14 ಪೂರ ನೋಡಿರಿ.
5. ಮಾಂ. 1, 2ನೆಯ ಮಂತ್ರಗಳ ಸಾರ.

ಇವನಿರುವ ನಿಜರೂಪ । ಇವ ತೋರ್ಪ ಹುಸಿರೂಪ
ಇವುಗಳನ್ನು ತಿಳಿಸೆ ಈ ರೀತಿ ಪಾದಗಳ-
ನವಲಂಬಿಸಿಹುದು[1] । ಬ್ರಹ್ಮಜ್ಞ ॥ 47 ॥

### (ವೈಶ್ವಾನರಪಾದ)

ಮೊದಲು ವೈಶ್ವಾನರನ । ಪದವಿದುವೆ ಎಚ್ಚರವು
ಇದನಿಲ್ಲಿ ತಿಳಿವ ಗುಟ್ಟನ್ನು ಅರಿಯೆ ಆ
ಪದವೆ ನಾವಕ್ಕು । ಬ್ರಹ್ಮಜ್ಞ ॥ 48 ॥

### (ಸಾಮಾನ್ಯಗ್ರಹಿಕೆ)

ನಾನು ಜಗದೊಳಗಿರುವೆ । ನಾನು ಹುಟ್ಟಿಹೆನಿಲ್ಲಿ
ಮಾನವರು ಇಲ್ಲಿ ಎನ್ನಂತೆ ಪ್ರಾಣಿಗಳು
ಏನೆಲ್ಲವಿಹವು । ಬ್ರಹ್ಮಜ್ಞ ॥ 49 ॥

ಎನಗಿಂತ ಮೊದಲಿಲ್ಲಿ । ಮನುಜರಿದ್ದರು ನಿಜದಿ
ಎನಗಾಗೆ ಮರಣ ಮುಂದೆಯೂ ಈ ಜಗವು
ಅನವರತವಿಹುದು । ಬ್ರಹ್ಮಜ್ಞ ॥ 50 ॥

ಹೀಗೆ ಕೊನೆಮೊದಲಿರದೆ । ಸಾಗಿಹುದು ಈ ಜಗವು
ಈಗಿಲ್ಲಿ ನಾನು ಇದರೊಳಗಿರುತ ಅಲ್ಪ-
ನಾಗಿರುವೆನೆನುವ । ಬ್ರಹ್ಮಜ್ಞ ॥ 51 ॥

### (ವೇದಾಂತದ ದೃಷ್ಟಿ)

ನಾನು ಎಂಬುದನಿಟ್ಟು । ತಾ ನೋಡಲಿದು ಸರಿಯು
ಮಾನಿಸದು ಇದನು ವೇದಾಂತ ಅದರ ನಿಜ-
ಮಾನವೇ ಬೇರೆ । ಬ್ರಹ್ಮಜ್ಞ ॥ 52 ॥

ತಾನು ತನ್ನೊಳು ನನಸು । ಕಾಣಲ್ಕೆ ಅದರೊಳಗೆ
ಕಾಣುವದು 'ನಾನು, ಈ ಜಗವು' ಇದಕೆಲ್ಲ
ತಾನೆ ಆಧಾರ । ಬ್ರಹ್ಮಜ್ಞ ॥ 53 ॥

ತಾನು ತನ್ನಲ್ಲಿ ಕನಸು । ಕಾಣಲ್ಕೆ ಅದರೊಳಗು
ನಾನು ಮೇಣ್ ಜಗವು ಹೀಗೆಯೇ ಅದಕೆಲ್ಲ
ತಾನೆ ಆಧಾರ । ಬ್ರಹ್ಮಜ್ಞ ॥ 54 ॥

---

1. ಮಾಂ. ಭಾ. 7 (ಭಾ.ಭಾ. 37)ನ್ನು ನೋಡಿರಿ.

ತಾನು ಜಗದೊಳಗಲ್ಲ । ಈ ನಿಖಿಳ ತನ್ನೊಳಗೆ
ತಾನೆ ಈ ಎಲ್ಲ ವ್ಯಾಪಿಸಿಹನೀಗಲೇ
ಸ್ವಾನುಭವವೇದ್ಯ । ಬ್ರಹ್ಮಜ್ಞ ॥ 55 ॥

ಎಲ್ಲರಲಿ ತನ್ನನ್ನು । ಎಲ್ಲವನು ತನ್ನೊಳಗೆ
ಇಲ್ಲಿ ಇವ ನೋಳ್ಪನೀಗೆಂಬ ಈ ವಚನ
ಬಲ್ಲವನೆ ಬಲ್ಲ[1]। ಬ್ರಹ್ಮಜ್ಞ ॥ 56 ॥

ನಾನೆಂಬುದನು ಬಿಟ್ಟು । ತಾನೆಂಬುದನುಸರಿಸಿ
ತಾನಾಗಿ ನೋಡೆ ಕಲಿಸುವದು ವೇದಾಂತ
ಮಾನವಗೆ ಇಲ್ಲಿ । ಬ್ರಹ್ಮಜ್ಞ ॥ 57 ॥

ಇದನರಿಯೆ ತಾನೀಗ । ಮುದದ ವೈಶ್ವಾನರನು
ಉದಿಸಲ್ಕೆ ಜ್ಞಾನ ಎಲ್ಲವೂ ತಾನಾಗಿ
ಬದಿಗಹುದು ಭೇದ । ಬ್ರಹ್ಮಜ್ಞ ॥ 58 ॥

ವೇದಾಂತ ಮಾತ್ರವೇ । ಬೋಧಿಪುದು ಈ ಬಗೆಯ
ಆದರದಿ ಪಾದ ವಿವರಿಸಿದ ಶಂಕರರ
ಬೋಧನೆಯ ನೋಡಿ। ಬ್ರಹ್ಮಜ್ಞ ॥ 59 ॥

ಎತ್ತಿ ಸಪ್ತಾಂಗದಲಿ । ಚಿತ್ತಸಂಶಯವನ್ನು
ಉತ್ತರಿಪರಲ್ಲಿ ಜಾಗರವೆ ಸದುಪಾಧಿ
ಪ್ರತ್ಯಗಾತ್ಮನಿಗೆ । ಬ್ರಹ್ಮಜ್ಞ ॥ 60 ॥

**(ಅವಸ್ಥೆಯ ವೈಶಾಲ್ಯ)**

ಎಚ್ಚರದವಸ್ಥೆ ಎನೆ । ಎಚ್ಚರದಿ ಕೇಳಿರಿದ
ನಿಚ್ಚಳದಿ ತೋರ್ಪ ದೃಶ್ಯಗಳಿವೆಲ್ಲವೂ
ಎಚ್ಚರದೆ ಸೇರ್ಕು । ಬ್ರಹ್ಮಜ್ಞ ॥ 61 ॥

ಅಧಿದೈವವಧಿಭೂತ । ಅಧ್ಯಾತ್ಮ ಮೂರು ಸಹ
ಅಧಿಕೃತದ ಕಾಲದೇಶಾದಿಭಾವವೂ
ಇದರಲ್ಲೆ ಸೇರ್ಕು। ಬ್ರಹ್ಮಜ್ಞ ॥ 62 ॥

ಸೂರ್ಯಚಂದ್ರರು ತಾರೆ । ಸರ್ವ ಲೋಕಾಂತರವು
ಅರ್ಯಮನೆ ಮೊದಲು ದೇವಾಧೀದೇವ ಗಂ-
ಧರ್ವರಧಿದೈವ । ಬ್ರಹ್ಮಜ್ಞ ॥ 63 ॥

1. ಈ. 6 ಮತ್ತು ಗೀ. 6–29ನ್ನು ನೋಡಿರಿ.

ಭುವನ ಜಲವಗ್ನಿಯೂ । ಪವನವಾಕಾಶವೂ
ಭುವನದಲಿ ತೋರ್ಪ ಜೀವರೂ ಅಧಿಭೌತ-
ಕಿವು ಸೇರ್ಕು ನಿಜದಿ । ಬ್ರಹ್ಮಜ್ಞ ॥ 64 ॥

ದೇಹ ಪ್ರಾಣವು ಕರಣ । ಈ ಹಮ್ಮು ಬುದ್ಧಿಮನ
ನೇಹದಲಿ ಸೇರಿ ಅಧ್ಯಾತ್ಮವೆನಿಸುವವು
ಈ ಹದನ ನೋಡೆ । ಬ್ರಹ್ಮಜ್ಞ ॥ 65 ॥

ಇಂದು ನಿನ್ನೆಯು ನಾಳೆ । ಎಂದು ಹೇಳುವ ಕಾಲ
ಮುಂದೆ ಇದು ಮೇಲೆ ಕೆಳಗೆನುವ ದೇಶವೂ
ಸಂದಿಹುದು ಇಲ್ಲಿ । ಬ್ರಹ್ಮಜ್ಞ ॥ 66 ॥

ಮೂರು ವಿಧ ವಿಸ್ತರಣ । ಕಾರಣದ ಕಾರ್ಯಗಣ
ತೋರುತಿಹ ಕಾಲದೇಶಾದಿ ವಿಂಗಡಣ
ಸೇರಿ ಎಚ್ಚರವು । ಬ್ರಹ್ಮಜ್ಞ ॥ 67 ॥

ಏಳಂಗಗಳ ಶ್ರುತಿಯು । ಪೇಳುತಿಹ ಮುಖತುತಿಯು
ಮೇಳವಿಪುದಿಲ್ಲಿ ಹೇಳಿರುವ ವಿವರಣೆಗೆ
ಆಲಿಸುವುದಿದನು । ಬ್ರಹ್ಮಜ್ಞ ॥ 68 ॥

**(ಸಪ್ತಾಂಗಗಳು)**

ಆ ದ್ಯುಲೋಕವು ತಲೆಯು । ಆದಿತ್ಯನೇ ಕಣ್ಣು
ಆದುದೀ ಮುಖವು ಪಾವಕನು ವಾಯುವೇ
ಆದರದ ಪ್ರಾಣ । ಬ್ರಹ್ಮಜ್ಞ ॥ 69 ॥

ವ್ಯೋಮವೇ ನಡುವಿವಗೆ । ಆ ಮೂತ್ರಸ್ಥಲ ಜಲವು
ಭೂಮಿಯಿದು ಪಾದವೇಳಂಗಗಳು ಇವಗೆ
ನೇಮದಿಂದಿಹವು । ಬ್ರಹ್ಮಜ್ಞ ॥ 70 ॥

**(ಹತ್ತೊಂಬತ್ತು ಮುಖಗಳು)**

ಜ್ಞಾನೇಂದ್ರಿಯಗಳೈದು । ಪ್ರಾಣ ಕರ್ಮೇಂದ್ರಿಯವು
ನಾನೆನುವ ಹಮ್ಮು ಮನಬುದ್ಧಿಚಿತ್ತ ವೈ-
ಶ್ವಾನರಗೆ ಮುಖವು । ಬ್ರಹ್ಮಜ್ಞ ॥ 71 ॥

ವೈಶ್ವಾನರನು ಎನಲು । ವಿಶ್ವವನೆ ತುಂಬಿರುವ
ಆ ಸ್ವಯಂಪೂರ್ಣ ಪ್ರತ್ಯಕ್ ಪರಾತ್ಮನೇ
ಭಾಸಿಪನು[1] ಇಲ್ಲಿ । ಬ್ರಹ್ಮಜ್ಞ ॥ 72 ॥

ದೇಹದಳತೆಗೆ ಆತ್ಮ । ದೇಹಕೊಬ್ಬೊಬ್ಬನನು
ಊಹಿಪುದು ತಪ್ಪು, ಸಾಂಖ್ಯನ ವಿಚಾರವಿದು
ಮೋಹಪಡಬೇಡಿ[2]। ಬ್ರಹ್ಮಜ್ಞ ॥ 73 ॥

ಪ್ರತ್ಯಗಾತ್ಮನೆ ಇಲ್ಲಿ । ಸತ್ಯ ವೈಶ್ವಾನರನು
ಮತ್ತಲ್ಲ ವ್ಯಷ್ಟಿ ಮೇಲಾ ಸಮಷ್ಟಿಯನೆ
ಹೊತ್ತಿರುವನಾತ್ಮ । ಬ್ರಹ್ಮಜ್ಞ ॥ 74 ॥

ತಾನು ತನ್ನೊಳು ನನಸು । ತಾನೆ ಇದು ಎಲ್ಲವೂ
ಸ್ವಾನುಭವವಿದನು ಈ ಪರಿಯೆ ನೋಡಲ್ಕೆ
ತಾನೀಗ ವಿಶ್ವ । ಬ್ರಹ್ಮಜ್ಞ ॥ 75 ॥

ಕಾರಿಕೆಯಲೂ ಸಹಿತ । ಈ ರೀತಿ ವಿಶ್ವನನೆ
ತೋರಿಹರು ಮತ್ತೆ ವೈಶ್ವಾನರನೆ ಎಂದು
ಧೀರರರಿದನರಿಗೆ[3]। ಬ್ರಹ್ಮಜ್ಞ ॥ 76 ॥

**(ಈಚಿನ ವೇದಾಂತ)**

ಈಗವಿದ್ಯೋಪಾಧಿ । ಆಗಿಹನು ಜೀವನಿವ
ಬೇಗನಾ ಮಾಯೆ ಸದುಪಾಧಿ ಈಶ್ವರಗೆ
ಆಗಿಹುದು ಕೇಳಿ । ಬ್ರಹ್ಮಜ್ಞ ॥ 77 ॥

ಈಶ್ವರ ಸಮಷ್ಟಿಯಿವ । ಈಶ್ವರ ಪರೋಕ್ಷನಿವ
ಈ ಸ್ವಯಂ ಜೀವನಪರೋಕ್ಷ ವ್ಯಷ್ಟಿಯೆನು-
ವಾಶಯವು ಬಂತು । ಬ್ರಹ್ಮಜ್ಞ ॥ 78 ॥

ಇಲ್ಲಿ ಈಶ ಪರೋಕ್ಷ । ಇಲ್ಲವಿದು ಭಾಷ್ಯದಲಿ
ಅಲ್ಲಿ ಈ ಒಳಗಿನಾತ್ಮನೇ ಈಶ್ವರನು
ಎಲ್ಲ ವಿಪರೀತ । ಬ್ರಹ್ಮಜ್ಞ ॥ 79 ॥

---

1. ಮಾಂ. 3 (ಭಾ.ಭಾ. 11)ನ್ನು ನೋಡಿರಿ.
2. ಮಾಂ. 3 (ಭಾ.ಭಾ. 12)ನ್ನು ನೋಡಿ.
3. ಇದುವರೆಗೂ ಮಾಂ. 3ರ ವಿವರಣೆಯಾಯಿತು.

ಅನುಭವವ ಬಿಟ್ಟಿರುವ । ಒಣತರ್ಕ ಹಿಡಿದಿರುವ
ಬಣಗುಮತ ಬಿಟ್ಟು ಭಾಷ್ಯವನ್ನನುಸರಿಸೆ
ಅನುಭವವೆ ಬಕ್ಕು । ಬ್ರಹ್ಮಜ್ಞ ॥ 80 ॥

ತಾನಾಗಿ ನೋಳ್ಪುದೇ । ಜ್ಞಾನದಲಿ ಬಲು ಮುಖ್ಯ
ನಾನೆಂಬ ಭಾವ ಬಿಡಿಸುತ್ತ ಶಾಸ್ತ್ರವಿದು
ಸ್ವಾನುಭವ ತೋರ್ಕು । ಬ್ರಹ್ಮಜ್ಞ ॥ 81 ॥

ಈನ ಇನ್ನೊಂದಿಹುದು । ಶ್ರೀಗಳಿದ ಪೇಳಿದರು
ಆಗೆನಗೆ ಪರಮ ಕರುಣೆಯಲಿ ಮುಖ್ಯವೀ
ಭಾಗವನು ಪೇಳ್ವೆ । ಬ್ರಹ್ಮಜ್ಞ ॥ 82 ॥

### (ವೈಶ್ವಾನರನೇ ತುರೀಯನು)

ಎಚ್ಚರದ ಸಾಕ್ಷಿಯಿವ । ನಿಚ್ಚಳದಿ ತಾನಾತ್ಮ
ಎಚ್ಚರದ ದೃಶ್ಯರಾಶಿಗಳ ಬೆಳಗುವನು
ಸ್ವಚ್ಛದಲಿ ನೋಡೆ । ಬ್ರಹ್ಮಜ್ಞ ॥ 83 ॥

ಎಚ್ಚರವು ಇರುವದನು । ಎಚ್ಚರವು ಇರದುದನು
ನಿಚ್ಚಳದಿ ಬೆಳಗಿಹೇಳುವನೆ ಈ ಸಾಕ್ಷಿ
ಅಚ್ಚಳಿಯದಿಹನು । ಬ್ರಹ್ಮಜ್ಞ ॥ 84 ॥

ಸಾಕ್ಷಿ ಎನ್ನುವ ಮಾತು । ಅಕ್ಷಿಯಲಿ ಕಾಂಬುದನು
ಲಕ್ಷಿಪರು ಲೋಕಜನರಿಲ್ಲಿ ಈ ಬಗೆಯ
ಸಾಕ್ಷಿಯಲ್ಲಿವನು । ಬ್ರಹ್ಮಜ್ಞ ॥ 85 ॥

ಎದುರಿಟ್ಟು ನೋಡುವಡೆ । ಒದಗಿ ದೇಶವು ಕಾಲ
ಮೊದಲಾದ ಭೇದವಿರಬೇಕು ಆಗ ಮ-
ತ್ತಿದು ಸಾಕ್ಷಿಯಕ್ಕು । ಬ್ರಹ್ಮಜ್ಞ ॥ 86 ॥

ದೇಶಕಾಲಗಳೆಲ್ಲ । ಮೀಸಲೆಚ್ಚರದೊಳಗೆ
ದೇಶಾದಿಯಲ್ಲಿ ಎಚ್ಚರವದಾಗದಿದು
ಸೂಸುವನುಭವವು । ಬ್ರಹ್ಮಜ್ಞ ॥ 87 ॥

ಆತ್ಮನಿವನೊಳಪಡನು । ಹೊತ್ತುಗೊತ್ತುಗಳಿಂಗೆ
ಮತ್ತಿನ್ನು ಪೂರ್ಣ ವ್ಯಾಪಿಸಿಹನೆಚ್ಚರವ
ಸತ್ಯದನುಭವವು। ಬ್ರಹ್ಮಜ್ಞ ॥ 88 ॥

ಆತ್ಮನಿಲ್ಲಿಯವರೆಗೆ । ಇತ್ತಲಿಂದೆಚ್ಚರವು
ಮತ್ತಿಲ್ಲ ಹೀಗೆ ಸೀಮಿತವು ಎರಡಕ್ಕು
ಎತ್ತಣದು ಭೇದ ? । ಬ್ರಹ್ಮಜ್ಞ ॥ 89 ॥

ನುಂಗಿಬಿಟ್ಟಿತು ಸಾಕ್ಷಿ । ವಿಂಗಡದ ಎಚ್ಚರವ
ಕಂಗೊಳಿಸೆ ತಾನು ಎಚ್ಚರವು ಮತ್ತಿನ್ನು
ಇಂಗಿಯೇ ಹೋಯ್ತು । ಬ್ರಹ್ಮಜ್ಞ ॥ 90 ॥

ಇರುವದಿದು ಬರಿ ತಾನು । ಅರಿಯದಾಗೆಚ್ಚರವು
ತೆರೆಯುತ್ತ ಕಣ್ಣು ನೋಡಲ್ಕೆ ಜಾಗರವು
ಕರಗಿಯೇ ಹೋಯ್ತು । ಬ್ರಹ್ಮಜ್ಞ ॥ 91 ॥

ವೈಶ್ವಾನರನು ಎಂಬ । ಆಶಂಸನೆಯ ಮೊದಲು
ಈ ಶ್ರುತಿಯು ಮಾಡಿದಾರೋಪ ಇವನಿಲ್ಲಿ
ಲೇಸು ತುರ್ಯಾತ್ಮ । ಬ್ರಹ್ಮಜ್ಞ ॥ 92 ॥

ಅಂತೆಯೇ ಮುಂದೆ ಶ್ರುತಿ । ಅಂತವನು ಹೇಳುವದು[1]
ಮುಂದೆ ತಾ ಪೇಳ್ದ ಮೂರಕ್ಕು ನಿಜವಾಗಿ
ಸ್ವಂತ ತಾ ತುರ್ಯ । ಬ್ರಹ್ಮಜ್ಞ ॥ 93 ॥

ತಾನಾಗಿ ನಿಂತಾಗ । ಕಾಣದೀ ಜಗವಾಗ
'ನಾನು, ಇದು' ಎಂದು ನೋಳ್ಪಾಗ ಈ ತಾನೆ
ಕಾಣುವನು ವಿವಿಧ । ಬ್ರಹ್ಮಜ್ಞ ॥ 94 ॥

ಇದು ವಿವೇಕದ ಬಲದಿ । ಮುದದಿಂದೆ ಕಾಣುವದು
ಇದಕಿನ್ನು ಬೇರೆ ಏನಿಲ್ಲುಪಾಯ ಗುರು–
ವಿದ ತೋರೆ ತಿಳಿಗು । ಬ್ರಹ್ಮಜ್ಞ ॥ 95 ॥

ತೋರುವೆಚ್ಚರಕಾಗಿ । ಹೇರಿ ಸಾಕ್ಷಿತ್ವವನು
ಸಾರುವದು ವ್ಯಾಪಿ ವೈಶ್ವಾನರನು ಎಂಬು–
ದಾರೋಪಕ್ರಮವು । ಬ್ರಹ್ಮಜ್ಞ ॥ 96 ॥

ಹೀಗೆಯಾತ್ಮನ ವ್ಯಾಪ್ತಿ । ಆಗಲ್ಕೆ ಎಲ್ಲಕಡೆ
ನೀಗಿಯೇ ಹೋಯ್ತು ಸಾಕ್ಷಿತ್ವ ಸಾಕ್ಷಿಗಳ
ಸೋಗು ಮುಂದಿರದು । ಬ್ರಹ್ಮಜ್ಞ ॥ 97 ॥

---

1. ಮಾಂ. ಮಂತ್ರ 7ರಲ್ಲಿ 'ನ ಬಹಿಷ್ಪ್ರಜ್ಞಮ್' ಎಂಬುದನ್ನು ನೋಡಿರಿ.

ಪಾರಮಾರ್ಥಿಕವಲ್ಲ । ಈ ರೂಪು ಎಂದಿದನು
ಸಾರುತ್ತ ಶ್ರುತಿಯು ತುರಿಯತ್ವ ತೋರಿಸಲು
ಆರೋಪ ಹೋಯ್ತು । ಬ್ರಹ್ಮಜ್ಞ ॥ 98 ॥
ಇಲ್ಲವೀಗಲೆ ಜಗವು । ಬಲ್ಲವಗೆ ಬರಿ ತಾನು
ನಿಲ್ಲುವನು ಶ್ರವಣಮಾತ್ರದಲಿ ತಾನಾಗಿ
ಬಲ್ಲವನೆ ಬಲ್ಲ । ಬ್ರಹ್ಮಜ್ಞ ॥ 99 ॥
ಇಂತು ಎಚ್ಚರದಲ್ಲಿ । ಸ್ವಂತದನುಭವ ಕಂಡು
ನಿಂತುಕೋ ಎಂದು ತಿಳಿಸಿದರು ಶ್ರೀಗಳಿದ-
ನಂತೆ ಬಣ್ಣಿಸಿದೆ[1]। ಬ್ರಹ್ಮಜ್ಞ ॥ 100 ॥

**(ತೈಜಸಪಾದ)**

ಮುಂದೆ ತೈಜಸಪಾದ । ಚಂದದಿಂದಲಿ ಪೇಳ್ವೆ
ಬಂದಿಹುದು ಇಲ್ಲಿ ಗುಟ್ಟೊಂದು ತಿಳಿಯುವದ-
ಕಿಂದು ಯತ್ನಿಪುದು । ಬ್ರಹ್ಮಜ್ಞ ॥ 101 ॥
ಎಚ್ಚರದ ದೃಷ್ಟಿಯಲೆ । ಮೆಚ್ಚಿ ಕನಸನು ನೋಳ್ಪ
ನಿಶ್ಚಯವು ತಾನು ಮೊದಲಿನದು ಕೇಳಿರಿದು
ತುಚ್ಛ ಕೊನೆಯಲ್ಲಿ । ಬ್ರಹ್ಮಜ್ಞ ॥ 102 ॥
ಕನಸನ್ನು ಕನಸಿನಾ । ಅನುಭವದ ಕಣ್ಣಿಂದೆ
ಮನದಲ್ಲಿ ನೋಡೆ ಆ ಬಗೆಯೆ ಬೇರೆ ಇದ-
ನನುಕರಿಸಿ ನೋಡಿ । ಬ್ರಹ್ಮಜ್ಞ ॥ 103 ॥
ಕನಸುನನಸುಗಳೆರಡು । ಕನಸು ಮಾತ್ರವೇ ಎಂದು
ಅನಿಸುವವು ಎರಡು ಹುಸಿತೋರ್ಕೆ ಈಗಳೀ
ಚಿನುಮಯಾತ್ಮನಲಿ । ಬ್ರಹ್ಮಜ್ಞ ॥ 104 ॥
ಆರೋಪ ದೃಷ್ಟಿಯದು । ಪ್ರಾರಂಭವಾಗುವದು
ಆರೋಪ ಕಳೆದು ಅಪವಾದದೃಷ್ಟಿಯನು
ತೋರಿಪುದು ಕೊನೆಗೆ । ಬ್ರಹ್ಮಜ್ಞ ॥ 105 ॥

**(ಆರೋಪದೃಷ್ಟಿ)**

ಎರಡನೆಯ ಪಾದವಿದು । ಬರುವ ಸ್ವಪ್ನದುಪಾಧಿ
ಅರಿಯುವನು ಒಳಗೆ ಭೇದಗಳನೆಂದು ಪೇ-
ಳಿರುವದೀಗಿಲ್ಲಿ । ಬ್ರಹ್ಮಜ್ಞ ॥ 106 ॥

---

1. ಪದ್ಯ 83 ರಿಂದ ಇಲ್ಲಿಯವರೆಗೆ ವಿಷಯಗಳನ್ನು ಶ್ರೀಗಳವರು ಗಂಥಕಾರರಿಗೆ ಉಪದೇಶಿಸದಂತೆ ವರ್ಣಿಸಲಾಗಿದೆ.

ದೇಹದಲಿ ಕನಸಕ್ಕು । ಈ ಹದನ ಲೌಕಿಕದ
ಮೋಹವನೆ ಹಿಡಿದು ಹೇಳಿಹುದು ಸ್ವಪ್ನದ
ನ್ಶೂಹಿಪುದಕಿನ್ನು । ಬ್ರಹ್ಮಜ್ಞ ॥ 107 ॥

ಒಳ ಅರಿವು ಎಂಬುದರ । ಒಳಗುಟ್ಟು ಇದು ಮತ್ತೆ
ಒಳಬಂದ ಮನದ ವಾಸನೆಯದೆಚ್ಚರದ
ಒಳಕೆ ವ್ಯವಹಾರ । ಬ್ರಹ್ಮಜ್ಞ ॥ 108 ॥

ಭಾಷ್ಯದಲಿ ಕಾಣುವೆವು । ಲೇಸು ಲೌಕಿಕಗ್ರಹಿಕೆ
ಆಶ್ರಯಿಸಿ ತಿಳಿಯೆ ಹಾದಿಯನು ಮಾಳ್ಪ ಉಪ-
ದೇಶಪದ್ಧತಿಯ । ಬ್ರಹ್ಮಜ್ಞ ॥ 109 ॥

ಸತ್ಯವಿದು ಎಚ್ಚರದಿ । ಮತ್ತೆ ತೋರುವದೆಲ್ಲ
ಮಿಥ್ಯವದು ಕನಸು ಕಾಂಬಾಗ ನೋಳ್ಪುದೆಂ-
ಬುಕ್ತಿ ಲೌಕಿಕವು । ಬ್ರಹ್ಮಜ್ಞ ॥ 110 ॥

ಇದನೆ ಅನುಸರಿಸುತ್ತ । ಮೊದಲು ಪೇಳಿದರಾಗ
ಇದರಿಂದೆ ಸ್ವಪ್ನ ಲಕ್ಷಿಸಲು ಅನುಭವದ
ಕದವು ತೆರೆಯುವದು । ಬ್ರಹ್ಮಜ್ಞ ॥ 111 ॥

ತಾನೆ ಬೆಳಗುವನಲ್ಲಿ । ತಾನಿಲ್ಲದಿನ್ನಿಲ್ಲ
ತಾನೆಲ್ಲ ರೂಪ ತಾಳ್ದಿರುವ ತೈಜಸನ
ಜ್ಞಾನವಿದು ಬಹುದು[1]। ಬ್ರಹ್ಮಜ್ಞ ॥ 112 ॥

**(ಅಪವಾದದೃಷ್ಟಿ)**

ಇಂತು ತನ್ನಯ ವ್ಯಾಪ್ತಿ । ಸ್ವಂತದಲಿ ತಾ ಕಂಡು
ನಿಂತಿರಲು ಶ್ರುತಿಯು ಬಂದೀಗ ಆರೋಪ-
ಕಂತ್ಯ ಪೇಳುವದು । ಬ್ರಹ್ಮಜ್ಞ ॥ 113 ॥

ಏಳಂಗ ಮುಖಸಂಖ್ಯೆ । ಮೇಳವಿಸಿ ಇಲ್ಲಿಯೇ
ಕೀಳುವದು ಮೊದಲಿನಾರೋಪ ಎಚ್ಚರದ
ಸಾಲಿಗಿದನೆಳೆದು । ಬ್ರಹ್ಮಜ್ಞ ॥ 114 ॥

1. ಪದ್ಯ 106 ರಿಂದ ಇಲ್ಲಿಯವರೆಗಿನ ವಿಷಯಕ್ಕೆ ಮಾಂ. 4 (ಭಾ.ಭಾ. 14)ನ್ನು ನೋಡಿರಿ.

ಜಾಗರದ ಮನವಿಲ್ಲಿ । ಸಾಗಿ ಬರುತಿಹುದೆಂದು
ಆಗಲೇ ಪೇಳ್ದ ಆ ಮಾತು ಹೋಯ್ತಿಲ್ಲಿ
ಈಗ ಪ್ರತ್ಯೇಕ[1]। ಬ್ರಹ್ಮಜ್ಞ ॥ 115 ॥

ವೈತಥ್ಯದಧ್ಯಾಯ । ಈ ತೆರದಿ ಪೇಳಿಹುದು
ಮಾತಿದನೆ ಗಟ್ಟಿಗೊಳಿಸಿಹುದು ಕಡೆಗಿನ್ನ-
ಲಾತಶಾಂತಿಯಲಿ[2]। ಬ್ರಹ್ಮಜ್ಞ ॥ 116 ॥

ಎರಡು ಸಹ ಹುಸಿತೋರ್ಕೆ । ಬರಿಭ್ರಾಂತಿ ಕಲ್ಪಿತವು
ಅರಿವಿನಾ ರೂಪ ಆತ್ಮನನು ಗುರುತಿಸಲು
ಸರಿವುದೀ ಭ್ರಾಂತಿ । ಬ್ರಹ್ಮಜ್ಞ ॥ 117 ॥

ಅದರ ಸಾರವನಿಲ್ಲಿ । ಬದಲಿಸದೆ ಹೇಳುವೆನು
ಕಡಲದಲೆ ಕೇಳಿ ಶ್ರೀಗಳಿದನರುಹಿಸುವ
ಅದುಭುತವನೀಗ । ಬ್ರಹ್ಮಜ್ಞ ॥ 118 ॥

### (ಎಚ್ಚರದ ಅಕ್ಷೇಪ)

ಎಚ್ಚರದ ಪರವಾಗಿ । ನಿಶ್ಚಯದಿ ಲೌಕಿಕರು
ನೆಚ್ಚಿರ್ದ ಪರಿಯ ಕನಸಿನ ವಿಚಾರದಲಿ
ಬಿಚ್ಚಿ ಹೇಳುವೆನು । ಬ್ರಹ್ಮಜ್ಞ ॥ 119 ॥

ದಿನಕೊಂದು ಕನಸಹುದು । ದಿನವು ಎಚ್ಚರ ಒಂದೆ
ದಿನದಿ ಹಲ ಕನಸು ಕಾಣಲೂಬಹುದಾಗಿ
ಕನಸು ಇದು ಮಿಥ್ಯ । ಬ್ರಹ್ಮಜ್ಞ ॥ 120 ॥

ಬೇರೆ ಬೇರೆಯ ಜನಕೆ । ಬೇರೆ ಬೇರೆಯ ಕನಸು
ತೋರುವೀ ನನಸು ಎಲ್ಲರಿಗು ಸಾಮಾನ್ಯ
ಈ ರೀತಿ ಭೇದ । ಬ್ರಹ್ಮಜ್ಞ ॥ 121 ॥

ಜಾಗರದ ವಸ್ತುಗಳು । ಆಗಿಹವು ಉಪಯುಕ್ತ
ಈಗ ಅದು ವ್ಯರ್ಥ ಕನಸಿನಲಿ ಕಂಡ ಸಿರಿ
ಹೀಗೆ ನಾಣ್ಣುಡಿಯು । ಬ್ರಹ್ಮಜ್ಞ ॥ 122 ॥

1. 'ಸಪ್ತಾಂಗ ಏಕೋನವಿಂಶತಿಮುಖಃ' – ಎಂಬ ವಿಶೇಷಣಗಳಿಂದ ಸ್ವಪ್ನವು ಜಾಗ್ರದ್ವಾಸನೆಯಿಂದಾದದ್ದು ಎಂಬ ಮುಂತಾದ ಆರೋಪಗಳನ್ನು ಅಲ್ಲಗಳೆದಿದೆ.

2. ಮಾಂ. ಕಾ. 2–5 ರಿಂದ ಮತ್ತು ಮಾಂ. ಕಾ. 4–31 ರಿಂದ 41 ನೋಡಿ.

ನಿಯಮವಿದೆ ಎಚ್ಚರದಿ । ನಿಯಮಗೆಟ್ಟಿದೆ ಸ್ವಪ್ನ
ಭಯಹರ್ಷವೆನುವ ಭಾವಗಳ ವಾಸನೆಯ
ಬಯಲುಭ್ರಮೆ । ಬ್ರಹ್ಮಜ್ಞ ॥ 123 ॥

ಕೆಲಸ್ವಪ್ನ ಶುಭವಶುಭ । ಬಲು ಸೂಚಕಗಳೆಂದು
ಹಲವುವಿಧ ಶಾಸ್ತ್ರ ಪೇಳುವವು ಅನುಭವದಿ
ಫಲ ಕಾಣಬಹುದು। ಬ್ರಹ್ಮಜ್ಞ ॥ 124 ॥

ದೇವತೋಪಾಸಕಗೆ । ಭಾವ ದೃಢವಿರಲಾಗಿ
ದೇವನನೆ ಕಾಂಬ ಕನಸಿನಲಿ ಎಂದು ಕೆಲ
ಜೀವರನುಭವವು । ಬ್ರಹ್ಮಜ್ಞ ॥ 125 ॥

ಕಾಣುತಿಹ ಕನಸುಗಳ । ಮಾನಸಪರೀಕ್ಷಕರು
ಮೇಣು ಆ ವೈದ್ಯಶಾಸ್ತ್ರಿಗಳು ಸಹಿತ ಅನು-
ಮಾನಮಾಡುವರು । ಬ್ರಹ್ಮಜ್ಞ ॥ 126 ॥

ಹೀಗೆ ನಾನಾರೀತಿ । ಸಾಗಿರಲು ಕನಸಿದುವೆ
ಆಗಿಹುದು ಹುಸಿಯು ಎಚ್ಚರದ ವಾಸನೆಯು
ಆಗದದು ಸತ್ಯ । ಬ್ರಹ್ಮಜ್ಞ ॥ 127 ॥

ಇದರಂತೆ ಎಚ್ಚರವು । ಒದಗದಿದು ಸುಳ್ಳೆಂದು
ಇದು ತಪ್ಪು ಮತ್ತೆ ಎರಡನ್ನು ಹುಸಿಯೆನುವ
ಹದನ ಸರಿಯಲ್ಲ[1]। ಬ್ರಹ್ಮಜ್ಞ ॥ 128 ॥

**(ಕನಸಿನ ಪರಿಹಾರ)**

ಕನಸನ್ನು ಕನಸೆಂದು । ಎಣಿಸುವಿರಿ ಇಲ್ಲಿರಲು
ಅನುಭವವು ಹೀಗೆ ಇರಲಿಲ್ಲ ಕನಸಾಗ
ನನಸಾಗಿ ತೋರ್ಕು । ಬ್ರಹ್ಮಜ್ಞ ॥ 129 ॥

ದಿನ ರಾತ್ರಿ ಯುಗ ವರ್ಷ । ಎನುತಿಹೆವು ಆವಾಗ
ಕ್ಷಣಮಾತ್ರವಿದುವೆ ಎನ್ನದಲೆ ನಿತ್ಯವೆಂ-
ದೆಣಿಸುವೆವು ಸತ್ಯ । ಬ್ರಹ್ಮಜ್ಞ ॥ 130 ॥

ಕಾಲದೇಶಾದಿಗಳು । ತಾಳಿಹವನಂತತೆಯ
ಮೇಲಾಗಿ ಕಾರ್ಯಕಾರಣಗಳವು ಸತ್ಯ
ಕೇಳಿ ಕನಸಿನಲಿ । ಬ್ರಹ್ಮಜ್ಞ ॥ 131 ॥

---

1. ಪದ್ಯ 119 ರಿಂದ 128ರ ವಿಷಯಗಳಿಗೆ **"ಪರಮಾರ್ಥಚಿಂತಾಮಣಿ"** ಯ ಪುಟ 45 ರಿಂದ 47 ನೋಡಿರಿ.

ಇಲ್ಲಿಯಂತೆಯೆ ಅಲ್ಲಿ । ಎಲ್ಲರಿಗು ಸಾಮಾನ್ಯ
ಅಲ್ಲಿ ಆ ಜನರು ಜಗವೆಂಬ ಭಾವ ಆ
ಎಲ್ಲವೂ ಸಮವು । ಬ್ರಹ್ಮಜ್ಞ ॥ 132 ॥

ಈ ಜಗದ ವಸ್ತುಗಳು । ಈ ಜಗದಿ ಉಪಯುಕ್ತ
ಸೋಜಿಗವೆ ಇಲ್ಲ ಕನಸಿನವು ಅಲ್ಲಿಗೆ ಪ್ರ-
ಯೋಜಕಗಳಿಹವು[1]। ಬ್ರಹ್ಮಜ್ಞ ॥ 133 ॥

ಅವು ಇಲ್ಲಿ ವ್ಯರ್ಥವೆನೆ । ಇವು ಅಲ್ಲಿ ವ್ಯರ್ಥವೇ
ತವೆಸತ್ಯವೆನುವ ಮಾತಿಗೀ ಲಕ್ಷಣವು
ಸವನಿಸದು ನೋಡಿ । ಬ್ರಹ್ಮಜ್ಞ ॥ 134 ॥

ಅಲ್ಲಿ ಕಾಣುವ ನಿಯಮ । ಅಲ್ಲಿಗೇ ಸರಿಯಿಹುದು
ಇಲ್ಲಿರುವ ನಿಯಮ ಅಲ್ಲಿಲ್ಲ ಅಲ್ಲಿಯದು
ಇಲ್ಲಿಯೂ ಇಲ್ಲ । ಬ್ರಹ್ಮಜ್ಞ ॥ 135 ॥

ಎರಡು ಕೈಗಳ ರೂಪ । ನರನದೆನ್ನುವೆವಿಲ್ಲಿ
ಮೆರೆವೆಂಟು ಕರದ ಸ್ವಪ್ನವದು ಸುಳ್ಳೆನಲು
ಅರಿತೀಗ ನೋಡಿ[3]। ಬ್ರಹ್ಮಜ್ಞ ॥ 136 ॥

ತನ್ನ ರೂಪವು ನಿಜದಿ । ಇನ್ನು ಎರಡೂ ಅಲ್ಲ
ಮುನ್ನವಿವು ಒಂದು ಇರುವಾಗ ತಾನಿರದು
ಇನ್ನೊಂದು ನೋಡಿ । ಬ್ರಹ್ಮಜ್ಞ ॥ 137 ॥

ಬಿಟ್ಟು ತೊಲಗುವದೆಲ್ಲ । ಗಟ್ಟಿ ನಿಜವಲ್ಲವದು
ಇಟ್ಟು ಈ ನಿಯಮ ನೋಡಲ್ಕೆ ಇವು ಎರಡು
ಬಿಟ್ಟು ಹೋಗುವವು[3]। ಬ್ರಹ್ಮಜ್ಞ ॥ 138 ॥

ತಾನು ಬೇರಿರುತಿನ್ನು । ಈ ನರನೆ ನಾನೆಂಬ
ಭಾನವನು ಬಿಟ್ಟು ನೋಡಲ್ಕೆ ಈ ನುಡಿಯ
ಸ್ವಾನುಭವ ಬಕ್ಕು । ಬ್ರಹ್ಮಜ್ಞ ॥ 139 ॥

### (ವಾಸನಾದಿಗ್ರಹಿಕೆಗಳು)

ವಾಸನೆಯ ಮಾತು ಮೇಣ್ । ಈಸು ವಿಧ ವೈದ್ಯಗಳು
ಭಾಸಿಸುವ ದೇವದರ್ಶನವಿದೆಲ್ಲ ಈ-
ಯಾಸಕುತಿ ದೃಷ್ಟಿ । ಬ್ರಹ್ಮಜ್ಞ ॥ 140 ॥

1. ಮಾಂ. ಕಾ. ಭಾ. 2–7ನ್ನು ನೋಡಿರಿ. 2. ಮಾಂ. ಕಾ. 2–8ನ್ನು ನೋಡಿರಿ.
3. ಮಾಂ. ಕಾ. 2–6ನ್ನು ನೋಡಿರಿ.

ವ್ಯವಹಾರ ಮಾಳ್ಪಾಗ । ಇವುಗಳಿಗೆ ಬೆಲೆಯುಂಟು
ಇವುಗಳಾ ನಿಜವ ನೋಳ್ಪಾಗ ಬೆಲೆಯಿಲ್ಲ
ಅವಧರಿಪುದಿದನು। ಬ್ರಹ್ಮಜ್ಞ ॥ 141 ॥

ನನಸು ಕಾರಣ ಮತ್ತೆ । ಕನಸು ಕಾರ್ಯವೆನುತ್ತೆ
ಕನವರಿಪರಿದನು ತಲೆಕೆಳಗು ಇರುವಂತೆ
ಎಣಿಕೆ ತಪ್ಪುತಲಿ । ಬ್ರಹ್ಮಜ್ಞ ॥ 142 ॥

ಜಾಗರದಿ ನಡೆದಿರುವ । ಆಗುಹೋಗುಗಳೆಲ್ಲ
ಆಗಲೇ ಸ್ವಪ್ನದೊಳಬರುವವೆನ್ನುವರು
ಈಗೊಮ್ಮೆ ಜನರು । ಬ್ರಹ್ಮಜ್ಞ ॥ 143 ॥

ಕನಸಿನಲಿ ಹುಲಿ ಬರಲು । ನನಸಾಗೆ ನಡುಗುವನು
ಎನಲಿದುವೆ ಮತ್ತೆ ಕನಸೀಗ ಕಾರಣವು
ನನಸಾಯ್ತು ಕಾರ್ಯ । ಬ್ರಹ್ಮಜ್ಞ ॥ 144 ॥

ನನಸು ಸತ್ಯವು ಮತ್ತೆ । ಕನಸು ಮಿಥ್ಯೆಯೆನುತ್ತೆ
ಮನುಜರೀ ಕಾರ್ಯಕಾರಣವನೊಪ್ಪಿದುದು
ಘನ ಭ್ರಾಂತಿಯಕ್ಕು । ಬ್ರಹ್ಮಜ್ಞ ॥ 145 ॥

ಸತ್ಯದಿಂ ಮಿಥ್ಯವದು । ಮತ್ತೆ ಹುಟ್ಟದು ಹೀಗೆ
ಮಿಥ್ಯೆಯಿಂ ಸತ್ಯ ತಾನೀಗ ಹುಟ್ಟುವದು
ವ್ಯರ್ಥವಹ ಭ್ರಾಂತಿ । ಬ್ರಹ್ಮಜ್ಞ ॥ 146 ॥

ಸತ್ಯದಿಂ ಸತ್ಯವೂ । ಮಿಥ್ಯೆಯಿಂ ಮಿಥ್ಯೆಯೂ
ಮತ್ತಿನ್ನು ಹುಟ್ಟಬಹುದೆಂಬುದೆಲ್ಲವೂ
ವ್ಯರ್ಥ ಪ್ರಲಾಪ । ಬ್ರಹ್ಮಜ್ಞ ॥ 147 ॥

ಪರಮಗುರುಗಳ ಕೃತಿಯ । ವರ ಕಾರಿಕೆಗಳಲ್ಲಿ[1]
ಉರುತರದ ಕೊನೆಯ ಅಧ್ಯಾಯದಲ್ಲಿದನು
ಸರಿಯಾಗಿ ನೋಡಿ । ಬ್ರಹ್ಮಜ್ಞ ॥ 148 ॥

ಬರೆದಿಹರು ಭಾಷ್ಯವನು । ಗುರು ಶಂಕರರು ಇದಕೆ
ಪರಿಕಿಸಲು ಜೊತೆಗೆ ವೈತಥ್ಯದಧ್ಯಾಯ
ಸರಿಯಾಗಿ ತಿಳಿದು । ಬ್ರಹ್ಮಜ್ಞ ॥ 149 ॥

---

1. ಪದ್ಯ 142 ರಿಂದ ಈವರೆಗಿನ ವಿಷಯಕ್ಕೆ ಮಾಂ. ಕಾ. 4–37 ರಿಂದ 40ರವರೆಗೆ ನೋಡಿರಿ.

## (ಉಪಸಂಹಾರ)

ಹೀಗೆ ಪರಿಕಿಸಿ ನೋಡೆ । ಹೋಗುವದು ಈ ಭ್ರಾಂತಿ
ಜಾಗರವು ಕನಸು ಎನುವೆರಡು ಹುಸಿತೋರ್ಕೆ-
ಯಾಗಿರಲು ನಿಜದಿ । ಬ್ರಹ್ಮಜ್ಞ ॥ 150 ॥

ಮೊದಲು ತೋರದೆ ಮತ್ತೆ । ತುದಿಯಲ್ಲಿ ಅಡಗುತ್ತೆ
ಅದು ನಡುವೆ ನಿಜದಿ ಇರುವಂತೆ ತೋರುವದು
ಇದೆ ಹುಸಿಯ ರೀತಿ[1]। ಬ್ರಹ್ಮಜ್ಞ ॥ 151 ॥

ಕನಸು ಕಾಣುವ ಮುನ್ನ । ಕನಸೆಲ್ಲ ಮುಗಿಯಲದು
ತನಗಿನ್ನು ಕಾಣದಿಹುದಾಗಿ ಮಧ್ಯದಲಿ
ಮಿನುಗಿರುವ ಹುಸಿಯು । ಬ್ರಹ್ಮಜ್ಞ ॥ 152 ॥

ಎಚ್ಚರದ ಮುನ್ನವೂ । ಎಚ್ಚರದ ಜಗವಿರದು
ಎಚ್ಚರವು ತೊಲಗೆ ಮತ್ತಿಲ್ಲ ಮಧ್ಯದಲಿ
ಹುಚ್ಚು ಹುಸಿತೋರ್ಕೆ । ಬ್ರಹ್ಮಜ್ಞ ॥ 153 ॥

ಇಲ್ಲಿ ಗುಟ್ಟೊಂದಿಹದು । ಮೆಲ್ಲನೆಯೆ ಗುರುತಿಸಿರಿ
ಸಲ್ಲಲಿತ ಸಾಕ್ಷಿಯನುಭವದಿ ನೆಲಿಸಲ್ಕೆ
ಒಳ್ಳೆ ಸಂದರ್ಭ । ಬ್ರಹ್ಮಜ್ಞ ॥ 154 ॥

ಕನಸಿನಾ ತುದಿಮೊದಲು । ಅನುನಯದಿ ಪೇಳಿರಲು
ಅನುಭವದಿ ಅಹುದು ಎನುವಾಗ ತಾ ಸಾಕ್ಷಿ-
ಮನಬುದ್ಧಿಯಲ್ಲ । ಬ್ರಹ್ಮಜ್ಞ ॥ 155 ॥

ಎಚ್ಚರದ ಮೊದಲೆನಲು । ಮೆಚ್ಚಿ ಅಹುದೆನುವಾಗ
ನಿಚ್ಚಳದಿ ತಾನು ಅನುಭವದ ರೂಪನಿದ-
ನುಚ್ಚರಿಸುತಿಹನು । ಬ್ರಹ್ಮಜ್ಞ ॥ 156 ॥

ಮೊದಲು ಕೊನೆ ಎಂಬಲ್ಲಿ । ಒದಗಿಲ್ಲ ಕಾಲವದು
ಇದು ಬರಿಯ ಅರಿವಿನನುಭವವ ತೋರಿಸಲು
ಒದಗಿರ್ಪ ಶಬ್ದ । ಬ್ರಹ್ಮಜ್ಞ ॥ 157 ॥

ಇಂತು ಗುರುತಿಸಲಾಗ । ಸ್ವಂತ ತಾನೇ ಸತ್ಯ
ಭ್ರಾಂತಿಯಿವು ಕನಸು ಎಚ್ಚರಗಳೆರಡು ಸಹ
ಇಂತಿದನು ನೋಡಿ । ಬ್ರಹ್ಮಜ್ಞ ॥ 158 ॥

1. ಮಾಂ. ಕಾ. 2-6.

ನನಸಿನಾತ್ಮನು ತುರಿಯ । ನನಸೆಂಬುದಿರದಂತೆ
ಕನಸಾಗಿ ತೋರ್ಪ ತೈಜಸನು ತುರಿಯನೇ
ಕನಸೆಂಬುದಿಲ್ಲ । ಬ್ರಹ್ಮಜ್ಞ ॥ 159 ॥

ಕನಸು ಎಚ್ಚರವೆಂದು । ಕನವರಿಪುದೇ ಕನಸು
ಕನಸಿಲ್ಲ ಮತ್ತೆ ಎಚ್ಚರವು ತನಗಿಲ್ಲ
ಎನುವದೇ ನನಸು। ಬ್ರಹ್ಮಜ್ಞ ॥ 160 ॥

ನಿಜದ ಎಚ್ಚರವಿದುವೆ । ಅಜನದ್ವಯಾತ್ಮವಿದು
ನಿಜವರಿಯೆ ಹೋಯ್ತು ತೈಜಸನ ಆರೋಪ
ಅಜ ನಿತ್ಯ ತಾನು । ಬ್ರಹ್ಮಜ್ಞ ॥ 161 ॥

ಜಾಗ್ರತ್ತು ಸ್ವಪ್ನಗಳ । ಆಗುಹೋಗುಗಳನ್ನು
ತೂಗುತ್ತ ತುಂಬಿ ಅರಿವವನನರಿಯಲ್ಕೆ
ನೀಗುವದು ಶೋಕ । ಬ್ರಹ್ಮಜ್ಞ ॥ 162 ॥

ಈ ಮಾತು ಕಾಠಕದಿ[1] । ನೇಮದಿಂ ಬಂದಿಹುದು
ತಾ ಮಾಡಿ ಮನನ ನೋಡಲ್ಕೆ ಅನುಭವದ
ಸೀಮೆ ಗೊತ್ತಹದು । ಬ್ರಹ್ಮಜ್ಞ ॥ 163 ॥

ದ್ವೈತ ಹುಸಿ ಎಂಬುದನು । ಈತನಕ ಹೇಳಿಹುದು
ದ್ವೈತಕ್ಕೆ ತಾನೆ ಆಧಾರನದ್ವಯನ-
ತೀತವಹ ವಸ್ತು । ಬ್ರಹ್ಮಜ್ಞ ॥ 164 ॥

ಉತ್ತಮಗೆ ಇದರಿಂದ । ಆತ್ಮನಿಶ್ಚಯವಕ್ಕು
ಮತ್ತಿನ್ನು ತಾನು ಇರುವ ಬಗೆ ವರ್ಣಿಸುವ
ಯತ್ನ ಬೇಕಿಲ್ಲ । ಬ್ರಹ್ಮಜ್ಞ ॥ 165 ॥

ತಾನಲ್ಲದುದು ಕಳೆಯೆ । ತಾನು ಸಿದ್ಧನೆ ಇಹನು
ಮೇಣಿಲ್ಲ ತನ್ನನರಿಯುವಾ ಕೆಲಸ, ಇದೆ
ಜ್ಞಾನದುಪದೇಶ । ಬ್ರಹ್ಮಜ್ಞ ॥ 166 ॥

ಹೀಗಿದ್ದರೂ ಕೆಲರು । ಕೂಗುವರು ಸಂಶಯದಿ
ಈಗ ಈ ದ್ವೈತ ಹುಸಿಯಾಯ್ತು ಅದ್ವೈತ-
ವಾಗುವದು ಹೇಗೆ । ಬ್ರಹ್ಮಜ್ಞ ॥ 167 ॥

1. ಕಠ. 2-1-4ನ್ನು ನೋಡಿರಿ.

ಆಗಬೇಕಾಗಿಲ್ಲ । ಆಗಿಯೇ ಇದೆ ನಿತ್ಯ
ಈಗಿದನು ತಾನು ಕಾಣದಲೆ ಬಳಲುವಗೆ
ಹೇಗೆ ಬೋಧಿಪುದು । ಬ್ರಹ್ಮಜ್ಞ ॥ 168 ॥

ಆದರೂ ಸಹನೆಯಿಂ । ಬೋಧಿಪುದು ಶ್ರುತಿಯಾಗ
ಬೋಧ ನಿಜರೂಪ ನಿದ್ರೆಯಲಿ ತಾನಿರ್ಪ
ಮಾದರಿಯು ತಿಳಿಗು । ಬ್ರಹ್ಮಜ್ಞ ॥ 169 ॥

ಇದಕಾಗಿ ನಿದ್ರೆಯನು । ವಿದಿತವಾಗುವ ತೆರದಿ
ಹದನಾಗಿ ಬಿಡಿಸಿ ತಿಳಿಸಿಹರು ಜ್ಞಾನಿಗಳು
ಇದ ನೋಡಿ ಮುಂದೆ । ಬ್ರಹ್ಮಜ್ಞ ॥ 170 ॥

ಮುಂದಿನಧ್ಯಾಯದಲಿ ಚಂದದಿಂ ನಿದ್ರೆಯಾ
ಬಂಧುರದ ದೃಷ್ಟಿ ಭೇದಗಳನೊರೆಯೆ ಮುದ-
ದಿಂದಲೆತ್ನಿದುವೆ । ಬ್ರಹ್ಮಜ್ಞ ॥ 171 ॥

# ಎಂಟನೆಯ ಅಧ್ಯಾಯ

## ಪ್ರಾಜ್ಞಪಾದ

ನಿದ್ದೆಯಲಿ ತಾನಿರ್ಪ । ಶುದ್ಧರೂಪವ ತಿಳಿಯೆ
ನಿದ್ದೆ ಮೇಣ್ ಕನಸು ಎಚ್ಚರಗಳೆಂಬ ಈ
ಗದ್ದಲವೆ ಹೋಯ್ತು । ಬ್ರಹ್ಮಜ್ಞ[1]

ಮೂರನೆಯ ಪಾದವನು । ಆರಭಿಸಿ ಮೊದಲಲ್ಲಿ
ಆರೋಪವನ್ನೆ ಅನುಸರಿಸಿ ತಿಳಿಸುತ್ತ
ಸೇರಿಪುದು ನಿಜದಿ । ಬ್ರಹ್ಮಜ್ಞ

ಕನಸು ಕಣದೆ ಮತ್ತೆ । ಮನಸು ತೋರದಿರುತ್ತೆ
ತನಿನಿದ್ರೆ ಎಂಬ ಅನುಭವವ ಸ್ಮರಿಸುವದು
ಮನುಜ ಮೊದಲಲ್ಲಿ । ಬ್ರಹ್ಮಜ್ಞ

ಈ ನಿದ್ರೆಯಲ್ಲಿನ್ನು । ತಾನಿರುವದನುಭವವು
ಈ ನುಡಿಯೆ ಮತ್ತೆ ಶ್ರುತಿಯಲಿ ಸುಷುಪ್ತಿಯ
ಸ್ಥಾನವೆಂದಿಹುದು । ಬ್ರಹ್ಮಜ್ಞ[2]

ಕನಸುನನಸುಗಳಲ್ಲಿ । ಅನಿಸಿರುವ ತೋರಿರುವ
ಘನದ್ವೈತವೆಲ್ಲ ತಾನೆಂಬುದೀ ಹಿಂದೆ
ಮನನವಾಗಿಹುದು । ಬ್ರಹ್ಮಜ್ಞ

ಭಿನ್ನಭಿನ್ನದ ವಸ್ತು । ಭಿನ್ನಭಿನ್ನದ ಜ್ಞಾನ
ಇನ್ನು ತಾನೊಬ್ಬನಾಗಿದ್ದನೆರಡರಲಿ[3]
ಎನ್ನುವದ ಸ್ಮರಿಸಿ । ಬ್ರಹ್ಮಜ್ಞ

ನಿದ್ದೆಯಲಿ ಭಿನ್ನತೆಯು । ಮುದ್ದೆಯಾಯ್ತೀಗಿಲ್ಲಿ
ಇದ್ದ ಈ ಆತ್ಮನೊಳು ಸೇರಿ ಒಂದಾಯ್ತು
ಶುದ್ಧ ಇರವಾಯ್ತು । ಬ್ರಹ್ಮಜ್ಞ

---

1. ಬೃ. 4–4–6, ಭಾ.ಭಾ. 270.
2. 3–4 ನೆಯ ಪದ್ಯಗಳ ಅಭಿಪ್ರಾಯಕ್ಕೆ ಮಾಂ. ಮಂ. 5ನ್ನು ನೋಡಿರಿ.
3. ಎರಡರಲಿ, ಎಂದರೆ ಎಚ್ಚರಕನಸುಗಳಲ್ಲಿ – ಎಂದರ್ಥ.

ಪಡಿಯಚ್ಚಿನಲಿ ಹೊಡೆಯೆ । ಗಡನೆ ಅವಯವ ಬಕ್ಕು
ಅಡಗುವವು ಮಣ್ಣು ಮುದ್ದೆಯಾಗಲು ಹೀಗೆ
ಇಡಿಗಿರುವ ಭೇದ । ಬ್ರಹ್ಮಜ್ಞ ॥ 8 ॥

ಜಲವೆ ಅಲೆಯಾಗಿತ್ತು । ಅಲುಗಾಡಿದಾಗಲ್ಲಿ
ಅಲುಗಾಟ ನಿಲಲು ಜಲಮಾತ್ರವಾದಂತೆ
ತಿಳಿಯಬೇಕಿದನು । ಬ್ರಹ್ಮಜ್ಞ ॥ 9 ॥

ತಾನೆ ಈ ರೀತಿಯಲಿ । ಈ ನಿಖಿಳವಾಗಿದ್ದ
ಈ ನಿಖಿಳಭೇದವಡಗಲ್ಕೆ ನಿದ್ದೆಯಲಿ
ತಾನೆ ತಾನಾದ । ಬ್ರಹ್ಮಜ್ಞ ॥ 10 ॥

ಶ್ರುತಿಯು ಏಕೀಭೂತ । ಸ್ಥಿತಿಯನ್ನು ಹೇಳುವದು
ಅತಿಶಯದಿ ಮತ್ತೆ ಪ್ರಜ್ಞಾನಘನನೆನುವ
ಮತವೆ ಈ ಮಾತು । ಬ್ರಹ್ಮಜ್ಞ ॥ 11 ॥

ದ್ವೈತವಾಗಿರುವಂತೆ । ಈತ ತೋರ್ಪುದ ಬಿಡಲು
ಮಾತುಯಿದು ಬಂತು ನಿದ್ದೆಯಲಿ ತಾನೇಕಿ-
ಭೂತನೆನ್ನುವದು । ಬ್ರಹ್ಮಜ್ಞ[1] ॥ 12 ॥

ಬಿಡಿಬಿಡಿಯ ಅರಿವುಳ್ಳ । ಬಡಜೀವನಾದ ತೆರ
ಗಡತೋರ್ದ ಆತ್ಮನೀಗಿಲ್ಲಿ ಅರಿವಿನಾ
ಕಡು ಗಟ್ಟಿಯಾದ । ಬ್ರಹ್ಮಜ್ಞ ॥ 13 ॥

ಚಿನ್ನದಾಭರಣಗಳ । ಮುನ್ನ ಕರಗಿಸಲಾಗ
ಚೆನ್ನಾಗಿ ಭೇದವಳಿದು ತಾ ಗಟ್ಟಿಯೇ
ಇನ್ನಾಗುವಂತೆ । ಬ್ರಹ್ಮಜ್ಞ ॥ 14 ॥

ಪ್ರಜ್ಞಾನಘನನೆನಲು । ಈ ಜ್ಞಾನ ಬರಬೇಕು
ಪ್ರಜ್ಞಪ್ತಿ ಹೊರತು ಇನ್ನೊಂದು ಇಲ್ಲ ಶ್ರುತಿ-
ಯಾಜ್ಞೆ ಹೀಗಿಹುದು । ಬ್ರಹ್ಮಜ್ಞ ॥ 15 ॥

'ಏವ' ಎನ್ನುವ ಶಬ್ದ[2] । ಭಾವವಿದು ಈಗಿದುವೆ
ಕೇವಲದ ಅರಿವು ಇದಕಿರುವ ಭಾಷ್ಯವನು
ಸಾವರಿಸಿ ನೋಡಿ । ಬ್ರಹ್ಮಜ್ಞ ॥ 16 ॥

---

1. 'ಈ ವಿಷಯಕ್ಕೆ ಮಾಂ. ಭಾ.ಭಾ. 16ರಲ್ಲಿ ಹೇಳಿಸಿಕೊಳ್ಳುತ್ತದೆ-ಎಂಬಲ್ಲಿರುವ ಮೂರನೆಯ ಟಿಪ್ಪಣಿಯನ್ನು ನೋಡಿರಿ.

2. ಮಾಂ. ಭಾ.ಭಾ. 16ರಲ್ಲಿಯೂ "ಏವಶಬ್ದಾತ್ ನ ಜಾತ್ಯನ್ತರಮ್" ಎಂಬ ವಾಕ್ಯವನ್ನು ನೋಡಿರಿ.

ಅರಿವು ಬಿಡಿಯಾಗಿಲ್ಲ । ಇರಲಿಲ್ಲ ಬಿಡಿತೋರ್ಕೆ
ಅರಿವಿನಾ ಗಟ್ಟಿ ಬರಿತಾನೆ ನಿದ್ರೆಯೆಂ-
ದರಿಯಬೇಕಿಲ್ಲಿ । ಬ್ರಹ್ಮಜ್ಞ ॥ 17 ॥

### (ಆನಂದಮಯ)

'ನಾನು, ಇದು' ಎಂಬುದೇ । ಮೇಣೀಗ ಆಯಾಸ
ಏನೊಂದುಮಿಲ್ಲದಿಹನಾಗಿ ಇವನೀಗ
ಆನಂದಮಯನು । ಬ್ರಹ್ಮಜ್ಞ ॥ 18 ॥

ನಿಲ್ಲದಿದು ಕಡೆತನಕ । ಮೆಲ್ಲನೆಚ್ಚರ ಬರಲು
ಎಲ್ಲವೂ ಬಹುದು ಮುನ್ನಿನಂತಿದಕಾಗಿ
ಇಲ್ಲಿ 'ಮಯ' ಬಂತು । ಬ್ರಹ್ಮಜ್ಞ[1] ॥ 19 ॥

ಮಯಕೆ ಪ್ರಾಚುರ್ಯಾರ್ಥ । ನಯವಾಗಿ ಬರೆದಿಹರು
ಮಯನೆನಲು ನಿತ್ಯನಲ್ಲೆಂಬ ನೆಪವನ-
ನ್ವಯಿಸಿಹರು ನೋಡಿ । ಬ್ರಹ್ಮಜ್ಞ ॥ 20 ॥

ಕೋಶವೆಂಬರ್ಥವಿದು । ಲೇಸಲ್ಲವೀ ಸ್ಥಳದಿ
ಮೋಸವದು ಅಲ್ಲಿ ಆನಂದಮಯವೆಂಬ
ಕೋಶವಿಹುದೆನಲು । ಬ್ರಹ್ಮಜ್ಞ ॥ 21 ॥

ಕೋಶಕ್ಕೆ ಪ್ರಿಯಮೋದ । ಲೇಸು ಈಗ ಪ್ರಮೋದ
ಈಸು ಈ ವೃತ್ತಿ ಬರಬೇಕು ನಿದ್ರೆಯಲಿ
ಭಾಸಿಸದು ವೃತ್ತಿ । ಬ್ರಹ್ಮಜ್ಞ ॥ 22 ॥

ಇಷ್ಟವಸ್ತುವು ತೋರೆ । ಹುಟ್ಟುವೀ ಭಾವ ಪ್ರಿಯ
ಇಷ್ಟವದು ದೊರೆಯೆ ಮೋದವದು ಭೋಗಿಸಲು
ಶಿಷ್ಟಪ್ರಮೋದ । ಬ್ರಹ್ಮಜ್ಞ ॥ 23 ॥

ಎಚ್ಚರದಿ ಸ್ವಪ್ನದಲಿ । ನಿಶ್ಚಯದಿ ಇರ್ಕುಮಿದು
ಅಚ್ಚ ತನಿನಿದ್ರೆ ಬಂದಾಗ ಇಹುದೆನಲು
ಹುಚ್ಚುತನವಹುದು । ಬ್ರಹ್ಮಜ್ಞ ॥ 24 ॥

---

1. ಪದ್ಯ 18 ರಿಂದ 20ರರೆಗಿನ ವಿಷಯಕ್ಕೆ ಮಾಂ.ಭಾ.ಭಾ. 16ರಲ್ಲಿಯ "ಮನಸಃ ವಿಷಯವಿಷಯ್ಯಾಕಾರಸ್ಪನ್ದನಾಯಾಸದುಃಖಾಭಾವಾತ್" ಎಂಬಲ್ಲಿಂದ "ಆನಂದಮಯಃ, ಅನನ್ದಪ್ರಾಯಃ" – ಎಂಬಲ್ಲಿಯವರೆಗೆ ನೋಡಿರಿ.

ತೈತ್ತಿರೀಯದಿ ಕೋಶ । ತತ್ತ್ವವನು ಪೇಳ್ವಾಗ
ಇತ್ತಿಹರು ಮಯಕೆ ಇದು ವಿಕಾರಾರ್ಥವನೆ
ಮತ್ತೆ ಶಂಕರರು । ಬ್ರಹ್ಮಜ್ಞ ॥ 25 ॥

ಬಿಡಿಯಾದ ಅರಿವಿಲ್ಲ । ಬಿಡಿಬಿಡಿ ಜಗತ್ತಿಲ್ಲ
ನುಡಿದಿರಲು ಶ್ರುತಿಯು ಇದ ಮರೆತು ಕೋಶವೆನೆ
ಎಡವಿಹರು ನೋಡಿ। ಬ್ರಹ್ಮಜ್ಞ[1] ॥ 26 ॥

'ನಾನು, ಇದು' ಎಂಬ ಶ್ರಮ । ಏನೊಂದು ಇಲ್ಲದಲೆ
ತಾನಿರುವ ಭಾನ ಮಾತ್ರವೇ ಎಂಬುದೀ
ಆನಂದಮಯವು । ಬ್ರಹ್ಮಜ್ಞ ॥ 27 ॥

## (ಆನಂದಭುಕ್)

ಆನಂದಭೋಕ್ತೃವೆನೆ । ಏನೊಂದ ಚಿಂತಿಸನು
ಮಾನವನು ಒಬ್ಬ ನಿಶ್ಚಿಂತನಾಗಿರಲು
ಆನಂದಭೋಗಿ । ಬ್ರಹ್ಮಜ್ಞ ॥ 28 ॥

ಈ ರೀತಿ ನಿದ್ದೆಯಲಿ । ತೀರಿಹುದು ಚಿಂತೆಯದು
ಬೇರೆ ವಿಧ ಮತ್ತೆ ತನಗಾಗ ಯೋಚನೆಯ
ಭಾರವೇ ಇಲ್ಲ । ಬ್ರಹ್ಮಜ್ಞ ॥ 29 ॥

ಇಲ್ಲದಲೆ ಯೋಚನೆಯು । ಅಲ್ಲಿಹನು ಆನಂದಿ
ಬಲ್ಲಂತೆ ಹೀಗೆ ಅನುಭವದ ವರ್ಣನೆಯೆ
ಇಲ್ಲಿ ಭೋಕ್ತೃತ್ವ । ಬ್ರಹ್ಮಜ್ಞ ॥ 30 ॥

ಎಚ್ಚರದಲಿರುವಂತೆ । ತುಚ್ಛಭೋಕ್ತೃವು ಅಲ್ಲ
ಸ್ವಚ್ಛನಿವನೇಕನದ್ವಯನು ಇದಕಿನ್ನು
ಮುಚ್ಚು ಮರೆ ಇಲ್ಲ । ಬ್ರಹ್ಮಜ್ಞ ॥ 31 ॥

ಬರಲು ಎಚ್ಚರ ಮತ್ತೆ । ಇರದು ಸುಖವಿದೆನುತ್ತೆ
ಬರಿಸೌಖ್ಯದಿರವೆ ಆನಂದಭೋಕ್ತೃತ್ವ
ಧರಿಸಿಹುದು ನಾಮ । ಬ್ರಹ್ಮಜ್ಞ[3] ॥ 32 ॥

1. ಪದ್ಯ 21 ರಿಂದ 26ರವರೆಗಿನ ವಿಷಯಕ್ಕೆ ಮಾಂ. ಭಾ.ಭಾ. 16ರಲ್ಲಿ ಮಯಟ್ ಪ್ರತ್ಯಯಕ್ಕೆ ಪ್ರಾಚುರ್ಯಾರ್ಥವನ್ನು ಹೇಳಿರುವದನ್ನೂ ಮತ್ತು ತೈ.ಭಾ.ಭಾ. 144ರಲ್ಲಿ ಮಯಟ್‌ಪ್ರತ್ಯಯಕ್ಕೆ ವಿಕಾರಾರ್ಥವನ್ನು ಹೇಳಿರುವದನ್ನೂ ಗಮನಿಸಿರಿ.

2. ಪದ್ಯ 28 ರಿಂದ 32ರವರೆಗೆ ಮಾಂ. ಭಾ.ಭಾ. 16ರಲ್ಲಿ "ಯಥಾ ಲೋಕೇ...." ಎಂಬ ವಾಕ್ಯವನ್ನೂ ಮತ್ತು "ಆನಂದಾನುಭವಿ" ಎಂಬಲ್ಲಿರುವ ಎರಡನೆಯ ಟಿಪ್ಪಣಿಯನ್ನೂ ನೋಡಿರಿ.

ಇದನರಿಯದಿದ್ದವರು । ಇದರಲ್ಲಿ ತ್ರಿಪುಟಿಯನು
ಒದಗಿಸುತ ಹೇಳಿ ಕಲ್ಪಿಸಿದ ಭೋಕ್ತೃತ್ವ
ವಿದು ತಪ್ಪುಗ್ರಹಿಕೆ । ಬ್ರಹ್ಮಜ್ಞ ॥ 33 ॥

ಅಜ್ಞಾನಮಯವೃತ್ತಿ । ಪ್ರಾಜ್ಞಜೀವತ್ವವನು
ಸೂಜ್ಞವಹ ಬ್ರಹ್ಮದಾನಂದ ಭೋಜ್ಯವನು
ಆಜ್ಞೆಮಾಡುವರು ಬ್ರಹ್ಮಜ್ಞ ॥ 34 ॥

ತ್ರಿಪುಟಿ ಕಲ್ಪನೆಯಿದುವೆ । ಅಪರಿಚಿತ ಭಾಷ್ಯಕ್ಕೆ
ಸುಪರಿಚಿತ ನಿದ್ರೆಯನುಭವಕೆ ಇದು ಬರಿಯ
ವಿಪರೀತಗ್ರಹಿಕೆ । ಬ್ರಹ್ಮಜ್ಞ[1] ॥ 35 ॥

ಮೂರವಸ್ಥೆಗಳಲ್ಲಿ । ಸೇರಿಸುತ ಕೋಶಗಳ
ಸಾರುವದು ಭಾಷ್ಯದಾಶಯಕೆ ಅನುಭವಕೆ
ದೂರಹುದು ನೋಡಿ । ಬ್ರಹ್ಮಜ್ಞ[2] ॥ 36 ॥

ಆನಂದರೂಪನಿವ । ಆನಂದವೇ ತಾನು
ಆನಂದಭೋಗಿ ಎಚ್ಚರದ ಮಾನದಲಿ
ಈ ನುಡಿಯನರಿಗೆ । ಬ್ರಹ್ಮಜ್ಞ ॥ 37 ॥

ತಾನಾಗಿ ಇರುವದನು । ತಾನೊಂದೆ ಇದ್ದುದನು
ಆನಂದದಿಂದೆ ಇರುವದನು ಈವರೆಗೆ
ಗಾನಮಾಡಿಹುದು । ಬ್ರಹ್ಮಜ್ಞ ॥ 38 ॥

ನಿದ್ರೆಯನುಭವವನ್ನು । ಎದ್ದಾಗ ಸ್ಮರಿಸಲ್ಕೆ
ಬುದ್ಧಿಯಲಿ ಬಕ್ಕು ಅದ್ವಯದ ಅನುಭವವು
ಶುದ್ಧ ತಾನಿಹನು । ಬ್ರಹ್ಮಜ್ಞ[3] ॥ 39 ॥

### (ಚೇತೋಮುಖಃ)

ಚೇತೋಮುಖನು ಎಂಬ । ಮಾತಿನಲಿ ಅಡಗಿರುವ
ಹೇತುವಿದು ಕನಸುನನಸುಗಳಿಗೀತನೇ
ಚೇತನಪ್ರದನು । ಬ್ರಹ್ಮಜ್ಞ ॥ 40 ॥

---

1. ಪದ್ಯ 33 ರಿಂದ 35ರ ಪೂರ ವಿಷಯಕ್ಕೆ ಪಂಚದಶೀ 10–64, 65–66ನ್ನು ನೋಡಿರಿ. 2. ಪಂಚದಶೀ 1–34, 35, 36ನ್ನು ನೋಡಿರಿ.

3. ಛಾಂ. ಭಾ.ಭಾ. 449ರಲ್ಲಿ "ಯಥಾ ಸುಷುಪ್ತಾದುತ್ಥಿತಃ ಸತ್ತ್ವಮಾತ್ರಮವ, ಗಚ್ಛತಿ" ಎಂಬುದನ್ನು ನೋಡಿರಿ.

ಹೊರಬರಲು ಎಚ್ಚರವು । ಹೊರಬರಲು ಸ್ವಪ್ನವೂ
ಪರಮಾತ್ಮನಿವನೆ ದ್ವಾರನಿಹ ಚೈತನ್ಯ-
ನೀ ರೀತಿ ಮುಖನು । ಬ್ರಹ್ಮಜ್ಞ ॥ 41 ॥

ನಿದ್ದೆಯಾ ಬರಿಯರಿವೆ । ಇದ್ದಂತೆ ವಿಧವಿಧವೆ
ಎದ್ದು ತಾ ತೋರ್ಪ ಮಿಕ್ಕೆರಡರಲ್ಲಿ ಈ
ಶುದ್ಧರಿವೆ ಮುಖವು । ಬ್ರಹ್ಮಜ್ಞ[1] ॥ 42 ॥

(ಪ್ರಾಜ್ಞಃ)

ವರಪ್ರಾಜ್ಞ ಶಬ್ದವಿದು । ಪರಮಾತ್ಮ ವಾಚಕವು
ಅರಿವಿನಾ ರೂಪನೀತನಿಹನೆನ್ನುವದೆ
ಸರಿಯಾದ ಅರ್ಥ । ಬ್ರಹ್ಮಜ್ಞ[2] ॥ 43 ॥

ವ್ಯಾಕರಣಶಾಸ್ತ್ರದಲಿ । ಸ್ವೀಕರಿಸಿದೀ ಅರ್ಥ
ಜೋಕೆಯಲಿ ಬಳಸಿ ತೋರಿಹರು ಶಂಕರರು
ಏಕೆ ಅನುಮಾನ ? ಬ್ರಹ್ಮಜ್ಞ[3] ॥ 44 ॥

ಬರಿಯರಿವೆ ಆಗಿಹನು । ನಿರುತ ನಿದ್ರೆಯೊಳಿವನು
ಪರಿಪರಿಯ ಜೀವರಾಗಿಯೂ ಅರಿವ ಮಿ-
ಕ್ಕೆರಡರಲಿ ಇವನೆ । ಬ್ರಹ್ಮಜ್ಞ ॥ 45 ॥

ತಿಳಿವವನು ಎಂಬಲ್ಲಿ । ಬಳಸಿರುವ ಕ್ರಿಯೆಯಿದುವೆ
ಬಳುವಳಿಯ ಸ್ವಪ್ನ ಜಾಗರದ ದೃಷ್ಟಿಯಲಿ
ತಿಳಿಯುವದು ಹೀಗೆ । ಬ್ರಹ್ಮಜ್ಞ ॥ 46 ॥

ತಿಳಿವಿನಾ ರೂಪನಿವ । ತಿಳಿವ ಕ್ರಿಯೆಯಾರೋಪ
ತಿಳಿಯಲ್ಕೆ ಬೇರೆ ಇರದಾಗಿ ನಿದ್ರೆಯಲಿ
ತಿಳಿಯದಾಗಿಹನು । ಬ್ರಹ್ಮಜ್ಞೆ ॥ 47 ॥

---

1. ಪದ್ಯ 40 ರಿಂದ 42ರವರೆಗೆ ಮಾಂ, ಭಾ.ಭಾ. 16ರಲ್ಲಿ "ಸ್ವಪ್ನಾದಿ.... ಚೇತೋಮುಖಃ" ಎಂಬವರೆಗಿನ ವಾಕ್ಯಗಳನ್ನು ನೋಡಿರಿ.

2. ಈ ವಿಷಯಕ್ಕೆ ಸೂ. ಭಾ.ಭಾ. 346ರಲ್ಲಿರುವ "ಪ್ರಾಜ್ಞೋ ಹಿ ಇಹಪರಮಾತ್ಮಾ..." ಇತ್ಯಾದಿ ವಾಕ್ಯಗಳನ್ನೂ ಕೆಳಗಿನ ಟಿಪ್ಪಣಿಯನ್ನೂ ನೋಡಿರಿ.

3. ಮಾಂ. ಭಾ.ಭಾ. 16ರಲ್ಲಿ ಪ್ರಾಜ್ಞನು – ಎಂಬುದಕ್ಕೆ ಇರುವ ಏಳನೆಯ ಅಡಿಟಿಪ್ಪಣಿಯನ್ನೂ ಪಾ. ಸೂ. 3–1–131 ಮತ್ತು 5–2–101 ನ್ನೂ ನೋಡಿರಿ.

ತಿಳಿವವನ ತಿಳಿವಿಕೆಗೆ । ಅಳಿವಿಲ್ಲವೆಂದಿಗೂ
ತಿಳಿಯಲ್ಕೆ ಬೇರೆ ಇನ್ನೊಂದು ಇರದೆಂದು
ತಿಳಿಸಿಹುದು ಶ್ರುತಿಯು । ಬ್ರಹ್ಮಜ್ಞ[1] ॥ 48 ॥

ಎಚ್ಚರದಿ ಸ್ವಪ್ನದಲಿ । ಬಿಚ್ಚಿರುವ ದ್ವೈತವನು
ನಿಚ್ಚಳದಿ ಅರಿವ ಈ ಭೇದವಡಗೆ ಬರಿ
ಬಚ್ಚ ಅರಿವಾದ । ಬ್ರಹ್ಮಜ್ಞ ॥ 49 ॥

ಅರಿವೆಂಬ ಕಮಲವಿದು । ಅರಳಿಲ್ಲವೆಚ್ಚರದಿ
ಮರಳಿ ಈ ಕಮಲ ಉಡುಗಿಲ್ಲ ನಿದ್ದೆಯಲಿ
ಇರುವಂತೆ ಇಹುದು । ಬ್ರಹ್ಮಜ್ಞ ॥ 50 ॥

ಈ ಮಾತು ವಾರ್ತಿಕದಿ । ನೇಮದಿಂ ಬಂದಿಹುದು[2]
ಈ ಮಾತೆ ಭಾಷ್ಯದಲ್ಲಿಯೂ ಬರೆದಿಹುದು
ಸಾಮರಸ್ಯವಿದು । ಬ್ರಹ್ಮಜ್ಞ ॥ 51 ॥

ನೆರೆ ಪ್ರಾಜ್ಞಶಬ್ದಕ್ಕೆ । ಅರಿಯದಜ್ಞನು ಎಂಬ[3]
ಬರವಣಿಗೆ ತಪ್ಪು ಶ್ರುತಿಭಾಷ್ಯ ಮತ್ತೆ ವ್ಯಾ-
ಕರಣಕ್ಕು ಸಹಿತ । ಬ್ರಹ್ಮಜ್ಞ ॥ 52 ॥

**(ಸರ್ವೇಶ – ಸರ್ವಜ್ಞ – ಅಂತರ್ಯಾಮಿ – ಭೂತಯೋನಿ–**
**ಇವುಗಳ ಅರ್ಥ)**

ಸರ್ವವೂ ಇವನಿಂದೆ । ಬರುವದಿದು ಮತ್ತಿನ್ನು
ಸರ್ವವೂ ಅಡಗಿ ನಿಂತಿಹುದು ಇವನಲೇ
ಸರ್ವೇಶನಿವನು । ಬ್ರಹ್ಮಜ್ಞ ॥ 53 ॥

ಸರ್ವಜ್ಞನೆಂಬಲ್ಲಿ । ಸರ್ವವೂ ಇವನಾಗಿ
ಸರ್ವ ಈ ಜೀವಿಗಳ ರೂಪದವನಾಗಿ
ಸರ್ವವನ್ನರಿವ । ಬ್ರಹ್ಮಜ್ಞ[4] ॥ 54 ॥

---

1. ಬೃ. 4–3–30 ನ್ನು ನೋಡಿರಿ.

2. ಈ ವಿಷಯಕ್ಕೆ ಬೃ. ಸಂ. ವಾ. 1085ನ್ನು ನೋಡಿರಿ. ಮತ್ತು ಮಾಂ. ರ. ವಿ. ಪುಟ 133ನ್ನು ನೋಡಿರಿ.

3. ಪ್ರಾಜ್ಞಶಬ್ದಕ್ಕೆ 'ಪ್ರಕರ್ಷೇಣ ಅಜ್ಞಃ ಪ್ರಾಜ್ಞಃ' – ಎಂದು ವಿಗ್ರಹವಾಕ್ಯವನ್ನು ಬಿಡಿಸುವದು ತಪ್ಪು – ಎಂದಭಿಪ್ರಾಯ.

4. ಈ ವಿಷಯಕ್ಕೆ ಮಾಂ.ಭಾ.ಭಾ.17 ಹಾಗೂ ಮುಂ. 1–1–9, ಭಾ.ಭಾ. 25ನ್ನು ನೋಡಿರಿ.

ಎಲ್ಲರಂತರ್ಯಾಮಿ । ಇಲ್ಲಿ ಈ ಪ್ರಾಜ್ಞನೇ
ಎಲ್ಲೆಡೆಗು ಇರುವ ಜೀವಿಗಳ ಹೃದಯಸ್ಥ
ಎಲ್ಲಕ್ಕು ಸ್ವಾಮಿ । ಬ್ರಹ್ಮಜ್ಞ ॥ 55 ॥

ಜಗರವು ಸ್ವಪ್ನವೂ । ಈಗ ಹೊರಬರಲಿವನೆ
ಆಗಿಹನು ಯೋನಿ ಇವ ಮತ್ತೆ ಇವನಲೇ
ಹೋಗಿ ಸೇರಲ್ಕೆ । ಬ್ರಹ್ಮಜ್ಞ ॥ 56 ॥

**(ವಿಶ್ವಾದಿಗಳು ಮೂವರಲ್ಲ, ಒಬ್ಬನೇ)**

ಮೂರು ಬಗೆಗಳನಿಲ್ಲಿ । ಸಾರಿದಂತಾಯ್ತೀಗ
ಮೂರನ್ನು ಮತ್ತೆ ವಿವರಿಸುತ ಪೇಳುವೆನು
ಕಾರಿಕೆಯ ಸಾರ । ಬ್ರಹ್ಮಜ್ಞ ॥ 57 ॥

ಹೊರನೋಟ ವಿಶ್ವನಿಗೆ । ನೆರೆ ನನಸಿಗಾತ್ಮನಿವ
ತುರಿಯ ನಿಜನೀತನಜ್ಞರಿಗೆ ತೋರ್ಪನೀ
ಪರಿಯಲ್ಲಿ ಮೊದಲು । ಬ್ರಹ್ಮಜ್ಞ ॥ 58 ॥

ಒಳನೋಟ ತೈಜಸಗೆ । ಬಳಿಕಿಲ್ಲಿ ವಾಸನೆಯ
ಬಳವಳಿಯ ಜಗಕೆ ಇವನಾತ್ಮ ತಾನಿಲ್ಲಿ
ಹೊಳೆಯುತಿಹ ನೋಡಿ । ಬ್ರಹ್ಮಜ್ಞ ॥ 59 ॥

ಒಳಹೊರಗು ಎರಡನ್ನು । ಬಳಿಕ ತನ್ನೊಳಗಿಟ್ಟು
ಒಳಗಿಲ್ಲ ಮತ್ತೆ ಹೊರಗಿಲ್ಲದಂತಿರುವ
ಬಲು ಪ್ರಾಜ್ಞರೂಪ । ಬ್ರಹ್ಮಜ್ಞ ॥ 60 ॥

ನನಸಿನಲಿ ಒಂದು ಬಗೆ । ಕನಸಿನಲಿ ಮತ್ತೊಂದು
ತನಿನಿದ್ರೆಯಲಿ ಮಗದೊಂದು ಬಗೆಯಿಹನು
ಎನುವಂತೆ ತೋರ್ಪ । ಬ್ರಹ್ಮಜ್ಞ ॥ 61 ॥

ಮೂರು ಬಗೆಯಲ್ಲಿಯೂ । ತೋರುವವನೊಬ್ಬನೇ
ಮೂರಲ್ಲವಿವನು ನಿಸ್ಸಗಂನದ್ವಯನು
ಧೀರರಿದನರಿಗು । ಬ್ರಹ್ಮಜ್ಞ[1] ॥ 62 ॥

---

1. ಪದ್ಯ 57 ರಿಂದ 62 ಪೂರ ವಿಷಯಕ್ಕೆ ಮಾಂ. ಕಾ. 1, ಭಾ. ಭಾ. 19ನ್ನು ನೋಡಿರಿ.

### (ಈಗಲೇ ದೇಹದಲ್ಲಿ ಮೂರೂ ಇವೆ)

ಇಲ್ಲಿಯೇ ಎಚ್ಚರದಿ । ಬಲ್ಲಂತೆ ಮೂರಿಹವು
ಎಲ್ಲರೂ ಇದನು ಅರಿಯುವದು ದೇಹದೊಳ-
ಗಿಲ್ಲಿ ಇದನೊರೆವೆ । ಬ್ರಹ್ಮಜ್ಞ ॥ 63 ॥

ಹೊರಗಿರುವ ವಿಷಯಗಳ । ಕರಣದಿಂದರಿಯಲ್ಕೆ
ಕರೆಯುವರು ವಿಶ್ವನಿದಕೆಂದು ಇದೆ ಈಗ
ಹೊರ ಅರಿವು ನೋಡಿ । ಬ್ರಹ್ಮಜ್ಞ ॥ 64 ॥

ಕಣ್ಣಿನಲಿ ಕಂಡದುದ । ಇನ್ನು ಮನದಲಿ ತಂದು
ತನ್ನಲ್ಲೆ ದೃಶ್ಯದೃಕ್ಕುಗಳ ಕಲ್ಪಿಸುವ-
ದಿನ್ನು ತೈಜಸವು । ಬ್ರಹ್ಮಜ್ಞ ॥ 65 ॥

ಹೊರ ಅರಿವು ಒಳಬಂದು । ಒಳ ಅರಿವು ಮತ್ತಡಗಿ
ಇರುವ ಬರಿತಾನು ಹೃದಯದಲಿ ನಿಂತಿರುವ
ಪರಿಯೆ ಪ್ರಾಜ್ಞತ್ವ । ಬ್ರಹ್ಮಜ್ಞ[1] ॥ 66 ॥

ಹೊರತೋರ್ಕೆ ಒಳತೋರ್ಕೆ । ತಿರುಗಿ ಅಡಗಿರುತಿರ್ಕೆ
ಸರುವವೂ ತಾನೆ ಆಗಿಹನು ತನ್ನ ನಿಜ
ಗುರುತಿಸಲು ಬೇಕು । ಬ್ರಹ್ಮಜ್ಞ ॥ 67 ॥

ಸರಿಯಾಗಿ ಆತ್ಮನನು । ಗುರುತಿಸದೆ ಇರುವಾಗ
ಒರೆದಿರುವ ಮೂರು ಬಗೆಯಲ್ಲೆ ತೋರ್ಪನಿವ
ಸರುವರಿಗು ಜಗದಿ । ಬ್ರಹ್ಮಜ್ಞ[2] ॥ 68 ॥

### (ಅಪವಾದಪ್ರಕ್ರಿಯೆ)

ಅಲ್ಲಗಳೆದಿವುಗಳನು । ಮೆಲ್ಲನೆಯೆ ತುರಿಯನಲಿ
ನಿಲ್ಲಿಸುವ ಶ್ರುತಿಯ ಅಪವಾದಪ್ರಕ್ರಿಯೆಯ
ಒಳ್ಳೆನುಡಿ ಕೇಳಿ । ಬ್ರಹ್ಮಜ್ಞ ॥ 69 ॥

ಮೂರು ಇವು ಇರದಿರುವ । ಬೇರೆ ಅನುಭವವಿಲ್ಲ
ತುರಿಯವು ಶೂನ್ಯವೆನಬಾರದೇಕೆನಲು
ಕಾರಣವ ಕೇಳಿ । ಬ್ರಹ್ಮಜ್ಞ ॥ 70 ॥

---

1. ಪದ್ಯ 63 ರಿಂದ 67ರ ಪೂರ ವಿಷಯಕ್ಕೆ ಮಾಂ. ಕಾ. 2, ಭಾ.ಭಾ. 21, 22ನ್ನು ನೋಡಿರಿ.

2. ಈ ವಿಷಯಕ್ಕೆ ಮಾಂ. ಕಾ. ಭಾ.ಭಾ. 37ನ್ನು ನೋಡಿರಿ.

ಮೂರು ಹುಸಿತೋರ್ಕೆಗಳು । ಸಾರ ನಿಜವಾತ್ಮನವ
ತೋರವಿವು ಒಂದು ಇರುವಾಗ ಇನ್ನೊಂದು
ಧೀರರಿದನರಿಗು । ಬ್ರಹ್ಮಜ್ಞ ॥ 71 ॥

ಹಾವು ಹೂಮಾಲೆಯೂ । ಭಾವಿಸಿದ ದಂಡವೂ
ತೀವಿದಾ ಹಗ್ಗದೊಳು ಕಾಂಬ ತೆರದಿ ಈ
ಭಾವವೆಂದಿಹರು । ಬ್ರಹ್ಮಜ್ಞ ॥ 72 ॥

ಇರದು ಹುಸಿತೋರಿಕೆಯು । ಇರದೆ ನಿಜದಾಧಾರ
ಪರಿಪರಿಯ ನೋಟಕಾಧಾರ ವಸ್ತು ತಾ
ಬರಿ ಶೂನ್ಯವಲ್ಲ । ಬ್ರಹ್ಮಜ್ಞ ॥ 73 ॥

ಕನಸು ಎಚ್ಚರ ನಿದ್ರೆ । ಎನುವ ಹುಸಿಗಾಧಾರ
ಚಿನುಮಯನು ತುರ್ಯ ವ್ಯವಹಾರದೂರ ಮ-
ತ್ತಿನಿತು ತಿಳಿಯುವದು । ಬ್ರಹ್ಮಜ್ಞ ॥ 74 ॥

### (ತುರ್ಯವು ನಿಷ್ಪ್ರಯೋಜಕವಸ್ತುವಲ್ಲ)

ಬರುವ ಲಾಭವದೇನು । ಅರಿಯಲ್ಕೆ ತುರಿಯನನು
ಬರನು ಇವ ಯಾವ ವ್ಯವಹಾರಕಿನ್ನಿವನ
ಅರಿಯಬೇಕೇಕೆ ? ಬ್ರಹ್ಮಜ್ಞ ॥ 75 ॥

ಸಟೆಯಾದ ಸಂಸಾರ । ಕಟಕಟೆಯು ತೊಲಗುವದು
ದಿಟವಾಗಿ ತುರ್ಯ ತಿಲಯಲ್ಕೆ । ವ್ಯವಹಾರ
ಹಟವೆ ಹೋಯ್ತೀಗ । ಬ್ರಹ್ಮಜ್ಞ ॥ 76 ॥

ನಿತ್ಯಮುಕ್ತನು ತಾನು । ಮತ್ತಿನ್ನು ಭವವಿಲ್ಲ
ಎತ್ತಿ ತಾ ಬಹುದು ಈ ಜ್ಞಾನವಿದೆ ಫಲವು
ಸತ್ಯವಿದಕೀಗ । ಬ್ರಹ್ಮಜ್ಞ[1] ॥ 77 ॥

### (ಮೂರವಸ್ಥೆಗಳಿಗಿಂತ ಬೇರೆಯಲ್ಲ)

ಮೂರು ಇವು ಅಲ್ಲೆನಲು । ತೂರಿಯನು ಬೇರಾದ
ತೋರದಿಹ ಇಂಥ ತೂರಿಯದವಸ್ಥೆಯನು
ಸೇರುವದು ಹೇಗೆ । ಬ್ರಹ್ಮಜ್ಞ ॥ 78 ॥

---

1. ಪದ್ಯ 70 ರಿಂದ 77ರವರೆಗಿನ ವಿಷಯಗಳಿಗೆ ಮಾಂ. ಕಾ. ಭಾ.ಭಾ. 35, 36ನ್ನು ನೋಡಿರಿ.

ಬೇರವಸ್ಥೆಯದಲ್ಲ । ತೂರಿಯನು ಎಂದೆನಲು
ಮುರಾಗಿ ತೋರ್ಪ ಈ ಮೂರರಾತ್ಮನೇ
ತೂರಿಯನು ಕೇಳಿ । ಬ್ರಹ್ಮಜ್ಞ ॥ 79 ॥

ಮೂರವಸ್ಥೆಯ ಬಿಟ್ಟು । ಬೇರಾದವಸ್ಥೆ ಎನೆ
ದ್ವಾರವೇ ಇಲ್ಲ ತಿಳಿಯಲ್ಕೆ ತುರ್ಯನೇ
ಮೂರಾಗಿ ತೋರ್ಪ । ಬ್ರಹ್ಮಜ್ಞ[1] ॥ 80 ॥

ಈ ಕಾರಣಕ್ಕಾಗಿ । ಜೋಕೆಯಲಿ ಬಂತು ಶ್ರುತಿ
ಸಾಕೆನುವವರೆಗೆ ಕಲ್ಪಿತಗಳತಿಗಳೆಯು
ತೇಕನನು ತಿಳಿಸೆ । ಬ್ರಹ್ಮಜ್ಞ ॥ 81 ॥

ತೊಲಗೆ ಕಲ್ಪಿತವೆಲ್ಲ । ನಿಲುವವನು ತುರಿಯನೇ
ಬಲು ಮೋಜು ಈಗ ಆರೋಪದಪವಾದ
ತಿಳಿಯಲೀ ರೀತಿ । ಬ್ರಹ್ಮಜ್ಞ ॥ 82 ॥

ಎರಡನೆಯ ಅಧ್ಯಾಯ । ಮರಳಿ ನೋಡುವದಿಲ್ಲಿ[2]
ಬರೆದಿರುವ ರೀತಿ ಅರೋಪವಪವಾದ
ಸ್ಮರಿಸುವದು ಅದನೆ । ಬ್ರಹ್ಮಜ್ಞ ॥ 83 ॥

ಭಾರತದ ನಾಟಕದಿ । ತೋರಿದನು ಕೃಷ್ಣನೊಲು
ತೋರ್ದನಿವ ರಾಮ ರಾಮಾಯಣದಿ ಬೇರೆ
ನಾರದನು ಆಗಿ । ಬ್ರಹ್ಮಜ್ಞ ॥ 84 ॥

ಮೂರಾಗಿ ತೋರಿರುವ । ಧೀರನಟನೊಬ್ಬನೇ
ತೂರಿಯನು ಸಹಿತ ಹೀಗೆಯೇ ಎಂದರಿಗು
ಸಾರವನು ಗ್ರಹಿಸಿ । ಬ್ರಹ್ಮಜ್ಞ ॥ 85 ॥

ಇದಕಾಗಿ ಶ್ರುತಿಯಲ್ಲಿ । ಬದಿಗಿರಿಸಿ ತೋರಿಕೆಯ
ಹದನಾಗಿ ಅಲ್ಲಗಳೆಯಲ್ಕೆ ಅನುಭವದ
ಕದವೆ ತೆರೆಯುವದು । ಬ್ರಹ್ಮಜ್ಞ ॥ 86 ॥

---

1. ಪದ್ಯ 78 ರಿಂದ 80ರವರೆಗಿನ ವಿಷಯಗಳಿಗೆ ಮಾಂ. ಕಾ. ಭಾ.ಭಾ. 38ನ್ನು ನೋಡಿರಿ.

2. ಇದೇ ಶಂಕರದರ್ಶನದ ಎರಡನೆಯ ಅಧ್ಯಾಯ ಪದ್ಯ 71 ರಿಂದ 83 ಪೂರ ನೋಡಿರಿ.

### (ತುರೀಯಪಾದ)

ಒಳ ಅರಿವು ತಾನಲ್ಲ । ತಿಳಿಯೆ ಹೊರ ಅರಿವಲ್ಲ
ಉಳಿಮೆಯಹ ತಾನು ಎರಡಕ್ಕು ನಡುವಿರುವ
ಬಳಿಕಲ್ಲವಸ್ಥೆ । ಬ್ರಹ್ಮಜ್ಞ[1] ॥ 87 ॥

ನಿದ್ದೆಯಲಿ ಬಿಡಿ ಅರಿವು । ಮುದ್ದೆಯಾಗಿರುವಂತೆ
ಇದ್ದವನು ಸಹಿತ ಇವನಲ್ಲ ಮರಳುವಾ
ಸುದ್ದಿಯೇ ಇಲ್ಲ । ಬ್ರಹ್ಮಜ್ಞ ॥ 88 ॥

ಮೂರು ಇವನೇನಲ್ಲ । ಮೂರು ಇವನಲ್ಲಿಲ್ಲ
ಮೂರು ಇವು ಅರಿಯದಿರೆ ತೋರ್ಪ ಹುಸಿಗ್ರಹಿಕೆ
ಸಾರನಿವುಗಳಿಗೆ । ಬ್ರಹ್ಮಜ್ಞ ॥ 89 ॥

### (ಆಕ್ಷೇಪ)

ನಿತ್ಯದಲಿ ಈ ಮೂರು । ಸುತ್ತುತಿಹವಾತ್ಮನಲಿ
ಮತ್ತಿನ್ನು ಕನಸು ನನಸು ತನಿನಿದ್ರೆಗಳು
ವೃತ್ತದಂತೀಗ । ಬ್ರಹ್ಮಜ್ಞ ॥ 90 ॥

ಹೀಗಿರಲು ಇವನಲ್ಲಿ । ಈಗ ಇವು ಇಲ್ಲೆಂದು
ಹೇಗಿನ್ನು ತಿಳಿಯಬೇಕಿದನು ಅನುಭವಕೆ
ತಾಗಿಪುದು ಹೇಗೆ ? । ಬ್ರಹ್ಮಜ್ಞ ॥ 91 ॥

### (ಸಮಾಧಾನ)

ಒಂದವಸ್ಥೆಯು ತೋರೆ । ನಿಂದು ಇನ್ನೆರಡಿರವು
ಒಂದಾದ ತಾನು ಚೈತನ್ಯ ನಿತ್ಯ ನಿಜ–
ನೆಂದರಿಗು ಕೇಳಿ । ಬ್ರಹ್ಮಜ್ಞ ॥ 92 ॥

ಹೂಮಾಲೆ ನೆಲದ ಬಿರಿ । ಆ ಮಹಾಸರ್ಪಗಳು
ನೇಮದಿಂದೊಂದು ತೋರ್ಕು ಆ ಹಗ್ಗದಲಿ
ಈ ಮಾತಿನಂತೆ । ಬ್ರಹ್ಮಜ್ಞ ॥ 93 ॥

---

1. ಮಾಂ. ಭಾ. ಭಾ. 40ನ್ನು ನೋಡಿರಿ. ಇಲ್ಲಿಂದ 130 ನೆಯ ಪದ್ಯದವರೆಗೂ ಮಾಂಡೂಕ್ಯದ ಏಳನೆಯ ಮಂತ್ರವನ್ನೇ ಕುರಿತು ಹೇಳಿದೆ.

(ಆಕ್ಷೇಪ)

ನಿದ್ದೆಯಲಿ ಚೈತನ್ಯ । ಇದ್ದಿಲ್ಲವಲ್ಲವೇ ?
ಇದ್ದಿರಲು ಹೀಗೆ ಇವ ದಿಟನು ಸಟೆಯು ಮಿ-
ಕ್ಕಿದ್ದೆನಲು ಸರಿಯೆ ? । ಬ್ರಹ್ಮಜ್ಞ ॥ 94 ॥

(ಸಮಾಧಾನ)

ನಿದ್ದೆಯಾ ಅನುಭವವೆ । ಇದ್ದ ಈ ಚೈತನ್ಯ
ಬುದ್ಧನಿವ ಬರಿಯ ಅನುಭವದ ರೂಪ ಮಿ-
ಕ್ಕಿದ್ದು ಹುಸಿತೋರ್ಕೆ । ಬ್ರಹ್ಮಜ್ಞ[1] ॥ 95 ॥

ಮೂರನ್ನು ಬದಿಗಿರಿಸಿ । ಸಾರವನ್ನನುಸರಿಸಿ
ನೇರಾಗಿ 'ತಾನು' ಎಂಬುದನೆ ಬುದ್ಧಿಯಲಿ
ಹೀರಬೇಕೆನಲು । ಬ್ರಹ್ಮಜ್ಞ ॥ 96 ॥

ಈ ತಾನು ಹೇಗಿಹನು । ಏತರದು ಈ ಪ್ರಶ್ನೆ
ಖ್ಯಾತಶ್ರುತಿ ಮುಂದೆ ಪೇಳುವುದ ಕೇಳ್ವದೀ
ರೀತಿಗಳನಿಲ್ಲಿ । ಬ್ರಹ್ಮಜ್ಞ ॥ 97 ॥

(ಉಪನಿಷತ್ತು)

ಇವನು ಜ್ಞಾತೃವೆ ಅಲ್ಲ । ಇವನ ಕಾಣಲು ಹೊಲ್ಲ
ಇವ ಮತ್ತೆ ಜಡನು ತಾನಲ್ಲ ವ್ಯವಹಾರ
ಇವನಲ್ಲಿ ಸಲ್ಲ । ಬ್ರಹ್ಮಜ್ಞ ॥ 98 ॥

ಕರಣಕ್ಕೆ ಸಿಗನಿವನು । ಇರದು ಹೆಗ್ಗುರುತಿವಗೆ
ಬರನಿವನು ಮತ್ತೆ ಅನುಮಾನದಳವಿನಲಿ
ನೆರೆ ನುಡಿಗೆ ದೂರ । ಬ್ರಹ್ಮಜ್ಞ[2] ॥ 99 ॥

(ಏಕಾತ್ಮಪ್ರತ್ಯಯಸಾರ)

ಒಂದೆ ದಾರಿಯು ಇವನ । ಹೊಂದಲ್ಕೆ ಕೇಳಿರಿದ
ಒಂದಾದ ಆತ್ಮಪ್ರತ್ಯಯದ ಸಾರನಿವ-
ನೆಂದು ತಿಳಿಯುವದು । ಬ್ರಹ್ಮಜ್ಞ ॥ 100 ॥

1. ಪದ್ಯ 90 ರಿಂದ 95ರ ವಿಷಯಕ್ಕೆ ಮಾಂ. ಕಾ. ಭಾ.ಭಾ. 41ನ್ನು ನೋಡಿರಿ.
2. ಇಲ್ಲಿಂದ 120ನೆಯ ಪದ್ಯದವರೆಗೆ ಮಾಂ. ಭಾ. 42ರಲ್ಲಿಯ 'ಏಕಾತ್ಮಪ್ರತ್ಯಯ, ಸಾರಮ್' ಎಂಬಿದರ ವ್ಯಾಖ್ಯಾನವನ್ನು ನೋಡಿರಿ.

ಕನಸಿಗೂ ತಾನೊಬ್ಬ । ನನಸಿಗೂ ತಾನೊಬ್ಬ
ತನಿನಿದ್ರೆ ಬರಲು ತಾನಿರುವನೆಂಬುದನೆ
ಅನುಸರಿಸಬೇಕು । ಬ್ರಹ್ಮಜ್ಞ ॥ 101 ॥

ಆಗ ನಾನೆನ್ನುವದು । ನೀಗಿ ತಾನೆಂಬರಿವು
ಬೇಗನೆಯೆ ಬಕ್ಕು ಬುದ್ಧಿಯಲಿ ಇದ ಹಿಡಿದು
ಸಾಗುವದು । ಬ್ರಹ್ಮಜ್ಞ ॥ 102 ॥

ಏಕಾತ್ಮಪ್ರತ್ಯಯವು । ಔಕಿ[1] ಬಂದಿತು ನೋಡಿ
ಏಕನಿವ ತಾನು ಅದ್ವಯನು ಎಂಬರಿವೆ
ಏಕಾತ್ಮದರಿವು । ಬ್ರಹ್ಮಜ್ಞ ॥ 103 ॥

ಇದು ಮಾತ್ರವೇ ಮಾರ್ಗ । ಇದ ಬಿಟ್ಟರಿನ್ನಿಲ್ಲ
ಇದು ಬರಿಯ ವೃತ್ತಿ ತಾನಲ್ಲ ಒಂದು ಬಗೆ
ಇದು ವೃತ್ತಿಯಹುದು । ಬ್ರಹ್ಮಜ್ಞ ॥ 104 ॥

ನಿದ್ದೆಯಲಿ ಬರಿ ತಾನೆ । ಇದ್ದರೂ ಇಹನೆಂಬ
ಬುದ್ಧಿಯಿದು ಅಲ್ಲಿ ಇರಹೊಲ್ಲ ಈಗಿಲ್ಲಿ
ಬುದ್ಧಿಹುದು ಬುದ್ಧಿ । ಬ್ರಹ್ಮಜ್ಞ ॥ 105 ॥

'ನಾನು, ಇದು' ಎಂಬುವೀ । ನಾನಾತ್ವವೀಗಿಲ್ಲ
ತಾನನ್ನೆ ಬುದ್ಧಿ ಹೊಂದಿಹುದು ಇದರಿಂದೆ
ಏನಲ್ಲ ವೃತ್ತಿ । ಬ್ರಹ್ಮಜ್ಞ ॥ 106 ॥

ಬೆಂಕಿಯಾ ರಾಶಿಯನು । ಸೋಂಕಿರುವ ಕಾಷ್ಠವದು
ಶಂಕೆಯೇ ಇಲ್ಲ ತೋರಿದರು ಆಕಾರ
ಬೆಂಕಿಯೇ ಇಹುದು । ಬ್ರಹ್ಮಜ್ಞ ॥ 107 ॥

ಇದರಂತೆ ಆತ್ಮನನು । ಮುದದಿಂದಲನುಸರಿಸೆ
ಇದು ವೃತ್ತಿವೋಲು ತೋರಿದರು ಆತ್ಮನೇ
ಇದು ಬುದ್ಧಿಯಲ್ಲ । ಬ್ರಹ್ಮಜ್ಞ ॥ 108 ॥

ಹೊರನೋಟಕಿದು ವೃತ್ತಿ । ಪರಿಕಿಸಲ್ಕಾತ್ಮನಿದು
ಬರದು ಈ ಭಾವ ನಿದ್ರೆಯಲಿ ಇದರಿಂದೆ
ಅರಿಯುವದು ಭೇದ । ಬ್ರಹ್ಮಜ್ಞ ॥ 109 ॥

1. ಔಕಿ ಎಂದರೆ ಇಣಕಿ, ಹೊರತೋರಿಕೊಂಡು ಎಂದರ್ಥ.

ಆತ್ಮನನ್ನರಿಯಲ್ಕೆ । ಆತ್ಮಪ್ರತ್ಯಯ ಒಂದೆ
ರೀತಿಯಿದು ಇನ್ನು ಬೇರಿಲ್ಲ ತಿಳಿಯೆ ಈ
ಹೇತುವೇ ಸಾರ । ಬ್ರಹ್ಮಜ್ಞ ॥ 110 ॥

ನಾನುವನು ಬಿಟ್ಟಾಗ । ತಾನುವನು ಹಿಡಿದಾಗ
ಏನೊಂದುಮಿಲ್ಲ ಆವಾಗ ತುರ್ಯನಾ
ಜ್ಞಾನವಿದು ಬಂತು । ಬ್ರಹ್ಮಜ್ಞ ॥ 111 ॥

ಎಚ್ಚರವು ಸ್ವಪ್ನವೂ । ಅಚ್ಚ ತನಿನಿದ್ರೆಯೂ
ಮುಚ್ಚಿಲ್ಲ ತನ್ನನೆಂದಿಗೂ ಇವು ಎಲ್ಲ
ಸ್ವಚ್ಛ ತಾ ನಿತ್ಯ । ಬ್ರಹ್ಮಜ್ಞ ॥ 112 ॥

ಸ್ಥೂಲ ಸೂಕ್ಷ್ಮವು ಮತ್ತೆ । ಮೇಳಯಿಪ ಬೀಜವೂ
ಹಾಳಾಯಿತೀಗ ತಾ ನಿತ್ಯಶಾಂತನೀ
ಬಾಳಿಲ್ಲ ತನಗೆ । ಬ್ರಹ್ಮಜ್ಞ ॥ 113 ॥

ಇವನು ಮಂಗಲರೂಪ । ಶಿವನಿವನು ಅದ್ವಯನು
ಇವನಲ್ಲದಿನ್ನು ಬೇರಿಲ್ಲವಿನ್ನೊಂದು
ಇವ ನಿತ್ಯಶುಭನು । ಬ್ರಹ್ಮಜ್ಞ ॥ 114 ॥

ಮೊದಲು ತೋರಿದ ಹುಸಿಯ । ಪದ ಮೂರನನುಸರಿಸಿ
ಒದಗಿತಿವಗೀಗ ನಾಲ್ಕಿವನು ಎನ್ನುವದು
ಇದು ಸಂಖ್ಯೆಯಲ್ಲ । ಬ್ರಹ್ಮಜ್ಞ ॥ 115 ॥

ಜ್ಞಾನಿಗಳು ಹೀಗೆಂದು । ಮಾನಿಪರು ಮೊದಮೊದಲು
ತಾನಾದ ಇವನ ತಿಳಿಪುದಕೆ ಶ್ರುತಿಸಹಿತ
ಗಾನಮಾಡುವದು । ಬ್ರಹ್ಮಜ್ಞ ॥ 116 ॥

ಇವನನೇ ತಾ ತಿಳಿಗು । ಇವನಲ್ಲದುದ ಕಳೆಗು
ಇವನಾಗಿ ಉಳಿಗು ಇದೆ ತಿಳಿಗು ಎಂಬುದರ
ಸವಿಯು ಇದನರಿಗು । ಬ್ರಹ್ಮಜ್ಞ ॥ 117 ॥

ಬಾರದಿರೆ ಈ ಜ್ಞಾನ । ದೂರಾಗದೀ ಭವವು
ತೋರುತ್ತೆ ಮತ್ತೆ ಅಡಗುತ್ತೆ ಯುಗಯುಗಕು
ತೀರದಿಹ ಚಕ್ರ । ಬ್ರಹ್ಮಜ್ಞ ॥ 118 ॥

ಜ್ಞಾನ ಬರೆ ಬುದ್ಧಿಯಲಿ । ತಾನು ಬೊಮ್ಮವೆ ಆಗಿ
'ನಾನು, ಇದು' ಎಂಬ ಸಂಸಾರವಿದು ಹೋಗಿ
ಜ್ಞಾನಿ ಎನಿಸುವನು । ಬ್ರಹ್ಮಜ್ಞ ॥ 119 ॥

ನಿರುತ ವಿದ್ಯಾವಿದ್ಯೆ । ಬರಲಿಲ್ಲವಾತ್ಮನಿಗೆ
ಸರಿಯಾದ ತಿಳಿವು ಇದೆ ಮತ್ತೆ ಮಿಕ್ಕಿನದು
ಬರಿಯ ವ್ಯವಹಾರ । ಬ್ರಹ್ಮಜ್ಞ ॥ 120 ॥

ಜ್ಞಾನ ಬರಬೇಕೆಂಬ । ತಾಣವಿದು ವ್ಯವಹಾರ
ಭಾನವಿದ ಹಿಡಿದು ಈಗಿಲ್ಲಿ ಕೆಲವಿಷಯ
ಮಾನಿಪುದ ಕೇಳಿ । ಬ್ರಹ್ಮಜ್ಞ ॥ 121 ॥

ತುರಿಯನನು ಅರಿತಾಗ । ಹರಿಯಿತೀ ಭವದುಃಖ
ಬರುವುದಾ ಮುಕ್ತಿ ಈ ಪ್ರಭುವೆ ದೇವನಿದ-
ನರಿತುಕೊಳಬೇಕು । ಬ್ರಹ್ಮಜ್ಞ[1] ॥ 122 ॥

**(ಸಾಮಾನ್ಯವಿಶೇಷಭಾವಗಳು)**

ವಿಶ್ವತೈಜಸ ಪ್ರಾಜ್ಞ । ಈಶ ನಿಜ ತೂರಿಯನ
ಆಶಯವ ತಿಳಿಸೆ ಇವರೊಳಿಹ ಸಾಮಾನ್ಯ
ವೈಶಿಷ್ಟ್ಯ ಪೇಳ್ಗು । ಬ್ರಹ್ಮಜ್ಞ[2] ॥ 123 ॥

ತನ್ನನರಿಯದ ನಿದ್ರೆ । ಮುನ್ನ ಮೂವರಿಗುಂಟು
ತನ್ನನೇ ಬೇರೆ ಬಗೆಯಾಗಿ ತಿಳಿವುದಿದು
ಇನ್ನು ಇಬ್ಬರಿಗೆ । ಬ್ರಹ್ಮಜ್ಞ ॥ 124 ॥

ತಾನು ಇಂಥವನೆಂಬ । ಜ್ಞಾನವೇ ನಮಗಿಲ್ಲ
ಮೇಣೀಗ ನಿದ್ರೆ ಎಚ್ಚರದಿ ಸ್ವಪ್ನದಲಿ
ತಾನಿದುವೆ ನಿದ್ರೆ । ಬ್ರಹ್ಮಜ್ಞ ॥ 125 ॥

ಕನಸಿನಲಿ ನನಸಿನಲಿ । ಘನದ್ವೈತ ಕಾಣುವೆವು
ಇನಿತಿಲ್ಲ ದ್ವೈತ ನಿಜವಾಗಿ ತಪ್ಪುತಿಳಿ-
ವಿನ ಸ್ವಪ್ನವಿದುವೆ । ಬ್ರಹ್ಮಜ್ಞ[3] ॥ 126 ॥

ಎದ್ದು ಕಾಣುವದಾಗಿ । ಇದ್ದಿಹುದು ಸ್ವಪ್ನವಿದು
ಇದ್ದರೂ ಕಾಣದಿಹುದೀಗ ನಿದ್ರೆ ಮೊದ-
ಲಿದ್ದ ಇಬ್ಬರಿಗೆ । ಬ್ರಹ್ಮಜ್ಞ ॥ 127 ॥

---

1. ಈ ವಿಷಯಕ್ಕೆ ಮಾಂ. ಕಾ. 10ನ್ನೂ ಅದರ ಭಾಷ್ಯವನ್ನೂ ನೋಡಿರಿ.

2. ಈ ವಿಷಯಕ್ಕೆ ಮಾಂ. ಭಾ. ಭಾ. 44ನ್ನು ನೋಡಿರಿ.

3. ಪದ್ಯ 124 ರಿಂದ 126ರವರೆಗಿನ ವಿಷಯಕ್ಕೆ ಮಾಂ. ಕಾ. ಭಾ. ಭಾ. 45ನ್ನು ನೋಡಿರಿ.

ಬೀಜರೂಪದಿ ಸ್ವಪ್ನ । ಭೂಜವಿದೆ ಪ್ರಾಜ್ಞನಲಿ
ಸೋಜಿಗದ ಸ್ವಪ್ನ ತೋರದಲೆ ನಿದ್ರೆಯೇ
ರಾಜಿಪುದು ಮುಖ್ಯ । ಬ್ರಹ್ಮಜ್ಞ[1] ॥ 128 ॥

**(ಕಾರಣಾವಿದ್ಯೆ-ಕಾರ್ಯಾವಿದ್ಯೆ)**

ತಿಳಿಯದುದೆ ತತ್ತ್ವವನು । ಬಳಿಕ ಕಾರಣವಿದುವೆ
ತಿಳಿಯಲ್ಕೆ ತಪ್ಪುಕಾರಿಯವು ಇವು ಎರಡ
ಬಳಸಿಹರು । ಬ್ರಹ್ಮಜ್ಞ ॥ 129 ॥

ಕಾರಣಾವಿದ್ಯೆ ಎನೆ । ಬೇರೇನು ಅಲ್ಲವದು
ಸಾರವಹ ತತ್ತ್ವ ತಿಳಿಯದಿಹ ಅಗ್ರಹಣ
ಕಾರಣ ನಿಮಿತ್ತ । ಬ್ರಹ್ಮಜ್ಞ ॥ 130 ॥

ತತ್ತ್ವವನು ತಿಳಿಯದಿಹ । ಚಿತ್ತದಗ್ರಹಣವೇ
ಮತ್ತೆ ತಾನೆಂದು ಕಾರಿಕೆಯು ಭಾಷ್ಯ ಸಹ
ಒತ್ತಿ ಹೇಳಿಹುದು । ಬ್ರಹ್ಮಜ್ಞ ॥ 131 ॥

ಕಾರಿಯದವಿದ್ಯೆ ಎನೆ । ಬೇರಾಗಿ ತಿಳೀಯುವದೆ
ಸಾರಿಹುದು ಇದುವೆ ವಿಪರೀತಗ್ರಹಣ ಮೇಣ್
ಭೂರಿಯಧ್ಯಾಸ । ಬ್ರಹ್ಮಜ್ಞ[2] ॥ 132 ॥

**(ಇದು ಮೂಲಾವಿದ್ಯೆ ಅಥವಾ ಕಾರಣಶರೀರವಲ್ಲ)**

ಕಾರಣಾವಿದ್ಯೆಯೇ । ಚಾರು ಮೂಲಾವಿದ್ಯೆ
ಸಾರಿದರು ಹೀಗೆ ಕೆಲಜನರು ತಪ್ಪಾಗಿ
ತೂರಿಸಿದರರ್ಥ । ಬ್ರಹ್ಮಜ್ಞ ॥ 133 ॥

ಕಾರಣಾವಿದ್ಯೆಯೇ । ಕಾರಣಶರೀರವಿದು
ಸೇರಿಹುದು ಮತ್ತೆ ನಿದ್ರೆಯಲಿ ಎಂಬುದನು
ಸಾರಿದರು ಕೆಲರು । ಬ್ರಹ್ಮಜ್ಞ[3] ॥ 134 ॥

1. ಪದ್ಯ 127, 128ರ ವಿಷಯಕ್ಕೆ ಮಾಂ. ರ. ವಿ. ಪುಟ 133ರಲ್ಲಿ 'ತೃತೀಯೇ ತು ಎಂಬಲ್ಲಿರುವ ಎರಡು ವಾಕ್ಯಗಳನ್ನು ನೋಡಿರಿ.

2. ಪದ್ಯ 130 ರಿಂದ 132ರವರೆಗಿನ ವಿಷಯಕ್ಕೆ ಮಾಂ. ರ. ವಿ. ಪುಟ 99ನ್ನು ನೋಡಿರಿ.

3. ಈ ವಿಷಯಕ್ಕೆ ಪಂಚದಶೀ 7-226ನ್ನು ನೋಡಿರಿ.

ನಿದ್ದೆಯನು ವಿವರಿಸುವ । ಶುದ್ಧಭಾಷ್ಯಗಳಲ್ಲಿ
ಸುದ್ದಿಯೇ ಇಲ್ಲ ಈ ಬಗೆಯ ವಾದವೀ-
ಪದ್ಧತಿಯೆ ಸಲ್ಲ । ಬ್ರಹ್ಮಜ್ಞ ॥ 135 ॥

ಈಶೋಪನಿಷದಿನಲಿ । ಭಾಸಿಪುದು ಒಂದುಕಡೆ
ದೋಷವಿದು ಬರೆದ ಮಾನವರ ಕೈತಪ್ಪು
ಭಾಷ್ಯಬಾಹಿರವು । ಬ್ರಹ್ಮಜ್ಞ[1] ॥ 136 ॥

ಮೂರು ಪ್ರಸ್ಥಾನದಲು । ಸೇರಿಲ್ಲವೀ ಶಬ್ದ
ತೋರದಿದು ನಿದ್ರೆ ವಿವರಿಸುವ ಸಂದರ್ಭ-
ನೂರಾರರಲ್ಲು । ಬ್ರಹ್ಮಜ್ಞ ॥ 137 ॥

ನಿದ್ದೆಯಾ ಬಗೆಯಲ್ಲಿ । ಶುದ್ಧ ತಾನಲ್ಲದೆಲೆ
ಇದ್ದಿಲ್ಲ ದೇಹ ಮನಮೊದಲು ಎಂಬುದೇ
ಸಿದ್ಧಾನುಭವವು । ಬ್ರಹ್ಮಜ್ಞ ॥ 138 ॥

ಭಾಷ್ಯದಲು ಹೀಗೆಯೇ । ಲೇಸಿನಿಂ ಬರೆದಿಹರು
ಭಾಸಿಸದು ಮತ್ತೆ ಮೂರನೆ ಶರೀರವಿದು
ಲೇಸಾಗಿ ನೋಡಿ । ಬ್ರಹ್ಮಜ್ಞ ॥ 139 ॥

ಕಾರಣಾವಿದ್ಯೆ ಎನೆ । ಕಾರಣದ ತನುವಲ್ಲ
ಚಾರುತರ ಮೂಲದಜ್ಞಾನವೂ ಅಲ್ಲ
ಧೀರರರಿದನರಿಗು । ಬ್ರಹ್ಮಜ್ಞ ॥ 140 ॥

ತತ್ತ್ವವನು ತಿಳಿಯದುದೆ । ಮತ್ತೆ ಕಾರಣವಿದುವೆ
ತತ್ತ್ವವನು ಬೇರೆ ಬಗೆಯಲಿ ತಿಳಿವುದಕೆ
ಮತ್ತಿದಭಿವಮತವು । ಬ್ರಹ್ಮಜ್ಞ ॥ 141 ॥

ವಿಶ್ವತೈಜಸರಿಂಗೆ । ದೋಷ ಕಾರಣಕಾರ್ಯ
ಲೇಸಾಗಿ ಎರಡು ಬಗೆಯಲ್ಲು ಬದ್ಧರಿದ-
ರಾಶಯವನರಿಗು । ಬ್ರಹ್ಮಜ್ಞ ॥ 142 ॥

ಪ್ರಾಜ್ಞ ಕಾರಣಬದ್ಧ । ಅಜ್ಞತನಮಾತ್ರವೇ
ಪ್ರಾಜ್ಞತ್ವ ಬರಲು ಮೂಲಾಯ್ತು ಆತ್ಮನಿಗೆ
ಸುಜ್ಞರಿದ ಕೇಳಿ । ಬ್ರಹ್ಮಜ್ಞ[2] ॥ 143 ॥

---

1. ಪದ್ಯ 136 ರಿಂದ 139ರವರೆಗಿನ ವಿಷಯಕ್ಕೆ ಪೀಠಿಕೆಯನ್ನು ನೋಡಿರಿ.
2. ಈ ವಿಷಯಕ್ಕೆ ಮಾಂ. ಕಾ. ಭಾ.ಭಾ.45ರಲ್ಲಿ "ತತ್ತ್ವಾಪ್ರತಿಬೋಧಮಾತ್ರ ಮೇವ ಹಿ ಬೀಜಮ್...." ಎಂಬ ವಾಕ್ಯಗಳನ್ನು ನೋಡಿರಿ.

## ಶಂಕೆ

ಸುಪ್ತಿಯಿದು ಬೊಮ್ಮವೇ । ಸುಪ್ತಿಯೇ ಸರ್ವಜ್ಞ
ಜ್ಞಪ್ತಿಘನನೆಂದು ಹೇಳಿದ್ದು ಈಗಿಲ್ಲಿ
ತಪ್ಪಿಹೋಯ್ತಲ್ಲ ? ಬ್ರಹ್ಮಜ್ಞ ॥ 144 ॥

ಪ್ರಾಜ್ಞಶಬ್ದಕೆ ಅರ್ಥ । ಅಜ್ಞನಲ್ಲೆಂದಿರಲು
ಅಜ್ಞಾನ ಮಾತ್ರ ಮೂಲವಿದು ಹೇಗಾಯ್ತು
ಪ್ರಾಜ್ಞತ್ವಕಿಲ್ಲಿ ? ಬ್ರಹ್ಮಜ್ಞ ॥ 145 ॥

## ಪರಿಹಾರ

(ಶುದ್ದಬ್ರಹ್ಮ)

ಶ್ರುತಿ ಬ್ರಹ್ಮನಿಷ್ಠರಾ । ಅತಿಶಯದ ದೃಷ್ಟಿಯಲಿ
ಸತತವಿದು ಬೊಮ್ಮ ಈ ನಿದ್ರೆ ಸುಳ್ಳಲ್ಲ
ಶ್ರುತಿಭಾಷ್ಯ ನೋಡಿ । ಬ್ರಹ್ಮಜ್ಞ ॥ 146 ॥

**(ಪ್ರಾಜ್ಞ)**

ಎಚ್ಚರದ ಬಿಡಿಅರಿವು । ಮುಚ್ಚಿ ಒಂದಾಗಿರಲು
ನಿಶ್ಚಯದಿ ಮತ್ತೆ ಪ್ರಜ್ಞಾನಘನನೆನುವು–
ದೆಚ್ಚರದ ದೃಷ್ಟಿ । ಬ್ರಹ್ಮಜ್ಞ ॥ 147 ॥

**(ಸರ್ವೇಶ್ವರ)**

ಜಾಗರಕು ಸ್ವಪ್ನಕ್ಕು । ಈಗಳಿವ ಕಾರಣನು
ಆಗಿರುವನೆಂಬ ದೃಷ್ಟಿಯಲಿ ಸರ್ವೇಶ
ಈಗ ಸರ್ವಜ್ಞ। ಬ್ರಹ್ಮಜ್ಞ ॥ 148 ॥

**(ಅವ್ಯಾಕೃತಾತ್ಮ)**

ಅವ್ಯಕ್ತತತ್ತ್ವ ಮೇಣ್ । ಸುವ್ಯವಸ್ಥಿತಿಯಿಂದ
ಭವ್ಯವಹ ಸೃಷ್ಟಿಸ್ಥಿತಿ ನಿಯಮ ಕರ್ತೃವಿವ
ಅವ್ಯಾಕೃತಾತ್ಮ । ಬ್ರಹ್ಮಜ್ಞ ॥ 149 ॥

**(ಈಶ್ವರ)**

ಈ ರೀತಿ ಈಶನಿವ । ಚಾರುತರ ಪ್ರಾಜ್ಞನೇ
ಬೇರೆಯೇ ದೃಷ್ಟಿ ಅವಲಂಬಿಸುತ್ತಲಿದ
ಸಾರುವದು ಶ್ರುತಿಯು । ಬ್ರಹ್ಮಜ್ಞ ॥ 150 ॥

ಆನು ಬೊಮ್ಮವು ಎಂಬ । ಜ್ಞಾನ ತಾ ಬರಬೇಕು
ಸ್ನಾನವಿದು ಬರದೆ ಬೊಮ್ಮದಲ್ಲಿದ್ದರೂ
ಏನಿಲ್ಲ ಲಾಭ । ಬ್ರಹ್ಮಜ್ಞ ॥ 151 ॥

ಹೀಗೆ ತನಿನಿದ್ರೆಯಲಿ । ಅಗಲಾರದು ಜ್ಞಾನ
ಈಗಳೀ ಲೋಕದೃಷ್ಟಿಯಲಿ ಅಜ್ಞಾನ
ನೀಗದಿವನಲ್ಲಿ । ಬ್ರಹ್ಮಜ್ಞ[1] ॥ 152 ॥

ಆದಕಾರಣ ಮತ್ತೆ । ವಾದಿಗಳು ವಾದಿಸುತ
ಭೇದವನ್ನೆತ್ತಿ ಅಜ್ಞನಿವನೆನ್ನುವರು
ವೇದಾರ್ಥ ಮರೆತು । ಬ್ರಹ್ಮಜ್ಞ ॥ 153 ॥

### (ತುರೀಯ–ಪ್ರಾಜ್ಞರಲ್ಲಿಯ ಸಾಮಾನ್ಯವಿಶೇಷಗಳು)

'ನಾನು, ಇದು' ಎನ್ನುವೀ । ನಾನಾತ್ವವಾವುದೂ
ಕಾಣಿಸದು ತುರ್ಯಪ್ರಾಜ್ಞರಿಗೆ ಎಂಬುದೇ
ಮೇಣು ಸಾಮಾನ್ಯ । ಬ್ರಹ್ಮಜ್ಞ ॥ 154 ॥

ಬೀಜನಿದ್ರೆಯದುಂಟು । ಮೋಜು ಇದು ಪ್ರಾಜ್ಞನಿಗೆ
ಯೋಜಿಸಲು ಮತ್ತೆ ಬೀಜವೀ ದ್ವೈತಕ್ಕೆ
ನೈಜಕಾರಣವು । ಬ್ರಹ್ಮಜ್ಞ ॥ 155 ॥

ತೂರಿಯನು ಎಂದಿಗೂ । ಬಾರನೀ ತೆರ ಮರಳಿ
ಬೇರುಸಹ ಕಿತ್ತಿಹೋಗಿಹುದು ಸಂಸಾರ
ಸೇರಿಲ್ಲ ನಿರುತ । ಬ್ರಹ್ಮಜ್ಞ ॥ 156 ॥

ತೂರಿಯನೆ ಈಗಿಲ್ಲಿ । ಮೂರಕ್ಕೂ ಸಾಮಾನ್ಯ
ಮೂರೆಂಬ ಮೂಢಕಲ್ಪನೆ ವಿಶೇಷಗಳು
ತೋರಿಹವು ಮನದಿ । ಬ್ರಹ್ಮಜ್ಞ ॥ 157 ॥

ತೂರಿಯಗೆ ಇತರರಿಗೆ । ಸಾರಿಹರು ಈ ಭೇದ
ತೂರಿಯನ ಕಂಡು ನಿಶ್ಚಯಿಸೆ ಸುಲಭದಾ
ದಾರಿ ಸಿಗಲೆಂದು । ಬ್ರಹ್ಮಜ್ಞ[2] ॥ 158 ॥

---

1. ಪದ್ಯ 144 ರಿಂದ 152ರ ವಿಷಯಕ್ಕೆ ಮಾಂ. ರ. ವಿ. ಪುಟ 102ರಲ್ಲಿ 'ಸುಷುಪ್ತಾತ್ಮನೋಽಜ್ಞತ್ವಂ ಸರ್ವಜ್ಞತ್ವಂ ಚ ದೃಷ್ಟಿಭೇದಾತ್' ಎಂಬ ಪ್ರಘಟ್ಟವನ್ನು ನೋಡಿರಿ.

2. ಪದ್ಯ 154 ರಿಂದ 158ರ ಪೂರ ವಿಷಯಕ್ಕೆ ಮಾಂ. ಕಾ. ಭಾ. ಭಾ. 49, 50 ಮುತ್ತು ಮಾಂ. ರ. ವಿ. ಪುಟ 131ನ್ನು ನೋಡಿರಿ.

### (ವ್ಯಾಖ್ಯಾನ ಪ್ರಸ್ಥಾನದವರ ಮತ)

ಕೆಲವು ವ್ಯಾಖ್ಯಾತೃಗಳು । ತಿಳಿಯದಲೆ ಅನುಭವವ
ಹಲವುಬಗೆ ಗ್ರಹಿಕೆ ತಂದೊಡ್ಡಿ ತುರಿಯನನು
ತಿಳಿಸತೊಡಗಿದರು । ಬ್ರಹ್ಮಜ್ಞ ॥ 159 ॥

ನಿದ್ದೆಯಲಿ ಅಜ್ಞಾನ । ಇದ್ದಿಹುದು ಜೀವನಿವ
ಬಿದ್ದಿರುವನಲ್ಲಿ ವಶನಾಗಿ ಅದಕಿನ್ನು
ಶುದ್ಧಾತ್ಮನಲ್ಲ । ಬ್ರಹ್ಮಜ್ಞ ॥ 160 ॥

ಆತ್ಮನನ್ನಾಶ್ರಯಿಸಿ । ಮತ್ತವಿದ್ಯೆಯದಿರಲು
ಆತ್ಮನಲಿ ಜೀವ ಸೇರಿಹನು ಎಂಬುದಿದು
ಮತ್ತೆ ಪರ್ಯಾಯ । ಬ್ರಹ್ಮಜ್ಞ ॥ 161 ॥

ನೇರಾಗಿ ಆತ್ಮನನು । ಸೇರಿಲ್ಲ ಸುಪ್ತಿಯಲಿ
ಬೇರಾಗಿ ಹೊರಗೆ ಬರುವುದಕವಿದ್ಯೆಯೇ
ಕಾರಣಾಗಿಹುದು । ಬ್ರಹ್ಮಜ್ಞ ॥ 162 ॥

ನಿರ್ವಿಕಲ್ಪಸಮಾಧಿ । ನಿರ್ವಹಿಸಲದರಲ್ಲಿ
ಸೇರ್ವನೀ ಜೀವನಾತ್ಮನಲಿ ಅಜ್ಞಾನ
ನಿರ್ವಂಶವಾಗ । ಬ್ರಹ್ಮಜ್ಞ ॥ 163 ॥

ಇದೆ ತುರ್ಯವೆನ್ನುವದು । ಇದಕಾಗಿ ಸುಸಮಾಧಿ
ಒದಗುವದೆ ಮುಖ್ಯ ಜ್ಞಾನಕ್ಕೆ ಎಂಬ ಬಗೆ
ಹುದುಗಿಸಿದ್ದಾಯ್ತು । ಬ್ರಹ್ಮಜ್ಞ ॥ 164 ॥

### (ಭಾಷ್ಯಕಾರರ ಮತ)

ನಿದ್ದೆಯಲಿ ಬೊಮ್ಮವನೆ । ಹೊದ್ದುವನು ಎಂಬುದಕೆ
ಶುದ್ಧ ಶ್ರುತಿವಾಕ್ಯ ಬಂದಿಹವು ನೂರಾರು
ಬುದ್ಧರಿದ ನೋಡಿ । ಬ್ರಹ್ಮಜ್ಞ ॥ 165 ॥

ಈ ನುಡಿಯನೇ ಮತ್ತೆ । ಮಾನಿಪುದು ಭಾಷ್ಯದಲಿ
ತಾಣವಿದು ಸುಪ್ತಿ ಬೊಮ್ಮವೇ ಎಂಬುದನು–
ಮಾನವಿಲ್ಲದಲೆ । ಬ್ರಹ್ಮಜ್ಞ ॥ 166 ॥

ಸೂರೆಗೊಂಡಿಹ ವಾಕ್ಯ । ಸಾರಿಹವು ಈರೀತಿ
ಸೇರುವನು ಜೀವನಜ್ಞಾನವೆಂಬುದಿದ
ತೋರಲಳವಲ್ಲ । ಬ್ರಹ್ಮಜ್ಞ[1] ॥ 167 ॥

1. ಪದ್ಯ 165 ರಿಂದ 167ರ ಪೂರ ವಿಷಯಕ್ಕೆ "ಶಂಕರ ಸಿದ್ಧಾಂತ" ಪುಟ 62–63ನ್ನು ನೋಡಿರಿ.

## (ಅಕ್ಷೇಪ)

ನಿದ್ದೆಯಿಂದಲಿ ಜೀವ । ಎದ್ದುಬರುವದದೇಕೆ
ಇದ್ದರಿವನಲ್ಲಿ ಬೊಮ್ಮದಲಿ ಮುಕ್ತಿಯನೆ
ಹೊದ್ದಲಿಲ್ಲೇಕೆ ? । ಬ್ರಹ್ಮಜ್ಞ ॥ 168 ॥

ನಿದ್ದೆಯಲಿ ಅನೃತವನು । ಹೊದ್ದಿರುವ ಜೀವರಿಗೆ
ಇದ್ದಿಹುದು ಇದಕೆ ತಿರುಗಿಬಹ ಕಾರಣದ
ಶುದ್ಧ ಶ್ರುತಿವಾಕ್ಯ । ಬ್ರಹ್ಮಜ್ಞ[1] ॥ 169 ॥

ಜೀವನಿನ ತಮದಿಂದೆ । ಆವರಿಸಿ ನಿದ್ದೆಯಲಿ
ದೇವನನು ಸೇರಿ ಸುಖದಿಂದಲಿರುವನೆಂ-
ಬೀ ವಚನ ಶ್ರುತಿಯು[2]। ಬ್ರಹ್ಮಜ್ಞ ॥ 170 ॥

ನಿದ್ದೆಯಲಿ ಅಜ್ಞಾನ । ಇದ್ದುದಕೆ ಆಧಾರ
ಎದ್ದುಬಹ ಸರ್ವರನುಭವವ ಹೇಳುತ್ತೆ
ಸದ್ದು ಮಾಡಿದರು । ಬ್ರಹ್ಮಜ್ಞ ॥ 171 ॥

## (ಸಮಾಧಾನ)

ಈ ಶಂಕೆ ಸಿದ್ಧಾಂತ । ಲೇಸಾಗಿ ತಿಳಿಯದಲೆ
ಭಾಸಿಸಿದ ತಪ್ಪುತಿಳಿವೆಂದು ತೋರಿರುವ
ಭಾಷ್ಯವಿದ ನೋಡಿ । ಬ್ರಹ್ಮಜ್ಞ ॥ 172 ॥

ಮೂರು ಕಾಲದಿ ಜೀವ । ಬೇರಲ್ಲ ಬೊಮ್ಮವೇ
ಬೇರಾಗಿ ತಾನು ಬರಲಿಲ್ಲ ನಿಜವಾಗಿ
ಸೇರಲೂ ಇಲ್ಲ । ಬ್ರಹ್ಮಜ್ಞ ॥ 173 ॥

ತಿಳಿಯದಿರೆ ಬೊಮ್ಮವನು । ಬಳಿಕ ಕಲ್ಪಿಸಿಕೊಂಡ
ಬಳುವಳಿಯ ಕರಣ ಮೊದಲಾದುಪಾಧಿಯಲಿ
ಹೊಳೆದಿರಲು ಜೀವ । ಬ್ರಹ್ಮಜ್ಞ ॥ 174 ॥

ಅಳಿದಿರಲು ಕಲ್ಪನೆಯು । ಬಳಿಕ ನಿದ್ರೆಯಲಿನ್ನು
ಉಳಿದಿಹನು ತಾನು ತಾನಾಗಿ ಎಂಬುದನೆ
ತಿಳಿಯಬೇಕಿಲ್ಲಿ । ಬ್ರಹ್ಮಜ್ಞ ॥ 175 ॥

---

1. ಈ ವಿಷಯಕ್ಕೆ ಛಾಂ. 6–9–2ನ್ನು ನೋಡಿರಿ.

2. ಈ ವಿಷಯಕ್ಕೆ ಕೈವಲ್ಯೋಪನಿಷತ್ತಿನ "ಸುಷುಪ್ತಿಕಾಲೇ...." ಎಂಬ ವಾಕ್ಯವನ್ನು ನೋಡಿರಿ.

ಕನ್ನಡಿಯ ಸೂರ್ಯನಿಗೆ । ಇನ್ನು ಎದುರಾಗಿಡಲು
ಮುನ್ನದನು ರವಿಯು ಹೊಕ್ಕಿರುವ ತೆಗೆಯಲ್ಕೆ
ತನ್ನನ್ನೆ ಸೇರ್ದ । ಬ್ರಹ್ಮಜ್ಞ ॥ 176 ॥

ಆರೋಪದೃಷ್ಟಿಯಲಿ । ಬೇರಾಗಿ ತೋರ್ಪವನು
ಆರೋಪವಿರದ ನಿದ್ರೆಯಲಿ ತನ್ನನ್ನು
ಸೇರಿದುದು ಇಂತೆ । ಬ್ರಹ್ಮಜ್ಞ[1] ॥ 177 ॥

**(ಶ್ರುತಿಯ ಅಭಿಪ್ರಾಯ)**

ನಿದ್ದೆಯಲಿ ಸರ್ವರೂ । ಶುದ್ಧ ಬೊಮ್ಮವೆ ಇರಲು
ಹೊದ್ದಿಹರು ಇವರು ಅನೃತವನು ತಿಳಿಯದಲೆ
ಬದ್ಧರಾಗಿಹರು । ಬ್ರಹ್ಮಜ್ಞ ॥ 178 ॥

ನನಸಿನಲಿ ನೆಲೆಸಿರ್ದ । ಮನದವಿದ್ಯೆಯ ದೃಷ್ಟಿ
ಅನುಸರಿಸಿ ಶ್ರುತಿಯು ಹೇಳಿರುವದೀ ಮಾತು
ನೆನಪಿನಲ್ಲಿರಲಿ । ಬ್ರಹ್ಮಜ್ಞ ॥ 179 ॥

ಅರಿಯದೀ ಅನೃತದಲಿ । ಬೆರೆತಿರುವರೆಂಬಲ್ಲಿ
ಬರುವ ಬಹುವಚನ ಜಾಗರದ ದ್ರಷ್ಟಿಯಲೆ
ಬರೆದಿಹುದು ಸತ್ಯ । ಬ್ರಹ್ಮಜ್ಞ ॥ 180 ॥

ನಿದ್ದೆಗೀ ಬಹುವಚನ । ಉದ್ದರಿಸೆ ಸಾಧ್ಯವೇ
ಇದ್ದುದಿದು ಕರಣದೊಳಗಿರುವವಿದ್ಯೆಯಾ
ಬದ್ಧ ವ್ಯವಹಾರ । ಬ್ರಹ್ಮಜ್ಞ ॥ 181 ॥

ಜೀವನಿವ ತಮದಿಂದೆ । ಆವರಿಸಿಕೊಂಡಿರುವ
ಭಾವವಿದು ನಿದ್ರೆಯಲ್ಲಿಲ್ಲ ನಿದ್ದೆಯಲಿ
ಜೀವತ್ವವಿಲ್ಲ । ಬ್ರಹ್ಮಜ್ಞ ॥ 182 ॥

ಎಲ್ಲವೂ ಲಯವಾಗಿ । ಉಳ್ಳಸ್ಥಿತಿ ನಿದ್ದೆಯದು
ಅಲ್ಲಿ ತಮ ಜೀವನುಳಿಯಲ್ಕೆ ಈ ಮಾತು
ಸುಳ್ಳಹುದು ಕೇಳಿ । ಬ್ರಹ್ಮಜ್ಞ ॥ 183 ॥

ಜೀವ ತಮ ಮೊದಲಾದ । ಭಾವವೆಲ್ಲವು ಲಯಿಸಿ
ಕೇವಲದ ತಾನು ಬೊಮ್ಮವೇ ನಿದ್ದೆಯಾ
ತೀವಿದನುಭವವು । ಬ್ರಹ್ಮಜ್ಞ ॥ 184 ॥

---

1. ಪದ್ಯ 173 ರಿಂದ 177ರವರೆಗಿನ ವಿಷಯಗಳಿಗೆ "ಶಂಕರಸಿದ್ಧಾಂತ" ಪುಟ 75ನ್ನು ನೋಡಿರಿ.

ಹೀಗಿರಲು ಇದರರಿವು । ಆಗದಿಹ ಜೀವಿಗಳು
ಈಗಿದನು ನಿದ್ರೆ ಎನ್ನುವರು ಇದೆ ತಮವು
ಆಗಿಹುದು ಮುಸುಕು । ಬ್ರಹ್ಮಜ್ಞ ॥ 185 ॥

ಇದು ನನಸಿನಾ ದೃಷ್ಟಿ । ಇದು ನಿದ್ರೆಯಲ್ಲಿಲ್ಲ
ಹದನವಿದ ಮತ್ತೆ ತಿಳಿಯದಲೆ ಶ್ರುತಿಯರ್ಥ
ಬದಲಾಯಿತಿಲ್ಲಿ । ಬ್ರಹ್ಮಜ್ಞ[1] ॥ 186 ॥

### (ಸಮಾಧಿಕಲ್ಪನೆ ವ್ಯರ್ಥ)

ಸುಸಮಾಧಿಯಿಂದಲೂ । ಎಸೆವುದೆಚ್ಚರ ಮರಳಿ
ಬೆಸಗೊಳಲು ಬೇಕು ಅಲ್ಲಿಯೂ ಅಜ್ಞಾನ-
ದೆಶೆಯನ್ನೆ ಒಪ್ಪಿ । ಬ್ರಹ್ಮಜ್ಞ ॥ 187 ॥

ವ್ಯರ್ಥವೀಗ ಸಮಾಧಿ । ಅರ್ಥವಿಲ್ಲದ್ದಾಯ್ತು
ಸಾರ್ಥಕವಿದಲ್ಲ ಅನುಭವವ ಅತಿಗಳೆವ-
ನರ್ಥಕಲ್ಪನೆಯು । ಬ್ರಹ್ಮಜ್ಞ[2] ॥ 188 ॥

### (ತುರೀಯನ ಜ್ಞಾನ)

ನನಸಿನಲಿ ಕನಸಿನಲಿ । ತನಿನಿದ್ರೆಯಲ್ಲಿಯೂ
ಮನೆಮಾಡಿಕೊಂಡು ನಿಂತಿಹುದು ಅಜ್ಞಾನ
ಘನನಿದ್ರೆ ಇದುವೆ । ಬ್ರಹ್ಮಜ್ಞ ॥ 189 ॥

'ನಾನು, ಇದು' ಎಂಬುವೀ । ಮಾನವನ ಬಡಬಡಿಕೆ
ತಾಣವೇ ಸ್ವಪ್ನ ಜಾಗರವು ಸ್ವಪ್ನವೂ
ಮೇಣೆರಡು ಒಂದೆ । ಬ್ರಹ್ಮಜ್ಞ ॥ 190 ॥

ತಾನು ತಾನೇ ಮತ್ತೆ । ನಾನಾತ್ವವೇನಿಲ್ಲ
ಜ್ಞಾನವಿದು ಬರಲು ನಿಜವಾದ ಎಚ್ಚರವು
ಈ ನಾಮ ತುರ್ಯ । ಬ್ರಹ್ಮಜ್ಞ[4] ॥ 191 ॥

---

1. ಪದ್ಯ 178 ರಿಂದ 186ರ ಪೂರ ವಿಷಯಕ್ಕೆ ಅಧ್ಯಾತ್ಮಪ್ರಕಾಶಪತ್ರಿಕೆಯ 5ನೇ ಸಂಪುಟದ ಪುಟ 306ನ್ನು ನೋಡಿರಿ.

2. ಪದ್ಯ 187, 188ರ ವಿಷಯಕ್ಕೆ "ಶಂಕರಸಿದ್ಧಾಂತ" 93ನೆಯ ಪುಟವನ್ನು ನೋಡಿರಿ.

3. ಪದ್ಯ 189, 190ರ ವಿಷಯಕ್ಕೆ ಮಾಂ. ಕಾ. ಭಾ. ಭಾ. 52ನ್ನು ನೋಡಿರಿ.

4. ಪದ್ಯ 191 ರಿಂದ 196ರವರೆಗಿನ ವಿಷಯಕ್ಕೆ ಮಾಂ. ಕಾ. ಭಾ. ಭಾ. 53ನ್ನು ನೋಡಿರಿ.

ಜ್ಞಾನ ಮೇಣಜ್ಞಾನ । ಮಾನಿಸದು ತನ್ನಲ್ಲಿ
ತಾನಾತ್ಮರೂಪ ನಿತ್ಯನೆಂಬೀ ಅರಿವೆ
ತಾನೀಗ ತುರ್ಯ। ಬ್ರಹ್ಮಜ್ಞ ॥ 192 ॥

ಅಜ್ಞಾನರೂಪದಾ । ಪ್ರಾಜ್ಞನಿದ್ರೆಯ ಕಳೆದು
ವಿಜ್ಞಾನ ಬಂದು ಈ ತಪ್ಪು ತಿಳಿವಳಿಯೆ
ಸುಜ್ಞನಿವ ತುರ್ಯ । ಬ್ರಹ್ಮಜ್ಞ ॥ 193 ॥

ಎಚ್ಚರವು ಸ್ವಪ್ನವೂ । ಅಚ್ಚ ತನಿನಿದ್ರೆಯೂ
ಮುಚ್ಚಿಲ್ಲ ತನ್ನನೆಂದಿಗೂ ಎನ್ನುವೀ
ನಿಶ್ಚಯವೆ ತುರ್ಯ । ಬ್ರಹ್ಮಜ್ಞ ॥ 194 ॥

ನಿಶ್ಚಯದನಿಶ್ಚಯದ । ಹುಚ್ಚೇನು ತನಗಿಲ್ಲ
ಅಚ್ಯುತನು ನಿತ್ಯ ತಾ ಜ್ಞಾನರೂಪನೆನೆ
ಸ್ವಚ್ಛನಿವ ತುರ್ಯ । ಬ್ರಹ್ಮಜ್ಞ ॥ 195 ॥

ಈ ರೀತಿ ತುರಿಯನನು । ಯಾರು ನಿಶ್ಚಯಿಪರೋ
ಸೇರುವರು ನಿತ್ಯದದ್ವೈತಪದವಿಯನು
ಧಾರುಣಿಯೊಳೀಗ । ಬ್ರಹ್ಮಜ್ಞ ॥ 196 ॥

ಮುಂದಿನಧ್ಯಾಯದಲಿ । ಹೊಂದಲ್ಕೆ ತುರಿಯನನು
ಅಂದದಾ ರೀತಿಗಳು ಮೇಣ್ ನಿದಿಧ್ಯಾಸ
ಸಂಧಿಯದು । ಬ್ರಹ್ಮಜ್ಞ ॥ 197 ॥

# ಒಂಬತ್ತನೆಯ ಅಧ್ಯಾಯ

## ತುರೀಯಪ್ರತಿಪತ್ತಿ

ತುರಿಯನಲಿ ನಿಲಿಸಲ್ಕೆ । ಪರಿಪರಿಯ ಯುಕ್ತಿಗಳ
ಬರೆದಿಹರು ಮತ್ತೆ ಶ್ರೀಗಳಿವುಗಳಲೀಗ
ಒರೆವೆ ಕೆಲವನ್ನು । ಬ್ರಹ್ಮಜ್ಞ ॥ 1 ॥

ತತ್ತ್ವತಿಳಿಯದ ನಿದ್ರೆ । ಮತ್ತೆ ತಪ್ಪರಿವೆಂಬ
ಮುತ್ತಿರುವ ಸ್ವಪ್ನವಿವುಗಳೆ ವಿಪರ್ಯಾಸ
ಕಿತ್ತೊಗೆಯೆ ತುರ್ಯ । ಬ್ರಹ್ಮಜ್ಞ[1] ॥ 2 ॥

ಪರಮಗುರುಗಳ ವಾಕ್ಯ । ಸರಣಿಯನು ವಿವರಿಸಲು
ಬರೆದಿರುವ ಗ್ರಂಥ ಮಾಂಡೂಕ್ಯವಿವೃತಿಯಾ
ಪರಿಯನ್ನು ಪೇಳ್ವೆ । ಬ್ರಹ್ಮಜ್ಞ ॥ 3 ॥

### (ಪ್ರಮಾತೃತ್ವನಿರಾಕರಣೆ)

ಕನಸು ನನಸುಗಳಲ್ಲಿ । ಮಿನುಗುವ ಪ್ರಮಾತೃಗಳು
ಅನವರತ ಸತ್ಯವೆಂಬಂತೆ ತೋರುವದು
ಮನಸಿನಾ ಭ್ರಾಂತಿ । ಬ್ರಹ್ಮಜ್ಞ ॥ 4 ॥

ನನಸಿನ ಪ್ರಮಾತೃತ್ವ । ಕನಸಿನಲಿ ಬರದಂತೆ
ಕನಸಿನದು ಈಗ ಬರಲಾರದೆನುವುದನು
ಅನುಸರಿಸಿ ನೋಳ್ಕು । ಬ್ರಹ್ಮಜ್ಞ ॥ 5 ॥

ಎರಡೊಳಿಹ 'ನಾನು'ವೂ । ಎರಡೊಳಿಹ ವಿಶ್ವವೂ
ಎರಡೊಳಿಹ ದುಃಖಸುಖಭೋಗ ಬೇರೇಯೇ
ಇರುವದನು ತಿಳಿಗು । ಬ್ರಹ್ಮಜ್ಞ ॥ 6 ॥

ಭಿನ್ನತೆಯ ಗುರುತಿಸಲು । ಇನ್ನ ತಾ ಬೇರಿಹನು
ಮುನ್ನವಿವು ಎರಡು ತೋರಿದುದ ಅಡಗಿದುದ
ಇನ್ನರಿವ ತಾನೆ । ಬ್ರಹ್ಮಜ್ಞ ॥ 7 ॥

---

1. ಈ ವಿಷಯಕ್ಕೆ ಮಾಂ. ಕಾ. ಭಾ. 1–15ನ್ನು ನೋಡಿರಿ.

ತಾನೆಂಬ ದೃಷ್ಟಿಯನು । ಮಾನಿಸುತ ಬುದ್ಧಿಯಲಿ
ಮೇಣೀಗ ತೋರ್ಪ ನಾನುಗಳ ಕೈಬಿಡಲು
ತಾನಾಗಿನಿಂತ । ಬ್ರಹ್ಮಜ್ಞ ॥ 8 ॥

ನಾನು ಮಾತ್ರವು ಎಂಬ । ಹೀನ ಗ್ರಹಿಕೆಯೆ ಹೋಯ್ತು
ತಾನಾಗಿ ನಿಂತ ಬಳಿಕಿನ್ನು ತಿಳಿಯುವದು
ಏನಿಲ್ಲ ಕೇಳಿ । ಬ್ರಹ್ಮಜ್ಞ ॥ 9 ॥

**(ಅಗ್ರಹಣನಿರಾಕರಣೆ)**

ಎಚ್ಚರದ ಮಾನವಿದು । ಅಚ್ಚ ತನಿನಿದ್ರೆಯಲಿ
ಮುಚ್ಚಿಹುದು ಅಲ್ಲಿ ಏನೊಂದ ತಿಳಿಯೆನೆನೆ
ಮೆಚ್ಚರಿದ ಬುಧರು । ಬ್ರಹ್ಮಜ್ಞ ॥ 10 ॥

ತಾನಲ್ಲದಿನ್ನೊಂದು । ಏನಿಲ್ಲ ತಿಳಿಯಲ್ಕೆ
ಸ್ವಾನುಭವವಿದನು ಲಕ್ಷಿಸಲು ಅಗ್ರಹಣ
ಭಾನವಿದು ಹೋಯ್ತು । ಬ್ರಹ್ಮಜ್ಞ ॥ 11 ॥

**(ಬೀಜಸದ್ಭಾವನಿರಾಕರಣೆ)**

ಬೀಜವವ್ಯಾಕೃತವು । ಬೀಜ ವಾಸನೆಗಳದು
ಈ ಜಗದ ದೃಷ್ಟಿಯಿಂದದನು ನಿದ್ರೆಯಲಿ
ಯೋಜಿಸಿತು ಶಾಸ್ತ್ರ । ಬ್ರಹ್ಮಜ್ಞ ॥ 12 ॥

ಇರುವುದಾತ್ಮನೆ ಸತ್ಯ । ಬರಿತೋರ್ಕೆ ಜಗವೆಂಬ
ಸರಿಯಾದ ಜ್ಞಾನ ಬಂದಾಗ ಜಗ ಹೋಯ್ತು
ಇರದಾಯ್ತು ಮುಂದೆ । ಬ್ರಹ್ಮಜ್ಞ ॥ 13 ॥

ಈ ಜಗವೆ ಇರದಾಗ । ಬೀಜವಿನ್ನೆತ್ತಣದು
ನೈಜದಲಿ ಆಟ ಮುಗಿದಾಗ ತಂದೆ ಮಗ
ಈ ಜಗದಿ ಇಹರೆ ? । ಬ್ರಹ್ಮಜ್ಞ ॥ 14 ॥

**(ಅನೇಕಾತ್ಮತ್ವನಿರಾಕರಣೆ)**

ಎನ್ನಂತೆ ಇರುತಿರುವ । ಭಿನ್ನಜೀವರುಗಳೂ
ಇನ್ನಿಹರು ಜಗದಿ ಎಂದೆನುವ ಭಾವನೆಯು
ಮುನ್ನಿಹುದು ಸಹಜ । ಬ್ರಹ್ಮಜ್ಞ ॥ 15 ॥

ತಾನು ತನ್ನೊಳು ನನಸು । ತಾನೆ ವೈಶ್ವಾನರನು
ತಾನೀಗ ಮತ್ತೆ ತೈಜಸನು ಎಂಬುದನು
ಧ್ಯಾನಿಸಲು ಬೇಕು । ಬ್ರಹ್ಮಜ್ಞ ॥ 16 ॥

ತಾನೆ ಎರಡಾಗಿಹನು । ತಾನೆ ವ್ಯಾಪಿಸಿದವನು
ತಾನಲ್ಲದಿನ್ನು ಬೇರೊಬ್ಬರಿಲ್ಲಿಲ್ಲ
ತಾನೆ ಸರ್ವಾತ್ಮ । ಬ್ರಹ್ಮಜ್ಞ ॥ 17 ॥

ಬಂದಾಗ ಈ ಜ್ಞಾನ । ನಿಂದೆಸ್ತುತಿ ಕಾಮಾದಿ
ಬಂಧವೇ ಬಿಟ್ಟುಹೋಯ್ತೀಗ ತಾನೆ ಇ–
ನ್ನೊಂದು ಬೇರಿಲ್ಲ । ಬ್ರಹ್ಮಜ್ಞ ॥ 18 ॥

**(ಸ್ಥಾನಧರ್ಮ ನಿರಾಕರಣೆ)**

ಮೂರವಸ್ಥೆಗಳಿದ್ದು । ಬೇರೆ ತಾನಿರುವಂತೆ
ತೋರಿದರು ಹೀಗೆ ನಿಜವಾಗಿ ಇಲ್ಲವಿವು
ಮೂರು ಹುಸಿ ತೋರ್ಕೆ । ಬ್ರಹ್ಮಜ್ಞ ॥ 19 ॥

ನೀರರಝರಿ ಹೂಮಾಲೆ । ಸೇರಿಲ್ಲ ಸರ್ಪಗಳು
ತೋರಿದರು ಹಗ್ಗದೊಳಗೆಂಬ ತೆರನಿಲ್ಲಿ
ಸೇರಿಲ್ಲವಸ್ಥೆ । ಬ್ರಹ್ಮಜ್ಞ ॥ 20 ॥

ಒಂದು ತೋರುತ್ತಿರಲು । ನಿಂದಿರವು ಇನ್ನೆರಡು
ಬಂಧುರದ ಸಾಕ್ಷಿ ನಿತ್ಯ ತಾನಿವುಗಳನು
ಹೊಂದಿ ವ್ಯಾಪಿಸುವ । ಬ್ರಹ್ಮಜ್ಞ ॥ 21 ॥

ಸ್ಥಾನಗಳು ಇವು ಮೂರು । ಏನಿಲ್ಲ ತನ್ನಲ್ಲಿ
ತಾನೆ ನಿಜ ಮತ್ತೆ ಇವು ತನ್ನನರಿಯದಿರೆ
ಕಾಣುತಿಹ ಹುಸಿಯು । ಬ್ರಹ್ಮಜ್ಞ ॥ 22 ॥

**(ಸ್ಥಾನಿಧರ್ಮನಿರಾಕರಣೆ)**

ನನಸು ಕಾಣುವೆ ಮತ್ತೆ । ಕನಸಿನನುಭವಿಸುತ್ತೆ
ತನಿನಿದ್ರೆ ಮಾಳ್ಪ ಗುಣದವನು ತಾನೆಂಬ
ಕನವರಿಕೆ ತಪ್ಪು । ಬ್ರಹ್ಮಜ್ಞ[1] ॥ 23 ॥

1. ಈ ವಿಷಯಕ್ಕೆ ಶಾಂ. ವೇ. ತ. ಪುಟ 77ರಲ್ಲಿರುವ ಬೃ. ವಾ. 2–1–264, 265ನ್ನು ನೋಡಿರಿ.

ಭಾನು ಉದಯಿಪ ಮತ್ತೆ । ಬಾನಿನಲಿ ಏರುತ್ತೆ
ತಾನಿವನು ಸಂಜೆ ಮುಳುಗುವನು ಎನ್ನುವದು
ಮಾನವನ ದೃಷ್ಟಿ । ಬ್ರಹ್ಮಜ್ಞ ॥ 24 ॥

ಮೂರು ಕನ್ನಡಿಗಳಲಿ । ತೋರಿರಲು ವಿಧವಿಧದಿ
ಮೂರು ಗುಣ ತನಗೆ ಸೇರುವವೇ ? ಬಿಂಬ ತಾ
ಮೂರಲ್ಲ ನೋಡಿ । ಬ್ರಹ್ಮಜ್ಞ ॥ 25 ॥

ಈ ರೀತಿ ಇಲ್ಲಿಯೂ । ಸಾರಿರುವ ವಿಶ್ವಾದಿ
ತೋರಿಕೆಯ ಮೂರು ಸ್ಥಾನಿತ್ವ ತನಗಿಲ್ಲ
ತುರಿಯನೆ ತಾನು । ಬ್ರಹ್ಮಜ್ಞ[1] ॥ 26 ॥

**(ಸದ್ವಿತೀಯತ್ವನಿರಾಕರಣೆ)**

ತಾನು ತಾನಲ್ಲದ್ದು । ಮೇಣು ಬೇರೆರಡಿಲ್ಲ
ತಾನೆ ನಿಜ ಮತ್ತೆ ಕಲ್ಪಿತವು ಇನ್ನೊಂದು
ತಾನು ಅದ್ವಯನು । ಬ್ರಹ್ಮಜ್ಞ ॥ 27 ॥

ಆರಂಭದಲಿ ತಾನು । ಬೇರೆ ತಾನಲ್ಲದ್ದು
ಸಾರಿತ್ತು ಹೀಗೆ ಸತ್ಯವನು ತಿಳಿಯಲ್ಕೆ
ಸಾರನದ್ವಯನು । ಬ್ರಹ್ಮಜ್ಞ ॥ 28 ॥

ಹೀಗೆ ಬೇರಿಲ್ಲೆಂಬ । ಜಾಗರವೆ ತುರಿಯವಿದು
ಈಗಿದನೆ ಮನನ ಮಾಡಲ್ಕೆ ಅದ್ವಯನೆ
ಆಗಿ ತಾ ನಿಲುವ । ಬ್ರಹ್ಮಜ್ಞ[2] ॥ 29 ॥

## ಮನನದ ಸ್ವರೂಪ

ಅನುಭವದ ಬಲದಿಂದ । ಮನದಲಿ ವಿವೇಚಿಸುತ
ವಿನುತ ಗುರುಶಾಸ್ತ್ರದುಪದೇಶವನುಸರಿಪ
ಗುಣವೀಗ ಮನನ । ಬ್ರಹ್ಮಜ್ಞ ॥ 30 ॥

ಈ ಲೋಕ ಪರಲೋಕ । ಆಲೋಚನೆಯ ಬಿಟ್ಟು
ಮೂಲೋಕವೆಲ್ಲ ತಾನಾಗಿ ನಿಶ್ಚಲತೆ
ತಾಳುವದೆ ಮನನ । ಬ್ರಹ್ಮಜ್ಞ ॥ 31 ॥

1. ಪದ್ಯ 19 ರಿಂದ 26ರವರೆಗಿನ ವಿಚಾರಕ್ಕೆ ಅಧ್ಯಾತ್ಮಗೀತಾವಳಿ ಪುಟ57ರಲ್ಲಿಯ 69ನೆಯ ಗೀತೆಯನ್ನು ನೋಡಿ.

2. ಪದ್ಯ 4 ರಿಂದ 29ರ ಪೂರ ವಿಷಯಕ್ಕೆ ಮಾಂ. ರ. ವಿ. ಪುಟ 132–135 ನ್ನು ನೋಡಿರಿ.

ಏಳಿಸುತ ನೆನಹುಗಳ । ಕೇಳಿದ್ದ ಶ್ರವಣದಾ
ತಾಳುತ್ತೆ ಮತ್ತೆ ಮತ್ತಿನ್ನು 'ತಾನು'ವನು
ಮೇಳವಿಸೆ ಮನನ । ಬ್ರಹ್ಮಜ್ಞ ॥ 32 ॥

ಶ್ರುತಿವಿದಿತ ತರ್ಕಗಳ । ಅತಿಮಹತ್ತ್ವವ ತಿಳಿದು
ಸತತವೂ ಬಿಡದೆ ಅಳೆದಳೆದು ತಾನೆಂಬ
ಮತಿ ನಿಲಲು ಮನನ । ಬ್ರಹ್ಮಜ್ಞ ॥ 33 ॥

ತೀರಿ ಸಂಶಯವೆಲ್ಲ । ಚಾರುತರ ಶ್ರವಣದಲಿ
ಸೇರಿಸುತ ಅದನೆ ಬುದ್ಧಿಯಲಿ ನಿಶ್ಚಯಿಪ
ಕಾರಿಯವೆ ಮನನ । ಬ್ರಹ್ಮಜ್ಞ[1] ॥ 34 ॥

### (ಮನನದ ಫಲ)

ಇಂಥ ಮನನವು ಮುಗಿಯೆ । ಅಂತ್ಯದಲಿ ತಾನಾಗಿ
ನಿಂತಿರಲು ಮುಂದೆ ಅವಗಿಲ್ಲವಾವುದೂ
ಸ್ವಂತಕ್ಕೆ ಕ್ರಿಯೆಯು । ಬ್ರಹ್ಮಜ್ಞ ॥ 35 ॥

ಮನನಕ್ಕೆ ಮನ ಒಲಿಯೆ । ನೆನಹು ಸುಲಭದಿ ಬಕ್ಕು
ಮನನದಿಂ ತನ್ನ ನಿಶ್ಚಯವು ತನಗಕ್ಕು
ಘನ ಮೋಕ್ಷವಕ್ಕು । ಬ್ರಹ್ಮಜ್ಞ ॥ 36 ॥

### (ಮನನಕ್ಕೆ ತಕ್ಕ ಸ್ಥಿತಿ)

ಮನನಮಾಡಲು ಮೊದಲು । ಮನವು ನಿರ್ಮಲ ಬೇಕು
ಮನದಲ್ಲಿ ಮತ್ತೆ ಐಕಾಗ್ರ್ಯವಿಲ್ಲದಿರೆ
ಮನನವೇ ನಿಲದು । ಬ್ರಹ್ಮಜ್ಞ ॥ 37 ॥

ಸುವಿಚಾರ ಮುಂದಿರಲು । ಅವಗೆ ಏಕಾಗ್ರತೆಯು
ಸವನಿಸುತ ಹಿಂದೆ ಬಂದಾಗ ಮನನದಾ
ಸವಿಯು ತಾ ಬಕ್ಕು[2]। ಬ್ರಹ್ಮಜ್ಞ ॥ 38 ॥

ಶ್ರವಣಕಾಲದಲಿರುವ । ಅವಿರತದ ಐಕಾಗ್ರ್ಯ
ಹವಣಿಸುತ  ಮನನ ಮಾಳ್ಪಾಗ ಬಾರದಿರೆ
ಅವಗಿಲ್ಲ ಸುಖವು । ಬ್ರಹ್ಮಜ್ಞ ॥ 39 ॥

---

1. ಪದ್ಯ 30 ರಿಂದ 34ರವರೆಗಿನ ವಿಷಯಕ್ಕೆ ಕೇ. ಭಾ. ಭಾ. 44ನ್ನು ನೋಡಿರಿ.
2. ಈ ವಿಷಯಕ್ಕೆ ಗೀ. ಭಾ. 13–24 (ಭಾ.ಭಾ. 822)ರಲ್ಲಿಯ ಮತ್ತೆ ಕೆಲವರು – ಎಂಬಲ್ಲಿರುವ ಟಿಪ್ಪಣಿಯನ್ನು ನೋಡಿರಿ.

ಗುರುವಿನಾ ಸಂಗತಿಯು । ನೆರೆ ಶ್ರವಣಕಿರುತಿಹುದು
ಸ್ಮರಣೆಯೇ ಇಲ್ಲಿ ಜೊತೆಗಾರ ಮನನದಲಿ
ಇರಬೇಕು ಮೇಧೆ । ಬ್ರಹ್ಮಜ್ಞ ॥ 40 ॥

ಗ್ರಂಥಧಾರಣಶಕ್ತಿ ಮಂಥನ ವಿಚಾರಗತಿ
ಇಂಥದೇ ಸರಿಯು ಎಂದೀಗ ನಿರ್ಣಯಿಪ
ಪಂಥ ಬೇಕಿದಕೆ । ಬ್ರಹ್ಮಜ್ಞ ॥ 41 ॥

ಹೀಗೆ ಮೇಧಾಶಕ್ತಿ ಸಾಗಿ ಏಕಾಗ್ರಗತಿ
ಬೇಗ ತಾ ಬರಲು ಮನನದಿಂ ಸಂತೃಪ್ತಿ
ಆಗುವದು ನಿಜದಿ । ಬ್ರಹ್ಮಜ್ಞ[1] ॥ 42 ॥

**ನಿದಿಧ್ಯಾಸನದ ಆವಶ್ಯಕತೆ**

ಏಕಾಗ್ರತೆಯು ಮನದಿ । ಸಾಕಷ್ಟು ಇರದಿರಲು
ಸಾಕೆನುವ ತೃಪ್ತಿ ಸಿಗದೀಗ ಮನನದಿಂ
ಬೇಕು ಬೇರಿನ್ನು । ಬ್ರಹ್ಮಜ್ಞ ॥ 43 ॥

ಈಗ ಏಕಾಗ್ರತೆಗೆ ಬೇಗ ಪ್ರಾಮುಖ್ಯತೆಯ
ಜಾಗೆಯನು ಕೊಟ್ಟು ಸುವಿವೇಕವೆನ್ನುವದು
ಸಾಗಿ ಹಿನ್ನಡೆಗು । ಬ್ರಹ್ಮಜ್ಞ ॥ 44 ॥

ಈ ತೆರದ ಸಾಧನೆಯ ಮಾತಿದೆ ನಿದಿಧ್ಯಾಸ
ಕೂತಿರುತ ತಾನು ಏಕಾಗ್ರದಲಿ ತನ್ನ
ಆತುಮನ ನೋಳ್ಪ । ಬ್ರಹ್ಮಜ್ಞ ॥ 45 ॥

ಮೊದಲಿನೆರಡವು ಸಾಂಖ್ಯ । ಇದು ಯೋಗವೆನಿಸುವದು
ಇದನೀಗ ಮತ್ತೆ ವಿವರಿಸಲು ಯತ್ನಿಸುವೆ
ಮುದದಿಂದೆ ಕೇಳಿ । ಬ್ರಹ್ಮಜ್ಞ[2] ॥ 46 ॥

**(ಸಾಂಖ್ಯಯೋಗಗಳ ಅರ್ಥ)**

ಸಾಂಖ್ಯವೆನ್ನಲು ಕಪಿಲ । ಸಾಂಖ್ಯಶಾಸ್ತ್ರವಿದಲ್ಲ
ಶಂಕರರು ವೇದಸಮ್ಮತ ವಿಚಾರವನು
ಸಾಂಖ್ಯವೆಂದಿಹರು । ಬ್ರಹ್ಮಜ್ಞ ॥ 47 ॥

1. ಛಾಂ. 6-14-1ರಲ್ಲಿಯ ಮೇಧಾವೀ ಎಂಬ ಪದವನ್ನು ನೋಡಿರಿ.

2. ಪದ್ಯ 43 ರಿಂದ 46ರವರೆಗಿನ ವಿಷಯಕ್ಕೆ 38ನೆಯ ಪದ್ಯದ ಟಿಪ್ಪಣಿಯನ್ನೇ ನೋಡಿ.

ವೇದಕ್ಕೆ ಹೊಂದುವಾ । ವಾದಗಳ ಮಾತ್ರವೇ
ಆದರಿಸಿ ಮೇಣು ಕಪಿಲನಲು ಸ್ವೀಕರಿಪ
ಹಾದಿಯಿದ ಕೇಳಿ । ಬ್ರಹ್ಮಜ್ಞ ॥ 48 ॥

ಲೇಸು ಕಾಪಿಲ ಸಾಂಖ್ಯ । ಭಾಸಿಪುದವೈದಿಕವು
ದೋಷವಿದು ಇವರು ದ್ವೈತಿಗಳು ಎಂದಿವರ
ದೂಷಿಸಿಹರಿಲ್ಲಿ । ಬ್ರಹ್ಮಜ್ಞ ॥ 49 ॥

ಹೀಗಿದ್ದರೂ ಸಹಿತ । ಜಾಗರೂಕತೆಯಿಂದ
ಆಗಲೇ ಅವರ ಒಳ್ಳೆನುಡಿ ಸ್ವೀಕರಿಸಿ
ಸಾಗಿಹುದು ಭಾಷ್ಯ । ಬ್ರಹ್ಮಜ್ಞ ॥ 50 ॥

ಇದರಂತೆ ಯೋಗವೆನೆ । ಇವು ಪತಂಜಲವಲ್ಲ
ಅದು ಸಹಿತ ದ್ವೈತವಾಗಿರುವವೈದಿಕವು
ಬದಲಿಲ್ಲವೀಗ । ಬ್ರಹ್ಮಜ್ಞ ॥ 51 ॥

ಆದರೂ ಇದರಲ್ಲಿ । ಬಾಧೆಯಾಗದ ಕೆಲವು
ಬೋಧಗಳನಿಲ್ಲಿ ಆದರದಿ ಸ್ವೀಕರಿಸೆ
ವೋದಿಪುದು ಭಾಷ್ಯ । ಬ್ರಹ್ಮಜ್ಞ[1] ॥ 52 ॥

ಇದನ್ನು ತಿಳಿಯದೆ ಕೆಲರು । ಸದಮಲದ ಯೋಗವೆನೆ
ಒದಗಿಸುತ ನಿಜದಿ ಪಾತಂಜಲವನೆಲ್ಲ
ಹದವ ಕೆಡಸಿಹರು । ಬ್ರಹ್ಮಜ್ಞ ॥ 53 ॥

## (ವೈದಿಕಧ್ಯಾನದ ಬಗೆ)

ಧ್ಯಾನ ಚಿಂತನವೆನ್ನಿ । ಮೇಣುಪಾಸನೆ ಎನ್ನಿ
ಮಾನಸದಿ ನಡೆವ ಕ್ರಿಯೆಯಿದಕೆ ಏಕಾಗ್ರ
ಮಾನಸವೆ ಬೇಕು[2] । ಬ್ರಹ್ಮಜ್ಞ ॥ 54 ॥

---

1. ಪದ್ಯ 47 ರಿಂದ 52ರ ಪೂರ ವಿಷಯಕ್ಕೆ ಸೂ. ಭಾ. 2–1–3ನ್ನು (ಭಾ.ಭಾ. 407)ನ್ನು ನೋಡಿ. ಆಸನ ಪ್ರಾಣಾಯಾಮಪ್ರತ್ಯಾಹಾರದವರೆಗೆ ಈ ನಿದಿಧ್ಯಾಸನ ಯೋಗದಲ್ಲಿ ಪಾತಂಜಲಯೋಗವನ್ನು ಅನುಸರಿಸಿದರೂ ಧ್ಯಾನಧಾರಣಸಮಾಧಿಗಳಲ್ಲಿ ಅವರು ಹೇಳುವ ಅಭಿಪ್ರಾಯವು ಇಲ್ಲಿಲ್ಲ.

2. ಈ ವಿಷಯಕ್ಕೆ ಸೂ. ಭಾ. 1–1–4 (ಭಾ.ಭಾ. 51)ನ್ನು ನೋಡಿ. ಅಸನಾದಿಗಳನ್ನನುಸರಿಸುವದು ಚಿತ್ತವನ್ನು ವಿಷಯಗಳಿಂದ ಹಿಂದೆಗೆಯಿಸುವದು ಈ ಯೋಗದಲ್ಲಿ ಕರ್ತೃತಂತ್ರವೇ ಆಗಿದೆ.

### (ಆಸನ)

ಓಡಾಡುತಿದನೀಗ । ಮಾಡಲಾಗದು ಮತ್ತೆ
ಕಾಡುವದು ಮನದ ಚಾಂಚಲ್ಯ ಚಲಿಸುತಿರೆ
ಮಾಡಲ್ಕೆ ಬರದು । ಬ್ರಹ್ಮಜ್ಞ ॥ 55 ॥

ನಿಂತುಕೊಳ್ಳಲು ಮತ್ತೆ ಸ್ವಂತದೇಹವನೆತ್ತಿ
ಅಂತೆಯೇ ಹಿಡಿದು ನಿಲ್ಲಿಸುವ ವೃತ್ತಿಯು ನಿ
ರಂತರದಿ ಬೇಕು । ಬ್ರಹ್ಮಜ್ಞ ॥ 56 ॥

ಮಲಗಿ ಮಾಡಲಿ ಇದನು । ಘಳಿಲನೇ ನಿದ್ರೆಯಲಿ
ಮುಳುಗುತ್ತ ಮನವು ಲಯಹೊಂದಬಹುದಾಗಿ
ಮಲಗುವದು ಸಲ್ಲ । ಬ್ರಹ್ಮಜ್ಞ ॥ 57 ॥

ಕುಳಿತುಕೊಂಡೇ ಇದನು ಒಳಿತಾಗಿ ಸಾಧಿಪುದು
ಬಳಿಕಿಲ್ಲಿ ಪದ್ಮ ಮೊದಲಾದ ಆಸನದ
ಬಳಕೆ ಇರಲುಚಿತ । ಬ್ರಹ್ಮಜ್ಞ ॥ 58 ॥

ಅವುಗಳಳವಡದಿರಲು । ಸವನಿಸಿ ಸುಖಾಸನವ
ತವೆ ನಿದ್ರೆ ಬರದ ತೆರನಂತೆ ಚಿತ್ತವದು
ಅವಗಡಿಸದಂತೆ । ಬ್ರಹ್ಮಜ್ಞ ॥ 59 ॥

ಸಾಮಾನ್ಯನಿಯಮಗಳ । ಸೀಮೆಯನು ಗೀತೆಯಲಿ
ನೇಮಿಸಿದ ಬಗೆಯ ಆರನೆಯ ಅಧ್ಯಾಯ
ಪ್ರೇಥಮದಿಂ ನೋಳ್ಕು । ಬ್ರಹ್ಮಜ್ಞ[1] ॥ 60 ॥

### (ಸ್ಥಳ)

ಸ್ಥಳವು ಶುದ್ಧವದಿರಲು ಒಳಬಕ್ಕು ಈ ಮನವು
ನೆಲೆಯರಿತು ಧ್ಯಾನಮಾಡಲ್ಕೆ ವಿಧಿಸಿರುವ
ನಿಲುವುಗಳ ನೋಡಿ । ಬ್ರಹ್ಮಜ್ಞ ॥ 61 ॥

ಹುಲಿ ಕರಡಿ ಹಾವು ಮೇಣ್ । ಬಲು ಭಯದ ಸ್ಥಳ ಸಲ್ಲ
ಮಳಲೊಟ್ಟು ಗುಹೆಯು ದೇವಾಲಯವು ಲೇಸು
ಸಲೆ ಶಾಂತದೇಶ । ಬ್ರಹ್ಮಜ್ಞ[1] ॥ 62 ॥

---

1. ಪದ್ಯ 55 ರಿಂದ 60ರ ಪೂರ ವಿಷಯಕ್ಕೆ ಸೂ. ಭಾ. 4–1–7 (ಭಾ.ಭಾ. 520)ನ್ನು ನೋಡಿರಿ.

ತನ್ನದೆಂಬಭಿಮಾನ । ಮುನ್ನ ಬಾರದ ಸ್ಥಳವು
ಇನ್ನು ತಾ ಶುದ್ಧಿಗೈದಿರುವ ನಿಲಯವೂ
ಚೆನ್ನಾಗಬಹುದು। ಬ್ರಹ್ಮಜ್ಞ[1] ॥ 63 ॥

ದಿಕ್ಕು ಕಾಲಾದಿಗಳ । ಇಕ್ಕಟ್ಟು ಇದಕಿಲ್ಲ
ಮುಖ್ಯದಲಿ ಮನಕೆ ಏಕಾಗ್ರತೆಯ ಶಾಂತಿ
ಸಿಕ್ಕಿರಲು ಸಾಕು । ಬ್ರಹ್ಮಜ್ಞ[2] ॥ 64 ॥

## (ಸಂನ್ಯಾಸ)

ಏಕಾಕಿಯಾಗಿಯೇ । ಜೋಕೆಯಲಿ ಮಾಳ್ಪುದಕೆ
ಸ್ವೀಕರಿಪ ಶ್ರೌತಸಂನ್ಯಾಸ ಶಮೆದಮೆಯು
ಬೇಕಿಲ್ಲಿ ಮತ್ತೆ । ಬ್ರಹ್ಮಜ್ಞ ॥ 65 ॥

ಯೋಗವನ್ನೇರಲ್ಕೆ । ಸಾಗುತಿರೆ ಮೊದಲಿನಲಿ
ಆಗಿಹುದು ಕರ್ಮಯೋಗವದು ಸಾಧನೆಯು
ಈಗ ಶಮೆ ಮುಖ್ಯ । ಬ್ರಹ್ಮಜ್ಞ ॥ 66 ॥

ಏಕಾಂತ ಸಂನ್ಯಾಸ । ಸಾಕಷ್ಟು ವೈರಾಗ್ಯ
ಬೇಕಿನ್ನು ಆತ್ಮನಲಿ ಪ್ರೀತಿ ಇದೆ ಭಕ್ತಿ
ಏಕಾತ್ಮನಿಷ್ಠೆ । ಬ್ರಹ್ಮಜ್ಞ[3] ॥ 67 ॥

## (ಆಹಾರಾದಿನಿಯಂತ್ರಣ)

ನಿದ್ರೆ ಮೇಣಾಹಾರ । ಹೊದ್ದಿರುವ ವ್ಯವಹಾರ
ಉದ್ಧರಿಸಿ ಯೋಗಶಾಸ್ತ್ರದಲಿ ಪೇಳ್ದಂತೆ
ತಿದ್ದಿಕೊಳ್ಳಬೇಕು । ಬ್ರಹ್ಮಜ್ಞ ॥ 68 ॥

ಚಿತ್ತಚಾಂಚಲ್ಯ ಮೇಣ್ । ಇತ್ತ ದೇಹಾಲಸ್ಯ
ಒತ್ತರದ ನಿದ್ರೆ ಈ ದೋಷವಿದರಿಂದೆ
ಕಿತ್ತುವದು ಕೇಳಿ । ಬ್ರಹ್ಮಜ್ಞ[4] ॥ 69 ॥

1. ಪದ್ಯ 60 ರಿಂದ 63ರ ವಿಷಯಕ್ಕೆ ಗೀ. 6 – 11, 12, 13ನ್ನು ನೋಡಿರಿ.

2. ಪದ್ಯ 64ರ ವಿಷಯಕ್ಕೆ ಸೂ. ಭಾ. 4–1–12 (ಭಾ.ಭಾ. 524)ನ್ನು ನೋಡಿ.

3. ಪದ್ಯ 65 ರಿಂದ 67ರ ಪೂರ ವಿಷಯಗಳಿಗೆ ಗೀ. 6–3, 6–10 (ಭಾ.ಭಾ. 385, 396)ನ್ನು ನೋಡಿರಿ.

4. ಪದ್ಯ 68–69 ರ ವಿಷಯಕ್ಕೆ ಗೀ. ಭಾ. 6–16, 17 (ಭಾ.ಭಾ. 407–409)ನ್ನು ನೋಡಿರಿ.

ಎಲ್ಲ ಈ ಸಲಕರಣೆ ಬಲ್ಲಂತೆ ಕೂಡಿರಲು
ನಿಲ್ಲದಲೆ ಧ್ಯಾನಕಾರಭಿಪ ಕ್ರಮವನ್ನು
ಮೆಲ್ಲನನುಸರಿಗು । ಬ್ರಹ್ಮಜ್ಞ ॥ 70 ॥

### (ಧ್ಯಾನದ ಸ್ವರೂಪ)

ಹಿಂದೆ ಶ್ರವಣದಿ ಮತ್ತೆ । ಚಂದದಿಂ ಮನನದಲಿ
ಬಂದಿರ್ದ ತತ್ತ್ವನಿರ್ಣಯವ ಅನುಭವಕೆ
ಹೊಂದಿಸುವದಿಲ್ಲಿ । ಬ್ರಹ್ಮಜ್ಞ[1] ॥ 71 ॥

ಒಂದೆರಡು ರೀತಿಗಳ । ಇಂದಿಲ್ಲಿ ಹೇಳುವೆನು
ಸಂದಿರ್ದ ಖ್ಯಾತ ಕಾರಿಕೆಯ ಬರಹವಾ-
ನಂದದಲಿ ಕೇಳಿ । ಬ್ರಹ್ಮಜ್ಞ ॥ 72 ॥

### (ಆತ್ಮಸತ್ಯಾನುಬೋಧ)

ಅದ್ವಯನು ತಾ ನಿಜದಿ । ಸದ್ವಯನ ತೆರನಂತೆ
ಇದ್ದನಾ ಸ್ವಪ್ನದಲಿ 'ನಾನು, ಇದು' ಎಂಬ
ಬುದ್ಧಿಯವನಾಗಿ । ಬ್ರಹ್ಮಜ್ಞ ॥ 73 ॥

ಕನಸಿನಾ ಭೇದವದು । ಮನಸಿನಲುಗಾಟವೇ
ಮನಸು ಸಹ ತಾನೆ ಆಗಿದ್ದನೆನ್ನುವೀ
ಅನುಭವವ ನೋಳ್ಕು । ಬ್ರಹ್ಮಜ್ಞ ॥ 74 ॥

ನನಸಿಗೂ ಈ ರೀತಿ । ಅನುನಯದಿ ಹತ್ತಿಸುತ
ನನಸು ಹುಸಿ ಮತ್ತೆ ತಾ ನಿಜನು ಎನುತೀಗ
ಅನುಭವಿಸಬೇಕು ಬ್ರಹ್ಮಜ್ಞ ॥ 75 ॥

ಆತ್ಮನೇ ಸತ್ಯನೀ । ಆತ್ಮನನೆ ಅನುಸರಿಸಿ
ಚಿತ್ತವಿದು ನಿಂತು ಸಂಕಲ್ಪಮಾಡದಿರೆ
ಚಿತ್ತವೇ ಹೋಯ್ತು । ಬ್ರಹ್ಮಜ್ಞ[2] ॥ 76 ॥

ಏಕಗ್ರಮಾನಸದಿ । ತಾ ಕುಳಿತು ಇದನೆಲ್ಲ
ಜೋಕೆಯಲಿ ಮತ್ತೆ ಮತ್ತಿನ್ನು ನಿಲಿಸುವದೆ
ಬೇಕು ಯೋಗಕ್ಕೆ । ಬ್ರಹ್ಮಜ್ಞ ॥ 77 ॥

1. ಪದ್ಯ 71 ರ ವಿಷಯಕ್ಕೆ ಬೃ. 2-4-5 (ಭಾ.ಭಾ. 359)ನ್ನು ನೋಡಿರಿ.
2. ಪದ್ಯ 73 ರಿಂದ 75 ಪೂರ ವಿಷಯಕ್ಕೆ ಮಾಂ. ಕಾ. 4-63 ರಿಂದ 66ನ್ನು ನೋಡಿ.

## (ಧ್ಯಾನದ ಫಲ)

ಕೊನೆಗೆ ಸಹಜದಿ ತಾನು । ತಾನಾಗಿ ನೆಲೆನಿಲಲು
ಮನಕರಗಿ ಬ್ರಹ್ಮ ರೂಪಾಯ್ತು ಯೋಗಕ್ಕೆ
ಕೊನೆಯಾಯ್ತು ಇಲ್ಲಿ । ಬ್ರಹ್ಮಜ್ಞ ॥ 78 ॥

ಇನ್ನೊಂದು ಇರದಾಗೆ । ತನ್ನಲ್ಲಿ ತಾನಾಗೆ
ಇನ್ನೆಲ್ಲ 'ನಾನು, ಇದು' ಎಂಬ ಈ ಭೇದ
ಸನ್ನುತದ ಬ್ರಹ್ಮ । ಬ್ರಹ್ಮಜ್ಞ ॥ 79 ॥

ಇದೆ ತುರಿಯ ಪ್ರತಿಪತ್ತಿ । ಇದು ಜ್ಞಾನನಿಶ್ಚಯವು
ಇದೆ ಪೂರ್ಣಫಲವು ಯೋಗಕ್ಕೆ ಆತ್ಮನೇ
ಇದು ಎಲ್ಲವೀಗ । ಬ್ರಹ್ಮಜ್ಞ ॥ 80 ॥

ಅಕ್ಕಿ ಹೊರಡುವವರೆಗೆ । ಚೊಕ್ಕಟದಿ ಬತ್ತವನು
ಇಕ್ಕೆಲದಿ ಕುಟ್ಟಿ ತೆಗೆವಂತೆ ಧ್ಯಾನವನು
ಅಕ್ಕರದಿ ಮಾಳ್ಕು ಬ್ರಹ್ಮಜ್ಞ ॥ 81 ॥

ಆತ್ಮನಿಶ್ಚಯ ಬರಲು । ಮತ್ತಾಯ್ತು ಇನ್ನಿವಗೆ
ಎತ್ತಣದು ಧ್ಯಾನ ? ಕರ್ತೃವೇ ಇರದಾಗೆ
ಮತ್ತೆಲ್ಲಿ ಕ್ರಿಯೆಯು ? । ಬ್ರಹ್ಮಜ್ಞ ॥ 82 ॥

ಮಿಕ್ಕುಪಾಸನೆಗಳಿಗು । ಚೊಕ್ಕಟದ ಈ ಪರಿಗು
ಬಕ್ಕು ಈ ಭೇದ ಇದು ವಸ್ತುತಂತ್ರಕವು
ಮಿಕ್ಕಿನವು ಬೇರೆ । ಬ್ರಹ್ಮಜ್ಞ[1] ॥ 83 ॥

ಈ ವಿಚಾರವ ಮುಂದೆ । ಸಾವಧಾನದಿ ಪೇಳ್ವೆ
ಭಾವಿಸುವ ವಿವಿಧ ರೀತಿಯ ಉಪಾಸನೆಯ
ಭಾವ ಪೇಳ್ವಾಗ । ಬ್ರಹ್ಮಜ್ಞ ॥ 84 ॥

ಧ್ಯಾನ ಮುಗಿಯುವದಿಲ್ಲಿ । ತಾನಾಗಿ ನಿಂತಲ್ಲಿ
ಏನಿಲ್ಲ ಇವಗೆ ಪರಮಾರ್ಥದೃಷ್ಟಿಯಲಿ
ಜ್ಞಾನಿಯೇ ಇವನು । ಬ್ರಹ್ಮಜ್ಞ ॥ 85 ॥

---

1. ಪದ್ಯ 81 ರಿಂದ 83ರ ಪೂರ ವಿಷಯಕ್ಕೆ ಸೂ. ಭಾ. 4–1–1 (ಭಾ. ಭಾ. 503)ನ್ನು ನೋಡಿರಿ.

ಇಷ್ಟು ಆಗುವವರೆಗೆ । ಕಷ್ಟಪಡಬೇಕಿದಕೆ
ಎಷ್ಟೆಷ್ಟು ಮನವ ನಿಲಿಸುವನೊ ಅಷ್ಟಷ್ಟು
ಇಷ್ಟ ಸಿದ್ಧಿಪುದು । ಬ್ರಹ್ಮಜ್ಞ [1] ॥ 86 ॥

ಇದ ಮಾಳ್ಪ ಸಮಯದಲಿ । ಒದಗುವಾ ವಿಘ್ನಗಳ
ಬದಿಗಿರಿಸಿ ಸಿದ್ಧಿಪಡೆಯಲ್ಕೆ ವಿವರಿಸಿಹ-
ರದರ ಬಗೆ ಪೇಳ್ವೆ । ಬ್ರಹ್ಮಜ್ಞ ॥ 87 ॥

**(ಪ್ರತಿಬಂಧಗಳು)**

ವಿಕ್ಷೇಪ ಲಯ ಮತ್ತೆ । ದುಷ್ಕರದ ಸಕಷಾಯ
ಲಕ್ಷಿಸಲು ರಸದ ಆಸ್ವಾದವೀಗ ಪ್ರತಿ-
ಪಕ್ಷವಿವು ನಾಲ್ಕು । ಬ್ರಹ್ಮಜ್ಞ ॥ 88 ॥

**(ವಿಕ್ಷೇಪ)**

ಆತುಮನ ನೋಡದಲೆ । ಕಾತರಿಸಿ ವಿಷಯಗಳ
ಮಾತನ್ನೆ ನೆನೆದು ಹೊರಬರಲು ಮನವಿದರ
ರೀತಿ ವಿಕ್ಷೇಪ । ಬ್ರಹ್ಮಜ್ಞ ॥ 89 ॥

ಇದಕೆ ವಿರತಿಯೆ ಮದ್ದು । ಮದಮೋಹದಿಂದೆದ್ದು
ಒದಗಿಸುತ ದೋಷದೃಷ್ಟಿಯನು ವಿಷಯಸುಖ
ಒದರಿ ಬಿಸುಟುವದು । ಬ್ರಹ್ಮಜ್ಞ ॥ 90 ॥

ಅಜನಾತ್ಮ ನಿಜವಾಗಿ । ತ್ರಿಜಗತ್ತು ಹುಟ್ಟಿಲ್ಲ
ಭುಜಿಸುತಿಹ ವಿಷಯವಿಲ್ಲೆಂಬ ನಿಶ್ಚಯದ
ವಿಜಯ ವೈರಾಗ್ಯ । ಬ್ರಹ್ಮಜ್ಞ [2] ॥ 91 ॥

**(ಲಯ)**

ಶುದ್ಧಧ್ಯಾನಕೆ ತೊಡಗೆ । ಮಧ್ಯದಲಿ ಮನದಣಿದು
ನಿದ್ದೆಯಲಿ ಮುಳುಗೆ ಇದು ಮತ್ತೆ ಲಯವೆಂದು
ಬುದ್ಧರಭಿಮತವು । ಬ್ರಹ್ಮಜ್ಞ ॥ 92 ॥

---

1. ಈ ವಿಷಯಕ್ಕೆ ಮಾಂ. ಕಾ. 3–40 (ಭಾ.ಭಾ. 200)ನ್ನು ನೋಡಿರಿ.
2. ಪದ್ಯ 89 ರಿಂದ 91ರ ಪೂರ ವಿಷಯಕ್ಕೆ ಮಾಂ. ಕಾ. 3–43ನ್ನು ನೋಡಿರಿ.

ಆಹಾರನಿದ್ರೆಗಳ । ಆ ಹದವ ತಾ ತಿಳಿದು
ದೇಹವನು ಅದಕೆ ಹೊಂದಿಸಲು ಈ ಲಯದ
ಸೋಹೆ ಅಡುವದು । ಬ್ರಹ್ಮಜ್ಞ ॥ 93 ॥

**(ಕಷಾಯ)**

ನಿದ್ದೆಗೂ ಹೋಗದಲೆ । ಶುದ್ಧ ಧ್ಯಾನದೊಳಿರದೆ
ಮಧ್ಯದಲಿ ಮನವು ನಿಂತಿರಲು ಹೊರಬರುವ
ಸಿದ್ಧತೆಯಲಿಹುದು । ಬ್ರಹ್ಮಜ್ಞ ॥ 94 ॥

ಲಕ್ಷಿಸಿ ಕಷಾಯವಿದೆ । ವಿಕ್ಷೇಪ ಬೀಜವಿದೆ
ವೀಕ್ಷಿಸುತ ಮತ್ತೆ ಎಬ್ಬಿಸಿ ವಿವೇಕಕ್ಕೆ
ಲಕ್ಷ್ಯಗೊಡಬೇಕು । ಬ್ರಹ್ಮಜ್ಞ ॥ 95 ॥

ಹೀಗೆ ಮಾಡಲು ಮನವು । ಜಾಗರೂಕತೆ ಹೊಂದಿ
ಸಾಗುವದು ಆತ್ಮನೆಡೆ ಈ ಕಷಾಯದಾ
ರೋಗ ಹೋಗುವದು । ಬ್ರಹ್ಮಜ್ಞ[1] ॥ 96 ॥

**(ರಸಾಸ್ವಾದ)**

ಹತ್ತಿರೆ ವಿವೇಕಕ್ಕೆ । ಮತ್ತಹುದು ಆನಂದ
ಚಿತ್ತದಲಿ ಇದಕೆ ಮರುಳಾಗಿ ತಾ ನಿಲಲು
ತತ್ತ್ವಸಿಗದಿವಗೆ । ಬ್ರಹ್ಮಜ್ಞ ॥ 97 ॥

ಏಕಾಗ್ರ ಸುವಿವೇಕ । ಲೋಕೋತ್ತರಾನಂದ
ಜೋಕೆಯಲಿ ತಾನು ನೆಲೆನಿಲುವ ಶುಭಚಿಹ್ನ-
ದಾಕಾರವೃತ್ತಿ । ಬ್ರಹ್ಮಜ್ಞ ॥ 98 ॥

ಇದೆ ರಸದ ಆಸ್ವಾದ । ಇದಕೆ ಮರುಳಾಗದಲೆ
ಇದು ವೃತ್ತಿ ಮತ್ತೆ ನಾನಿದಕೆ ಸಾಕ್ಷಿಯೆನೆ
ಇದು ತೊಲಗುತಿಹುದು । ಬ್ರಹ್ಮಜ್ಞ ॥ 99 ॥

ಅನಿಸುತಿಹ ಆನಂದ । ಮನಸಿನಾ ಧರ್ಮವದು
ಅನಿಸಿಕೆಗೆ ಸಾಕ್ಷಿ ತಾ ಸತ್ಯ ಇದು ಮಿಥ್ಯ
ಎನುವದೇ ಮದ್ದು । ಬ್ರಹ್ಮಜ್ಞ[2] ॥ 100 ॥

---

1. ಪದ್ಯ 92 ರಿಂದ 96ರ ವಿಷಯಕ್ಕೆ ಮಾಂ. ಕಾ. 3–44ನ್ನು ನೋಡಿರಿ.
2. ಪದ್ಯ 97 ರಿಂದ 100ರವರೆಗಿನ ವಿಷಯಕ್ಕೆ ಮಾಂ. ಕಾ. 3–45 (ಭಾ. ಭಾ. 207)ನ್ನು ನೋಡಿರಿ.

ಈ ವಿಘ್ನಗಳು ತೊಲಗೆ । ಸಾವಕಾಶದಿ ಮನವು
ಆವುದನು ಮತ್ತೆ ಗ್ರಹಿಸದೆ ತಾನಾದ
ಭಾವಕ್ಕೆ ಬಕ್ಕು । ಬ್ರಹ್ಮಜ್ಞ ॥ 101 ॥

ಹಾಗೆ ಹೊರಟಿಹ ಮನವ । ಯೋಗದಿಂ ಬಿಡಿಸದಲೆ[1]
ಹಾಗೆಯೇ ಬಿಟ್ಟು ಬಿಡಲಾಗ ತ್ವರಿತದಲಿ
ಆಗುವದು ಶಾಂತಿ । ಬ್ರಹ್ಮಜ್ಞ ॥ 102 ॥

ತಿಳಿಯಲ್ಕೆ ಬೇರಿಲ್ಲ । ತಿಳಿವವನು ಮೊದಲಿಲ್ಲ
ಉಳಿದಿಹುದು ತಾನೆ ಎಂಬ ದೃಢನಿಶ್ಚಯದ
ನಿಲುವು ತಾ ಬಕ್ಕು । ಬ್ರಹ್ಮಜ್ಞ[2] ॥ 103 ॥

ಗೀತೆಯಲಿ ಈ ಎಲ್ಲ । ರೀತಿ ಎರಡನು ಮಾಡಿ
ಪ್ರೀತಿಯಿಂ ತಿಳಿಸಿಕೊಟ್ಟಿಹುದು ಅಭ್ಯಾಸ
ಖ್ಯಾತ ವೈರಾಗ್ಯ । ಬ್ರಹ್ಮಜ್ಞ ॥ 104 ॥

ಹೊರಗೆ ಹೋಗಿಹ ಮನವ । ತರುವುದೆಳೆದೆಳೆದೊಳಗೆ
ಬರಲದನು ಆತ್ಮನೊಳು ಬೆರೆವ ಪರಿಯಂತ
ಭರದಿ ಮುಳುಗಿಪುದು । ಬ್ರಹ್ಮಜ್ಞ[3] ॥ 105 ॥

ಮೊದಲಿನದು ವೈರಾಗ್ಯ । ಅದರ ಮುಂದಭ್ಯಾಸ
ಇದು ಎಲ್ಲ ಸೇರಿ ಅಧ್ಯಾತ್ಮಯೋಗ ತಾ-
ನಿದು ಕಾಠಕೋಕ್ತಿ[4]। ಬ್ರಹ್ಮಜ್ಞ ॥ 106 ॥

## (ಅಧ್ಯಾತ್ಮಯೋಗ)

ಅಧ್ಯತ್ಮಯೋಗದಾ । ಶುದ್ಧ ಸಾರಾಂಶವನು
ಉದ್ಧರಿಸಿ ಸೂತ್ರಭಾಷ್ಯದಲಿ ಬರೆದಿರುವ
ಪದ್ಧತಿಯ ಪೇಳ್ವೆ । ಬ್ರಹ್ಮಜ್ಞ ॥ 107 ॥

---

1. ಈ ವಿಷಯಕ್ಕೆ ಮಾಂ. ಕಾ. 3–44ರ 'ಸಮಪ್ರಾಪ್ತಂ ನ ಚಾಲಯೇತ್' ಎಂಬುದರ ಭಾಷ್ಯವನ್ನು (ಭಾ.ಭಾ. 206)ನ್ನು ನೋಡಿರಿ.

2. ಈ ವಿಷಯಕ್ಕೆ ಮಾಂ. ಕಾ. 3–46, 47 (ಭಾ.ಭಾ. 208, 209)ನ್ನು ನೋಡಿರಿ.

3. ಪದ್ಯ 104ಕ್ಕೆ ಗೀ. 6–35 (ಭಾ.ಭಾ. 435) 105ಕ್ಕೆ ಗೀ. 6–26 (ಭಾ.ಭಾ. 422)ನ್ನು ನೋಡಿರಿ.

4. ಈ ವಿಷಯಕ್ಕೆ ಕಾ. 1–2–12 (ಭಾ.ಭಾ. 63)ನ್ನು ನೋಡಿರಿ.

ಮನದಲಿಂದ್ರಿಯಗಳನು । ಮನವನ್ನು ಬುದ್ಧಿಯಲಿ
ಘನ ಬುದ್ಧಿ ಲಯಿಸಿ ನನ್ನಲ್ಲಿ ಈ ನಾನು-
ವನು ಸಾಕ್ಷಿಯಲ್ಲಿ । ಬ್ರಹ್ಮಜ್ಞ ॥ 108 ॥

**(ವಿಷಯಗಳಿಗೆ ಇಂದ್ರಿಯವೇ ಆತ್ಮ)**

ಹೊರಜಗವು ಎನಲೈದು । ಪರಿಯಾದ ವಿಷಯಗಳೆ
ವರ ಶಬ್ದರೂಪರಸಗಂಧಸ್ಪರ್ಶಗಳು
ಹೊರಜಗವು ಕೇಳಿ । ಬ್ರಹ್ಮಜ್ಞ ॥ 109 ॥

ಇಂದ್ರಿಯಗಳಿಲ್ಲದಿರೆ । ಮುಂದೆ ಇವುಗಳೆ ಇಲ್ಲ
ಇಂದ್ರಿಯವೆ ಇವುಗಳಾಧಾರ ಹೊರಜಗಕೆ
ಇಂದ್ರಿಯವೆ ಆತ್ಮ । ಬ್ರಹ್ಮಜ್ಞ ॥ 110 ॥

ಹೊರ ವಿಷಯಗಳನೆಲ್ಲ । ಭರದಿ ವ್ಯಾಪಿಸುತಿಹವು
ಇರುತಿರಲು ಮತ್ತೆ ಇಂದ್ರಿಯವ ವಿಷಯಗಳು
ಅರಿಯದಾಗಿಹವು । ಬ್ರಹ್ಮಜ್ಞ ॥ 111 ॥

ಹೀಗೆ ಇಂದ್ರಿಯಗಳೇ । ಆಗಿಹವು ಹೊರಜಗಕೆ
ಈಗಲಿವು ಆತ್ಮನಿಶ್ಚಯವಿದೇ ಲಯವು
ಯೋಗದಲಿ ಕೇಳಿ । ಬ್ರಹ್ಮಜ್ಞ ॥ 112 ॥

ವಿಷಯಗಳನಿಂದ್ರಿಯದಿ । ಬೆಸಗೊಂಡ ಈ ಕ್ರಮದಿ
ಎಸೆದೀಗ ಲಯವ ಮಾಡಲ್ಕೆ ತೊಲಗುವದು
ವಿಷಯಸುಖದಾಹ । ಬ್ರಹ್ಮಜ್ಞ ॥ 113 ॥

**(ಇಂದ್ರಿಯಗಳಿಗೆ ಮನಸ್ಸೇ ಆತ್ಮ)**

ಮನವೆ ಇಂದ್ರಿಯಕಾತ್ಮ । ಮನವು ವ್ಯಾಪಕವಹುದು
ಮನವಿರದೆ ಇಲ್ಲ ಇಂದ್ರಿಯಕೆ ಆಸ್ತಿತ್ವ
ಮನವಿಲ್ಲಿ ತತ್ತ್ವ । ಬ್ರಹ್ಮಜ್ಞ ॥ 114 ॥

ನೆನೆದು ಯೋಚಿಸಲಾಗ । ಮನಕುಂಟು ಸ್ವಾತಂತ್ರ
ಬಿನುಗಿನೀ ಕರಣನಿಕರಕ್ಕೆ ಮನವಿರದೆ
ಅನುವಿಲ್ಲವೀಗ । ಬ್ರಹ್ಮಜ್ಞ ॥ 115 ॥

ಹೀಗೆ ನಿಶ್ಚಯಮಾಡಿ । ಬೇಗ ಜಗವಿಂದ್ರಿಯದ
ಭಾಗಗಳ ಲಯಿಸಿ ಮನಮಾತ್ರವೀಗ ತಾ-
ನಾಗಿ ನಿಲಬೇಕು । ಬ್ರಹ್ಮಜ್ಞ ॥ 116 ॥

### (ಮನಸ್ಸಿಗೆ ಬುದ್ಧಿಯೇ ಆತ್ಮ)

ಇದರಂತೆ ಬುದ್ಧಿಯಲಿ । ಒದಗಿದೀ ಮನವನ್ನು
ಮುದದಿಂದೆ ಲಯಿಸಿ ಈ ಬುದ್ಧಿಮಾತ್ರವಿಹ
ಹದವರಿಯಬೇಕು । ಬ್ರಹ್ಮಜ್ಞ ॥ 117 ॥

### (ಬುದ್ಧಿಗೆ ಅಹಂಕಾರವೇ ಅತ್ಮ)

ನಾನು ಎನುವದೆ ಬುದ್ಧಿ । ಮೇಣು ಮನಸಿಗು ಆತ್ಮ
ನಾನಿಲ್ಲದಿರಲು ಏನಿಲ್ಲ ನಾನು ಬರೆ
ನಾನಾತ್ವ ಬಂತು । ಬ್ರಹ್ಮಜ್ಞ ॥ 118 ॥

### (ಅಹಂಕಾರಕ್ಕೆ ತಾನೇ ಆತ್ಮ )

ನಾನೆಂಬುದೇ ಮಿಕ್ಕ । ನಾನಾತ್ವಕಾತುಮನು
ನಾನೆಂಬ ಭಾವಕಾಧಾರನಾಗಿರ್ದ
ತಾನುವನ್ನರಿಗು । ಬ್ರಹ್ಮಜ್ಞ ॥ 119 ॥

ನಾನು ಬಂದುದು ಮತ್ತೆ । ನಾನು ತೊಲಗಿತೆನುತ್ತೆ
ತಾನಾಗಿ ತಾನೆ ತಿಳಿಯುವೀ ಅನುಭವವ
ಜಾನಿಸಲು ಬೇಕು । ಬ್ರಹ್ಮಜ್ಞ ॥ 120 ॥

ನಾನಿನಾ ತತ್ತ್ವವಿದು । ತಾನೆ ತಾನಾಗಿಹುದು
ಮಾನಿಸಲು ಮೇಣು ಇವಗಾತ್ಮನಿನ್ನಿಲ್ಲ
ತಾನೆ ತಾನಿವನು । ಬ್ರಹ್ಮಜ್ಞ ॥ 121 ॥

ಹೀಗೆ ನಿಶ್ಚಯಿಸಿದೊಡೆ । ಆಗಲೇ ನಾನು ತಾ
ಆಗಿಹುದು ಲಯವು ಆತ್ಮನಲಿ ಇದೆ ಜ್ಞಾನ
ಈಗಳಿದೆ ಮುಕ್ತಿ । ಬ್ರಹ್ಮಜ್ಞ ॥ 122 ॥

ಅಲೆ ಎಂಬುದೆಲ್ಲವೂ । ಜಲವೆ ಆಗಿಹುದೆನಲು
ಅಲೆಯನ್ನು ಜಲದಿ ಲಯಿಸಿರುವ ತೆರದಂತೆ
ತಿಳಿಯಬೇಕಿದನು । ಬ್ರಹ್ಮಜ್ಞ[1] ॥ 123 ॥

---

1. ಪದ್ಯ 107 ರಿಂದ 123ರವರೆಗಿನ ಪೂರ ಪದ್ಯಗಳ ವಿಷಯಕ್ಕೆ ಕಾ. 1–3–13 (ಭಾ. ಭಾ. 102, 103) ಮತ್ತು ಸೂ. ಭಾ. 1–4–3 (ಭಾ. ಭಾ. 337)ನ್ನು ನೋಡಿರಿ.

## (ಆತ್ಮನನ್ನು ತಿಳಿಯುವದರ ಅರ್ಥ)

ತಾನನ್ನು ತಿಳಿವುದಕೆ । ಏನಿಲ್ಲ ಬೇರಿನ್ನು
ತಾನೀಗ ಎಲ್ಲ ತಿಳಿವವನು ಇವನನ್ನು
ಏನು ತಿಳಿಯುವದು ? ಬ್ರಹ್ಮಜ್ಞ ॥ 124 ॥
ಆತುಮನ ತಿಳಿಯುವೆನು । ಮಾತಿದನು ಹೇಳುವನು
ಆತನೇ ಹುಚ್ಚ ಆತುಮನು ವಿಷಯನೇ
ಏತಕೂ ಅಲ್ಲ । ಬ್ರಹ್ಮಜ್ಞ[1] ॥ 125 ॥
ವೇದಾಂತವಾಕ್ಯದಾ । ಬೋಧೆಯಿಂದಾತುಮನ
ಸಾದರದ ಜ್ಞಾನದನುಭವವು ಬಹುದೆನುವ
ವಾದ ಸರಿಯಲ್ಲ ಬ್ರಹ್ಮಜ್ಞ ॥ 126 ॥
ಅನುಭವದ ರೂಪನೇ । ಅನವರತವಾತುಮನು
ಮನದಲ್ಲಿ ಇದನು ಚಿಂತಿಸಲು ಮನವದನು
ಅನುಸರಿಸುತಿಹುದು । ಬ್ರಹ್ಮಜ್ಞ ॥ 127 ॥
ಮನವು ಇದು ಆತುಮನ । ಅನುಭವದ ತೆರನಂತೆ
ಅನುಸರಿಸಿ ನಿಲಲು ಆಭಾಸವೃತ್ತಿಯದು
ಮನದೊಳಗೆ ಬಹುದು । ಬ್ರಹ್ಮಜ್ಞ ॥ 128 ॥
ಹೀಗೆ ತೋರಿದ ಬಗೆಯ । ಈಗಲಿದು ವಿಜ್ಞಾನ
ಆಗಿಹುದು ಎಂದು ಪೇಳಲ್ಕೆ ಆತುಮನು
ಆಗಿಲ್ಲ ವಿಷಯ । ಬ್ರಹ್ಮಜ್ಞ ॥ 129 ॥
ಗಾಜನ್ನು ದೀಪಕ್ಕೆ । ಯೋಜಿಸಲು ದೀಪವನು
ಗಾಜದುವೆ ತಾನು ಬೆಳಗಿಲ್ಲ ದೀಪವೇ
ಗಾಜ ಬೆಳಗಿಹುದು। ಬ್ರಹ್ಮಜ್ಞ ॥ 130 ॥
ವೇದಾಂತವಾಕ್ಯವನು । ಸಾದರದಿ ಕೇಳುತಿರೆ
ಮೋದದಲಿ ಆತ್ಮನನುಸರಿಸಿ ಬುದ್ಧಿಯಿದು
ಆದುದವನಂತೆ । ಬ್ರಹ್ಮಜ್ಞ ॥ 131 ॥
ಇದರಿಂದ ಆತ್ಮನಿಗೆ । ಒದಗಿಲ್ಲ ವಿಷಯತ್ವ
ಇದನು ಸಹ ಬೆಳಗಿ ಬೇರಾಗಿ ತಾನಿರುವ
ಪದವೆ ಆತುಮನು । ಬ್ರಹ್ಮಜ್ಞ[2] ॥ 132 ॥

---

1. ಪದ್ಯ 124, 125ರ ವಿಷಯಕ್ಕೆ ಬೃ. 2-4-14 (ಭಾ.ಭಾ. 378)ನ್ನು ನೋಡಿರಿ.
2. ಪದ್ಯ 126 ರಿಂದ 132ರ ಪೂರ ವಿಷಯಕ್ಕೆ ಶಾ. ವೇ. ಸಾರ ಪುಟ 91, 92ನ್ನು ನೋಡಿರಿ.

ಸಾಧಕರು ಮತ್ತಿನ್ನು । ಬಾಧೆಪಡಬಾರದೀ
ಬೋಧೆಯಲಿ ವಿಷಯವಾಗಿಸಲು ಆತ್ಮನನ
ಸಾಧುವೀ ಯತ್ನ । ಬ್ರಹ್ಮಜ್ಞ ॥ 133 ॥

ನಾನೆನುವವರೆಗಿರುವ । ತಾನಲ್ಲದೆಲ್ಲವನು
ಏನಿಲ್ಲ ಬರಿದೆ ಹುಸಿತೋರ್ಕೆ ಎಂದೆನಲು
ತಾನಾಗಿ ನಿಲುವ । ಬ್ರಹ್ಮಜ್ಞ ॥ 134 ॥

ಆತ್ಮನಲ್ಲದುದರಲಿ । ಆತ್ಮಬುದ್ಧಿಯು ತೊಲಗೆ
ಆತ್ಮನೇ ತಾನು, ತನ್ನನ್ನು ತಿಳಿಯುವಾ
ಮಾತು ಎಲ್ಲಿಯದು ? ಬ್ರಹ್ಮಜ್ಞ ॥ 135 ॥

ಗೀತೆಗಿಹ ಭಾಷ್ಯದಲಿ । ಮಾತಿದನು ಬರೆದಿಹರು
ಪ್ರೀತಿಯಲಿ ನೋಡಿ ಪರಜ್ಞಾನನಿಷ್ಠೆಯಾ
ಕೌತುಕದ ಬೋಧ । ಬ್ರಹ್ಮಜ್ಞ ॥ 136 ॥

ಕಾಣುವೆನು ಆತ್ಮನನು । ನಾನು ಅನುಭವಿಸುವೆನು
ಆನಂದ ಬಹಳವೆಂದೆನುವ ಗ್ರಹಿಕೆಗಳ
ತಾನು ಬಿಡಬೇಕು । ಬ್ರಹ್ಮಜ್ಞ[1] ॥ 137 ॥

ನಿತ್ಯದಲಿ ತೋರಿಕೆಯ । ಅತ್ತ ಸಂಸುತ ತಾನೆ
ಸತ್ಯಪದನೆಂಬ ಮಾತನ್ನೆ ಏಕಾಗ್ರ
ಚಿತ್ತದಲಿ ನೋಳ್ಕು । ಬ್ರಹ್ಮಜ್ಞ ॥ 138 ॥

ಆತ್ಮನಾಗುವದಲ್ಲ । ಆತ್ಮನೇ ತಾನಿಹನು
ಆತ್ಮನಲಿ ಬಂದ ಕಲ್ಪಿತವ ಕಳೆಯುವದೆ
ಆತ್ಮನಾ ಜ್ಞಾನ । ಬ್ರಹ್ಮಜ್ಞ ॥ 139 ॥

ಇದ ನಿಧಿಧ್ಯಾಸದಲಿ । ಮುದದಿ ನೆನಪಿಡಬೇಕು
ಹದವಿದನು ಮತ್ತೆ ಅರಿಯದಲೆ ಬಳಲಿದರೆ
ಇದು ದಕ್ಕದಿಲ್ಲಿ । ಬ್ರಹ್ಮಜ್ಞ[2] ॥ 140 ॥

---

1. ಈ ವಿಷಯಕ್ಕೆ ಬೃ. 4–4–6 (ಭಾ.ಭಾ. 273)ನ್ನು ನೋಡಿರಿ.

1. ಪದ್ಯ 135 ರಿಂದ 140ರ ಪೂರ ವಿಷಯಕ್ಕೆ ಗೀ. 18–50 (ಭಾ. ಭಾ. 1097ರಲ್ಲಿ) 'ಅತಶ್ಚ ಆತ್ಮವಿಷಯಂ ಜ್ಞಾನಂ ನ ವಿಧಾತವ್ಯಮ್' ಎಂಬ ಭಾಗವನ್ನು ನೋಡಿರಿ.

## ನಿದಿಧ್ಯಾಸನದ ಬಗೆ

ನಾನು ಎಂಬುವವರೆಗೆ । ತಾನಲ್ಲವಿದು ಎಂದು
ಮಾನಸದಿ ಏಕನಿಷ್ಠೆಯಲಿ ಚಿಂತಿಪುದೆ
ಈ ನಿಧಿಧ್ಯಾಸ । ಬ್ರಹ್ಮಜ್ಞ ॥ 141 ॥

ಇದು ಎಲ್ಲವೀ ತಾನೆ । ಇದು ಎಂಬುದೇನಿಲ್ಲ
ಇದು, ತಾನು ಎಂಬ ಈ ಭೇದನಿರಸನದ
ಹದ ನಿದಿಧ್ಯಾಸ । ಬ್ರಹ್ಮಜ್ಞ ॥ 142 ॥

ಮಾನಸದಿ ನಾನಾತ್ವ । ಕಾಣುತಿರುವಾಗಲೇ
ನಾನಾತ್ವವಿಲ್ಲ ಅದ್ವಯನೆ ತಾನು ಎನೆ
ಈ ನಿದಿಧ್ಯಾಸ । ಬ್ರಹ್ಮಜ್ಞ ॥ 143 ॥

ಬದಲಾದ ದೃಷ್ಟಿಯಿದು । ಇದು ಎಲ್ಲ ತೋರುತಿರೆ
ಇದು ಈಗ ಆತ್ಮ ಜಗವಲ್ಲ ಎಂಬ ದೃಢ
ವಿದೆ ನಿದಿಧ್ಯಾಸ । ಬ್ರಹ್ಮಜ್ಞ ॥ 144 ॥

ಕರಣಕ್ಕೆ ಜಗ ತೋರ್ಕು । ಅರಿಯುವದು ಮನವಿದನು
ಕರಣವೂ ಇಲ್ಲ ಮನವಿಲ್ಲ ಬರಿತಾನೆ
ಇತಿ ನಿದಿಧ್ಯಾಸ । ಬ್ರಹ್ಮಜ್ಞ ॥ 145 ॥

ಅರಿತಿಲ್ಲ ಮರೆತಿಲ್ಲ । ಬೆರೆತಿಲ್ಲ ಗುರುತಿಲ್ಲ
ಅರಿಯದಲೆ ಇಲ್ಲ ಬರಿತಾನು ಎಂದರಿಯೆ
ವರ ನಿದಿಧ್ಯಾಸ । ಬ್ರಹ್ಮಜ್ಞ ॥ 146 ॥

ತಾನುಂಟು ಏನಿಲ್ಲ । ಏನಿಲ್ಲ ತಾನೆ ಇಹ
ಏನಿಲ್ಲ ಉಂಟು ಇಲ್ಲೆಂಬ ಸುಮ್ಮಾನ-
ವೀ ನಿದಿಧ್ಯಾಸ । ಬ್ರಹ್ಮಜ್ಞ ॥ 147 ॥

ಇಂತು ಅನುಭವದೊಳಗೆ । ನಿಂತರುವದೇ ಶಾಂತಿ
ಅಂತಿದಕೆ ತುರಿಯನೆಂದಿಹರು ಬಲ್ಲವರು
ಇಂತಿದನು ತಿಳಿಗು । ಬ್ರಹ್ಮಜ್ಞ ॥ 148 ॥

ಸಹಜ ಜ್ಞಾನದ ನಿಷ್ಠೆ । ಬಹುದು ಈ ಸಾಧನೆಗೆ
ಇಹದಲ್ಲಿ ಪೂರ್ಣ ಪ್ರತಿಬಂಧ ಕ್ಷಯಿಸಲ್ಕೆ
ಅಹುದು ಸನ್ಮುಕ್ತಿ । ಬ್ರಹ್ಮಜ್ಞ ॥ 149 ॥

ಜ್ಞಾನನಿಷ್ಠೆಯ ಕುರಿತು । ಏನು ಹೇಳಿಹರೆನುವ
ಭಾನುವನು ಸ್ಮರಿಸಿ ಆರುಹಲ್ಕೆ ಯತ್ನಿಸುವೆ
ಮಾನಿಸುತ ಭಾಷ್ಯ । ಬ್ರಹ್ಮಜ್ಞ ॥ 150 ॥

ಮುಂದಿನಧ್ಯಾಯದಲಿ । ಬಂದಿರುವ ವ್ಯತ್ಯಾಸ
ಬಂಧುರದ ತುರಿಯ ನಿಷ್ಠೆಗಳ ಬಗೆಯಲ್ಲಿ
ಅಂದದಲಿ ತೋರ್ಪೆ । ಬ್ರಹ್ಮಜ್ಞ ॥ 151 ॥

# ಹತ್ತನೆಯ ಅಧ್ಯಾಯ

## ಜ್ಞಾನನಿಷ್ಠೆ

ತುರಿಯವನು ಪಡೆಯಲ್ಕೆ । ವರ ವಿವೇಕವೆ ಬೇಕು
ನೆರೆ ಕೇಳಿ ಮಥಿಸಿ ಲಕ್ಷಿಸಿದ ನಿಶ್ಚಯದ
ಪರಮಪದ ತುರಿಯ ಬ್ರಹ್ಮಜ್ಞ ॥ 1 ॥

ನಿತ್ಯನಿರವಸ್ಥ ತಾ । ಸತ್ಯವಸ್ತುವು ಎಂಬ
ಅತ್ಯಂತ ಸಹಜದಿರುವಿಕೆಯೆ ತುರಿಯಪದ
ವ್ಯತ್ಯಯವೆ ಇಲ್ಲ ಬ್ರಹ್ಮಜ್ಞ ॥ 2 ॥

**(ತಪ್ಪುಗ್ರಹಿಕೆಗಳು)**

ಈ ಗುಟ್ಟನರಿಯದಲೆ । ಬೇಗ ತುರಿಯದವಸ್ಥೆ
ಆಗಿಹುದು ಮತ್ತೆ ನಾಲ್ಕನೆಯದೆಂಬ ತಿಳಿ-
ವೀಗ ಬಂದಿಹುದು । ಬ್ರಹ್ಮಜ್ಞ ॥ 3 ॥

ಕನಸು ನನಸುಗಳಲ್ಲ । ತನಿನಿದ್ರೆಯಲ್ಲವೆನೆ
ಮನದೊಳಗೆ ಮತ್ತೆ ಸುಸಮಾಧಿ ಸ್ಥಿತಿಯೆಂದು
ಗೊಣಗುವಂತಾಯ್ತು ಬ್ರಹ್ಮಜ್ಞ ॥ 4 ॥

ನಿರ್ವಿಕಲ್ಪಸಮಾಧಿ । ಉರ್ವಿಯೊಳು ಬರಬೇಕು
ಸರ್ವರಿಗು ಇದನು ಪಡೆಯುವದೆ ತುರಿಯಾಪ್ತಿ
ನಿರ್ವಹಿಸಲಾಯ್ತು ಬ್ರಹ್ಮಜ್ಞ ॥ 5 ॥

ಕೆಲರು ಇದು ಬಂದರೂ । ಕೆಲಸವಾಗದು ಮತ್ತೆ
ತಿಳಿವಳಿಕೆ ಬೇಕು ಬರಿಸಮಾಧಿಯು ವ್ಯರ್ಥ
ತಿಳಿಸುವರು ಹೀಗೆ ಬ್ರಹ್ಮಜ್ಞ ॥ 6 ॥

ಪಂಗಡವು ಎರಡಾಗಿ । ವಿಂಗಡಕೆ ನೆಲೆಯಾಗಿ
ಹಂಗಿಸುತಲೊಬ್ಬರನು ಬೋಧೆಯೆ ವಿ-
ಸಂಗತದಿ ಬಂತು ಬ್ರಹ್ಮಜ್ಞ ॥ 7 ॥

ಕೆಲವೊಂದು ಗ್ರಂಥದಲಿ । ತಿಳಿಸಿ ಒಮ್ಮೆ ಸಮಾಧಿ
ಫಲಿಸಿದರು ಮತ್ತೆ ಬೇಡೆಂದು ಆಗಲೇ
ಬಲುವಿಧದಿ ಬರೆದು ಬ್ರಹ್ಮಜ್ಞ[1] ॥ 8 ॥

---

1. ಉದಾಹರಣೆಗೆ ಪಂಚದಶೀ 1–51 ರಿಂದ 61ರವರೆಗೆ ಸಮಾಧಿಯನ್ನು ಹೊಗಳಿ ಪುನಃ ಅದೇ ಗ್ರಂಥದಲ್ಲಿ 7–185 ರಿಂದ 189ರವರೆಗೆ ಸಮಾಧಿಯನ್ನು ಖಂಡಿಸಿದೆ.

ಏಳು ಭೂಮಿಕೆಗಳನು । ಮೇಳೈಸಿ ಜ್ಞಾನಕ್ಕೆ
ಹೇಳಿದರು ಯೋಗಪ್ರಕ್ರಿಯೆ ಸಮಾಧಿಗಳ
ತಾಳಹಾಕಿದರು ಬ್ರಹ್ಮಜ್ಞ[1] ॥ 9 ॥

ಜ್ಞಾನಾಭಿಮಾನಿಗಳು । ಈ ನಿಖಿಳ ಶಬ್ದಗಳ
ತಾಣಕ್ಕೆ ಜ್ಞಾನದರ್ಥವನೆ ಹಚ್ಚಿ ಸಂ-
ಧಾನ ಮಾಡಿದರು ಬ್ರಹ್ಮಜ್ಞ ॥ 10 ॥

ಕೆಲರು ತುರ್ಯಾತೀತ । ಬಳಸಿದರವಸ್ಥೆಯನು
ತಿಳಿಸಿದರು ಯೋಗಭೂಮಿಕೆಗಳಿಗೆ ಬೆರೆಸಿ
ಬಲು ಮೋಜಿನಿಂದ ಬ್ರಹ್ಮಜ್ಞ ॥ 11 ॥

ಧಾರಣವು ಧ್ಯಾನ ಮೇಣ್ । ಚಾರುತರ ಸುಸಮಾಧಿ
ಬೇರಿಲ್ಲ ಶ್ರವಣಮನನಾದಿಗಳೆ ಎಂದು
ಸಾರಿದರು ಕೆಲರು ಬ್ರಹ್ಮಜ್ಞ[2] ॥ 12 ॥

ಆತ್ಮದರ್ಶನವೆನಲು । ಮತ್ತೆ ಸಾಕ್ಷಾತ್ಕಾರ
ಹತ್ತಿಸುತ ಉಕ್ತ ಯೋಗದಾ ಅರ್ಥಗಳ
ಬಿತ್ತಿದರು ಇಲ್ಲಿ ಬ್ರಹ್ಮಜ್ಞ ॥ 13 ॥

ಜ್ಞಾನನಿಷ್ಠೆಯ ಬಗೆಗೆ । ಮಾನವೇ ಬೇರಾಯ್ತು
ಏನೆಲ್ಲ ಗ್ರಹಿಕೆ ಸೇರಿದವು ವೇದಾಂತ
ಗ್ಲಾನಿಯೇ ಆಯ್ತು ಬ್ರಹ್ಮಜ್ಞ ॥ 14 ॥

ಎಳೆದೆಳೆದು ಶಬ್ದಕ್ಕೆ । ಬಳಸಿದರು ಅರ್ಥಗಳ
ಕಳವಳಿಸಿ ಮತಿಯು ಜಿಜ್ಞಾಸು ಜನರಿಂಗೆ
ಬಲು ಗೊಂದಲಾಯ್ತು ಬ್ರಹ್ಮಜ್ಞ ॥ 15 ॥

ಹೀಗೆ ಬಗೆಬಗೆ ಮತದ । ಆಗರವೆ ಆಯ್ತೀಗ
ಯೋಗಾದಿ ಶಬ್ದಗಳ ಬಗೆಗೆ ಬಡಿದಾಟ
ಸಾಗಿ ಬಲವಾಯ್ತು ಬ್ರಹ್ಮಜ್ಞ ॥ 16 ॥

ಈಗಿದಕೆ ಪರಿಹಾರ । ಬೇಗ ಭಾಷ್ಯದ ಪಠಣ
ಆಗಿಹುದು ಶಾಂತಿದಾಯಕವು ಜಿಜ್ಞಾಸು
ರೋಗಹಾರಕವು ಬ್ರಹ್ಮಜ್ಞ ॥ 17 ॥

---

1. ವಾಸಿಷ್ಠ ರಾಮಾಯಣವೇ ಮುಂತಾದ ಅನೇಕ ಗ್ರಂಥಗಳಲ್ಲಿ ಸಪ್ತಭೂಮಿಕೆಗಳನ್ನು ವರ್ಣಿಸಲಾಗಿದೆ.

2. ಉದಾಹರಣೆಗೆ ಭಾಮತೀ (ವೇ.ಪ್ರಪ್ರ. ಪುಟ 452) ಗ್ರಂಥವನ್ನು ನೋಡಿರಿ.

### (ಸರಿಯಾದ ಅರ್ಥ)

ಭಾಷ್ಯದಂತೆಯೆ ಅರ್ಥ । ಈ ಸಮಾಧಿಯ ಬಗೆಗೆ
ಮೀಸಲಹ ಯೋಗ ತುರಿಯಾದಿಗಳ ಬಗೆಗೆ
ಲೇಸಾಗಿ ಪೇಳ್ವೆ ಬ್ರಹ್ಮಜ್ಞ ॥ 18 ॥

### ತುರಿಯದ ಅರ್ಥ

ಹುಸಿತೋರ್ಕೆ ಮೂರಕ್ಕೆ । ಎಸೆದು ತಾ ನಾಲ್ಕೆಂಬ
ಹಸನಾದ ಮಾತ ಮರೆತಿರಲು ಈ ರೀತಿ
ಉಸುರುವಂತಾಯ್ತು ಬ್ರಹ್ಮಜ್ಞ[1] ॥ 19 ॥

ತುರಿಯನೇ ಮೊದಲಿಲ್ಲ । ತುರಿಯಕ್ಕತೀತನೆನೆ
ಬರಿ ಮೋಸ ಭಾಷ್ಯಬಾಹಿರದ ಮಾತುಗಳು
ಸರಿಯಲ್ಲ ಗ್ರಹಿಕೆ ಬ್ರಹ್ಮಜ್ಞ ॥ 20 ॥

### ಸಮಾಧಿಯ ಅರ್ಥ

ಬೋಗಕ್ಕು ಮೋಕ್ಷಕ್ಕು । ಆಗಿಹ ನಿಮಿತ್ತವಿದು
ಈಗಳೀ ನರನ ಬುದ್ಧಿಯೆ ಸಮಾಧಿ ಎನೆ
ಬೇಗ ಒಂದರ್ಥ। ಬ್ರಹ್ಮಜ್ಞ[2] ॥ 21 ॥

ಆತ್ಮನಲಿ ನಿಂತಿರಲು । ಚಿತ್ತ ಚಲನೆಯೆ ಇಲ್ಲ
ಮತ್ತಿನ್ನು ಆತ್ಮ ಗೌಣಾರ್ಥದಿ ಸಮಾಧಿ
ಉತ್ತಮದ ಅರ್ಥ ಬ್ರಹ್ಮಜ್ಞ[3] ॥ 22 ॥

### ಯೋಗದ ಅರ್ಥ

ಪರಮಾರ್ಥ ಜ್ಞಾನದಾ । ವರಜ್ಞಾನನಿಷ್ಠೆಯೇ
ಇರುತಿಹುದು ಮುಖ್ಯದರ್ಥದಲಿ ಯೋಗವಿದು
ಸರಿಯಾಗಿ ನೋಡೆ ಬ್ರಹ್ಮಜ್ಞ[4] ॥ 23 ॥

1. ಈ ವಿಷಯಕ್ಕೆ ಮಾಂ. ಭಾಷ್ಯಕಾರರ ಮಂಗಲಶ್ಲೋಕ 1ರಲ್ಲಿ 'ಮಾಯಾಸಂಖ್ಯಾ ತುರೀಯಮ್' ಎಂಬುದನ್ನು ನೋಡಿರಿ.

2. ಈ ವಿಷಯಕ್ಕೆ ಗೀ. 2–44 (ಭಾ. ಭಾ. 86) 'ಸಮಾಧೌ' ಎಂಬುದರ ವ್ಯಾಖ್ಯಾನವನ್ನು ನೋಡಿರಿ.

3. ಈ ವಿಷಯಕ್ಕೆ ಗೀ. 2–53 (ಭಾ. ಭಾ. 105) 'ಸಮಾಧೌ' ಎಂಬುದರ ವ್ಯಾಖ್ಯಾನವನ್ನು ನೋಡಿರಿ.

4. ಈ ವಿಷಯಕ್ಕೆ ಗೀ. 4–41 (ಭಾ. ಭಾ. 317) ಮತ್ತು ಭಾ. ಭಾ. 228ನ್ನು ನೋಡಿರಿ.

ಇದಕೆ ಸಾಧನೆ ಎರಡು ಅದು ಧ್ಯಾನಯೋಗ ಮೇಣ್
ಸದಮಲದ ಕರ್ಮಯೋಗತಾ ಯೋಗವೆಂ-
ದಿದನೆಲ್ಲ ತಿಳಿಗು ಬ್ರಹ್ಮಜ್ಞ[1] ॥ 24 ॥

ಆತ್ಮನೇ ಸತ್ಯನಿವ । ಮತ್ತೆಲ್ಲ ಮಿಥ್ಯವೆನೆ
ಉತ್ತಮದ ಪ್ರಜ್ಞೆ ನಿಶ್ಚಯ ವಿವೇಕವೇ
ಸತ್ಯವಿದು ಯೋಗ ಬ್ರಹ್ಮಜ್ಞ[2] ॥ 25 ॥

ಗೀತೆಗಿಹ ಭಾಷ್ಯದಲಿ । ಈ ತೆರದ ಅರ್ಥಗಳ
ರೀತಿಯನು ಬರೆದು ವೇದಾಂತದೊಳಗುಟ್ಟ-
ನೋತು ತಿಳಿಸಿಹರು ಬ್ರಹ್ಮಜ್ಞ ॥ 26 ॥

ಇದನಿಲ್ಲಿ ತಿಳಿಯದಲೆ । ಹದಗೆಟ್ಟ ಗ್ರಂಥಗಳ
ಅದುಭುತದ ನುಡಿಗೆ ಮರುಳಾಗಿ ಸಾಗಿದರೆ
ಒದಗದನುಭವವು ಬ್ರಹ್ಮಜ್ಞ ॥ 27 ॥

ಏಳು ಭೂಮಿಕೆಗಳಾ । ಗೋಳು ಭಾಷ್ಯದಲಿಲ್ಲ
ಏಳುವಾ ಮತ್ತೆ ಸೇರುವ ಸಮಾಧಿಗಳ
ಗೋಳು ಇಲ್ಲಿಲ್ಲ ಬ್ರಹ್ಮಜ್ಞ ॥ 28 ॥

ಗೀತೆಯಲಿ ಎಂಟನೆಯ । ಖ್ಯಾತದಧ್ಯಾಯದಲಿ
ಹೂತಿಹುದು ಯೋಗದಭ್ಯಾಸ ಓಂಕಾರ
ಸಾತಿಶಯ ಇಲ್ಲಿಲ್ಲ ಬ್ರಹ್ಮಜ್ಞ ॥ 29 ॥

ಮುಂದೆ ಹೇಳುವೆನಿದರ । ಚಂದವನುಪಾಸನೆಯ
ಸಂಧಿಯಲಿ ಈಗ ಜ್ಞಾನಕ್ಕೆ ಈ ಯೋಗ
ಹೊಂದಿಲ್ಲ ನೋಡಿ ಬ್ರಹ್ಮಜ್ಞ ॥ 30 ॥

ಧಾರಣಾಯೋಗವಿದು । ಬೇರಾಯ್ತು ಜ್ಞಾನಕ್ಕೆ
ಸೇರಿಸುತ ಎರಡು ಒಂದೆಂಬ ಗ್ರಹಿಕೆ ಸರಿ-
ಬಾರದೀಗಿಲ್ಲಿ ಬ್ರಹ್ಮಜ್ಞ[3] ॥ 31 ॥

---

1. ಈ ವಿಷಯಕ್ಕೆ ಗೀ. 2–39 (ಭಾ. ಭಾ. 81) 'ಯೋಗೇ ತು' ಎಂಬ ಭಾಗವನ್ನು ನೋಡಿರಿ.

2. ಈ ವಿಷಯಕ್ಕೆ ಗೀ. 2–53 (ಭಾ. ಭಾ. 105) 'ತದಾ ತಸ್ಮಿನ್ ಕಾಲೇ ಯೋಗಮ್ ಅವಾಪ್ಸ್ಯಸಿ ವಿವೇಕಪ್ರಜ್ಞಾಂ ಸಮಾಧಿಂ ಪ್ರಾಪ್ಸ್ಯಸಿ' ಎಂಬ ವಾಕ್ಯವನ್ನು ನೋಡಿರಿ.

3. ಪದ್ಯ 29 ರಿಂದ 31ರವರೆಗಿನ ವಿಷಯಕ್ಕೆ ಗೀ. ಭಾ. 9ರ ಅವತರಣಿಕೆ (ಭಾ.ಭಾ. 543)ಯನ್ನು ನೋಡಿರಿ.

ಆರನೆಯ ಅಧ್ಯಾಯ । ಸೇರಿದಭ್ಯಾಸಕ್ಕೆ
ತೋರಿಹರು ಚಿತ್ರ ಭೂಮಿಕೆಯಲಾಡಿಸುವ
ದಾರಿಯನು ಮತ್ತೆ ಬ್ರಹ್ಮಜ್ಞ ॥ 32 ॥

ಇಲ್ಲಿ ಭೂಮಿಕೆಯೆನಲು । ಅಲ್ಲ ಏಳೆಂಬರ್ಥ
ಇಲ್ಲಿಹುದು ಹಿಂದೆ ಅಧ್ಯತ್ಮಯೋಗದಾ
ಸಲ್ಲಲಿತ ರೀತಿ ಬ್ರಹ್ಮಜ್ಞ ॥ 33 ॥

ಇಂದ್ರಿಯವು ಮನಬುದ್ಧಿ । ಮುಂದಿರುವಹಂಕಾರ
ಸಂದಿರ್ದ ಸಾಕ್ಷಿರೂಪಗಳೆ ಭೂಮಿಗಳು
ಎಂದರಿವುದಿಲ್ಲಿ ಬ್ರಹ್ಮಜ್ಞ[1] ॥ 34 ॥

ಇದು ಸಮಾಧಿಯ ಯೋಗ । ಇದು ನಿದಿಧ್ಯಾಸನವು
ಇದೆ ಮತ್ತೆ ಧ್ಯಾನಯೋಗವೆಂದುಸುರಿಹರು
ಬುಧರು ಸನುಮತದಿ ಬ್ರಹ್ಮಜ್ಞ ॥ 35 ॥

ತಪ್ಪುಗ್ರಹಿಕೆಗಳನ್ನು । ತಪ್ಪಿಸಲು ಸಾಧಕಗೆ
ಒಪ್ಪಾದ ದಾರಿ ತೋರುವದು ನಿಜವಾಗಿ
ತಪ್ಪುವದು ಕಷ್ಟ ಬ್ರಹ್ಮಜ್ಞ ॥ 36 ॥

ಬಿಚ್ಚಿ ತಿಳಿಯಲ್ಕೀಗ । ಹುಚ್ಚು ಬಿಟ್ಟೋಡುವದು
ಸ್ವಚ್ಛದಲಿ ನೋಡೆ ಗ್ರಂಥಗಳ ಭಾಷ್ಯದಾ
ಹೆಚ್ಚಳವು ತಿಳಿಗು ಬ್ರಹ್ಮಜ್ಞ ॥ 37 ॥

ಸರ್ವಸಮ್ಮತ ಬೋಧೆ[2] । ಸರ್ವಕ್ಕು ಶ್ರೇಷ್ಠವಿದು
ನಿರ್ವಹಿಸಿ ಪೇಳ್ದ ಶ್ರೀಗಳುಪದೇಶದಾ
ಸರ್ವ ಸಾರಾಂಶ ಬ್ರಹ್ಮಜ್ಞ ॥ 38 ॥

**(ಸಾರಂಶ)**

ಗುರುತರದ ವೈರಾಗ್ಯ । ವರ ವಿವೇಕದ ಭಾಗ್ಯ
ನೆರೆ ಶುದ್ಧ ಮನಕೆ ಸೇರಿರಲು ಐಕಾಗ್ರ್ಯ
ಪರಗತಿಯೆ ಅಕ್ಕು ಬ್ರಹ್ಮಜ್ಞ ॥ 39 ॥

---

1. ಪದ್ಯ 32 ರಿಂದ 34ರ ಪೂರ ವಿಷಯಕ್ಕೆ ಗೀ. 6–35ರಲ್ಲಿ (ಭಾ.ಭಾ. 435) 'ಚಿತ್ತಭೂಮಿಕೆ'ಯಲ್ಲಿ ಎಂಬಲ್ಲಿರುವ ಟಿಪ್ಪಣಿಯನ್ನು ನೋಡಿರಿ.

2. ಶಂಕರಭಗವತ್ಪಾದರ ಸರ್ವಸಮ್ಮತೋಪದೇಶಗಳು ಎಂಬ ಗ್ರಂಥ.

ಜ್ಞಾನನಿಷ್ಠೆಯ ಪಡೆಯೆ । ಈ ನಿಖಿಳವಿರಬೇಕು
ಜ್ಞಾನವಿದು ಶ್ರುತಿಗೆ ಅನುಸರಿಸೆ ಗುರುಬೋಧೆ
ಸ್ವಾನುಭವವಕ್ಕು ಬ್ರಹ್ಮಜ್ಞ ॥ 40 ॥

ವೈದಿಕದ ಈ ಜ್ಞಾನ । ಸಾಧನವಿದೇ ಧ್ಯಾನ
ಆದರಿಸಿರಿದನೆ ಮೋಕ್ಷಕ್ಕೆ ಸೋಪಾನ
ಸಾಧಿಸುತ ಬೇಗ ಬ್ರಹ್ಮಜ್ಞ ॥ 41 ॥

ವೈದಿಕಗಳಲ್ಲದಿಹ । ಭೇದದರ್ಶನಗಳಹ
ವಾದಗಳಿಗಿಲ್ಲಿ ಬೆಲೆಯಿಲ್ಲವೆಂದೆನುತ
ಬೋಧಿಸಿಹರಿನ್ನು ಬ್ರಹ್ಮಜ್ಞ[1] ॥ 42 ॥

ಜ್ಞಾನದಿಂದಲೆ ಮೋಕ್ಷ । ತಾನು ಬಹುದೆಂದೆನುತ
ಆ ನಿಖಿಳ ವೇದ ಘೋಷಿಪುದು ಇದಕಾಗಿ
ಜ್ಞಾನವೇ ಮುಖ್ಯ ಬ್ರಹ್ಮಜ್ಞ[2] ॥ 43 ॥

ಆತ್ಮನನು ಹೊಸದಾಗಿ । ಮತ್ತೆ ಪಡೆಯುವದಲ್ಲ
ಆತ್ಮನಲಿ ಬಂದ ದೋಷವನು ಕಿತ್ತೊಗೆವ
ಕೃತ್ಯವೇನಿಲ್ಲ ಬ್ರಹ್ಮಜ್ಞ ॥ 44 ॥

ಆತ್ಮನನು ಮಾರ್ಪಡಿಸಿ । ಮತ್ತೆ ನಿಲಿಸುವದಲ್ಲ
ಎತ್ತಲೋ ಇರುವ ವಸ್ತುವನು ಸೇರುವಾ
ಕೃತ್ಯ ತಾನಿಲ್ಲ ಬ್ರಹ್ಮಜ್ಞ[3] ॥ 45 ॥

ನಿತ್ಯನಪರೋಕ್ಷನಿವ । ಸತ್ಯ ತಾನಾತ್ಮನಿವ
ಮತ್ತಿನ್ನು ಅಜ್ಞಾರಾರೋಪ ಕಳೆಯುವದೆ
ಯತ್ನವಿದು ಮುಖ್ಯ ಬ್ರಹ್ಮಜ್ಞ ॥ 46 ॥

ಇದು ಜ್ಞಾನದಿಂದಲೇ । ಒದಗುವದು ನಿಶ್ಚಯದಿ
ಬದಲಿಲ್ಲ ಮುಕ್ತಿ ಪಡೆಯಲ್ಕೆ ಎಂದಿರುವ
ಹದನವನು ನೋಡಿ ಬ್ರಹ್ಮಜ್ಞ ॥ 47 ॥

---

1. ಪದ್ಯ 41–42ರ ವಿಷಯಕ್ಕೆ ಸೂ. ಭಾ. 2–1–3 (ಭಾ.ಭಾ. 407) 'ಯತ್ತು ದರ್ಶನಮುಕ್ತಮ್' ಎಂಬ ಭಾಗವನ್ನು ನೋಡಿರಿ.

2. ಈ ವಿಷಯಕ್ಕೆ ಬೃ. 1–4–7 (ಭಾ.ಭಾ. 139)ನ್ನು ನೋಡಿರಿ.

3. 44, 45ರ ವಿಷಯಕ್ಕೆ ಸೂ. ಭಾ. 1–1–4 (ಭಾ.ಭಾ. 48, 49)ನ್ನು ನೋಡಿರಿ.

## (ಜ್ಞಾನದ ಮಹತ್ತ್ವ)

ಮೌನ ಜಪತಪ ಲೇಸು । ದಾನಧರ್ಮವು ಲೇಸು
ಮಾನವನು ಶುದ್ಧಿ ಪಡೆಯಲ್ಕೆ ಮೋಕ್ಷಕ್ಕೆ
ಜ್ಞಾನವೇ ಲೇಸು ಬ್ರಹ್ಮಜ್ಞ ॥ 48 ॥

ಮಾನ ಮನುಜಗೆ ಲೇಸು । ಭಾನು ಬೆಳಕಿಗೆ ಲೇಸು
ಆ ನಿಶೆಗೆ ಚಂದ್ರನಿರೆ ಲೇಸು ಮೋಕ್ಷಕ್ಕೆ
ಜ್ಞಾನವೇ ಲೇಸು ಬ್ರಹ್ಮಜ್ಞ ॥ 49 ॥

ಆನೆ ಅರಸಗೆ ಲೇಸು । ಜೇನು ಸವಿಯಲು ಲೇಸು
ಕ್ಷೋಣಿಯಿದು ಬೆಳೆಯೆ ಮಳೆ ಲೇಸು ಮೋಕ್ಷಕ್ಕೆ
ಜ್ಞಾನವೇ ಲೇಸು ಬ್ರಹ್ಮಜ್ಞ ॥ 50 ॥

ಸ್ನಾನಕ್ಕೆ ಗಂಗೆ ಜಲ । ಪಾನಕ್ಕೆ ತುಂಗೆ ಜಲ
ಪ್ರಾಣಕ್ಕೆ ವಾಯುಸಂಚಾರ ಮೋಕ್ಷಕ್ಕೆ
ಜ್ಞಾನವೇ ಲೇಸು ಬ್ರಹ್ಮಜ್ಞ ॥ 51 ॥

ಗಾನ ಹರಿನಾಮಕ್ಕೆ । ಧೇನುವದು ದಾನಕ್ಕೆ
ಜ್ಞಾನಿಗಳ ಸಂಗ ಸಂತಸಕೆ ಮೋಕ್ಷಕ್ಕೆ
ಜ್ಞಾನವೇ ಲೇಸು ಬ್ರಹ್ಮಜ್ಞ ॥ 52 ॥

ಹರಗೆ ಬಿಲ್ವವು ಲೇಸು । ಹರಿಗೆ ತುಲಸಿಯು ಲೇಸು
ಗರಿಕೆಯದು ಲೇಸು ಗಣಪತಿಗೆ ಮೋಕ್ಷಕ್ಕೆ
ವರಜ್ಞಾನ ಲೇಸು ಬ್ರಹ್ಮಜ್ಞ ॥ 53 ॥

ಹರಿಗಲಂಕಾರವದು । ಹರಗೆ ಜಲಧಾರೆಯದು
ತರಣಿಗಾ ನಮನ ಲೇಸಕ್ಕು ಮೋಕ್ಷಕ್ಕೆ
ವರಜ್ಞಾನ ಲೇಸು ಬ್ರಹ್ಮಜ್ಞ ॥ 54 ॥

ಕರುಣೆ ಮಗನಲಿ ಲೇಸು । ಸರಸ ಸತಿಯಲಿ ಲೇಸು
ಹರಿನಾಮ ಜಿಹ್ವೆಗಿರೆ ಲೇಸು ಮೋಕ್ಷಕ್ಕೆ
ವರಜ್ಞಾನ ಲೇಸು ಬ್ರಹ್ಮಜ್ಞ ॥ 55 ॥

ಸಿರಿತನದಿ ದಯೆ ಲೇಸು । ಹಿರಿತನದಿ ಮತಿ ಲೇಸು
ಕಿರಿಯರಿಗೆ ವಿನಯವಿರೆ ಲೇಸು ಮೋಕ್ಷಕ್ಕೆ
ವರಜ್ಞಾನ ಲೇಸು ಬ್ರಹ್ಮಜ್ಞ ॥ 56 ॥

ಹಿರಿಯರಿರೆ ಮನೆ ಲೇಸು । ಗುರುಗಳಿರೆ ಮಠ ಲೇಸು
ಅರಿವಿನಲೆ ನಿಂತು ಮೆರೆಯುವಾ ಮೋಕ್ಷಕ್ಕೆ
ವರಜ್ಞಾನ ಲೇಸು ಬ್ರಹ್ಮಜ್ಞ ॥ 57 ॥

ಅಡವು[1] ಸಾಲಕೆ ಲೇಸು । ದುಡಿಮೆ ಬದುಕಿಗೆ ಲೇಸು
ಮೃಡನಲ್ಲಿ ಭಕ್ತಿಯಿರೆದ ಲೇಸು ಮೋಕ್ಷಕ್ಕೆ
ಕಡುಜ್ಞಾನ ಲೇಸು ಬ್ರಹ್ಮಜ್ಞ ॥ 58 ॥

ಯತಿಗೆ ವಿರತಿಯು ಲೇಸು । ಸತಿಗೆ ಶೀಲವು ಲೇಸು
ಮಿತಿಯೂಟ ಲೇಸು ಸ್ವಸ್ಥತೆಗೆ ಮೋಕ್ಷಕ್ಕೆ
ಶ್ರುತಿವಿದಿತ ಜ್ಞಾನ ಬ್ರಹ್ಮಜ್ಞ ॥ 59 ॥

ಕಷ್ಟದಲಿ ಧೃತಿ ಲೇಸು । ಶಿಷ್ಟರನುಕೃತಿ ಲೇಸು
ದುಷ್ಟಜನಸಂಗಬಿಡೆ ಲೇಸು ಮೋಕ್ಷಕ್ಕೆ
ಶ್ರೇಷ್ಠವಹ ಜ್ಞಾನ ಬ್ರಹ್ಮಜ್ಞ ॥ 60 ॥

ಬೀಜ ತತಿಯಲಿ[2] ಲೇಸು । ಸೋಜಿಗದ ಕಥೆ ಲೇಸು
ತೇಜಸ್ವಿ ಜನರ ಸಭೆ ಲೇಸು ಮೋಕ್ಷಕ್ಕೆ
ಮೂಜಗದಿ ಜ್ಞಾನ ಬ್ರಹ್ಮಜ್ಞ ॥ 61 ॥

ಅನ್ನ ಹಸಿದಗೆ ಲೇಸು । ಮಣ್ಣಿನಲಿ ಎರೆ ಲೇಸು
ಸುಣ್ಣವದು ವೀಳ್ಯ ಮೇಲುವುದಕೆ ಮೋಕ್ಷಕ್ಕೆ
ತನ್ನದೇ ಜ್ಞಾನ ಬ್ರಹ್ಮಜ್ಞ ॥ 62 ॥

ಭಾಷೆ ಸಂಸ್ಕೃತ ಲೇಸು । ಭಾಷ್ಯಪಠಣವು ಲೇಸು
ಈಶ್ವರನ ಪೂಜೆ ಬಲು ಲೇಸು ಮೋಕ್ಷಕ್ಕೆ
ಲೇಸು ಸುಜ್ಞಾನ ಬ್ರಹ್ಮಜ್ಞ ॥ 63 ॥

ದತ್ತಭಕ್ತಿಯು ಲೇಸು । ಅತ್ತಿಮರವಿರೆ ಲೇಸು
ದತ್ತಗುರು ಚರಿತೆ ಬಲುಲೇಸು ಮೋಕ್ಷಕ್ಕೆ
ತತ್ತ್ವದಾ ಜ್ಞಾನ ಬ್ರಹ್ಮಜ್ಞ ॥ 64 ॥

ಸತ್ಯಶೋಧನೆ ಲೇಸು । ತತ್ತ್ವನಿಷ್ಠೆಯು ಲೇಸು
ಉತ್ತಮರ ಬೋಧೆ ಸಿಗೆ ಲೇಸು ಮೋಕ್ಕಕ್ಕೆ
ಮತ್ತೆ ಸುಜ್ಞಾನ ಬ್ರಹ್ಮಜ್ಞ ॥ 65 ॥

---

1. ಅಡವು ಎಂದರೆ ವತ್ತಿ (ಗಿರವಿ) ಎಂದರ್ಥ.
2. 'ತತಿ' ಎಂದರೆ ಬಿತ್ತುವದಕ್ಕೆ ಸರಿಯಾದ ಕಾಲ – ಎಂದರ್ಥ.

ಉಪ್ಪು ಅಡಿಗೆಗೆ ಲೇಸು । ಉಪ್ಪರಿಗೆಮನೆ ಲೇಸು
ತುಪ್ಪವದು ಬ್ರಹ್ಮಭೋಜನಕೆ ಮೋಕ್ಷಕ್ಕೆ
ತಪ್ಪದಲೆ ಜ್ಞಾನ ಬ್ರಹ್ಮಜ್ಞ ॥ 66 ॥

ಯುದ್ಧವಾರ್ತೆಯು ಲೇಸು । ನಿದ್ದೆ ರಾತ್ರಿಗೆ ಲೇಸು
ಅದ್ವೈತ ಲೇಸು ತತ್ತ್ವದೊಳು ಮೋಕ್ಷಕ್ಕೆ
ಶುದ್ಧ ಸುಜ್ಞಾನ ಬ್ರಹ್ಮಜ್ಞ ॥ 67 ॥

ಪ್ರತಿಭೆ ಕವಿತೆಗೆ ಲೇಸು । ಮತಿಗೆ ಸ್ಫುರಣೆಯು ಲೇಸು
ಮಿತಭಾಷೆ ಲೇಸು ಮಾನವಗೆ ಮೋಕ್ಷಕ್ಕೆ
ಶ್ರುತಿಜನಿತ ಜ್ಞಾನ ಬ್ರಹ್ಮಜ್ಞ ॥ 68 ॥

ಸ್ವಚ್ಛ ಕನ್ನಡಿ ಲೇಸು । ಅಚ್ಚಗನ್ನಡ ಲೇಸು
ಸಚ್ಚಿದಾನಂದಪದ ಲೇಸು ಮೋಕ್ಷಕ್ಕೆ
ನಿಶ್ಚಯದ ಜ್ಞಾನ ಬ್ರಹ್ಮಜ್ಞ ॥ 69 ॥

ಕ್ಷಮೆಯು ಶೂರಗೆ ಲೇಸು । ಶಮೆ ಸಾಧುವಿಗೆ ಲೇಸು
ಸಮತೆ ಸುಖದುಃಖದಲಿ ಲೇಸು ಮೋಕ್ಷಪದ
ಗಮನಕ್ಕೆ ಜ್ಞಾನ ಬ್ರಹ್ಮಜ್ಞ ॥ 70 ॥

ಕ್ರಮವರಿತ ಕೃತಿ ಲೇಸು । ದಮವರಿತ ಯತಿ ಲೇಸು
ಸಮಯಕ್ಕೆ ಬಂದ ನುಡಿ ಲೇಸು ಮೋಕ್ಷಪದ
ಸಮನಿಸಲು ಜ್ಞಾನ ಬ್ರಹ್ಮಜ್ಞ ॥ 71 ॥

ಸಾಲ ತೀರಲು ಲೇಸು । ಗಾಳಿ ಬೀಸಲು ಲೇಸು
ಕಾಲಕ್ಕೆ ಮಳೆಯು ಬರೆ ಲೇಸು ಮೋಕ್ಷಪದ
ಮೇಳಯಿಸೆ ಜ್ಞಾನ ಬ್ರಹ್ಮಜ್ಞ ॥ 72 ॥

ಕರ್ಮಯೋಗವು ಲೇಸು । ಧರ್ಮಭಾವನೆ ಲೇಸು
ನಿರ್ಮಲತೆ ಮನಕೆ ಬರೆ ಲೇಸು ಮೋಕ್ಷಪದ
ಮರ್ಮವಿದು ಜ್ಞಾನ ಬ್ರಹ್ಮಜ್ಞ ॥ 73 ॥

ಸರ್ವಜ್ಞಪದ[1] ಲೇಸು । ಸರ್ವಾತ್ಮಮತಿ ಲೇಸು
ಗರ್ವವೇ ಇರದ ನರ ಲೇಸು ಮೋಕ್ಷಪದ
ನಿರ್ವಹಿಸೆ ಜ್ಞಾನ ಬ್ರಹ್ಮಜ್ಞ ॥ 74 ॥

1. ಸರ್ವಜ್ಞ ಕವಿಯ ವಚನಗಳು ಎಂದರ್ಥ.

ಓಟ ಕುದುರೆಗೆ ಲೇಸು । ನೋಟಕ್ಕೆ ಗಿರಿ ಲೇಸು
ತೋಟಕ್ಕೆ ತೆಂಗು ಇರೆ ಲೇಸು ಮೋಕ್ಷಸುಖ-
ದೂಟಕ್ಕೆ ಜ್ಞಾನ ಬ್ರಹ್ಮಜ್ಞ ॥ 75 ॥

ಭಕ್ತಿಸಾಧನೆ ಲೇಸು । ಯುಕ್ತಿಗನುಭವ ಲೇಸು
ಮುಕ್ತಿಯನು ಪಡೆಯೆ ಗುರು ತೋರಿದನುಭವದ
ತತ್ತ್ವದೀ ಜ್ಞಾನ ಬ್ರಹ್ಮಜ್ಞ ॥ 76 ॥

## ಜ್ಞಾನನಿಷ್ಠೆ

ಜ್ಞಾನ ಬರುವದಕಾಗಿ । ಧ್ಯಾನಾದಿ ಸಾಧನೆಯ
ತಾನೀಗ ಶ್ರುತಿಯನನುಸರಿಸಿ ಮಾಡಲ್ಕೆ
ಈ ನಿಷ್ಠೆ ಬಹುದು ಬ್ರಹ್ಮಜ್ಞ ॥ 77 ॥

ಜ್ಞಾನನಿಷ್ಠೆಯ ಬಗೆಗೆ ಏನು ಹೇಳಿಹರೆಂಬು
ಭಾನವನು ಇಲ್ಲಿ ತೋರಿಸಲ್ಕೆತ್ನಿಪೆ ನಿ-
ಧಾನದಿಂ ಕೇಳಿ ಬ್ರಹ್ಮಜ್ಞ ॥ 78 ॥

ನಿಷ್ಠೆ ಎನ್ನಲು ಕೊನೆಯು । ಇಷ್ಟೆ ಇದಕರ್ಥವಿದು
ಸ್ಪಷ್ಟದಲಿ ಉಸುರಿ ತಿಳಿಸಿಹರು ಗೀತೆಯಲಿ
ಶ್ರೇಷ್ಠ ಶಂಕರರು ಬ್ರಹ್ಮಜ್ಞ[1] ॥ 79 ॥

ಪರಭಕ್ತಿ ವಿಷಯವನ್ನು । ಬರೆದಿರುವ ಸಂದರ್ಭ
ವರಜ್ಞಾನಕಿರುವ ನಿಷ್ಠೆಯನು ವಿವರಿಸಿದ
ಪರಿಯನೀಗೊರೆವೆ ಬ್ರಹ್ಮಜ್ಞ ॥ 80 ॥

ಜ್ಞಾನ ಬಂದರೆ ನಿಷ್ಠೆ । ತಾನಾಗಿಯೇ ಬಕ್ಕು
ಜ್ಞಾನವೇ ಬೇರೆ ಈ ನಿಷ್ಠೆ ಬೇರೆಂದು
ಮಾನಿಸುವುದಲ್ಲ ಬ್ರಹ್ಮಜ್ಞ ॥ 81 ॥

ಜ್ಞಾನದಾನಂತರದಿ । ಜ್ಞಾನದಭ್ಯಾಸದಲಿ
ಮಾನವನು ನಿಷ್ಠೆ ಪಡೆಯುವನು ಎನ್ನುವೀ
ಭಾವವೇನಿಲ್ಲ ಬ್ರಹ್ಮಜ್ಞ[2] ॥ 82 ॥

---

1. ಈ ವಿಷಯಕ್ಕೆ ಗೀ. 18-50 (ಭಾ. ಭಾ. 1095) 'ನಿಷ್ಠಾ ಪರ್ಯವಸಾನಮ್' ಎಂಬಿದನ್ನು ನೋಡಿರಿ.

2. ಪದ್ಯ 80 ರಿಂದ 82ರವರೆಗಿನ ವಿಷಯಕ್ಕೆ ಗೀ. ಭಾ. 18-55 (ಭಾ.ಭಾ. 1106, 1107)ನ್ನು ನೋಡಿರಿ.

ಜ್ಞಾನ ಮತ್ತೆ ಪರೋಕ್ಷ । ಜ್ಞಾನ ಮತ್ತಪರೋಕ್ಷ
ಜ್ಞಾನದಲಿ ಮತ್ತೆ ಅದೃಢತೆಯು ದೃಢಭೇದ-
ವೇನಿಲ್ಲವಿಲ್ಲಿ ಬ್ರಹ್ಮಜ್ಞ ॥ 83 ॥

ಜ್ಞಾನದಭ್ಯಾಸದಲಿ । ಭಾನ ಸಾಕ್ಷಾತ್ಕಾರ
ತಾನಾಗಬಹುದು ಕಾಲಾಂತರಕ್ಕೆನಲು
ನೂನವಿದು ನೋಡಿ ಬ್ರಹ್ಮಜ್ಞ ॥ 84 ॥

ನಿತ್ಯಾಪರೋಕ್ಷವಿದು । ನಿತ್ಯಸಾಕ್ಷಾದ್ವಸ್ತು
ಮತ್ತಿನ್ನು ಸಿದ್ಧದನುಭವಸ್ವರೂಪದ
ಪ್ರತ್ಯಯವೆ ಜ್ಞಾನ ಬ್ರಹ್ಮಜ್ಞ ॥ 85 ॥

ಅರಿವಿನಲಿ ಸಹಜವೆನೆ । ಇರುವ ನೆಲೆಯನೆ ಇಲ್ಲಿ
ಪರಭಕ್ತಿನಿಷ್ಠೆ ಎಂದಿಹುದು ಇನ್ನಾವ
ಪರಿಯಲ್ಲ ತಿಳಿಯೆ ಬ್ರಹ್ಮಜ್ಞ ॥ 86 ॥

ಶ್ರವಣದಲಿ ಹುಟ್ಟಿರುವ । ಅವಿರತದ ಜ್ಞಾನವಿದು
ಇವಗೀಗ ದೇಹ ನಾನೆಂಬ ತೆರನಂತೆ
ಸವನಿಪುದೆ ನಿಷ್ಠೆ ಬ್ರಹ್ಮಜ್ಞ ॥ 87 ॥

ನಾನು ಇಂಥವನೆಂಬ । ಭಾನವಿರುವಂತೆಯೇ
ತಾನು ನಿಜ ನಿತ್ಯ ನಿರ್ಧರ್ಮ ಬ್ರಹ್ಮವೆನೆ
ಈನಿಷ್ಠೆ ಬಂತು ಬ್ರಹ್ಮಜ್ಞ[1] ॥ 88 ॥

ಪರಿಪಾಕವಾಯಿತಿದು । ಇರದು ಪ್ರತಿಪಕ್ಷವದು
ಅರಿಯಿರಿದೆ ಆತ್ಮನಿಶ್ಚಯದ ಕೊನೆಯಾದ
ಪರಮಾನುಭವವು ಬ್ರಹ್ಮಜ್ಞ ॥ 89 ॥

ಹೊರಗೆ ಜಗ ಕಂಡರೂ । ಕರಣ ಮನವಿದ್ದರೂ
ಅರಿವಿನಲಿ ಮತ್ತೆ ಕರಗಿಸುತೆ ತಾನಾಗಿ
ಇರಲು ಪರಿಪಾಕ ಬ್ರಹ್ಮಜ್ಞ ॥ 90 ॥

ಅಗ್ರಹಣ ವಿಪರೀತ । ನಿಗ್ಗರದ ಸಂಶಯವು
ತಗ್ಗಿರುತ ಮನದಿ ಆತ್ಮನನೆ ನೋಡಲ್ಕೆ
ಒಗ್ಗಿತೀ ನಿಷ್ಠೆ ಬ್ರಹ್ಮಜ್ಞ ॥ 91 ॥

---

1. ಪದ್ಯ 87, 88ರ ವಿಷಯಕ್ಕೆ ಉಪದೇಶಸಾಹಸ್ರಿ ಪದ್ಯ 4-5ನ್ನು ನೋಡಿರಿ.

ಪ್ರತಿಪಕ್ಷವಿಲ್ಲದಿಹ । ಅತಿಸಹಜದರಿವಿದುವೆ
ಮತಿಯಿಲ್ಲ ಮತ್ತೆ ಕೃತಿಯಿಲ್ಲ ಜ್ಞಾತ್ರಾದಿ
ತತಿಯಿಲ್ಲವಿಲ್ಲಿ ಬ್ರಹ್ಮಜ್ಞ[1] ॥ 92 ॥

ಹೊರಗಿನಿಂ ನೋಳ್ಪರಿಗೆ । ಇರುವುದಿವನಲಿ ಬುದ್ಧಿ
ಕರಣಗಳು ಮೇಣು ಸುಖದುಃಖ ವೇದನೆಯು
ಸರುವವೂ ತೋರ್ಕು ಬ್ರಹ್ಮಜ್ಞ ॥ 93 ॥

ಬುದ್ಧಿಯಲಿ ಸೂಸುತ್ತ । ಇದ್ದಿಹುದು ಈ ಜ್ಞಾನ
ಇದ್ದಂತೆ ಕಾಂಬ ಇದು ಹುಸಿಯು ಆತ್ಮನೇ
ಇದ್ದ ತಾ ಸತ್ಯ ಬ್ರಹ್ಮಜ್ಞ ॥ 94 ॥

ಸಂತತವು ಸಹಜವಿದು । ಅಂತರಂಗದಲಿವಗೆ
ಚಿಂತನೆಯ ತೆರದಿ ತೋರಿದರು ಕರ್ತೃತ್ವ
ದಂತಲ್ಲ ತಾನು ಬ್ರಹ್ಮಜ್ಞ ॥ 95 ॥

ಜ್ಞಾನಸಾಧಕಗಿದುವೆ । ಮೇಣು ಯತ್ನದಿ ಬಕ್ಕು
ಜ್ಞಾನಿಯಲಿ ತಾನು ಎಂದೆಂದು ಇರುತಿರುವ
ಮಾನಸದ ವೃತ್ತಿ ಬ್ರಹ್ಮಜ್ಞ ॥ 96 ॥

ಹೊರನೋಟಕಿದು ವೃತ್ತಿ ಬರಿ ಬೊಮ್ಮವಿದು ನಿಜದಿ
ಅರಿವಿಲ್ಲ ಮಿಕ್ಕ ಜನರಿಂಗೆ ಈ ಜ್ಞಾನ
ಪರವಸ್ತು ನಿಷ್ಠೆ ಬ್ರಹ್ಮಜ್ಞ ॥ 97 ॥

ಜ್ಞಾನಿಯಲ್ಲಿಯ ಮನವು । ತಾನು ಈ ಬ್ರಹ್ಮವೇ
ಜ್ಞಾನಿಗಿನ್ನಿಲ್ಲ ಸಂಸಾರ ಮೊದಲಿನೊಲು
ಸ್ವಾನುಭವವಿದುವೆ ಬ್ರಹ್ಮಜ್ಞ ॥ 98 ॥

ಹೀಗೆ ನಿಂದಿಹ ನಿಲುವೆ । ಈಗಳಿದು ನಿಷ್ಠೆ ಮೇಣ್
ಆಗಿಹುದು ಇದುವೆ ನಾಲ್ಕನೆಯ ಪರಭಕ್ತಿ-
ಯಾಗರವು ಸತ್ಯ ಬ್ರಹ್ಮಜ್ಞ ॥ 99 ॥

**(ನಿಷ್ಠಾಸಾಧನ)**

ಈ ನಿಲುವು ಬರುವುದಕೆ । ಜ್ಞಾನಸಾಧಕಗಿನ್ನು
ಏನೇನು ಬೇಕು ಎಂಬುದನು ತಿಳಿಸಿಹ ಪ್ರ-
ಮಾಣವನು ಕೇಳಿ ಬ್ರಹ್ಮಜ್ಞ ॥ 100 ॥

1. ಪದ್ಯ 89 ರಿಂದ 92ರ ಪೂರ ವಿಷಯಕ್ಕೆ ಗೀ. 18-55 (ಭಾ. ಭಾ. 1107) ರಲ್ಲಿ ಪರಿಪಕ್ವ ಮತ್ತು ಪ್ರತಿಪಕ್ಷವಿಲ್ಲದ -ಎಂಬ ಶಬ್ದಗಳ ಟಿಪ್ಪಣಿಗಳನ್ನು ನೋಡಿರಿ.

ಚಿತ್ತಶುದ್ಧಿಯು ಬೇಕು । ಮತ್ತಮಾನಿತ್ವಾದಿ
ಸತ್ತ್ವಗುಣ ಜ್ಞಾನಸಹಕಾರಿ ಸಾಧನೆಯ
ಮೊತ್ತವಿದು ಬೇಕು ಬ್ರಹ್ಮಜ್ಞ ॥ 101 ॥

ಗುರು ಶಾಸ್ತ್ರ ಶ್ರವಣಗಳ । ನೆರವು ಇದಕಿರಬೇಕು
ಪರಮಸ್ತುವಿದುವೆ ತಾನೆಂಬ ನಿಶ್ಚಯವು
ನಿರುತವಿರಬೇಕು ಬ್ರಹ್ಮಜ್ಞ ॥ 102 ॥

ವೈರಾಗ್ಯ ಸಂನ್ಯಾಸ । ಸೇರಿರಲು ಸಾಧನೆಗೆ
ತೋರುವದು ಜ್ಞಾನದೀ ನಿಷ್ಠೆ ತೀವ್ರದಲಿ
ಪಾರುಗಾಣುವನು ಬ್ರಹ್ಮಜ್ಞ[1] ॥ 103 ॥

ಸಿದ್ಧನಾ ಲಕ್ಷಣವೆ । ಇದ್ದಿಹುದು ಸಾಧನೆಯು
ಉದ್ಧಾರವಾಗಬಯಸುವಗೆ ಇದೆ ಮಾರ್ಗ
ಶುದ್ಧಪ್ರಕ್ರಿಯೆಯು ಬ್ರಹ್ಮಜ್ಞ ॥ 104 ॥

ಸಾಧನೆಯು ಜ್ಞಾನವೇ । ಸಾಧಿಪುದು ಜ್ಞಾನವೇ
ಸಾಧಿಸಿದ ಸಹಜಸ್ಥಿತಿಸಹಿತ ಜ್ಞಾನವೇ
ಭೇದವೇನಿಲ್ಲ ಬ್ರಹ್ಮಜ್ಞ ॥ 105 ॥

ಸಾಧನೆಯ ಸಹಕಾರ । ಆದರದಲನುಸರಿಸಿ
ಸಾಧಿಸುತ ಯತ್ನ ಮಾಳ್ಪವನು ಸಾಧಕನು
ಸಾಧಿಸಲು ಜ್ಞಾನಿ ಬ್ರಹ್ಮಜ್ಞ ॥ 106 ॥

## (ನಿಷ್ಠೆಯ ಫಲ)

ಜೀವಂತನಿರುತಿರ್ಕೆ । ಜೀವದೇಹಗಳಿಲ್ಲ[2]
ಭಾವನೆಯ ಭ್ರಾಂತಿ ಅಜ್ಞಾನಜ್ಞಾನಗಳು
ಆವವೂ ಇಲ್ಲ ಬ್ರಹ್ಮಜ್ಞ ॥ 107 ॥

ಹೊರಗಿರುವ ಜನರಿಂಗೆ । ಇರುವಂತೆ ತೋರ್ದರೂ
ಪರಮಾರ್ಥತತ್ತ್ವ ತಿಳಿದವಗೆ ಜಗವಿಲ್ಲ
ಬರಿ ಬ್ರಹ್ಮವೆಲ್ಲ ಬ್ರಹ್ಮಜ್ಞ ॥ 108 ॥

---

1. ಪದ್ಯ 100 ರಿಂದ 103ರ ವಿಷಯಕ್ಕೆ ಗೀ. 18–55 (ಭಾ. ಭಾ. 1107) ಪೂರ ನೋಡಿರಿ.

2. ಈ ವಿಷಯಕ್ಕೆ ಸೂ. ಭಾ. 1–1–4 (ಭಾ.ಭಾ. 60)ನ್ನು ನೋಡಿರಿ.

ಬಂದ ಬಂಧವದಿಲ್ಲ । ನಿಂದ ನಿಷ್ಠೆಯದಿಲ್ಲ
ಹಿಂದಿಲ್ಲ ಮುಂದೆ ಹುಟ್ಟಿಲ್ಲ ಸಂಸಾರ–
ವೆಂದಿಗೂ ಇಲ್ಲ ಬ್ರಹ್ಮಜ್ಞ ॥ 109 ॥

ತಾನು ತಿಳಿದವನಲ್ಲ । ಮೇಣು ತಿಳಿಯದಲಿಲ್ಲ
ತಾನಿಲ್ಲದಿನ್ನು ಏನಿಲ್ಲ ತಾನೆಂಬ
ಭಾನವೂ ಇಲ್ಲ ಬ್ರಹ್ಮಜ್ಞ ॥ 110 ॥

ಎಚ್ಚರವು ಕನಸಿಲ್ಲ । ಅಚ್ಚ ನಿದ್ರೆಯದಿಲ್ಲ
ಹೆಚ್ಚಿನದು ಇನ್ನು ಸುಸಮಾಧಿ ಎನ್ನುವೀ
ಹುಚ್ಚು ಮತ್ತಿಲ್ಲ ಬ್ರಹ್ಮಜ್ಞ ॥ 111 ॥

ಹೊರನೋಟಕಿವ ಮನುಜ । ಬರಿ ಬೊಮ್ಮಮಾತ್ರನಿವ
ಗುರುತಿಸಲು ಸಲ್ಲ ಇವನಿರುವ ಲೌಕಿಕರು
ಪರದಾಡುತಿಹರು ಬ್ರಹ್ಮಜ್ಞ ॥ 112 ॥

ಅಷ್ಟಸಿದ್ಧಿಯ ಪಡೆದ । ಶ್ರೇಷ್ಠ ಯೋಗವು ಇಲ್ಲ
ಕಷ್ಟಸುಖಪಡುವ ಸಂಸಾರ ತನಗಿಲ್ಲ
ಭ್ರಷ್ಟತೆಯು ಇಲ್ಲ ಬ್ರಹ್ಮಜ್ಞ ॥ 113 ॥

ಹೇಳುವದು ಕೇಳುವದು । ಬಾಳುವದು ತಾಳುವದು
ಮೈಳೈಸಿ ನೋಡಿ ನಿಲ್ಲುವದು ಆವುದೂ
ಗೋಳಿಲ್ಲವಿಲ್ಲ ಬ್ರಹ್ಮಜ್ಞ ॥ 114 ॥

ನಿತ್ಯವೂ ಅಶರೀರಿ[1] ನಿತ್ಯವೂ ಅಪ್ರಾಣ
ನಿತ್ಯವೂ ತಾನು ನಿರ್ಧರ್ಮ ಬೊಮ್ಮನೇ
ಸತ್ಯದೀ ನಿಷ್ಠೆ ಬ್ರಹ್ಮಜ್ಞ ॥ 115 ॥

ತನ್ನ ಸುಖದುಃಖಗಳು । ಇನ್ನು ತನಗೇ ವೇದ್ಯ
ತನ್ನಲ್ಲಿ ತಾನು ನಿಂತುದಕೆ ಇದರಂತೆ
ತನ್ನದೇ ಸಾಕ್ಷಿ ಬ್ರಹ್ಮಜ್ಞ ॥ 116 ॥

ಪರಮಾರ್ಥಸಂನ್ಯಾಸ । ವರಜ್ಞಾನಿಷ್ಠೆಯಿದು
ಕರೆದಿಹರು ಇದನು ಶಂಕರರು ಗೀತೆಯಾ
ವರ ಭಾಷ್ಯದಲ್ಲಿ ಬ್ರಹ್ಮಜ್ಞ ॥ 117 ॥

1. ಈ ವಿಷಯಕ್ಕೆ ಸೂ.ಭಾ. 1-1-4 (ಭಾ. ಭಾ. 58)ರಲ್ಲಿ 'ನಿತ್ಯಮ್ ಅಶರೀರತ್ವಮ್ ಅಕರ್ಮನಿಮಿತ್ತತ್ವಾತ್' ಎಂಬ ವಾಕ್ಯವನ್ನು ನೋಡಿರಿ.

ಸಾಧನೆಗೆ ಶಾಸ್ತ್ರದಲಿ । ಬೋಧಿಸಿದ ಸಂನ್ಯಾಸ
ಬೇದವನು ಮುಂದೆ ತಿಳಿಸುವೆನು ಇದು ಮಾತ್ರ
ಭೋಧದಾ ನಿಷ್ಠೆ ಬ್ರಹ್ಮಜ್ಞ ॥ 118 ॥

ಇಂಥ ನಿಷ್ಠೆಯ ಪಡೆಯೆ । ಸ್ವಾಂತದಲಿ ಸಾಧಕರು
ಸಂತತವು ಯತ್ನಮಾಡಲ್ಕೆ ನಿಶ್ಚಯದಿ
ಶಾಂತಿ ಹೊಂದುವರು ಬ್ರಹ್ಮಜ್ಞ ॥ 119 ॥

ಜ್ಞಾನಿಗಳ ಬಗೆಯಲ್ಲಿ । ಏನು ಹೇಳಿಹರೆಂಬ
ಭಾನವನು ಸ್ಮರಿಸಿ ವಿವರಿಸುವೆ ಮುಂದಿನ್ನು
ಜಾಣರಿದ ಕೇಳಿ ಬ್ರಹ್ಮಜ್ಞ ॥ 120 ॥

# ಹನ್ನೊಂದನೆಯ ಅಧ್ಯಾಯ

## ಜ್ಞಾನಿಗಳ ಇರವು

ಜ್ಞಾನಿಗಳ ಇರುವಿಕೆಯ । ಮಾನವನು ಪೇಳಿರುವ
ಜಾಣತನದುಕ್ತಿ ಭಾಷ್ಯನ್ನನುಸರಿಸಿ
ಮೇಣಿನ್ನು ಪೇಳ್ವೆ ಬ್ರಹ್ಮಜ್ಞ ॥ 1 ॥

ಜ್ಞಾನನಿಷ್ಠೆ ಬರಲು । ತಾನೆ ತಾನಾಗಿಹನು
ಏನಿಲ್ಲ ಬೇರೆ ಇನ್ನೊಂದು ಎಂಬುದನು
ಧ್ಯಾನಿಸುವದಿಲ್ಲಿ ಬ್ರಹ್ಮಜ್ಞ ॥ 2 ॥

ಪಡೆಯುವಾ ವಸ್ತುಗಳು । ಪಡೆಯಬೇಕೆಂಬುವನು
ಒಡನೆಲ್ಲ ಮಿಥ್ಯವಾಗಿರಲು ಕಾಮನೆಯು
ಅಡಗುವದು ಸಹಜ ಬ್ರಹ್ಮಜ್ಞ[1] ॥ 3 ॥

ಚಲನಚಿತ್ರದಿ ತೋರ್ಪ। ಬಲುಬಗೆಯ ತಿನಿಸುಗಳ
ಫಲಹಾರಕೆಂದು ಬಯಸುವರೆ ? ಬರಿತೋರ್ಕೆ-
ಗಳ ತತ್ತ್ವ ತಿಳಿಯೆ ಬ್ರಹ್ಮಜ್ಞ ॥ 4 ॥

ಹೃದಯದಲಿ ಬಿಗಿದಿರುತ । ಹುದುಗಿರುವ ಕಾಮಗಳು
ಬದಿಗಾಗಿ ಬಿಗಿತ ಸಡಿಲಾಗೆ ಮರ್ತ್ಯನಿಗೆ
ಒದಗಿತಮೃತತ್ತ್ವ ಬ್ರಹ್ಮಜ್ಞ[2] ॥ 5 ॥

ಪರವಸ್ತು ಕಂಡವಗೆ । ಹರಿಯಿತೀ ಕಗ್ಗಂಟು
ನರನ ಈ ಹೃದಯದೊಳಗಿರ್ದ ಕಾಮನೆಯ
ಉರಿ ಅಡಗಿತೀಗ ಬ್ರಹ್ಮಜ್ಞ[3] ॥ 6 ॥

ವರಶ್ರುತಿಯ ವಾಕ್ಯವಿವು । ಸರಿಯಿಹವು ಯುಕ್ತಿಗೂ
ಪರಿಕ್ಷಿಸಲು ಜ್ಞಾನವಿಲಕ್ಷಣವ ಸ್ಮೃತಿಗಳಲು
ಇರುವದೀ ಪರಿಯೇ ಬ್ರಹ್ಮಜ್ಞ ॥ 7 ॥

---

1. ಈ ವಿಷಯಕ್ಕೆ ಬೃ. 4–5–15ನ್ನು ನೋಡಿರಿ.
2. ಈ ವಿಷಯಕ್ಕೆ ಕಾ. 2–3–14 (ಭಾ.ಭಾ. 178)ನ್ನು ನೋಡಿರಿ.
3. ಈ ವಿಷಯಕ್ಕೆ ಮುಂ. 2–2–9 (ಭಾ.ಭಾ. 83)ನ್ನು ನೋಡಿರಿ.

ಇರದಾಗೆ ಕಾಮವಿದು । ಇರದಾಯ್ತು ಕರ್ಮವದು
ಎರವಾಗೆ ಕಾಮಕರ್ಮಗಳು ಸಂಸಾರ-
ವಿರದಾಯ್ತು ಇವಗೆ ಬ್ರಹ್ಮಜ್ಞ ॥ 8 ॥

ಇವಗೆ ಪಾರಮಹಂಸ್ಯ । ಸವನಿಪುದು ಸಹಜದಲಿ
ಇವನಿನ್ನು ನಿತ್ಯ ಸಂನ್ಯಾಸಿಯಾಗಿರ್ದು
ಭುವನದಲಿ ಚರಿಪ ಬ್ರಹ್ಮಜ್ಞ ॥ 9 ॥

ಈ ಶರೀರವು ನಿಲಲು । ತಾ ಶೌಚಭಿಕ್ಷೆಗಳ
ಲೇಸಾಗಿ ನಿತ್ಯಮಾಡಿದರು ಕರ್ತೃತ್ವ-
ದೋಷವಿಲ್ಲಿವಗೆ ಬ್ರಹ್ಮಜ್ಞ ॥ 10 ॥

ಸಿಕ್ಕಿರಲು ಸಿಗದಿರಲು । ಅಕ್ಕು ತೃಪ್ತಿಯು ಇವಗೆ
ಸಿಕ್ಕಿಲ್ಲ ದ್ವಂದ್ವಗಳಿಗಿವನು ಜ್ಞಾನಿ ತಾ
ಚೊಕ್ಕ ಪರವಸ್ತು ಬ್ರಹ್ಮಜ್ಞ[1] ॥ 11 ॥

ಸ್ತುತಿ ನಮಸ್ಕಾರಗಳು । ಕೃತಿಫಲದ ತೊಡಕುಗಳು
ಯತಿಯಾದ ಜ್ಞಾನಿಗಿನ್ನಿಲ್ಲ ನಿತ್ಯಾದಿ
ಅತಿಶಯದ ಕರ್ಮ ಬ್ರಹ್ಮಜ್ಞ[2] ॥ 12 ॥

ತನ್ನದೆಂಬುವದಿಲ್ಲ । ಅನ್ಯಸಂಗವದಿಲ್ಲ
ಇನ್ನುಳಿದ ಲೋಕವ್ಯವಹಾರ ಕರ್ಮಗಳ
ಬನ್ನವೇ ಇಲ್ಲ ಬ್ರಹ್ಮಜ್ಞ ॥ 13 ॥

ಬೊಮ್ಮವೇ ಇವನ ಮನೆ । ಸನ್ಮುನಿಗಳಹುದೆನಲು
ನೆಮ್ಮಿಲ್ಲ ಬೇರೆ ಮನೆಯನ್ನು ಸಂನ್ಯಾಸಿ
ಬೊಮ್ಮವಿನ ಕೇಳಿ ಬ್ರಹ್ಮಜ್ಞ ॥ 14 ॥

**(ಸಾಧನ ಹಾಗೂ ಸಾಧ್ಯ)**

ಪರಿಪಾಕವಾಗಲ್ಕೆ । ಪರಮನ್ಯಾಸವೆ ಬೇಕು
ವರನಿಷ್ಠೆ ಪಡೆಯೆ ಪರಮಾರ್ಥಸಂನ್ಯಾಸ
ಪರಿಪೂರ್ಣವಾಯ್ತು ಬ್ರಹ್ಮಜ್ಞ[3] ॥ 15 ॥

---

1. ಪದ್ಯ 9 ರಿಂದ 11ರ ಪೂರ ವಿಷಯಕ್ಕೆ ಗೀ. 4-21, 22 ಮತ್ತು ಇವುಗಳ ಭಾಷ್ಯ ಹಾಗೂ ಐತರೇಯ ಅವ. ಭಾ.ಭಾ. 16,17ನ್ನು ನೋಡಿರಿ.

2. ಈ ವಿಷಯಕ್ಕೆ ಮಾಂ. ಕಾ. 2-37 (ಭಾ. ಭಾ.125)ನ್ನು ನೋಡಿರಿ.

3. ಈ ವಿಷಯಕ್ಕೆ ಬೃ. 4-4-15 (ಭಾ.ಭಾ. 343) ಮತ್ತು ಗೀ. 18-55 (ಭಾ.ಭಾ. 1107)ರಲ್ಲಿ 'ಕರ್ತೃತ್ವಾದಿಕಾರಕಭೇದಬುದ್ಧಿನಿಬನ್ಧನಸರ್ವಕರ್ಮಸಂನ್ಯಾಸ ಸಹಿತಸ್ಯ' ಎಂಬಿದನ್ನು ನೋಡಿರಿ.

ಏನು ಪ್ರಜೆಯಿಂದೆಮಗೆ ? ಏನು ಕರ್ಮಗಳಿಂದೆ ?
ತಾನಲ್ಲ ಮತ್ತೆ ಪರಮಾರ್ಥದಾತ್ಮನೆಂ-
ಬೀ ನುಡಿಯ ಕೇಳಿ ಬ್ರಹ್ಮಜ್ಞ[1] ॥ 16 ॥

ವೈರಾಗ್ಯ ಬರೆ ಹೀಗೆ । ಸಾರಸಂನ್ಯಾಸವನು
ಸಾರುವರು ಜ್ಞಾನಸಾಧಕರು ಎನ್ನುವದೆ
ಸ್ವಾರಸ್ಯವಿಲ್ಲಿ ಬ್ರಹ್ಮಜ್ಞ ॥ 17 ॥

ಹೀಗೆ ಈ ಸಂನ್ಯಾಸ । ಆಗಿಹುದು ಸಾಧನೆಯು
ಯೋಗಿವರ ಜ್ಞಾನಿಗಿದು ಸಹಜಚರ್ಯೆ ಎನ-
ಲೀಗ ಇದೆ ಸಾಧ್ಯ ಬ್ರಹ್ಮಜ್ಞ ॥ 18 ॥

ಜ್ಞಾನನಿಷ್ಠೆಯ ಪಡೆಯೆ । ಮಾನವಗೆ ಸಂನ್ಯಾಸ
ತಾನೀಗ ಮುಖ್ಯಸಾಧನೆಯು ಎಂಬುದನು
ಮಾನಿಪುದು ಭಾಷ್ಯ ಬ್ರಹ್ಮಜ್ಞ[2] ॥ 19 ॥

ಜ್ಞಾನನಿಷ್ಠನಿಗಿನ್ನು । ತಾನು ಸ್ವಾಭಾವಿಕವು
ಏನಿಲ್ಲ ಕಾಮವಿದರಿಂದೆ ಸಂನ್ಯಾಸ
ಪೂರ್ಣತೆಯ ಪಡೆಗು ಬ್ರಹ್ಮಜ್ಞ ॥ 20 ॥

ಇಷ್ಟೆ ಜ್ಞಾನಿಯ ವೃತ್ತಿ । ಶ್ರೇಷ್ಠಧರ್ಮನಿವೃತ್ತಿ
ನಿಷ್ಠನಿವ ಜ್ಞಾನವೈರಾಗ್ಯಲಕ್ಷಣದಿ
ತುಷ್ಟನಿವ ನಿತ್ಯ ಬ್ರಹ್ಮಜ್ಞ[3] ॥ 21 ॥

**(ನೇರಸಂನ್ಯಾಸ)**

ಕೆಲವರಿಗೆ ಬಾಲ್ಯದಲೆ । ಬಲಿಯೆ ಈ ವೈರಾಗ್ಯ
ಕೆಲಸವೇ ಇಲ್ಲ ಗಾರ್ಹಸ್ಥ್ಯಧರ್ಮದಲಿ
ಕಳೆಯರಾಯುಷ್ಯ ಬ್ರಹ್ಮಜ್ಞ[4] ॥ 22 ॥

1. ಈ ವಿಷಯಕ್ಕೆ ಬೃ. 4–4–22ನ್ನು ನೋಡಿರಿ.

2. ಈ ವಿಷಯಕ್ಕೆ ಗೀ.. 3–1 (ಭಾ.ಭಾ. 146) ಸೂ. ಭಾ. 3–4–20 (ಭಾ.ಭಾ. 460) ಐ. ಅವ. ಭಾ.ಭಾ. 18ನ್ನು ನೋಡಿರಿ.

3. ಈ ವಿಷಯಕ್ಕೆ ಐ. ಅವ. 14ನ್ನು ನೋಡಿರಿ.

4. ಈ ವಿಷಯಕ್ಕೆ ಗೀ. 4–20 (ಭಾ. ಭಾ. 275), ಗೀ. 2–45 (ಭಾ.ಭಾ. 108)ರಲ್ಲಿ 'ಯೋ ಹಿ ಆದಿತ ಏವ....' ಎಂಬ ವಾಕ್ಯವನ್ನು ನೋಡಿರಿ.

ವಾಮದೇವರು ಶುಕರು । ಆ ಮಹಾಸಂವರ್ತ
ಸ್ವಾಮಿ ಶ್ರೀದತ್ತ ಶ್ರೀಪಾದ ನರಹರಿಯು
ಸಾಮಾನ್ಯರಲ್ಲ ಬ್ರಹ್ಮಜ್ಞ ॥ 23 ॥

ಆಚಾರ್ಯ ಶಂಕರರು । ಈಚೆಯಲಿ ರಮಣಋಷಿ
ಆಚರಿಸಿ ಲೋಕದುದ್ಧಾರಗೈದಿಹರ
ಈ ಚರ್ಯೆ ನೆನೆಗು ಬ್ರಹ್ಮಜ್ಞ ॥ 24 ॥

**(ಕ್ರಮಸಂನ್ಯಾಸ)**

ಕೆಲರು ಗಾರ್ಹಸ್ಥ್ಯದಲಿ । ಬಲು ಕರ್ಮಗಳ ಮಾಡಿ
ಬಲಿತಿರಲು ಮತ್ತೆ ವೈರಾಗ್ಯ ಸಂನ್ಯಾಸ
ಕೊಳುತಿಹರು ಕೊನೆಗೆ ಬ್ರಹ್ಮಜ್ಞ ॥ 25 ॥

ಜ್ಞಾನನಿಷ್ಠೆಯ ಮತ್ತೆ । ಮಾನಸದಿ ಪಡೆಯುತ್ತೆ
ಮೇಣಿನ್ನು ತಾವು ಪರಮಾರ್ಥಸಂನ್ಯಾಸ
ಶ್ರೇಣಿಗೇರುವರು ಬ್ರಹ್ಮಜ್ಞ ॥ 26 ॥

ಸಾಧನೆಯು ಸಂನ್ಯಾಸ । ಆಧರಿಸಿ ಶ್ರೌತವಿದು
ಸಾಧಿಸಿದ ಬಳಿಕ ಪರಮಾರ್ಥಸಂನ್ಯಾಸ
ಭೇದವಿದನರಿಗು ಬ್ರಹ್ಮಜ್ಞ[1] ॥ 27 ॥

**(ಗೃಹಸ್ಥ ಜ್ಞಾನಿಗಳು)**

ಗಾರ್ಹಸ್ಥ್ಯಧರ್ಮವನು । ನಿರ್ವಹಿಸುತಿರುವಾಗ
ಆರ್ಹತೆಯು ಬರಲು ಜ್ಞಾನಕ್ಕೆ ನಿಲ್ಲುವರು
ನಿರ್ವೇದದಿಂದೆ ಬ್ರಹ್ಮಜ್ಞ ॥ 28 ॥

ಆಗ ಕೆಲ ಪ್ರಾರಬ್ಧ । ಭೋಗದ ನಿಮಿತ್ತದಲಿ
ಹೋಗರಾ ಶ್ರೌತಸಂನ್ಯಾಸ ಸ್ವೀಕರಿಸೆ
ಆಗದಿವರಿಂದ ಬ್ರಹ್ಮಜ್ಞ ॥ 29 ॥

ಹೀಗಿದ್ದರೂ ಸಹಿತ । ಆಗುವದು ಈ ಜ್ಞಾನ
ಈಗಿದಕೆ ಶಂಕೆ ಏನಿಲ್ಲ ಕರ್ಮಗಳ
ಸಾಗಿಸುತಲಿರಲು ಬ್ರಹ್ಮಜ್ಞ ॥ 30 ॥

1. ಪದ್ಯ 25 ರಿಂದ 27ರ ಪೂರ ವಿಷಯಕ್ಕೆ ಗೀ. 4–19 (ಭಾ. ಭಾ. 273) 'ಯಸ್ತು ಕರ್ಮಾದೌ....' ಎಂಬ ವಾಕ್ಯಭಾಗವನ್ನು ಮತ್ತು ಗೀ. 5–1 (ಭಾ.ಭಾ. 325) 'ತಸ್ಮಾದನಾತ್ಮವಿತ್ ಕರ್ತೃಕಯೋರೇವ....' ಎಂಬ ವಾಕ್ಯವನ್ನೂ ಮತ್ತು ಗೀ. 2–54 (ಭಾ. ಭಾ. 108) 'ಯಶ್ಚ ಕರ್ಮಯೋಗೇನ...' ಎಂಬ ವಾಕ್ಯಭಾಗವನ್ನೂ ನೋಡಿರಿ.

ತೋರುವವು ಕರ್ಮಗಳು । ತೋರಿಕೆಗೆ ಇವನಲ್ಲಿ
ಸೇರಿಲ್ಲ ನಿಜದಿ ಇವನಿಗವು ಬೊಮ್ಮವೇ
ಬೇರೆ ಏನಿಲ್ಲ ಬ್ರಹ್ಮಜ್ಞ ॥ 31 ॥

ಜ್ಞಾನದಲಿ ನೆಲೆನಿಂತ । ಜ್ಞಾನಿಯಾ ಕರ್ಮಗಳು
ತಾನಾಗಿ ಲಯವ ಹೊಂದುವವು ಬಂಧಿಸವು
ಜ್ಞಾನಿಯಿವ ಮುಕ್ತ ಬ್ರಹ್ಮಜ್ಞ ॥ 32 ॥

ಬ್ರಹ್ಮವೇ ಅರ್ಪಣೆಯು । ಬ್ರಹ್ಮವೇ ಅಗ್ನಿಯದು
ಬ್ರಹ್ಮವೇ ಹವಿಯು ದೇವತೆಯು ಫಲವೆಲ್ಲ
ಬ್ರಹ್ಮವಾಗಿಹುದು ಬ್ರಹ್ಮಜ್ಞ ॥ 33 ॥

ಫಲದಾಶೆ ಇಲ್ಲಿಲ್ಲ । ಬಲಿತ ಸಂಗವದಿಲ್ಲ
ಸಲೆ ಬ್ರಹ್ಮಬುದ್ಧಿ ಇರುತಿರುವ ಕರ್ಮವಿದು
ಹುಲುಕರ್ಮವಲ್ಲ ಬ್ರಹ್ಮಜ್ಞ[1] ॥ 34 ॥

### (ಮುಕ್ತಿ ಜ್ಞಾನಗಳು ಸಮಾನ)

ಪರಮಹಂಸನೆ ಇರಲಿ । ವರಗೃಹಸ್ಥನೆ ಇರಲಿ
ಬರದಿಲ್ಲಿ ಭೇದ ಜ್ಞಾನಕ್ಕೆ ಮುಕ್ತಿಗೂ
ಇರದು ಅಂತರವು ಬ್ರಹ್ಮಜ್ಞ ॥ 35 ॥

ಹೀಗಿರುವ ಜ್ಞಾನಿಗಳು । ಬೇಗ ತಮತಮಗುಚಿತ
ಭೋಗಕ್ಕೆ ತಕ್ಕ ಕರ್ಮಗಳಲಿರುವಂತೆ
ಆಗುವದು ಭಾಸ ಬ್ರಹ್ಮಜ್ಞ[2] ॥ 36 ॥

ಇದು ಲೋಕಸಂಗ್ರಹದ । ಹದನಾದ ಕರ್ಮವೆನೆ
ಒದಗಿಹುದು ಸಹಜ ವರ್ತನೆಯು ಸದ್ಧರ್ಮ
ವಿದು ಜ್ಞಾನಿಯಲ್ಲಿ ಬ್ರಹ್ಮಜ್ಞ ॥ 37 ॥

ಮಿಕ್ಕವರು ಇವನನ್ನೆ । ಲೆಕ್ಕಕ್ಕೆ ಹಿಡಿಯುತ್ತೆ
ಅಕ್ಕರದಿ ನಡೆಯೆ ಸನ್ಮಾರ್ಗಶಾಂತಿಗಳು
ಸಿಕ್ಕುವವು ದಿಟದಿ ಬ್ರಹ್ಮಜ್ಞ ॥ 38 ॥

---

1. ಪದ್ಯ 28 ರಿಂದ 34ರವರೆಗಿನ ವಿಷಯಕ್ಕೆ ಗೀ. 4–19 (ಭಾ. ಭಾ. 273, 274, 280, 281, 282, 283), ಗೀ. 2–10 (ಭಾ.ಭಾ. 12)ನ್ನೂ ನೋಡಿರಿ.

2. ಪದ್ಯ 35, 36ರ ವಿಷಯಕ್ಕೆ ಗೀ. 4–19 (ಭಾ.ಭಾ. 272) 'ಮುಧೈವ ಚೇಷ್ಟಾಮಾತ್ರಾ ಅನುಷ್ಠೀಯನ್ತೇ....' ಮುಂತಾದ ವಾಕ್ಯವನ್ನು ನೋಡಿರಿ.

ಹಿರಿಯರಾ ಸಹಜನಡೆ । ಕಿರಿಯರಿಗೆ ಆದರ್ಶ
ಧರೆಯೊಳಗೆ ಹೀಗೆ ಪರಮಾರ್ಥಜ್ಞಾನಿಯೇ
ಪರಮ ಆದರ್ಶ ಬ್ರಹ್ಮಜ್ಞ[1] ॥ 39 ॥

ಜನಕರಾಯನು ವ್ಯಾಧ । ಮುನಿ ಯಾಜ್ಞವಲ್ಕ್ಯಾದಿ
ವಿನುತರೀ ಪರಿಯ ಜ್ಞಾನಿಗಳು ಗಾರ್ಹಸ್ಥ್ಯ-
ತನವ ತೋರಿದರು ಬ್ರಹ್ಮಜ್ಞ ॥ 40 ॥

ಋಷಿಗಳಲಿ ಬಹುಜನರು । ವಸುದೇವಸುತ ಕೃಷ್ಣ
ವಸುಮತಿಯನಾಳ್ದ ಕ್ಷತ್ರಿಯರನೇಕರೂ
ಎಸೆದರಿದರಲ್ಲಿ ಬ್ರಹ್ಮಜ್ಞ[2] ॥ 41 ॥

ತೋರಿಕೆಗೆ ಎರಡು ಬಗೆ । ತೋರಿದರು ಜ್ಞಾನಿಗಳು
ಬೇರಲ್ಲವಿವರು ಪರಮಬೊಮ್ಮಮಾತ್ರವೇ
ಧೀರರಿದನರಿಗು ಬ್ರಹ್ಮಜ್ಞ[3] ॥ 42 ॥

ಇಬ್ಬರಿರೆ ನಿದ್ರೆಯಲಿ । ಒಬ್ಬ ಕನವರಿಸುವನು
ಒಬ್ಬ ಬಲುಶಾಂತನಾಗಿಹನು ಇದು ಅವರಿ-
ಗಿಬ್ಬರಿಗು ಇಲ್ಲ ಬ್ರಹ್ಮಜ್ಞ ॥ 43 ॥

ಬೇರಾಗಿ ನೋಡುವಾ । ಮೂರನೆಯ ಪುರುಷನಿಗೆ
ತೋರಿರುವ ತೆರದಿ ಈ ಭೇದವಿಲ್ಲಿಯೂ
ತೋರ್ಪುದಿವರಲ್ಲಿ ಬ್ರಹ್ಮಜ್ಞ ॥ 44 ॥

ಜ್ಞಾನನಿಷ್ಠೆಯು ಒಂದೆ । ಏನಿಲ್ಲ ವ್ಯತ್ಯಾಸ
ಜ್ಞಾನಿಗಳ ಮುಕ್ತಿಯಲ್ಲಿಯೂ ವ್ಯತ್ಯಾಸ-
ವೇನಿಲ್ಲ ಕೇಳಿ ಬ್ರಹ್ಮಜ್ಞ ॥ 45 ॥

**(ಈಗಲೂ ಜ್ಞಾನವಾಗುವದು ಸಾಧ್ಯ)**

ಹಿಂದಿನವರಂತೆಯೇ । ಇಂದಿಗೂ ಈ ಜ್ಞಾನ
ಬಂದಪುದು 'ನಾನೆ ಪರವಸ್ತು' ಸಂಸಾರ
ಬಂದಿಲ್ಲವೆಂದು ಬ್ರಹ್ಮಜ್ಞ ॥ 46 ॥

1. ಪದ್ಯ 37 ರಿಂದ 39ರ ವಿಷಯಕ್ಕೆ ಗೀ. 4-20 (ಭಾ.ಭಾ. 274)ರಲ್ಲಿ 'ತತೋ ನಿರ್ಗಮಾಸಂಭವಾತ್' ಎಂಬ ವಾಕ್ಯವನ್ನೂ ಇದರ ಟಿಪ್ಪಣಿಗಳನ್ನೂ ನೋಡಿರಿ.

2. ಪದ್ಯ 40, 41ರ ವಿಷಯಕ್ಕೆ ಗೀ. 2-10 (ಭಾ.ಭಾ. 12ರಲ್ಲಿ) 'ಯಥಾ ಭಗವತಃ....' ಎಂಬ ವಾಕ್ಯಭಾಗವನ್ನೂ ಹಾಗೂ (ಭಾ.ಭಾ. 13)ನ್ನೂ ನೋಡಿರಿ.

3. ಈ ವಿಷಯಕ್ಕೆ 36ನೆಯ ಪದ್ಯದ ಟಿಪ್ಪಣಿಯನ್ನು ನೋಡಿರಿ.

ವೈರಾಗ್ಯ ಗುರುಬೋಧೆ । ಸಾರ ತತ್ತ್ವವಿವೇಕ
ಸೇರಿದರೆ ಜ್ಞಾನ ಬರುವದಿದು ಖಂಡಿತವು
ಬೇರಿಲ್ಲವಿದಕೆ ಬ್ರಹ್ಮಜ್ಞ ॥ 47 ॥

**(ಆಕ್ಷೇಪ)**

ವಾಮದೇವ ಮಹಾತ್ಮ । ಈ ಮನುಜರಲ್ಲರಿರೆ
ಆ ಮಹಾಜ್ಞಾನ ಬರಬಹುದೆ? ಈ ದಿನದಿ
ಸಾಮಾನ್ಯಜನಕೆ ಬ್ರಹ್ಮಜ್ಞ ॥ 48 ॥

**(ಸಮಾಧಾನ)**

ಬ್ರಹ್ಮವಿಜ್ಞಾನದಲಿ । ಬ್ರಹ್ಮದಲಿ ವ್ಯತ್ಯಾಸ
ಒಮ್ಮೆಯೂ ಇಲ್ಲ ಈಗಲೂ ವಿಜ್ಞಾನ
ಸಮ್ಮತಿಪುದಿಲ್ಲಿ ಬ್ರಹ್ಮಜ್ಞ ॥ 49 ॥

ವಿಜ್ಞಾನ ಬಂದಾಗ । ಅಜ್ಞಾನವಿರದಲ್ಲಿ
ಸುಜ್ಞಾನನಿಷ್ಠೆ ಸರ್ವರಿಗು ಸಮವಹುದು
ಸುಜ್ಞರಭಿಮತವು ಬ್ರಹ್ಮಜ್ಞ ॥ 50 ॥

ಭಾಷ್ಯದಲಿ ಈ ಮಾತು । ಲೇಸಾಗಿ ಬರೆದಿಹರು
ಆಶಯವನಿದನು ತಿಳಿಯಲ್ಕೆ ಸಂಶಯದ
ದೋಷ ದೂರಹುದು ಬ್ರಹ್ಮಜ್ಞ[1] ॥ 51 ॥

**(ತಪ್ಪುಗ್ರಹಿಕೆಗಳು)**

ಆಗದಾತ್ಮಜ್ಞಾನ । ಈಗಿನಾ ಕಾಲದಲಿ
ಸಾಗದಿದು ಯತ್ನವೆನ್ನುತ್ತೆ ಹೆದರಿಸುವ
ಸೋಗು ಕೆಲವರದು ಬ್ರಹ್ಮಜ್ಞ ॥ 52 ॥

ಕೆಲರು ಜ್ಞಾನಿಗಳಲ್ಲಿ । ಹಲವು ಮೆಟ್ಟಲುಗಳನು
ತಿಳುಹುವರು ಬೋಧಮಾಡುತ್ತ ಭೇದಗಳ
ಬಳಸುತಿಹರಿಲ್ಲಿ ಬ್ರಹ್ಮಜ್ಞ ॥ 53 ॥

1. ಪದ್ಯ 46 ರಿಂದ 51ರವರೆಗಿನ ವಿಷಯಕ್ಕೆ ಬೃ. 1-4-10 (ಭಾ.ಭಾ. 166)ರಲ್ಲಿ 'ಏತಸ್ಮಿನ್ನಪಿ ವರ್ತಮಾನಕಾಲೇ' ಎಂಬ ವಾಕ್ಯವನ್ನು ನೋಡಿರಿ.

ಬ್ರಹ್ಮಮವೇತ್ತನು ಮತ್ತೆ । ಬ್ರಹ್ಮವಿದ್ವರನೆಂದೂ
ಬೊಮ್ಮವನು ತಿಳಿದ ಜನರಲಿ ವರಿಷ್ಠನೆನೆ
ಸುಮ್ಮನೀ ಭೇದ ಬ್ರಹ್ಮಜ್ಞ[1] ॥ 54 ॥

ಇಲ್ಲವೀ ಭೇದಗಳು । ಬಲ್ಲಂತೆ ಭಾಷ್ಯದಲಿ
ಎಲ್ಲವೂ ನಿಜದ ಪಥಬಿಟ್ಟ
ಗುಲ್ಲುಗಳು ಕೇಳಿ ಬ್ರಹ್ಮಜ್ಞ ॥ 55 ॥

(ಜ್ಞಾನಿ ಎಂದರೇನು?)

ಜ್ಞಾನಿ ಎನ್ನುವ ಮಾತು । ತಾನು ಸಾಪೇಕ್ಷೆಯಲಿ
ಮಾನವಗೆ ಶ್ರುತಿಯು ತಿಳಿಸಲ್ಕೆ ಕಲ್ಪಿಸಿದ
ಮೇಣಿದಾರೋಪ ಬ್ರಹ್ಮಜ್ಞ ॥ 56 ॥

ನಾನು ಜ್ಞಾನಿಯು ಎಂಬ । ಭಾನವಿನ್ನವಗಿಲ್ಲ
ನಾನೆಂಬ ಸೊಲ್ಲೆ ಅವಗಿಲ್ಲದಿರುವಾಗ
ಏನುಂಟು ಇನ್ನು ? ಬ್ರಹ್ಮಜ್ಞ ॥ 57 ॥

ನಿಜವಾಗಿ ಅಶರೀರಿ । ಅಜನಿವನು ಈಗಲೇ
ತ್ರಿಜಗತ್ತು ಜೀವರಿವರೆಲ್ಲ ಇವಗಿನ್ನು
ಅಜವಾದ ಬೊಮ್ಮ ಬ್ರಹ್ಮಜ್ಞ[2] ॥ 58 ॥

ಜ್ಞಾನಿಯಿವ ನಿಜವಾಗಿ । ತಾನು ಆತ್ಮನೆ ಎಂದು
ದಾನವರ ವೈರಿ ಶ್ರೀಕೃಷ್ಣ ಪೇಳಿಹುದು
ಸ್ವಾನುಭವದೃಷ್ಟಿ ಬ್ರಹ್ಮಜ್ಞ[3] ॥ 59 ॥

ದೇಹವೇ ಇಲ್ಲವಗೆ । ದೇಹಪಾತವದೆಲ್ಲಿ ?
ದೇಹವಿದು ತೊಲಗೆ ಮೋಕ್ಷವೆಂಬೀ ತೆರದ
ಊಹೆ ಸರಿಯಲ್ಲ ಬ್ರಹ್ಮಜ್ಞ ॥ 60 ॥

ಈ ನುಡಿಯ ಭಾಷ್ಯದಲಿ । ಸಾನುರಾಗದಿ ಬರೆದು
ಜ್ಞಾನಿಗಳ ನಿಲುವ ತಿಳಿಸಿರುವ ಶಂಕರರ
ವಾಣಿಯನು ಕೇಳಿ ಬ್ರಹ್ಮಜ್ಞ ॥ 61 ॥

---

1. ಪದ್ಯ 53–54ರ ವಿಷಯಕ್ಕೆ ಶಾಂ.ವೇ.ಪ್ರ. 19ನೇ ಪುಟ 18ನೇ ಪ್ರಘಟ್ಟವನ್ನು ನೋಡಿರಿ.

2. ಈ ವಿಷಯಕ್ಕೆ ಸೂ. ಭಾ. 1–1–4 (ಭಾ. ಭಾ. 60)ನ್ನು ನೋಡಿರಿ.

3. ಈ ವಿಷಯಕ್ಕೆ ಗೀ. 7–18 (ಭಾ. ಭಾ. 478)ನ್ನು ನೋಡಿರಿ.

ವ್ಯಕ್ತಿಯೇ ಆಲ್ಲಿವನು । ಮುಕ್ತನಾಗಿಹ ಜ್ಞಾನಿ
ಆತ್ಮನಿವ ನಿತ್ಯನದ್ವಯನು ಪರಮಾರ್ಥ
ತತ್ತ್ವದೃಷ್ಟಿಯಲಿ ಬ್ರಹ್ಮಜ್ಞ[1] ॥ 62 ॥

ಅವನ ದೇಹವ ಕಂಡು । ತವೆ ವ್ಯಕ್ತಿ ಎಂದೆನುತ
ವ್ಯವಹರಿಪ ಜನಕೆ ತಿಳಿಸುವದು ಶಾಸ್ತ್ರವದು
ಇವ ಜ್ಞಾನಿಯೆಂದು ಬ್ರಹ್ಮಜ್ಞ ॥ 63 ॥

ಇವನ ಚರ್ಯೆಯ ಪೇಳಿ । ಇವನಂತೆ ಆಗಲ್ಕೆ
ವ್ಯವಧಾನವಿತ್ತು ಬೋಧಿಪುದು ಈಗಿಲ್ಲಿ
ವ್ಯವಹಾರದೃಷ್ಟಿ ಬ್ರಹ್ಮಜ್ಞ ॥ 64 ॥

### (ಪ್ರಾರಬ್ಧವಿಚಾರ)

ಪ್ರಾರಬ್ಧವನು ಸಹಿತ । ಈ ರೀತಿಯಲೆ ಪೇಳಿ
ತೋರಿಹರು ಭಾಷ್ಯದೊಳಗೆರಡು ಬಗೆಗಳನು
ಸಾರವಿದನರಿಗು ಬ್ರಹ್ಮಜ್ಞ[2] ॥ 65 ॥

ಈ ರಹಸ್ಯವ ಬಿಟ್ಟು । ಜಾರುವರು ತತ್ತ್ವದಿಂ
ಸೇರಿಹುದು ದೇಹಪ್ರಾರಂಬ್ಧ ಜ್ಞಾನಿಗೆಂ-
ಬೀ ರೂಢಿ ತಪ್ಪು ಬ್ರಹ್ಮಜ್ಞ ॥ 66 ॥

ನಾನು ಜ್ಞಾನಿಯು ನನಗೆ । ತಾನುಂಟು ಪ್ರಾರಬ್ಧ
ಜ್ಞಾನಿಗೀ ಭಾನ ಇರದಿಲ್ಲಿ ಎಂದಿಗೂ
ಈ ನಿಜವನರಿಗು ಬ್ರಹ್ಮಜ್ಞ ॥ 67 ॥

ಒಬ್ಬನು ನಿವೃತ್ತಿಪರ । ಒಬ್ಬನು ಪ್ರವೃತ್ತಿಪರ
ಇಬ್ಬಗೆಯು ಇಲ್ಲ ನಿಜವಾಗಿ ಬೊಮ್ಮವೇ
ಇಬ್ಬರೂ ಕೇಳಿ ಬ್ರಹ್ಮಜ್ಞ ॥ 68 ॥

ಹೊರಗಿನಾ ಜನಗಳಿಗೆ । ಅರಿಯಲ್ಕೆ ಪ್ರಾರಬ್ಧ
ಪರಿಯನ್ನು ಹೇಳಿ ತಿಳಿಸಿದುದು ಶಾಸ್ತ್ರದಲಿ
ಪರಮಾರ್ಥವಲ್ಲ ಬ್ರಹ್ಮಜ್ಞ ॥ 69 ॥

---

1. ಪದ್ಯ 60 ರಿಂದ 63ರ ವಿಷಯಕ್ಕೆ ಸೂ. ಭಾ. 1–1–4 (ಭಾ. ಭಾ. 58) ನ್ನು ಸೂ. ಭಾ. 4–1–13 (ಭಾ. ಭಾ. 528)ನ್ನು ನೋಡಿರಿ.

2. ಈ ವಿಷಯಕ್ಕೆ ಸೂ. ಭಾ. 3–3–32 (ಭಾ. ಭಾ. 380) 'ಯಥಾ ಚ ವರ್ತಮಾನಾ ಬ್ರಹ್ಮವಿದಃ' ಎಂಬ ವಾಕ್ಯವನ್ನು ನೋಡಿರಿ.

## (ನಿಷಿದ್ಧಾಚರಣೆ ಸಲ್ಲದು)

ಹೇಗೆಯೇ ಇದ್ದರೂ । ಈಗ ಜ್ಞಾನಿಗಳಿಂದೆ
ಆಗದದು ದುರುಳವರ್ತನೆಯು ಎಂದಿಗೂ
ಸಾಗದೆಂದಿಹರು ಬ್ರಹ್ಮಜ್ಞ ॥ 70 ॥

ಕಾಮನೆಯ ಅತಿರೇಕ । ತಾ ಮಾಡಿಸುವದಿಲ್ಲಿ
ಸೀಮಿತವ ಮೀರ್ದ ದುರ್ವರ್ತನವನೆಂಬು-
ದೀ ಮಾತು ಸಹಜ ಬ್ರಹ್ಮಜ್ಞ ॥ 71 ॥

ಜ್ಞಾನದಿಂ ಕಾಮನೆಯು । ತಾನು ತೊಲಗಿದ ಬಳಿಕ
ಹೀನಾಯವಾದ ಕೃತ್ಯಕ್ಕೆ ಕಾರಣವು
ಏನಿಲ್ಲ ಕೇಳಿ ಬ್ರಹ್ಮಜ್ಞ ॥ 72 ॥

ಧರ್ಮವೇ ಬೇಡೆಂದು । ಸುಮ್ಮನಿರುವವಗಿನ್ನು
ಧರ್ಮಕ್ಕು ವೈರವಾಗಿರುವ ಪಾಪವಾ
ಕರ್ಮವೊಂದುಂಟೆ ? ಬ್ರಹ್ಮಜ್ಞ ॥ 73 ॥

ಪರಮಾರ್ಥಮಾರ್ಗಕ್ಕೆ । ಬರುವಾಗಲೇ ಪುಣ್ಯ
ಪರನಾಗಿ ಪಾಪಬಿಟ್ಟವನು ಕೊನೆಯಲಿ
ದುರುಳನಾಗುವನೆ ? ಬ್ರಹ್ಮಜ್ಞ ॥ 74 ॥

ಇರುಳು ಭಾವಿಯ ಕಂಡು । ಸರಿದವನು ಹಗಲಿನಲಿ
ಉರುಳುವನು ಎಂಬ ಮಾತಾಯ್ತು ದುರಿತದಾ-
ಚರಣೆ ವಿಬುಧಂಗೆ ಬ್ರಹ್ಮಜ್ಞ[1] ॥ 75 ॥

ಐತರೆಯಭಾಷ್ಯದಲಿ । ಖ್ಯಾತವಹ ಗೀತೆಯಲಿ
ಮಾತಿದುವೆ ಬರ್ಕು ಸೂತ್ರಾದಿ ಭಾಷ್ಯದಲಿ
ಪ್ರೀತಿಯಿಂ ನೋಳ್ಕು ಬ್ರಹ್ಮಜ್ಞ[2] ॥ 76 ॥

ಒಟ್ಟಿನಲಿ ಜ್ಞಾನಿಯಲಿ । ದುಷ್ಟವರ್ತನೆ ಇಲ್ಲ
ಇಷ್ಟನ್ನು ಮೊದಲು ತಿಳಿಯುವದು ಸಾಧಕರು
ಗುಟ್ಟು ಇದರಲ್ಲಿ ಬ್ರಹ್ಮಜ್ಞ ॥ 77 ॥

---

1. ಈ ವಿಷಯಕ್ಕೆ ಛಾಂ. 2-23-1 (ಭಾ. ಭಾ. 182)ರಲ್ಲಿ 'ನ ಚ ಪ್ರತಿಷಿದ್ಧ ಸೇವಾಪ್ರಾಪ್ತಿಃ.... ನ ಹಿ ರಾತ್ರೌ ಕೂಪಕಣ್ಟಕೇ' ಎಂಬ ವಾಕ್ಯವನ್ನು ನೋಡಿರಿ.

2. ಪದ್ಯ 70 ರಿಂದ 76ರವರೆಗಿನ ವಿಷಯಕ್ಕೆ ಐ.ಅವ.ಭಾ.ಭಾ. 25ನ್ನೂ ಗೀ. 4-21 (ಭಾ. ಭಾ. 277)ನ್ನೂ ನೋಡಿರಿ.

ತನ್ನತನ್ನಯ ಧರ್ಮ । ಚೆನ್ನಾಗಿ ನಡೆಸುವದೆ
ಇನ್ನು ಈ ಜ್ಞಾನಿವರ್ಯರಿಗೆ ಸ್ವಾಭಾವ್ಯ-
ವೆನ್ನುವದು ಸಹಜ ಬ್ರಹ್ಮಜ್ಞ ॥ 78 ॥

(ಸುರೇಶ್ವರರ ವಚನ)

ರಾಗವಿದು ಅಜ್ಞನಿಗೆ । ಆಗಿಹುದು ಲಕ್ಷಣವು
ರಾಗವಿದು ಜ್ಞಾನಿಪುರುಷನಲಿ ತೋರ್ದರೂ
ಆಗಿಲ್ಲ ಹಾನಿ ಬ್ರಹ್ಮಜ್ಞ[1] ॥ 79 ॥

ಈ ನುಡಿ ಸುರೇಶ್ವರರ । ವಾಣಿ ಇದರೊಳಗುಟ್ಟು
ಏನೆಂದು ತಿಳಿಯದಿದ ಹೇಳಿ ಜನರಿಂಗೆ
ಹಾನಿಮಾಡುವರು ಬ್ರಹ್ಮಜ್ಞ ॥ 80 ॥

ಹಿಂದೆ ಹೇಳಿದ ತೆರದಿ । ಬಂದಿರಲು ಪ್ರಾರಬ್ಧ
ಬಂಧವದು ಜ್ಞಾನಿ ಗಾರ್ಹಸ್ಥ್ಯದಲ್ಲಿರಲು
ಹೊಂದುವದು ಕರ್ಮ ಬ್ರಹ್ಮಜ್ಞ ॥ 81 ॥

ತೋರಿಕೆಯ ಈ ಕರ್ಮ । ಧೀರನಿವನಾಚರಿಸೆ
ತೋರುವವು ರಾಗ ಮೊದಲಾದವಿರುವಂತೆ
ಬೇರೆ ಇರುತಿಹಗೆ ಬ್ರಹ್ಮಜ್ಞ ॥ 82 ॥

ಆ ನಿವೃತ್ತಿಯ ಧರ್ಮ । ಜ್ಞಾನಿಯಲಿ ತೋರ್ಪಾಗ
ಕಾಣುವವು ಭಿಕ್ಷೆ ಶೌಚಾದಿಯಲಿ ರಾಗ
ಮೇಣಾದಿ ಗುಣವು ಬ್ರಹ್ಮಜ್ಞ ॥ 83 ॥

ಈರ್ವರಲು ರಾಗಾದಿ । ಸರ್ವವಿರುವಂದದಲಿ
ತೋರ್ವವಿವು ನಿಜದಿ ಅವರ್ಗಿಲ್ಲವೆಂಬುದಿದು
ನಿರ್ವಾರ್ಯವಿಲ್ಲಿ ಬ್ರಹ್ಮಜ್ಞ[2] ॥ 84 ॥

ಇದಕಾಗಿ ಬಂದಿಹುದು । ಮುದರಿಂದ ವಚನವಿದು
ಇದನೀಗ ಹಿಡಿದು ರಾಗಾದಿವಶರಾಗೆ
ಹದಗೆಡುವುದಿಲ್ಲಿ ಬ್ರಹ್ಮಜ್ಞ ॥ 85 ॥

---

1. ಈ ವಿಷಯಕ್ಕೆ 'ರಾಗೋ ಲಿಂಗಮಬೋಧಸ್ಯ....' ಎಂಬ ವಾರ್ತಿಕವನ್ನು ನೋಡಿರಿ.

2. ಈ ವಿಷಯಕ್ಕೆ ಗೀ. 2-10 (ಭಾ. ಭಾ. 12ರಲ್ಲು) 'ಯಸ್ಯ ತು' ಎಂಬ ವಾಕ್ಯವನ್ನು ನೋಡಿರಿ.

ರಾಗಕ್ರೋಧಗಳನ್ನು । ತ್ಯಾಗಮಾಡಿದವಗೇ
ಆಗುವದು ಜ್ಞಾನವೆಂಬುದೀ ಸಿದ್ಧಾಂತ
ನೀಗದಿದು ಎಂದು ಬ್ರಹ್ಮಜ್ಞ[1] ॥ 86 ॥

ಕಾರಿಕೆಯಲೀ ಮಾತು । ಸಾರಿರುವರೆರಡು ಕಡೆ
ಸಾರಿಹನು ಕೃಷ್ಣ ಗೀತೆಯಲಿ ಹಲವು ಸಲ
ಧೀರರರಿದನರಿಗು ಬ್ರಹ್ಮಜ್ಞ[2] ॥ 87 ॥

(ಪುರಾಣಗಳ ಅರ್ಥ)

ಪೌರಾಣಗಳಲಿರುವ । ಧೀರ ಋಷಿಗಳಲಿನ್ನು
ತೋರಿಹವು ಸಿಟ್ಟುಮೋಹಗಳು ಲೋಕಕ್ಕೆ
ತೋರಲ್ಕೆ ದಾರಿ ಬ್ರಹ್ಮಜ್ಞ ॥ 88 ॥

ಮಕ್ಕಳಿಗೆ ಬುದ್ಧಿಯನು । ಅಕ್ಕರದಿ ಪೇಳ್ವಾಗ
ತಕ್ಕಂತೆ ಸಿಟ್ಟುಮಾಡುತಿಹ ತಂದೆಯಲಿ
ಹೊಕ್ಕಿಲ್ಲ ದ್ವೇಷ ಬ್ರಹ್ಮಜ್ಞ ॥ 89 ॥

ಇದರಂತೆ ಧರ್ಮಕ್ಕೆ । ಒದಗಿರಲು ದುರ್ದಶೆಯು
ಬದಿಗೊತ್ತಲದನು ದೊಡ್ಡವರ ನಡತೆಯಲಿ
ಒದಗಬಹುದಿದುವೆ ಬ್ರಹ್ಮಜ್ಞ ॥ 90 ॥

ಕಂಡು ಈ ಚರಿತೆಗಳ । ಪುಂಡತನ ಮಾಳ್ಪುದಕೆ
ಖಂಡಿತದಿ ಬಳಸಿ ಹೇಳುವದು ನಡೆಯುವದು
ಭಂಡತನವಲ್ತೆ ? ಬ್ರಹ್ಮಜ್ಞ[3] ॥ 91 ॥

(ಪ್ರಾರಬ್ಧನಿಮಿತ್ತಗಳು)

ದರ್ಮವೊಂದೇ ನಿಮಿತ್ತ । ಮರ್ಮವನು ಅರಿಯಲ್ಕೆ
ಕರ್ಮಗಳನೆಲ್ಲ ಕೈಬಿಟ್ಟು ಸಂನ್ಯಾಸ-
ಧರ್ಮ ಸ್ವೀಕರಿಸೆ ಬ್ರಹ್ಮಜ್ಞ ॥ 92 ॥

ವೃದ್ಧ ತಾಯ್ತಂದೆಗಳು । ಇದ್ದಿರಲು ರಾಜ್ಯದಲಿ
ಎದ್ದು ತಾ ಹೋಗೆ ಧರ್ಮಕ್ಕೆ ಚ್ಯುತಿಬರುವ
ಬದ್ಧ ಸಂದರ್ಭ ಬ್ರಹ್ಮಜ್ಞ ॥ 93 ॥

---

1. ಈ ವಿಷಯಕ್ಕೆ ಗೀ. 4-10ನ್ನು ನೋಡಿರಿ.
2. ಈ ವಿಷಯಕ್ಕೆ ಮಾಂ. ಕಾ. 2-35ನ್ನು ನೋಡಿರಿ.
3. ಈ ವಿಷಯಕ್ಕೆ ಪಂ. 7-156ನ್ನು ನೋಡಿರಿ.

ಪರಮಹಂಸಾಶ್ರಮಕೆ । ಸರಿಯಿರದ ದೇಹವಿರೆ
ತರವಲ್ಲವಿವಗೆ ಸಂನ್ಯಾಸಸ್ವೀಕಾರ
ಉರುತರದ ದುಃಖ ಬ್ರಹ್ಮಜ್ಞ ॥ 94 ॥

ಆ ಸುವಾಸಿನಿಯರಿಗೆ । ಭಾಸಿಸಲು ಜ್ಞಾನವಿದು
ಲೇಸಲ್ಲ ಪರಮಸಂನ್ಯಾಸವೆಂಬ ಪರಿ
ಈಸು ಕಾರಣವು ಬ್ರಹ್ಮಜ್ಞ ॥ 95 ॥

ಇಂಥ ಸಂದರ್ಭದಲಿ । ಸಂತರೀ ಜ್ಞಾನಿಗಳು
ಮುಂತೆಯಿಹ ರೀತಿಯನುಸರಿಸಿ ನಡೆದರೂ
ಅಂತಹುದು ಮುಕ್ತಿ ಬ್ರಹ್ಮಜ್ಞ ॥ 96 ॥

ಇದೆ ನಿಮಿತ್ತಕೆ ಅರ್ಥ । ಇದ ತಿಳಿಯದಿರೆ ವ್ಯರ್ಥ
ಪದಗಳನು ತಿರಿಚಿ ಅರ್ಥವನು ಮನವಾರೆ
ಬದಲಿಪುದನರ್ಥ ಬ್ರಹ್ಮಜ್ಞ[1] ॥ 97 ॥

**(ತಪ್ಪು ಗ್ರಹಿಕೆಗಳು)**

ಪ್ರಾರಬ್ಧವೆನ್ನುವೀ । ಮೂರಕ್ಕರವ ಹಿಡಿದು
ತೂರಿಸಿದರಿಲ್ಲಿ ಗೊಂದಲವ ಕೆಲಜನರು
ದಾರಿತಪ್ಪಿದರು ಬ್ರಹ್ಮಜ್ಞ ॥ 98 ॥

ಏನು ಮಾಡಿದರೇನು ? ಜ್ಞಾನಿಯಿವ ಕೃತಕೃತ್ಯ
ತಾನೀಗ ಎಲ್ಲ ಪ್ರಾರಬ್ಧವೆಂಬ ನೆಪ–
ದಾಣತಿಯು ಬಂತು ಬ್ರಹ್ಮಜ್ಞ ॥ 99 ॥

ಸ್ವೇಚ್ಛಾದಿ ಬಗೆಬಗೆಯ । ತುಚ್ಛಪ್ರಾರಬ್ಧಗಳ
ಸ್ವಚ್ಛಂದದಿಂದ ತಿಳಿಸಲ್ಕೆ ಆಚರಣೆ
ಸ್ವೆಚ್ಛೇಗೆ ಬಂತು ಬ್ರಹ್ಮಜ್ಞ[2] ॥ 100 ॥

ಜನಕರಾಜನ ನೆಪವ । ಜನಗಳಿಗೆ ಹೇಳುತ್ತ
ಮನವಾರೆ ನಡೆದು ವೇದಾಂತಬೋಧಿಸುವ
ಬಣವು ಹೆಚ್ಚಾಯ್ತು ಬ್ರಹ್ಮಜ್ಞ ॥ 101 ॥

---

1. ಪದ್ಯ 92 ರಿಂದ 97ರ ವಿಷಯಕ್ಕೆ ಸ. ಸ. ಉ. ಪುಟ 349ನ್ನು ಭ. ಗೀ ಉ. (ಭಾ. 1) ಪುಟ 170 ರಿಂದ 180ರವರೆಗಿನ ವಿಷಯಗಳನ್ನೂ ನೋಡಿರಿ.

2. ಈ ವಿಷಯಕ್ಕೆ ಪಂ. 7–152ನ್ನು ನೋಡಿರಿ.

ಜ್ಞಾನಿಯನು ಹೊಗಳಿರುವ । ತಾಣದಾ ಶ್ರುತಿಗಳಲಿ
ಕಾಣುವಾ ನುಡಿಯ ಹೇಳುತ್ತೆ ಕೆಲಗ್ರಂಥ
ಹಾನಿಮಾಡಿಹವು ಬ್ರಹ್ಮಜ್ಞ ॥ 102 ॥

ಸಂದರ್ಭಗಳ ನೋಡಿ । ಬಂಧುರದ ಅರ್ಥಗಳ
ಚಂದದಲಿ ತಿಳಿಯೆ ಭಾಷ್ಯಾದಿಗಳ ನೆರವಿ-
ನಿಂದಲೇ ಬಹುದು ಬ್ರಹ್ಮಜ್ಞ ॥ 103 ॥

(ಛಾಂದೋಗ್ಯದ ಸಂದರ್ಭ)

ಕ್ರಮಮುಕ್ತಿ ಪಡೆವವರು । ಸುಮನಸರ ನೆರವಿಂದೆ
ಕ್ರಮವಾಗಿ ಬ್ರಹ್ಮಲೋಕದಲಿ ಸೇರಿರಲು
ತಮಗಹುದು ಸಿದ್ಧಿ ಬ್ರಹ್ಮಜ್ಞ ॥ 104 ॥

ಬಯಸಿದಾ ಭೋಗಗಳು । ಬಯಸಿದಾಗಲೆ ಬಹವು
ಭಯವಿಲ್ಲ ಮುಪ್ಪುರುಜೆ ಸಾವು ಆನಂದ-
ಮಯರಲ್ಲಿ ಇವರು ಬ್ರಹ್ಮಜ್ಞ ॥ 105 ॥

ಹತ್ತು ದೇಹವ ಧರಿಸಿ । ಹತ್ತುರಥಸ್ತ್ರೀಸಹಿತ
ಉತ್ತಮದ ಕ್ರೀಡೆ ಬೇಕೆನಲು ಸಂಕಲ್ಪ-
ವೃತ್ತಿಯಲೆ ಬಕ್ಕು ಬ್ರಹ್ಮಜ್ಞ ॥ 106 ॥

ನೂರು ತಲೆಮಾರಿನಾ । ಚಾರು ಪತೃಗಳ ನೆನೆಯೆ
ಸಾರುವರು ಇವನ ಪ್ರತ್ಯಕ್ಷವೀ ಬಗೆಯ
ನೂರಾರು ಭೋಗ ಬ್ರಹ್ಮಜ್ಞ ॥ 107 ॥

ದೇವತೆಗಳೂ ಸಹಿತ । ಸೇವಿಸುತ ನೆರೆದಾಸ್ಯ-
ಭಾವದಲಿ ನಡೆದುಕೊಳುತಿಹರುಪಾಸಕಗೆ
ಈ ವಿಧದ ಸಿದ್ಧಿ ಬ್ರಹ್ಮಜ್ಞ ॥ 108 ॥

ಬ್ರಹ್ಮನವಧಿಯವರೆಗೆ । ಬ್ರಹ್ಮಲೋಕದೊಳಿದ್ದು
ಬ್ರಹ್ಮನಾ ಕಲ್ಪ ಮುಗಿದಾಗ ಜ್ಞಾನವದು
ಬ್ರಹ್ಮನಿಂದಕ್ಕು ಬ್ರಹ್ಮಜ್ಞ ॥ 109 ॥

ಹೀಗೆ ಮುಕ್ತಿಯ ಪಡೆವ । ಯೋಗವಿವಗಿಹುದೆಂದು
ಈಗಲೇ ಇವಗೆ ಕರೆಯುವರು ಮುಕ್ತನೆನೆ
ಈಗಿಲ್ಲಿ ತಿಳಿಗು ಬ್ರಹ್ಮಜ್ಞ ॥ 110 ॥

‘ಜ್ಞಾನಿ’, ‘ಮುಕ್ತ’ನು ಎಂಬ । ಈ ನಿಖಿಳಪದಗಳಿಗೆ
ತಾನಿಹವು ಇಲ್ಲಿ ಎರಡರ್ಥವೆಂಬುದನು
ಮಾನಿಪುದು ಮೊದಲು ಬ್ರಹ್ಮಜ್ಞ ॥ 111 ॥

ಇಲ್ಲಿಯೇ ಬ್ರಹ್ಮವನು । ಬಲ್ಲವನು ಜ್ಞಾನಿಯೆನೆ
ಅಲ್ಲಿ ಆ ಬ್ರಹ್ಮಲೋಕದಲಿ ಇರುವವಗು
ಸಲ್ಲುವದು ಇದುವೆ ಬ್ರಹ್ಮಜ್ಞ ॥ 112 ॥

ಬಲ್ಲವನು ಬೊಮ್ಮವನು । ಇಲ್ಲಿಯೇ ಸರ್ವಾತ್ಮ
ಎಲ್ಲವೂ ಇವನ ಮಹಿಮೆಯೇ ಎನ್ನುವದು
ಇಲ್ಲಿ ಶ್ರುತಿಮತವು ಬ್ರಹ್ಮಜ್ಞ ॥ 113 ॥

ಯೋಗಿಗಳ ಸಿದ್ಧಿಯೂ । ಭೋಗಿಗಳ ಭೋಗವೂ
ಆಗಿರುವದಿವನ ಮಹಿಮೆಯೇ ಇವ ಬೊಮ್ಮ-
ನಾಗಿಹುದ ತಿಳಿಯೆ ಬ್ರಹ್ಮಜ್ಞ ॥ 114 ॥

ಇವಗೆ ಕಾಮನೆ ಇಲ್ಲ । ಇವಗೆಲ್ಲ ಕಲ್ಪಿತವು
ತವಕದಲಿ ಜನಕೆ ತಿಳಿವಂತೆ ಲೇಸಾಗಿ
ಇವನ ಹೊಗಳಿಹುದು ಬ್ರಹ್ಮಜ್ಞ ॥ 115 ॥

ಕನಸಿನಲಿ ತೋರಿರುವ । ಮನಕಲ್ಪಿತಗಳಾದ
ಅನುನಯದ ಜೀವರೆಲ್ಲರೂ ತಾನಿಹನು
ಎನುವಂತೆ ಮತ್ತೆ ಬ್ರಹ್ಮಜ್ಞ. ॥ 116 ॥

ಹೀಗೆ ಬಣ್ಣಿಸುವಾಗ । ಭೋಗಗಳು ಎಲ್ಲವೂ
ಮೇಗರೆಯ ಬೊಮ್ಮಲೋಕವೂ ಇವನಲೇ
ತಾಗಿದುದನರಿಗು ಬ್ರಹ್ಮಜ್ಞ ॥ 117 ॥

ಒಟ್ಟಿನಲ್ಲಿ ಸರ್ವಾತ್ಮ । ನಿಷ್ಠೆ ವರ್ಣಿಸುವಾಗ
ಇಟ್ಟಿಹರು ಕ್ರೀಡೆ ಜಕ್ಷ್ಣಾದಿಗಳನೆಂಬು-
ದಿಷ್ಟನ್ನು ತಿಳಿಗು ಬ್ರಹ್ಮಜ್ಞ ॥ 118 ॥

ಜ್ಞಾನಿಗೀ ಭೋಗಗಳು । ಏನಿಲ್ಲ ನಿಜವಾಗಿ
ಈ ನಿಖಿಳವೆಲ್ಲ ತಾನಾದ ವರ್ಣನೆಯ
ಗಾನವಿದು ಕೇಳಿ ಬ್ರಹ್ಮಜ್ಞ[1] ॥ 119 ॥

1. ಪದ್ಯ 104 ರಿಂದ 119ರವರೆಗಿನ ವಿಷಯಕ್ಕೆ ಛಾಂ. 8–12–3 (ಭಾ.ಭಾ. 678)ನ್ನು ನೋಡಿರಿ.

### (ವಿಪರೀತ ಗ್ರಹಿಕೆ)

ಈ ರಹಸ್ಯವ ಬಿಟ್ಟು । ಸೇರಿಹವು ಜಕ್ಕಾಣ್ಣದಿ
ಕಾರಿಯಗಳೆಲ್ಲ ಈ ಜ್ಞಾನಿಗೆಂದೆನುತ
ಸಾರಿಹರು ಶ್ರುತಿಯ ಬ್ರಹ್ಮಜ್ಞ ॥ 120 ॥

ಜ್ಞಾನಿಗೀ ಭೋಗಗಳು । ಏನೆಲ್ಲವಿರಬಹುದು
ಜ್ಞಾನಿಯಿವ ಮುಕ್ತ ಹೇಗೆಯೇ ನಡೆದರೂ
ಮಾನಿಪರು ಹೀಗೆ ಬ್ರಹ್ಮಜ್ಞ ॥ 121 ॥

ಶ್ರುತಿಯನ್ನು ತೋರಿಸುತ್ತ । ಮತಿಗೆ ಭ್ರಮೆಹಿಡಿಸುತ್ತ
ಕೃತಿಯಲ್ಲಿ ಮನಕೆ ಬಂದುದನೆ ಮಾಡುತ್ತ
ಗತಿಸುವಂತಾಯ್ತು ಬ್ರಹ್ಮಜ್ಞ ॥ 122 ॥

ತಾಯಿತಂದೆಯ ವಧೆಯ । ಹೇಯವಹ ಚೋರತನ
ಈಯೆಲ್ಲ ಜ್ಞಾನಿ ಮಾಡಲೂಬಹುದೆಂದು
ಬಾಯಿ ಬಡೆದಾಯ್ತು ಬ್ರಹ್ಮಜ್ಞ ॥ 123 ॥

ಪೌರಾಣಕಥೆಗಳಲ್ಲಿ । ತೋರಿಸುವ ಪ್ರಾರಬ್ಧ
ಘೋರತಮ ಪಾಪವೆಸಗಲೂ ಹೆದರದಾ-
ಧಾರ ಪಡೆದಿಹರು ಬ್ರಹ್ಮಜ್ಞ[1] ॥ 124 ॥

ಆದರವು ಧರ್ಮದಲಿ । ಹೋದ ಈ ಕಾಲದಲಿ
ಮಾದಕವ ಮಾಳ್ಪ ಈ ಪರಿಯ ಬೋಧೆಗಳ-
ಲಾದರವು ಸಹಜ ಬ್ರಹ್ಮಜ್ಞ ॥ 125 ॥

ಮೊದಲೆ ಮರ್ಕಟವದಕೆ । ಮದಿರೆ ವೃಶ್ಚಿಕ ಭೂತ
ಒದಗಿರಲು ಕುಣಿತಕೆಣೆಯುಂಟೆ ? ಹಲವರಿಗೆ
ಇದರಂತೆ ಆಯ್ತು ಬ್ರಹ್ಮಜ್ಞ ॥ 126 ॥

ಇಂಥ ಗ್ರಂಥಗಳನ್ನೆ । ಸಂತಸದಿ ನಂಬಿರುತ
ನಿಂತಿಹರು ಸ್ವೈರವೃತ್ತಿಯಲಿ ದುರ್ಜನರು
ಇಂತು ಬೋಧಿಸುತೆ ಬ್ರಹ್ಮಜ್ಞ ॥ 127 ॥

---

1. ಪದ್ಯ 120 ರಿಂದ 124ರವರೆಗಿನ ವಿಷಯಕ್ಕೆ ಪಂ. 6–272, 7–156, 14–17ನ್ನು ನೋಡಿರಿ.

ಭಾಷ್ಯಗಳ ಕಣ್ತೆರೆದು । ಲೇಸಾಗಿ ನೋಡಲ್ಕೆ
ದೋಷವಿವು ದೂರವಾಗುವವು ದುರಿತ ಭವ-
ಪಾಶ ಹರಿಯುವದು ಬ್ರಹ್ಮಜ್ಞ ॥ 128 ॥

(ಸಾರಾಂಶ)

ಜ್ಞಾನಿಗೀ ಸ್ವೈರನಡೆ । ಏನಿಲ್ಲ ಧರ್ಮವೇ
ತಾನಿವಗೆ ಸಹಜವೆಂದಿಹರು ಭಾಷ್ಯದಲಿ
ಜ್ಞಾನಿಯಾ ಬಗೆಗೆ ಬ್ರಹ್ಮಜ್ಞ ॥ 129 ॥

ಇವ ಪ್ರವೃತ್ತಿಯಲಿರಲಿ । ತವೆ ನಿವೃತ್ತಿಯಲಿರಲಿ
ಸವನಿಸದು ಸ್ವೈರದಾಚರಣೆ ಎನುವುದನು-
ಭವಕೆ ಸಮ್ಮತವು ಬ್ರಹ್ಮಜ್ಞ ॥ 130 ॥

ಸಾಧಕಗೆ ಧರ್ಮವಿದು । ಆದುದತಿಮುಖ್ಯದಲಿ
ಬೋಧೆಯಿದ ಬರೆದು ತಿಳಿಸಿಹರು ಅಲ್ಲಲ್ಲಿ
ಆದರದಿ ನೋಡಿ ಬ್ರಹ್ಮಜ್ಞ ॥ 131 ॥

ತಿತ್ತಿರಿಯಭಾಷ್ಯದಲಿ । ಮತ್ತೆ ಕಠ ಗೀತೆಯಲಿ
ಎತ್ತಿ ಕೆಲಮಾತು ಬರೆದಿರುವ ರೀತಿಯನು
ಒತ್ತಿ ಪೇಳುವೆನು ಬ್ರಹ್ಮಜ್ಞ ॥ 132 ॥

ಬ್ರಹ್ಮವಿದೆ ಎನುವವನು । ಸನ್ಮಾರ್ಗದಲಿ ನಡೆವ
ಸನ್ಮಾರ್ಗವೆಲ್ಲ ಪಡೆಯಲ್ಕೆ ಬಂದಿಹುದು
ಬ್ರಹ್ಮವನ್ನಿಲ್ಲಿ ಬ್ರಹ್ಮಜ್ಞ [1] ॥ 133 ॥

ದುರಿತದಾಚರಣೆಗಳ । ತೊರೆಯದವ ಆತ್ಮನನು
ಅರಿಯನಿವ ಮತ್ತೆ ವೈರಾಗ್ಯವಿರದವಗೆ
ಬರದು ಈ ಜ್ಞಾನ ಬ್ರಹ್ಮಜ್ಞ[2] ॥ 134 ॥

ಶ್ರವಣಾದಿಗಳನಿವನು । ಅವಿರತದಿ ಮಾಡಿಯೂ
ಸವನಿಸದು ಜ್ಞಾನ ದುಶ್ಚರಿತನಾದವಗೆ
ಭುವನದೊಳಗಿನ್ನು ಬ್ರಹ್ಮಜ್ಞ ॥ 135 ॥

---

1. ಈ ವಿಷಯಕ್ಕೆ ತೈ. 2-6 (ಭಾ.ಭಾ. 150)ನ್ನು ನೋಡಿರಿ.
2. ಈ ವಿಷಯಕ್ಕೆ ಕಾ. 1-2-24ನ್ನು ನೋಡಿರಿ.

ಕಪಟನಡೆ ಉಳ್ಳವಗೆ । ಸುಪಥವನು ಬಿಟ್ಟವಗೆ
ತಪದಿಂದೆ ಕರಣ ಜಯಿಸದಗೆ ಈ ಜ್ಞಾನ-
ದುಪದೇಶ ವ್ಯರ್ಥ ಬ್ರಹ್ಮಜ್ಞ[1] ॥ 136 ॥

ವೇದಾಂತ ಜೀವನಕೆ । ಆದುದತಿಮುಖ್ಯವಿದು
ಆದರಿಸಿ ಧರ್ಮಮಾರ್ಗವನು ಬಿಡದ ಪರಿ
ಹಾದಿ ಹಿಡಿಯುವದು ಬ್ರಹ್ಮಜ್ಞ ॥ 137 ॥

ವೇದಾಂತಮಾತುಗಳ । ವಾದ ಬೋಧನೆ ಬರಲು
ಅದೆ ನಾ ಜ್ಞಾನಿಯೆಂದೆನುವ ಈ ಮೂಢ
ವಾದ ಬಿಡಬೇಕು ಬ್ರಹ್ಮಜ್ಞ ॥ 138 ॥

ನಿತ್ಯನಾಮಸ್ಮರಣೆ । ಮತ್ತೆ ಧರ್ಮಾಚರಣೆ
ಸತ್ಯನಡೆಯುಳ್ಳ ಸಾಧುಗಳ ಸಹವಾಸ
ಪಥ್ಯವಿವು ಕೇಳಿ ಬ್ರಹ್ಮಜ್ಞ ॥ 139 ॥

ಪರಿಕಿಸುತ ತನ್ನನ್ನು । ಪರಿಪರಿಯ ರೀತಿಯಲಿ
ಕರಣಜಯ ಭಕ್ತಿವೈರಾಗ್ಯಶ್ರದ್ಧೆಗಳು
ಬರುವಂತೆ ನಡೆಗು ಬ್ರಹ್ಮಜ್ಞ ॥ 140 ॥

ಇದಕೆ ಹೊಂದುವ ಬೋಧೆ । ಮುದದಿಂದ ಕೇಳುತಲಿ
ಇದನೆಲ್ಲ ಜರಿದು ಬೋಧಿಸುವ ಬೋಧೆಗಳ
ಬದಿಗಿರಿಸಬೇಕು ಬ್ರಹ್ಮಜ್ಞ ॥ 141 ॥

ಈಶ್ವರನುಪಾಸನೆಯ । ಲೇಸಾಗಿ ಮಾಡ್ದವಗೆ
ಭಾಸಿಪುದು ಇಂಥ ಒಳಿತಾದ ಈ ಮಾರ್ಗ
ದೇಶಿಕನ ಬೋಧೆ ಬ್ರಹ್ಮಜ್ಞ ॥ 142 ॥

ಇದಕೀಗುಪಾಸನೆಯ । ಹದನಗಳ ತಿಳಿಸುತ್ತ
ಒದಗುತಿಹ ಶ್ರೇಷ್ಠಫಲಗಳನು ಆರುಹಲ್ಕೆ
ಪದಗಳಿಡುತಿಹೆನು ಬ್ರಹ್ಮಜ್ಞ ॥ 143 ॥

ಮುಂದಿನಧ್ಯಾಯದಲಿ । ಬಂದಿರುವ ವಿವಿಧಬಗೆ
ಸಂದಿರುವ ಶ್ರುತಿಯು ಪೇಳಿಹ ಉಪಾಸನೆಯ
ಸಂಧಿಯನು ಪೇಳ್ವೆ ಬ್ರಹ್ಮಜ್ಞ ॥ 144 ॥

---

1. ಪದ್ಯ 135, 136ಕ್ಕೆ ಗೀ. 15–11 (ಭಾ.ಭಾ. 909)ನ್ನು ನೋಡಿರಿ.

# ಹನ್ನೆರಡನೆಯ ಅಧ್ಯಾಯ

## ಉಪಾಸನೆ

### (ವೇದ, ಉಪಾಸ್ – ಶಬ್ದಗಳು)

ವೇದನೆಯುಪಾಸನೆಯ । ಸಾದರದ ಶಬ್ದಗಳು
ವೇದದೊಳು ಒಂದೆ ಅರ್ಥದಲಿ ಹೇಳಿರುವ
ಮೋದವನು ತಿಳಿಗು ಬ್ರಹ್ಮಜ್ಞ ॥ 1 ॥

ವಸ್ತುವನ್ನನುಸರಿಸಿ । ಚಿತ್ತದೊಳು ತಿಳಿವುದನು
ಮತ್ತಿನ್ನು ಶಬ್ದವೇದನೆಯಿದೆಂದೆನುತ
ಒತ್ತಿ ಹೇಳಿಹುದು ಬ್ರಹ್ಮಜ್ಞ ॥ 2 ॥

ಶ್ರುತಿಯು ಹೇಳಿರುವದನೆ । ಅತಿ ಶ್ರದ್ಧೆಯಿಂ ನಂಬಿ
ಮತಿಯಲ್ಲಿ ಸತತ ಚಿಂತಿಪುದುಪಾಸನೆಯ
ಗತಿಯು ತಿಳಿಯಲ್ಕೆ ಬ್ರಹ್ಮಜ್ಞ ॥ 3 ॥

ಎರಡಕ್ಕು ಶಾಸ್ತ್ರವಿದು । ಪರಮ ಮಾನವಿದಹುದು
ಎರಡನ್ನು ತಾನು ನಿರ್ವಹಿಸೆ ಮನವಿದುವೆ
ಕರಣವಾಗಿಹುದು ಬ್ರಹ್ಮಜ್ಞ ॥ 4 ॥

ಈ ನಿಮಿತ್ತದಲೀಗ । ಮಾನಿಪುದು ಶಾಸ್ತ್ರವಿದು
ಜ್ಞಾನವನು ಮತ್ತುಪಾಸನೆಯನೊಂದೆ ತೆರ
ಕಾಣುವಂತಿಲ್ಲಿ ಬ್ರಹ್ಮಜ್ಞ[1] ॥ 5 ॥

ಸಂದರ್ಭವನು ನೋಡಿ । ಬಂಧುರದ ಅರ್ಥಗಳ
ಸಂದಿರುವ ಎರಡು ಪದಗಳಿಗು ತಿಳಿಯಬೇ-
ಕೆಂದಿಹರು ಕೇಳಿ ಬ್ರಹ್ಮಜ್ಞ ॥ 6 ॥

ಭಾಷ್ಯದಾಧಾರದಲೆ । ಲೇಸಾಗಿ ಇದು ತಿಳಿಗು
ಭಾಷ್ಯಗಳ ಬೋಧೆ ಇರದಿರಲು ತಲೆಕೆಳಗೆ
ಭಾಸವಾಗುವದು ಬ್ರಹ್ಮಜ್ಞ ॥ 7 ॥

---

1. ಪದ್ಯ 1 ರಿಂದ 5ರ ಪೂರ ವಿಷಯಕ್ಕೆ ಛಾಂ. ಅವ. (ಭಾ.ಭಾ. 6)ನ್ನು ನೋಡಿರಿ.

ಆತ್ಮನೆಂದಿವನನ್ನು । ಮತ್ತುಪಾಸಿಸಬೇಕು
ಉಕ್ತಿಯಿದ ಶ್ರುತಿಯು ಪೇಳಲ್ಕುಪಾಸನೆಗೆ
ಅರ್ಥವದು ಜ್ಞಾನ ಬ್ರಹ್ಮಜ್ಞ[1] ॥ 8 ॥

ವೈಶ್ವಾನರನ ವಿದ್ಯೆ । ಲೇಸಾದುಪಾಸನೆಯು
ಭಾಸುರದ ವಿದ್ಯೆ ಎನುವುದಕೆ ಅರ್ಥವಿದು-
ಪಾಸನೆಯೆ ಇಲ್ಲಿ ಬ್ರಹ್ಮಜ್ಞ[2] ॥ 9 ॥

ಇಂತು ಇವುಗಳ ಮರ್ಮ । ಮುಂತೆ ಭಾಷ್ಯದಲೆಲ್ಲ
ಸಂತಸದಿ ತಿಳಿಸಿಕೊಟ್ಟಿಹರು ಆದರಿಸಿ
ಅಂತೆಯೇ ತಿಳಿಗು ಬ್ರಹ್ಮಜ್ಞ ॥ 10 ॥

## (ಉಪಾಸನೆ ಎಂದರೇನು?)

ಯಾವುದನುಪಾಸಿಪುದೋ । ಆ ವಿಷಯವನು ಕುರಿತು
ಭಾವಿಸುತ ವೇದದುಕ್ತಿಯಂ ತಿಳಿದದನು
ಸೇವಿಸಲು ಬೇಕು ಬ್ರಹ್ಮಜ್ಞ ॥ 11 ॥

ಹೀಗೆ ವಿಷಯೀಕರಿಸಿ । ಬೇಗನಾ ವಸ್ತುವೇ
ಈಗಿಲ್ಲಿ ಎದುರಿಗಿಹುದೆಂದು ಭಾವಿಸ-
ಲ್ಕಾಗ ಸಾಮೀಪ್ಯ ಬ್ರಹ್ಮಜ್ಞ ॥ 12 ॥
ಇನ್ನೊಂದು ಬಗೆ ವೃತ್ತಿ । ಮುನ್ನಬಾರದ ತೆರದಿ
ಚೆನ್ನಾಗಿ ತೈಲಧಾರೆವೊಲು ಬಹುಕಾಲ
ವಿನ್ನಿರಲುಬೇಕು ಬ್ರಹ್ಮಜ್ಞ ॥ 13 ॥

ಹೀಗೆ ಧಾರಾಕಾರ । ಆಗಿರುತ ಒಂದೆಬಗೆ
ಸಾಗಿರಲು ಇದುವೆ ಸರಿಯಾದುಪಾಸನೆಯು
ಈಗಿದನು ತಿಳಿಗು ಬ್ರಹ್ಮಜ್ಞ ॥ 14 ॥

ಮೇಲೆ ವಿವರಿಸಿ ಬರೆದ । ಶೀಲವಿದುಪಾಸನೆಯ
ಮೇಳೈಸಿ ನೋಡೆ ಅಕ್ಷರದುಪಾಸನೆಯ
ಸಾಲಿನಲಿ ಇರ್ಕು ಬ್ರಹ್ಮಜ್ಞ[3] ॥ 15 ॥

---

1. ಈ ವಿಷಯಕ್ಕೆ ಬೃ. 1-4-7 ಮತ್ತು ಇದರ ಭಾಷ್ಯ (ಭಾ.ಭಾ. 134 ರಿಂದ 146) ಪೂರ ನೋಡಿರಿ.

2. ಈ ವಿಷಯಕ್ಕೆ ಛಾಂ. 5-11-1 ರಿಂದ 5-18-2ರವರೆಗೆ ನೋಡಿರಿ.

3. ಪದ್ಯ 11 ರಿಂದ 15ರ ಪೂರ ವಿಷಯಕ್ಕೆ ಗೀ. 12-3 (ಭಾ.ಭಾ. 729)ರಲ್ಲಿ 'ಉಪಾಸನಂ ನಾಮ' ಎಂಬ ವಾಕ್ಯವನ್ನು ನೋಡಿರಿ.

### (ಅಕ್ಷರೋಪಾಸನೆ)

ಅಕ್ಷರೋಪಾಸನೆಯ । ಪಕ್ಷವದು ಜ್ಞಾನವೇ
ಲಕ್ಷಿಸುತ ಇದರ ವಸ್ತುಪರ ಬಗೆಯನ್ನು
ಶಿಕ್ಷಿಪುದು ಮತಿಯ ಬ್ರಹ್ಮಜ್ಞ ॥ 16 ॥

ತಾನಾದ ಆತುಮನ । ಭಾನವಿದುಶ್ರವಣದಲಿ
ಮೇಣಿನ್ನು ಬಂದ ಏಕಾತ್ಮಪ್ರತ್ಯಯವೆ
ಜ್ಞಾನವಿದು ನೋಡಿ ಬ್ರಹ್ಮಜ್ಞ ॥ 17 ॥

ಇದುವೆ ವಿಷಯೀಕರಣ । ಮೊದಲಿದುವೆ ಒದಗುವದು
ಬರಿಗಿರಿಸಿ ಮಿಕ್ಕ ಪ್ರತ್ಯಯವನಾತ್ಮಗಳ
ಇದನೆ ಅನುಸರಿಗು ಬ್ರಹ್ಮಜ್ಞ ॥ 18 ॥

ಕರಣ ಮನ ಬುದ್ಧಿಗಳ । ಸರಿಸುತ್ತೆ ಹಿಂದಕ್ಕೆ
ಬರಿ ತಾನು ಎಂಬ ಅರಿವಿನಲಿ ರಮಿಸಿರಲು
ಇರುವದಿದು ಬಳಿಗೆ ಬ್ರಹ್ಮಜ್ಞ ॥ 19 ॥

ತಾನೆಂಬ ಭಾವವಿದು । ಕಾಣುತಿರೆ ಸಹಜದಲಿ
ಈ ನಿಷ್ಠೆವೃತ್ತಿಸಾಂತತ್ಯ ಜ್ಞಾನಿಗಳ
ಮಾನಸ ಸ್ಥಿತಿಯು ಬ್ರಹ್ಮಜ್ಞ ॥ 20 ॥

ದೇಹ ತೋರುವವರೆಗೆ । ಸಾಹಚರ್ಯಾದಿ ಜ್ಞಾನ
ಊಹಿಸಲು ಮನದಿ ನಿಂತಿಹುದೆ ಬಹುಕಾಲ-
ವೀ ಹದನ ಕೇಳಿ ಬ್ರಹ್ಮಜ್ಞ ॥ 21 ॥

ವಸ್ತುತಂತ್ರದ ಪರಿಯ । ವಿಸ್ತರದುಪಾಸನೆಯ
ಶಾಸ್ತ್ರದಲಿ ಪೇಳ್ದ ಬಗೆಯಿದುವೆ ಅಕ್ಷರ ಪ್ರ-
ಶಸ್ತವಹ ಜ್ಞಾನ ಬ್ರಹ್ಮಜ್ಞ ॥ 22 ॥

### (ಕರ್ತೃತಂತ್ರದ ಉಪಾಸನೆಗಳು)

ಇನ್ನುಳಿದುಪಾಸನೆಯ । ಬಣ್ಣವೇ ಬೇರಿಹುದು
ಮುನ್ನವಿವು ಕರ್ತೃತಂತ್ರಗಳವಿದ್ಯೆಯಾ
ಮಣ್ಣಿನಲ್ಲಿಹವು[1] ಬ್ರಹ್ಮಜ್ಞ ॥ 23 ॥

1. ಮಣ್ಣು ಎಂದರೆ ಕ್ಷೇತ್ರವೆಂದರ್ಥ.

ಕರ್ಮಾಂಗವಹ ಹಲವು । ಕರ್ಮರಹಿತದ ಕೆಲವು
ಬ್ರಹ್ಮನಾ ಲೋಕ ಪಡಯಲ್ಕುಪಾಸನೆಯ
ಹಮ್ಮಿಹುದು ಬ್ರಹ್ಮಜ್ಞ ॥ 24 ॥

ಜ್ಞಾನನಿಷ್ಠೆಯ ಪಡೆಯೆ । ತಾನು ನಡೆಸುವ ವಿವಿಧ
ಮಾನಗಳಲಿರುವ ಬಗೆಬಗೆಯುಪಾಸನೆಯ
ಮಾನಿಪುದು ಶಾಸ್ತ್ರ ಬ್ರಹ್ಮಜ್ಞ ॥ 25 ॥

ಕಾಮನೆಯ ಪಡೆಯಲ್ಕೆ । ತಾ ಮಾಳ್ಪುಪಾಸನೆಯ
ನೇಮ ಕೆಲವಿಹವು ಮತ್ತಿನ್ನು ಸಾಕಾರ
ಸೀಮೆಯವು ಕೆಲವು ಬ್ರಹ್ಮಜ್ಞ[1] ॥ 26 ॥

ವೇದಗಳ ಅಧ್ಯಯನ । ವೇದೋಕ್ತವಹ ಕರ್ಮ
ಸಾದರದ ಶ್ರೌತಸಂನ್ಯಾಸ ಇವುಗಳಿರೆ
ಆದುವಿವು ಸಫಲ ಬ್ರಹ್ಮಜ್ಞ ॥ 27 ॥

## (ಓಂಕಾರೋಪಾಸನೆ)

ಗೀತೆಯಲಿ ಬಂದಿರುವ । ಖ್ಯಾತವಹ ಓಂಕಾರ
ಈ ತೆರದಲೊಂದು ವಿಧಿಯುಕ್ತ್ಯುಪಾಸನೆಯ
ರೀತಿ ಬಣ್ಣಿಸುವೆ ಬ್ರಹ್ಮಜ್ಞ ॥ 28 ॥

ಮೊದಲು ಕರ್ಮವ ಮಾಡಿ । ಅದನು ವಿಧಿಯಿಂ ತ್ಯಜಿಸಿ
ಮುದದಿಂದ ಶ್ರೌತಸಂನ್ಯಾಸವನುಸರಿಪು–
ದಿದರಲ್ಲಿ ಕೇಳಿ ಬ್ರಹ್ಮಜ್ಞ ॥ 29 ॥

ಓಂಕಾರಮಾತ್ರೆಗಳ । ಶಂಕೆಯಿಲ್ಲದೆ ತಿಳಿದು
ಓಂಕರರೂಪ ಬೊಮ್ಮವನೆ ಇವ ನಿರಾ–
ತಂಕದಲಿ ಸ್ಮರಿಪ ಬ್ರಹ್ಮಜ್ಞ ॥ 30 ॥

ಪ್ರಾಣಗಳ ಸಂಯಮನ । ತಾನು ಸಾಧಿಸಿಕೊಳುತ
ಮೇಣಿನ್ನು ಯೋಗದಭ್ಯಾಸ ಬಲದಿಂದ
ಪ್ರಾಣಮನ ಜಯಿಪ ಬ್ರಹ್ಮಜ್ಞ ॥ 31 ॥

---

1. ಪದ್ಯ 24 ರಿಂದ 26ರ ಪೂರ ವಿಷಯಕ್ಕೆ ಸೂ. ಭಾ. 1–1–12 (ಭಾ.ಭಾ. 91) ಛಾಂ. ಅವ. (ಭಾ.ಭಾ. 5)ನ್ನು ನೋಡಿರಿ.

ಸೇರಿಸುತ ಪ್ರಾಣವನು । ಧೀರನಿವ ನಾಭಿಯಲಿ
ಏರಿಸುತ ಹೃದಯಕಂಠದಿಂ ಭ್ರೂಮಧ್ಯ-
ಕೇರಿಸುವ ಕೊನೆಗೆ ಬ್ರಹ್ಮಜ್ಞ ॥ 32 ॥

ನಡುನೆತ್ತಿಯೊಳು ನಿಲಿಸಿ । ಸಡಗರದಿ ಮನಪ್ರಾಣ
ನಡೆಸುವನು ಸತತ ಓಂಕಾರಚಿಂತನೆಯ
ಕಡೆತನಕ ಬಿಡದೆ ಬ್ರಹ್ಮಜ್ಞ ॥ 33 ॥

ಇರುವಾಗ ಸಂತತವು । ಬರುತಿರಲು ಚಿಂತನೆಯು
ವರ ಬೊಮ್ಮಲೋಕ ದಾರಿಯನು ಧ್ಯಾನಿಸುತ-
ಲಿರುತಿಹನು ಯೋಗಿ ಬ್ರಹ್ಮಜ್ಞ ॥ 34 ॥

ಮರಣಸಮಯದಿ ಹೀಗೆ । ಸರಿಯಾಗಿ ಪ್ರಾಣಗಳ
ತರುತಲಿವ ಬಿಡದಲೋಂಕಾರ ಧ್ಯಾನದಲೆ
ಬೆರೆತಿರುವ ಯೋಗಿ ಬ್ರಹ್ಮಜ್ಞ ॥ 35 ॥

ಕೊನೆಗೆ ನೆತ್ತಿಯ ಸೀಳಿ । ತನುವ ತ್ಯಜಿಸುವನೀತ
ಸನುಮತದಿ ವೇದ ಪೇಳ್ದಂತೆ ಇವಗೆ ಗತಿ-
ಯನುಮಾನವಿಲ್ಲ ಬ್ರಹ್ಮಜ್ಞ ॥ 36 ॥

ದಿನ ಶುಕ್ಲ ಅಗ್ನಿಗಳ । ಬಿನುಗಿನಭಿಮಾನಿಗಳು
ಅನುನಯದಿ ಬರುವರಿವರುತ್ತರಾಯಣದ
ಘನ ದೇವತೆಗಳು ಬ್ರಹ್ಮಜ್ಞ ॥ 37 ॥

ಸೇರಿಸುವರೀತನನು । ಸೂರಿಯನ ಲೋಕದಲಿ
ಏರಿಸುತ ಕೊನೆಗೆ ಆ ಬೊಮ್ಮಲೋಕದೊಳು
ತೂರಿಸುವರಿವನ ಬ್ರಹ್ಮಜ್ಞ[1] ॥ 38 ॥

ಅಲ್ಲಿ ನಾನಾವಿಧದ । ಸಲ್ಲಲಿತ ಭೋಗಗಳ
ಉಲ್ಲಾಸದಿಂದಲನುಭವಿಪ ಬ್ರಹ್ಮಪದ
ನಿಲ್ಲುತಿರುವನಕ ಬ್ರಹ್ಮಜ್ಞ[2] ॥ 39 ॥

ಅಳಿವಾಗ ಕಲ್ಪವದು । ಬಳಿಕ ಬೊಮ್ಮನು ಇವಗೆ
ತಿಳಿಸುವನು ಜ್ಞಾನತತ್ತ್ವವನ್ನು ಅದನಲ್ಲಿ
ತಿಳಿಯೆ ಇವ ಮುಕ್ತ ಬ್ರಹ್ಮಜ್ಞ ॥ 40 ॥

---

1. ಪದ್ಯ 28 ರಿಂದ 38ರ ಪೂರ ವಿಷಯಕ್ಕೆ ಗೀ.8ನೆಯ ಅಧ್ಯಾಯವನ್ನು ನೋಡಿರಿ.
2. ಈ ವಿಷಯಕ್ಕೆ ಛಾಂ. 8-2-1 ರಿಂದ 8-2-9ರವರೆಗೆ ನೋಡಿ.

ಆವುದೇ ಲೋಕದೊಳು । ತೀವಿ ಜ್ಞಾನವು ಬರಲು
ಸಾವುದಿದು ಭವವು ಆಗಲೇ ಇವನಾತ್ಮ
ದೇವನಾಗುವನು ಬ್ರಹ್ಮಜ್ಞ ॥ 41 ॥

ಇದುವೆ ಆ ಕ್ರಮಮುಕ್ತಿ । ಇದನು ಶಾಸ್ತ್ರಗಳಲ್ಲಿ
ಉದಹರಿಸಿ ಮತ್ತೆ ಅಲ್ಲಲ್ಲಿ ಬಣ್ಣಿಸಿಹ
ಹದನ ನೋಡುವದು ಬ್ರಹ್ಮಜ್ಞ ॥ 42 ॥

ಗೀತೆಯಲಿ ಶ್ರುತಿಗಳಲಿ । ಖ್ಯಾತ ಸೂತ್ರಗಳಲ್ಲಿ
ಮಾತು ಈ ಬಗೆಗೆ ಬಂದಿಹವುಪಾಸನೆಯ
ಪ್ರೀತಿಯಲಿ ತಿಳಿಗು ಬ್ರಹ್ಮಜ್ಞ ॥ 43 ॥

ವೇದಾದಿ ಕರ್ಮಗಳ । ಹಾದಿಯೇ ತಪ್ಪಿರುವ
ಈ ದಿನದಿ ನಡೆಸಲಿವುಗಳನಸಾಧ್ಯವೇ
ಆದುದಿದು ನಿಜವು ಬ್ರಹ್ಮಜ್ಞ ॥ 44 ॥

ಈ ಗತಿಯನೂಹಿಸುತ । ಸಾಗಿರುವ ವ್ಯಾಸಾದಿ
ಯೋಗಿಗಳು ಜನಕೆ ನೀಡಿಹರುಪಾಸನೆಯ
ನಾಗ ಸುಲಭದಲಿ ಬ್ರಹ್ಮಜ್ಞ ॥ 45 ॥

ಪರಮಾತ್ಮತತ್ತ್ವವನೆ । ಪರಿಪರಿಯ ರೂಪದಲಿ
ತರುತಿಹುದು ಮನಕೆ ಹಿಡಿವಂತುಪಾಸನೆಯ
ತಿರುಳನರಿಯುತ್ತ ಬ್ರಹ್ಮಜ್ಞ ॥ 46 ॥

ದೇವನಿವ ಮಾಯೆಯಿ । ಭಾವಿಕರನುದ್ಧರಿಸೆ
ಸೇವಿಪನು ವಿವಿಧರೂಪಗಳನಿಚ್ಛೆಯಲಿ
ಈ ವಿಧವನರಿಗು ಬ್ರಹ್ಮಜ್ಞ[1] ॥ 47 ॥

ಹೀಗಿರುವ ರೂಪಗಳ । ಈಗಳೀ ನಾಮಗಳ
ಸೋಗಿನೊಳಗಿರುವ ಪರಮಾತ್ಮ ಚಿಂತನೆಯು
ಆಗಿಹುದು ಸುಲಭ ಬ್ರಹ್ಮಜ್ಞ ॥ 48 ॥

ಸಂತತದ ಚಿಂತನೆಯು । ಅಂತರಂಗದಿ ಪ್ರೇಮ
ನಿಂತಿರುವ ತೆರದಿ ಸಾನ್ನಿಧ್ಯಭಾವನೆಯು
ಮುಂತೆ ಬೇಕಿದಕೆ ಬ್ರಹ್ಮಜ್ಞ ॥ 49 ॥

1. ಈ ವಿಷಯಕ್ಕೆ ಸೂ. ಭಾ. 1–1–20 (ಭಾ.ಭಾ. 115)ರಲ್ಲಿ 'ಸ್ಯಾತ್ ಪರಮೇಶ್ವರಸ್ಯಾಪಿ.....' ಎಂಬ ವಾಕ್ಯವನ್ನು ನೋಡಿರಿ.

ದೂರದೇಶದ ಪತಿಯ । ನಾರಿ ಸ್ಮರಿಸುವ ತೆರದಿ
ಸೇರುತ್ತ ಗುರುವ ಶಿಷ್ಯನನುಸರಿಸುವೊಲು
ಭೂರಿ ಭವವಿದು ಬ್ರಹ್ಮಜ್ಞ[1] ॥ 50 ॥

ಇವು ಮುಖ್ಯತತ್ತ್ವಗಳು । ಭುವಯೊಳಗುಪಾಸನೆಗೆ
ಅವಿರತೆಯ ಸಗುಣ ಭಗವಂತನೊಳಗಿಡಲು
ಸವಿಬಹುದೆ ಭಕ್ತಿ ಬ್ರಹ್ಮಜ್ಞ ॥ 51 ॥

ಭಕ್ತಿಯಿಲ್ಲದ ಧ್ಯಾನ । ಮತ್ತುಪಾಸನೆ ವ್ಯರ್ಥ
ಚಿತ್ತಕ್ಕೆ ಬರಿದೆ ಆಯಾಸ ತಪ್ಪದದು
ಭಕ್ತಿಯಿರೆ ರುಚಿಯು ಬ್ರಹ್ಮಜ್ಞ ॥ 52 ॥

ಸಂಸಾರದೊಳಗಿದ್ದೆ । ಕಂಸಾರಿ ಭಕ್ತಿಯನು
ಸಂಶಯವ ತೊರೆದು ಬೆಳೆಸಿದರೆ ವಿರತಿ ನಿಃ-
ಸಂಶಯದಿ ಬಕ್ಕು ಬ್ರಹ್ಮಜ್ಞ ॥ 53 ॥

ಯತಿಗಳಿಗು ಭಕ್ತಿಯೆ । ಅತಿ ಮುಖ್ಯವಾಗಿಹುದು
ಮತಿಯನ್ನು ಪರಮತತ್ತ್ವದೊಳು ನಿಲಿಸುವ ಯು-
ಕುತಿಯಿದೆಂದಿಹರು ಬ್ರಹ್ಮಜ್ಞ ॥ 54 ॥

ಅಂತರಂಗವ ನಿಲಿಸಿ । ಸಂತತವು ಶ್ರದ್ಧೆಯಲಿ
ಮುಂತಿನ್ನು ಯೋಗ ನಡೆಸುವವ ಎನ್ನಲ್ಲಿ
ಸಂತನಿವ ಶ್ರೇಷ್ಠ ಬ್ರಹ್ಮಜ್ಞ[2] ॥ 55 ॥

ಧ್ಯಾನಯೋಗದ ಕೊನೆಗೆ । ದಾನವಾರಿಯು ಪೇಳ್ದ
ಈ ನಿಯಮದಿಂದೆ ಯತಿಗಳಿಗು ಭಕ್ತಿಯಿದು
ತಾನಾಯ್ತು ಮುಖ್ಯ ಬ್ರಹ್ಮಜ್ಞ ॥ 56 ॥

**(ಭಕ್ತಿಯ ಬಗೆ)**

ಸತತ ನಾಮಸ್ಮರಣೆ । ಅತಿಶಯದ ಘನಮಹಿಮೆ
ಮತಿಯಲ್ಲಿ ಮಥಿಸಿ ಪ್ರೇಮಾದರಾದಿಗಳ
ಗತಿಪಡೆಯೆ ಭಕ್ತಿ ಬ್ರಹ್ಮಜ್ಞ ॥ 57 ॥

---

1. ಈ ವಿಷಯಕ್ಕೆ ಸೂ. ಭಾ. 4-1-1 (ಭಾ.ಭಾ. 503)ರಲ್ಲಿ 'ಅಪಿ ಚ ಉಪಾಸನಮ್' ಎಂಬ ವಾಕ್ಯವನ್ನು ನೋಡಿರಿ.

2. ಈ ವಿಷಯಕ್ಕೆ ಗೀ. 6-47ನ್ನು ನೋಡಿರಿ.

ಹೊರಗೆ ಪೂಜಿಸಿ ನೋಡಿ । ನಿರುತಪ್ರೇಮದಿ ಕೂಡಿ
ಸ್ಮರಿಸಲ್ಕೆ ಮನದಿ ಸಾನ್ನಿಧ್ಯಭಾವನೆಯು
ಸ್ಫುರಿಸುವುದೆ ಭಕ್ತಿ ಬ್ರಹ್ಮಜ್ಞ ॥ 58 ॥

ಗುರು ತಾಯಿ ತಂದೆ ಸಖ । ಪರಮ ಕರುಣಾಸಿಂಧು
ಪೊರೆವವನು ಸಕಲ ದಾತಾರನೆಂಬ ದೃಢ-
ತರ ನಿಲುವೆ ಭಕ್ತಿ ಬ್ರಹ್ಮಜ್ಞ ॥ 59 ॥

ಸರ್ವ ಕರ್ಮಗಳನ್ನು । ಸರ್ವಸುಖದುಃಖವನು
ನಿರ್ವಹಿಪ ಸಮಯದೊಳಗೆಲ್ಲ ದೇವನದಲಿ
ಸೇರ್ವುದಿದೆ ಭಕ್ತಿ ಬ್ರಹ್ಮಜ್ಞ ॥ 60 ॥

ವಿಷಯಸುಖಗಳ ಬಗೆಗೆ । ಬೆಸೆದಿರುವ ಪ್ರೇಮವೇ
ಎಸೆದೀಗ ಪರಮಪುರುಷನಲಿ ಸತತವಿರೆ
ಹಸನಾದ ಭಕ್ತಿ ಬ್ರಹ್ಮಜ್ಞ[1] ॥ 61 ॥

ನಾನು ನನ್ನದು ಎನುವ । ಭಾನವನು ಕಡೆಗಣಿಸಿ
ನೀನು ನಿಜ ಮತ್ತೆ ಎಲ್ಲವೂ ನಿನ್ನದೆನು-
ವೀ ನಿಷ್ಠೆ ಭಕ್ತಿ ಬ್ರಹ್ಮಜ್ಞ ॥ 62 ॥

ತೋರುವೀ ವಿಶ್ವವೂ । ಚಾರು ದೇವತೆಗಳೂ
ಬೇರಾಗಿ ಕಾಂಬ ಜೀವರೂ ಈತನಲಿ
ತೋರುವದೆ ಭಕ್ತಿ ಬ್ರಹ್ಮಜ್ಞ ॥ 63 ॥

ಬೇಕೆನುವ ಬಯಕೆಗಳ । ಸಾಕೆನುವ ದುಃಖಗಳ
ಲೋಕೇಶನಿವಗೆ ತಿಳಿಸುತ್ತ ಮಾತಾಡು-
ವೇಕಾಂತ ಭಕ್ತಿ ಬ್ರಹ್ಮಜ್ಞ ॥ 64 ॥

ಸೇವೆಯಲಿ ಸವಿ ಬಂದು । ಭಾವದಲಿ ದೃಢ ಬಂದು
ಜೀವನವನೆಲ್ಲ ಅರ್ಪಿಸುವ ನೆಲೆ ಬಂದ
ಠಾವಿದುವೆ ಭಕ್ತಿ ಬ್ರಹ್ಮಜ್ಞ ॥ 65 ॥

ಅಷ್ಟಸಾತ್ತ್ವಿಕಭಾವ । ಘಟ್ಟದೊಳು ನಿಲಲಾಗ
ನಿಷ್ಠೆಯಲಿ ನಾಮ ಜಪಿಸುತ್ತಲಾನಂದ-
ಪಟ್ಟಿಹುದೆ ಭಕ್ತಿ ಬ್ರಹ್ಮಜ್ಞ ॥ 66 ॥

1. ಈ ವಿಷಯಕ್ಕೆ ವಿಷ್ಣುಪುರಾಣದಲ್ಲಿರುವ 'ಯಾ ಪ್ರೀತಿರವಿವೇಕಾನಾಂ....' ಎಂಬ ಶ್ಲೋಕವನ್ನು ನೋಡಿರಿ.

ಕೊಟ್ಟಿದ್ದನುಣ್ಣುವೆನು । ಇಟ್ಟಹಾಗಿರುವೆ ನಾ
ಸೃಷ್ಟೀಶ ನೀನು ಕರೆದಾಗ ಬಹೆನೆಂಬ
ನಿಷ್ಠೆಯೇ ಭಕ್ತಿ ಬ್ರಹ್ಮಜ್ಞ[1] ॥ 67 ॥

ಸಾಧನೆಯ ಭಕ್ತಿಯಿದು । ಆಧಾರವಿದು ಮೊದಲು
ಸಾಧಿಸಲು ಇದನು ಪರಭಕ್ತಿಯಹ ಜ್ಞಾನ
ಸಾಧ್ಯ ತಾನಕ್ಕು ಬ್ರಹ್ಮಜ್ಞ ॥ 68 ॥

ಸಾಧ್ಯಸಾಧನೆಗಳನು । ಸಾಧಿಸುವ ಬಗೆಯಲ್ಲಿ
ಆಧರಿಸಿ ಭಾಷ್ಯದುಕ್ತಿಗಳ ವಿವರಿಸುವೆ
ಸಾಧುಗಳು ಕೇಳಿ ಬ್ರಹ್ಮಜ್ಞ ॥ 69 ॥

ತಿಳಿಯಲೀ ಬಗೆಯನ್ನು ಸುಲಭದಲಿ ಪರಮಾರ್ಥ
ಅಳವಟ್ಟು ಜೀವನುದ್ಧಾರನಾಗುವೊಡೆ
ಕಳವಳವೆ ಇಲ್ಲ ಬ್ರಹ್ಮಜ್ಞ ॥ 70 ॥

**(ಜೀವರ ಸಹಜಸ್ವಭಾವ)**

ಕಾಮನೆಯ ಬಲೆಯಲಿ । ತಾ ಮೊದಲು ಸಿಕ್ಕಿರಲು
ಆ ಮಹಾತತ್ತ್ವದೊಳು ನಿಲಲಸಾಧ್ಯವೀ
ನೇಮ ಲಕ್ಷಿಪುದು ಬ್ರಹ್ಮಜ್ಞ ॥ 71 ॥

ಪ್ರಾಣಿಗಳ ಹುಟ್ಟುಗುಣ । ಮೇಣವಿದ್ಯಾಕಾಮ
ಮಾನವನು ಯತ್ನದಿಂದಿದನು ಗೆಲಿದಾಗ
ಕಾಣುವನು ಶಾಂತಿ ಬ್ರಹ್ಮಜ್ಞ ॥ 72 ॥

ಭಾವನೆಗಳೇ ನಿಜದಿ । ಜೀವಗಳನಾಳುವವು
ಭಾವನಾವಶನು ಈ ನರನು ಕಾಮಾದಿ
ಭಾವಗಳ ಮಯನು ಬ್ರಹ್ಮಜ್ಞ ॥ 73 ॥

**(ಇಂದಿನ ಸ್ಥಿತಿ)**

ಮೂಢನಂಬಿಕೆಗಳನು । ಝಾಡಿಸುತ ಸುವಿಚಾರ
ಗೂಢಗಳ ತಿಳಿವ ಕಡುಜಾಣರೆನುವರಿಗು
ರೂಢಿಸಿದೆ ಭಾವ ಬ್ರಹ್ಮಜ್ಞ ॥ 74 ॥

---

1. ಶ್ರೀ ಶ್ರೀಗಳವರು ಗ್ರಂಥಕರ್ತನಿಗೆ ಭಕ್ತಿಯ ವಿಷಯಕ್ಕೆ ಹೇಳಿರುವ ಉಕ್ತಿಯಿದು.

ದ್ವೇಷ ಮುಷ್ಕರ ರೋಷ । ಆಶೆ ಕಪಟದ ವೇಷ
ಆಸುರದ ಯುದ್ಧಭಯದಿಂದ ಜಗವೆಲ್ಲ
ಘಾಸಿಗೊಳುತಿಹುದು ಬ್ರಹ್ಮಜ್ಞ ॥ 75 ॥

ತತ್ತ್ವದಾ ನುಡಿಗಳನು । ಒತ್ತಿ ಹೇಳುವರಿಗೂ
ಸುತ್ತುವದು ಭಾವದೊಳು ಕಾಮನೆಯ ಪಾಶ
ಕತ್ತುಹಿಸುಕುವದು ಬ್ರಹ್ಮಜ್ಞ ॥ 76 ॥

ಪರರಿಗುಪದೇಶಿಪುದು । ಪರಮಸುಲಭದಿ ಬಕ್ಕು
ಕರಣದಲಿ ಭಾವವೆದ್ದಾಗ ತಡೆಯಲ್ಕೆ
ಸರುವರಿಗು ಬರದು ಬ್ರಹ್ಮಜ್ಞ ॥ 77 ॥

ಕೆಲವೇಳೆ ಸುವಿವೇಕ । ಸುಳಿದಾಡಿ ಹೋದರೂ
ಕೆಲಸಕ್ಕೆ ಬರದು ಹೊತ್ತಿನಲಿ ಭಾವಗಳ
ಕಳವಳವೆ ಬಿಡದು ಬ್ರಹ್ಮಜ್ಞ ॥ 78 ॥

ಭಾವನೆಗಳಾಟವಿದು ಜಿವರನ್ನನುಚಿತದಿ
ಧಾವಿಸುವ ತೆರದಿ ದೂಡುವದು ಈ ರೋಗ-
ಕಾವುದೌಷಧವು ? ಬ್ರಹ್ಮಜ್ಞ ॥ 79 ॥

ನಿಗ್ರಹದೆ ಗೆಲುವ ಈ । ಆಗ್ರಹವು ಸಲ್ಲದಿದು
ವ್ಯಗ್ರತೆಯ ಮುಸುಕು ಬರಲಿವಗೆ ತಿಳಿಯದಲೆ
ಬಗ್ಗಿಸುವದಿನ್ನು ಬ್ರಹ್ಮಜ್ಞ ॥ 80 ॥

ಶಕ್ತಿಯಿಂದಾಗದುದು । ಯುಕ್ತಿಯಲಿ ಸಾಗುವದು
ಉಕ್ತಿಯಿದ ನೆನೆದು ದೊಡ್ಡವರುಪಾಯವನು
ಗೊತ್ತುಪಡಿಸಿಹರು ಬ್ರಹ್ಮಜ್ಞ ॥ 81 ॥

ದಿವ್ಯೌಷಧಿಯನಿಲ್ಲಿ । ಸುವ್ಯವಸ್ಥಿತಿಯಿಂದೆ
ಶ್ರೀವ್ಯಾಸ ಭೀಷ್ಮರಾದಿಯಲಿ ಪೇಳಿಹರು
ಸೇವ್ಯವಿದು ನಿಜದಿ ಬ್ರಹ್ಮಜ್ಞ[1] ॥ 82 ॥

ಭಾವಗಳ ದಿಕ್ಕನ್ನು । ತೀವಿ ಬದಲಿಸುತಿನ್ನು
ಆವೇಗವನ್ನೆ ತಡೆಗಟ್ಟಿ ನಿಲಿಸುವದೆ
ಕೋವಿದರ ಯುಕ್ತಿ ಬ್ರಹ್ಮಜ್ಞ ॥ 83 ॥

1. ಈ. ವಿಷಯಕ್ಕೆ ಭಾಗವತದಲ್ಲಿ ವ್ಯಾಸನಾರದಸಂವಾದವನ್ನು (1–5ನ್ನು) ನೋಡಿರಿ.

ಭಕ್ತಿಯಿಂದೀ ಕೆಲಸ । ಮತ್ತೆ ಸುಲಭದೊಳಕ್ಕು
ಒತ್ತಾಯದಿಂದೆ ಸಾಧಿಸುದ ಸಾಧ್ಯವೂ
ಭಕ್ತಿಗೆಟುಕುವದು ಬ್ರಹ್ಮಜ್ಞ ॥ 84 ॥

**(ಕಾಮ್ಯಭಕ್ತಿ)**

ಹಾಲುಕುಡಿಯದ ಮೂಢ । ಬಾಲನಿಗೆ ಯುಕ್ತಿಯಲಿ
ಹಾಲಿದನು ಕುಡಿಯೆ ಬೆಳೆಯುವದು ಜುಟ್ಟೆಂದು
ಬೋಳಯಿಸಿದಂತೆ ಬ್ರಹ್ಮಜ್ಞ ॥ 85 ॥

ಪರಮಾತ್ಮನೆಡೆಗೊಯ್ವ । ವರಯುಕ್ತಿ ಮೊದಲಲ್ಲಿ
ಬರುತಿರುವ ಕಾಮಗಳಿಗೆಲ್ಲ ಅವನನ್ನೆ
ನಿರುತ ಭಜಿಸುವದು ಬ್ರಹ್ಮಜ್ಞ[1] ॥ 86 ॥

ಆತನಾ ಕೃಪೆಯಿಂದ । ಈತ ಕಾಮನೆ ಪಡೆಯೆ
ಪ್ರೀತಿಯಿದು ಬಕ್ಕು ತಾನಾಗಿ ದೇವನಲಿ
ರೀತಿಯಿದ ನೋಡಿ ಬ್ರಹ್ಮಜ್ಞ ॥ 87 ॥

ಕಾಮನೆಗೆ ಒಳಗಾಗಿ । ನೇಮ ಮೀರುತ ನಡೆವ
ತಾಮಸವೆ ತೊಲಗಿ ಭಗವಂತನಡಿಯಲ್ಲಿ
ಪ್ರೇಮ ಬಂತೀಗ ಬ್ರಹ್ಮಜ್ಞ ॥ 88 ॥

ಧರ್ಮದಲಿ ಶ್ರದ್ಧೆ ಬರೆ । ಪೇರ್ಮೆ ಸತ್ಕರ್ಮದಲಿ
ದುರ್ಮಾರ್ಗ ಬಿಡುವನಿವ ಸಾವಕಾಶದಲಿ
ಮರ್ಮವಿದು ಕೇಳಿ ಬ್ರಹ್ಮಜ್ಞ ॥ 89 ॥

ಪರಮಾತ್ಮನಾಶ್ರಯದಿ । ಬರುತಿಹುದು ಸನ್ಮತಿಯು
ಕರಗುವದು ಕಾಮವಾಸನೆಯು ಭಕ್ತಿಪಥ-
ದರಿವು ಹುಟ್ಟುವದು ಬ್ರಹ್ಮಜ್ಞ ॥ 90 ॥

ಸರ್ವಕಾಮಗಳನ್ನು । ಸರ್ವೇಶ ಕೊಡುವನೆನೆ
ಗರ್ವಮಂ ತೊರೆದು ಶ್ರೀಹರಿಯುಪಾಸನೆಯ
ನಿರ್ವಹಿಪನಾಗ ಬ್ರಹ್ಮಜ್ಞ ॥ 91 ॥

---

1. ಪದ್ಯ 85, 86ರ ವಿಷಯಕ್ಕೆ ಗೀ. 18-66 (ಭಾ. ಭಾ. 1141)ನ್ನು ಪೂರ್ಣವಾಗಿ ನೋಡುವದಲ್ಲದೆ ವಿಶೇಷವಾಗಿ 'ಲೋಕೇ ಪಯ ಅದೌ ಪಾಯಯಿತವ್ಯೈಃ' ಎಂಬ ವಾಕ್ಯವನ್ನು ನೋಡಿರಿ.

## (ನಿಷ್ಕಾಮಕ್ಕೆ ದಾರಿ)

ಹಿತವಹಿತ ತಿಳಿಯದಲೆ । ಮತಿಯಿದುವೆ ಬಯಸುವದು
ಹಿತವಾದುದನ್ನೆ ನೀಡು ನೀನೆನ್ನುವೀ
ಮತಿಯು ಹುಟ್ಟುವದು ಬ್ರಹ್ಮಜ್ಞ ॥ 92 ॥

ಕಷ್ಟನಿಷ್ಠುರಗಳೂ । ಇಷ್ಟ ಸಂಪದಗಳೂ
ಸೃಷ್ಟೀಶ ಕೊಟ್ಟ ವರವೆಂದು ಭಾವಿಸುವ
ದೃಷ್ಟಿಗೇರುವನು ಬ್ರಹ್ಮಜ್ಞ ॥ 93 ॥

ಆಗುಹೋಗುಗಳೆಲ್ಲ । ನಾಗಶಯನನ ಒಲುಮೆ
ಈಗಿಲ್ಲ ಕಾಮ ಸರ್ವವನು ಅರ್ಪಿಸುತ
ಸಾಗಿಹನು ಭಕ್ತ ಬ್ರಹ್ಮಜ್ಞ ॥ 94 ॥

ಉಕ್ಕುವದು ಭಕ್ತಿರಸ । ಅಕ್ಕರದಿ ಹೃದಯದಲಿ
ಮಿಕ್ಕೆಲ್ಲ ಚಿಂತೆ ಕೈಬಿಟ್ಟು ಸಂತತವು
ಭಕ್ತಿಯದ ನಿಲುವ ಬ್ರಹ್ಮಜ್ಞ ॥ 95 ॥

ಹರಿಪೂಜೆ ಹರಿನಾಮ । ಹರಿಮಹಿಮೆಯಲಿ ಪ್ರೇಮ
ಹರಿಭಕ್ತ ಜನರ ಒಡನಾಟ ಎಲ್ಲೆಡೆಗು
ಹರಿಭಾವ ಬಕ್ಕು ಬ್ರಹ್ಮಜ್ಞ ॥ 96 ॥

ಭಾಗವತಮತದಲ್ಲಿ । ಆಗಿರುವ ದೋಷಗಳ
ಭಾಗವನು ತೋರಿ ಶಂಕರರು ಭಾಷ್ಯಬರೆ-
ವಾಗ ಹೇಳಿಹರು ಬ್ರಹ್ಮಜ್ಞ[1] ॥ 97 ॥

ಈಶ್ವರಾರ್ಚನೆಯಿದುವೆ । ಶಾಶ್ವತದ ಸನ್ಮಾರ್ಗ
ಲೇಸಾಗಿ ಜ್ಞಾನ ಪಡೆಯುವನು ವಿಷ್ಣುವನು-
ಪಾಸಿಸಲು ಕೇಳಿ ಬ್ರಹ್ಮಜ್ಞ ॥ 98 ॥

ಅಭಿಗಮನ ಮೊದಲಾದ । ಅಭಯದೀ ಮಾರ್ಗದಲಿ
ಅಭಿಮಾನ ಬಿಡಿಸಿ ಪರಮಾರ್ಥದೊಳು ನಿಲುವ
ಉಭಯ ಗುಣವಿಹುದು ಬ್ರಹ್ಮಜ್ಞ[2] ॥ 99 ॥

---

1. ಈ ವಿಷಯಕ್ಕೆ ಸೂ.ಭಾ. 2–2–44 (ಭಾ. ಭಾ. 84ರಲ್ಲಿ) 'ಅತ್ರ ಬ್ರೂಮಃ' ಎಂಬಲ್ಲಿಂದ 2–2–45ರವರೆಗೂ ನೋಡಿರಿ.

2. ಪದ್ಯ 98, 99ಕ್ಕೆ ಸೂ.ಭಾ. 2–2–44 (ಭಾ. ಭಾ. 84) 'ಯದಪಿ ತಸ್ಯ ಭಗವತಃ ಅಭಿಗಮನಾದಿಲಕ್ಷಣಮ್ ಆರಾಧನಮ್' ಎಂಬ ಭಾಗವನ್ನೂ ಹಾಗೂ ಭಾ.ಭಾ. 83ರಲ್ಲಿ ಅಭಿಗಮನಾದಿಗಳಿಗೆ ಇರುವ (ಪುಟ 156ರಲ್ಲಿರುವ) 2ನೇ ಟಿಪ್ಪಣಿಯನ್ನೂ ನೋಡಿರಿ.

ಸಗುಣ ಸಾಕಾರವೇ । ಬಗೆಯಲು ವಿಭೂತಿಯದು
ಸಗುಣದಾ ಭಕ್ತಿ ಬೆಳೆದಾಗ ಅವಗಕ್ಕು
ಜಗದಾತ್ಮಭಾವ ಬ್ರಹ್ಮಜ್ಞ[1] ॥ 100 ॥

ಸಾಕಾರ ಭಜನೆಯನು । ಸ್ವೀಕರಿಸೆ ಕೊನೆಯಲ್ಲಿ
ತಾ ಕಾಂಬ ವಿಶ್ವವೆಲ್ಲವಿದು ಶ್ರೀಹರಿಯ
ಆಕಾರವೆನುತ ಬ್ರಹ್ಮಜ್ಞ[2] ॥ 101 ॥

**(ವಿಶ್ವರೂಪ ಉಪಾಸನೆ)**

ವಿಶ್ವರೂಪವಿದೆಂದು । ವಾಸುದೇವನು ಪೇಳ್ದ
ಶಾಶ್ವತದ ಭಕ್ತಿಮಾರ್ಗವಿದನನುಸರಿಸೆ
ನಿಶ್ಚಿತವು ಮುಕ್ತಿ ಬ್ರಹ್ಮಜ್ಞ ॥ 102 ॥

ಇದರ ವಿವರವನಿಲ್ಲಿ । ಮುದದಿಂದ ಹೇಳುವೆನು
ಇದು ವಿಶ್ವರೂಪದಧ್ಯಾಯ ಕೊನೆಯಲ್ಲಿ
ಹುದುಗಿರುವ ಶ್ಲೋಕ ಬ್ರಹ್ಮಜ್ಞ ॥ 103 ॥

ನನಗಾಗಿ ಕ್ರಿಯೆಮಾಡು । ಅನವರತ ನನ್ನಲಿರು
ಘನಭಕ್ತಿಯಿಡುತ ಬಿಡು ಸಂಗವೈರಗಳ
ಕೊನೆಗೆ ಪಡೆ ಎನ್ನ ಬ್ರಹ್ಮಜ್ಞ[3] ॥ 104 ॥

ಗೀತೆಯಲಿ ಹೇಳಿರುವ । ಪೂತ ಸಾಧನವೆಲ್ಲ
ಹೂತಿಹುದು ಇಲ್ಲಿ ಎಂದಿರುವ ಶಂಕರರ
ಮಾತಿದನು ಕೇಳಿ ಬ್ರಹ್ಮಜ್ಞ[4] ॥ 105 ॥

ತಾನು ಮಾಡುವ ಕರ್ಮ । ದಾನವಾರಿಗೆ ಸಲಿಸಿ
ಏನೊಂದು ಬೇರೆ ಚಿಂತನೆಯೆ ಇಲ್ಲದಲೆ
ಧ್ಯಾನಿಪನು ಹರಿಯ ಬ್ರಹ್ಮಜ್ಞ ॥ 106 ॥

---

1. ಈ ವಿಷಯಕ್ಕೆ ಗೀ. 10–41ನ್ನು ನೋಡಿರಿ.
2. ಮೊದಲು ವಿಭೂತ್ಯುಪಾಸನೆಮಾಡಿದರೆ ಮುಂದೆ ವಿಶ್ವರೂಪೋಪಾಸನೆಯು ದಕ್ಕುವದು – ಎಂಬು ಭಾವ.
3. ಈ ವಿಷಯಕ್ಕೆ ಗೀ. 11–55ನ್ನು ನೋಡಿರಿ.
4. ಈ ವಿಷಯಕ್ಕೆ ಗೀ. 11–55 (ಭಾ.ಭಾ. 722)ನ್ನು ನೋಡಿರಿ.

ಹುಟ್ಟುಸಾವುಗಳಲ್ಲಿ । ಕಷ್ಟನಿಷ್ಠುರದಲ್ಲಿ
ಬಿಟ್ಟಿರೆನು ಹರಿಯನೆಂದಿಗೂ ಎನುವ ಈ
ಗಟ್ಟಿಮನ ಬಹುದು ಬ್ರಹ್ಮಜ್ಞ ॥ 107 ॥
ನಾಮಸಂಕೀರ್ತನೆಗೆ ಪ್ರೇಮ । ಉಕ್ಕೇರುವದು
ಕಾಮವೇ ಇರದ ಬರಿಪ್ರೇಮವೀ ಸ್ಥಿತಿಯು
ಸಾಮಾನ್ಯವಲ್ಲ ಬ್ರಹ್ಮಜ್ಞ ॥ 108 ॥
ನಾನು ನನ್ನದು ಎನದೆ । ನೀನು ನಿನ್ನದು ಎನುವ
ತಾನೀಗ ಸಂಗವರ್ಜಿತನು ಬಲುಶಾಂತ
ಮಾನವನು ಭಕ್ತ ಬ್ರಹ್ಮಜ್ಞ ॥ 109 ॥
ಸ್ವೇಷಿಸಲು ಮಿಕ್ಕವರು । ದ್ವೇಷವನು ಮಾಡನಿವ
ವೇಷವಿದ ಧರಿಸಿ ಎನ್ನನ್ನೆ ಪರಿಕಿಸುವ
ಕೇಶವನು ಎನುವ ಬ್ರಹ್ಮಜ್ಞ[1] ॥ 110 ॥
ಸೋಮಸೂರ್ಯಾದಿಗಳು । ವ್ಯೋಮಭೂಮ್ಯಾದಿಗಳು
ಆ ಮಹಾಜಲಧಿ ಗಿರಿವನವು ಶ್ರೀಹರಿಯ
ಧಾಮವೆನ್ನುವನು ಬ್ರಹ್ಮಜ್ಞ ॥ 111 ॥
ವಿದ್ಯುತ್ತು ಮೊದಲಾದ । ಅದ್ಭುತದ ಶಕ್ತಿಗಳು
ಇದ್ದೆಲ್ಲ ಜೀವಿಗಳು ವಾಸುದೇವನೇ
ಇದ್ದಿಹನು ಎನುವ ಬ್ರಹ್ಮಜ್ಞ ॥ 112 ॥
ನೋಡುವದ ಕೇಳುವದ । ಕೂಡುವದನೆಲ್ಲವನು
ಮಾಡುವನು ಹರಿಯ ಮಯವಾಗಿ ಭಕ್ತನಿವ
ನೋಡನಿನ್ನೊಂದ ಬ್ರಹ್ಮಜ್ಞ ॥ 113 ॥
ಇಂಥ ಈ ಭಕ್ತಿಯಿಂ । ಸಂತತವು ಕೂಡಿದಗೆ
ಮುಂತಿನ್ನು ಜ್ಞಾನ ಸುಲಭದೊಳಗಾಗುವದು
ಇಂತು ಬರೆದಿಹರು ಬ್ರಹ್ಮಜ್ಞ ॥ 114 ॥
ಸರ್ವಕರಣಗಳಿಂದೆ । ಸರ್ವತ್ರ ಶ್ರೀಹರಿಯ
ಉರ್ವಿಯೊಳು ಕಾಂಬ ಪರಿಯನನ್ಯದ ಭಕ್ತಿ
ಸರ್ವೇಶನೊಲಿಮೆ ಬ್ರಹ್ಮಜ್ಞ[2] ॥ 115 ॥

---

1. ಪದ್ಯ 106 ರಿಂದ 110ರ ಪೂರ ವಿಷಯಕ್ಕೆ ಗೀ. 11–55 (ಭಾ.ಭಾ. 723)ನ್ನು ನೋಡಿರಿ.

2. ಈ ವಿಷಯಕ್ಕೆ ಗೀ. 11–54 (ಭಾ.ಭಾ. 721ರಲ್ಲಿಯ) 'ಸರ್ವೈರಪಿ ಕರಣೈಃ' ಎಂಬ ವಾಕ್ಯವನ್ನೂ ಗೀ. 13–18 (ಭಾ.ಭಾ. 805ರಲ್ಲಿ) 'ಮದ್ಭಕ್ತಃ' ಎಂಬಿದರ ವ್ಯಾಖ್ಯಾನವನ್ನೂ ನೋಡಿರಿ. ಇಲ್ಲಿ ಮೊದಲನೆಯದು **ಸಾಧನ ಭಕ್ತಿ**, ಎರಡನೆಯದು **ಪರಾಭಕ್ತಿ.**

ಕ್ಷೇತ್ರಜ್ಞಜ್ಞಾನಕ್ಕೆ । ಪಾತ್ರತೆಯ ತಿಳಿಪಾಗ
ಸ್ತೋತ್ರವನೆ ಮಾಡಿ ಬರೆದಿಹರು ಈ ಭಕ್ತಿ
ಗಾತ್ರವನು ತಿಳಿಸಿ ಬ್ರಹ್ಮಜ್ಞ ॥ 116 ॥

ವಿಷಯಸುಖದಾಶೆ ಬಿಡೆ । ಅಸಮ ವಿರತಿಯೆ ಬೇಕು
ವಸುದೇವಸುತನ ಭಕ್ತಿಯಿಂ ಈ ವಿರತಿ
ಹಸನಾಗಿ ಬಕ್ಕು ಬ್ರಹ್ಮಜ್ಞ ॥ 117 ॥

ಸಾಧನಚತುಷ್ಟಯವು । ಸಾಧಿಸುವದಿದರಿಂದೆ
ಬೋಧಿಸಿದ ಸುಲಭದಾರಿಯಿದು ಈ ಭಕ್ತಿ
ಸಾಧನೆಯು ನರಗೆ ಬ್ರಹ್ಮಜ್ಞ ॥ 118 ॥

ಗೀತೆ ಕೊನೆಯಧ್ಯಾಯ । ಖ್ಯಾತವಹ ಶ್ಲೋಕದಲಿ
ಈತನೇ ಮುನ್ನ ತಿಳಿಯುವನು ಭಕ್ತಿಯಿಂ-
ದಾತುಮನ ತತ್ತ್ವ ಬ್ರಹ್ಮಜ್ಞ ॥ 119 ॥

ನನ್ನ ನಿಜರೂಪವಿದು । ಇನ್ನು ತಿಳಿಯುವದಿವಗೆ
ನನ್ನನ್ನೆ ಸೇರಿ ಸುಖಿಸುವನು ಎಂದಿರುವ
ಘನ್ನಪದಯುತನು ಬ್ರಹ್ಮಜ್ಞ[1] ॥ 120 ॥

ನನಸೆಲ್ಲ ಕನಸೆಲ್ಲ । ತನಿನಿದ್ರೆಯೆಲ್ಲವೂ
ಚಿನುಮಯನೆ ಎಂಬ ಬೋಧವಿದನಾಲಿಸಲು
ಮನದಿ ನಿಲ್ಲುವದು ಬ್ರಹ್ಮಜ್ಞ ॥ 121 ॥

'ನಾನು, ಇದು' ಎಲ್ಲವೂ । ತಾನಾದ ಈ ಆತ್ಮ
ನಾನಿಲ್ಲ ಮತ್ತೆ ಜಗವಿಲ್ಲ ಎಲ್ಲವೂ
ತಾನಾಯಿತಿವಗೆ ಬ್ರಹ್ಮಜ್ಞ ॥ 122 ॥

ವಾಸುದೇವನೆ ಎಲ್ಲ । ಈ ಸಕಲ ವಿಶ್ವವಿದು
ಭಾಸಿಸಲು ಗೆದ್ದನೀ ಭಕ್ತ ಜ್ಞಾನಿಯೇ
ವಾಸುದೇವೋಕ್ತಿ ಬ್ರಹ್ಮಜ್ಞ[2] ॥ 123 ॥

---

1. ಪದ್ಯ 119, 120ರ ವಿಷಯಕ್ಕೆ ಗೀ. 18–55 (ಭಾ. ಭಾ. 1105)ರಲ್ಲಿ 'ತತಃ ಜ್ಞಾನಲಕ್ಷಣಯಾ ಭಕ್ತ್ಯಾ' ಎಂಬಿದನ್ನು ನೋಡಿರಿ. ಇದನ್ನೇ ಈ ಅಧ್ಯಾಯದ 68ನೇ ಶ್ಲೋಕದಲ್ಲಿ ಪರಾಭಕ್ತಿ ಎಂದಿದೆ.

2. ಪದ್ಯ 121 ರಿಂದ 123ರವರೆಗಿನ ವಿಷಯಕ್ಕೆ ಗೀ. 18–55 (ಭಾ. ಭಾ. 1105)ರಲ್ಲಿ 'ತಂ ಮಾಂ' ಎಂಬ ವಾಕ್ಯವನ್ನು ನೋಡಿರಿ.

ಇದೆ ಜ್ಞಾನನಿಷ್ಠೆ ಮೇಣ್ । ಇದೆ ಪರಾಭಕ್ತಿ ಮೇಣ್
ಇದನೀಗ ನಾಲ್ಕನೆಯ ಭಕ್ತಿಯೆಂದಿರುವ
ಹದನವನು ತಿಳಿಗು ಬ್ರಹ್ಮಜ್ಞ[1] ॥ 124 ॥

ಹೀಗೆ ನಿಷ್ಠೆಯ ಪಡೆಯೆ । ಆಗಿಹುದು ಹಾದಿಯಿದು
ಬೇಗನೆಯೆ ಹಿಡಿಯೆ ಈ ಭಕ್ತಿಮಾರ್ಗವನು
ಆಗುವದು ಮುಕ್ತಿ ಬ್ರಹ್ಮಜ್ಞ ॥ 125 ॥

ಇದು ಉಪಾಸನತತ್ತ್ವ । ಇದರರಿವೆ ಮಹತ್ತ್ವ
ಇದ ಬಿಟ್ಟರಿಲ್ಲವೀ ಕಾಲದೊಳು ಸುಲಭ-
ವಿದಾಚರಿಸಲ್ಕೆ ಬ್ರಹ್ಮಜ್ಞ ॥ 126 ॥

**(ಜ್ಞಾನಿಭಕ್ತರ ಚರ್ಯೆ)**

ಜ್ಞಾನನಿಷ್ಠರುಯಿವರು । ಧ್ಯಾನಿಪರು ಭಕ್ತಿಯಲಿ
'ನಾ, ನೀನು' ಎಂದು ಕಲ್ಪಿಸುತಲಾತ್ಮನನು
ಆನಂದಕಾಗಿ ಬ್ರಹ್ಮಜ್ಞ ॥ 127 ॥

ಹಿಂದೆ ಸಾಧನಭಕ್ತಿ । ಹೊಂದಿರುತ ಜ್ಞಾನದಲಿ
ನಿಂದಿರುವ ಇವರ ಬುದ್ಧಿಗಿದು ಸಹಜ ಗೋ-
ವಿಂದ ಕೀರ್ತನೆಯು ಬ್ರಹ್ಮಜ್ಞ ॥ 128 ॥

ಪರಮಾತ್ಮನಾಮವನು । ಸ್ಮರಿಸಲ್ಕೆ ಇವರಲ್ಲಿ
ಬರುತಿಹುದು ಸಗುಣನಿರ್ಗುಣದ ಭಾವಗಳ
ಪರಿಯೆಲ್ಲ ಮನದಿ ಬ್ರಹ್ಮಜ್ಞ ॥ 129 ॥

ಕಾಮವನು ಗೆದ್ದಿರುವ । ಈ ಮಹಾತುಮರು ಸಹ
ಕಾಮಿಸುವರಿಲ್ಲಿ ಸವಿಯಲ್ಕೆ ಭಕ್ತಿರಸ
ಶ್ರೀಮಾಧವನಲಿ ಬ್ರಹ್ಮಜ್ಞ[2] ॥ 130 ॥

ತಮ್ಮಾತ್ಮನಿವನೆಂದು । ತಮ್ಮೊಳಗೆ ಕಂಡಿರುತ
ಸಮ್ಮತಿಪರಿವರು ಪರಮಾತ್ಮಮಹಿಮೆಯನು
ಇಮ್ಮಡಿಸುತಿಹರು ಬ್ರಹ್ಮಜ್ಞ ॥ 131 ॥

---

1. ಈ ಪದ್ಯದ ವಿಷಯಕ್ಕೆ ಗೀ. 18–54 (ಭಾ.ಭಾ. 1104ರಲ್ಲಿ) 'ಏವಂ ಭೂತಃ ಜ್ಞಾನನಿಷ್ಠಃ ಮದ್ಭಕ್ತಿಂ..... ಪರಾಂ ಉತ್ತಮಾಂ ಜ್ಞಾನಲಕ್ಷಣಾಂ ಚತುರ್ಥೀಮ್' ಎಂಬ ವಾಕ್ಯವನ್ನು ನೋಡಿರಿ.

2. ಈ ವಿಷಯಕ್ಕೆ ಭಾಗವತ 1–7–10ನ್ನು ನೋಡಿರಿ.

ಪರಮಪುರುಷನ ಮಹಿಮೆ । ಪರಿಪರಿಯ ಲೀಲೆಗಳ
ಸ್ಮರಿಸುತ್ತ ನೋಡಿ ನಲಿಯುವರು ಅನುಭವದಿ
ಅರಿಯುತ್ತಲೀಗ ಬ್ರಹ್ಮಜ್ಞ ॥ 132 ॥

ತಾನಾಗಿ ಇದ್ದವನು । ಏನೆಲ್ಲವಾದವನು
ಏನಾಗದಿರುವ ನಿರ್ಗುಣನು ತೋರಿಕೆಗೆ
ತಾನೀಗ ಸಗುಣ ಬ್ರಹ್ಮಜ್ಞ ॥ 133 ॥

ಹೆತ್ತಿರುವ ತುಪ್ಪವದು । ಮತ್ತೆ ಕರಗಿದೊಡೇನು ?
ವ್ಯತ್ಯಾಸವಿಲ್ಲ ತತ್ತ್ವದಲಿ ತುಪ್ಪವೇ
ಎತ್ತ ನೋಡಿದರು ಬ್ರಹ್ಮಜ್ಞ[1] ॥ 134 ॥

ನೀರು ಮಂಜಿನಗೆಡ್ಡೆ । ಬೇರಲ್ಲ ತತ್ತ್ವದಲಿ
ನೀರಾಗಿ ಇರುವ ತೆರನಂತೆ ನಿರ್ಗುಣದ
ತೋರಿಕೆಯೆ ಸಗುಣ ಬ್ರಹ್ಮಜ್ಞ[2] ॥ 135 ॥

ನನಸಾಗಿ ತೋರ್ಪವನು । ಕನಸಾಗಿ ಕಾಂಬವನು
ತನಿನಿದ್ರೆಯಾಗಿ ನಿಂತವನು ಮೂರಿರದ
ಚಿನುಮಯನು ಹರಿಯು ಬ್ರಹ್ಮಜ್ಞ ॥ 136 ॥

ಮಾಯಾಧಿಪತಿಯಾಗಿ । ಮಾಯೆಯೂ ತಾನಾಗಿ
ಕಾಯಲ್ಕೆ ಸುಜನವೃಂದವನು ಬಲುರೂಪ
ಹಾಯಾಗಿ ಕೊಳ್ವ ಬ್ರಹ್ಮಜ್ಞ ॥ 137 ॥

ರಾಮಕೃಷ್ಣಾದ್ಯಖಿಳ । ನಾಮರೂಪಗಳಿಂದೆ
ಭೂಮಿಯೊಳು ಲೀಲೆ ತೋರಿರುವ ನಮ್ಮಾತ್ಮ
ಭೂಮದಾನಂದ ಬ್ರಹ್ಮಜ್ಞ ॥ 138 ॥

ಸಗುಣದಿಂದರ್ಚಿಪುದು । ಅಗಣಿತನ ಧ್ಯಾನಿಪುದು
ಬಗೆಯುವದು ಇವನೆ ಎನ್ನಾತ್ಮ ತಾನೆಂದು
ಹೊಗುವುದಿವನಲ್ಲಿ ಬ್ರಹ್ಮಜ್ಞ ॥ 139 ॥

ಹೊರಬರಲು ಇವ ಭಕ್ತ । ತಿರುಗಿ ಒಳಬರೆ ಯುಕ್ತ
ಹೊರಒಳಗು ತುಂಬಿದಾನಂದ ಜೀವನದಿ
ಮೆರೆವ ಪರಭಕ್ತ ಬ್ರಹ್ಮಜ್ಞ ॥ 140 ॥

1. ಈ ವಿಷಯಕ್ಕೆ 'ಏಕನಾಥೀಭಾಗವತ'ವನ್ನು ನೋಡಿರಿ.
2. ಇದು ರಾಮಕೃಷ್ಣಪರಮಹಂಸರ ಉಕ್ತಿ.

ಭಾಗವತಧರ್ಮವಿದು । ಸಾಗಿಹುದು ಜ್ಞಾನಿಗಳು
ಈಗಿದನು ತೋರಿ ಜನರಿಂಗೆ ಸುಲಭದೀ
ಯೋಗ ಹಚ್ಚಿಹರು ಬ್ರಹ್ಮಜ್ಞ ॥ 141 ॥

**(ಭಕ್ತಿಯು ಸುಲಭ)**

ಕಲಿಯುಗದೊಳೀ ಭಕ್ತಿ । ಬಲು ಸುಲಭ ಸಾಧನೆಯು
ಕಲಿಸಿಹರು ಸಂತ ಶರಣನ ಜೀವನದಿ
ಅಳವಡಿಸಿಕೊಳಲು ಬ್ರಹ್ಮಜ್ಞ ॥ 142 ॥

ವೇದೋಕ್ತಕರ್ಮಗಳ । ಸಾಧನೆ ತಪಸ್ಸುಗಳ
ಹಾದಿ ಬಲುಕಠಿಣವೀ ದಿನದಿ ಭಕ್ತಿಯೇ
ಆದುದತಿಸುಲಭ ಬ್ರಹ್ಮಜ್ಞ ॥ 143 ॥

ಘಟಪಟದ ತರ್ಕಗಳ । ವಟವಟದ ಶಾಸ್ತ್ರಗಳ
ಜಟಿಲತೆಯೆ ಬೇಡ ಹರಿಭಕ್ತಿ ಮೋಕ್ಷಕ್ಕೆ
ದಿಟವಾದ ಮಾರ್ಗ ಬ್ರಹ್ಮಜ್ಞ ॥ 144 ॥

ಜಾತಿಕುಲಧರ್ಮಗಳ । ರೀತಿ ಬಿಡಬೇಕಿಲ್ಲ
ಪ್ರೀತಿಯಲಿ ಭಕ್ತಿರಸ ಬೆರೆಸಿಕೊಂಡವ ಪು-
ನೀತನಾಗುವನು ಬ್ರಹ್ಮಜ್ಞ ॥ 145 ॥

**(ಭಕ್ತಿ ಇರದಿದ್ದರೆ ವ್ಯರ್ಥ)**

ಜೀವನಕ್ಕೆ ಭಕ್ತಿರಸ । ಭಾವ ಲೇಪನವಾಗೆ
ಪಾವನವು ಜನ್ಮವೀ ಸವಿಯನುಣದವನ
ಜೀವನವೆ ವ್ಯರ್ಥ ಬ್ರಹ್ಮಜ್ಞ ॥ 146 ॥

ಹೊತ್ತಿಗಾಗದ ಮಿತ್ರ । ಬತ್ತಿರುವ ಕೆರೆಭಾವಿ
ಭಕ್ತಿಯಾ ಸವಿಯನರಿಯದನ ಚಿತ್ತವಿವು
ಮತ್ತಿನ್ನು ವ್ಯರ್ಥ ಬ್ರಹ್ಮಜ್ಞ ॥ 147 ॥

ಸಾಲಿಗನ ಸಂಸಾರ । ಗೋಳಿಡುವ ಪರಿಹಾರ
ಕಾಲಕ್ಕೆ ಸಿಗದ ಪರಿಹಾರ ಭಕ್ತಿಯಿರ-
ದಾಲಯವೆ ವ್ಯರ್ಥ ಬ್ರಹ್ಮಜ್ಞ ॥ 148 ॥

ಅಕ್ಷಿಯಿಲ್ಲದ ನರನು । ಪಕ್ಷವಿಲ್ಲದ ಹಕ್ಕಿ
ದಕ್ಷತೆಯಲಿರದ ಸೇವಕನು ಭಕ್ತಿಯಿರ-
ದಾಕ್ಷಣವೆ ವ್ಯರ್ಥ ಬ್ರಹ್ಮಜ್ಞ ॥ 149 ॥

ರೀತಿಯರಿಯದ ಗುರುವು । ನೀತಿಗೆಟ್ಟಿಹ ಶಿಷ್ಯ
ಮಾತಿನಲೆ ಮುಗಿವ ವೇದಾಂತ ಭಕ್ತಯಿರ-
ದಾ ತಪವೆ ವ್ಯರ್ಥ ಬ್ರಹ್ಮಜ್ಞ ॥ 150 ॥

ವೇದವರಿಯದ ವಿಪ್ರ । ಕಾದಲರಿಯದ ಕ್ಷತ್ರ
ಯಾದವನ ಪಾದಭಕುತಿ ಇರದಾ ಮನುಜ
ಮೇದಿನಿಗೆ ಭಾರ ಬ್ರಹ್ಮಜ್ಞ ॥ 151 ॥

ದ್ವೇಮಾಡುವ ಬಂಧು । ತೋಷವರಿಯದ ಬಳಗ
ಕೇಶವ ಭಕ್ತಿ ಅರಿಯದನ ಜನುಮವಿವು
ಬೇಸರಕೆ ಮೂಲ ಬ್ರಹ್ಮಜ್ಞ ॥ 152 ॥

ಮಾತು ಕೇಳದ ಮಗನು । ಪ್ರೀತಿಯರಿಯದ ಸತಿಯು
ಸೀತೆಯಾಪತಿಯ ಭಜಿಸದನ ನಾಲಿಗೆಯು
ಏತಕ್ಕೆ ಜಗದಿ ? ಬ್ರಹ್ಮಜ್ಞ ॥ 153 ॥

ಶ್ರದ್ಧೆಯಿಲ್ಲದ ಕರ್ಮ । ನಿದ್ರೆಯಿಲ್ಲದ ರಾತ್ರಿ
ಒದ್ದಾಟ ಮೂಲವಾದಂತೆ ಭಕ್ತಿಯಿರ-
ದಿದ್ದವನ ಬಾಳು ಬ್ರಹ್ಮಜ್ಞ ॥ 154 ॥

ಕಾಲಮೀರಿದ ಊಟ । ಖೂಳಜನರೊಡನಾಟ
ಹಾಳಾದ ತೋಟ ಭಕುತಿರಸವರಿಯದನ
ಬಾಳು ಪರದಾಟ ಬ್ರಹ್ಮಜ್ಞ ॥ 155 ॥

ಭಕ್ತಿಯಿಂದೆ ವಿರಕ್ತಿ । ಮತ್ತೆ ಸುಲಭದಿ ಬಕ್ಕು
ಭಕ್ತಿಯೆರೆ ಜ್ಞಾನಕಧಿಕಾರ ತಾ ಬಕ್ಕು
ಭಕ್ತಿಯಲೆ ಮುಕ್ತಿ ಬ್ರಹ್ಮಜ್ಞ ॥ 156 ॥

ಸಕಲ ದುರ್ಗುಣವಳಿಯೆ । ಸಕಲ ಸದ್ಗುಣ ಬೆಳೆಯೆ
ಅಕಳಂಕ ಮಹಿಮ ಶ್ರೀಹರಿಯ ಭಕ್ತಿಯಿದು
ಸಕಲರಿಗು ಬೇಕು ಬ್ರಹ್ಮಜ್ಞ ॥ 157 ॥

ಭಕ್ತಿ ಮಹಿಮೆಯ ಗೀತೆ । ಎತ್ತಿ ಹೇಳುತ್ತಿಹುದು
ತತ್ತ್ವವಿದು ಮತ್ತುಪಾಸನೆಗೆ ರುಚಿಬರಲು
ಭಕ್ತಿಯೇ ಬೇಕು ಬ್ರಹ್ಮಜ್ಞ ॥ 158 ॥

ಅಡಿಗೆಗಾ ಒಗ್ಗರಣೆ । ಕೊಡಲು ಬರುವದು ಕಂಪು
ಕೊಡೆ ಇಲ್ಲಿ ಭಕ್ತಿಯೊಗ್ಗರಣೆ ಜೀವನದೊ-
ಳಿಡುಗುವದು ಪೆಂಪು ಬ್ರಹ್ಮಜ್ಞ ॥ 159 ॥

ಕರ್ಮಕ್ಕೆ ಒಗ್ಗರಣೆ । ಕರ್ಮದೊಳಗಿಹ ಶ್ರದ್ಧೆ
ನಿರ್ಮಲದ ಭಕ್ತಿಯೊಗ್ಗರಣೆ ಧ್ಯಾನಕ್ಕೆ
ನೆಮ್ಮಿರೀ ತತ್ತ್ವ ಬ್ರಹ್ಮಜ್ಞ ॥ 160 ॥

ಜ್ಞಾನಕ್ಕೆ ಅನುಭವವೆ । ತಾನೀಗ ಒಗ್ಗರಣೆ
ಜ್ಞಾನವೇ ನಿಜದಿ ತಾನೀಗ ಭಕುತಿಯಿದು
ಸ್ವಾನುಭವವೇದ್ಯ ಬ್ರಹ್ಮಜ್ಞ[1] ॥ 161 ॥

(ಶ್ರೀಗಳ ಉಪಕಾರ)

ಭಕ್ತಿರಸ ಚಿಮ್ಮಿರಲು । ಮತ್ತೆ ಅದರಾನಂದ
ಚಿತ್ತಕ್ಕೆ ಬರುವ ರೀತಿಯಲಿ ಬೋಧಿಸಿದ
ಬಿತ್ತರವ ನೋಡಿ ಬ್ರಹ್ಮಜ್ಞ ॥ 162 ॥

ಭಾಷ್ಯದಲಿ ಬಂದಿರುವ । ಈಶಭಕ್ತಿಯ ಬಗೆಯ
ತೋಷದಲಿ ತೋರಿ ಜೀವನದಿ ಭಕ್ತಿರಸ-
ದಾಶೆ ಬೆಳೆಸಿದರು ಬ್ರಹ್ಮಜ್ಞ ॥ 163 ॥

ಗೀತೆಯಭಿಮತವನ್ನು । ಖ್ಯಾತಿಯಲಿ ವಿವರಿಸಿದ
ಸಾತಿಶಯದೇಳು ಭಾಗದ ಉಪನ್ಯಾಸ[2]
ಪ್ರೀತಿಯಲಿ ನೋಡಿ ಬ್ರಹ್ಮಜ್ಞ ॥ 164 ॥

'ಜೀವಂತವೇದಾಂತ'[3] । ಜೀವನದಿ ಭಕ್ತಿರಸ
ಭಾವಕ್ಕೆ ನಾಮಜಪಸ್ತೋತ್ರಗಳ ಬಗೆಗೆ
ಈವುದಿದು ಜೀವ ಬ್ರಹ್ಮಜ್ಞ ॥ 165 ॥

ಇಂತು ಎಷ್ಟೋ ಬಗೆಯ । ಸಂತಸದ ಲೇಖಗಳ
ಸಂತಮಣಿ ಮುಕುಟ ಶ್ರೀಗಳೀ ಬೋಧೆಗಳ-
ನೆಂತು ಸಾರುವದು ? ಬ್ರಹ್ಮಜ್ಞ ॥ 166 ॥

ನಿತ್ಯ ಸಾಯಂಕಾಲ । ಭಕ್ತಿಭಾವದಿ ಭಜನೆ
ಹತ್ತಿರದ ಜನರ ಸಂಗಡವೆ ನಡೆಸುವರು[4]
ಚಿತ್ತ ಮುಳುಗಿಸುತ । ಬ್ರಹ್ಮಜ್ಞ ॥ 167 ॥

---

1. 159 ರಿಂದ 161ರವರೆಗಿನ ವಿಷಯಕ್ಕೆ 'ಅಧ್ಯಾತ್ಮಪ್ರಕಾಶ' 34ನೆಯ ಸಂಪುಟದ ಪುಟ 11, 12, 13ನ್ನು ನೋಡಿರಿ.
2. 'ಭಗವದ್ಗೀತೆಯ ಉಪನ್ಯಾಸಗಳು' (ಶ್ರೀಶ್ರೀಗಳವರಿಂದ ವಿರಚಿತ)
3. 'ಜೀವಂತವೇದಾಂತ' – ಎಂಬ ಗ್ರಂಥ.
4. ಕಾರ್ಯಾಲಯದಲ್ಲಿರುವ ಶ್ರೀರಾಮದೇವಸ್ಥಾನದಲ್ಲಿ.

ದಿಗ್ವಿಜಯರಾಮಗುಡಿ । ಹಿಗ್ಗಿನಲಿ ಸ್ಥಾಪಿಸುತ
ಒಗ್ಗಿಸಿಹರಿಲ್ಲಿ ನಿತ್ಯಕೀರ್ತನೆ ಭಜನೆ
ವೆಗ್ಗಳದಿ ನಡೆಯೆ ಬ್ರಹ್ಮಜ್ಞ ॥ 168 ॥

**(ಪ್ರಕೃತವಿಚಾರ)**

ಈವರೆಗುಪಾಸನೆಯ । ಭಾವವನು ಪೇಳಿಹೆನು
ಆವರಿಸಿ ಭಕ್ತಿರಸ ರುಚಿಯು ಸಾಧಕರ
ಭಾವಕ್ಕೆ ಬರಲಿ ಬ್ರಹ್ಮಜ್ಞ ॥ 169 ॥

ಮುಂದಿನಧ್ಯಾಯದಲಿ । ಬಂಧುರದ ಗೀತೆಯಲಿ
ಬಂದಿರುವ ಕರ್ಮಯೋಗದ ವಿಚಾರವನು
ಚಂದದಿಂದೊರೆವೆ ಬ್ರಹ್ಮಜ್ಞ ॥ 170 ॥

# ಹದಿಮೂರನೆಯ ಅಧ್ಯಾಯ

## ಕರ್ಮಯೋಗ

ಕರ್ಮಯೋಗದ ಬಗೆಗೆ । ಮರ್ಮಗಳ ತಿಳಿಸಲ್ಕೆ
ನಿರ್ಮಿಸಿದ ಗೀತೆಗಿಹ ಭಾಷ್ಯವನುಸರಿಸಿ
ಪೆರ್ಮೆಯಿಂ ಪೇಳ್ವೆ ಬ್ರಹ್ಮಜ್ಞ ॥ 1 ॥

ವೇದೋಕ್ತಧರ್ಮದಾ । ಹಾದಿ ಎರಡಿಹವಿಲ್ಲಿ
ಭೇದಗಳ ಗುಟ್ಟು ತಿಳಿಯಲ್ಕೆ ಮೋಕ್ಷವನು
ಐದುವದು ಸುಲಭ ಬ್ರಹ್ಮಜ್ಞ ॥ 2 ॥

**(ಗೀತೆಯ ಮೂರು ಮರ್ಮಗಳು)**

ಧರ್ಮವು ಪ್ರವೃತ್ತಿಪರ । ಧರ್ಮವು ನಿವೃತ್ತಿಪರ
ಧರ್ಮದಲಿ ಎರಡು ಬಗೆಗಳಿವು ಗೀತೆಯೂ
ಮರ್ಮದೊಳಗೊಂದು ಬ್ರಹ್ಮಜ್ಞ ॥ 3 ॥

ಈ ಧರ್ಮಗಳ ನೆಮ್ಮಿ । ಸಾಧಿಪುದು ಗತಿಗಳನು
ಆದರಿಸಿ ಗೀತೆ ತಿಳಿಸುವದು ಇವುಗಳಾ
ಭೇದ ವಿವರಿಸುತ ಬ್ರಹ್ಮಜ್ಞ ॥ 4 ॥

ಪರಮಾತ್ಮತತ್ತ್ವವೇ ವರ ವಾಸುದೇವನಿಹ
ಕರೆದಿಹುದು ಗೀತೆ ಎರಡನೆಯ ಮರ್ಮವಿದು
ಅರಿಯುವದು ಮುದದಿ ಬ್ರಹ್ಮಜ್ಞ ॥ 5 ॥

ಎರಡು ವಿಧ ಧರ್ಮವೇ । ವರ ಸಾಧನೆಯ ಮಾರ್ಗ
ಪರತತ್ತ್ವವೆನಿಪ ಶ್ರೀವಾಸುದೇವನೇ
ಪರಮವಹ ಸಾಧ್ಯ ಬ್ರಹ್ಮಜ್ಞ ॥ 6 ॥

ಕಳಚಿರಲು ಸಂಸಾರ । ಫಲವೆ ನಿಃಶ್ರೇಯಸವು
ಬಳಿಕಿದುವೆ ಮೋಕ್ಷ ಮೂರನೆಯ ಮರ್ಮದಿಂದ
ತಿಳಿಯಬೇಕಿಲ್ಲಿ ಬ್ರಹ್ಮಜ್ಞ ॥ 7 ॥

ಈ ಮೂರು ಗೀತೆಯಾ । ಸಾರಗಳು ಸಂದೆನುತ
ಸಾರಿಹರು ಭಾಷ್ಯದೊಳಗಿದನೆ ಅನುಸರಿಸಿ
ತೋರಲೆತ್ನಿಸುವೆ ಬ್ರಹ್ಮಜ್ಞ[1] ॥ 8 ॥

1. ಪದ್ಯ 3 ರಿಂದ 8ರವರೆಗಿನ ವಿಷಯಕ್ಕೆ ಗೀ.ಅವ. (ಭಾ.ಭಾ 6)ನ್ನು ನೋಡಿರಿ.

### (ನಿವೃತ್ತಿಲಕ್ಷಣಧರ್ಮ)

ಜ್ಞಾನವೈರಾಗ್ಯಗಳ । ಆ ನಿಷ್ಠೆಪಡೆವುದಕೆ
ತಾನೀಗ ಮೀಸಲಿರಿಸುತ್ತೆ ಜೀವನವ
ಮಾನಿಸುವ ಧರ್ಮ ಬ್ರಹ್ಮಜ್ಞ ॥ 9 ॥

ಇದೆ ನಿವೃತ್ತಿಯ ಧರ್ಮ । ಇದು ವಿರಕ್ತರ ಧರ್ಮ
ಇದರಿಂದೆ ನೇರಗತಿ ಪಡೆವರಿದು ಸಾಂಖ್ಯ
ಪದದರ್ಥವಹುದು ಬ್ರಹ್ಮಜ್ಞ ॥ 10 ॥

### (ಪ್ರವೃತ್ತಿಲಕ್ಷಣಧರ್ಮ)

ನೆಮ್ಮಿ ವರ್ಣಾಶ್ರಮದ । ಧರ್ಮಗಳನದರಂತೆ
ಒಮ್ಮನದಿ ನಡೆವ ನಿಷ್ಠೆಯೆ ಪ್ರವೃತ್ತಿಪರ-
ಧರ್ಮವೆನಿಸುವದು ಬ್ರಹ್ಮಜ್ಞ ॥ 11 ॥

ಈ ಧರ್ಮವಾಚರಿಸೆ । ಸಾಧಿಪುದು ಪರಲೋಕ
ಆದರಿಸಿ ದೇವಜನ್ಮಗಳ ಪಡೆಯಲ್ಕೆ
ಬೋಧಿಸಿಹುದಿದನು ಬ್ರಹ್ಮಜ್ಞ[1] ॥ 12 ॥

ಈರೀತಿ ಪರಲೋಕ । ದಾರಿಯಿದಕಿದ್ದರೂ
ಬೇರೊಂದು ವಿಧದಲಾಚರಿಸೆ ಮೋಕ್ಷವನು
ಸಾರುವನು ದಿಟದಿ ಬ್ರಹ್ಮಜ್ಞ ॥ 13 ॥

ಬಂಧಕ್ಕೆ ಕಾರಣಹ । ಬಂಧುರದ ಕರ್ಮವನು
ಬಂಧವನು ಕಳೆಯೆ ಸಾಧನೆಯನಾಗಿಸುವು-
ದೊಂದು ಕೌಶಲವು ಬ್ರಹ್ಮಜ್ಞ ॥ 14 ॥

ಗೀತೆಯಾ ವೈಶಿಷ್ಟ । ಈ ತತ್ತ್ವದೊಳಗಿಹುದು
ಯಾತನೆಯ ಕೊಡುವ ಗುಣವನೇ ಕರ್ಮದಿಂ-
ಬೀತು ಕಿತ್ತುವದು ಬ್ರಹ್ಮಜ್ಞ ॥ 15 ॥

ಯೋಗದಲಿ ಕೂಡಿರಲು । ಆಗಳೀ ಕರ್ಮದಾ
ರೋಗಗಳು ತೊಲಗಿ ಮನುಜನನು ಶುದ್ಧನ-
ನ್ನಾಗಿ ಮಾಡುವದು ಬ್ರಹ್ಮಜ್ಞ ॥ 16 ॥

---

1. ಪದ್ಯ 9 ರಿಂದ 12ರವರೆಗಿನ ವಿಷಯಕ್ಕೆ ಗೀ.ಅವ. (ಭಾ.ಭಾ 1)ನ್ನು ನೋಡಿರಿ.

ಚಿತ್ತಶುದ್ಧಿಯು ಬರಲು । ಮತ್ತೆ ಜ್ಞಾನವು ಬಹುದು
ಹತ್ತುವನು ಜ್ಞಾನನಿಷ್ಠೆಯಾ ಹಂತವನು
ಮುಕ್ತನೇ ಅಹನು ಬ್ರಹ್ಮಜ್ಞ ॥ 17 ॥

ಕರ್ಮಗಳ ಮಾಳ್ಪಾಗ । ನೆಮ್ಮಿ ಯೋಗದಿ ಚರಿಸೆ
ನಿರ್ಮಲತೆ ಬರಲು ತೊಡಗುವ ನಿವೃತ್ತಿಪರ-
ಧರ್ಮದಲಿ ಸಹಜ ಬ್ರಹ್ಮಜ್ಞ[1] ॥ 18 ॥

ಜ್ಞಾನವೈರಾಗ್ಯದಲಿ । ಧ್ಯಾನಾದಿ ಯೋಗದಲಿ
ತಾ ನಿಲಲು ಜ್ಞಾನನಿಷ್ಠೆಯೇ ಬಹುದಿವಗೆ
ಈ ನುಡಿಯು ಸತ್ಯ ಬ್ರಹ್ಮಜ್ಞ[2] ॥ 19 ॥

ಕೆಲರು ಕರ್ಮದಲಿರಲು । ಬಳಸಿರಲು ಯೋಗವನು
ಬಲುಶುದ್ಧಿ ಬಂದು ಕರ್ಮ ನಡೆವಾಗಲೇ
ಬಳಿಕಹುದು ಜ್ಞಾನ ಬ್ರಹ್ಮಜ್ಞ ॥ 20 ॥

ತಿಳಿದಿರಲು ಬೊಮ್ಮವನು । ಉಳಿಯದಿವರಿಗೆ ಕರ್ಮ
ಬಳಿಕಹುದು ಬಿಡುವದಿದು ಸಹಜವಾದೊಡೆಯು
ಉಳಿವರದರಲ್ಲೆ ಬ್ರಹ್ಮಜ್ಞ ॥ 21 ॥

ಹೀಗೆ ಉಳಿದಿರುವಾಗ । ಸಾಗಿರುವ ಆ ಕರ್ಮ
ಆಗಿಲ್ಲ ಬಂಧಕಾರಕವು ಕರ್ಮವೇ
ಆಗದಿದು ನಿಜದಿ ಬ್ರಹ್ಮಜ್ಞ ॥ 22 ॥

ಈ ರೀತಿ ಕರ್ಮದಿಂ । ಚಾರು ಶುದ್ಧಿಯ ಹೊಂದಿ
ಸೇರುವರು ಜ್ಞಾನನಿಷ್ಠೆಯನು ಎರಡು ಬಗೆ
ದಾರಿಯಿವು ನೋಡಿ ಬ್ರಹ್ಮಜ್ಞ[3] ॥ 23 ॥

ಎರಡಕ್ಕು ಒಂದೇ ಫಲ । ಎರಡು ಇವು ಬೇರಲ್ಲ
ಸರಿಯಾಗಿ ಇದನು ಕಂಡವನೆ ತಿಳಿದವನು
ಪರತತ್ತ್ವವೇತ್ತ ಬ್ರಹ್ಮಜ್ಞ[4] ॥ 24 ॥

1. ಪದ್ಯ 13 ರಿಂದ 18ರವರೆಗಿನ ವಿಷಯಕ್ಕೆ ಗೀ.ಅವ. (ಭಾ. ಭಾ 5)ನ್ನೂ ಗೀ. 2-50ನ್ನೂ ನೋಡಿರಿ.

2. ಕರ್ಮಯೋಗ, ಕರ್ಮಸಂನ್ಯಾಸ, ಧ್ಯಾನಯೋಗ, ಜ್ಞಾನನಿಷ್ಠೆ - ಹೀಗೆ ಕರ್ಮಯೋಗದಿಂದ ನಿವೃತ್ತಿ ಮಾರ್ಗಕ್ಕೆ ಹೋಗುವವರು ಕೆಲವರು.

3. ಪದ್ಯ 20 ರಿಂದ 23ಕ್ಕೆ ಗೀ. 2-10 ಭಾ.ಭಾ 13ನ್ನು ನೋಡಿರಿ.

4. ಈ ವಿಷಯಕ್ಕೆ ಗೀ. 5-5-ನ್ನು ನೋಡಿರಿ.

## (ಯೋಗಶಬ್ದಾರ್ಥ)

ಪರಮಾರ್ಥತತ್ತ್ವದಾ । ಸರಿಯಾದ ದರ್ಶನದ
ವರನಿಷ್ಠೆ ಯೋಗ ಮುಖ್ಯಾರ್ಥದಲಿ ಜ್ಞಾನ–
ದಿರವೆ ಇದು ಕೇಳಿ ಬ್ರಹ್ಮಜ್ಞ[1] ॥ 25 ॥

ಇದಕೆ ಸಾಧನೆಯಾದ । ಹದನಗಳು ಎರಡಿಹವು
ಅದೆ ಕರ್ಮ ಮತ್ತೆ ಧ್ಯಾನಗಳು ಯೋಗವಿದು
ಒದಗಿಹುದು ನಾಮ ಬ್ರಹ್ಮಜ್ಞ[2] ॥ 26 ॥

ಬಹಿರಂಗಸಾಧನವು । ವಹಿಲದಲಿ ಜ್ಞಾನಕ್ಕೆ
ವಹಿಸಿರುವ ಕರ್ಮಯೋಗವಿದು ಮೊದಲು ನಿ–
ರ್ವಹಿಸಬೇಕಿದನು ಬ್ರಹ್ಮಜ್ಞ[3] ॥ 27 ॥

ಬಳಿಕ ಧ್ಯಾನದ ಯೋಗ । ಅಳವಡಿಸಿಕೊಳ್ಳುವದು
ತಿಳಿಯಲಿದು ಜ್ಞಾನ ಬರಲಂತರಂಗಕ್ಕೆ
ಒಲಿದ ಸಾಧನೆಯು ಬ್ರಹ್ಮಜ್ಞ ॥ 28 ॥

ಮೊದಲು ಕರ್ಮದ ಯೋಗ । ಅದರಿಂದೆ ಧ್ಯಾನ ಮೇಣ್
ಇದು ಕ್ರಮವು ಜ್ಞಾನನಿಷ್ಠೆ ಪಡೆವುದಕೆಂಬು–
ದಿದರಲ್ಲಿ ಗುಟ್ಟು ಬ್ರಹ್ಮಜ್ಞ[4] ॥ 29 ॥

ನೇರಾಗಿ ಜ್ಞಾನಕ್ಕೆ । ಸೇರುವದು ಅದು ಸಾಂಖ್ಯ
ಸೇರುವದು ಕ್ರಮದಿ ಈ ಯೋಗ ಎರಡಕ್ಕು
ಬೇರಿಲ್ಲ ಫಲವು ಬ್ರಹ್ಮಜ್ಞ[5] ॥ 30 ॥

---

1. ಈ ವಿಷಯಕ್ಕೆ ಗೀ. 4 ಅವ. (ಭಾ.ಭಾ 228)ನ್ನು ನೋಡಿರಿ.

2. ಈ ವಿಷಯಕ್ಕೆ ಗೀ. 2–39 (ಭಾ.ಭಾ 81)ರಲ್ಲಿ 'ಯೋಗೇ ತು..... ' ಎಂಬ ವಾಕ್ಯವನ್ನು ನೋಡಿರಿ.

3. ಈ ವಿಷಯಕ್ಕೆ ಗೀ. 6 ಅವ. (ಭಾ.ಭಾ 380)ರಲ್ಲಿ 'ತಸ್ಮಾನ್ಮುನೇಃ' ಎಂಬ ವಾಕ್ಯವನ್ನು ಮತ್ತು 6–3 (ಭಾ.ಭಾ. 384)ರಲ್ಲಿ 'ಧ್ಯಾನಯೋಗಸ್ಯ' ಎಂಬ ವಾಕ್ಯವನ್ನೂ ನೋಡಿರಿ.

4. ಪದ್ಯ 28, 29ರ ವಿಷಯಕ್ಕೆ ಗೀ. 6–3ನ್ನು ನೋಡಿರಿ.

5. ಈ ವಿಷಯಕ್ಕೆ ಗೀ. 5–5ನ್ನು ನೋಡಿರಿ.

ಧ್ಯಾನಯೋಗದ ಬಗೆಗೆ । ಏನಿಹುದೊ ಅದನೆಲ್ಲ
ಆ ನಿದಿಧ್ಯಾಸ ಸಂಧಿಯಲಿ ಪೇಳಿದುದ
ಜಾನಿಸುವದಿಲ್ಲಿ ಬ್ರಹ್ಮಜ್ಞ[1] ॥ 31 ॥

ಕರ್ಮಯೋಗದ ಬಗೆಗೆ । ಮರ್ಮವನು ಮಾತ್ರವೇ
ನಿರ್ಮಲತೆಗಾಗಿ ಪೇಳಲ್ಕೆ ಯತ್ನಿಸುವೆ
ಕೂರ್ಮೆಯಿಂ ಕೇಳಿ ಬ್ರಹ್ಮಜ್ಞ ॥ 32 ॥

(ಕರ್ಮ)

ಕರ್ಮಗಳು ಎಂಬಲ್ಲಿ । ಧರ್ಮವಹ ವೇದೋಕ್ತ
ಕರ್ಮಗಳೆ ಎಂಬುದಾಚಾರ್ಯರಭಿಮತದ
ಮರ್ಮ ನೆನಪಿರಲಿ ಬ್ರಹ್ಮಜ್ಞ ॥ 33 ॥

ಸಾಮಾನ್ಯವ್ಯವಹಾರ । ಈ ಮಾತಿನಲಿ ಬರದು
ನೇಮವಿದು ವೇದದಾಜ್ಞೆಯಿಂ ನಿರ್ವಹಿಪ
ನಾಮವೇ ಕರ್ಮ ಬ್ರಹ್ಮಜ್ಞ ॥ 34 ॥

(ವಿಕರ್ಮ)

ವೇದೋಕ್ತಕರ್ಮಗಳೆ । ಮೋದದಾ ಕರ್ಮಗಳು
ವೇದದಲಿ ಬೇಡವೆಂದಿರುವ ಕರ್ಮಗಳೆ
ಆದವು ವಿಕರ್ಮ ಬ್ರಹ್ಮಜ್ಞ ॥ 35 ॥

(ಅಕರ್ಮ)

ಅಲಸ್ಯ ಮೋಹದಲಿ । ಮೇಲೆ ಸಾಯಸ ಭಯದಿ
ಪಾಲಿಸದೆ ವೇದದಪ್ಪಣೆಯ ಕರ್ಮ ಬಿಡೆ
ಪೇಳುವರಕರ್ಮ ಬ್ರಹ್ಮಜ್ಞ[2] ॥ 36 ॥

ಮಾಡುವದು ಕರ್ಮವನೆ । ದೂಡುವದು ಮಿಕ್ಕೆರಡ[3]
ಮಾಡಿದಗೆ ಲೋಕ ಲೋಕಾಂತರದ ಫಲವು
ಕೂಡುವದು ದಿಟದಿ ಬ್ರಹ್ಮಜ್ಞ ॥ 37 ॥

1. ಇದೇ ಗ್ರಂಥದ 9ನೆಯ ಅಧ್ಯಾಯ ಪದ್ಯ 43 ರಿಂದ ಪ್ರಕರಣಪೂರ್ತಿಯಾಗಿ ಈ ವಿಷಯವನ್ನು ಹೇಳಿದೆ.

2. ಪದ್ಯ 33 ರಿಂದ 36ರ ಪೂರ ವಿಷಯಕ್ಕೆ ಗೀ. 4-17 (ಭಾ.ಭಾ. 259)ನ್ನೂ ಅದರಲ್ಲಿಯೂ 36ನೆಯ ಪದ್ಯದ ವಿಷಯಕ್ಕೆ ಗೀ. 18-8ನ್ನೂ ನೋಡಿರಿ.

3. ಇಲ್ಲಿ ಮಿಕ್ಕೆರಡು ಎಂದರೆ ಅಕರ್ಮವಿಕರ್ಮಗಳನ್ನು ಬಿಡಬೇಕು ಎಂದರ್ಥ.

ಬರಿಕರ್ಮವೀ ರೀತಿ । ತಿರುಗಿಪುದು ಭವದಲ್ಲಿ
ದುರಿತ ಮೇಣ್ ಪುಣ್ಯಕನುಸರಿಪ ಜನ್ಮಗಳ-
ಲಿರಿಸುವದು ಇದುವೆ ಬ್ರಹ್ಮಜ್ಞ ॥ 38 ॥

### (ಕರ್ಮಯೋಗ)

ಯೋಗವನು ಬೆರೆಸಿದೊಡೆ । ಆಗಳೀ ಕರ್ಮದಿಂ
ಆಗುವದು ಶುದ್ಧಿ ಜ್ಞಾನಕ್ಕೆ ಅಧಿಕಾರಿ-
ಯಾಗುವನು ನರನು ಬ್ರಹ್ಮಜ್ಞ ॥ 39 ॥

ಈಗಿದರ ಪರಿಯನ್ನು । ಯೋಗ ಬೆರೆಸುವಿಕೆಯನು
ರಾಗದಿಂ ತಿಳಿಸಲೆತ್ನಿಸುವೆ ಇದರಂಗ-
ವಾಘಿಹವು ನಾಲ್ಕು ಬ್ರಹ್ಮಜ್ಞ ॥ 40 ॥

ನೆಮ್ಮದಿರುವದು ಫಲವ । ಹಮ್ಮು ತ್ಯಜಿಪುದು, ಸಮತೆ
ಸಮ್ಮುದದಿ ಕರ್ಮನೀಶ್ವರನಿಗರ್ಪಿಸುವ
ಧರ್ಮವಿವು ನಾಲ್ಕು ಬ್ರಹ್ಮಜ್ಞ[1] ॥ 41 ॥

ಮಾಡುತಿಹ ಕರ್ಮಕ್ಕೆ । ಕೂಡಿಸಲ್ಕೀ ನಾಲ್ಕು
ನೋಡಿರಿದನೀಗಳೀ ಕರ್ಮಯೋಗವೆಂ-
ದಾಡುವರು ಬುಧರು ಬ್ರಹ್ಮಜ್ಞ ॥ 42 ॥

### (ಅಹಂಕಾರತ್ಯಾಗ)

ನಾನು ಮಾಡುವೆನೆಂಬ । ಭಾನವಿದನೋಸರಿಸಿ
ನಾನಲ್ಲ ಮತ್ತೆ ಈಶ್ವರನ ಪ್ರೇರಣೆಯು
ತಾನಿದುವೆ ಎನುವ ಬ್ರಹ್ಮಜ್ಞ ॥ 43 ॥

ದಾಸನಾನೀಶ್ವರಗೆ । ಲೇಸಾದ ಕರ್ಮಗಳ
ಈಶ್ವರನ ಆಜ್ಞೆಯನುಸರಿಸಿ ಮಾಡುತ್ತ-
ಲೀಶಗರ್ಪಿಸುವೆ ಬ್ರಹ್ಮಜ್ಞ ॥ 44 ॥

ಈ ಭಾವವೆಬ್ಬಿಸುತ । ಸ್ವಾಭಾವಿಕದ ಕರ್ಮ
ಶೋಭೆಯಲಿ ನಡೆಸತೊಡಗಲಹಂಕಾರ-
ದೀಭಾವ ಹೋಯ್ತು ಬ್ರಹ್ಮಜ್ಞ[2] ॥ 45 ॥

---

1. ಈ ವಿಷಯಕ್ಕೆ ಗೀ. 2-50ರಲ್ಲಿ 'ಸ್ವಧರ್ಮಾಖ್ಯೇಷು....' ಎಂದು ಮುಂತಾದ ವಾಕ್ಯವನ್ನು ನೋಡಿರಿ.

1. ಪದ್ಯ 43 ರಿಂದ 45ರ ಪೂರ ವಿಷಯಕ್ಕೆ ಗೀ. 3-30 (ಭಾ.ಭಾ. 203)ನ್ನು ನೋಡಿರಿ.

### (ಫಲತ್ಯಾಗ)

ಫಲವಾಗಬೇಕೆಂಬ । ಛಲವನ್ನೆ ತ್ಯಜಿಸುತ್ತ
ಫಲಕಲ್ಲ ಈಶ್ವರಾಜ್ಞೆಯಿಂ ನಿರ್ವಹಿಪ
ತಿಳಿವು ಬರಬೇಕು ಬ್ರಹ್ಮಜ್ಞ ॥ 46 ॥

ಫಲ ಬರಲಿ ಬರದಿರಲಿ । ಒಳಿತಾದುದನೆ ಮಾಳ್ಪೆ
ಫಲದಾಶೆ ಹೀಗೆ ಬಿಡಲಾಗ ಕರ್ಮದಾ
ಮಲಿನತೆಯ ಹೋಯ್ತು ಬ್ರಹ್ಮಜ್ಞ[1] ॥ 47 ॥

### (ಸಮತ್ವಬುದ್ಧಿ)

ಸಿದ್ಧಿಯಾಗಲಿ ಮತ್ತೆ । ಸಿದ್ಧಿಯಾಗದೆ ಇರಲಿ
ಸಿದ್ಧವಹ ಕರ್ಮ ಬಿಡದಲಿವ ನಡೆಸುವದೆ
ಇದ್ದಿಹುದು ಸಮತೆ ಬ್ರಹ್ಮಜ್ಞ ॥ 48 ॥

ಬರಲು ಸುಖ ಉಬ್ಬದಲೆ । ಬರೆ ದುಃಖ ಕುಗ್ಗದಲೆ
ಎರಡನ್ನು ದೇವಗರ್ಪಿಸಿ ಸಮತ್ವವ-
ನ್ನಿರಿಸಿಕೊಳಬೇಕು ಬ್ರಹ್ಮಜ್ಞ[2] ॥ 49 ॥

### (ಈಶ್ವರಾರ್ಪಣ)

ಈಶ್ವರನದೀ ಜಗವು । ದಾಸನವಗಾಗಿಹೆನು
ಈಶ್ವರನಿಗಾಗಿ ಮಾಡುವೆನು ಎನುತಲ-
ಭ್ಯಾಸ ಮಾಡುವದು ಬ್ರಹ್ಮಜ್ಞ ॥ 50 ॥

ಅರ್ಪಿಸುತ ಕರ್ಮಗಳ । ತಪ್ಪದಲೆ ಈಶ್ವರಗೆ
ಇರ್ಪುದಿದೆ ಕರ್ಮಯೋಗಕ್ಕೆ ಬಲುಮುಖ್ಯ
ಒಪ್ಪಿದುದು ಗೀತೆ ಬ್ರಹ್ಮಜ್ಞ[3] ॥ 51 ॥

ಹೀಗೆ ನಡೆಸಿದ ಕರ್ಮ । ಯೋಗವೆಂದೆನಿಸುವದು
ಆಗುವದು ಚಿತ್ತನೈರ್ಮಲ್ಯವಿದರಿಂದೆ
ಶೀಘ್ರದಲಿ ಕೇಳಿ ಬ್ರಹ್ಮಜ್ಞ ॥ 52 ॥

---

1. ಪದ್ಯ 46, 47ರ ವಿಷಯಕ್ಕೆ ಗೀ. 3–7 (ಭಾ.ಭಾ. 166)ರಲ್ಲಿ 'ಅಸಕ್ತಃ ಸನ್' ಎಂಬ ವಾಕ್ಯವನ್ನು ನೋಡಿರಿ.

2. ಪದ್ಯ 48, 49ರ ವಿಷಯಕ್ಕೆ ಗೀ. 2–48 (ಭಾ.ಭಾ. 98)ರಲ್ಲಿ 'ಕೋಽಸೌ...' ಎಂಬ ವಾಕ್ಯವನ್ನು ನೋಡಿರಿ.

3. ಪದ್ಯ 50, 51ರ ವಿಷಯಕ್ಕೆ ಗೀ. 5–10 (ಭಾ.ಭಾ. 344) ಹಾಗೂ 18–46 (ಭಾ.ಭಾ. 1078)ನ್ನು ನೋಡಿರಿ.

## (ಸಂನ್ಯಾಸ–ಯೋಗ)

ಮುರುವಿಧ ಸಂನ್ಯಾಸ । ಸಾರಿಹರು ಭಾಷ್ಯದಲಿ
ನೇರಾದ ಜ್ಞಾನನಿಷ್ಠೆಯೇ ಪರಮಾರ್ಥ
ಸಾರ ಸಂನ್ಯಾಸ ಬ್ರಹ್ಮಜ್ಞ[1] ॥ 53 ॥

ಇದು ಮುಖ್ಯವಾದದ್ದು । ಇದ ಪಡೆಯೆ ಕರ್ಮಗಳ
ಬದಿಗಿರಿಸಿಕೊಳ್ವ ಸಂನ್ಯಾಸವೆರಡನೆಯ–
ದಿದುವೆ ಆಶ್ರಮವು ಬ್ರಹ್ಮಜ್ಞ ॥ 54 ॥

ವರ ಮುಮುಕ್ಷುಗಳಿದನೆ । ಭರದಿಂದ ಸ್ವೀಕರಿಸೆ
ಉರುತರದ ಜ್ಞಾನನಿಷ್ಠೆಯಲಿ ನೆಲೆನಿಲಲು
ಬರುವುದಿದರಿಂದೆ ಬ್ರಹ್ಮಜ್ಞ[2] ॥ 55 ॥

ವೈರಾಗ್ಯವಿಲ್ಲದಿರೆ । ಬಾರದಿದು ಬಲು ಕಠಿಣ
ದಾರಿಯಿದಕಾಗಿ ಮೂರನೆಯ ಗೌಣವಹ
ಬೇರೊಂದು ಬಂತು ಬ್ರಹ್ಮಜ್ಞ ॥ 56 ॥

ಕರ್ಮಗಳ ಮಾಡುತ್ತ । ಒಮ್ಮನದಿ ಈಶ್ವರಗೆ
ಸಮ್ಮತಿಸಿ ಬೇಗನರ್ಪಿಸಲು ಗೌಣವಹ
ಧರ್ಮಸಂನ್ಯಾಸ ಬ್ರಹ್ಮಜ್ಞ ॥ 57 ॥

ವೈರಾಗ್ಯ ಬಲವಿರದ । ಬೇರೆ ಪ್ರತಿಬಂಧದಾ
ಕರಣವದಿರಲು ಈ ಬಗೆಯ ಸಂನ್ಯಾಸ
ತೋರಿಹುದು ಶಾಸ್ತ್ರ ಬ್ರಹ್ಮಜ್ಞ ॥ 58 ॥

ಲೇಸಿನಾ ಕರ್ಮಗಳು । ಈಶ್ವರಾರ್ಪಣವಾಗೆ
ವಾಸಿಸದು ಇಲ್ಲಿ ಅಭಿಮಾನವಿದೆ ತ್ಯಾಗ
ಲೇಸಾಯ್ತು ಕೇಳಿ ಬ್ರಹ್ಮಜ್ಞ ॥ 59 ॥

ಹೀಗೆ ತ್ಯಾಗದಿ ಇವನು । ಆಗಿಹನು ಸಂನ್ಯಾಸಿ
ಆಗುವಾ ಫಲದ ಯೋಚನೆಯ ಬಿಟ್ಟಿರುವ
ಯೋಗಿ ಇವನಾದ ಬ್ರಹ್ಮಜ್ಞ ॥ 60 ॥

---

1. ಈ ವಿಷಯಕ್ಕೆ ಗೀ. 5–6 (ಭಾ. ಭಾ. 339) ಗೀ.6–2 (ಭಾ.ಭಾ. 389)ನ್ನು ನೋಡಿರಿ. ಇದು ಪರಮಾರ್ಥ ಸಂನ್ಯಾಸವು.

2. ಪದ್ಯ 54, 55ರ ವಿಷಯಕ್ಕೆ ಗೀ. 5 ಅವ. (ಭಾ.ಭಾ. 325) ರಲ್ಲಿ 'ತಸ್ಮಾತ್ ಅನಾತ್ಮವಿತ್ಕರ್ತೃಕಯೋಃ.....' ಎಂಬ ವಾಕ್ಯವನ್ನು ನೋಡಿರಿ. ಇದು ಮುಮುಕ್ಷುಗಳಿಗೆ ವಿಧಿಸಲ್ಪಟ್ಟಿರುವ ಆಶ್ರಮಸಂನ್ಯಾಸವು.

ಫಲದಾಶೆ ಬಿಡಲಾಗ । ಚಲನೆ ಚಿತ್ತದಲಿಲ್ಲ
ಫಳಿಲನಿದು ಯೋಗ ತಾನಾಯ್ತು ಕರ್ಮಿಗಿದು
ಬಲು ಸುಲಭವಾಯ್ತು ಬ್ರಹ್ಮಜ್ಞ[1] ॥ 61 ॥

ಫಲದಾಶೆಯಿಲ್ಲದಲೆ । ಸಲೆ ಕರ್ಮ ಮಾಳ್ಪವನೆ
ತಿಳಿಯಿವನೆ ಯೋಗಿ ಸಂನ್ಯಾಸಿ ಬರಿಕರ್ಮ-
ಗಳ ಬಿಟ್ಟರಲ್ಲ ಬ್ರಹ್ಮಜ್ಞ[2] ॥ 62 ॥

ಈ ಮಾತು ಶ್ರೀಹರಿಯು । ನೇಮದಿಂ ಪೇಳಲ್ಕೆ
ಕಾಮಿಸದೆ ಫಲವ ಕರ್ಮಗಳ ಮಾಳ್ಪುದರ
ಈ ಮಹಾಸ್ತುತಿಯು ಬ್ರಹ್ಮಜ್ಞ ॥ 63 ॥

ಯೋಗಿತ್ವ ಸಂನ್ಯಾಸ । ಈಗಿವಗೆ ಬರುವಂತೆ
ಆಗುವದು ಇದುವೆ ವರಭಕ್ತಿಗಾಧಾರ
ಹೇಗೆಂಬುದರಿಗು ಬ್ರಹ್ಮಜ್ಞ[3] ॥ 64 ॥

ಮಾಡುವಾ ಕರ್ಮಗಳ । ಕೂಡಿಸುವನೀಶ್ವರಗೆ
ಮಾಡುವಾ ದೃಷ್ಟಿಗಿದು ಕರ್ಮ ಈಶ್ವರನ
ಕೂಡಿಸಲು ಭಕ್ತಿ ಬ್ರಹ್ಮಜ್ಞ ॥ 65 ॥

ಅರ್ಪಿಸಲು ಕರ್ಮವನು । ತಪ್ಪದಲೆ ಈಶ್ವರನ
ಅಪ್ಪುವನು ಭಾವದಿಂದಿವನು ಭಕ್ತಿಯೇ
ಬಪ್ಪುದಿದು ಸಹಜ ಬ್ರಹ್ಮಜ್ಞ ॥ 66 ॥

ತ್ಯಾಗದಲಿ ವೈರಾಗ್ಯ । ಯೋಗದಲಿ ಐಕಾಗ್ರ್ಯ
ಮೇಗೆ ಬಲುಭಕ್ತಿ ಸೇರಿದೊಡೆ ಶುದ್ಧನಿವ-
ನಾಗದಿನ್ನೇನು ? ಬ್ರಹ್ಮಜ್ಞ ॥ 67 ॥

ಚಿತ್ತಕ್ಕೆ ಶುದ್ಧಿಯೂ । ಭಕ್ತಿ ಐಕಾಗ್ರ್ಯವೂ
ಒತ್ತಿಬರೆ ಜ್ಞಾನ ಬರುವುದಕೆ ಸಂದೇಹ-
ವೆತ್ತಣದು ಹೇಳಿ ಬ್ರಹ್ಮಜ್ಞ ॥ 68 ॥

---

1. ಪದ್ಯ 57 ರಿಂದ 61ರವರೆಗಿನ ಪದ್ಯಗಳ ವಿಷಯಕ್ಕೆ ಗೀ. 6–1 (ಭಾ. ಭಾ. 382)ರಲ್ಲಿ 'ಕರ್ಮಫಲಸಂಕಲ್ಪಸಂನ್ಯಾಸಾತ್...' ಮುಂತಾದ ವಾಕ್ಯವನ್ನು ನೋಡಿರಿ. ಇದು ಫಲತ್ಯಾಗರೂಪವಾದ ಸಂನ್ಯಾಸವು.

2. ಇದು ಗೀ. 6–1ರ ಅನುವಾದ.

3. ಕರ್ಮಯೋಗವು ಸಂನ್ಯಾಸವೂ ಯೋಗವೂ ಆಗಿರುವಂತೆ ಭಕ್ತಿಯೂ ಆಗಿದೆ ಎಂದರ್ಥ.

ಹೀಗೆ ಈ ಕರ್ಮದಾ । ಯೋಗವಿದು ಬಹುಮುಖ್ಯ
ಸಾಗಿರುವ ಎಲ್ಲ ಸಾಧನೆಗು ಮೊದಲಿನದು
ಆಗಿಹುದು ತಿಳಿಯೆ ಬ್ರಹ್ಮಜ್ಞ ॥ 69 ॥

ವೇದೋಕ್ತಕರ್ಮಗಳ । ಹಾದಿಯೇ ತಪ್ಪಿರುವ
ಈ ದಿನದಿ ಸಹಿತ ಈ ಕರ್ಮಯೋಗವ-
ನ್ನಾದರಿಸೆ ಸಾಧ್ಯ ಬ್ರಹ್ಮಜ್ಞ ॥ 70 ॥

ಇದಕಾಗಿ ಗೀತೆಯದು । ಉದಯಿಸಿತು ಎನಬಹುದು
ಇದರಲ್ಲಿ ಬರುವ ಸಾರವನ್ನನುಸರಿಪು-
ದಿದೆ ಮುಖ್ಯವಿಲ್ಲಿ ಬ್ರಹ್ಮಜ್ಞ ॥ 71 ॥

ಮಾಡುವುದನೆಲ್ಲವನು । ಮಾಡಲೆನಗರ್ಪಣೆಯ
ಕೂಡುವನು ನನ್ನ ದಯೆಯಿಂದ ಶಾಶ್ವತ ನಿ-
ಗೂಢ ಪದವಿಯನು ಬ್ರಹ್ಮಜ್ಞ[1] ॥ 72 ॥

ನೀನು ಮಾಳ್ಪುದನೆಲ್ಲ । ನೀನು ತಿಂಬುದನೆಲ್ಲ
ನೀ ಮತ್ತೆ ಮಾಳ್ಪ ಯಜ್ಞತಪದಾನಗಳ
ನೀನೆನಗೆ ಸಲಿಸು ಬ್ರಹ್ಮಜ್ಞ[2] ॥ 73 ॥

ತನ್ನ ತನ್ನಯ ಕರ್ಮ । ಚೆನ್ನಾಗಿ ಅರ್ಪಿಸಲು
ಇನ್ನಿದೇ ನಿಜದ ಅರ್ಚನೆಯು ಇದರಿಂದೆ
ಉನ್ನತಿಯ ಪಡೆವೆ ಬ್ರಹ್ಮಜ್ಞ[3] ॥ 74 ॥

ಈ ವಾಕ್ಯಗಳಲಿರುವ । ಭಾವವನು ಗ್ರಹಿಸಲ್ಕೆ
ತಾವಿಲ್ಲಿ ಮಾಳ್ಪುದೆಲ್ಲವನು ಸಲಿಸುವದು
ದೇವನಿಗೆ ಬಿಡದೆ ಬ್ರಹ್ಮಜ್ಞ ॥ 75 ॥

ಮನವಾಣಿ ಬುದ್ಧಿಯಲಿ । ತನು ಹಮ್ಮು ಪ್ರಕೃತಿಯಲಿ
ಅನುಸರಿಪ ಸರ್ವವರ್ಪಿಪುದು ಶ್ರೀಹರಿಗೆ
ಘನಸಾರವಿದುವೆ ಬ್ರಹ್ಮಜ್ಞ[4] ॥ 76 ॥

---

1. ಈ ವಿಷಯಕ್ಕೆ ಗೀ. 18–56 (ಭಾ. ಭಾ. 1110)ನ್ನು ನೋಡಿರಿ. ಅದರಲ್ಲಿಯೂ 'ಸರ್ವಕರ್ಮಾಣಿ ಪ್ರತಿಷಿದ್ಧಾನ್ಯಪಿ' ಎಂಬುದನ್ನು ಗಮನಿಸಿರಿ.
2. ಈ ವಿಷಯಕ್ಕೆ ಗೀ. 9–27ನ್ನು ನೋಡಿರಿ.
3. ಈ ವಿಷಯಕ್ಕೆ ಗೀ. 18–45ನ್ನು ನೋಡಿರಿ.
4. ಈ ವಿಷಯಕ್ಕೆ ಭಾಗವತ 11–2–36ನ್ನು ನೋಡಿರಿ.

ಇದು ಭಾಗವತ ಮತದಿ । ಹುದುಗಿರುವ ಸಾಧನೆಯು
ಇದು ಸಂತಜನರ ಸಂದೇಶವೆಲ್ಲರಿಗು
ಇದೆ ಸುಲಭಮಾರ್ಗ ಬ್ರಹ್ಮಜ್ಞ ॥ 77 ॥

ಘನ್ನ ಸಾಧನೆ ಮಾಡೆ । ಇನ್ನ ಸಾಧ್ಯವದಾಗೆ
ಎನ್ನಲ್ಲಿ ಸರ್ವಕರ್ಮಗಳ ಫಲಗಳನು
ಮುನ್ನ ಸಲಿಸುವದು ಬ್ರಹ್ಮಜ್ಞ[1] ॥ 78 ॥

ಇಲ್ಲ ಸುಲಭವು ಇನ್ನು । ಬಲ್ಲಂತೆ ಇದರಲ್ಲಿ
ನಿಲ್ಲದಲೆ ಇದನು ಶ್ರೀಕೃಷ್ಣ ಪೇಳಿರುವ-
ನೆಲ್ಲರಿಗು ಕೇಳಿ । ಬ್ರಹ್ಮಜ್ಞ ॥ 79 ॥

ಜೀವನವೆ ನಡೆಯದಿದು । ತೀವಿ ಕರ್ಮಗಳಿರದೆ
ಜೀವನಿವ ಕರ್ಮಫಲಮಯನೆ ಆಗಿರುವ
ಭಾವವಿದು ಸಹಜ ಬ್ರಹ್ಮಜ್ಞ[2] ॥ 80 ॥

ಸುಮ್ಮನಿಹೆನೆಂಬಾಗ । ಹಮ್ಮು ತಾನಿವಗಿಹುದು
ಸುಮ್ಮನಿಹ ಕೆಲಸ ಮಾಳ್ಪವನೆ ಜೀವನಿವ
ಸುಮ್ಮನಿರಲಾರ ಬ್ರಹ್ಮಜ್ಞ[3] ॥ 81 ॥

ಈ ರೀತಿ ಸಹಜದಲಿ ಸೇರಿರುವ ಕರ್ಮಗಳ
ನಾರಾಯಣನಿಗೆ ಅರ್ಪಿಸುತ ಸಾಗುವಾ
ದಾರಿ ಶ್ರಮವಹುದೆ ? ಬ್ರಹ್ಮಜ್ಞ ॥ 82 ॥

ಕೆಟ್ಟ ಕರ್ಮವು ಸಹಿತ । ನೆಟ್ಟಿಹುದು ಜೀವನದಿ
ಗಟ್ಟಿಮನದಿಂದೆ ಅವುಗಳನು ಜಯಿಸುವದು
ಕಷ್ಟತರವಹುದು ಬ್ರಹ್ಮಜ್ಞ ॥ 83 ॥

ಮರೆಯದಲೆ ಇವುಗಳನು । ಪರಮಾತ್ಮಗರ್ಪಿಸುತ
ಹರಿ ನೀನೆ ಬಿಡಿಸು ಇದರಿಂದಲೆನ್ನುತಲಿ
ಮೊರೆಹೊಗಲು ಬೇಕು ಬ್ರಹ್ಮಜ್ಞ ॥ 84 ॥

---

1. ಈ ವಿಷಯಕ್ಕೆ ಗೀ. 12–11ನ್ನು ನೋಡಿರಿ.
2. ಈ ವಿಷಯಕ್ಕೆ ಗೀ. 3–5 ಮತ್ತು 8ನ್ನು ನೋಡಿರಿ.
3. ಈ ವಿಷಯಕ್ಕೆ ಗೀ. 4–18 (ಭಾ.ಭಾ. 261)ರಲ್ಲಿ 'ಅಕರ್ಮಣಿ ಚ ಕರ್ಮಾಭಾವೇ.....' ಎಂಬ ವಾಕ್ಯಭಾಗವನ್ನು ನೋಡಿರಿ.

ಹೀಗೆ ಭಕ್ತಿಯು ಬೆಳೆಯೆ । ಆಗಲಾ ದುಷ್ಕರ್ಮ
ರೋಗವಿದು ತೊಲಗಿ ಶ್ರೀಹರಿಯ ದಯೆಯಿಂದೆ
ಆಗುವನು ಸಾಧು ಬ್ರಹ್ಮಜ್ಞ[1] ॥ 85 ॥

ಘನ ದುರಾಚಾರಿಯಹ । ಮನುಜ ಸಹ ಭಕ್ತಿಯಲಿ
ಎನಗಿನ್ನು ಶರಣು ಬರಲವನು ಸಾಧುವೆಂ-
ದೆನಿಸುವನು ನಿಜದಿ ಬ್ರಹ್ಮಜ್ಞ ॥ 86 ॥

ಶ್ರೀಕೃಷ್ಣಭಗವಂತ । ಈ ಕ್ರಮವ ಪೇಳಿರಲು
ಸಕ್ರಿಯಾಶಾಸ್ತ್ರವಿದ ನೆಗಳೆ ಜೀವನದ
ವಕ್ರ ತೊಲಗುವದು ಬ್ರಹ್ಮಜ್ಞ ॥ 87 ॥

ಒಳ್ಳೆಗುಣ ಒಳ್ಳೆನಡೆ । ಮೆಲ್ಲನಳವಡಿಸುವವು
ಸಲ್ಲಲಿತ ಭಕ್ತಿಭಾವವಿದು ಬರಲಿನ್ನು
ಒಳ್ಳೆ ಸಾಧನವು ಬ್ರಹ್ಮಜ್ಞ[2] ॥ 88 ॥

ಗುರು ಶಾಸ್ತ್ರಗಳ ನೆರವು । ವರ ಶಮಾದಿಗಳಿರವು
ಪರಮಾತ್ಮದಯದಿ ಒದಗುತ್ತ ಜ್ಞಾನಕ್ಕೆ
ಪರಿಕರವೆ ಬಕ್ಕು ಬ್ರಹ್ಮಜ್ಞ ॥ 89 ॥

ಎಲ್ಲ ಕರ್ಮಗಳನ್ನು । ನಿಲ್ಲದಲೆ ಅರ್ಪಿಸಲು
ಬಲ್ಲಂತೆ ಫಲವು ಇದು ಬಹುದು ಜ್ಞಾನದಲಿ
ನಿಲ್ಲುವಾ ನಿಷ್ಠೆ ಬ್ರಹ್ಮಜ್ಞ ॥ 90 ॥

ಸರ್ವಕರ್ಮದ ತ್ಯಾಗ । ಸರ್ವತ್ರ ಜ್ಞಾನಿಯಲಿ
ತೋರ್ವುದತಿ ಸಹಜ ಸ್ಥಿತಿಯಿದುವೆ ಸಾಧಕಗೆ
ನಿರ್ವಹಿಪ ವಿಧಿಯು ಬ್ರಹ್ಮಜ್ಞ ॥ 91 ॥

ಕರ್ಮಕರ್ತೃವು ಫಲವು । ಬ್ರಹ್ಮವೇ ಜ್ಞಾನಿಗಿದು
ಸಮ್ಮತಿಯ ದೃಷ್ಟಿಯವಗಿರಲು ಸರ್ವತ್ರ
ಬ್ರಹ್ಮದರ್ಶನವು ಬ್ರಹ್ಮಜ್ಞ ॥ 92 ॥

ಸಾಧಕಗೆ ಭಾವನೆಯ । ಸಾಧನೆಯು ಇದು ಮತ್ತೆ
ಆಧಾರವಿದಕೆ ಜ್ಞಾನಿಗಳ ನಡೆನುಡಿಯೆ
ಬೋಧವಿದ ಕೇಳಿ ಬ್ರಹ್ಮಜ್ಞ ॥ 93 ॥

1. ಈ ವಿಷಯಕ್ಕೆ ಗೀ. 9–30ನ್ನು ನೋಡಿ.
2. ಈ ವಿಷಯಕ್ಕೆ ಗೀ. 9–31ನ್ನು ನೋಡಿ.

ಸಾಮ್ಯವೆರಡರಲುಂಟು । ಸಮ್ಮತಿಸಿ ಭಾಷ್ಯದಲಿ
ಪ್ರೇಮದಿಂ ಭಕ್ತಿಯೋಗದಲಿ ತಿಳಿಸಿರುವ
ಈ ಮಾತು ಕೇಳಿ ಬ್ರಹ್ಮಜ್ಞ ॥ 94 ॥

ಮುನಿಯಗಸ್ತ್ಯನು ಜಲಧಿ । ಕ್ಷಣದಲ್ಲಿ ಕುಡಿದಿರಲು
ಅಣಕಿಸುತಲಿದನೆ ಈಗಿನಾ ವಿಪ್ರರನು
ಕೆಣಕುವಂತಿದುವೆ ಬ್ರಹ್ಮಜ್ಞ ॥ 95 ॥

ಜ್ಞಾನಿಗಿಹ ನಡತೆಯನು । ತಾನು ಆಚರಿಸುತ್ತೆ
ಮಾನವನು ಭಾವದೊಳಗಿರಿಸಲದನಿಲ್ಲಿ
ಮಾನಿಪುದು ಶಾಸ್ತ್ರ ಬ್ರಹ್ಮಜ್ಞ ॥ 96 ॥

ಇನ್ನು ಇದರಂಶಗಳ । ಚೆನ್ನಾಗಿ ಕೂಡಿಸುತ
ಮುನ್ನವೇ ಪೇಳ್ದ ಯೋಗವನು ತೋರಿಸಲು
ಸನ್ನದ್ಧನಪ್ಪೆ ಬ್ರಹ್ಮಜ್ಞ ॥ 97 ॥

### (ಜ್ಞಾನಿಯ ಸಹಜತೆ, ಸಾಧಕನ ಸಾಧನೆ)

ನಾನೆಂಬ ಹಮ್ಮುಯಿದು । ಜ್ಞಾನಿಯಲ್ಲಿರದಾಗಿ
ತಾನಾದ ತತ್ತ್ವಮಾತ್ರವೇ ನಿಜವೆಂಬ
ಭಾವವಿದು ಸಹಜ ಬ್ರಹ್ಮಜ್ಞ ॥ 98 ॥

ತ್ಯಾಗವಿದು ಹಮ್ಮಿನದು । ಈಗ ನಿಜವಾಗಿಹುದು
ಆಗದಿದು ಅಜ್ಞ ಮನುಜನಿಗೆ । ಬೇರೆ ಬಗೆ
ಸಾಗಬೇಕಿವನು ಬ್ರಹ್ಮಜ್ಞ ॥ 99 ॥

ನಾನೆಂದು ಬಂದಾಗ । ನಾನಲ್ಲ ಮಾಳ್ಪವನು
ಏನೆಲ್ಲ ನಡೆವುದೀಶ್ವರನ ಕೃಪೆಯೆಂದು
ಧ್ಯಾನಮಾಡುವದು ಬ್ರಹ್ಮಜ್ಞ ॥ 100 ॥

ಹೀಗೆ ಈತಗೆ ಹಮ್ಮು । ತ್ಯಾಗವಾಗುವದಿಲ್ಲಿ
ಸಾಗಿಹುದು ಇಂತೆ ಮಿಕ್ಕೆಲ್ಲ ಭಾವಗಳು
ಆಗಿಹವು ಸಾಮ್ಯ ಬ್ರಹ್ಮಜ್ಞ ॥ 101 ॥

ಪಡೆಯಬೇಕಾಗಿರುವ । ಒಡವೆ ಇನ್ನೊಂದಿಲ್ಲ
ಒಡನೆಲ್ಲ ತಾನೆ ತಾನಾದ ಜ್ಞಾನಿಯಿವ
ಪಡೆವುದಿನ್ನೇನು ? ಬ್ರಹ್ಮಜ್ಞ ॥ 102 ॥

ಹೀಗೆ ಫಲಗಳ ತ್ಯಾಗ । ಆಗಿಹುದು ಜ್ಞಾನಿಯಲಿ
ಆಗದಿದು ಅಜ್ಞ ಜನರಿಂಗೆ ದ್ವೈತವಿರೆ
ಸಾಗದೀ ಬಗೆಯು ಬ್ರಹ್ಮಜ್ಞ ॥ 103 ॥
ಫಲವು ಸಾಧಕಗಿರಲು । ಫಲವನ್ನೆ ಬಯಸದಲೆ
ನಿಲುವನಿವ ಕರ್ಮ ಮಾಳ್ಪಾಗ ಇದೆ ತ್ಯಾಗ
ಬಲವಾದ ಭಾವ ಬ್ರಹ್ಮಜ್ಞ ॥ 104 ॥
ಸಿದ್ಧ್ಯಸಿದ್ಧಿಗಳಿಲ್ಲ । ಶುದ್ಧಾತ್ಮನಾದವಗೆ
ಇದ್ದದ್ದು ಎಲ್ಲ ಬೊಮ್ಮವೇ ಆದುದೀ
ಸಿದ್ಧಾನುಭವಿಗೆ ಬ್ರಹ್ಮಜ್ಞ ॥ 105 ॥
ಇದರಂತೆ ಸುಖದುಃಖ । ಅದು ಸಹಿತ ಬೊಮ್ಮವೇ
ಇದು ನಿತ್ಯ ಜ್ಞಾನಿಗೀ ಸಮತೆ ಸಹಜ ಗುಣ-
ವಿದು ಶ್ರೇಷ್ಠನಿಷ್ಠೆ ಬ್ರಹ್ಮಜ್ಞ ॥ 106 ॥
ಸಿದ್ಧ್ಯಸಿದ್ಧಿಗಳಲ್ಲಿ । ಇದ್ದ ಸುಖದುಃಖದಲಿ
ಎದ್ದಿಹುದು ಭಾವ ಪರಮಾತ್ಮಗರ್ಪಿಸುವ
ಶುದ್ಧಸಾಧಕಗೆ ಬ್ರಹ್ಮಜ್ಞ ॥ 107 ॥
ದಮನಿಸುತ ಭಾವನೆಯ । ಸಮತೆಯನು ಸಾಧಿಸುವ
ಸುಮನಸನು ಈತನೀ ಪರಿಯಲಜ್ಞನಿಗು
ಸಮತೆ ಬಂತಿಲ್ಲಿ ಬ್ರಹ್ಮಜ್ಞ ॥ 108 ॥
ಎಲ್ಲವೂ ಈಶ್ವರನು । ಬಲ್ಲಂಥ ಜ್ಞಾನಿಗಿದು
ಎಲ್ಲವೂ ತಾನೆ ಎಂದೆನುತಲನುಭವದೊ-
ಳೆಲ್ಲ ಮುಚ್ಚಿಹನು ಬ್ರಹ್ಮಜ್ಞ ॥ 109 ॥
ಈಶನಿಂದೆಲ್ಲವನು । ಲೇಸಾಗಿ ಮುಚ್ಚುತ್ತ
ಆಶೆಯನೆ ತೊರೆದು ತ್ಯಾಗದಲಿ ನಿಲುವ ಉಪ-
ದೇಶ ಶ್ರುತಿಯಲ್ಲಿ ಬ್ರಹ್ಮಜ್ಞ ॥ 110 ॥
ಸಾಧಿಸಿದೆ ಜ್ಞಾನಿಗಿದು । ಬೋಧರೂಪಾಗಿಹನು
ಭೇದವಿದು ಇಲ್ಲವೆಲ್ಲಕ್ಕು ತಾನೆ ನಿಜ-
ದಾಧಾರನೆನುವ ಬ್ರಹ್ಮಜ್ಞ ॥ 111 ॥
ನಿಜವಾದ ಈಶ್ವರನ । ಭಜನೆಯರ್ಪಣೆ ಇದುವೆ
ಅಜತತ್ತ್ವವೇತ್ತನಾದವಗೆ ಇಲ್ಲವೀ
ತ್ರಿಜಗತ್ತು ನಿಜದಿ ಬ್ರಹ್ಮಜ್ಞ ॥ 112 ॥

ಬರದು ಇದು ಸಾಧಕಗೆ । ವರನಿಷ್ಠೆಯದ್ವೈತ
ಇರೆ ಹೀಗೆ ಬೇರೆ ರೀತಿಯಲಿ ಈ ತತ್ತ್ವ
ನುರಿಸುವನು ಈತ ಬ್ರಹ್ಮಜ್ಞ ॥ 113 ॥

ಈಶನೇ ಜಗಕೆಲ್ಲ । ಲೇಸು ಕಾರಣನೆಂದು
ತಾ ಶಂಕೆಪಡದೆ ನಂಬಿರುತ ಭಕ್ತಿಯಲು-
ಪಾಸಿಸುವನೀತ ಬ್ರಹ್ಮಜ್ಞ ॥ 114 ॥

ತಾನು ಮಾಡುವ ಕರ್ಮ । ಏನೆಲ್ಲವೀಶ್ವರಗೆ
ತಾನೀಗ ಸಲಿಸಿ ಭಾವನೆಯ ಬಲದಿಂದ-
ಲೀ ನೇಮದಿರುವ ಬ್ರಹ್ಮಜ್ಞ ॥ 115 ॥

ಹೋಲಿಕೆಯು ಈರೀತಿ । ಮೇಳವಿಸುತಿರಲಾಗಿ
ಹೇಳಿಹನು ಸರ್ವಕರ್ಮಫಲ ಚಾಗವನು
ಶ್ರೀಲೋಲ ನರಗೆ ಬ್ರಹ್ಮಜ್ಞ ॥ 116 ॥

ಜ್ಞಾನಿ ಜನರನುಕರಣೆ । ಜ್ಞಾನಕ್ಕೆ ಸಲಕರಣೆ
ಮಾನವಗೆ ಕರ್ಮಯೋಗದೀ ಆಚರಣೆ
ಶ್ರೀನಿಧಿಯ ಕರುಣೆ ಬ್ರಹ್ಮಜ್ಞ[1] ॥ 117 ॥

ಇದರಿಂದೆ ಸದ್ಭಕ್ತಿ । ಇದರಿಂದೆ ಸುವಿರಕ್ತಿ
ಇದರಿಂದೆ ಧ್ಯಾನಕಧಿಕಾರ ಬಹುದೆಂಬ
ಹದನ ಗೀತೆಯದು ಬ್ರಹ್ಮಜ್ಞ ॥ 118 ॥

ವಿಶ್ವವನ್ನೆಲ್ಲವನು । ಈಶ್ವರನೆ ಎಂದೆನುವ
ಶಾಶ್ವತದ ಭಾವ ಬೇರೂರಿ ಆನಂದ
ಸೂಸಲಿದು ಮೂಲ ಬ್ರಹ್ಮಜ್ಞ ॥ 119 ॥

ಇದನೆಲ್ಲ ಸೇರಿಸಿಯೆ । ಮುದದಿಂದ ಗೀತೆಯಲಿ
ಹದನಾಗಿ ಕರ್ಮಯೋಗದಿಂ ಕರೆದಿರುವ
ಪದದರ್ಥ ನೋಡಿ ಬ್ರಹ್ಮಜ್ಞ[2] ॥ 120 ॥

---

1. ಪದ್ಯ 91 ರಿಂದ 117ರವರೆಗಿನ ವಿಷಯಕ್ಕೆ ಭ. ಗೀ.12-12 (ಭಾ.ಭಾ. 742)ನ್ನು ನೋಡಿರಿ.

2. ಈ ವಿಷಯಕ್ಕೆ ಗೀತಾ-ಸಾರ್ಥ (ಪಾಕೆಟ್ ಎಡಿಷನ್) ಅಧ್ಯಾಯ 12-11ನೇ ಶ್ಲೋಕದ ಟಿಪ್ಪಣಿಯನ್ನು ನೋಡಿರಿ.

ಶ್ರೀಗಳೀ ಗುಟ್ಟನ್ನು । ಆಗಾಗ ತಿಳಿಸುತ್ತ
ಸಾಗಿಸುತ ಶಿಷ್ಯವರ್ಗವನು ಸನ್ಮಾರ್ಗ-
ಕಾಗಿ ನಡೆಸುವರು ಬ್ರಹ್ಮಜ್ಞ ॥ 121 ॥

ಬರಿಯ ಬಾಯ್ಮಾತಿನಲಿ । ಒರೆಯುತ್ತ ವೇದಾಂತ
ಜರಿಯುತ್ತ ಕರ್ಮಯೋಗವನು ಕಡೆಗಣಿಪ
ದುರುಳತನ ಸಲ್ಲ ಬ್ರಹ್ಮಜ್ಞ ॥ 122 ॥

ಪರಮತರ ಶ್ರದ್ಧೆಯಲಿ । ಚರಿಸಿ ಕರ್ಮದ ಯೋಗ
ಉರುತರದ ತತ್ತ್ವಚಿಂತನೆಗೆ ಮನಶುದ್ಧಿ
ಇರಿಸಬೇಕಿಲ್ಲಿ ಬ್ರಹ್ಮಜ್ಞ ॥ 123 ॥

ಗೀತೆಗಿಹ ವಿವರಣೆಯ । ಖ್ಯಾತ ಬರಹಗಳನ್ನು
ಪ್ರೀತಿಯಲಿ ನೋಡಿ ತಿಳಿಯುವದು ಶ್ರೀಗಳಾ
ಮಾತುಗಳ ಮರ್ಮ ಬ್ರಹ್ಮಜ್ಞ[1] ॥ 124 ॥

ಸಾಧನೆಯ ಬಗೆಯಲ್ಲಿ । ಬೋಧಿಸಿದ ಹಲವು ಕೃತಿ
ಸಾಧಕಗೆ ಮಾರ್ಗದರ್ಶನವ ನೀಡುತಿಹ
ಸೌಧವಾಗಿಹವು ಬ್ರಹ್ಮಜ್ಞ ॥ 125 ॥

ಈರೀತಿ ಶ್ರೀಗಳೀ । ಸಾರ ಬೋಧನೆಯಂತೆ
ಬೀರಿದೆನು ಇಲ್ಲಿ ಈ ಕರ್ಮಯೋಗದಾ-
ಚಾರ ಪದ್ಧತಿಯ ಬ್ರಹ್ಮಜ್ಞ ॥ 126 ॥

ಮುಂದಿನಧ್ಯಾಯದಲಿ । ಆಂದದಲಿ ಸಾಧಕಗೆ
ಬಂಧುರದ ಕೆಲವು ಸೂಚನೆಗಳೀವುದಕೆ
ಮುಂದಾಗಿ ಪೇಳ್ವೆ ಬ್ರಹ್ಮಜ್ಞ ॥ 127 ॥

---

1. ಈ ವಿಷಯಕ್ಕೆ ಶ್ರೀಶ್ರೀಗಳವರಿಂದ ರಚಿತವಾದ ಗೀತೋಪನ್ಯಾಸಗಳನ್ನು ನೋಡಿರಿ ಎಂದರ್ಥ.

# ಹದಿನಾಲ್ಕನೆಯ ಅಧ್ಯಾಯ

## ಸಾಧಕರಿಗೆ ಕಿವಿಮಾತು

ಪರಮಾರ್ಥ ಪಥಿಕರಿಗೆ । ನೆರೆ ಸ್ನೇಹ ಸಲಿಗೆಯಲಿ
ಒರೆಯುವೆನು ಕೆಲವು ಕಿವಿಮಾತುಗಳನಿಲ್ಲಿ
ಮರೆಯದಿರಿ ಇವನು ಬ್ರಹ್ಮಜ್ಞ ॥ 1 ॥

ವರಜ್ಞಾನಿ ಬ್ರಹ್ಮಜ್ಞ । ಗುರು ಸಂತ ಭಕ್ತರಾ
ಚರಣಗಳ ಸ್ಮರಿಸಿ ಹೇಳುತಿಹೆನಲ್ಲದಲೆ
ಹಿರಿತನದೊಳಲ್ಲ ಬ್ರಹ್ಮಜ್ಞ ॥ 2 ॥

ತಪ್ಪುದಾರಿಗಳನ್ನು । ಅಪ್ಪುವೆವು ಅರಿಯದಲೆ
ತಪ್ಪನ್ನು ತಿದ್ದಿಕೊಳ್ಳುವದಿದೆ ಮುಖ್ಯವಾ-
ಗಿಪ್ಪುದಿದರಲ್ಲಿ ಬ್ರಹ್ಮಜ್ಞ ॥ 3 ॥

ದೊಡ್ಡ ನುಡಿಗಳ ಕಲಿತು । ಅಡ್ಡದಾರಿಯ ಹಿಡಿವ
ದಡ್ಡತನ ಮಾಡದಿರಿಯೆಂದು ನಿಮಗೆ ಸೆರ-
ಗೊಡ್ಡಿ ಬೇಡುವೆನು ಬ್ರಹ್ಮಜ್ಞ ॥ 4 ॥

ಜಾತಿಮತ ಪಂಥಗಳ । ನೀತಿ ಬೋಧಾದಿಗಳ
ರೀತಿಗಳೆ ಕೆಟ್ಟ ಈ ದಿನದಿ ಧರ್ಮದಾ
ಮಾತೆ ಹೋಗಿಹುದು ಬ್ರಹ್ಮಜ್ಞ ॥ 5 ॥

ಬರಿ ದೊಡ್ಡ ಮಾತುಗಳ । ಸುರಿಮಳೆಯ ದಿನಗಳಿವು
ಪರಮಾರ್ಥದಲ್ಲು ಈ ಜಾಡ್ಯ ಸಾಧಕಗೆ
ಬರದಂತೆ ನಡೆಗು ಬ್ರಹ್ಮಜ್ಞ ॥ 6 ॥
ವೇದಾಂತವೆನ್ನುವದು । ಆದುದಿದು ಜೀವನವು
ವಾದದಾ ಮಾತು ಮೊದಲಲ್ಲ ಇತರರಿಗೆ
ಬೋಧಿಸುವದಲ್ಲ ಬ್ರಹ್ಮಜ್ಞ ॥ 7 ॥

ಹೊರ ಒಳಗೆ ಜೀವನದಿ । ಬೆರೆಯಬೇಕೀ ತತ್ತ್ವ
ಅರಗಿಸಲು ಬೇಕು ಪ್ರತಿನಿತ್ಯ ನಡತೆಯಲಿ
ತರಬೇಕು ಇದನು ಬ್ರಹ್ಮಜ್ಞ ॥ 8 ॥

ಪರಮವಿರತಿಯ ತಾಳಿ । ಪರಮಾತ್ಮಜ್ಞಾನದಲಿ
ನಿರುತವೂ ನಿಂತ ಸಂತರಿಗೆ ತೊಡರಿಲ್ಲ
ಹರಿದಾಟವಿಲ್ಲ ಬ್ರಹ್ಮಜ್ಞ ॥ 9 ॥

ವ್ಯವಹಾರದಲ್ಲಿರುತ । ತವಕ ತತ್ತ್ವದಲಿರುತ
ಶ್ರವಣಾದಿ ಮುಖ್ಯಸಾಧನೆಯ ಬಯಸುವರು
ಕಿವಿಮಾತು ಕೇಳಿ ಬ್ರಹ್ಮಜ್ಞ ॥ 10 ॥

ನಿಮ್ಮನಿಮ್ಮಯ ಧರ್ಮ । ಒಮ್ಮನದಿ ಪಾಲಿಸುತ
ನೆಮ್ಮಿರುವ ಪೂರ್ವದಾಚಾರ ಹಳಿಯದೆ ಸ್ವ-
ಧರ್ಮ ಪಾಲಿಸಿರಿ ಬ್ರಹ್ಮಜ್ಞ ॥ 11 ॥

ಹುಟ್ಟುವದು ಧರ್ಮವದು । ಶ್ರೇಷ್ಠನಡತೆಯಲಿನ್ನು
ಸೃಷ್ಟೀಶ ಹರಿಯು ಧರ್ಮಕ್ಕೆ ಒಲಿಯುವನು
ಶಿಷ್ಟರಪ್ಪಣೆಯು ಬ್ರಹ್ಮಜ್ಞ[1] ॥ 12 ॥

ಕೈಲಾದಮಟ್ಟಿಗೂ । ಶೀಲಗಳ ಪಾಲಿಸಿರಿ
ಆಲಸ್ಯಭ್ರಾಂತಿಗೊಳಗಾಗಿ ಧರ್ಮಕುಲ
ಶೀಲ ಬಿಡಬೇಡಿ ಬ್ರಹ್ಮಜ್ಞ ॥ 13 ॥

ಮೇಲ್ತರದ ತತ್ತ್ವವನು । ಹೇಳುವಾ ಸಮಯದಲಿ
ಕೀಳೆಂದು ಕರ್ಮ ನಿಂದಿಸಿರುವುದನಿಲ್ಲಿ
ಮೇಳವಿಸಬೇಡಿ ಬ್ರಹ್ಮಜ್ಞ ॥ 14 ॥

ವ್ರತನಿಯಮ ಆಚಾರ । ಅತಿ ಕಠಿಣವೆಂದೆನುತ
ಮತಿ ಹುಟ್ಟಿ ದೇಹಸೌಖ್ಯಕ್ಕೆ ಬಲಿಬೀಳ್ವ
ಗತಿಗೆ ಬರಬೇಡಿ ಬ್ರಹ್ಮಜ್ಞ ॥ 15 ॥

ಅಳಿದಿಹುದು ಹಿಂದಿನಾ । ಬಳುವಳಿಯ ಧರ್ಮವದು
ಉಳಿದಷ್ಟು ಧರ್ಮಮಾರ್ಗವನೆ ಶ್ರದ್ಧೆಯಲಿ
ಬೆಳೆಸುತ್ತ ಬನ್ನಿ ಬ್ರಹ್ಮಜ್ಞ ॥ 16 ॥

ವೇದಾಂತ ಮಾತುಗಳ । ಮೋದದಲಿ ಹೇಳುತ್ತ
ಹಾದಿಯನೆ ತಪ್ಪಿ ನಡೆವವರ ಹತ್ತಿರದ
ಹಾದಿ ಬಿಡಿ ಮೊದಲು ಬ್ರಹ್ಮಜ್ಞ ॥ 17 ॥

1. ಈ ವಿಷಯಕ್ಕೆ 'ಆಚಾರಪ್ರಭವೋ ಧರ್ಮಃ' ಎಂಬ ವಿಷ್ಣು ಸಹಸ್ರನಾಮ ಫಲಶ್ರುತಿಯ ಶ್ಲೋಕವನ್ನು ನೋಡಿರಿ.

ವೈರಾಗ್ಯಸದ್ಧರ್ಮ । ಸಾರ ಭಗವದ್ಭಕ್ತಿ
ಯಾರಲ್ಲಿ ಜ್ಞಾನಮಾರ್ಗಪ್ರವೃತ್ತಿಯೋ
ಸೇರಿರವರನ್ನು ಬ್ರಹ್ಮಜ್ಞ ॥ 18 ॥

ನಮ್ಮಲ್ಲಿ ದುರ್ಗುಣದ । ಹಮ್ಮು ಬಂದಿರಲದನು
ಧರ್ಮದಾಚರಣೆ ಹೆಚ್ಚಿಸುತ ತೊಲಗಿಸಲು
ಪೆರ್ಮೆಯಿಂ ತೊಡಗಿ ಬ್ರಹ್ಮಜ್ಞ ॥ 19 ॥

ಸತತ ನಾಮಸ್ಮರಣೆ । ಮತಿಗೆ ಭಗವದ್ಭಾವ
ಅತಿಶಯದ ಶ್ರದ್ಧೆ ಭಗವಂತನಲ್ಲಿಡುತ
ಪಥವ ಸಾಗಿಪುದು ಬ್ರಹ್ಮಜ್ಞ ॥ 20 ॥

ಕರ್ಮಯೋಗದಿ ಪೇಳ್ದ । ಧರ್ಮಗಳನನುಸರಿಸಿ
ನಿರ್ಮಲತೆಯನ್ನು ಸಾಧಿಸಲು ಯತ್ನಿಪುದು
ಒಮ್ಮನದಿ ಬಿಡದೆ ಬ್ರಹ್ಮಜ್ಞ[1] ॥ 21 ॥

ಅತ್ಯಂತ ಹಿತವೆಂದು । ಸತ್ಯ ಶ್ರೀಕೃಷ್ಣ ಸಹ
ಮತ್ತಿನ್ನು ಕರ್ಮಯೋಗವನೆ ಪಾರ್ಥನಿಗೆ
ಒತ್ತಿ ಹೇಳಿಹನು ಬ್ರಹ್ಮಜ್ಞ ॥ 22 ॥

ಭಾಷ್ಯಕಾರರು ಬರೆದ । ಲೇಸಿನೀ ವಾಕ್ಯದಾ
ಆಶಯವ ತಿಳಿದು ವರ್ತಿಪುದು ದಿವ್ಯಸಂ-
ದೇಶವನುಸರಿಸಿ ಬ್ರಹ್ಮಜ್ಞ[2] ॥ 23 ॥

ಬ್ರಹ್ಮವಿಹುದೆಂಬುವನು । ಧರ್ಮವರ್ಣಾಶ್ರಮವ
ನೆಮ್ಮಿಯೇ ನಡೆವ ಬೊಮ್ಮವನು ಪಡೆಯಲ್ಕೆ
ಧರ್ಮಸಾಧನೆಯು ಬ್ರಹ್ಮಜ್ಞ ॥ 24 ॥

ಬ್ರಹ್ಮವಿಲ್ಲೆಂಬುವನು । ದುರ್ಮಾರ್ಗಿ ನಾಸ್ತಿಕನು
ಧರ್ಮದಲಿ ಶ್ರದ್ಧೆಯಿಲ್ಲದಲೆ ನಡೆವ ದು-
ಷ್ಕರ್ಮಿಯಾಗಿಹನು ಬ್ರಹ್ಮಜ್ಞ ॥ 25 ॥

---

1. ಇದೇ ಗ್ರಂಥದ 13ನೆಯ ಅಧ್ಯಯದಲ್ಲಿ ಈ ವಿಚಾರವಿದೆ.

2. ಈ ವಿಷಯಕ್ಕೆ ಗೀ. 12-12 (ಭಾ. ಭಾ. 743)ರಲ್ಲಿ 'ಯಸ್ಮಾಚ್ಚ ಅರ್ಜುನಸ್ಯ....' ಎಂಬ ವಾಕ್ಯಭಾಗವನ್ನು ನೋಡಿರಿ.

ತಿತ್ತಿರಿಯ ಭಾಷ್ಯದಲಿ । ಎತ್ತಿ ಬರೆದಿರುವ ಈ
ಮುತ್ತಿನಂತಿರುವ ಮಾತನ್ನು ಲಕ್ಷ್ಯದಲಿ
ಮತ್ತೆ ತರಬೇಕು ಬ್ರಹ್ಮಜ್ಞ[1] ॥ 26 ॥

ಆಶೆ ಮೊದಲಾಗಿರುವ । ಆಸುರೀಗುಣ ಬಿಡುತ
ಲೇಸಾಗಿ ದೈವಸಂಪದವ ಬೆಳೆಸುವದ-
ಕಾಶೆಪಡಬೇಕು ಬ್ರಹ್ಮಜ್ಞ ॥ 27 ॥

ಕೆಟ್ಟ ವ್ಯಸನಕೆ ಸಿಲುಕಿ । ಸಿಟ್ಟು ಸುಳ್ಳನು ಬಲಿಸಿ
ಶಿಷ್ಟರಾಚರಣೆ ತೆಗಳುವಗೆ ವೇದಾಂತ
ನಿಷ್ಠೆ ದುರ್ಲಭವು ಬ್ರಹ್ಮಜ್ಞ ॥ 28 ॥

ಗೀತೆಯಲಿ ಕಾಠಕದ । ಮಾತಿನಲಿ ಪೇಳಿರುವ
ರೀತಿಗಳ ಹಿಂದೆ ಹೇಳಿದುದ ಸ್ಮರಿಸುತ್ತ
ಆ ತೆರದಿ ನಡೆಗು ಬ್ರಹ್ಮಜ್ಞ[2] ॥ 29 ॥

ದಿನದಿ ಕೆಲವೇಳೆಯಲಿ । ಮನದಿ ಭಗವಂತನನು
ನೆನೆಯುತ್ತ ಮುನ್ನ ಸನ್ಮಾರ್ಗ ಹಿಡಿಸೆಂದು
ವಿನಯದಲಿ ಕೇಳಿ ಬ್ರಹ್ಮಜ್ಞ ॥ 30 ॥

ನಾನು ಹೊರಟಿಹ ದಾರಿ । ಏನೆಂತೊ ನಾನರಿಯೆ
ನೀನೆನ್ನ ತಿದ್ದಿ ಸರಿಪಡಿಸು ಎಂದೆರಗಿ
ಧ್ಯಾನಿಪುದು ಸತತ ಬ್ರಹ್ಮಜ್ಞ ॥ 31 ॥

ಧನವಿದ್ಯೆ ಸಂಪತ್ತು । ಘನಮಾನ ಮಾರ್ಯಾದೆ
ಜನಬಲವ ನೆಚ್ಚಿ ಗರ್ವಿಷ್ಠನಾಗದಲೆ
ವಿನಯ ಸಾಧಿಪುದು ಬ್ರಹ್ಮಜ್ಞ ॥ 32 ॥

ಕಾಯಮನವಿಂದ್ರಿಯವ । ಸಾಯಸದಿ ದಂಡಿಸುತ
ಮಾಯೆಯನು ಗೆಲಲು ಯತ್ನಿಪುದು ಸಡಿಲು ಬಿಡ-
ಲಾಯ ತಪ್ಪುವದು ಬ್ರಹ್ಮಜ್ಞ ॥ 33 ॥

---

1. ಪದ್ಯ 24 ರಿಂದ 26ರವರೆಗಿನ ವಿಷಯಕ್ಕೆ ತೈ. 2–6 (ಭಾ. ಭಾ. 151)ನ್ನು ನೋಡಿರಿ.

2. ಪದ್ಯ 27 ರಿಂದ 29ರವರೆಗಿನ ವಿಷಯಕ್ಕೆ ಗೀ. 16–21 ಮತ್ತು ಕ. 1–2–24ನ್ನು ನೋಡಿರಿ.

ತಪದಿಂದಲಿಂದ್ರಿಯವ । ತಪಿಸಿ ದುರ್ವರ್ತನವ
ಕಪಟ ಮದಗಳನು ಜಯಿಸದಗೆ ಇದರಲ್ಲಿ
ಅಪಯಶವು ಬಹುದು ಬ್ರಹ್ಮಜ್ಞ ॥ 34 ॥

ಪುರುಷೋತ್ತಮನ ಪ್ರಾಪ್ತಿ । ಪರಮಸಾಧುವಿಗಕ್ಕು
ಬರೆದಿರುವರಿದನು ಗೀತೆಯಲಿ ಶಂಕರರು
ಪರಿಣತರು ನೋಡಿ ಬ್ರಹ್ಮಜ್ಞ[1] ॥ 35 ॥

ಅಧಿಕಾರ ಮೀರಿರುವ । ಅಧಿಕಸಾಧನೆಗಗಳಿಗೆ
ಅಧಿಕತರ ಆಶೆ ಮಾಡದಲೆ ತಕ್ಕುದನೆ
ವಿಧಿಯಲೆಸಗುವದು ಬ್ರಹ್ಮಜ್ಞ ॥ 36 ॥

ಕೀಳಲ್ಲವಾವುದೂ । ಕೇಳಿ ಸಾಧನೆಯಲ್ಲಿ
ಮೇಳವಿಸಿ ನಮ್ಮ ಅಧಿಕಾರಕೊಪ್ಪಿದುದೆ
ಮೇಲು ನಮಗಿನ್ನು ಬ್ರಹ್ಮಜ್ಞ ॥ 37 ॥

**(ವೇಷದ ಗುರು)**

ಕರ್ಮವನು ಹೀಗಳೆವ । ಧರ್ಮವನ್ನತಿಗಳೆವ
ದುರ್ಮತಿಯ ತರುವ ಬೋಧಕನ ಕೈಬಿಟ್ಟು
ಸುಮ್ಮನಿರೆ ಲೇಸು ಬ್ರಹ್ಮಜ್ಞ ॥ 38 ॥

ಬರಿ ತರ್ಕಯುಕ್ತಿಗಳ । ಅರುಹುತ್ತ ಗರ್ವದಲಿ
ಜರಿಯುತ್ತ ಮಿಕ್ಕುದೆಲ್ಲವನು ಬೋಧಿಪರ
ನೆರಳು ಸಹ ಬೇಡ ಬ್ರಹ್ಮಜ್ಞ ॥ 39 ॥

ಗುರುವು ನಾನಾಗಿಹೆನು । ವರಜ್ಞಾನಿ ನಾನೆಂದು
ಬರಿಹೆಮ್ಮೆಪಡುವ ಗುರುಗಳನು ದೂರದಲಿ
ಸರಿಸಿಬಿಡಬೇಕು ಬ್ರಹ್ಮಜ್ಞ ॥ 40 ॥

ಕೋಪ ಕಪಟದ ವೇಷ । ಶಾಪಾದಿಗಳ ಮೋಸ
ತಾಪವನು ಬಡಿಸಿ ಹೆದರಿಸುವ ಗುರುಗಳಿಂ-
ದಾಪತ್ತು ಬಹುದು ಬ್ರಹ್ಮಜ್ಞ ॥ 41 ॥

---

1. ಪದ್ಯ 34 ರಿಂದ 35ರ ವಿಷಯಕ್ಕೆ ಗೀ. 15-11 (ಭಾ. ಭಾ. 909)ರಲ್ಲಿ "ಯತನ್ತೋಽಪಿ..." ಎಂಬಲ್ಲಿಂದ ನೋಡಿರಿ..

ಜ್ಞಾನಿಗಳು ನಾವೆಲ್ಲ । ಏನೆಲ್ಲ ಮಾಡಿದರು
ಹಾನಿಯೇ ಇಲ್ಲವೆಂದೆನುತ ನಡೆವ ಗುರು
ಹಾನಿಕಾರಕನು ಬ್ರಹ್ಮಜ್ಞ ॥ 42 ॥

ದುರಿತದಾಚಾರಗಳ । ಸರಸದಲಿ ಮೋದಿಸುತ
ಪರಿಚರಕೆ ಅಂಥ ಶಿಷ್ಯರನೆ ಕೂಡಿರುವ
ಗುರುವ ತ್ಯಜಿಸುವದು ಬ್ರಹ್ಮಜ್ಞ ॥ 43 ॥

ತಾಮಸೋಪಾಸನೆಯ । ನೇಮಗಳ ನೆಪದಿಂದೆ
ಸೀಮೆಯನು ಮೀರಿ ದುಶ್ಚಟಕೆ ಸಿಲುಕಿಸುವ
ಗುರುವ ತ್ಯಜಿಸುವದು ಬ್ರಹ್ಮಜ್ಞ[1] ॥ 44 ॥

ಸ್ತುತಿನಮಸ್ಕಾರಗಳ । ಅತಿ ಬಯಕೆಯುಳ್ಳ ಗುರು
ಅತಿಶಯದಿ ತನ್ನ ಮಹಿಮೆ ಬಣ್ಣಿಸುವ ಗುರು
ಪತನಕಾರಣನು ಬ್ರಹ್ಮಜ್ಞ ॥ 45 ॥

ಜಾತಿ ಧರ್ಮಗಳನ್ನು । ರೀತಿನೀತಿಗಳನ್ನು
ಭೀತಿಯೇ ಇರದೆ ಖಂಡಿಸುವ ಲಂಡಗುರು–
ವೀತ ಕೇಡಿಗನು ಬ್ರಹ್ಮಜ್ಞ ॥ 46 ॥

ದೇಶಿಕರ ವೇಷದೀ । ಮೋಸಗಾರರ ಬಲೆಗೆ
ದಾಸರೇ ಆಗಿ ಕೆಡಬಾರದೆಂದಿಲ್ಲಿ
ಈಸು ಪರಿ ಪೇಳ್ವೆ ಬ್ರಹ್ಮಜ್ಞ ॥ 47 ॥

ಲೇಸಾದ ಗುರು ಸಿಗಲು । ಈಶನಾಶೀರ್ವಾದ
ಲೇಶವದು ಪೂರ್ವಪುಣ್ಯಕ್ಕೆ ಫಲವಹುದು
ಈ ಸಮಯದಲಿ ಬ್ರಹ್ಮಜ್ಞ ॥ 48 ॥

**(ಲೇಸಾದ ಗುರು)**

ಭಕ್ತಿಯನು ಹೆಚ್ಚಿಸುತ । ಹತ್ತಿಸುತ ಸನ್ಮಾರ್ಗ
ತತ್ತ್ವವನು ತಿಳಿಸುತನುಭವಕೆ ತರುವನೆ
ಉತ್ತಮದ ಗುರುವು ಬ್ರಹ್ಮಜ್ಞ ॥ 49 ॥

1. ಈ ವಿಷಯಕ್ಕೆ ಗೀ. 9–25 (ಭಾ. ಭಾ. 585)ನ್ನೂ ಗೀ. 17–4 (ಭಾ. ಭಾ. 964)ನ್ನೂ ನೋಡಿರಿ.

ಕರ್ಮದಲಿ ಶ್ರದ್ಧೆ ಮೇಣ್ । ನೆಮ್ಮಿಕೆಯು ಭಕ್ತಿಯಲಿ
ಸಮ್ಮತಿಸಿ ಜ್ಞಾನಕನುಭವವ ತೋರುವನೆ
ಬ್ರಹ್ಮಜ್ಞ ಗುರುವು ಬ್ರಹ್ಮಜ್ಞ ॥ 50 ॥

ಜ್ಞಾನದಲಿ ನೆಲೆನಿಂತು । ಸ್ವಾನುಭವ ತಾನಾಂತು
ಜ್ಞಾನಕ್ಕೆ ತರುವ ಸದ್ಧರ್ಮ ಬೋಧಿಸುವ
ಜ್ಞಾನಿಯೇ ಗುರುವು ಬ್ರಹ್ಮಜ್ಞ ॥ 51 ॥

ಶಾಂತ ದಾತನು ಧೀರ । ಶಾಂತಿಬೋಧಿಪ ಚತುರ
ಸ್ವಾಂತದಲು ಹೊರಗು ಬಗೆಯೊಂದೆ ಆಗಿರುವ
ಸಂತ ಶ್ರೀಗುರುವು ಬ್ರಹ್ಮಜ್ಞ ॥ 52 ॥

ಜನಗಳಧಿಕಾರಕ್ಕೆ । ಮನಸಿನಾ ಸ್ಥಿತಿಗತಿಗೆ
ಅನವರತ ತಕ್ಕ ಬೋಧನೆಯನೀವವನೆ
ವಿನುತ ಶ್ರೀಗುರುವು ಬ್ರಹ್ಮಜ್ಞ ॥ 53 ॥

ಆಶೆಕಪಟಗಳಿಲ್ಲ । ದ್ವೇಷಮತ್ಸರವಿಲ್ಲ
ದಾಸನೇ ಅಲ್ಲ ವಿಷಯಗಳಿಗೀತನೇ
ಲೇಸಾದ ಗುರುವು ಬ್ರಹ್ಮಜ್ಞ ॥ 54 ॥

ವೈರಾಗ್ಯಪರನಾಗಿ । ಸಾರವರಿತವನಾಗಿ
ಕಾರುಣ್ಯಸಿಂಧುವಿರಲಾಗಿ ಸದ್ಗುರುವು
ಶ್ರೀರಾಮಕೃಪೆಯು ಬ್ರಹ್ಮಜ್ಞ ॥ 55 ॥

ಜನರ ನುತಿಸದೆ ಮತ್ತೆ । ಘನ ಧರ್ಮದೊಳಿರುತ್ತೆ
ತನುವಾಣಿ ಮನವ ಸಹಜದಲಿ ನಿಲಿಸಬ-
ಲ್ಲನೆ ಶ್ರೇಷ್ಠ ಗುರುವು ಬ್ರಹ್ಮಜ್ಞ ॥ 56 ॥

ತತ್ತ್ವ ತಿಳಿಸುವದಕ್ಕೆ । ಮತ್ತಿಲ್ಲ ದಾಕ್ಷಿಣ್ಯ
ಸತ್ತ್ವಗುಣಶೀಲನಿರತರಿಗೆ ಆದರ್ಶ
ವ್ಯಕ್ತಿ ಸದ್ಗುರುವು ಬ್ರಹ್ಮಜ್ಞ ॥ 57 ॥

ನಾನೆಂಬ ಹಮ್ಮಿಲ್ಲ । ಮನದಂಭಗಳಿಲ್ಲ
ಮೌನಿಯಿವ ನಿತ್ಯತತ್ತ್ವದಲಿ ನೆಲೆನಿಂತ
ಜ್ಞಾನಿ ಸದ್ಗುರುವು ಬ್ರಹ್ಮಜ್ಞ ॥ 58 ॥

ಇಂಥ ಸದ್ಗುರುವನ್ನೆ । ಮುಂತಿನ್ನು ನೀಡೆಂದು
ಸಂತತವು ಬೇಡಿಕೊಳಬೇಕು ಶ್ರೀಹರಿಯ-
ನಂತರಂಗದಲಿ ಬ್ರಹ್ಮಜ್ಞ ॥ 59 ॥

## (ಸಾಧಕರ ಕರ್ತವ್ಯ)

ಸತ್ತ್ವರಜತಮಗಳಾ । ಕರ್ತೃ ಮೊದಲಾಗಿರುವ
ತತ್ತ್ವದಾ ಭೇದ ಗೀತೆಯಲಿ ಪೇಳಿದುದ
ನಿತ್ಯ ನೋಡುವದು ಬ್ರಹ್ಮಜ್ಞ[1] ॥ 60 ॥

ತಮವನ್ನು ರಜದಿಂದೆ । ದಮನಿಸುತ ರಜವನ್ನು
ಸಮಯಕ್ಕೆ ತಕ್ಕ ಸತ್ತ್ವಗುಣ ಹೆಚ್ಚಿಸುತ
ದಮನಿಸಲು ಬೇಕು ಬ್ರಹ್ಮಜ್ಞ ॥ 61 ॥

ದಾನತಪಯಜ್ಞಗಳು । ಮೌನಸ್ವಾಧ್ಯಾಯಗಳು
ಮಾನವಗೆ ಶುದ್ಧಿಕಾರಕಗಳಿವ ಬಿಡದೆ
ತಾನು ಗೈಯುವುದು ಬ್ರಹ್ಮಜ್ಞ ॥ 62 ॥

ಯಾರು ವರ್ಣಾಶ್ರಮದ । ದಾರಿಯಲ್ಲಿರುವರೋ
ಮೀರದಲೆ ಅದನು ಅನುಸರಿಸಿ ನಡೆಯುವೀ
ದಾರಿಯೇ ಮೇಲು ಬ್ರಹ್ಮಜ್ಞ[2] ॥ 63 ॥

ವೇದಾಧಿಕಾರವೇ । ಆದಿಯಲಿ ಇರದವರು
ಬೋಧೆಯನು ಕೇಳಿ ಇತಿಹಾಸ ಪೌರಾಣ
ಸಾಧಿಪುದು ಜ್ಞಾನ ಬ್ರಹ್ಮಜ್ಞ ॥ 64 ॥

ಎಲ್ಲವೂ ಸಾತ್ತ್ವಿಕದ । ಸಲ್ಲಲಿತ ಗುಣದಲ್ಲಿ
ಮೆಲ್ಲನೆಯೆ ನಡೆವ ತೆರದಲ್ಲಿ ಯತ್ನಿಪುದು
ಎಲ್ಲಕ್ಕು ಮುಖ್ಯ ಬ್ರಹ್ಮಜ್ಞ ॥ 65 ॥

ಗೀತೆಯಲಿ ಬಂದಿರುವ । ಈ ತತ್ತ್ವಗಳನೆಲ್ಲ
ಪ್ರೀತಿಯಲಿ ಪಠಿಸಿ ತಿಳಿಯುತ್ತಲಾಚರಣೆ-
ಗೀತನಿಳಿಯುವದು ಬ್ರಹ್ಮಜ್ಞ ॥ 66 ॥

ಆಸ್ತಿಕ್ಯಭಾವನೆಯ । ವಾಸ್ತವತೆ ಇವಗಿದ್ದು
ನಾಸ್ತಿಕರ ಸಂಗ ದೂರಿಡುತ ವೈದಿಕಪ್ರ-
ಶಸ್ತಪಥ ಹಿಡಿಗು ಬ್ರಹ್ಮಜ್ಞ[3] ॥ 67 ॥

---

1. ಈ ವಿಷಯಕ್ಕೆ ಗೀ. 17–2 ರಿಂದ 22ರವರೆಗೂ ಗೀ. 18–7 ರಿಂದ 9ರವರೆಗೂ ಮತ್ತು 19 ರಿಂದ 38ರವರೆಗೂ ನೋಡಿರಿ.

2. ಈ ವಿಷಯಕ್ಕೆ ಸೂ. ಭಾ. 3–4–39 (ಭಾ.ಭಾ. 483)ನ್ನು ನೋಡಿರಿ.

3. ಈ ವಿಷಯಕ್ಕೆ ಕಾ. 2–1–15 (ಭಾ.ಭಾ. 119)ರಲ್ಲಿ 'ತಸ್ಮಾತ್.....' ಎಂಬ ವಾಕ್ಯವನ್ನು ನೋಡಿರಿ.

ಭೀತಿ ಪಾಪದಲಿರುತ । ಪ್ರೀತಿ ಪುಣ್ಯದಲಿರುತ
ಖ್ಯಾತಿ ಬಲುಪೂಜೆ ಲಾಭಕ್ಕೆ ಬಾಯ್ದೆರೆಯ-
ದಾತ ಸಾಧಕನು ಬ್ರಹ್ಮಜ್ಞ ॥ 68 ॥

**(ಚಿತ್ತಶುದ್ಧಿಗೆ ಸಾಧನೆ)**

ಚಿತ್ತಶುದ್ಧಿಯು ಬರಲು । ಯುಕ್ತ ವೈದಿಕಕರ್ಮ
ಮತ್ತೆ ಈ ಕರ್ಮ ಇರದಿರಲು ಗತಿಯೇನು ?
ಎತ್ತಿಹುದು ಪ್ರಶ್ನೆ ಬ್ರಹ್ಮಜ್ಞ ॥ 69 ॥

ವೈದಿಕವೆ ಬೇಕೆಂಬ । ವಾದವೇನಿಲ್ಲವಿದು
ಆದರದಿ ಭಾಷ್ಯದೊಳು ಬರೆದು ತಿಳಿಸಿಹರು
ಮೋದದಲಿ ಕೇಳಿ ಬ್ರಹ್ಮಜ್ಞ ॥ 70 ॥

ವೈದಿಕದ ಕರ್ಮಗಳು । ಸಾಧಿಸದ ಕಾಲವಿದು
ಬಾಧೆಯೇನಿಲ್ಲ ಪೌರಾಣ ಸ್ಮೃತಿಯುಕ್ತ
ಹಾದಿ ಹಿಡಿಯುವುದು ಬ್ರಹ್ಮಜ್ಞ ॥ 71 ॥

ಸತ್ಯಶೌಚವಹಿಂಸೆ । ಮತ್ತಮಾನಿತ್ವಾದಿ
ಉತ್ತಮದ ಗುಣದ ಸಾಧಿಸಲು ಶುದ್ಧಿಯದು
ಚಿತ್ತಕ್ಕೆ ಬಹುದು ಬ್ರಹ್ಮಜ್ಞ[1] ॥ 72 ॥

ಪರಿಶುದ್ಧಿಮಾರ್ಗವನು । ಪರಿಪರಿಯಲನುಸರಿಸಿ
ಪರಮಾತ್ಮತತ್ತ್ವವರಿಯಲ್ಕೆ ಯತ್ನಿಸುವು-
ದುರುತರದ ಮಾರ್ಗ ಬ್ರಹ್ಮಜ್ಞ ॥ 73 ॥

ವರ್ಣಾಶ್ರಮಗಳಿರದ । ಪೂರ್ಣಜ್ಞಾನಿಗಳೆಂದು
ನಿರ್ಣಯವ ಕೊಟ್ಟು ಸಂವರ್ತವಿದುರರನು
ಪೂರ್ಣರೆಂದಿಹರು ಬ್ರಹ್ಮಜ್ಞ ॥ 74 ॥

ಶುಕರೈಕ್ವರೊಡಗೂಡಿ । ಅಕಳಂಕ ವ್ಯಾಧಾದಿ
ಸಕಲರೂ ಪೂರ್ಣಜ್ಞಾನಿಗಳು ಎಂದಿಹರು
ಅಕುಟಿಲರು ನೋಡಿ ಬ್ರಹ್ಮಜ್ಞ ॥ 75 ॥

1. ಪದ್ಯ 69 ರಿಂದ 72ರವರೆಗಿನ ವಿಷಯಕ್ಕೆ ತೈ. 1–11 (ಭಾ. ಭಾ. 82)ರಲ್ಲಿ "ನ ಹಿ ಅಗ್ನಿಹೋತ್ರಾದೀನ್ಯೇವ..." ಎಂಬ ವಾಕ್ಯವನ್ನು ನೋಡಿರಿ.

ಶೂದ್ರರೂ ಸ್ತ್ರೀಯರೂ । ಶುದ್ಧ ಬೊಮ್ಮವನರಿಯೆ
ಉದ್ಧಾರವಕ್ಕು ಎಂದಿರುವ ವಾಕ್ಯಗಳ
ಶ್ರದ್ಧೆಯಲಿ ನೋಡಿ ಬ್ರಹ್ಮಜ್ಞ[1] ॥ 76 ॥

ಯಜ್ಞಾದಿ ಕರ್ಮಗಳ । ಸುಜ್ಞಾನವೀಗಿಲ್ಲ
ಪ್ರಜ್ಞೆಯಿಂ ಕೆಲವು ಮುಖ್ಯವಹ ಕರ್ಮಗಳ
ಸುಜ್ಞರನುಸರಿಗು ಬ್ರಹ್ಮಜ್ಞ ॥ 77 ॥

ಸ್ನಾನಸಂಧ್ಯಾಜಪವ । ತಾನು ಬಿಡದಲೆ ತಪವ
ಮಾನಿಪುದು ನಿತ್ಯನಿಯಮವ್ರತಗಳನಿನ್ನು
ತಾನಹುದು ಶುದ್ಧಿ ಬ್ರಹ್ಮಜ್ಞ ॥ 78 ॥

ಉಪವಾಸದಿಂದ ಮೇಣ್ । ಜಪದಿಂದೆ ಸಂಸಿದ್ಧಿ
ಜಪಮಾತ್ರ ಮಾಡೆ ಬ್ರಾಹ್ಮಣನು ಈ ಎಲ್ಲ
ತಪಮಾಡಿದಂತೆ ಬ್ರಹ್ಮಜ್ಞ ॥ 79 ॥

ಮಿಕ್ಕಿನದ ಬಿಟ್ಟರೂ । ಇಕ್ಕುವದು ಇವುಗಳನು
ಸಿಕ್ಕವರು ವರ್ಣದಾಶ್ರಮದ ಕಟ್ಟಿನಲಿ
ಲೆಕ್ಕವಿದ ಕೇಳಿ ಬ್ರಹ್ಮಜ್ಞ ॥ 80 ॥

ಪರಮಾತ್ಮನಾಮಗಳ । ನಿರುತ ಜಪಮಾಡಲ್ಕೆ
ಪರಿಪರಿಯ ಸ್ತೋತ್ರ ಪಠಿಸಲ್ಕೆ ಸಾಧಕಗೆ
ಪರಿಶುದ್ಧಿ ಬಕ್ಕು ಬ್ರಹ್ಮಜ್ಞ[2] ॥ 81 ॥

ಶ್ರವಣಮನನಗಳಲ್ಲಿ । ಸುವಿಚಾರಮಾರ್ಗದಲಿ
ತವಕದಿಂ ತಕ್ಕ ಗ್ರಂಥಗಳನೋದುತಲಿ
ಸವೆಸುವದು ಕಾಲ ಬ್ರಹ್ಮಜ್ಞ ॥ 82 ॥

ನಿತ್ಯಕರ್ಮವ ಬಿಡದೆ । ಭಕ್ತಿಭಾವವ ಬಿಡದೆ
ಮತ್ತಿನ್ನು ಶಾಸ್ತ್ರಶ್ರವಣಾದಿಗಳ ಮಾಳ್ಪು-
ದುತ್ತಮದ ಮಾರ್ಗ ಬ್ರಹ್ಮಜ್ಞ ॥ 83 ॥

---

1. ಪದ್ಯ 74 ರಿಂದ 76ರವರೆಗಿನ ವಿಷಯಕ್ಕೆ ಸೂ. 3-4-36 (ಭಾ. ಭಾ. 480)ರಲ್ಲಿ "ಕುತಃ । ತದ್ದೃಷ್ಟೇಃ..." ಮುಂತಾದ ವಾಕ್ಯಗಳನ್ನು ನೋಡಿರಿ. ಮತ್ತು 3-4-37 (ಭಾ. ಭಾ. 481)ನ್ನು ನೋಡಿರಿ. 76ನೇ ಪದ್ಯದ ವಿಷಯಕ್ಕೆ ಸೂ. ಭಾ. 1-3-37 (ಭಾ. ಭಾ. 313)ನ್ನು ನೋಡಿರಿ.

2. ಪದ್ಯ 77 ರಿಂದ 81ರವರಗಿನ ವಿಷಯಕ್ಕೆ ಸೂ. ಭಾ. 3-4-38 (ಭಾ. ಭಾ. 482)ನ್ನು ನೋಡಿರಿ. ಮತ್ತು ಬೃ. 1-4-10 (ಭಾ. ಭಾ. 178)ರಲ್ಲಿ 'ತಸ್ಮಾನ್ಮುಮುಕ್ಷುಃ ದೇವತಾರಾಧನಪರಃ' ಎಂಬ ವಾಕ್ಯವನ್ನು ನೋಡಿರಿ.

ಪರಮಹಂಸಾಶ್ರಮದಿ । ಇರುವವರ ಗತಿ ಬೇರೆ
ಇರುತಿಹಗೆ ಲೋಕವ್ಯವಹಾರಕ್ಷೇತ್ರದಲಿ
ಸರಿಯಾದುದಿದುವೆ ಬ್ರಹ್ಮಜ್ಞ ॥ 84 ॥

### (ನಿತ್ಯಕರ್ಮಾದಿಗಳನ್ನು ಬಿಡಲಾಗದು)

ಮಡದಿ ಮಕ್ಕಳು ಬೇಕು । ಒಡವೆ ವಸ್ತ್ರವು ಬೇಕು
ಬಿಡಬೇಕು ನಿತ್ಯಕರ್ಮಗಳನೆನ್ನುವೀ
ನುಡಿ ಯಾವ ನ್ಯಾಯ ? ಬ್ರಹ್ಮಜ್ಞ ॥ 85 ॥

ಮೊದಲೆ ಧರ್ಮದಿ ಶ್ರದ್ಧೆ । ಹದಗೆಟ್ಟ ಜನರಿಂಗೆ
ಇದು ಕರ್ಮ ಬಂಧಕಾರವು ಬಿಡಿಯೆಂಬು–
ದಿದು ಪತನಮೂಲ ಬ್ರಹ್ಮಜ್ಞ ॥ 86 ॥

ತೂಕಡಿಕೆ ಬಂದವಗೆ । ಹಾಕಿ ಹಾಸಿಗೆಯಿಡುವ
ಈ ಕಾರ್ಯ ಸಲ್ಲದಿದರಿಂದೆ ಸನ್ಮಾರ್ಗ
ಲೋಕ ಬಿಡುತಿಹುದು ಬ್ರಹ್ಮಜ್ಞ ॥ 87 ॥

ಒಣಮಾತು ವೇದಾಂತ । ದಣಿವಂತೆ ಮಾತಾಡಿ
ಕಣಕಿಳಿವನಿವನು ದುಷ್ಕರ್ಮಮಾರ್ಗದಲಿ
ಎಣೆಯಿರದೆ ನಡೆವ ಬ್ರಹ್ಮಜ್ಞ ॥ 88 ॥

ಈ ದಿನದೋಳೀಗತಿಯು । ಆದುದನು ಕಾಣುವೆವು
ಆದಿಯಲೆ ಇದಕೆ ಆಸ್ಪದವು ಸಿಗದಂತೆ
ಸಾಧಕರು ನಡೆಗು ಬ್ರಹ್ಮಜ್ಞ ॥ 89 ॥

ತಮ್ಮ ಯತ್ನದ ಜೊತೆಗೆ । ಒಮ್ಮನದಿ ಶ್ರೀಹರಿಯ
ನೆಮ್ಮಿರುತ ಬೇಡಿಕೊಳಬೇಕು ಸಾಧಕನು
ಹಮ್ಮು ಬಿಡಬೇಕು ಬ್ರಹ್ಮಜ್ಞ ॥ 90 ॥

ಗತಿ ನೀನು ಎನಗೆಂದು । ಸತತ ಮನದಲಿ ತಂದು
ಅತಿಪ್ರೀತಿಯಿಂದೆ ನಾಮವನು ಜಪಿಸೆ ನಿಜ–
ಪಥವು ಸಿಕ್ಕುವದು ಬ್ರಹ್ಮಜ್ಞ ॥ 91 ॥

### (ನೋಡಬೇಕಾದ ಗ್ರಂಥಗಳು)

ಗೀತೆಗೆ ಉಪನ್ಯಾಸ[1]। ಪ್ರೀತಿಯಲಿ ಬರೆದಿರುವ
ರೀತಿಯನು ನೋಡೆ ಈ ವಿಷಯ ಸೊಗಸಾದ
ಮಾತಿನಲ್ಲಿಹುದು ಬ್ರಹ್ಮಜ್ಞ ॥ 92 ॥

ಜೀವಂತವೇದಾಂತ[2]। ಜೀವನಕ್ಕೆ ಬಹುಮುಖ್ಯ
ಭಾವದಲಿ ಇದನು ಮಥಿಸಲ್ಕೆ ನರಗೆ ಸಂ-
ಜೀವನಿಯು ಇದುವೆ ಬ್ರಹ್ಮಜ್ಞ ॥ 93 ॥

ಸರ್ವಸಮ್ಮತ ಬೋಧೆ[3]। ಸರ್ವವಿಧಮಾರ್ಗವನು
ನಿರ್ವಹಿಸಿ ತೋರ್ಕುಸಾಧಕಗೆ ಇದೆಯಿಲ್ಲಿ
ಸರ್ವಸಾರಾಂಶ ಬ್ರಹ್ಮಜ್ಞ ॥ 94 ॥

ಮಾಸಪತ್ರಿಕೆಯಲ್ಲಿ[4]। ಲೇಸಾದ ಬರಹಗಳು
ಭಾಸಿಪವು ನಿನಿಧರೂಪದಲಿ ಸಾಧಕರ
ಆಶೆಗನುಸರಿಸಿ ಬ್ರಹ್ಮಜ್ಞ ॥ 95 ॥

ಶ್ರೀರಾಮಭಕ್ತರೀ । ಶ್ರೀರಾಮನಾಮಕ್ಕೆ
ತೂರಿಹರು ಹಲು ಲೇಖನದ ರತ್ನಗಳ-
ನಾರಿಸಿರಿ ಬಿಡದೆ ಬ್ರಹ್ಮಜ್ಞ ॥ 96 ॥

### (ಕೊನೆಯ ಮಾತು)

ನಾಮಜಪಯಜ್ಞಗಳ । ನೇಮವೇರ್ಪಡಿಸುತ್ತೆ
ಸೀಮೆಯೊಳಿಗಿರುವ ಸಾಧಕರ ಮನದಲಿ
ಪ್ರೇಮ ತುಂಬಿದರು ಬ್ರಹ್ಮಜ್ಞ[5] ॥ 97 ॥

ತಾವು ಚರಿಸುತಲಿದ್ದು । ಈವರುಪದೇಶವನು
ಭಾವಿಕರು ಕಂಡು ಕೇಳುವದು ಶ್ರೀಗಳನು-
ಭಾವಿಗಳು ಸತ್ಯ ಬ್ರಹ್ಮಜ್ಞ ॥ 98 ॥

---

1. "ಭಗವದ್ಗೀತೆಯ ಉಪನ್ಯಾಸಗಳು" ಎಂಬ ಗ್ರಂಥ.
2. 'ಜೀವಮತವೇದಾಂತ' ಎಂಬ ಗ್ರಂಥ.
3. 'ಸರ್ವಸಮ್ಮತೋಪದೇಶಗಳು' ಎಂಬ ಗ್ರಂಥ
4. 'ಅಧ್ಯಾತ್ಮಪ್ರಕಾಶ ಪತ್ರಿಕೆ' ಎಂದರ್ಥ.
5. ನಾಮಜಪಯಜ್ಞಗಳನ್ನು ಶ್ರೀಶ್ರೀಗಳವರು ಎರಡುಮೂರು ಬಾರಿ ಏರ್ಪಡಿಸಿದ್ದರು.

ಅತಿವಿರಳವಿಂತಹರು । ಕ್ಷಿತಿಯಲ್ಲಿ ಸಿಗರಿನ್ನು
ಮತಿಯಲ್ಲಿ ಮಥಿಸಿ ನೋಡಲ್ಕೆ ತಿಳಿವುದೀ
ಯತಿಮಹಿಮೆ ನಿಮಗೆ ಬ್ರಹ್ಮಜ್ಞ ॥ 99 ॥

ಸಾಧಕರು ಇವರ ನಿಜ । ಬೋಧೆ ಪಡೆಯಲಿಯೆಂದು
ಸಾಧಿಸಿಹೆನಿಲ್ಲಿ ಇದನ್ನೆಲ್ಲ ಮುದದಿಂದ
ಆದರಿಸಿ ನೋಡಿ ಬ್ರಹ್ಮಜ್ಞ ॥ 100 ॥

ಗ್ರಂಥವೆಲ್ಲವು ಮುಗಿದು । ಅಂತ್ಯದಲಿ ಹೇಳಿರುವ
ಸ್ವಂತದೀ ಸತ್ಯದನುಭವದ ನುಡಿ ಮರೆಯ-
ದಂತೆ ನೆನಪಿಡಿರಿ ಬ್ರಹ್ಮಜ್ಞ ॥ 101 ॥

ಗುರುಬಂಧುಗಳು ಎನಗೆ । ಪರಮಾರ್ಥಸಾಧಕರು
ಸರುವರಿಗು ಶುಭವ ಕೋರಲ್ಕೆ ಮಂಗಲವ
ನೊರೆವೆ ಮುಂದಿನ್ನು ಬ್ರಹ್ಮಜ್ಞ ॥ 102 ॥

# ಹದಿನೈದನೆಯ ಅಧ್ಯಾಯ

## ಉಪಸಂಹಾರ

### (ಭಾಷ್ಯದ ಸ್ತುತಿ)

ಶಂಕರಾಚಾರ್ಯರಾ । ಶಂಕರನೆ ಸಾಕ್ಷಾತ್ತು
ಶಂಕೆಯೇ ಇಲ್ಲ ಬಾದರಾಯಣರೆ ಆಕ-
ಳಂಕ ಕೇಶವನು ಬ್ರಹ್ಮಜ್ಞ ॥ 1 ॥

ಸೂತ್ರಭಾಷ್ಯಂಗಳಿಗೆ । ಕರ್ತರೀರ್ವರಿಗಿಲ್ಲಿ
ಸ್ಫೂರ್ತಿಯಲಿ ನಮಿಸಿ ಭಗವಂತರಿವರ ಸ-
ತ್ಕೀರ್ತಿ ಪೊಗಳುವೆನು ಬ್ರಹ್ಮಜ್ಞ[1] ॥ 2 ॥

ಭಾಷ್ಯವಿದು ಅಮರಕೃತಿ । ಲೇಸಿನನುಭವದ ರತಿ
ದೋಷವೇ ಇರದ ವೇದಾಂತತತ್ತ್ವವನು
ಘೋಷಿಸುವ ಮಹತಿ ಬ್ರಹ್ಮಜ್ಞ ॥ 3 ॥

ಸಾರ್ವತ್ರಿಕಾನುಭವ । ಸರ್ವಸಾಕ್ಷ್ಯನುಭವವ
ಸರ್ವರಿಗು ತೋರಿ ಸುಲಭದಲಿ ತತ್ತ್ವವನು
ಸಾರ್ವ ಕೃತಿ ಭಾಷ್ಯ ಬ್ರಹ್ಮಜ್ಞ ॥ 4 ॥

ಲೋಕಾನುಭವದಿಂದೆ । ನೂಕಿ ಸಾಕ್ಷ್ಯನುಭವಕೆ
ಜೋಕೆಯಲಿ ರೀತಿಯಾರೋಪವಪವಾದ
ಸ್ವೀಕರಿಪ ಭಾಷ್ಯ ಬ್ರಹ್ಮಜ್ಞ ॥ 5 ॥

ಶ್ರುತಿಯುಕ್ತಿಯನುಭವವ। ಮತಿಗಿಳಿಸಿ ತೋರಿಸುವ
ಅತಿದಿವ್ಯನುಡಿಯ ರತ್ನಗಳ ಸುರಿಮಳೆಯ
ಕೃತಿಯು ಈ ಭಾಷ್ಯ ಬ್ರಹ್ಮಜ್ಞ ॥ 6 ॥

ಒಳಹೊಗರು ತಾರ್ಕಿಕರು । ತಿಳಿವಿನೀ ದುರ್ಗವನು
ಬಳಿಕಿಲ್ಲಿ ನಿಲರು ನಾಸ್ತಿಕರು ಜಿಜ್ಞಾಸು-
ಗಳ ಸೊತ್ತು ಭಾಷ್ಯ ಬ್ರಹ್ಮಜ್ಞ[2] ॥ 7 ॥

---

1. ಪದ್ಯ 1–2ರಲ್ಲಿ 'ಶಂಕರಂ ಶಂಕರಾಚಾರ್ಯಂ ಕೇಶವಂ ಬಾದರಾಯಣಮ್ । ಸೂತ್ರಭಾಷ್ಯಕೃತೌ ವನ್ದೇ ಭಗವನ್ತೌ ಪುನಃ ಪುನಃ' ಎಂಬ ಶ್ಲೋಕದ ಅಭಿಪ್ರಾಯವು ಅಡಗಿದೆ.

2. ಈ ವಿಷಯಕ್ಕೆ ಪ್ರ. ಭಾ. 6–3 (ಭಾ.ಭಾ. 103)ರಲ್ಲಿ 'ಅತೋ ನ ತಾರ್ಕಿಕ ಚಾಟಭಟಪ್ರವೇಶಃ....' ಎಂಬ ವಾಕ್ಯವನ್ನು ನೋಡಿರಿ.

ಸಲೆ ಶ್ರೌತತರ್ಕಗಳ । ನೆಲೆವೀಡು ಈ ಭಾಗ್ಯ
ಕಳೆಕಟ್ಟೆ ಭಕ್ತಿವೈರಾಗ್ಯಸದ್ಧರ್ಮ-
ಗಳಿಗೆ ಜೀವಾಳ ಬ್ರಹ್ಮಜ್ಞ ॥ 8 ॥

ಭಾಷ್ಯರೂಪದ ದಿವ್ಯ । ದೇಶಿಕರು ಶಂಕರರ
ದಾಸ್ಯತ್ವ ವಹಿಸಿ ಗುರುಪಾದಕಮಲಗಳ
ಸಾಸಿರದಿ ನಮಿಪೆ ಬ್ರಹ್ಮಜ್ಞ ॥ 9 ॥

ಜಲಧಿಯಂತಿಹ ಭಾಷ್ಯ । ಬಲುಸೊಗಸು ಗಂಭೀರ
ತಿಳಿಯಲ್ಕೆ ಇದನು ಪೂರ್ಣದಲಿ ಎನ್ನ ಮತಿ-
ಗಳವಲ್ಲವೆನುವೆ ಬ್ರಹ್ಮಜ್ಞ[1] ॥ 10 ॥

ಭೂಮಿಯೊಳು ಶಂಕರರ । ನಾಮಕ್ಕೆ ಪ್ರಖ್ಯಾತಿ
ಈ ಮಹಾಭಾಷ್ಯ ಬರಹದಿಂ ಬಂದಿರುವ-
ದೀಮಾತು ಸತ್ಯ ಬ್ರಹ್ಮಜ್ಞ ॥ 11 ॥

(ಭಾಷ್ಯಕಾಲದ ಸ್ಥಿತಿ)

ವೇದಾಂತಗಳ ಹಿಡಿದು । ಭೇದವಾದವ ಮಾಳ್ಪ
ಖೇದಕರ ದ್ವೈತಮತಗಳೇ ಇದ್ದಿಲ್ಲ
ಆದಿಯಲಿ ಕೇಳಿ ಬ್ರಹ್ಮಜ್ಞ ॥ 12 ॥

ವೈಶೇಷಿಕರು ಸಾಂಖ್ಯ । ಲೇಸು ಪಾತಂಜಲರು
ಈಸು ಜನ ದ್ವೈತವಾದಿಗಳವೈದಿಕರು
ವಾಸಿಸಿದರಾಗ ಬ್ರಹ್ಮಜ್ಞ ॥ 13 ॥

ವೈದಿಕರು ಎಲ್ಲರೂ । ಆದರದಲದ್ವೈತ
ವಾದವನೆ ಒಪ್ಪಿ ಬರೆದಿದ್ದರೆಂಬುದನು
ಮೋದದಿಂದರಿಗು ಬ್ರಹ್ಮಜ್ಞ ॥ 14 ॥

ಅದ್ವೈತಬೋಧಿಸುವ । ಪದ್ಧತಿಗಳಲ್ಲಾಗ
ಇದ್ದವವು ಹಲವು ಪ್ರಕ್ರಿಯೆಗಳವುಗಳಲಿ
ಗುದ್ದಾಟವಿತ್ತು ಬ್ರಹ್ಮಜ್ಞ ॥ 15 ॥

ಕರ್ಮದಿಂ ಮೋಕ್ಷ ಮೇಣ್ । ಕರ್ಮಜ್ಞಾನಗಳಿಂದೆ
ಸಮ್ಮತಿಸಿ ಮೋಕ್ಷ ಹೇಳುವರುಪಾಸನೆಯ
ನೆಮ್ಮಿ ಕೆಲರಾಗ ಬ್ರಹ್ಮಜ್ಞ ॥ 16 ॥

1. 'ಭಾಷ್ಯಂ ಪ್ರಸನ್ನಗಂಭೀರಮ್' ಎಂಬುದರ ಸೂಚನೆಯಿದು.

ಮುಳುಗಿಪುದು ಜಗವನ್ನು । ಬಳಿಕ ಸಾಕ್ಷಾತ್ಕಾರ
ಅಳಿದಿರಲು ಸರ್ವವಾಸನೆಯು ಮೋಕ್ಷವಿದು
ತಿಳಿದಿದ್ದರಾಗ ಬ್ರಹ್ಮಜ್ಞ ॥ 17 ॥

ಆತ್ಮನೇ ನಾನೆಂದು । ಮತ್ತೆ ಧ್ಯಾನವಿದನ್ನು
ನಿತ್ಯದಲಿ ನಡೆಸೆ ಲೋಕಾಂತರದೊಳಕ್ಕು
ಮುಕ್ತಿಯೆನ್ನುವರು ಬ್ರಹ್ಮಜ್ಞ ॥ 18 ॥

ಚಿತ್ತರೋಧನಮಾಡಿ । ಉತ್ತಮಸಮಾಧಿಯನು
ಹತ್ತಿದರೆ ಮೋಕ್ಷವೆಂಬುದನು ಕೆಲರಾಗ
ಒತ್ತಿಹೇಳಿದರು ಬ್ರಹ್ಮಜ್ಞ ॥ 19 ॥

ಹೀಗೆ ನಾನಾರೀತಿ । ಸಾಗಿಸುತ ಹೇಳುವರ
ಲಾಗವೇಗದಲಿ ಖಂಡಿಸಲು ಭಾಷ್ಯಗಳ
ನಾಗ ರಚಿಸಿದರು ಬ್ರಹ್ಮಜ್ಞ ॥ 20 ॥

ವೇದ ವಿಧಿಪರವೆಂದು । ವಾದಿಗಳು ತಿಳಿದಿರಲು
ಆದುದೀ ವಿಧಿಗೆ ಫಲ ಸತ್ತಮೇಲೆಂಬ
ವಾದ ಬಿಡಿಸಿದರು ಬ್ರಹ್ಮಜ್ಞ[1] ॥ 21 ॥

ಬರಿವಿಧಿಯೆ ವೇದಕ್ಕೆ । ಗುರಿಯಲ್ಲ ವಸ್ತುಪರ
ಸರುವರಿಗು ಬರುವ ಅನುಭವವ ತಿಳಿಸುವದೆ
ಪರಮಗುರಿಯಿಲ್ಲಿ ಬ್ರಹ್ಮಜ್ಞ ॥ 22 ॥

ಅರುಹಿದರು ಶಂಕರರು । ಹರುಷದಲಿ ಈ ನುಡಿಯ
ಬರೆದರೀ ತತ್ತ್ವಕನುಸರಿಸಿ ಭಾಷ್ಯವನು
ಸರಳಶೈಲಿಯಲಿ ಬ್ರಹ್ಮಜ್ಞ ॥ 23 ॥

ಜ್ಞಾನಮಾತ್ರವೆ ಸಾಕು । ತಾನು ಮೋಕ್ಷವ ಪಡೆಯೆ
ಜ್ಞಾನಕ್ಕೆ ಮುನ್ನ ಸಾಧನೆಯು ಜ್ಞಾನ ಬರೆ
ತಾನೀಗ ಮುಕ್ತ ಬ್ರಹ್ಮಜ್ಞ ॥ 24 ॥

ಮರಣ ಬರಬೇಕಿಲ್ಲ । ವರಮುಕ್ತಿ ಪಡೆಯಲ್ಕೆ
ಇರೆ ಜೀವದಿಂದೆ ಜ್ಞಾನದಿಂ ಮುಕ್ತಿ ತಾ
ಬರುವದಿದು ಮುಖ್ಯ ಬ್ರಹ್ಮಜ್ಞ[2] ॥ 25 ॥

---

1. ಪದ್ಯ 12 ರಿಂದ 21ರ ಪೂರ ವಿಷಯಕ್ಕೆ 'ಶುದ್ಧಶಾಂಕರಪ್ರಕ್ರಿಯಾಭಾಸ್ಕರ' ಭಾಗ 1–2ನ್ನು ನೋಡಿರಿ.

2. ಈ ವಿಷಯಕ್ಕೆ ಸೂ.ಭಾ. 1–1–4 (ಭಾ.ಭಾ. 58)ನ್ನು ನೋಡಿರಿ.

ಹೀಗೆ ಅನುಭವತೋರಿ । ಸಾಗಿರಲು ಶಾಸ್ತ್ರವಿದು
ಆಗಿಹುದು ಮಾನವಿದರಿಂದೆ ಸಾಧನೆಯ
ಭಾಗ ಸಾರ್ಥಕವು ಬ್ರಹ್ಮಜ್ಞ ॥ 26 ॥

ಹಿಂದಿನಿಂದಲೆ ಬಂದ । ಅಂದದೀ ಪಂಥವನು
ಅಂದಿವರು ಭಾಷ್ಯರಚಿಸುತ್ತ ಸುಸ್ಪಷ್ಟ-
ದಿಂದ ತಿಳುಹಿದರು ಬ್ರಹ್ಮಜ್ಞ ॥ 27 ॥

ಬೌದ್ಧಾದಿಮತಗಳಾ । ರಾದ್ಧಾಂತ ಖಂಡನೆಯು
ಇದ್ದಿಹುದು ಭಾಷ್ಯದೊಳಗಾದೊಡದು ಮುಖ್ಯ
ಇದ್ದಿಲ್ಲ ಗುರಿಯು ಬ್ರಹ್ಮಜ್ಞ ॥ 28 ॥

ಸರಿಯಾದ ಅದ್ವೈತ । ಅರುಹುವದೆ ಭಾಷ್ಯದಾ
ಪರಮಗುರಿಯೆನುವುದಧ್ಯಯನ ಮಾಳ್ಪರಿಗೆ
ಭರದಿ ತಾ ತೋರ್ಕು ಬ್ರಹ್ಮಜ್ಞ ॥ 29 ॥

(ಇಂದಿನ ಸ್ಥಿತಿ)

ವಾರ್ತಿಕದನಂತರದಿ । ಮತ್ತೆ ಅದ್ವೈತದಲಿ
ಎತ್ತಿದವು ತಲೆಯನೀ ಹಿಂದೆ ಖಂಡಿಸಿದ
ತತ್ತ್ವಗಳು ಪಥದಿ ಬ್ರಹ್ಮಜ್ಞ ॥ 30 ॥

ಹಲವಾರು ವ್ಯಾಖ್ಯಾನ । ಬಲವಾಗಿ ಬರೆಯಲ್ಕೆ
ಮಲಿನತೆಯು ಬಂತು ಭಾಷ್ಯದಲಿ ಶಂಕರರು
ತಿಳಿಸಿರುವ ಪಥಕ್ಕೆ ಬ್ರಹ್ಮಜ್ಞ ॥ 31 ॥

ಕೆಲ ಸಣ್ಣಗ್ರಂಥಗಳ । ಕೆಲರು ರಚಿಸುತಲವಕೆ
ಆಳುಕದಲೆ ಹೆಸರು ಶಂಕರರದಿಡುತಲೇ
ಬಳಸಿದರು ಜಗದಿ ಬ್ರಹ್ಮಜ್ಞ ॥ 32 ॥

ಭಾಷ್ಯಪಥ ದೂರಾಯ್ತು । ದೋಷಗಳು ಹೆಚ್ಚಾಯ್ತು
ಲೇಸಾಗಿ ವಾದ ಬೆಳೆದಾಯ್ತು ಅದ್ವೈತ
ಘಾಸಿಯಾಯ್ತೀಗ ಬ್ರಹ್ಮಜ್ಞ ॥ 33 ॥

ಪಂಡಿತರು ಭಾಷ್ಯವನು । ಖಂಡಿತದಿ ಕೈಬಿಟ್ಟು
ಮೊಂಡತನದಿಂದೆ ಇತರ ಕೃತಿ ಬೆನ್ನಟ್ಟಿ
ದುಂಡು ಸುತ್ತುವರು ಬ್ರಹ್ಮಜ್ಞ ॥ 34 ॥

ಭಾಷ್ಯದಾ ಬೋಧೆಯನು । ತೋಷದಲಿ ತಿಳಿಯದಲೆ
ಘಾಸಿಯಹ ತರ್ಕಕರ್ಕಶದ ಗ್ರಂಥಗಳ
ರಾಶಿಯೋದುವರು ಬ್ರಹ್ಮಜ್ಞ[1] ॥ 35 ॥

ಶುದ್ಧಪ್ರಕ್ರಿಯೆಯ ನಿಜ । ಪದ್ಧತಿಗೆ ದೂರಾದ
ಅದ್ವೈತಗ್ರಂಥದಾಧಾರದಲಿ ಭಾಷ್ಯ-
ದಧ್ಯಯನ ಬಂತು ಬ್ರಹ್ಮಜ್ಞ ॥ 36 ॥

ಆಂಗ್ಲವಿದ್ಯಾಭ್ಯಾಸ । ಸಾಂಗದಲಿ ಮಾಳ್ಪವರು
ಸಿಂಗರದ ತತ್ತ್ವಶಾಸ್ತ್ರಗಳನೋದುತ್ತ
ದಂಗು ಬಡಿದಿಹರು ಬ್ರಹ್ಮಜ್ಞ ॥ 37 ॥

ತತ್ತ್ವದಲಿ ನಿರ್ಣಯವು । ಹತ್ತದಲೆ ವಿಧವಿಧದಿ
ಸುತ್ತಿರುವ ವಾದಯುಕ್ತಿಗಳೆ ಶಾಸ್ತ್ರವೆ-
ನ್ನುತ್ತೆ ತಿಳಿದಿಹರು ಬ್ರಹ್ಮಜ್ಞ ॥ 38 ॥

ಲೌಕಿಕದಿ ಶಾಂತಿಯನು । ಬೇಕೆಂದು ಬಯಸುವರು
ಸಾಕಾಗಿಹೋದರೀ ತರ್ಕದಲಿ ತತ್ತ್ವ
ತಾಕದಾಯ್ತಿನ್ನು ಬ್ರಹ್ಮಜ್ಞ ॥ 39 ॥

ಇದನರಿತು ಶಂಕರರು । ಮುದದಲವತರಿಸುತ್ತೆ
ಒದಗಿದರು ಜಗದಿ ಶ್ರೀಗಳೀರೂಪದಲಿ
ಇದನೀಗ ಕೇಳಿ ಬ್ರಹ್ಮಜ್ಞ ॥ 40 ॥

ಉದ್ಧರಿಸಿ ಭಾಷ್ಯಮತ । ತಿದ್ದಿದರು ಜನಗಳನು
ಬುದ್ಧಿಯನು ಹೇಳಿ ಬಿಡಿಸಿದರು ಭಾಷ್ಯಕ್ಕೆ ವಿ-
ರುದ್ಧ ಗ್ರಹಿಕೆಗಳ ಬ್ರಹ್ಮಜ್ಞ ॥ 41 ॥

ಅಪರಶಂಕರರಾಗಿ । ಸುಪಥ ತೋರಿದ ಯೋಗಿ
ಸುಪರಿಚಿತ ಸಚ್ಚಿದಾನಂದ ಯತಿವರ್ಯ-
ರುಪಕೃತಿಯ ನೆನೆವೆ ಬ್ರಹ್ಮಜ್ಞ ॥ 42 ॥

ಪಂಡಿತರು ಜಿಜ್ಞಾಸು । ಮಂಡಿತರು ಆಂಗ್ಲದಲಿ
ಖಂಡಿತದಿ ಈಗಲೋದುವದು ಶ್ರೀಗಳು-
ದ್ದಂಡಕೃತಿಗಳನು ಬ್ರಹ್ಮಜ್ಞ ॥ 43 ॥

---

1. ತರ್ಕಕರ್ಕಶವಾದ ಖಂಡನಖಂಡಖಾದ್ಯ, ಅದ್ವೈತಸಿದ್ಧಿ, ಇಷ್ಟಸಿದ್ಧಿ, ಸಿದ್ಧಾಂತ-ಲೇಶಸಂಗ್ರಹ, ಪರಿಮಳ, ನ್ಯಾಯಮಕರಂದ – ಮುಂತಾದವುಗಳು.

ಜಗರೂಕತೆಯಿಂದ । ಸಾಗಿಸಲು ಪರಿಶೋಧ
ಆಗಲೇ ನಿಜವು ಗೊತ್ತಹುದು ಈ ಮಾತು
ಹೀಗೆಯೇ ಎಂದು ಬ್ರಹ್ಮಜ್ಞ ॥ 44 ॥

ಪಂಥಕ್ಕೆ, ಶ್ರುತಿಯುಕ್ತಿ । ಸಂತತಿಗೆ, ಅನುಭವಕೆ
ಅಂತರದಿ ತೂಗಿ ನಿರ್ಣಯಿಪ ಕೆಲಸವಿದು
ಸಂತತವು ನಡೆಗೆ ಬ್ರಹ್ಮಜ್ಞ ॥ 45 ॥

(ನಿವೇದನೆ)

ಭಾಷ್ಯಬಾಹಿರವಾದ । ದೋಷಗಳ ತಿಳಿಯದಲೆ
ಕ್ಲೇಶದೊಳು ಸಿಲುಕಿ ಬಳಲಿದ್ದೆ ಶ್ರೀಗಳೀ
ದೋಷ ಕಿತ್ತಿದರು ಬ್ರಹ್ಮಜ್ಞ ॥ 46 ॥

ಅಳ್ಳಿಟ್ಟು ನೀರ್ಕದಡಿ । ಬೆಳ್ಳಗಾಗಿರೆ ಕೂಡಿ
ಒಳ್ಳೆಯಾ ಕ್ಷೀರವಿದು ಎಂಬ ಬಾಲನಂ-
ತಿಲ್ಲಿ ನಾನಿದ್ದೆ ಬ್ರಹ್ಮಜ್ಞ[1] ॥ 47 ॥

ಭಾಷ್ಯಕಾರರ ರೀತಿ । ಲೇಶವು ತಿಳಿಯದಲೆ
ದೋಷವನೆ ಗುಣವು ಎಂದೆನುವ ವೇದಾಂತ
ಭಾಷೆ ಕಲಿತಿದ್ದೆ ಬ್ರಹ್ಮಜ್ಞ ॥ 48 ॥

ಸರಿಯಾದ ವೇದಾಂತ । ದರುಶನವು ಎನಗಾಗೆ
ಮರೆಯಾಯ್ತು ಜಂಭ ಗುರುವರ್ಯ ಶ್ರೀಗಳಾ
ಚರಣದಲಿ ಬಿದ್ದೆ ಬ್ರಹ್ಮಜ್ಞ ॥ 49 ॥

ಎಚ್ಚತ್ತೆ ಮೆಲ್ಲನೆಯೆ । ಅಚ್ಚರಿಯು ಎನಗಾಯ್ತು
ಸಚ್ಚಿದಾನಂದ ಶಂಕರರ ಬೋಧೆಯಿಂ
ನಿಶ್ಚಲತೆ ಬಂತು ಬ್ರಹ್ಮಜ್ಞ ॥ 50 ॥

ಜೀವನದಿ ಪಲ್ಲಟದ । ಭಾವವಿದು ಬರಲಾಗಿ
ಭಾವಕ್ಕೆ ಬಂದ ರೀತಿಯಲೆ ಹಾಡಿಕೊಳ-
ಲೀ ವಚನ ಬಂತು ಬ್ರಹ್ಮಜ್ಞ ॥ 51 ॥

ಇವರಿಂದೆ ಭಾಷ್ಯದಲಿ । ಸವಿಗಂಡುದನೆ ಇಲ್ಲಿ
ತವಕದಲಿ ಮತ್ತೆ ಬರೆಯಲ್ಕೆ ಯತ್ನಿಸಿ-
ದ್ದಿವರದೇ ಕೃಪೆಯು ಬ್ರಹ್ಮಜ್ಞ ॥ 52 ॥

1. ಇದು ಅಶ್ವತ್ಥಾಮನ ಕಥೆ.

ಭಾಷ್ಯಗಳ ಸಂಪೂರ್ಣ । ಆಶಯವನರಿಯದಿರೆ
ಲೇಶವನೆ ಈಗ ತಿಳಿಸಿರುವೆನಿದರಲ್ಲಿ
ದೋಷ ಮನ್ನಿಪುದು ಬ್ರಹ್ಮಜ್ಞ ॥ 53 ॥

ಸರಳ ಕನ್ನಡದಲ್ಲಿ । ಪರಿಪರಿಯ ಗ್ರಂಥಗಳ
ಹೊರತಂದ ಶ್ರೀಗಳೆದುರಲ್ಲಿ ಈ ಮಶಕ–
ಗಿರುವ ಬೆಲೆಯೇನು ? ಬ್ರಹ್ಮಜ್ಞ ॥ 54 ॥

ಕೆರೆಯ ನೀರನು ಕೆರೆಗೆ । ಎರೆದು ವರ ಪಡೆದಂತೆ
ಬರೆದೆನೆಂದೆನುವ ಮಾತಿದುವೆ ಶ್ರೀಗಳಾ
ಚರಣದಯೆ ಮಾತ್ರ ಬ್ರಹ್ಮಜ್ಞ ॥ 55 ॥

ಭಾನು ಉದಯಿಸಿದಾಗ । ಏನಹುದು ಮಿಂಚುಹುಳ
ಆನೆತ್ತ ಸಚ್ಚಿದಾನಂದ ಯತಿವರ್ಯ
ಭಾನು ಮೇಣೆತ್ತ ? ಬ್ರಹ್ಮಜ್ಞ ॥ 56 ॥

ತಂದೆತಾಯ್ಗಳ ನುಡಿಯ । ಒಂದೆ ಮನದಲಿ ಕೇಳಿ
ಕಂದ ತಾ ತೊದಲುಮಾತಿನಲಿ ನುಡಿದಂತೆ
ಬಂದಿತೀ ಕೃತಿಯು ಬ್ರಹ್ಮಜ್ಞ ॥ 57 ॥

ಇಂದು ಈ ಕೃತಿಯಲ್ಲಿ । ಬಂದ ದೋಷಗಳೆಲ್ಲ
ಹೊಂದಿಹವು ಎನಗೆ ಗುಣಗಳಾ ಗುರುವರ್ಯ
ರಿಂದ ಬಂದಿಹವು ಬ್ರಹ್ಮಜ್ಞ ॥ 58 ॥

ದೋಷಗಳ ಬದಿಗಿರಿಸಿ । ಲೇಸನ್ನು ಸ್ವೀಕರಿಸೆ
ದೇಶಿಕರ ನುಡಿಯ ಸಾರವದು ಸಿಕ್ಕುವದು
ತೋಷ ಮನಕಹುದು ಬ್ರಹ್ಮಜ್ಞ ॥ 59 ॥

ಎನ್ನಲ್ಲಿ ದೋಷಗಳು । ಇನ್ನಿರಲುಬಹುದೆಂದು
ಎನ್ನ ಈ ಮನದಿ ಗುರುಕೊಟ್ಟ ಪ್ರೇರಣೆಯ–
ನಿನ್ನು ಬಿಡಬೇಕೆ ? ಬ್ರಹ್ಮಜ್ಞ ॥ 60 ॥

ನಾನು ಜಡ ನನ್ನಿಂದ । ಏನಹುದು ಕಾರ್ಯವದು
ಜ್ಞಾನಿ ಶ್ರೀಗುರುವು ಪ್ರೇರಿಸಲು ಬರೆದಿರುವು–
ದೇನಿದಚ್ಚರಿಯೆ ? ಬ್ರಹ್ಮಜ್ಞ ॥ 61 ॥

ಕಬ್ಬಿಣವು ಜಡವು ನಿಜ । ಅಬ್ಬರದೊಳಗ್ನಿಯದು
ತಬ್ಬಿರಲು ಅಗ್ನಿಯಾದಂತೆ ಗುರುಕೃಪೆಯು
ತಬ್ಬಿ ಬಂತಿಲ್ಲಿ ಬ್ರಹ್ಮಜ್ಞ ॥ 62 ॥

ಇದರಿಂದ ಈ ಬೋಧೆ । ಇದು ನನ್ನದಲ್ಲವೆನೆ
ಮುದದಿಂದ ಸಾರ ಸ್ವೀಕರಿಸಲೆತ್ನಿಸಲು
ಒದಗುವದು ಫಲವು ಬ್ರಹ್ಮಜ್ಞ ॥ 63 ॥

ಕರುವಿನೆಂಜಲು ಕ್ಷೀರ । ನೆರೆ ವಾಂತಿ ಸವಿಜೇನು
ಹರಿಣದಾ[1] ಹೆಣದ ಮೃಗಗಳ ಲೋಕದಲಿ
ತೊರೆದಿಹರೆ ಹೇಳಿ ಬ್ರಹ್ಮಜ್ಞ ॥ 64 ॥

ಒಳಿತನ್ನು ಸ್ವೀಕರಿಸಿ । ಕೊಳಕನ್ನು ಬಿಡುವದೇ
ಒಳಿಕಿಲ್ಲಿ ರೂಢಿ ಈ ಕೃತಿಯ ಬಗೆಯಲ್ಲು
ಒಳಿತನ್ನೆ ಗ್ರಹಿಸಿ ಬ್ರಹ್ಮಜ್ಞ ॥ 65 ॥

ಹಿಟ್ಟು ಸಾಣಿಗೆಯಲ್ಲಿ । ಇಟ್ಟು ಸಾಣಿಸುವಾಗ
ಹೊಟ್ಟುಳಿದು ಸಾರ ಕೆಳಗಹುದು ದುರ್ಜನರ
ಬಟ್ಟೆ ಹೀಗಿಹುದು ಬ್ರಹ್ಮಜ್ಞ ॥ 66 ॥

ಹಸನಮಾಡಲು ಕಾಳು । ಎಸೆದಿರಲು ಮರದಲ್ಲಿ
ಹಸನಾದ ಕಾಳನುಳಿಸುತ್ತ ಕಸಕಳೆವ
ದೆಸೆಯು ಸುಜನರದು ಬ್ರಹ್ಮಜ್ಞ ॥ 67 ॥

ಈ ವಚನದಲಿ ಸಾರ । ಭಾವವನು ಗ್ರಹಿಸುವರು
ತಾವೀಗ ತಮ್ಮೊಳಾನಂದ ಹೊಂದುವರು
ಈ ವಚನ ಸತ್ಯ ಬ್ರಹ್ಮಜ್ಞ ॥ 68 ॥

ದೋಷಗಳನೇ ಹೆಕ್ಕಿ । ಘೋಷಿಪರು ತಮ್ಮಲ್ಲಿ
ಘಾಸಿಪಡುತಿನ್ನು ಸಾರವನು ಗ್ರಹಿಸದಲೆ
ಮೋಸಹೋಗುವರು ಬ್ರಹ್ಮಜ್ಞ ॥ 69 ॥

ಹಿಂದೆ ಎಷ್ಟೋ ಜನರು । ಸಂದಿಹ ಮಹಾತುಮರು
ಒಂದಲ್ಲ ಮತ್ತೆಯಗಣಿತದ ಗ್ರಂಥಗಳ
ನಂದೆ ಬರೆದಹರು ಬ್ರಹ್ಮಜ್ಞ ॥ 70 ॥

ಅದರ ಮಾನದಿ ನೋಡೆ । ಇದು ಲೆಕ್ಕದಲ್ಲಿಲ್ಲ
ಇದ ಬರೆದೆನೆಂಬ ಒಣಜಂಭವಿದು ಸಲ್ಲ
ಇದು ಮಿಥ್ಯವಲ್ಲ ಬ್ರಹ್ಮಜ್ಞ ॥ 71 ॥

1. ಹರಿಣ – ಎಂದರೆ ಜಿಂಕೆ (ಚಿಗರಿ) ಎಂದರ್ಥ.

ಮನದ ತೃಪ್ತಿಗೆ ಇಲ್ಲಿ । ಗುಣುಗುಣಿಸಿ ಹಾಡಿರುವೆ
ಅಣಕವಿದು ಮತ್ತೆ ನಾ ಗ್ರಂಥಕರ್ತನೆಂ-
ದೆಣಿಸೆ ನಗೆಮಾತು ಬ್ರಹ್ಮಜ್ಞ ॥ 72 ॥

ವರಭಾಷ್ಯದಾಶಯವ । ಅರುಹಲ್ಕೆ ನಾ ಬೇಕೆ
ತರಣಿ ತಾನುದಿಸೆ ಆರುಹಲ್ಕೆ ಬೇರಿನ್ನು
ಪರಿಕರವು ಬೇಕೆ ? ಬ್ರಹ್ಮಜ್ಞ ॥ 73 ॥

ನಾನು ತಿಳಿಸದೆ ಇರಲು । ಹಾನಿಯೇ ತತ್ತ್ವಕ್ಕೆ
ನಾನಿದನು ಬರೆಯೆ ದೊಡ್ಡಸ್ತಿಕೆಯು ಬಂತೆ ?
ಮೇಣಿದುವೆ ಭ್ರಾಂತಿ ಬ್ರಹ್ಮಜ್ಞ ॥ 74 ॥

ಗುರುಗಳಾ ಕೃಪೆಯಿಂದ । ವರಭಾಷ್ಯಪ್ರಕ್ರಿಯೆಯ
ತಿರುಳೆನ್ನ ಮತಿಗೆ ಗೋಚರಿಸೆ ಬಂದಿತೀ
ಅರಿವು ದೃಢವಾಗಿ ಬ್ರಹ್ಮಜ್ಞ ॥ 75 ॥

ಹೀಗೆ ಬಂದಿಹ ತಿಳಿವು । ಹೇಗಿಹುದು ಎಂಬುದನು
ತೂಗಿ ಒರೆಹಚ್ಚಿ ನೋಡಲ್ಕೆ ಕೆಲಕೃತಿಯ-
ನಾಗ ಪ್ರಕಟಿಸಿದೆ ಬ್ರಹ್ಮಜ್ಞ ॥ 76 ॥

ಬ್ರಹ್ಮಜ್ಞರೇ ಇಲ್ಲಿ । ಸಮ್ಮತಿಪ ಒರೆಗಲ್ಲು
ಸಮ್ಮತಿಸಲವರು ಸಾಕೆನಗೆ ಮಿಕ್ಕಿನದ-
ನೊಮ್ಮೆಯೂ ಬಯಸೆ ಬ್ರಹ್ಮಜ್ಞ ॥ 77 ॥

ಕೀರ್ತಿ ಪೂಜಾ ಲಾಭ । ವಾರ್ತೆಗಳು ಬೇಕಿಲ್ಲ
ಧೂರ್ತತನವಿಲ್ಲವಿದರಲ್ಲಿ ಶ್ರೀಗಳನು-
ವರ್ತಿಯಾಗಿಹೆನು ಬ್ರಹ್ಮಜ್ಞ ॥ 78 ॥

ಶ್ರೀಸುರೇಶ್ವರರ ಈ । ಲೇಸಾದ ಮಾತನ್ನೆ
ಈ ಸಮಯದಲ್ಲಿ ಜ್ಞಾಪಿಸುವೆ ಶ್ರೀಗಳಿಗೆ
ದಾಸನೆನ್ನುತ್ತೆ ಬ್ರಹ್ಮಜ್ಞ[1] ॥ 79 ॥

ಹಿಂದೆ ಭಗವದ್ಗೀತೆ । ಬಂದು ಲಾವಣಿಯಲ್ಲಿ
ಅಂದೆಯೇ ಅವರ ಚರಣಕ್ಕೆ ಶರಣಾಗಿ
ಕಂದೆರೆದು ಬರೆದೆ ಬ್ರಹ್ಮಜ್ಞ ॥ 80 ॥

---

1. ಪದ್ಯ 77 ರಿಂದ 79ರ ಪೂರ ವಿಷಯಕ್ಕೆ ನೈ. ಸಿ. 1-6ನ್ನು ನೋಡಿರಿ.

ಅದರಲಿ ಸಮೀಕ್ಷಣೆಯ । ಮುದದಿ ಬರೆದಾಯ್ತಲ್ಲಿ
ಒದಗಿ ನಾ ಭಾಷ್ಯಪಂಥವನ್ನನುಸರಿಪ
ಮುದವು ಮೊದಲಾಯ್ತು ಬ್ರಹ್ಮಜ್ಞ[1] ॥ 81 ॥

ದತ್ತನಾಮಾಮೃತವ । ಮತ್ತೆ ನೂರೆಂಟಾಗಿ
ಬಿತ್ತರಿಸಲಾಯ್ತು ಪದಗಳನು ವೈರಾಗ್ಯ
ಭಕ್ತಿಜ್ಞಾನದಲಿ ಬ್ರಹ್ಮಜ್ಞ ॥ 82 ॥

ಇದರಲ್ಲುಪಾಸನೆಯ । ಹದನವನು ತಿಳಿಸಲ್ಕೆ
ಒದಗಿಸಿದ ಲೇಖದಲ್ಲಿಯೂ ಭಾಷ್ಯಗಳ-
ನುದಹರಿಸಿ ಬರೆದೆ ಬ್ರಹ್ಮಜ್ಞ[2] ॥ 83 ॥

ಅಧ್ಯಾತ್ಮಯೋಗವಿದು । ಇದ್ದ ಬಲು ಚಿಕ್ಕಕೃತಿ
ಶುದ್ಧವಹ ಭಾಷ್ಯದಾಶಯದಿ ಸಂಗ್ರಹಿಸಿ
ಸಿದ್ಧಪಡಿಸಿದ್ದೆ ಬ್ರಹ್ಮಜ್ಞ[3] ॥ 84 ॥

ಪಂಡಿತನು ನಾನಲ್ಲ । ಕಂಡರಿಯೆ ಶಾಸ್ತ್ರಗಳ
ಉಂಡಿದ್ದೆ ತೇಗಿದಂತಿಲ್ಲಿ ಬಂದಿಹುದು
ಖಂಡಿಸದೆ ನೋಡಿ ಬ್ರಹ್ಮಜ್ಞ ॥ 85 ॥

ಅವನೋ ಬರೆದನೆನೆ । ಭಾವತಾತ್ಸರ ಬೇಡ
ಅವನೇ ಇರಲಿ ಸತ್ಯಕ್ಕು ವ್ಯಕ್ತಿತ್ವ-
ಕಾವ ಸಂಬಂಧ ? ಬ್ರಹ್ಮಜ್ಞ ॥ 86 ॥

ಎತ್ತಿ ಶ್ರೀಗಳ ರೂಪ । ದತ್ತಾತ್ರೆಯನೆ ನಿಂದು
ಚಿತ್ತಕ್ಕೆ ತಂದು ಭಾಷ್ಯಗಳ ಸಾರುವನು
ಮತ್ತೆ ಬರೆಸಿದನು ಬ್ರಹ್ಮಜ್ಞ ॥ 87 ॥

ಶ್ರೀಪಾದವಲ್ಲಭರ । ರೂಪದೀ ಗುರುವರರು
ಈ ಪರಿಯ ಭಾಷ್ಯ ಬಿತ್ತರಿಸಿ ಜ್ಞಾನಮಯ
ದೀಪ ಹಚ್ಚಿದರು ಬ್ರಹ್ಮಜ್ಞ ॥ 88 ॥

ನರಹರಿ ಸರಸ್ವತಿಯ । ವರರೂಪವಿವರೆಂದು
ನೆರೆನಂಬಿ ಚರಿಸೆ ಆಂಧ್ರಪ್ರವಾಸದಲಿ
ದೊರೆತ ಫಲವಿದುವು ಬ್ರಹ್ಮಜ್ಞ ॥ 89 ॥

---

1. ಭಗವದ್ಗೀತೆಯ ಲಾವಣಿ ಹಾಗೂ ಸಮೀಕ್ಷಣೆ ಎಂಬ ಗ್ರಂಥ.
2. ದತ್ತನಾಮಾಮೃತ ಹಾಗೂ ಉಪಾಸನೆ ಎಂಬ ಗ್ರಂಥ.
3. ಅಧ್ಯಾತ್ಮಯೋಗ ಎಂಬ ಚಿಕ್ಕ ಗ್ರಂಥ.

ಬರೆಯೆ ಗದ್ಯದಿ ಇದನು । ಭರದಿಂದಲೆತ್ನಿಸಿದೆ
ಮರಳಿದನೆ ಕವಿತೆ ಭಾಮಿನಿಯಲಿರಿಸಲ್ಕೆ
ಪರುತವವ[1] ಗೈದೆ ಬ್ರಹ್ಮಜ್ಞ ॥ 90 ॥

ಬರೆಯುವದಕಾಗದಲೆ । ಇರುತ ಸುಮ್ಮನೆ ನಡೆಯೆ
ದೊರಕಿತ್ತು ಮತ್ತೆ ಮನದಲ್ಲಿ ಹೊಸಹುರುಪು
ಅರುಹೆ ತ್ರಿಪದಿಯಲಿ[2] ಬ್ರಹ್ಮಜ್ಞ ॥ 91 ॥

ವಿಶ್ವಾವಸುವಿನಲ್ಲಿ ಪುಷ್ಯಮಾಸದಿ ಮೊದಲು
ವಿಶ್ವಾಸದಿಂದೆ ಪ್ರತಿಪದೆಗೆ ಬರೆಯಲಾ
ಶ್ವಾಸನವು ಬಂತು ಬ್ರಹ್ಮಜ್ಞ[3] ॥ 92 ॥

ಚೈತ್ರಮಾಸದ ಶುಕ್ಲ । ಮತ್ತೆ ಏಕಾದಶಿಗೆ[4]
ಕೃತ್ಯವಿದು ಮುಗಿಯಲರ್ಪಿಸಿದೆನಿದನು ಶ್ರೀ....
ದತ್ತ ಚರಣದಲಿ ಬ್ರಹ್ಮಜ್ಞ ॥ 93 ॥

ಸ್ಮರಿಸಿ ಸರ್ವಜ್ಞನನು । ಸ್ಫುರಿಸಿದ್ದ ತ್ರಿಪದಿಯಲಿ
ಬರೆದ ಈ ಗ್ರಂಥ ಪೂರಯಿಸೆ ಅತಿಶಯದ
ಕರುಣೆಯಾತನದು ಬ್ರಹ್ಮಜ್ಞ ॥ 94 ॥

ನೆರೆ ಪರಾಭವ ವರ್ಷ । ಬರಲಧಿಕ ಶ್ರಾವಣದ
ವರಶುಕ್ಲಪಕ್ಷ ಆರನೆಯ ತಿಥಿಯಲಿದ
ಗುರುಚರಣಕಿಟ್ಟೆ ಬ್ರಹ್ಮಜ್ಞ ॥ 95 ॥

ಸತಿಸಹಿತವಾ ದಿನದಿ । ಯತಿಪಾದಪೂಜೆಯನು
ಅತಿಭಕುತಿಗೂಡಿ ಮಾಡುತ್ತಲರ್ಪಿಸಿದೆ
ಕೃತಿಯಿದನು ಕೇಳಿ ಬ್ರಹ್ಮಜ್ಞ ॥ 96 ॥

ಪರಮಾರ್ಥಸಂಘದಾ । ವರ ಸದಸ್ಯರು ಸೇರಿ
ಗುರುಗಳಿಗೆ ಪೂಜೆ ಸಲಿಸಿದರು ಆ ದಿನದಿ
ಹರುಷ ತುಂಬಿತ್ತು ಬ್ರಹ್ಮಜ್ಞ ॥ 97 ॥

---

1. ಪರುತ ಎಂದರೆ ಪ್ರಯತ್ನವೆಂದರ್ಥ.

2. ಗ್ರಂತಕರ್ತರು 'ಸರ್ವಜ್ಞಮೂರ್ತಿ' ಎಂಬ ಚಲನಚಿತ್ರವನ್ನು ನೋಡಿದ್ದರಿಂದ 'ತ್ರಿಪದಿ' ಛಂದಸ್ಸಿನಲ್ಲಿ ಸ್ಫೂರ್ತಿಯನ್ನು ಪಡೆದರು.

3. ತಾ॥ 23-12-1965.

4. ತಾ॥ 1-4-1966.

ನಿಧಿಸಹಿತ ಗ್ರಂಥವನು । ವಿಧಿಯಲರ್ಪಿಸಲಾಯ್ತು
ಇದು ನಿಜದಿ ಇನ್ನು ಕಾರ್ಯಾಲಯದ ಸ್ವತ್ತು
ಇದ ಸಾರಲಾಯ್ತು ಬ್ರಹ್ಮಜ್ಞ[1] ॥ 98 ॥

ಮಗಳ ಗಂಡನ ಮನೆಗೆ । ಹೊಗಿಸೆ ಸುಖಿಸುವರಂತೆ
ಸೊಗಸಿನಲಿ ಸಲಿಸಿ ಸುಖಿಸಿದೆನು ಗುರುಪಾದ
ಯುಗಳ ನೆನೆಯುತ್ತ ಬ್ರಹ್ಮಜ್ಞ ॥ 99 ॥

ಒಪ್ಪಿ ಸ್ವೀಕರಿಸಿದುದು । ಅಪ್ಪಟದ ಪುಣ್ಯಫಲ
ನೆಪ್ಪಿಟ್ಟುಕೊಳುವೆ ಜೀವನದೊಳೀ ದಿನವ
ತಪ್ಪದಲೆ ಕೇಳಿ ಬ್ರಹ್ಮಜ್ಞ ॥ 100 ॥

ವರಕವಿಯು ನಾನಲ್ಲ । ಅರಿಯೆ ನಿಯಮಗಳೆಲ್ಲ
ವರಕವಿಯು ಸತ್ಯಸರ್ವಜ್ಞ ಚರಣಗಳ
ಸ್ಮರಿಸಿರುವ ಫಲವು ಬ್ರಹ್ಮಜ್ಞ ॥ 101 ॥

ಕವಿತೆ ಸರ್ವಜ್ಞನದು । ಸವಿಯು ಬ್ರಹ್ಮಜ್ಞರದು[2]
ಅವಿನಾಶಿ ತತ್ತ್ವಶಂಕರರ ಭಾಷ್ಯದ್ದು
ಇವೆ ಮೂಲವಿದಕೆ ಬ್ರಹ್ಮಜ್ಞ ॥ 102 ॥

ಚಿತ್ತಕ್ಕೆ ಪ್ರೇರಣೆಯು । ದತ್ತ ಶ್ರೀಗುರುವಿನದು
ಮತ್ತಿನ್ನು ತಿದ್ದಿ ಸರಿಪಡಿಸಿ ಬರೆದವಳು
ಸತ್ಯ ಗುರುಭಗಿನಿ ಬ್ರಹ್ಮಜ್ಞ ॥ 103 ॥

ಜಯಲಕ್ಷ್ಮಿ ಹೆಸರಿವಳು । ವಯದಲ್ಲಿ ಚಿಕ್ಕವಳು
ನಯವಿನಯ ವಿದ್ಯೆ ಆಧ್ಯಾತ್ಮಚಿಂತನಾ
ಮಯಳು ಈ ಕುವರಿ ಬ್ರಹ್ಮಜ್ಞ ॥ 104 ॥

ಕರಡು ಶೋಧಿಸಿ ತಿದ್ದಿ । ಎರಡುಸಲ ಬರೆದಳಿದ
ಹಿರಿಮಗಳ ತೆರದಿ ಎನಗಾಗಿ ಶ್ರಮಿಸಿದಳ
ಹರಸುತ್ತ ನೆನೆವೆ ಬ್ರಹ್ಮಜ್ಞ[3] ॥ 105 ॥

---

1. ಪದ್ಯ 95 ರಿಂಧ 98ರ ವಿಷಯಕ್ಕೆ ಅಧ್ಯತ್ಮಪ್ರಕಾಶಪತ್ರಿಕೆಯ 1966ನೇ ಆಗಸ್ಟ್ ಸಂಚಿಕೆಯ ಪುಟ 272ನ್ನೂ ಮತ್ತು 1966ನೇ ಸೆಪ್ಟೆಂಬರ್ ಸಂಚಿಕೆಯ ಪುಟ 19 ರಿಂದ 22ರವರೆಗಿನ ಭಾಗವನ್ನೂ ನೋಡಿರಿ.

2. ಬ್ರಹ್ಮಜ್ಞರೆಂದರೆ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು ಎಂದರ್ಥ. ಈ ಬಗ್ಗೆ ಇದೇ ಗ್ರಂಥದ 1ನೇ ಅಧ್ಯಾಯದ 38ನೇ ಪದ್ಯವನ್ನು ನೋಡಿರಿ.

3. ಪದ್ಯ 103 ರಿಂದ 105ರ ಪೂರ ವಿಷಯವು ದಾವಣಗೆರೆಯ ಮುದಗಲ್ ಶ್ರೀ ಚಿಕ್ಕಣ್ಣ ಶ್ರೇಷ್ಠಿಯವರ ಪ್ರಥಮ ಪುತ್ರಿ ಗುರುಭಗಿನಿ ಕುಮಾರಿ ಜಯಲಕ್ಷ್ಮಿಯವರನ್ನು ಪರಾಮರ್ಶಿಸುತ್ತದೆ.

ಈ ನೆರವು ಬರದಿರಲು । ನಾನೆಂತು ಬರೆವವನು ?
ತಾನಾಗಿ ದೊರೆತ ಈ ಯೋಗ ಬರೆಯಲ್ಕೆ
ಮೇಣಾಯ್ತು ಮೂಲ ಬ್ರಹ್ಮಜ್ಞ ॥ 106 ॥

(ಫಲಶ್ರುತಿ)

ಹೀಗೆ ಕೂಡಿದ ದೈವ । ಯೋಗದಲಿ ಬರೆದಿರಲು
ಈಗಳೀ ಕೃತಿಯ ಪಠಿಸಿದರೆ ಫಲ ಬರುವ
ಭಾಗ ಹೇಳುವೆನು ಬ್ರಹ್ಮಜ್ಞ ॥ 107 ॥

ಭಾಷ್ಯವನು ಪಠಿಸಲ್ಕೆ । ಆಶೆ ತಾ ಹುಟ್ಟುವದು
ಲೇಸಾಗಿ ಭಕ್ತಿ ಶಂಕರರ ಚರಣದೊಳು
ವಾಸವಾಗುವದು ಬ್ರಹ್ಮಜ್ಞ ॥ 108 ॥

ಸಚ್ಚಿದಾನಂದೇಂದ್ರ । ಉಚ್ಚತಮ ಯತಿವರರ
ನೆಚ್ಚಿನಾ ಬೋಧೆ ಮನದಲ್ಲಿ ಮೂಡುವದು
ಅಚ್ಚೊತ್ತಿದಂತೆ ಬ್ರಹ್ಮಜ್ಞ ॥ 109 ॥

ಇವರ ಗ್ರಂಥದ ಸವಿಯ । ಸವಿವ ಬುದ್ಧಿಯು ಹುಟ್ಟಿ
ಶ್ರವಣದಲಿ ಮತ್ತೆ ಜಿಜ್ಞಾಸುಜನರಿಂಗೆ
ತವಕ ಹೆಚ್ಚುವದು ಬ್ರಹ್ಮಜ್ಞ ॥ 110 ॥

ಒಳ್ಳೆ ನಡೆನುಡಿಗಳಲಿ । ಕೊಳ್ಳುವದು ಅತಿಪ್ರೀತಿ
ಖುಲ್ಲಜನರೊರೆವ ಪರಮಾರ್ಥ ಮಾತುಗಳ
ಜೊಳ್ಳು ಗೊತ್ತಹುದು ಬ್ರಹ್ಮಜ್ಞ ॥ 111 ॥

ರಕ್ತಿ ಈಶ್ವರನಲ್ಲಿ ಚಿತ್ತಕ್ಕೆ ಹುಟ್ಟುವದು
ಉತ್ತಮರ ಸಂಗ ಸಿಕ್ಕುವದು ಸಂಶಯವು
ಕತ್ತರಿಸುತಿಹುದು ಬ್ರಹ್ಮಜ್ಞ ॥ 112 ॥

ವೇಷದಾ ಗುರುಗಳಲಿ । ಬೇಸರವು ಹುಟ್ಟುವದು
ದೋಷಗಳ ತಿದ್ದಿಕೊಳ್ಳುವದಕಿನ್ನು ಅವ–
ಕಾಶ ದೊರೆಯುವದು ಬ್ರಹ್ಮಜ್ಞ ॥ 113 ॥

ಆಧ್ಯಾತ್ಮಬೆಳಕಿನಾ । ಶುದ್ಧಮಾರ್ಗವ ತಿಳಿಪ
ಪದ್ಧತಿಯಲಿರುವ ಕಾರ್ಯಾಲಯವ[1] ಕಾಂಬ
ಬುದ್ಧಿ ಹುಟ್ಟುವದು ಬ್ರಹ್ಮಜ್ಞ ॥ 114 ॥

1. ಅಧ್ಯಾತ್ಮಪ್ರಕಾಶಕಾರ್ಯಾಲಯವೆಂದರ್ಥ.

ಅಡಿಗಡಿಗೆ ಬ್ರಹ್ಮಜ್ಞ । ನುಡಿಗಳನು ನೆನೆಯುತ್ತೆ
ಒಡಲೊಳಗೆ ಭಾವವಿರುತಿರ್ಕೆ ಸಾಧಕಗೆ
ಗಡ ತೋರ್ಕು ಮಾರ್ಗ ಬ್ರಹ್ಮಜ್ಞ ॥ 115 ॥

ದುಂಡು ಸುತ್ತುತ ತತ್ತ್ವ । ಮಂಡಿಸುವ ಗ್ರಂಥಗಳ
ಮೊಂಡತನ ತಿಳಿದು ಸತ್‌ಸಾಂಪ್ರದಾಯವನು
ಕಂಡರಿವರಿಲ್ಲಿ ಬ್ರಹ್ಮಜ್ಞ ॥ 116 ॥

ಸಂಸಾರತಾಪದಲಿ । ಸಂಶಯದ ಕೂಪದಲಿ
ಕಂಸಾರಿಯನ್ನೆ ಮರೆತವಗೆ ಭಕ್ತಿರಸ-
ದಂಶ ಸಿಕ್ಕುವದು ಬ್ರಹ್ಮಜ್ಞ ॥ 117 ॥

ಆತ್ರೇಯ ದತ್ತಕೃಪೆ । ಪಾತ್ರರಿದನೋದುವರು
ಸತ್ರವಿದು ಜ್ಞಾನವೈರಾಗ್ಯಭಕ್ತಿಗಳ
ಸೂತ್ರವೀ ವಚನ ಬ್ರಹ್ಮಜ್ಞ ॥ 118 ॥

ಧರ್ಮದಲಿ ಪ್ರೇಮವನು । ಕರ್ಮದಲಿ ಶ್ರದ್ಧೆಯನು
ಬೊಮ್ಮವನು ತಿಳಿವ ಹಂಬಲವ ತರುವುದೀ
ಬ್ರಹ್ಮಜ್ಞವಚನ ಬ್ರಹ್ಮಜ್ಞ ॥ 119 ॥

ಒಣತರ್ಕಶಾಸ್ತ್ರಗಳ । ಬಣಗುತನ ತಿಳಿಯುವದು
ಮಣಿಯುವದು ಬುದ್ಧಿ ಶ್ರುತಿಸಾಂಪ್ರದಾಯಗಳ
ಬಣವ ಸೇರಲ್ಕೆ ಬ್ರಹ್ಮಜ್ಞ ॥ 120 ॥

ಮನವು ನಿರ್ಮಲವಕ್ಕು । ತನುವು ಪಾವನವಕ್ಕು
ಘನದುರಿತ ನಶಿಸಿ ಮನದಲ್ಲಿ ಈ ವಚನ
ಅನುದಿನದಿ ಬಕ್ಕು ಬ್ರಹ್ಮಜ್ಞ ॥ 121 ॥

## (ಮಂಗಲ)

ಮಂಗಲವು ಭಾಷ್ಯಕ್ಕೆ । ಮಂಗಲವು ಪಂಥಕ್ಕೆ
ಮಂಗಲವು ಜ್ಞಾನಮಾರ್ಗಕ್ಕೆ ಋಷಿಗಳಿಗೆ
ಮಂಗಲವು ನಿತ್ಯ ಬ್ರಹ್ಮಜ್ಞ ॥ 122 ॥

ಅದ್ವೈತವೇ ನಿಜದಿ । ಸಿದ್ಧ ಸನ್ಮಂಗಲವು
ಶುದ್ಧತೆಯ ಕೆಡಿಸಲಿನ್ನೊಂದು ಇರದಿಹ ಪ್ರ-
ಸಿದ್ಧ ಮಂಗಲವು ಬ್ರಹ್ಮಜ್ಞ ॥ 123 ॥

ಅದಿಗುರು ಶಂಕರರ । ಪಾದಕ್ಕೆ ಮಂಗಲವು
ಮೋದದಲಿ ಭಾಷ್ಯ ರಚಿಸಿರುತ ಶುದ್ಧಶ್ರುತಿ-
ಬೋಧೆ ತೋರಿಹರು ಬ್ರಹ್ಮಜ್ಞ[1] ॥ 124 ॥

ಗೌಡಪಾದರ ಕೃತಿಯ । ಗೂಢ ತಿಳಿಸುತ ಜನರ
ಮೂಢಮತಿ ಬಿಡಿಸಿ ವೇದಾಂತಮಂಗಲವ
ಪಾಡಿಹರು ನಿಜದಿ ಬ್ರಹ್ಮಜ್ಞ ॥ 125 ॥

ಗೋವಿಂದ ಪೂಜ್ಯಪದ । ಸೇವನೆಯ ಮಾಡಿರುತ
ತಾವೀಗ ಭಾಷ್ಯ ರಚಿಸಿರುವ ಶಂಕರರಿ-
ಗಾವಗಂ ಗೆಲುವು ಬ್ರಹ್ಮಜ್ಞ ॥ 126 ॥

ಗುರು ಶಂಕರರ ಪಾದ । ಪರಿಚರದಿ ಜ್ಞಾನವನು
ದೊರಕಿಸಿದ ಶಿಷ್ಯ ಶ್ರೀಮತ್ ಸುರೇಶ್ವರರ
ಚರಣಕ್ಕೆ ಶುಭವು ಬ್ರಹ್ಮಜ್ಞ ॥ 127 ॥

ಭಾಷ್ಯಕ್ಕೆ ವಾರ್ತಿಕವ । ಲೇಸಿನಲಿ ರಚಿಸುತ್ತೆ
ದೋಷವಹ ಮಿಕ್ಕ ಮತತತಿಯ ಖಂಡಿಸಿದ
ಘೋಷಣೆಗೆ ಶುಭವು ಬ್ರಹ್ಮಜ್ಞ ॥ 128 ॥

ಜ್ಞಾನವನು ಒರೆಹಚ್ಚಿ । ಮೇಣು ಗ್ರಂಥವ ರಚಿಸಿ
ಜ್ಞಾನಫಲ ನಿತ್ಯ ನೈಷ್ಕರ್ಮ್ಯಸಿದ್ಧಿ ಸ-
ನ್ಮಾನಿತಗೆ ಶುಭವು ಬ್ರಹ್ಮಜ್ಞ ॥ 129 ॥

ಸಚ್ಚಿದಾನಂದೇಂದ್ರ । ಸಚ್ಚರಿತ ಯತಿವರಗೆ
ಉಚ್ಚವಹ ಇವರ ಕೃತಿಗಳಿಗೆ ಮಂಗಲವ-
ನುಚ್ಚರಿಸುತಿರುವೆ ಬ್ರಹ್ಮಜ್ಞ ॥ 130 ॥

ಬ್ರಹ್ಮಜ್ಞರಾದಿವರ । ನೆಮ್ಮಿರುವ ಶಿಷ್ಯರಿಗೆ
ಒಮ್ಮನದಿ ಪೇಳಿ ಮಂಗಲವ ನಾನಿಲ್ಲಿ
ಸಮ್ಮತಿಪೆ ಶುಭವ ಬ್ರಹ್ಮಜ್ಞ ॥ 131 ॥

ಅತ್ರಿನಂದನ ದತ್ತ । ಧಾತ್ರಿಯನು ತಿರುಗುತ್ತ
ಪಾತ್ರತೆಯ ನೋಡಿ ಜ್ಞಾನವನು ನೀಡುವವ-
ಧೂತನಿಗೆ ಶುಭವು ಬ್ರಹ್ಮಜ್ಞ ॥ 132 ॥

ಜನಿಸಿ ಪೀಠಾಪುರದಿ । ಕೊನೆಗೆ ಕುರುಗಡ್ಡೆಯಲಿ
ಅನವರತ ನಿಂತ ಶ್ರೀಪಾದವಲ್ಲಭಗೆ
ವಿನುತ ಮಂಗಲವು ಬ್ರಹ್ಮಜ್ಞ ॥ 133 ॥

ನರಸಿಂಹಸರಸತಿಯ । ವರರೂಪ ದತ್ತನಿಗೆ
ಹರುಷದಲಿ ಪೇಳ್ವೆ ಮಂಗಲವ ಗಾಣಗಾ-
ಪುರವಾಸ ಯತಿಗೆ ಬ್ರಹ್ಮಜ್ಞ ॥ 134 ॥

ರಾಮನಾಮವ ಬಿತ್ತಿ । ಪಾಮರರ ಹಿಡಿದೆತ್ತಿ
ರಾಮರೀ ಬ್ರಹ್ಮಚೈತನ್ಯ[1] ಗುರುಪದಕೆ
ನೇಮದಿಂ ಶುಭವು ಬ್ರಹ್ಮಜ್ಞ ॥ 135 ॥

ಪರಮ 'ಬ್ರಹ್ಮಾನಂದ' ವರ ಸಾಧುಚರಣಗಳ
ಸ್ಮರಿಸುವೆನು ನಿತ್ಯಮಂಗಲವ ವೆಂಕಟಾ-
ಪುರವಾಸ[2] ಮುನಿಗೆ ಬ್ರಹ್ಮಜ್ಞ ॥ 136 ॥

ಪರಮಹಂಸರ ಪದಕೆ । ನಿರುತ ಸನ್ಮಂಗಲವು
ವರರಾಮಕೃಷ್ಣರೆನಿಸಿಹ ವಿಭೂತಿಘನ-
ಪುರುಷರಿಗೆ ಶುಭವು ಬ್ರಹ್ಮಜ್ಞ ॥ 137 ॥

ಅನುಸರಿಸಿ ಪತಿಯನ್ನು । ತನುಮನವ ಮರೆತಿನ್ನು
ಅನವರತ ನಿಷ್ಠೆಯಲಿ ನಿಂದ ಶಾರದಾ-
ಮಣಿಗೆ ಮಂಗಲವು ಬ್ರಹ್ಮಜ್ಞ ॥ 138 ॥

ಅರುಹಿ ಪಾಶ್ಚಾತ್ಯರಿಗೆ । ಭರತಭೂಮಿಯ ತತ್ತ್ವ
ಹರಿಯಂತೆ ಗುಡುಗಿ ಜಗವನ್ನು ಎಬ್ಬಿಸಿದ
ತರುಣನಿಗೆ ಶುಭವು ಬ್ರಹ್ಮಜ್ಞ ॥ 139 ॥

---

1. ಶ್ರೀ ಗೋಂದಾವಳೀ ಬ್ರಹ್ಮಚೈತನ್ಯಸದ್ಗುರುಮಹಾರಾಜರು.

2. ವೆಂಕಟಾಪುರಗ್ರಾಮವು ಧಾರವಾಡ ಜಿಲ್ಲಾ ಗದಗ ತಾಲ್ಲೂಕಿನಲ್ಲಿದೆ. ಈಚೆಗೆ ಈ ಮಹನೀಯರ ಆರಾಧನೆಯ ಸುವರ್ಣಮಹೋತ್ಸವವು ನಡೆಯಿತು.

ಪರಮಹಂಸರ ಶಿಷ್ಯ । ವರ ವಿವೇಕಾನಂದ
ಚರಣಕ್ಕೆ ಇಲ್ಲಿ ಮಂಗಲವ ಪಾಡುವೆನು
ಸ್ಮರಿಸುವೆನು ಮುದದಿ ಬ್ರಹ್ಮಜ್ಞ ॥ 140 ॥

ರಾಮತೀರ್ಥರು ಸಾರ್ವ । ಭೌಮರಧ್ಯಾತ್ಮದಲಿ
ಈ ಮಹಾಮಹಿಮರಡಿಗಳಿಗು ಮಂಗಲವ
ಪ್ರೇಮದಲಿ ಪೇಳ್ವೆ ಬ್ರಹ್ಮಜ್ಞ ॥ 141 ॥

ಭಾರತದ ಅಧ್ಯಾತ್ಮ । ದಾರಿಯನು ತೋರಿಸಿದ
ಧೀರ ಶ್ರೀರಮಣಋಷಿಗಳಿಗು ಮಂಗಲವ
ಸಾರುತಿಹೆನಿಲ್ಲಿ ಬ್ರಹ್ಮಜ್ಞ ॥ 142 ॥

ಕನ್ನಡದ ನುಡಿಗೆ ಮೇಣ್ । ಕನ್ನಡದ ನಾಡುಜನ
ಮುನ್ನ ಶ್ರೀಭಾರತಾಂಬೆಗೂ ಮಂಗಲವ-
ನಿನ್ನು ಕೋರುವೆನು ಬ್ರಹ್ಮಜ್ಞ ॥ 143 ॥

ಬ್ರಹ್ಮಜ್ಞವಚನಕ್ಕೆ । ಒಮ್ಮನದಿ ಮಂಗಲವು
ಬ್ರಹ್ಮಜ್ಞ ಕೃತಿಗೆ ಸಹಕರಿಸಿದವರಿಗಿ-
ನ್ನೊಮ್ಮೆ ಮಂಗಲವು ಬ್ರಹ್ಮಜ್ಞ ॥ 144 ॥

ಬೊಮ್ಮಜ್ಞರೆಲ್ಲರಿಗು । ಸನ್ಮಂಗಲವ ಹೇಳಿ
ನಿಮ್ಮ ಮಗು ಬರೆದ ಈ ಕೃತಿಯ ಹರಸಿರೆಂ-
ದೊಮ್ಮೆ ಬೇಡುವೆನು ಬ್ರಹ್ಮಜ್ಞ ॥ 145 ॥

ಸರ್ವಜ್ಞ ಮೂರುತಿಗೆ[1] ಸರ್ವತ್ರ ಮಂಗಲವು
ಸರ್ವಕ್ಕು ಸುಲಭ ತ್ರಿಪದಿಗೂ ಮಂಗಲವು
ಸರ್ವಮಂಗಲವು ಬ್ರಹ್ಮಜ್ಞ ॥ 146 ॥

ಅಧ್ಯಾತ್ಮವಿದ್ಯೆಯಾ । ಶುದ್ಧನಿಲಯಕೆ[2] ಶುಭವು
ಅಧ್ಯಾತ್ಮಬೆಳಕ ಬೀರುತಿಹ ಪತ್ರಿಕೆಗೆ
ಶ್ರದ್ಧೆಯಲಿ ಶುಭವು[3] ಬ್ರಹ್ಮಜ್ಞ ॥ 147 ॥

---

1. ಸರ್ವಜ್ಞ ಕವಿ ಎಂದರ್ಥ. ಇದೇ ಗ್ರಂಥದ 1ನೇ ಅಧ್ಯಾಯ ಪದ್ಯ 25 ರಿಂದ 31ರವರೆಗೆ ನೋಡಿರಿ.

2. ಅಧ್ಯಾತ್ಮವಿದ್ಯಾನಿಲಯವೆಂಬ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರಿಂದ ಸ್ಥಾಪಿಸಲ್ಪಟ್ಟಿರುವ ಮಹಾಪಾಠಶಾಲೆ.

3. ಅಧ್ಯಾತ್ಮಪ್ರಕಾಶಮಾಸ ಪತ್ರಿಕೆ.

ಗುರು ಸಚ್ಚಿದಾನಂದ । ಚರಣಕಮಲಂಗಳಿಗೆ
ಎರಗುತ್ತೆ ಮತ್ತೆ ಮಂಗಲವ ಪಾಡುತ್ತೆ
ಬರಹ ಮುಗಿಸುವೆನು ಬ್ರಹ್ಮಜ್ಞ ॥ 148 ॥

**ಇಂತು ಶ್ರೀಮದಾದ್ಯಶಂಕರಭಗವತ್ಪಾದಾಚಾರ್ಯಸ್ವರೂಪರೂ ಶ್ರೀಪಾದಶ್ರೀವಲ್ಲಭ ಶ್ರೀಗುರು ನರಸಿಂಹಸರಸ್ವತೀ ಶ್ರೀದತ್ತಾತ್ರೇಯಸದ್ಗುರುಸ್ವರೂಪರೂ ಆಗಿರುವ ಶ್ರೀಮತ್ ಪರಮಹಂಸಪರಿವ್ರಾಜಕಾಚಾರ್ಯವರ್ಯ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಯತಿಚರಣ, ಧೂಲೀಕಣನೆನಿಸಿದ ಹೊಂಬಳದ ಶ್ರೀಯುತ ದೇವರಾಯಶರ್ಮನಿಂದ ರಚಿತವಾದ ಬ್ರಹ್ಮಜ್ಞವಚನ ಶಂಕರದರ್ಶನವೆಂಬ ಹದಿನೈದು ಅಧ್ಯಾಯಗಳ ಗ್ರಂಥವು ಮುಗಿಯಿತು.**

**ಶ್ರೀ ಕೃಷ್ಣಾರ್ಪಣಮಸ್ತು**

* * * *

# 'ಶಂಕರದರ್ಶನ' ಗ್ರಂಥದ ಸಾರ

## ಒಂದನೆಯ ಅಧ್ಯಾಯ

ಸಂಪ್ರದಾಯಕ್ಕನುಸರಿಸಿ ಮೊದಲು ದಶೋಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರ ಎಂಬೀ ಪ್ರಸ್ಥಾನತ್ರಯಕ್ಕೆ ಸವಿಸ್ತಾರವಾಗಿ ಭಾಷ್ಯವನ್ನು ರಚಿಸಿದ ಶ್ರೀಶಂಕರಭಗವತ್ಪಾದರನ್ನು ನಮಿಸಿ, ಅನಂತರ ಚಿಕ್ಕವಯಸ್ಸಿನಲ್ಲಿಯೇ ವೇದಾಂತದಲ್ಲಿ ಅಭಿರುಚಿಯನ್ನು ಹುಟ್ಟಿಸಿದ ಪೂರ್ವಗುರುಗಳ ಸ್ಮರಣೆಯನ್ನು ಮಾಡಿ, ಮುಂದೆ ಕ್ರಮವಾಗಿ ಸರಿಯಾದ ಮಾರ್ಗನಿರ್ದೇಶನ ಮಾಡಿದ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರನ್ನೂ ಪದ್ಯಗಳು ಈ ರೂಪದಲ್ಲಿ ಹೊರಹೊಮ್ಮಲು ಪ್ರೇರಕನಾದ ಸರ್ವಜ್ಞಮಹಾಕವಿಯನ್ನೂ ಇಷ್ಟದೈವವೆನಿಸಿದ ಶ್ರೀದತ್ತಗುರುವನ್ನೂ ಸರ್ವಕಾಲಸರ್ವದೇಶಗಳಲ್ಲಿರುವ ಬ್ರಹ್ಮಜ್ಞರನ್ನೂ ಅತ್ಯಂತ ಆದರ ಭಾವದಿಂದ ವಂದಿಸಿ, ಈ ಗ್ರಂಥದಲ್ಲಿಯ ಲೇಸನ್ನು ಮಾತ್ರ ಸ್ವೀಕರಿಸಬೇಕೆಂದು ವಾಚಕರಲ್ಲಿ ಅರಿಕೆಮಾಡಿಕೊಂಡು, ಅನುಭವದಲ್ಲಿಯೇ ನಿಂತು ಈ ಪದ್ಯಗಳಲ್ಲಿ ಅಡಕವಾಗಿರುವ ತತ್ತ್ವವನ್ನು ಮನಗಾಣಿರೆಂದು ಜಿಜ್ಞಾಸುಗಳಿಗೆ ಸೂಚನೆಕೊಟ್ಟು ಮುಖ್ಯವಿಷಯವನ್ನು ಪ್ರಾರಂಭಿಸಲಾಗುತ್ತದೆ.

(೧–೫೨)

ಶ್ರೀಶಂಕರರು ಭಾಷ್ಯವನ್ನು ರಚಿಸಿ ಇಂದಿಗೆ ಸಾವಿರಾರುವರ್ಷಗಳು ಉರುಳಿದ್ದರೂ ಅವರ ಚರಿತ್ರೆಯ ಐತಿಹಾಸಿಕವಿಷಯಗಳು ದೊರೆಯುವದು ಬಹಳ ಕಷ್ಟವಾಗಿರುತ್ತದೆ, ಅಥವಾ ಅಸಾಧ್ಯವೇ ಆಗಿರುತ್ತದೆ ಎನ್ನಬಹುದು. ಆಚಾರ್ಯರನ್ನು ಹೊಗಳುವ 'ಶಂಕರವಿಜಯ'ಗಳು ಹಲವಾರು ಇವೆಯಾದರೂ ಭಿನ್ನಭಿನ್ನಪ್ರಕಾರದಿಂದ ಬರೆಯಲಾಗಿರುವ ಆ ಕಥೆಗಳು ಮುಖ್ಯವಿಷಯಗಳಲ್ಲಿಯೇ ಪರಸ್ಪರವಿರುದ್ಧವಾಗಿರುತ್ತವೆ. ಹೀಗಿರುವದರಿಂದ ಆಚಾರ್ಯರ ಚರಿತ್ರೆ ಎಂದರೆ ಅವರ ಭಾಷ್ಯಗಳೇ; ಅವುಗಳನ್ನು ಪೂಜಿಸಿದರೆ ಅವರನ್ನು ನಾವು ಪೂಜಿಸಿದಂತೆ ಆಗುವುದು ಎಂದು ತಿಳಿಯಬೇಕು.

(೫೩–೫೬)

ವೇದಾಂತತತ್ತ್ವನಿರ್ಣಯಕ್ಕೆ ಭಾಷ್ಯವು ಮುಖ್ಯವೇ ಹೊರತು ಚರಿತ್ರೆಯಲ್ಲ. ನೇರಾಗಿ ಭಾಷ್ಯಗಳನ್ನೇ ಓದಿ ತಿಳಿದುಕೊಳ್ಳಲಾರದ ಜಿಜ್ಞಾಸುಗಳಿಗೆ

ಕನ್ನಡದಲ್ಲಿಯೇ ಅಮೂಲ್ಯ ಗ್ರಂಥವಾದ **'ಶಂಕರವೇದಾಂತಸಾರ'**ವು ಆದರಣೀಯವಾಗಿದೆ. (೫೭–೫೯)

ಆಚಾರ್ಯರ ಸಾಕ್ಷಾತ್ ಶಿಷ್ಯರಾದ ಸುರೇಶ್ವರರು ಬರೆದಿರುವ **ಬೃಹದಾರಣ್ಯಕವಾರ್ತಿಕವೂ ತೈತ್ತಿರೀಯವಾರ್ತಿಕವೂ ನೈಷ್ಕರ್ಮ್ಯಸಿದ್ಧಿಯೆಂಬ** ಗ್ರಂಥವೂ ಆಚಾರ್ಯರ ಮತವನ್ನು ತಿಳಿಯುವದಕ್ಕೆ ಮುಖ್ಯವಾದ ಸಹಾಯಕಗ್ರಂಥಗಳಾಗಿರುತ್ತವೆ. ಈ ಮೂರು ಗ್ರಂಥಗಳ ಹೊರತು ಮತ್ತೆ ಯಾವದನ್ನೂ ಸುರೇಶ್ವರಕೃತವೆನ್ನುವದಕ್ಕೆ ಸರಿಯಾದ ಆಧಾರವೇನೂ ದೊರೆತಿರುವದಿಲ್ಲ. ಗೌಡಪಾದರ ಕಾರಿಕೆ, ಶಂಕರರ ಭಾಷ್ಯ, ಸುರೇಶ್ವರರ ವಾರ್ತಿಕ– ಈ ಗ್ರಂಥಗಳಲ್ಲಿ ಪ್ರತಿಪಾದಿತವಾಗಿರುವ ವಿಷಯಗಳು ಏಕವಾಕ್ಯತೆಯನ್ನು ಹೊಂದಿರುತ್ತವೆ. ಇನ್ನು ಶ್ರೀಶಂಕರಭಗವತ್ಪಾದರ ಹೆಸರಿನಲ್ಲಿ ಅನೇಕ ಪ್ರಕರಣಗಳು ಪ್ರಚಾರದಲ್ಲಿವೆಯಾದರೂ ಉಪದೇಶಸಾಹಸ್ರಿಯು ಮಾತ್ರ ಆಚಾರ್ಯರದ್ದೆಂದು ನಿಸ್ಸಂದೇಹವಾಗಿ ಹೇಳಬಹುದು. ಮಿಕ್ಕ ಗ್ರಂಥಗಳನ್ನು ಇದಕ್ಕೆ ಒರೆಹಚ್ಚಿನೋಡಿ ಅವುಗಳಲ್ಲಿ ಸಿಕ್ಕಷ್ಟು ಸಾರವನ್ನು ಗ್ರಹಿಸಬಹುದು. (೬೦–೬೭)

ಪಂಚಪಾದಿಕೆಯು ಸೂತ್ರಭಾಷ್ಯಕ್ಕೆ ಬಹಳ ಹಿಂದಿನ ವ್ಯಾಖ್ಯಾನವಾಗಿದ್ದು ಶಂಕರ ಶಿಷ್ಯರಾದ ಪದ್ಮಪಾದಾಚಾರ್ಯರಿಂದ ವಿರಚಿತವಾದದ್ದೆಂಬ ಪ್ರಖ್ಯಾತಿಯನ್ನು ಹೊಂದಿದೆ. ವೇದಾಂತದ ಮೂಲಭೂತವಾದ ಉಪದೇಶಗಳನ್ನೇ ಭಾಷ್ಯಕ್ಕಿಂತ ತೀರಭಿನ್ನವಾದ ರೀತಿಯಿಂದ ಇಲ್ಲಿ ಮಾರ್ಪಡಿಸಿರುವ ಬಗೆಯನ್ನು ಮುಂದೆ ಅಲ್ಲಲ್ಲಿ ತೋರಿಸಿಕೊಡಲಾಗುವುದು. ಭಾಮತಿಯು ವಾಚಸ್ಪತಿಮಿಶ್ರರೆಂಬ ವಿದ್ವಾಂಸರಿಂದ ಈಚೆಗೆ ವಿರಚಿತವಾದದ್ದು. ಮಂಡನಮಿಶ್ರರ ಅಭಿಪ್ರಾಯಗಳಲ್ಲಿ ಹಲವನ್ನು ಶಾಂಕರಪ್ರಸ್ಥಾನಕ್ಕೆ ತಗಲುಹಾಕಿದವರೆಂದರೆ ವಾಚಸ್ಪತಿಮಿಶ್ರರೇ ಆಗಿರುತ್ತಾರೆ. ಕೆಲವು ಕಡೆ ಪರಸ್ಪರವಿರುದ್ಧವಾಗಿರುವಂತೆ ಕಂಡುಬರುವ ಈ ವ್ಯಾಖ್ಯಾನವು ಭಾಷ್ಯದ ಸೌಂದರ್ಯಕ್ಕೇ ಕಪ್ಪುಬಳಿಯುತ್ತಿರುವದೆಂದರೆ ತಪ್ಪಾಗಲಾರದು. (೬೮–೭೯)

ಪಂಚಪಾದಿಕೆಯ ಮೇಲೆ ಬರೆದಿರುವ ವಿವರಣವೆಂಬ ಉಪವ್ಯಾಖ್ಯಾನವನ್ನು ಮೂಲವಾಗಿಟ್ಟುಕೊಂಡೇ ಈಗ ಹೆಚ್ಚಾಗಿ ಅದ್ವೈತವೇದಾಂತದ ಪಾಠವು ನಡೆದಿರುತ್ತದೆ. ಇದರಲ್ಲಿ ಕೆಲವು ಹೊಸ

ವಿಷಯಗಳನ್ನು ಸೇರಿಸಿರುವದಲ್ಲದೆ ಭಾಮತೀವ್ಯಾಖ್ಯಾನದ ಪ್ರಕ್ರಿಯೆಯಲ್ಲಿ ಕೆಲವು ದೋಷಗಳನ್ನೂ ತೋರಿಸಿದೆ. ಭಾಮತೀವ್ಯಾಖ್ಯಾನಕ್ಕೆ ಅಮಲಾನಂದ ವಿರಚಿತವಾದ ಕಲ್ಪತರುವೆಂಬ ವ್ಯಾಖ್ಯಾನವಿದೆ; ಅದರಲ್ಲಿ ಕೆಲವು ಹೆಚ್ಚಿನ ವಿಷಯಗಳಿರುವದಲ್ಲದೆ ಭಾಮತೀವ್ಯಾಖ್ಯಾನವೇ ನಿರ್ದುಷ್ಟವೆಂದು ತೋರಿಸುವ ಪ್ರಯತ್ನವೂ ನಡೆದಿದೆ. ಈ ವಾದದ ಭರದಲ್ಲಿ ಅದ್ವೈತಿಗಳಲ್ಲಿಯೇ ನೂರಾರು ಒಳಪಂಗಡಗಳಾಗಿರುತ್ತವೆ. ಆ ಪಂಗಡಗಳ ವಾದಗಳನ್ನೆಲ್ಲ ಯಾರೂ ಇದುವರೆಗೆ ಹೊಂದುಗಡೆಯಾಗುವಂತೆ ವಿವರಿಸಿ ಜನರಿಗೆ ಸಮಾಧಾನವನ್ನು ಮಾಡಿಕೊಟ್ಟಿರುವದಿಲ್ಲ. ಪಂಡಿತರಾದವರನ್ನು ಕೇಳಿದರೆ ಒಬ್ಬೊಬ್ಬರೂ ಒಂದೊಂದು ಬಗೆಯಾಗಿ ಅದ್ವೈತಪ್ರಕ್ರಿಯೆಯನ್ನು ವಿವರಿಸುತ್ತಾರೆ. ಹೀಗಾಗಿ ಮುಮುಕ್ಷುಗಳಾದವರಿಗೆ ನಿಜವಾದ ಸಿದ್ಧಾಂತವನ್ನು ತಿಳಿದುಕೊಳ್ಳುವದೇ ಕಡುಕಷ್ಟವಾಗಿರುತ್ತದೆ. (೮೦-೯೭)

ಈ ರೀತಿ ಅದ್ವೈತವೇದಾಂತದಲ್ಲಿ ನುಗ್ಗಿರುವ ತರ್ಕವನ್ನು ಸದೆಬಡಿಯುವದಕ್ಕೆ ಭಾಷ್ಯವೇ ಯೋಗ್ಯವಾದದು. ಪ್ರಕೃತ ಶ್ರೀಶಂಕರ ಭಗವತ್ಪಾದರೇ ಭಾಷ್ಯರೂಪದಿಂದಿರುವರೆಂಬ ಭಾವನೆಯನ್ನು ತಳೆದು ಅವರಿಗೆ ಒಪ್ಪಾದ ವೇದಾಂತದ ಮುಖ್ಯೋಪದೇಶಗಳನ್ನು ತಿಳಿಸುವದಕ್ಕೆ ಇನ್ನುಮುಂದೆ ಪ್ರಯತ್ನಿಸುವೆನು. (೯೮-೧೦೦)

## ಎರಡನೆಯ ಅಧ್ಯಾಯ

ನಮ್ಮೆಲ್ಲರ ಸ್ವರೂಪವಾದ ಆತ್ಮವು ಪರಮಾರ್ಥವಾಗಿ ಬ್ರಹ್ಮವೇ ಆಗಿದ್ದು ನಿತ್ಯ, ಶುದ್ಧ, ನಿರ್ಧರ್ಮವಾಗಿದೆ. ಎಂದಿಗೂ ಹುಟ್ಟುಸಾವನ್ನು ಹೊಂದದ ಈ ಪರತತ್ತ್ವವನ್ನು ಅರಿಯದಿರುವದರಿಂದಲೇ ನಮಗೆ ಈ ಸಂಸಾರದ ಭ್ರಾಂತಿಯುಂಟಾಗಿರುತ್ತದೆ. ಮಾರ್ಗದಲ್ಲಿ ಬಿದ್ದಿರುವ ಒಂದು ಹಗ್ಗದ ತುಂಡನ್ನು ಮಬ್ಬುಬೆಳಕಿನಲ್ಲಿ ಹಾವೆಂದು ತಪ್ಪಾಗಿ ತಿಳಿದುಕೊಳ್ಳುವಂತೆ ಪರಮಾತ್ಮತತ್ತ್ವವನ್ನೇ ಅಜ್ಞಾನವೆಂಬ ಕತ್ತಲಿನಲ್ಲಿ ಜಗತ್ತು, ಜೀವ- ಎಂದು ನೋಡುತ್ತಿದ್ದೇವೆ. ಆಪ್ತಮಿತ್ರನ ಮಾತನ್ನು ಕೇಳಿ ಬೆಳಕಿನ ಸಹಾಯದಿಂದ ಹಗ್ಗವನ್ನು ಗುರುತಿಸುವಂತೆ ಇಲ್ಲಿಯೂ ನಮ್ಮೆಲ್ಲರ ಹಿತಚಿಂತಕನಾದ ಸದ್ಗುರುವಿನ ವಾಕ್ಯವನ್ನಾಲಿಸಿ ಶ್ರುತಿಯ ಪ್ರಬೋಧದ ಬೆಳಕಿನಲ್ಲಿ ಈಗಲೇ 'ಇದೆಲ್ಲವೂ ಬ್ರಹ್ಮವೇ' ಎಂದು ತಿಳಿಯಬಹುದಾಗಿದೆ. (1–8)

ಶಾಸ್ತ್ರವೆಂದರೆ ಶ್ರುತಿ, ಶ್ರುತ್ಯರ್ಥವನ್ನು ಮನಗಂಡು ಬ್ರಹ್ಮಸ್ವರೂಪದಲ್ಲಿ ನೆಲೆನಿಂತವನೇ ಸದ್ಗುರುವು. ತತ್ತ್ವವನ್ನು ತಿಳಿಯಬೇಕೆಂಬ ತವಕವುಳ್ಳ ಮುಮುಕ್ಷುವು ಶಾಸ್ತ್ರವು ಹೇಳುವ ಪ್ರಕಾರದಿಂದ ನಿತ್ಯವೂ ನಿಷ್ಕಾಮಕರ್ಮವನ್ನಾಚರಿಸಿ ಅದನ್ನು ಭಗವಂತನಿಗೆ ಅರ್ಪಿಸಬೇಕು. ಇದರಿಂದ ಅವನಿಗೆ ಚಿತ್ತವು ಶುದ್ಧಿಯಾಗುವುದಲ್ಲದೆ ಉಪಾಸನೆಯನ್ನೂ ಮಾಡುವದರಿಂದ ಚಿತ್ತೈಕಾಗ್ರತೆಗೆ ಸಹಾಯವಾಗುವುದು. ಶುದ್ಧಚಿತ್ತನಿಗೆ ಶ್ರದ್ಧೆವೈರಾಗ್ಯಾದಿಗಳು ಜೊತೆಯಾಗಲು ಸದ್ಗುರುವಿನ ಉಪದೇಶದಿಂದ ಕೂಡಲೇ ಜ್ಞಾನವುಂಟಾಗುವದು. ಮೋಕ್ಷಕ್ಕೆ ಜ್ಞಾನವೇ ಬೇಕು; ಇತರ ಸಾಧನಗಳೆಲ್ಲವೂ ಜ್ಞಾನಕ್ಕೆ ಸಿದ್ಧತೆ ಮಾತ್ರ. ಅನುಭವರೂಪವಾದ ಆತ್ಮಜ್ಞಾನದಿಂದ ಸಾವು, ಭಯ, ಕಾಮಗಳೆಲ್ಲವೂ ತೊಲಗಿ ಜೀವನ್ಮುಕ್ತಿಯೇ ಲಭಿಸುವದು. (9–18)

ಬ್ರಹ್ಮದ ಅರಿವೆಂಬುದು ಪ್ರತ್ಯಕ್ಷ, ಅನುಮಾನ, ಅರ್ಥಾಪತ್ತಿ–ಮುಂತಾದ ಪ್ರಮಾಣಗಳಿಂದ ಆಗತಕ್ಕದ್ದಲ್ಲ. ಕಲ್ಲಿನಮೇಲೆ ಪ್ರಯೋಗಿಸಿದ ಕತ್ತಿಯ ಅಲುಗಿನಂತೆ ಬ್ರಹ್ಮದ ವಿಷಯದಲ್ಲಿ ಅನುಮಾನಾದಿಪ್ರಮಾಣಗಳೆಲ್ಲವೂ ಮೊಂಡಾಗುತ್ತವೆ. ಕಣ್ಣಿನಿಂದಲೇ ರೂಪವು ತಿಳಿದುಬರುವಂತೆ ಆತ್ಮವು ಶಾಸ್ತ್ರಪ್ರಮಾಣದಿಂದಲೇ ತಿಳಿಯಬರುತ್ತಾನೆ. ಏಕೆಂದರೆ ಮಾತುಮನಗಳಿಗೆ ನಿಲುಕದ ಅನುಭವರೂಪನಾದ ಆತ್ಮನನ್ನು ತೋರಿಸಿಕೊಡುವದಕ್ಕೆ ಶಾಸ್ತ್ರವು ಮಾತ್ರವೇ ಸಮರ್ಥವಾಗಿದೆ. ಮಿಕ್ಕ ಪ್ರಮಾಣಗಳಿಗೂ ಇದಕ್ಕೂ ಇರುವ ತಾರತಮ್ಯವೇನೆಂದರೆ: ಆ ಪ್ರಮಾಣಗಳು ಪ್ರಮೇಯವನ್ನು ತಿಳಿಸಿಕೊಡುವಲ್ಲಿ ಅರಿಯುವಾತನು (ಪ್ರಮಾತೃ), ಅರಿಯುವ ಸಾಧನಗಳಾದ ಇಂದ್ರಿಯಗಳು (ಪ್ರಮಾಣ), ಅರಿವಿಗೆ ವಿಷಯ (ಪ್ರಮೇಯ)– ಎಂಬ ಮೂರು ವಿಭಾಗವು ಇದ್ದೇಇರಬೇಕು. ಆದರೆ ವೇದಾಂತಶಾಸ್ತ್ರವು ಆತ್ಮನ ಪ್ರಮಾತೃತ್ವವೇ ಆವಿದ್ಯಕವೆಂದು ತಿಳಿಸಿಕೊಡುವದರಿಂದ ಆಗ ಪ್ರಮಾಣಾದಿವ್ಯವಹಾರವೇ ಇಲ್ಲವೆಂದಾಗಿಬಿಡುತ್ತದೆ. ಹೀಗೆ ಈ ಶಾಸ್ತ್ರವು ಪ್ರಮಾಣಗಳ ಪ್ರಮಾಣತ್ವವನ್ನು ಕಳೆಯುವದರಿಂದಲೇ ಅಂತ್ಯಪ್ರಮಾಣವೆನಿಸಿರುತ್ತದೆ. (19–33)

ಸ್ವರ್ಗಾದಿಫಲವನ್ನು ಹೇಳುವ ಕರ್ಮಪರವಾಕ್ಯಕ್ಕೆ ಅನುಭವದ ಅಪೇಕ್ಷೆಯಿರುವದಿಲ್ಲ. ಆದರೆ ಭೂತವಸ್ತುವನ್ನು ತಿಳಿಸುವ ವಸ್ತುಪರವಾಕ್ಯವು ಅನುಭವದಲ್ಲಿಯೇ ಕೊನೆಗಾಣಬೇಕಾಗಿದೆ. ಅನುಭವವಿರುದ್ಧವಾಗಿ 'ಬೆಂಕಿಯು

ತಣ್ಣಗಿದೆ, ಅದರಲ್ಲಿ ಬೆಳಕಿಲ್ಲ' ಎಂದು ನೂರು ವಚನಗಳು ಹೇಳಿದರೂ ಅವು ಪ್ರಮಾಣವೆನಿಸಲಾರವಷ್ಟೆ? ಅನುಭವರೂಪವಾದ ಫಲವನ್ನುಂಟುಮಾಡುವದರಿಂದಲೇ ಶ್ರುತಿಯು ಪ್ರಮಾಣವೆನಿಸಿದೆ. (34–40)

ಪ್ರತ್ಯಕ್ಷಾದಿಪ್ರಮಾಣಗಳಿಗೆ ಶ್ರುತಿಯು ವಿರುದ್ಧವಾಗುವದಿಲ್ಲವೆ?– ಎಂದು ಕೆಲವರು ಶಂಕಿಸಬಹುದು. ಆದರೆ ಪ್ರಮಾಣಗಳು ತಮ್ಮ ತಮ್ಮ ಅಸಾಧಾರಣವಿಷಯಗಳನ್ನು ತಿಳಿಸುವವೇ ಹೊರತು ಒಂದಕ್ಕೊಂದು ವಿರುದ್ಧವಾಗಿರುವದಿಲ್ಲ– ಎಂದರೆ ಪ್ರತ್ಯಕ್ಷಾದಿಗಳು ರೂಪಾದಿ ವಿಷಯಗಳನ್ನು ತಿಳಿಸುವವೇ ಹೊರತು ಅವು ಶ್ರುತಿಯು ಹೇಳುವ ಬ್ರಹ್ಮವು ಅದ್ವಿತೀಯವಲ್ಲವೆಂದೇನೂ ತಿಳಿಸುವದಿಲ್ಲ. ಏಕೆಂದರೆ ಅವಕ್ಕೆ ಬ್ರಹ್ಮವು ವಿಷಯವೇ ಅಲ್ಲ. (41–45)

ಶ್ರುತಿಯಲ್ಲಿ ಭ್ರಾಂತಿಯ ಅನುಭವವನ್ನಾಗಲಿ, ಒಬ್ಬೊಬ್ಬರಿಗೇ ಆಗುವ ವಿಶೇಷಾನುಭವವನ್ನಾಗಲಿ ಅನುಭವವೆಂದು ಕರೆದಿರುವದಿಲ್ಲ. ದೇಶಕಾಲನಿಮಿತ್ತಗಳಿಗೆ ಕಟ್ಟುಬೀಳದ **ಸಾರ್ವತ್ರಿಕಾನುಭವವೇ** ನಿಜವಾದ ಅನುಭವವು ಎಂದರೆ ಪರಮಾರ್ಥಾನುಭವವು ಎಂದು ಅಲ್ಲಿ ಹೇಳಿರುತ್ತದೆ. ಯಾವದು ತನ್ನ ಸ್ವರೂಪದಲ್ಲಿ ಹೆಚ್ಚುಕಡಿಮೆಯಾಗದೆ ಯಾವಾಗಲೂ ಒಂದೇ ರೂಪದಲ್ಲಿರಬಲ್ಲದೋ ಅದೇ ಪರಮಾರ್ಥವು ಅಥವಾ ಸತ್ಯವು. ಅದು ತರ್ಕದಿಂದ ಸಿಕ್ಕತಕ್ಕದ್ದಲ್ಲ, ಅದನ್ನು ತರ್ಕದಿಂದ ಅಲ್ಲಗಳೆಯುವದಕ್ಕೂ ಆಗುವದಿಲ್ಲ. (46–52)

ಇಂದ್ರಿಯಮನಾದಿಗಳಿಂದಾಗುವ ಶಬ್ದಾದಿಗಳ ಅನುಭವಕ್ಕೆ 'ಪ್ರತ್ಯಯ' ಎಂದು ಹೆಸರು. ಮನಸ್ಸಿನಲ್ಲಿಯೇ ಉಂಟಾಗುವ ಸುಖ, ದುಃಖ, ಭಯ–ಮುಂತಾದ ಮನೋಭಾವಗಳಿಗೆ 'ವೇದನೆ' ಎಂದು ಹೆಸರು. ಈ ಎರಡು ಬಗೆಯ ಅನುಭವಗಳಿಗಿಂತಲೂ ಬೇರೆಯಾದ ಮತ್ತೊಂದು ಬಗೆಯ ಅನುಭವವನ್ನು **'ಸಾಕ್ಷ್ಯನುಭವ'** ಎಂದು ಕರೆಯುತ್ತಾರೆ. ಈ ಮೂರನೆಯ ಬಗೆಯ ಅನುಭವವು ನಮಗೆಲ್ಲ ಇದೆ ಎಂಬುದು ನಿಶ್ಚಿತ; ಆದರೆ ಇದು ಸಾಕ್ಷಿಯ ಮೂಲಕವಾಗಿ ಆಗುವದೆಂಬುದು ಅನೇಕರಿಗೆ ಗೊತ್ತಿರುವದಿಲ್ಲ. ಉದಾಹರಣೆಗೆ ನಮ್ಮ ಕನಸನ್ನೂ ನಿದ್ರೆಯನ್ನೂ ಎಚ್ಚರವನ್ನೂ ನೇರಾಗಿಯೇ ಮತ್ತೊಂದು ಕರಣದ ಬಯಕೆಯಿಲ್ಲದೆಯೇ ಅನುಭವಿಸುತ್ತೇವೆ. ಹೀಗಿದ್ದರೂ

ಮೂರು ಅವಸ್ಥೆಗಳನ್ನೂ ನಮ್ಮ ಬುದ್ಧಿಯೇ ಬೆಳಗಿತೆಂದು ತಿಳಿಯುತ್ತೇವಲ್ಲದೆ ಸಾಕ್ಷ್ಯನುಭವವನ್ನು ಲೆಕ್ಕಕ್ಕೇ ತೆಗೆದುಕೊಂಡಿರುವದಿಲ್ಲ. ತತ್ತ್ವಶಾಸ್ತ್ರಕ್ಕೆಲ್ಲ ಮೂಲಾಧಾರವಾಗಿರುವ ಈ ಅನುಭವವನ್ನು ಲೆಕ್ಕಕ್ಕೆ ಹಿಡಿಯದಿರುವದ ರಿಂದಲೇ ವೇದಾಂತೇತರದರ್ಶನಗಳಲ್ಲಿ ಸಿದ್ಧಾಂತವು ವ್ಯವಸ್ಥೆಗೆ ಬಾರದೆ ಇರುತ್ತದೆ. (53–64)

ಸಾಕ್ಷಿಯಾದ ಆತ್ಮವನ್ನು ಸೂಕ್ಷ್ಮವಾದ ಮನೋವೃತ್ತಿಯಿಂದಲೇ ಕಂಡುಕೊಳ್ಳಬೇಕು– ಎಂದು ಶ್ರುತಿಯಲ್ಲಿ ಹೇಳಿರುತ್ತದೆ. ಆದ್ದರಿಂದ ಶಾಸ್ತ್ರದ ಮತ್ತು ಆಚಾರ್ಯರ ಉಪದೇಶದಿಂದಲೂ ಶಮದಮಾದಿಗಳಿಂದಲೂ ಸಂಸ್ಕಾರವನ್ನು ಹೊಂದಿರುವ ಮನಸ್ಸೇ ಆತ್ಮನನ್ನು ಕಂಡುಕೊಳ್ಳುವದಕ್ಕೆ ಕರಣವು. ಆತ್ಮದಲ್ಲಿ ಕಲ್ಪಿಸಿದ ಅನಾತ್ಮವನ್ನೆಲ್ಲ ಅಲ್ಲಗಳೆದಮೇಲೆ ಆ ಮನಸ್ಸು ಅಮನಸ್ಕಾಗಿಬಿಡುವದು, ಎಂದರೆ ಆತ್ಮನೇ ಆಗಿಬಿಡುವುದು. (65–70)

ಹೀಗೆ ಆತ್ಮನ ಧರ್ಮವಲ್ಲದ್ದನ್ನು ತೆಗೆದುಹಾಕಿ ಆತ್ಮಸ್ವರೂಪ ವನ್ನುಳಿಸುವದರಿಂದ ಮಾತ್ರವೇ ಶ್ರುತಿಯು ಪ್ರಮಾಣವೆನಿಸಿರುತ್ತದೆ. ಆದರೆ ಒಳಹೊಕ್ಕು ನೋಡಿದರೆ ಯಾವ ಪ್ರಮಾಣವಾದರೂ ಜ್ಞೇಯವಿಷಯದ ಅಜ್ಞಾನವನ್ನು ಕಳೆಯುವದರಲ್ಲಿಯೇ ಕೊನೆಗಾಣುತ್ತದೆ. ಅದನ್ನು ನೇರಾಗಿ ವಿಷಯೀಕರಿಸಿ ತಿಳಿಸುವದೇಇಲ್ಲ. ಕತ್ತಲೆಯನ್ನು ಕಳೆದ ಬಳಿಕ ಗಡಿಗೆಯನ್ನು ತೋರಿಸಿಕೊಡುವದೆಂಬ ವ್ಯಾಪಾರವು ಬೇರೆಯಾಗಿ ದೀಪಕ್ಕೆ ಇರುವದಿಲ್ಲವಷ್ಟೆ! ಇದರಂತೆಯೇ ಇಲ್ಲಿ ಪ್ರಮಾಣವ್ಯಾಪಾರವನ್ನೂ ತಿಳಿಯಬೇಕು. (71–77)

ಜ್ಞಾನವು ಜ್ಞಾತೃತ್ವವನ್ನು ಆಶ್ರಯಿಸಿಕೊಂಡಿರುತ್ತದೆ. ಜ್ಞಾತ್ರಾದಿದ್ವೈತವು ಹೋದರೆ ಜ್ಞಾನವು ತಾನೊಂದೇ ಉಳಿಯಲಾರದು. ಅದೂ ಸಹ ಪ್ರಜ್ಞಾನರೂಪನಾದ ಆತ್ಮನಲ್ಲಿ ಒಂದಾಗಿಬಿಡುತ್ತದೆ. ಇದು ನಿಜವಾದರೆ ಆಗ ಶ್ರುತಿಯು ವ್ಯರ್ಥವಾಗುವದಲ್ಲ! ಎಂದು ಶಂಕಿಸುವದಕ್ಕೆ ಅವಕಾಶವಿಲ್ಲ. ಏಕೆಂದರೆ ಅದು ಅಷ್ಟರಲ್ಲಿಯೇ ತನ್ನ ಕೆಲಸವನ್ನು ಮಾಡಿಬಿಟ್ಟಿರುತ್ತದೆ ಯಾದ್ದರಿಂದ ಆಮೇಲೆ ಅದು ವ್ಯರ್ಥವಾದರೂ ಚಿಂತೆಯಿಲ್ಲ. ಆತ್ಮಸ್ವರೂಪದಲ್ಲಿ ನಿಂತಾಗ ವೇದಗಳೂ ವೇದಗಳಲ್ಲದೆಹೋಗುವವು– ಎಂದು ಶ್ರುತಿಯೇ ಹೇಳುತ್ತಿದೆ. (77–83)

ವೇದಾಂತಿಗಳು ನಿರ್ವಿಶೇಷವಾದ ಬ್ರಹ್ಮವನ್ನು ತಿಳಿಯಿಸಿಕೊಡುವದಕ್ಕೆ ಒಂದು ನ್ಯಾಯವನ್ನು ಉಪಯೋಗಿಸುತ್ತಾರೆ. ಅದಕ್ಕೆ **'ಅಧ್ಯಾರೋಪಾಪವಾದನ್ಯಾಯ'**ವೆಂದು ಹೆಸರು. ಇದರಲ್ಲಿ ಅಜ್ಞರ ಭಾವನೆಯನ್ನೇ ಅನುಸರಿಸಿ ಬ್ರಹ್ಮದಲ್ಲಿರುವದೆಂದು ಇಟ್ಟುಕೊಂಡದ್ದು **ಅಧ್ಯಾರೋಪವು**; ಸರಿಯಾದ ತಿಳಿವಳಿಕೆಯಿಂದ ಅಲ್ಲಗಳೆದದ್ದು **ಅಪವಾದವು**. ತಿಳಿದವರಾದ ಆಚಾರ್ಯರೂ ಹೀಗೇಕೆ ಅಧ್ಯಾರೋಪಪೂರ್ವಕವಾಗಿ ಬೋಧಿಸುವರು? ಎಂದರೆ ಇದೊಂದೇ ಇಲ್ಲಿ ಸರಿಯಾದ ಉಪದೇಶಕ್ರಮವಾಗಿರುತ್ತದೆ. ಅಧ್ಯಾರೋಪಾಪವಾದನ್ಯಾಯವನ್ನು ಲೋಕದಲ್ಲಿಯೂ ಬೋಧಕರು ಉಪಯೋಗಿಸುವದುಂಟು. ಉದಾಹರಣೆಗೆ ಸಂಖ್ಯೆಯನ್ನು ಹುಡುಗರಿಗೆ ತಿಳಿಯಿಸಿಕೊಡುವದಕ್ಕೆ ಕೆಲವು ಗೆರೆಗಳನ್ನೂ, ಅಕಾರಾದ್ಯಕ್ಷರಗಳನ್ನು ಕಲಿಸಿ ಕೊಡುವದಕ್ಕೆ ಕಾಗದ, ಮಷಿ– ಮುಂತಾದವುಗಳನ್ನೂ ಸಾಧನವಾಗಿ ಉಪಯೋಗಿಸುವದನ್ನು ನಾವೆಲ್ಲರೂ ಕಂಡಿರುತ್ತೇವೆ. ಅವುಗಳನ್ನು ನೆಪಮಾಡಿಕೊಂಡು ಸಂಖ್ಯೆಯನ್ನೂ ಅಕ್ಷರವನ್ನೂ ಅವರು ತಿಳಿಸಿಕೊಡುತ್ತಾರೆ. ಅಲ್ಲವೆ? ಹೀಗೆಯೇ ಶಿಷ್ಯರ ಬುದ್ಧಿಗೆ ಅನುಗುಣವಾದ ಆಯಾ ಅಧ್ಯಾರೋಪಗಳಿಂದ ಶ್ರುತಿಯೂ ಆಚಾರ್ಯರೂ ಆತ್ಮತತ್ತ್ವವನ್ನು ಬೋಧಿಸುತ್ತಾರೆ.

ಉಪನಿಷತ್ತಿನಲ್ಲಿ ಅಂಗೀಕರಿಸಿರುವ ಹಲವು ಅಧ್ಯಾರೋಪಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಲಾಗುವುದು; ಇವುಗಳಿಂದ ಬೇರೆಯ ಪ್ರಕಾರಗಳನ್ನೂ ಜಿಜ್ಞಾಸುಗಳು ಊಹಿಸಿಕೊಳ್ಳಬೇಕು. (84–98)

ಆತ್ಮನಲ್ಲಿ ಜ್ಞೇಯತ್ವವನ್ನು ಅಧ್ಯಾರೋಪಮಾಡಿ, ಮಿಕ್ಕದ್ದು ಯಾವದೂ ಅರಿತುಕೊಳ್ಳುವದಕ್ಕೆ ತಕ್ಕದ್ದಲ್ಲವೆಂದು ಕೆಲವು ಶ್ರುತಿಗಳು ತಿಳಿಸುತ್ತವೆ. ಈ ಅಧ್ಯಾರೋಪವು ಮಿಕ್ಕದ್ದೊಂದೂ ಜ್ಞೇಯವಲ್ಲ ಎಂಬುದನ್ನೇ ಅಲ್ಲದೆ ಆತ್ಮನನ್ನು ತಿಳಿದುಕೊಂಡರೆ ಅನಾತ್ಮವನ್ನೆಲ್ಲ, ಜ್ಞೇಯವನ್ನೆಲ್ಲ ತಿಳಿದುಕೊಂಡಂತೆಯೇ ಆಯಿತು; ಅಲ್ಲಿ ಅಜ್ಞಾನವು ಆತ್ಯಂತಿಕವಾಗಿ ಹೋಗಿರುತ್ತದೆ, ಆಗ ಜ್ಞಾತೃಜ್ಞೇಯ ವಿಭಾಗವೇ ಉಳಿದಿರುವದಿಲ್ಲ– ಎಂಬಿವೇ ಮುಂತಾದ ಸಿದ್ಧಾಂತಗಳನ್ನು ಮನಗಾಣುವದಕ್ಕೂ ಸಾಧನವಾಗಿರುತ್ತದೆ. ಮುಂದೆ ಒಂದೊಂದು ಅಧ್ಯಾರೋಪದ ಮೂಲಕ ಒಂದೊಂದು ವಿಕಲ್ಪದ ನಿಷೇಧವನ್ನು ತಿಳಿಸುತ್ತದೆಯಾದರೂ ಇದರಂತೆಯೇ ಪ್ರತಿಯೊಂದು ಅಧ್ಯಾರೋಪವನ್ನೂ ಹಲವು ವಿಕಲ್ಪಗಳ ನಿರಾಸಕ್ಕೆ ಉಪಯೋಗಿಸಬಹುದು. (99–104)

ಜ್ಞಾತೃತ್ವವನ್ನು ಅಧ್ಯಾರೋಪಮಾಡಿ ಆತ್ಮನು ಜ್ಞೇಯನಲ್ಲವೆಂಬುದನ್ನು ಮತ್ತೆ ಕೆಲವು ಶ್ರುತಿಗಳು ತಿಳಿಸುತ್ತವೆ. ಕೆಲವು ವಚನಗಳಲ್ಲಿ ಆತ್ಮತ್ವವನ್ನು ಆರೋಪಿಸಿ ಜ್ಞಾತೃತ್ವವನ್ನು ಕಳೆದುಹಾಕಿರುತ್ತದೆ; ಮತ್ತೆ ಕೆಲವು ವಚನಗಳಲ್ಲಿ ಸಾಕ್ಷಿತ್ವವನ್ನು ಆರೋಪಿಸಿ ಆತ್ಮತ್ವವನ್ನೂ ಕಳೆದುಹಾಕಿರುತ್ತದೆ. ಹೀಗೆಯೇ ವೇದಾಂತವಾಕ್ಯಗಮ್ಯತ್ವವನ್ನಿಟ್ಟುಕೊಂಡು ಪ್ರತ್ಯಕ್ಷಾದಿಗಳಿಂದ ಪ್ರಮೇಯನೆಂಬುದನ್ನು ಅಲ್ಲಗಳೆಯುವುದು, ವಾಙ್ಮನಸ್ಸುಗಳಿಗೆ ಅಗೋಚರನೆಂದು ಹೇಳಿ ವಿಷಯತ್ವವನ್ನೇ ಕಿತ್ತುಹಾಕುವುದು; ಜಗತ್ಕಾರಣವನ್ನು ಹೇಳಿ ಕಾರ್ಯತ್ವವನ್ನು ದೂರಮಾಡುವದು, ಬಳಿಕ ಕಾರಣತ್ವವನ್ನೂ ಇಲ್ಲವೆನ್ನುವದು. ಜೀವತ್ವವನ್ನು ತೋರಿಸಿ ಜಡತ್ವದಿಂದ ಬಿಡಿಸಿ ಹೇಳುವದು, ಉಪಾಸ್ಯತ್ವವನ್ನು ಹೇಳಿ ಸಂಸಾರಿತ್ವವನ್ನೂ ತಪ್ಪಿಸುವದು; ಅವಸ್ಥಾಸಾಕ್ಷಿತ್ವವನ್ನು ಒಪ್ಪಿ ಪರಿಚ್ಛಿನ್ನತ್ವವನ್ನು ಕಳೆಯುವದು, ತುರೀಯತ್ವವನ್ನು ತಿಳಿಸಿ ಆ ಸಾಕ್ಷಿತ್ವವನ್ನು ತೆಗೆದುಹಾಕುವುದು; ಈಶತ್ವವನ್ನು ಹೇಳಿ ದಾಸ್ಯತ್ವವನ್ನು ಅಲ್ಲಗಳೆಯುವದು, ಅದ್ವಯತ್ವವನ್ನು ಹೇಳಿ ಈಶತ್ವವನ್ನು ಅಲ್ಲಗಳೆಯುವದು– ಈ ಪ್ರಕಾರವಾಗಿ ಒಂದೊಂದು ಅಧ್ಯಾರೋಪದಿಂದಲೂ ಶ್ರುತಿಯು ಬೇರೊಂದು ಕಲ್ಪನೆಯನ್ನು ಕಳೆಯುತ್ತಾ ಹೋಗಿರುತ್ತದೆಯಲ್ಲದೆ ಕೊನೆಗೆ ತನ್ನ ವಾಚ್ಯತ್ವವನ್ನೂ ಅಲ್ಲಗಳೆದೇ ವಿಶ್ರಾಂತವಾಗುತ್ತದೆ. (105–119)

ಬ್ರಹ್ಮದಲ್ಲಿ ಯಾವ ಶಬ್ದಪ್ರವೃತ್ತಿನಿಮಿತ್ತವೂ ಇಲ್ಲವಾದ್ದರಿಂದ ಅದನ್ನು ಯಾವ ಶಬ್ದದಿಂದಲೂ ತಿಳಿಸುವದಕ್ಕೆ ಆಗುವದಿಲ್ಲ. ಆದ್ದರಿಂದ ಶಾಸ್ತ್ರವು ಲೋಕಸಿದ್ಧವಾದ ವಿಭಾಗವನ್ನು ಇಟ್ಟುಕೊಂಡು ನಮ್ಮಗಳಿಗೆಲ್ಲ ಆತ್ಮನಾಗಿರುವ, ವಸ್ತುವನ್ನು ಮೊದಲು ತಿಳಿಸಿಕೊಡುತ್ತದೆ. ಆ ಬಳಿಕ ಅದ್ವೈತತತ್ತ್ವವೇ ಪರಮಾರ್ಥವೆಂಬುದು ನಿರ್ವಿವಾದವಾಗಿ ಸಿದ್ಧವಾಗಿ ಬಿಡುತ್ತದೆ. ಅಷ್ಟೆ. (120–125)

# ಮೂರನೆಯ ಅಧ್ಯಾಯ

ಅಧ್ಯಾಸದಿಂದಲೇ ಕರ್ತೃತ್ವಭೋಕ್ತೃತ್ವರೂಪವಾದ ಸಂಸಾರಾನರ್ಥವು ಕಲ್ಪಿತವಾಗಿದೆ. ಈ ಅಧ್ಯಾಸವನ್ನು ತೊಲಗಿಸಿ ಆತ್ಮೈಕತ್ವವಿದ್ಯೆಯನ್ನು ಉಪದೇಶಿಸುವದಕ್ಕೆಂದೇ ಎಲ್ಲಾ ಉಪನಿಷತ್ತುಗಳೂ ಹೊರಟಿರುತ್ತವೆ. ಅಧ್ಯಾಸವೆಂದರೆ ಒಂದನ್ನು ಇನ್ನೊಂದೆಂದು ಭಾವಿಸುವ ತಪ್ಪುತಿಳಿವಳಿಕೆ.

ಉದಾಹರಣೆಗೆ ಹಗ್ಗವನ್ನು ಹಾವೆಂದೂ ಕಪ್ಪೆಯಚಿಪ್ಪನ್ನು ಬೆಳ್ಳಿಯೆಂದೂ ತಿಳಿಯುವದು ಅಧ್ಯಾಸವು. ಇದರಂತೆಯೇ ಆತ್ಮನಲ್ಲಿ ಅನಾತ್ಮವನ್ನೂ ಅನಾತ್ಮ ಧರ್ಮಗಳನ್ನೂ, ಅನಾತ್ಮದಲ್ಲಿ ಆತ್ಮತ್ವವನ್ನೂ ಆತ್ಮಧರ್ಮಗಳನ್ನೂ ಕಲ್ಪಿಸುವದು ಅಧ್ಯಾಸವೆಂದು ವೇದಾಂತಿಗಳು ಹೇಳುತ್ತಾರೆ. (1–13)

ಆತ್ಮಾನಾತ್ಮಾಧ್ಯಾಸದಲ್ಲಿ ಕೆಲವರಿಗೆ ಒಂದು ಸಂಶಯ ತೋರಬಹುದು. ಏನೆಂದರೆ: ಅಧ್ಯಾಸವೆಂದರೆ ಎದುರಿಗಿರುವ ಒಂದನ್ನು ಇನ್ನೊಂದು ಎಂದು ತಿಳಿಯುವ ಭ್ರಾಂತಿ. ಆದರೆ ಆತ್ಮನು ಪ್ರತ್ಯಕ್ಷನಲ್ಲ, ವಿಷಯನೂ ಅಲ್ಲ. ಮತ್ತು ಆತ್ಮನು ಸತ್ಯ, ಅನಾತ್ಮವು ಮಿಥ್ಯೆ. ಹೀಗಿರುವಾಗ ಪರಸ್ಪರ ಅಧ್ಯಾಸವು ಸಂಭವಿಸುವದು ಹೇಗೆ? ಇದಕ್ಕೆ ಉತ್ತರವಿಷ್ಟೆ: ವ್ಯವಹಾರದಲ್ಲಿ ಆತ್ಮನು ನಾನೆಂಬ ಅರಿವಿಗೆ ಗೋಚರನಾಗಿಯೇ ತೋರುತ್ತಾನಾದ್ದರಿಂದ ಆತ್ಮನೂ ವಿಷಯನಾದಂತೆ ಆಯಿತು. ಎರಡನೆಯದಾಗಿ ಪ್ರತ್ಯಕ್ಷವಾದ ವಿಷಯದಲ್ಲಿಯೇ ಅಧ್ಯಾಸಮಾಡುತ್ತಾರೆಂಬ ನಿಯಮವೇನೂ ಇಲ್ಲ. ಅಪ್ರತ್ಯಕ್ಷವಾದ ಆಕಾಶವನ್ನೇ ಇದು ಕೊಪ್ಪರಿಗೆಯಾಕಾರವಾಗಿದೆ, ಇದರ ಬಣ್ಣವು ನೀಲಿಯಾಗಿದೆ– ಎಂದು ಅವಿವೇಕಿಗಳು ಅಧ್ಯಾಸಮಾಡುತ್ತಾರೆ. ಇನ್ನು ವಿರುದ್ಧಸ್ವಭಾವದ ಆತ್ಮಾನಾತ್ಮ ಗಳನ್ನು ಒಂದನ್ನು ಮತ್ತೊಂದೆಂದು ತಿಳಿದುಕೊಳ್ಳುವದಕ್ಕೆ ಕಾರಣವಿಲ್ಲ ವೆಂಬುದು ಸರಿಯೇ ಆದರೂ ಜನರು ಹಾಗೆ ತಿಳಿದುಕೊಂಡಿರುತ್ತಾರೆ. ಅನುಭವದಲ್ಲಿ ಕಂಡಿರುವದನ್ನು ಯುಕ್ತಿಯಿಂದ ಇಲ್ಲವೆನ್ನುವದು ಸರಿಯಾಗಲಾರದಷ್ಟೆ? ಲೋಕದಲ್ಲಿ 'ನಾನು' ಎನ್ನುವದರೊಂದಿಗೆ ಇಂದ್ರಿಯ ಧರ್ಮಗಳನ್ನಾಗಲಿ ಮನಸ್ಸಿನ ಧರ್ಮಗಳನ್ನಾಗಲಿ ಸೇರಿಸಿಕೊಳ್ಳದೆ ವ್ಯವಹರಿಸುವದಕ್ಕೇ ಆಗಲಾರದು. ಆದ್ದರಿಂದ 'ನಾನು' ಎಂಬುದೇ ಅಧ್ಯಾಸವೆಂದು ವೇದಾಂತಿಗಳು ಹೇಳುವರು. ಲೌಕಿಕವೈದಿಕವ್ಯವಹಾರಗಳಿಗೇ ಅಲ್ಲದೆ ಮೋಕ್ಷಶಾಸ್ತ್ರಕ್ಕೂ ಈ ಅಧ್ಯಾಸವೇ ಮೂಲವಾಗಿದೆ. ಹೀಗೆ ಒಂದು ವಸ್ತುವನ್ನು ಮತ್ತೊಂದೆಂದು ತಪ್ಪಾಗಿ ತಿಳಿದುಕೊಳ್ಳುವ ಅಧ್ಯಾಸಕ್ಕೆ ಆತ್ಮಾನಾತ್ಮರುಗಳ ಸ್ವರೂಪವನ್ನು ವಿಂಗಡಿಸಿ ತಿಳಿದುಕೊಳ್ಳದಿರುವದೇ ಕಾರಣವಾಗಿದೆ. (14–28)

ಸಂಸಾರಾನರ್ಥಹೇತುವಾದ ಅಧ್ಯಾಸವನ್ನು ಪಂಡಿತರು 'ಅವಿದ್ಯೆ' ಎಂದು ಕರೆಯುವರು. ಸರಿಯಾಗಿ ವಸ್ತುಸ್ವರೂಪವನ್ನು ನಿಶ್ಚಯಿಸುವ

ತಿಳಿವಳಿಕೆಗೆ 'ವಿದ್ಯೆ' ಎಂದು ಹೆಸರು. ಇದು ಹೀಗಿರುವದರಿಂದ ಯಾವದರಲ್ಲಿ ಯಾವದನ್ನು ಅಧ್ಯಾಸಮಾಡುತ್ತಾರೋ ಅದರಿಂದಾಗಬಹುದಾದ ದೋಷ ವಾಗಲಿ ಗುಣವಾಗಲಿ ಎಳ್ಳಷ್ಟೂ ಅದಕ್ಕೆ ಸಂಬಂಧಿಸಿರುವದಿಲ್ಲ. ಉದಾಹರಣೆಗೆ ಹಗ್ಗವನ್ನು ಹಾವೆಂದು ನಾವು ತಪ್ಪಾಗಿ ತಿಳಿದುಕೊಂಡರೆ ಅದರಲ್ಲಿ ಹಾವಿನ ವಿಷವೇನೂ ಇರುವದಿಲ್ಲ; ಮರುಭೂಮಿಯನ್ನು ಕೆರೆಯೆಂದು ತಿಳಿದುಕೊಂಡರೆ ಅಲ್ಲಿರುವ ಬಯಲು ಒದ್ದೆಯಾಗಿರುವದಿಲ್ಲ. ಇದರಂತೆಯೇ ಆತ್ಮನಲ್ಲಿ ಅನಾತ್ಮದ ಅಧ್ಯಾಸವಾಗಿದೆ ಎಂದಮಾತ್ರದಿಂದ ಆತ್ಮದಲ್ಲಿ ನಿಜವಾಗಿ ಅನಾತ್ಮದ ಧರ್ಮವೇನೂ ಹತ್ತಿಕೊಂಡಿರುವದಿಲ್ಲ. ವಿದ್ಯೆಯು ಹುಟ್ಟಲು ಅವಿದ್ಯೆ ಹೋಗು ವದು, ಅದರಿಂದ ಸಂಸಾರವ್ಯವಹಾರರೂಪವಾದ ಅನರ್ಥವೂ ತೊಲಗುವದು. (29–35)

ಬಾದರಾಯಣರ ವೇದಾಂತಸೂತ್ರಗಳಿಗೆ ಶಂಕರಾಚಾರ್ಯರು ರಚಿಸಿರುವ ಪೀಠಿಕೆಗೆ ಅಧ್ಯಾಸಭಾಷ್ಯವೆಂದು ಹೆಸರು. ಅದರ ಸಾರವನ್ನು ಈವರೆಗೆ ಇಲ್ಲಿ ಹೇಳಲಾಗಿದೆ. (36–38)

ಅವಿದ್ಯೆ ಎಂದರೆ ಆತ್ಮಾನಾತ್ಮರ ಪರಸ್ಪರಾಧ್ಯಾಸವೇ ಎಂದು ಹಿಂದೆ ಹೇಳಿರುತ್ತದೆಯಷ್ಟೆ. ಆದರೆ ಅವಿದ್ಯೆ ಎಂಬ ಶಬ್ದವು ಅಧ್ಯಾಸವೆಂಬ ಶಬ್ದಕ್ಕಿಂತ ಹೆಚ್ಚು ವ್ಯಾಪಕವಾಗಿರುತ್ತದೆ. ತಪ್ಪಾಗಿ ತಿಳಿಯುವ, ಸಂಶಯವನ್ನು ತಂದೊಡ್ಡುವ, ವಸ್ತುವನ್ನು ಅರಿಯದಿರುವ ತಾಮಸಪ್ರತ್ಯಯವೆಲ್ಲವೂ ಅವಿದ್ಯೆಯೇ ಆಗಿರುತ್ತದೆ. ರೂಪವನ್ನು ಕಾಣದೆ ಇರುವದು, ತಪ್ಪಾಗಿ ಕಾಣುವುದು, ಅಥವಾ ಮಸುಕಾಗಿರುವಂತೆ ಕಾಣುವದು– ಈ ಮೂರು ಬಗೆಯ ಅವಿದ್ಯೆಗಳೂ ಕಣ್ಣಿನಲ್ಲಿ ದೋಷವುಳ್ಳವರಿಗೆ ಹೇಗೆ ಸ್ವಾಭಾವಿಕವೋ ಹಾಗೆ ಆತ್ಮಸ್ವರೂಪದ ಅಗ್ರಹಣ, ಸಂಶಯ, ವಿಪರೀತಪ್ರತ್ಯಯಗಳು ನಮ್ಮ ಬುದ್ಧಿಗೆ ಸ್ವಾಭಾವಿಕವು. ಪರೆಯನ್ನು ತೆಗೆಯಲು ಕಣ್ಣು ಸರಿಯಾಗಿ ಕಾಣಿಸುವಂತೆ ಆತ್ಮೈಕತ್ವವಿದ್ಯೆಯುಂಟಾಗಲು ಬುದ್ಧಿಯಲ್ಲಿದ್ದ ಅವಿದ್ಯೆಯು ಕೂಡಲೇ ತೊಲಗುವದು. ವಿದ್ಯೆ ಬಂದುದನ್ನೂ ಅವಿದ್ಯೆ ಹೋದುದನ್ನೂ ಅರಿಯುವ ಸಾಕ್ಷಿಗೆ ಇವೆರಡೂ ಸೇರಿರುವದಿಲ್ಲ. ಯಾವಾಗಲೂ ಆತ್ಮನು ಅದ್ವಿತೀಯವಾದ ಬ್ರಹ್ಮವೆಂಬುದೊಂದೇ ಪರಮಾರ್ಥವು. ಆದರೂ ವ್ಯವಹಾರ ದಲ್ಲಿರುವ ಈ ವಿದ್ಯಾವಿದ್ಯೆಗಳ ವಿಭಾಗವನ್ನು ಉಪದೇಶಕ್ಕಾಗಿ ಒಪ್ಪಿಕೊಂಡು

ಶ್ರುತಿಯು ಕೊನೆಯಲ್ಲಿ ಈ ಆರೋಪವನ್ನು ಅಲ್ಲಗಳೆದು ತಾನೂ ಶಾಂತವಾಗುತ್ತದೆ. ಆತ್ಮತತ್ತ್ವವು ವಿದ್ಯಾವಿದ್ಯೆಗಳೆರಡನ್ನೂ ಮೀರಿರುತ್ತದೆಯೆಂಬುದೇ ಇಲ್ಲಿ ಪರಮಸಿದ್ಧಾಂತವು. (39–54)

ಈ ಗುಟ್ಟನ್ನರಿಯದವರು ಅವಿದ್ಯೆಗೆ ಕಾರಣವೇನು?– ಎಂದು ಕೇಳುತ್ತಾರೆ. ಕಾರಣ ಭಾವನೆಗೆ ಕಾಲಭಾವನೆಯು ಬೇಕೇಬೇಕು; ಕಾರ್ಯದ ಹಿಂದಿನ ಕಾಲದಲ್ಲಿ ತಪ್ಪದೆ ಇದ್ದೇಇರುವ ಪದಾರ್ಥಕ್ಕೆ ಕಾರಣವೆಂದು ಹೆಸರು. ಆದರೆ ಕಾಲವೇ ಅವಿದ್ಯೆಯ ಮರಿಯಾಗಿರುವಾಗ ಕಾಲದ ಮರಿಯಾದ ಕಾರಣವೆಂಬುದು ಅವಿದ್ಯೆಯ ಹಿಂದೆ ಇರುವದು ಹೇಗೆ? ಅವಿದ್ಯೆಯ ಹಿಂದೆಯೂ ಕಾರಣವಿರಬಹುದೆನ್ನುವದು ಮೊಮ್ಮಗನು ತನ್ನ ಅಜ್ಜನ ಉಪನಯನಗಲ್ಲಿ ತುಪ್ಪಬಡಿಸಿದನೆಂದು ಹೇಳುವ ಗಾದೆಗೆ ಸಮನಾಗುತ್ತದೆಯಷ್ಟೆ. ಮತ್ತು ಭಾಷ್ಯಗಳಲ್ಲೆಲ್ಲ ಅವಿದ್ಯೆಯನ್ನು ನೈಸರ್ಗಿಕ, ಸ್ವಾಭಾವಿಕ– ಎಂದು ವರ್ಣಿಸಿರುವದರಿಂದಲೇ ಅವಿದ್ಯೆಗೆ ಕಾರಣವನ್ನು ಕೇಳುವದು ತಪ್ಪು ಎಂದಾಗುತ್ತದೆ. (55–61)

"ಈ ಅಜ್ಞಾನವು ಯಾರಿಗೆ?– ಎಂದರೆ ಕೇಳುತ್ತಿರುವ ನಿನಗೇ ಎಂದು ಹೇಳುತ್ತೇವೆ. ನಾನು ಈಶ್ವರನೆಂದೇ ಶ್ರುತಿಯಲ್ಲಿ ಹೇಳಿದೆಯಲ್ಲ!– ಎಂದರೆ ಹೀಗೆಂದು ನೀನು ಅರಿತುಕೊಂಡಿದ್ದರೆ ಯಾರಿಗೂ ಅಜ್ಞಾನವೇ ಇಲ್ಲ" ಎಂಬುದಾಗಿ ಸೂತ್ರಭಾಷ್ಯದಲ್ಲಿ ಆಚಾರ್ಯರು ಒಂದುಕಡೆ ತಿಳಿಸಿದ್ದಾರೆ. ಇದರಿಂದ ಅವಿದ್ಯಾದೃಷ್ಟಿಯಲ್ಲಿ ಕೇಳುವಾತನಿಗೇ ಅವಿದ್ಯೆ, ಶಾಸ್ತ್ರದೃಷ್ಟಿಯಲ್ಲಿ ಅವಿದ್ಯೆಯು ಯಾರಿಗೂ ಇಲ್ಲ ಎಂದಂತಾಯಿತು. (62–68)

ಲೋಕದಲ್ಲಿ ಹೀಗೆ ಅವಿದ್ಯೆಯು ಎಲ್ಲರಿಗೂ ಅನುಭವದಲ್ಲಿಯೇ ಇರುತ್ತಿದ್ದರೂ ಅವಿದ್ಯೆಗೆ ಪ್ರಮಾಣವೇನು? ಎಂದೂ ಕೆಲವರು ಕೇಳುತ್ತಿರುವದು ಹಾಸ್ಯಾಸ್ಪದವೇ ಸರಿ. ಅವಿದ್ಯಾಪೂರ್ವಕವಾಗಿಯೇ ಸಕಲಪ್ರಮಾಣಪ್ರಮೇಯ ವ್ಯವಹಾರಗಳೂ ಆಗಿರುವದರಿಂದ ಪ್ರಕೃತಪ್ರಶ್ನೆಗೆ ಉತ್ತರಿಸುವದೆಂದರೆ ಕತ್ತಲೆಯನ್ನು ದೀಪದಿಂದ ತೋರಿಸುವದಕ್ಕೆ ಹೊರಟಂತಾಗುತ್ತದೆಯಷ್ಟೆ. ಅನುಭವದಲ್ಲಿರುವ ವಿಷಯವನ್ನು ತಿಳಿಯುವದಕ್ಕೆ ಪ್ರಮಾಣವೇನೂ ಬೇಕಿರುವದಿಲ್ಲ. (69–73)

ಆತ್ಮನಿಗಿಂತ ಬೇರೆಯಾಗಿ ಯಾವ ವಸ್ತ್ವಂತರವೂ ಇಲ್ಲದಿದ್ದರೂ ಇರುವಂತೆ ಮುಂದೊಡ್ಡುವದು; ಆಮೇಲೆ ಆ ಬೇರೆಯ ವಸ್ತುವಿನಲ್ಲಿ ಕಾಮವುಂಟಾಗುವಂತೆ ಮಾಡುವದು; ಆ ಕಾಮದಿಂದ ಆ ವಸ್ತುವನ್ನು ಪಡೆಯುವದಕ್ಕೆ ಕ್ರಿಯೆಯನ್ನು ಮಾಡುವಂತೆ ಮಾಡುವದು– ಇದೆಲ್ಲವೂ ಅವಿದ್ಯಾಕಾರ್ಯ ಅಥವಾ ಮಾಯೆ ಎನ್ನಿಸಿಕೊಳ್ಳುವದು. ಈ ಮಾಯೆಯ ಸ್ವರೂಪವನ್ನು ಇನ್ನುಮುಂದೆ ವಿಶದವಾಗಿ ವಿವರಿಸಲಾಗುವುದು. (74–77)

ಮಾಯೆ ಎಂದರೆ ಅವಿದ್ಯೆಯಿಂದ ಕಲ್ಪಿತವಾಗಿರುವ ಹುಸಿತೋರಿಕೆ ಎಂದರ್ಥ. ನಾಮರೂಪಗಳಿಂದೊಡಗೂಡಿದ ಈ ಮಾಯೆಯು ಜನ್ಮ, ಜಾಗರ, ಸೃಷ್ಟ್ಯಾದ್ಯವಸ್ಥೆಗಳಲ್ಲಿ ತೋರುತ್ತಲೂ ಸುಷುಪ್ತಿ, ಮರಣ, ಪ್ರಳಯಾದ್ಯವಸ್ಥೆಗಳಲ್ಲಿ ಅಡಗುತ್ತಲೂ ಇರುತ್ತದೆ. ಹೀಗೆ ತೋರಿ ಅಡಗುತ್ತಿರುವದೇ ಇದರ ಸ್ವಭಾವವು. ತೋರಿದಾಗ ವ್ಯಕ್ತವೆಂತಲೂ ಅಡಗಿದಾಗ ಅವ್ಯಕ್ತವೆಂತಲೂ ಇದನ್ನು ಕರೆಯುವರು. ಈ ಅವ್ಯಕ್ತರೂಪವನ್ನೇ ಅವ್ಯಾಕೃತ, ಬೀಜ, ಆಕಾಶ, ಅಕ್ಷರ, ಈಶಶಕ್ತಿ, ಪ್ರಕೃತಿ, ಮಹಾಸುಪ್ತಿ– ಮುಂತಾದ ಹೆಸರುಗಳಿಂದ ಶ್ರುತಿಸ್ಮೃತಿಗಳಲ್ಲಿ ಕರೆದಿದೆ. ಮತ್ತು ತೋರುವಾಗ ಆತ್ಮನೇ ಎಂದಾಗಲಿ ಆತ್ಮನಿಗಿಂತ ಬೇರೆಯೆಂದಾಗಲಿ ಗೊತ್ತುಮಾಡಿ ಹೇಳಲಶಕ್ಯವಾಗಿರುವದರಿಂದ ಅನಿರ್ವಚನೀಯವೆಂದೂ ಇದಕ್ಕೆ ಹೆಸರುಂಟು. (78–91)

ಅವಿದ್ಯಾಕಲ್ಪಿತವಾದ ಜಗತ್ತಿನ ದೃಷ್ಟಿಯಿಂದಲೇ ಸುಷುಪ್ತ್ಯಾದ್ಯವಸ್ಥೆಗಳಲ್ಲಿ ಅದರ ಬೀಜವು ಕಲ್ಪಿಸಲ್ಪಟ್ಟಿರುವದರಿಂದ ಜಗತ್ತಿನಂತೆ ಅದೂ ಸಹ ಮಿಥ್ಯೆಯೇ ಆಗಿದೆ. ಸಾಂಖ್ಯರು ಈ ಜಗದ್ಬೀಜವನ್ನೇ ಪ್ರಧಾನವೆಂದು ಹೆಸರಿಸಿ ಸತ್ಯವಾಗಿರುವದೆಂದೂ ಅಚೇತನವಾಗಿದ್ದರೂ ತಾನೇ ಸ್ವತಂತ್ರವಾಗಿ ಜಗತ್ತಾಗಿ ಪರಿಣಮಿಸುವದೆಂದೂ ಹೇಳುತ್ತಾರೆ. ವೇದಾಂತಶಾಸ್ತ್ರದಲ್ಲಿ ಈ ಬೀಜಶಕ್ತಿಯು ಈಶ್ವರನ ಅಧೀನಕ್ಕೆ ಒಳಪಟ್ಟಿರುವದಾಗಿಯೂ ಭ್ರಾಂತಿಯಿಂದ ಆತ್ಮನಲ್ಲಿ ಆರೋಪಿಸಲ್ಪಟ್ಟಿರುವದಾಗಿಯೂ ಹೇಳಿರುತ್ತದೆ. (92–102)

ದೇಹಿಗಳಿಗೆ ಮೋಹವನ್ನುಂಟುಮಾಡುವ ಈ ಮಾಯೆಯು ವಿಷಯಗಳ ತೃಷ್ಣೆಯನ್ನು ಹೆಚ್ಚಿಸಿ ಆತ್ಮಸ್ವರೂಪವನ್ನು ಮರೆಮಾಡುವದಲ್ಲದೆ ದುಃಖವನ್ನು ಸುಖವೆಂತಲೂ, ಸುಳ್ಳನ್ನು ಸತ್ಯವೆಂತಲೂ, ದೋಷವನ್ನು ಗುಣವೆಂತಲೂ ತೋರಿಸುವದು. ಈ ಮಾಯೆಯಲ್ಲಿ ಸಿಕ್ಕಿಕೊಂಡವರಿಗೆ

ಸಾಧನಮಾರ್ಗವು ಕಷ್ಟವೆನಿಸಿ ಸಂಸಾರವೇ ಸುಲಭವೆನಿಸುವದು. ಆದ್ದರಿಂದಲೇ "ಗುಣಮಯವಾದ ಮಾಯೆಯಿಂದ ಮೋಹಿತರಾಗಿರುವವರಿಗೆ ನನ್ನ ತತ್ತ್ವವು ನಿಲುಕುವದಿಲ್ಲ. ನನ್ನನ್ನೇ ಶರಣುಹೊಕ್ಕವರು ಈ ಮಾಯೆಯನ್ನು ದಾಟುವರು" ಎಂಬುದಾಗಿ ಗೀತಾಚಾರ್ಯನು ಅಪ್ಪಣೆಕೊಡಿಸಿರುತ್ತಾನೆ. (103–112)

ಅವಿದ್ಯೆಯಿಂದ ಕಲ್ಪಿಸಲ್ಪಟ್ಟಿರುವ ಮಾಯಾಶಕ್ತಿಯ ಉಪಾಧಿಯ ಸಂಬಂಧದಿಂದಲೇ ಆತ್ಮನು ಈಶ್ವರ, ಸರ್ವಜ್ಞ, ಸರ್ವೇಶ್ವರ–ಎನಿಸಿಕೊಂಡಿದ್ದಾನೆ. ನಿಜವಾಗಿ ಅವನಲ್ಲಿ ಯಾವ ಧರ್ಮವೂ ಇರುವದಿಲ್ಲ. ಹೀಗಿದ್ದರೂ ವ್ಯವಹಾರದಲ್ಲಿ ತೋರುವ ಕಾರ್ಯಕಾರಣ ಬುದ್ಧಿಯನ್ನು ಸತ್ಯವೆಂದೇ ಪಟ್ಟುಹಿಡಿದಿರುವ ಮಂದಮತಿಗಳಿಗೆ ನಿಜವನ್ನು ತಿಳಿಸುವದಕ್ಕಾಗಿ ಮಾಯೆಯನ್ನು ವೇದಾಂತಿಗಳು ಹೇಳುತ್ತಾರೆ. ಮಾಯೆಯಿಂದ ನಿಜವಾಗಿ ಪ್ರಪಂಚವುಂಟಾಗುತ್ತದೆ ಎಂದು ಭ್ರಾಂತರಾಗಿರುವವರಿಗೆ ಅದು ಅವಿದ್ಯಾಕಲ್ಪಿತವೆಂದು ಹೇಳುತ್ತಾರೆ. ಅವಿದ್ಯೆಯಿಂದ ಹರಡಿಕೊಂಡಿರುವ ಮಾಯೆಯು ವಿದ್ಯೆಯಿಂದ ಬಾಧಿತವಾದಾಗ ಆತ್ಮಸ್ವರೂಪದಲ್ಲಿ ಯಾವ ವಿಭಾಗವೂ ಇರುವದಿಲ್ಲ. ಆಗ ಜೀವನ ಸಂಸಾರಿತ್ವವೂ ಬ್ರಹ್ಮದ ಸ್ರಷ್ಟೃತ್ವವೂ ಹೋಗಿಬಿಟ್ಟಿರುತ್ತದೆ. ಸೃಷ್ಟವಾದ ಶರೀರಗಳಲ್ಲಿ ಪರಮೇಶ್ವರನೇ ಜೀವನಾಗಿ ಒಳಹೊಕ್ಕಿರುವನೆಂದು ಶ್ರುತಿಯು ಹೇಳುತ್ತಿದೆ. 'ಪರಮೇಶ್ವರನೇ ನೀನು' ಎಂದೂ ಉಪದೇಶಿಸುತ್ತದೆ. ಹೀಗಿರುವದರಿಂದ ಜೀವನು ಪರಮೇಶ್ವರನಿಗಿಂತ ಬೇರೆಯಲ್ಲವೆಂದೂ ಈಶ – ಜೀವವ್ಯವಹಾರವು ಅಧ್ಯಸ್ತವೆಂದೂ ತಿಳಿದು ಬರುತ್ತದೆ. ಪರಮಾರ್ಥವಾಗಿ ಆತ್ಮನು ಅಜನು, ಎಂದರೆ ಜನ್ಮಾದಿವಿಕಾರಗಳಿಲ್ಲದವನು, ಅದ್ವೈತನು, ತನಗೆರಡನೆಯವನಿಲ್ಲದವನು–ಎಂಬುದೇ ಸಿದ್ಧಾಂತವು. (113–138)

ಈವರೆಗೂ ಭಾಷ್ಯಾನುಸಾರಿಯಾಗಿ ಅವಿದ್ಯಾ, ಮಾಯಾ, ಜೀವೇಶಭೇದವನ್ನು ವಿವರಿಸಿದ್ದಾಯಿತು. ಇನ್ನು ಮುಂದೆ ವ್ಯಾಖ್ಯಾನಕಾರರು ಇವುಗಳ ಬಗ್ಗೆ ಏನೆಂದು ಹೇಳುತ್ತಾರೆಂಬುದನ್ನು ನೋಡೋಣ. (139–142)

# ನಾಲ್ಕನೆಯ ಅಧ್ಯಾಯ

ಮಾಯೆ, ವಿದ್ಯೆ, ಅವಿದ್ಯೆ, ಅನಿರ್ವಚನೀಯ, ಅಧ್ಯಾಸ– ಈ ಶಬ್ದಗಳಿಗೆ ಭಾಷ್ಯಕಾರರು ಅನುಭವಪ್ರಧಾನವಾಗಿ ಮಾಡಿದ ಅರ್ಥವನ್ನು

ಕೈಬಿಟ್ಟು ವ್ಯಾಖ್ಯಾನಕಾರರು ತರ್ಕದಿಂದ ಅವುಗಳನ್ನು ಹೆಣೆಯಲು ಪ್ರಯತ್ನಿಸಿದ್ದಲ್ಲದೆ ಅವಿದ್ಯೆಗೂ ಪ್ರಪಂಚಕ್ಕೂ ಇರುವ ಕಾರ್ಯಕಾರಣ ಭಾವವನ್ನು ಪರಮಾರ್ಥವೇ ಎನ್ನುವಷ್ಟರಮಟ್ಟಿಗೆ ಅವರು ಗಟ್ಟಿಗೊಳಿಸ ತೊಡಗಿದರು. ಇದರಿಂದ ಆಚಾರ್ಯರ ಪರಿಶುದ್ಧ ವೇದಾಂತಪ್ರಕ್ರಿಯೆಯು ಯಾವರೀತಿಯಾಗಿ ದೋಷಪೂರ್ಣವಾಗಿ ಮಾರ್ಪಡತೊಡಗಿತೆಂಬುದನ್ನು ಶ್ರೀಗಳವರು ತಮ್ಮ ಕೆಲವು ಗ್ರಂಥಗಳಲ್ಲಿ ತೋರಿಸಿಕೊಟ್ಟಿರುತ್ತಾರೆ. ಅದನ್ನೇ ನಾನಿಲ್ಲಿ ಸಂಕ್ಷಿಪ್ತ ರೂಪದಲ್ಲಿ ಹೇಳಬಯಸುತ್ತೇನೆ. (1–17)

ಮಂಡನಮಿಶ್ರನು ಬರೆದಿರುವ "ಬ್ರಹ್ಮಸಿದ್ಧಿ"ಯೆಂಬ ಪ್ರಕರಣದಲ್ಲಿ ವಿಪರೀತಗ್ರಹಣವೇ ಅವಿದ್ಯೆಯೆಂದು ಹೇಳಲಾಗಿದೆ. ಆದರೆ ಈ ಅವಿದ್ಯೆಯೇ ಮಾಯೆಯೆಂದು ಹೇಳಿರುವದು ಭಾಷ್ಯಕ್ಕೆ ಸಲ್ಲದ ಮಾತು. ಆಚಾರ್ಯರ ಪ್ರಕಾರ ನಾಮರೂಪಮಾಯೆಯು ಅವಿದ್ಯಾ ಕಾರ್ಯವಾಗಿದ್ದು ಅವಿದ್ಯೆಯು ನಮ್ಮೆಲ್ಲರ ಬುದ್ಧಿಯಲ್ಲಿರುವ ಸ್ವಾಭಾವಿಕದೋಷವಾಗಿದೆ. ಈ ಮಾಯೆಯು ಅವಿದ್ಯೆಯಿದ್ದಾಗಲೇ ತೋರುವದರಿಂದ ಮಾಯೆಯನ್ನೂ ಅವಿದ್ಯೆಯೆಂದು ಭಾಷ್ಯದಲ್ಲಿ ಒಂದುಕಡೆ ವರ್ಣಿಸಿರುವದುಂಟು. ಮತ್ತೊಂದುಕಡೆ ಅವಿದ್ಯೆಯನ್ನು ನಾಮರೂಪಗಳ ಪಕ್ಷಕ್ಕೇ ಸೇರಿಸಿ ಆತ್ಮನಲ್ಲಿ ಇದೂ ಹುಸಿತೋರಿಕೆಯೇ ಆಗಿರುವದರಿಂದ ಅವಿದ್ಯೆಯನ್ನು ಮಾಯೆ ಎಂದೂ ಕರೆದಿರುವದುಂಟು. ಆದರೆ ಇಷ್ಟು ಮಾತ್ರದಿಂದ ಅವಿದ್ಯೆಯೂ ಮಾಯೆಯೂ ಒಂದೇ ಎಂದು ನಿರೂಪಿಸಲಾಗದು. (18–26)

ಅವಿದ್ಯೆಯು ಅನಿರ್ವಚನೀಯವೆಂಬುದನ್ನು ಸ್ಪಷ್ಟಪಡಿಸಿರುವದು ಬ್ರಹ್ಮಸಿದ್ಧಿಯ ಮತ್ತೊಂದು ವಿಶೇಷವು. ನಾಮರೂಪಗಳು ಬ್ರಹ್ಮಕ್ಕಿಂತ ಭಿನ್ನವೆಂದಾಗಲಿ ಅದರ ಸ್ವರೂಪವೇ ಎಂದಾಗಲಿ ಹೇಳುವದಕ್ಕೆ ಬಾರದೆ ಇರುವದರಿಂದ ಅವು ಅನಿರ್ವಚನೀಯವು ಎಂದು ಶಂಕರಾಚಾರ್ಯರೂ ಹೇಳಿರುತ್ತಾರಾದರೂ ಅವಿದ್ಯೆಯನ್ನು ಈ ರೀತಿ ಅನಿರ್ವಚನೀಯವೆಂದು ಉದಾಹರಿಸಿರುವದು ಎಲ್ಲಿಯೂ ಕಂಡುಬಂದಿರುವದಿಲ್ಲ. ಅವಿದ್ಯೆಯು ಅಂತಃಕರಣಕ್ಕೆ ಸಂಬಂಧಿಸಿದ್ದು, ಮಾಯೆಯು ವಿಷಯ ಕೋಟಿಗೆ ಸೇರಿದ್ದು. ಹೀಗಿದ್ದರೂ ಇವೆರಡನ್ನೂ ಒಂದೇ ಎಂತಲೂ ಅವಿದ್ಯೆಯನ್ನು ಅನಿರ್ವಚನೀಯವೆಂತಲೂ ಹೇಳಿದ್ದರಿಂದ ಬರುಬರುತ್ತಾ ಉಪದೇಶದ ರೀತಿಯೇ ಬದಲಾಯಿಸಿತು. (27–33)

ಪಂಚಪಾದಿಕಾಟೀಕೆಯಲ್ಲಿ 'ಅವಿದ್ಯಾಶಕ್ತಿ' ಎಂಬ ಒಂದಾನೊಂದು ಶಕ್ತಿಯನ್ನು ಅಂಗೀಕರಿಸಿರುತ್ತದೆ. ಅದು ಆತ್ಮನನ್ನು ಆಶ್ರಯಿಸಿ ಅವನನ್ನೇ ಮುಸುಕಿಕೊಂಡಿರುತ್ತದೆ. ಜಡವಸ್ತುಗಳನ್ನು ಸಹ ಅದು ಮುಸುಕಿಕೊಂಡಿದ್ದು ಆಯಾ ವಸ್ತುವಿನ ಜ್ಞಾನವಾದಾಗ ಅಷ್ಟಷ್ಟು ನಾಶವನ್ನು ಹೊಂದುತ್ತದೆ. ಅಧ್ಯಾಸಕ್ಕೆ ಉಪಾದಾನಕಾರಣವಾದ ಅದಕ್ಕೆ ಮೂಲಾವಿದ್ಯೆ, ಮಾಯೆ-ಮುಂತಾಗಿ ಅನೇಕ ಹೆಸರುಗಳಿವೆ. ಪ್ರಪಂಚವು ಕಾಣುವದಕ್ಕೂ ಅದೇ ಕಾರಣ. ಏಕೆಂದರೆ ಪ್ರಪಂಚವೆಲ್ಲವೂ ಅದರ ಪರಿಣಾಮವೇ. ಅದು ಅಗ್ರಹಣ ರೂಪದ ಅಭಾವವಲ್ಲ. ಭಾವರೂಪವಾದ ಅಜ್ಞಾನವು. ತತ್ತ್ವಜ್ಞಾನದಿಂದ ಅದು ಅತ್ಯಂತವಾಗಿ ನಾಶವಾಗುವದಾದರೂ ಜೀವನ್ಮುಕ್ತಿಯಲ್ಲಿ ಸ್ವಲ್ಪಭಾಗವು ಉಳಿದುಕೊಂಡಿದ್ದು ದೇಹವನ್ನು ಬಿಟ್ಟಮೇಲೆಯೇ ಪೂರ್ಣವಾಗಿ ನಾಶವನ್ನು ಹೊಂದುವದು.

ಈ ವಾದವನ್ನು ಸಮರ್ಥಿಸಲು ಪಂಚಪಾದಿಕೆಯಲ್ಲಿ ಅನೇಕ ಪ್ರಮಾಣಗಳನ್ನು ಉದಾಹರಿಸಲಾಗಿದೆ. ಇಲ್ಲಿ ಮಾಯೆಯೆಂದರೆ ಮೂಲಾವಿದ್ಯೆ ಎಂಬ ಹೊಸ ಅರ್ಥವನ್ನು ಕಲ್ಪಿಸಿದ್ದರಿಂದ ಭಾಷ್ಯದ ನಿಯಮವನ್ನು ಮೀರಿದಂತಾಯಿತು. ಈಗ ಅನುಭವಾನುಸಾರಿ ಯುಕ್ತಿಯ ಬಲದಿಂದ ಈ ವಾದದಲ್ಲಿಯ ದೋಷಗಳನ್ನು ತೋರಿಸಲೆತ್ನಿಸುತ್ತೇನೆ. (34–43)

ಮೂಲಾವಿದ್ಯೆಯು ನಮ್ಮ ಅಂತಃಕರಣಕ್ಕೆ ಸಂಬಂಧಪಡದೆ ಅದರಾಚೆಗಿರುವ ಆತ್ಮನನ್ನು ಆಶ್ರಯಿಸಿಕೊಂಡಿರುವದಷ್ಟೆ. ಇದು ನಿಜವಾದರೆ ಮೂಲಾವಿದ್ಯೆಯನ್ನು ಜ್ಞಾನವು ಕಳೆಯುವ ಬಗೆ ಹೇಗೆ? ಜ್ಞಾನವು ಬುದ್ಧಿಯಲ್ಲಿ ತೋರಿಕೊಳ್ಳುವ ವೃತ್ತಿಯಾದ್ದರಿಂದ ಬುದ್ಧಿಯಲ್ಲಿದ್ದ ಅಜ್ಞಾನವನ್ನು ಕಳೆಯುವದು ನಮ್ಮೆಲ್ಲರಿಗೂ ಗೊತ್ತಿರುವ ವಿಷಯ. ಬುದ್ಧಿಯಾಚೆಗಿರುವ ಮೂಲಾವಿದ್ಯೆಯೂ ಅಜ್ಞಾನವಾದ್ದರಿಂದ ಅದೂ ಜ್ಞಾನದಿಂದ ನಿವೃತ್ತಿಯಾಗಬಹುದು- ಎಂದು ಹೇಳುವದು ಯುಕ್ತ್ಯನುಭವಸಮ್ಮತವಲ್ಲ. ಒಂದುವೇಳೆ ಹಾಗೆ ಅದು ಜ್ಞಾನನಾಶ್ಯವೆಂದು ಒಪ್ಪಿದರೂ ಜಗತ್ಕಾರಣವಾದ ಅವಿದ್ಯೆಯು ಜೀವನೊಬ್ಬನ ಜ್ಞಾನದಿಂದ ತೊಲಗುವದೆನ್ನುವದು ಹಾಸ್ಯಾಸ್ಪದವಾದ ಮಾತು. ಹಾಗಾಗುವಂತಿದ್ದರೆ ಈ ಹಿಂದೆಯೇ ಯಾವನೋ ಒಬ್ಬ ಜೀವನಿಗೆ ಉಂಟಾದ ಜ್ಞಾನಮಾತ್ರದಿಂದಲೇ ಅದು ನಾಶಹೊಂದಬೇಕಿತ್ತು.

ನಿಜವಾಗಿಯೂ ಅವಿದ್ಯೆಯು ಅಂದು ನಾಶವಾಗಿದ್ದರೆ ಜಗತ್ತು ಇಂದೂ ತೋರುತ್ತಿರುವದೇಕೆ? ಅಧ್ಯಾಸಕ್ಕೆ ಕಾರಣವಾದದ್ದು ಅಧ್ಯಸ್ತವಾಗಲಾರದಷ್ಟೆ, ಅಧ್ಯಸ್ತವಲ್ಲದ ಯಾವದೂ ಜ್ಞಾನದಿಂದ ನಾಶಹೊಂದಲಾರದು. ಕಾರ್ಯ ಕಾರಣವೇ ಮುಂತಾದ ಸಕಲವ್ಯವಹಾರಕ್ಕೂ ಕಾಲದ ಅಪೇಕ್ಷೆಯಿದೆ. ಕಾಲವಾದರೋ ಆತ್ಮನಲ್ಲಿ ಅಧ್ಯಸ್ತವಾಗಿದೆ. ಹೀಗೆ ಅಧ್ಯಸ್ತವಾದ ಕಾಲದಲ್ಲಿಯೇ ಕಾರ್ಯಕಾರಣಗಳು ತೋರಬೇಕಾಗಿರುವದರಿಂದ ಅಧ್ಯಾಸಕ್ಕೂ ಒಂದು ಕಾರಣವಿದೆ ಎನ್ನುವದು ಯುಕ್ತವಾಗಲಾರದು. (44–60)

ಆರೋಪಕ್ಕಿಂತ ಮೊದಲೇ ಆತ್ಮನಲ್ಲಿ ಜಡಶಕ್ತಿಯನ್ನು ಒಪ್ಪಿದ್ದರಿಂದ ಈ ವಾದವು ಸಂಪ್ರದಾಯಕ್ಕೂ ವಿರೋಧವಾಯಿತು. ಏಕೆಂದರೆ ಶಕ್ತಿಶಕ್ತರ ಭೇದವು ಅವಿದ್ಯಾಕಾರ್ಯವೆಂತಲೂ ಅವಿದ್ಯೆಯು ಬುದ್ಧಿಗೆ ಸೇರಿದ್ದೆಂತಲೂ ಶ್ರುತಿಯು ಹೇಳುತ್ತದೆ. ಇನ್ನು ಮೂಲಾವಿದ್ಯೆ ಎಂಬ ಸೊಲ್ಲು ಭಾಷ್ಯದಲ್ಲಿ ಎಲ್ಲಿಯೂ ಕಂಡುಬರುವದೇ ಇಲ್ಲ. ಅಧ್ಯಾಸವನ್ನೇ ಅವಿದ್ಯೆಯೆಂದು ಹೇಳಿದೆಯೇ ಹೊರತು ಅಧ್ಯಾಸಕ್ಕೆ ಮೂಲಾವಿದ್ಯೆಯು ಉಪಾದಾನಕಾರಣವೆಂಬ ಮಾತೇ ಭಾಷ್ಯದಲ್ಲಿಲ್ಲ. ವಿಂಗಡಿಸಿ ತಿಳಿದುಕೊಳ್ಳದಿರುವದೆಂಬ ಅಗ್ರಹಣವೇ ಅಧ್ಯಾಸಕ್ಕೆ ನಿಮಿತ್ತವು ಎಂಬುದೇ ಭಾಷ್ಯಕಾರರ ಪ್ರಕ್ರಿಯೆಯು. ವಾರ್ತಿಕದಲ್ಲಿಯೂ ಅಗ್ರಹಣವು ಅನ್ಯಥಾಗ್ರಹಣಕ್ಕೂ ಸಂಶಯಕ್ಕೂ ಕಾರಣವೆಂದಿರುತ್ತದೆಯೇ ಹೊರತು ಅನ್ಯಥಾಗ್ರಹಣಕ್ಕೆ ಅಗ್ರಹಣವು ಉಪಾದಾನಕಾರಣವೆಂದು ತಿಳಿಸಿರುವದಿಲ್ಲ. ಅಧ್ಯಾಸ, ಅಗ್ರಹಣ, ಸಂಶಯ– ಇವು ಮೂರೂ ಅವಿದ್ಯೆಯೆನಿಸಿಕೊಂಡಿದ್ದರೂ ಅಧ್ಯಾಸವನ್ನೇ ಪ್ರಧಾನವಾಗಿ ಅವಿದ್ಯೆಯೆಂದು ಭಾಷ್ಯಗಳಲ್ಲಿ ಉದಾಹರಿಸಲಾಗಿರುತ್ತದೆ. (61–73)

ಅಧ್ಯಾಸಭಾಷ್ಯದಲ್ಲಿರುವ 'ಮಿಥ್ಯಾಜ್ಞಾನ' ಎಂಬ ಮಾತನ್ನು 'ಮಿಥ್ಯಾ ಅಜ್ಞಾನ' ಎಂದು ಒಡೆದುಕೊಂಡು ಮಿಥ್ಯೆ ಎಂದರೆ ಅನಿರ್ವಚನೀಯವೆಂದೂ ಅಜ್ಞಾನವೆಂದರೆ ಜಡಾತ್ಮಕವಾದ ಅವಿದ್ಯಾಶಕ್ತಿಯೆಂದೂ ನಿಮಿತ್ತವೆಂದರೆ ಅಧ್ಯಾಸೋಪಾದಾನವೆಂದೂ ಪಂಚಪಾದಿಕೆಯಲ್ಲಿ ಅರ್ಥಮಾಡಿರುತ್ತದೆ. ಆದರೆ ಭಾಷ್ಯದಲ್ಲೆಲ್ಲಿಯೂ ಕಂಡುಬಾರದಿರುವ ಈ ಅರ್ಥವನ್ನು ಒಪ್ಪುವದರಿಂದ ಅದ್ವೈತಹಾನಿಯೇ ಸಂಭವಿಸುತ್ತದೆ. (74–78)

ಲೋಕದಲ್ಲಿ ಹಗ್ಗವನ್ನು ಹಾವೆಂದು ತಪ್ಪಾಗಿ ತಿಳಿದವರು ನಿಜವನ್ನು ಅರಿತಾಗ ಒಂದು ಹಾವು ಹಗ್ಗದಲ್ಲಿ ಆಗ್ಗೆ ಹುಟ್ಟಿ ನಾಶವಾಯಿತು ಎಂದೇನೂ ತಿಳಿಯುವದಿಲ್ಲ. ಏಕೆಂದರೆ ಅಧ್ಯಾಸವೆಂಬ ಶಬ್ದಕ್ಕೆ ತಪ್ಪುತಿಳಿವಳಿಕೆ ಎಂದಿಷ್ಟೇ ಅರ್ಥವಿದ್ದು ತಪ್ಪುತಿಳಿವಳಿಕೆಯಿಂದ ಕಂಡದ್ದು ನಿಜವಾಗಲಾರದು. ಈ ಮಾತನ್ನು ಸಮರ್ಥಿಸಿ ಆಚಾರ್ಯರು ಮಾಂಡೂಕ್ಯಭಾಷ್ಯದಲ್ಲಿ ಹಗ್ಗದ ಹಾವು ಮನಸ್ಸಿನ ವಿಕಲ್ಪಮಾತ್ರವಾಗಿರುವದರಿಂದ ಅದು ಹಗ್ಗದಲ್ಲಿಯೂ ಮನಸ್ಸಿನಲ್ಲಿಯೂ ಇವೆರಡರ ನಡುವೆಯೂ ಹುಟ್ಟುವದೆಂಬುದಾಗಲಿ ನಾಶ ವಾಗುವದೆಂಬುದಾಗಲಿ ಇರುವದಿಲ್ಲ ಎಂದು ಹೇಳಿರುತ್ತಾರೆ. ಹೀಗಿದ್ದರೂ ಪಂಚಪಾದಿಕೆಯಲ್ಲಿ ಈ ವಿಷಯವನ್ನು ಕುರಿತು ಅನೇಕ ವಾದವಿವಾದಗಳು ಎದ್ದುಕೊಂಡರುತ್ತವೆ. ಅವರು ಹೇಳುವದೇನೆಂದರೆ: ವಿಷಯವಿಲ್ಲದೆ ಜ್ಞಾನ ವಾಗಲಾರದು. ಆದ್ದರಿಂದ ಭ್ರಾಂತಿಯಕಾಲಕ್ಕೆ ಸಂಸ್ಕಾರ, ಅವಿದ್ಯೆ, ಇಂದ್ರಿಯ ದೋಷ– ಇವು ಮೂರೂ ಸೇರಿ ಅಲ್ಲಿ ಒಂದು ಬಗೆಯ ವಸ್ತುವು ಹುಟ್ಟಿರ ಬೇಕಾಯಿತು. ಅದು ನಾವೆಲ್ಲರೂ ತಿಳಿದಿರುವ ವಸ್ತುವಿಗಿಂತ ಬೇರೆಯತರ ದ್ದಾಗಿಯೂ ಇರಬೇಕಾಯಿತು. ಅದು ಇರುವದಲ್ಲ, ಇಲ್ಲದ್ದೂ ಅಲ್ಲ. ಈ ಕಾರಣದಿಂದ ಅದನ್ನು ಅನಿರ್ವಚನೀಯವೆಂದಿರುತ್ತದೆ. (79–92)

ಇದರ ಪರಿಣಾಮವಾಗಿ ಸರ್ವರೂ ಒಪ್ಪಿರುವ ದೃಷ್ಟಾಂತವು ಚರ್ಚಾಸ್ಪದವಿಷಯವಾಯಿತು. ಇಲ್ಲಿಂದ ಮುಂದಕ್ಕೆ ವೇದಾಂತದರ್ಶನದಲ್ಲಿ ಖ್ಯಾತಿಬಾಧಾದಿವಾದಗಳು ಸ್ಥಾನವನ್ನು ಪಡೆದವಲ್ಲದೆ ಭಾಷ್ಯಕಾರರು ಹೇಳಿರುವ ಅನಿರ್ವಚನೀಯಶಬ್ದದ ಅಭಿಪ್ರಾಯಕ್ಕಿಂತ ವಿಲಕ್ಷಣವಾದ ಸತ್, ಅಸತ್, ಸದಸದ್ವಿಲಕ್ಷಣವಾದ ಇರುವಿಕೆಯೊಂದು ಉಂಟೆಂದೂ ತಿಳಿಯುವಂತಾಯಿತು. (93–97)

ಭಾಮತೀಕಾರರು ಮೂಲಾವಿದ್ಯೆಯನ್ನು ಒಪ್ಪಿರುತ್ತಾರೋ ಇಲ್ಲವೋ ಎಂದು ಹೇಳುವದು ಕಷ್ಟವಾಗಿರುತ್ತದೆ. ಆದರೆ ಅವಿದ್ಯೆಯನ್ನು ಅವರು ಅನಿರ್ವಚನೀಯವೆಂದೂ ಮಾಯೆಯೆಂದು ಉದಾಹರಿಸಿರುವರಲ್ಲದೆ ಅದು ಜ್ಞಾನನಾಶ್ಯವೆಂದೂ ಸ್ಪಷ್ಟವಾಗಿ ಹೇಳಿರುತ್ತಾರೆ. (98–100)

ಭಾಮತಿಯಲ್ಲಿ ಅಧ್ಯಾಸವೂ ಜೀವತ್ವವೂ ಬೀಜಾಂಕುರಗಳಂತೆ ಅನಾದಿಯಾಗಿರುತ್ತವೆ ಎಂದು ಬರೆದಿರುತ್ತಾರಲ್ಲದೆ ಇನ್ನೂ ಕೆಲವು

ಸಂದರ್ಭಗಳಲ್ಲಿ ಈ ಅನಾದಿತ್ವವಾದವೆಂಬ ಬ್ರಹ್ಮಾಸ್ತ್ರವನ್ನು ಅವರು ಉಪಯೋಗಿಕೊಂಡಿರುತ್ತಾರೆ. ಮಾಂಡೂಕ್ಯಕಾರಿಕೆಯಲ್ಲಿ ಗೌಡಪಾದರು ಬೀಜಾಂಕುರನ್ಯಾಯದ ಅನಾದಿತ್ವವಾದವನ್ನು ತಿರಸ್ಕರಿಸಿದ್ದನ್ನು ಇವರು ವಿಚಾರಮಾಡಿರುವದಿಲ್ಲ. (101–107)

ಆತ್ಮಾಶ್ರಿತವಾದ ಅವಿದ್ಯೆಯು ಒಂದೇ ಎನ್ನುವವರ ಪಕ್ಷದಲ್ಲಿ ಒಬ್ಬನಿಗೆ ಮುಕ್ತಿಯಾದರೆ ಎಲ್ಲರಿಗೂ ಮುಕ್ತಿಯಾಗಬೇಕಾಗುತ್ತದೆ. ಆದ್ದರಿಂದ ಭಾಮತಿಯಲ್ಲಿ ಅವಿದ್ಯೆಯು ಒಬ್ಬೊಬ್ಬ ಜೀವರಿಗೆ ಒಂದೊಂದರಂತೆ ಅನೇಕವಾಗಿವೆಯೆಂದೂ ಯಾವ ಜೀವನಿಗೆ ವಿದ್ಯೆಯುಂಟಾಗುವದೋ ಅವನ ಅವಿದ್ಯೆಯು ಮಾತ್ರ ಹೋಗುತ್ತದೆಯೆಂದೂ ಹೇಳಿರುತ್ತದೆ. ನಾನಾತ್ವವೇ ಅವಿದ್ಯಾಕಲ್ಪಿತವೆಂಬ ಶ್ರುತಿ ಮತ್ತು ಭಾಷ್ಯಗಳಿಗೆ ಈ ವಾದವು ಅತ್ಯಂತ ವಿರುದ್ಧವಾಗಿರುತ್ತದೆಯೆನ್ನುವದರಲ್ಲಿ ಸಂದೇಹವೇ ಇಲ್ಲ. (108–116)

ಶ್ರವಣಮನನಗಳೆಂದರೆ ಧಾರಣೆಯೆಂದೂ ನಿದಿಧ್ಯಾಸನವೆಂದರೆ ಧ್ಯಾನವೆಂದೂ ದರ್ಶನವೆಂದರೆ ಸಮಾಧಿಯೆಂದೂ ವರ್ಣಿಸಿರುವ ಮಿಶ್ರರು ವೇದಾಂತವಿಚಾರದಲ್ಲಿ ಪಾತಂಜಲ ಯೋಗವನ್ನು ಉಪಾಯದಿಂದ ಹೊಗಿಸಿ ಸಾಧನಗಳ ರೀತಿಯನ್ನೇ ಕೆಡಿಸಿಬಿಟ್ಟಿರುತ್ತಾರೆ. ಭಾಷ್ಯವಿರುದ್ಧವಾದ ಇಂಥ ಇನ್ನೂ ಅನೇಕ ವಿಚಾರಗಳು ಭಾಮತಿಯಲ್ಲಿರುವದರಿಂದ ಸಾಧಕರಾದವರು ಇವುಗಳ ಸೆಳೆತಕ್ಕೆ ಸಿಕ್ಕದಂತೆ ಬಹಳ ಎಚ್ಚರದಿಂದಿರುವದು ಅವಶ್ಯ. (117–123)

ಇಷ್ಟಸಿದ್ಧಿಯು ಅವಿದ್ಯೋಪಾದಾನವಾದ ಮತ್ತು ಅನಿರ್ವಚನೀಯವಾದ– ಇವೆರಡನ್ನೇ ಮುಖ್ಯವಾಗಿಟ್ಟುಕೊಂಡು ಹೊರಟಿರುವ ಪ್ರಕರಣ. ಇದರಲ್ಲಿ ಉದ್ದಾಮಪಂಡಿತರೆನಿಸಿದ ವಿಮುಕ್ತಾತ್ಮರು ಪಾದಿಕೆಯನ್ನು ಬೆಂಬಿಡಿದು ಭಾಮತಿಯನ್ನು ತೆಗಳಿರುವದು ಕಂಡುಬರುತ್ತದೆ. ಭಾಷ್ಯಕ್ಕೆ ಹೊಂದದಿರುವ ಇದರಲ್ಲಿಯ ಎರಡು ಮುಖ್ಯವಿಚಾರಗಳನ್ನು ಮಾತ್ರ ಈಗ ಇಲ್ಲಿ ತೋರಿಸಲೆತ್ನಿಸುತ್ತೇನೆ. (124–128)

ವಿದ್ಯೆಯಿಂದ ಅವಿದ್ಯೆಯು ಆತ್ಯಂತಿಕವಾಗಿ ತೊಲಗದೆ ಜ್ಞಾನಿಯ ಶರೀರವಿರುವವರೆಗೆ ಅವನಲ್ಲಿ ಅವಿದ್ಯಾಲೇಶವು ಉಳಿದುಕೊಂಡಿರುತ್ತದೆ; ಇದೇ

ಗೌಣವೆನಿಸಿದ ಜೀವನ್ಮುಕ್ತಿಯು. ಶರೀರಪಾತಾನಂತರ ಅವಿದ್ಯಾಲೇಶವು ಇಲ್ಲದಂತಾಗಿ ಮುಖ್ಯವಾದ ವಿದೇಹಮುಕ್ತಿಯು ಲಭಿಸುವದು. ಆಮೇಲೆ ಜ್ಞಾನಿಗೆ ಮತ್ತೊಂದು ಶರೀರವು ಬರುವದಿಲ್ಲವೆಂಬುದಕ್ಕೆ ಶಾಸ್ತ್ರವೇ ಪ್ರಮಾಣವು. ಇದು ಇಷ್ಟಸಿದ್ಧಿಯ ಸ್ಪಷ್ಟ ಅಭಿಪ್ರಾಯವಾಗಿರುತ್ತದೆ. (129–131)

ಈ ಅಭಿಪ್ರಾಯವು ಶ್ರುತಿಭಾಷ್ಯಗಳಿಗೆ ವಿರೋಧವಾಗಿದೆ. ಏಕೆಂದರೆ ಜ್ಞಾನವುಂಟಾಗಲು ಅಜ್ಞಾನವು ಕೂಡಲೇ ಅತ್ಯಂತಿಕವಾಗಿ ನಾಶವಾಗುವದೆಂದು ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ತಿಳಿಸಿಕೊಟ್ಟಿರುತ್ತಾರೆ. ಒಂದುವೇಳೆ ಪೂರ್ಣಮುಕ್ತಿಯು ಈಗಲೇ ನಮ್ಮ ಅನುಭವದಲ್ಲಿಲ್ಲದಿದ್ದರೆ ಸತ್ತಮೇಲೆ ಅದು ದೊರಕುವದೆನ್ನುವದಕ್ಕೆ ಪ್ರಮಾಣವೇನು? ಶಾಸ್ತ್ರವೇ ಅದಕ್ಕೆ ಪ್ರಮಾಣವೆನ್ನುವದಾದರೆ ಇತರ ವಾದಿಗಳು ಹೇಳುವಂತೆ ಮೋಕ್ಷವು ಕೇವಲ ನಂಬಿಕೆಯಾಯಿತು. ಇದರಿಂದ ಶ್ರುತಿಯಲ್ಲಿ ಹೇಳಿರುವ ಅದ್ವೈತವು ಈಗಲೇ ನಮ್ಮ ಅನುಭವಕ್ಕೆ ಬರತಕ್ಕದ್ದೆಂಬ ಆಚಾರ್ಯರ ವಾಣಿಯು ಸುಳ್ಳಾಗಬೇಕಾಯಿತು. ನಮ್ಮ ಆತ್ಮನು ಯಾವಾಗಲೂ ಅಶರೀರಿಯು, ಅಪ್ರಾಣವು ಎಂದು ಶ್ರುತಿಯು ಬೋಧಿಸುತ್ತಿದೆ. ಆದ್ದರಿಂದ ಜೀವನ್ಮುಕ್ತಿಯೇ ಮುಖ್ಯ, ವಿದೇಹಮುಕ್ತಿಯೇ ಗೌಣ ಎನ್ನುವದನ್ನು ಆಚಾರ್ಯರು ಒಪ್ಪಿರುತ್ತಾರೆ. ಈ ತಿಳಿವಳಿಕೆಯು ತಿರುವುಮುರುವಾಗಲಾಗಿ ವೇದಾಂತ ಪದ್ಧತಿಯೇ ಬದಲಾಯಿಸಿತು. (132–141)

ಲೋಕದ ಜನರ ದೃಷ್ಟಿಯಿಂದಲೇ ಜ್ಞಾನಿಗೆ ಪ್ರಾರಬ್ಧವನ್ನು ಒಪ್ಪಿರುತ್ತದೆಯೇ ಹೊರತು ನಿಜವಾಗಿಯೂ ಅವನ ದೃಷ್ಟಿಯಲ್ಲಿ ಇದೆಲ್ಲವೂ ಬ್ರಹ್ಮವೇ ಆಗಿರುತ್ತದೆಯಲ್ಲದೆ ತಾನೂ ಬ್ರಹ್ಮವೇ ಆಗಿರುತ್ತಾನೆ. ಮುಕ್ತಿಯನ್ನು ಪಡೆಯುವದಕ್ಕೆ ಮರಣವನ್ನೇನೂ ಹೊಂದಬೇಕಾಗಿಲ್ಲ ಎಂದು ಆಚಾರ್ಯರು ಸೂತ್ರಭಾಷ್ಯದಲ್ಲಿ ತಿಳಿಸಿಕೊಟ್ಟಿರುತ್ತಾರೆ. ಇದನ್ನು ಮರೆತದ್ದರಿಂದಲೇ ಜನರಲ್ಲಿ ಪ್ರಾರಬ್ಧ ವಿಚಾರದ ಗುಲ್ಲು ಬಲವಾಗಿ ವೇದಾಂತದ ನಾಲ್ಕು ಮಾತುಗಳನ್ನು ಕಲಿತವರೂ ಸ್ವೇಚ್ಛೆಯಾಗಿ ವರ್ತಿಸುತ್ತಾ ಅದು ತಮ್ಮ ಪ್ರಾರಬ್ಧವೆಂದು ಹೇಳಿಕೊಂಡು ತಿರುಗುವದಕ್ಕೆ ಹಾದಿಯಾಯಿತು. (142–148)

ಭಾಮತೀಕಾರರಿಗೆ ಬೀಜಾಂಕುರನ್ಯಾಯವು ಬ್ರಹ್ಮಾಸ್ತ್ರವಾದಂತೆ ಇಷ್ಟಸಿದ್ಧಿಕಾರರಿಗೆ ಅನಿರ್ವಚನೀಯವಾದವು ಬ್ರಹ್ಮಾಸ್ತ್ರವಾಗಿದೆ. ಇಂಥ

ಅನಿರ್ವಚನೀಯತತ್ತ್ವವಾದ ಆತ್ಮಾವಿದ್ಯೆಯು ನಾಶವಾಗುವುದು ಹೇಗೆ? ಎಂಬ ಪ್ರಶ್ನೆಗೆ ಜ್ಞಾನದಿಂದಲೇ ಅದು ನಾಶವಾಗುವದು ಎಂದು ಉತ್ತರಿಸಿರುವರಲ್ಲದೆ ತರ್ಕದಿಂದ ಅದನ್ನು ಬಲವಾಗಿ ಪ್ರತಿಪಾದಿಸಿರುತ್ತಾರೆ. (149–154)

ಇದರಿಂದ ವಿದ್ಯಾವಿದ್ಯೆಗಳೆರಡೂ ಬುದ್ಧಿಯ ಕ್ಷೇತ್ರಕ್ಕೆ ಸೇರಿದವುಗಳಾಗಿವೆ ಎಂಬ ಸಿದ್ಧಾಂತವು ತಪ್ಪಿಹೋಯಿತು. ವಿದ್ಯೆಯು ಹುಟ್ಟುವುದೂ ಅದರ ಅಭಾವರೂಪವಾದ ಅವಿದ್ಯೆಯು ತೊಲಗುವದೂ ನೇರಾಗಿ ನಮ್ಮ ಅನುಭವಕ್ಕೇ ವಿಷಯವಾಗಿರುತ್ತವೆಯಾದ್ದರಿಂದ ಅವು ಆತ್ಮನ ಧರ್ಮವಲ್ಲ, ಅಂತಃಕರಣಧರ್ಮವೇ ಎಂಬುದನ್ನು ಭಾಷ್ಯಗಳಲ್ಲಿ ಸ್ಪಷ್ಟಗೊಳಿಸಿರುತ್ತದೆ. ಇದನ್ನು ಕೈಬಿಟ್ಟು ಅವಿದ್ಯಾಮಾಯೆಯು ಆತ್ಮನಲ್ಲಿ ಸೇರಿರುತ್ತದೆ ಎಂದು ಬಡಬಡಿಸುವ ಜನರಿಗೆ ಬೋಧಿಸಲು ಇನ್ನು ಅನುಭವವೊಂದೇ ಸರಿಯಾದ ಉಪಾಯವಾಗಿದೆ. ಭಾಷ್ಯವಿರುದ್ಧವಾದ ಇಂಥ ತರ್ಕಗಳೇ ಭಾಷ್ಯಾಭಿಪ್ರಾಯವನ್ನರಿಯುವದಕ್ಕೆ ಆತಂಕವನ್ನುಂಟುಮಾಡಿದೆಯೆಂದು ಇಲ್ಲಿ ಹೇಳಿದರೆ ಯಾರೂ ಕೋಪವಶರಾಗಬಾರದು. ಮತ್ತೊಬ್ಬರ ಕೋಪಕ್ಕಂಜಿ ಸಟೆಯನ್ನು ಕೊಂಡಾಡುವದು ಪರಮಾರ್ಥ ಸಾಧಕನ ಲಕ್ಷಣವೂ ಅಲ್ಲ. ಆದ್ದರಿಂದ ವಿವರಣಪ್ರಸ್ಥಾನದಲ್ಲಿಯೂ ಹೀಗೆಯೇ ಭಾಷ್ಯವಿರುದ್ಧವಾದ ಅಭಿಪ್ರಾಯಗಳು ಹೇಗೆ ಸೇರಿಕೊಂಡಿವೆಯೆಂಬುದನ್ನು ಇನ್ನುಮುಂದೆ ತೋರಿಸಲೆತ್ನಿಸುತ್ತೇನೆ. ಹೀಗೆ ತೋರಿಸುವದರಿಂದ ಭಾಷ್ಯದ ಹೆಚ್ಚುಗಾರಿಕೆಯು ಮನಸ್ಸಿಗೆ ಚೆನ್ನಾಗಿ ನಾಟುವುದು. (155–173)

## ಐದನೆಯ ಅಧ್ಯಾಯ

ವಿವರಣವ್ಯಾಖ್ಯಾನವು ಒಂದು ದೃಷ್ಟಿಯಿಂದ ಪಂಚಪಾದಿಕೆಗೆ ವಾರ್ತಿಕವಿದ್ದಂತಿದೆ. ಇದರಲ್ಲಿ ಅವಿದ್ಯೋಪಾದಾನವನ್ನು ಆದರಿಸಿರುವದಲ್ಲದೆ ಅವಚ್ಛೇದವಾದವನ್ನು ನಿರಾಕರಣೆ ಮಾಡಿ ಪ್ರತಿಬಿಂಬವಾದವನ್ನು ಸಮರ್ಥಿಸಲಾಗಿದೆ. ಘಟಾಕಾಶ, ಸೂರ್ಯಪ್ರತಿಬಿಂಬ– ಇವುಗಳ ದೃಷ್ಟಾಂತವನ್ನು ಬಲ್ಲವರು ಉದಾಹರಿಸಿರುವದು ಜೀವತ್ವವೂ ಸುಖಃದುಃಖಾದಿ ಸಂಸಾರಭೋಗವೂ ಬ್ರಹ್ಮದಲ್ಲಿಲ್ಲ ಎಂಬುದನ್ನು ವಿಶದಗೊಳಿಸುವದಕ್ಕೇ ಹೊರತು ನಿಜವಾಗಿ ಬ್ರಹ್ಮಕ್ಕೆ ಏತರಿಂದಾದರೂ ಅವಚ್ಛೇದವಾಗಿದೆಯೆಂದಾಗಲಿ ಪ್ರತಿಬಿಂಬವು ಆಗಿದೆಯೆಂದಾಗಲಿ ತಿಳಿಸುವದಕ್ಕಲ್ಲ. ಇದನ್ನರಿಯದೆ

ಪ್ರತಿಬಿಂಬವು ನಿಜವಾಗಿಯೂ ಆಗಿದೆಯೋ ಎನ್ನುವ ರೀತಿಯಲ್ಲಿ ಇದರಲ್ಲಿ ತರ್ಕವನ್ನು ಬೆಳೆಸಿರುವದು ಎಷ್ಟುಮಾತ್ರಕ್ಕೂ ಸರಿಯಲ್ಲ. ಇದರಂತೆಯೇ ವೇದಾಂತಕ್ಕೆ ಪಾತಂಜಲಯೋಗವನ್ನು ಗಂಟುಹಾಕಿ ಸಮಾಧಿಶಬ್ದಕ್ಕೆ ಸಂಪ್ರಜ್ಞಾತ, ಅಸಂಪ್ರಜ್ಞಾತ– ಎಂಬ ಅರ್ಥವನ್ನು ಮಾಡಿರುವದರಿಂದ ವೇದಾಂತ ಪ್ರಕ್ರಿಯೆಯೇ ಬದಲಾಯಿಸಿದೆ. (1–14)

ವಿದ್ಯಾವಿದ್ಯೆಗಳೆಂಬ ವ್ಯವಹಾರದಿಂದ ಬಂಧಮೋಕ್ಷಗಳು ಆತ್ಮನಲ್ಲಿ ಆರೋಪಿಸಲ್ಪಟ್ಟಿವೆಯೆಂದು ಭಾಷ್ಯಕಾರರು ಹೇಳಿರುತ್ತಾರೆ. ಹೀಗಲ್ಲದೆ ಬಂಧಮುಕ್ತಿಗಳು ನಿಜವಾಗಿಯೇ ಆಗುತ್ತವೆ ಎಂದು ಕಲ್ಪಿಸಿದರೆ ಅನಾದಿಯಾದ ಬಂಧಕ್ಕೆ ಕೊನೆಯುಂಟೆಂದೂ ಆದಿಯುಳ್ಳ ಮೋಕ್ಷವು ಅನಂತವಾಗಿರುವ ದೆಂದೂ ಒಪ್ಪಬೇಕಾಗುವುದು. ಇದು ದೃಷ್ಟವಿರುದ್ಧ. ಬಂಧವೆಂಬ ಒಂದು ಅವಸ್ಥೆಯಿಂದ ಮುಕ್ತಿ ಎಂಬ ಮತ್ತೊಂದು ಅವಸ್ಥೆಗೆ ಬರುವ ಆತ್ಮನು ನಿತ್ಯನೆಂದು ಹೇಳುವದಕ್ಕೂ ಆಗುವದಿಲ್ಲ. ಹೀಗಿರುವಲ್ಲಿ ಅನಾದಿಯಾದ ಪ್ರಾಗಭಾವವು ನಾಶವಾಗುವದೂ ಆದಿಯುಳ್ಳ ಪ್ರಧ್ವಂಸಾಭಾವವು ನಿತ್ಯವಾಗಿರು ವದೂ ಲೋಕದಲ್ಲಿ ಕಂಡಿದೆಯಾದ್ದರಿಂದ ಅನಾದಿಗೆ ನಾಶವುಂಟೆಂದೂ ಆದಿಗೆ ಅಂತ್ಯವಿಲ್ಲವೆಂದೂ ಏತಕ್ಕೆ ಕಲ್ಪಿಸಬಾರದು? ಎಂಬುದಾಗಿ ತಾರ್ಕಿಕರು ಹೇಳುವ ಮಾತಿಗೆ ವಿವರಣಕಾರರು ಮರುಳಾಗಿ ಬಂಧಮೋಕ್ಷಗಳಿಗೆ ಅವರಂತೆಯೇ ಪರಿಹಾರವನ್ನು ಹೇಳಿರುತ್ತಾರೆ. ಗೀತಾಭಾಷ್ಯದಲ್ಲಿ ಆಚಾರ್ಯರು ಅಭಾವವು ವಂಧ್ಯಾಪುತ್ರಾದಿಗಳಂತೆ ವಿಕಲ್ಪಮಾತ್ರವೇ ಆಗಿರುವದರಿಂದ ಪ್ರಾಗಭಾವ, ಪ್ರಧ್ವಂಸಾಭಾವ– ಎಂದು ಅದರಲ್ಲಿ ವಿಶೇಷಗಳಿರುವವೆಂಬುದು ಸರಿಯಲ್ಲ ಎಂದು ತಾರ್ಕಿಕರ ಮತದಲ್ಲಿ ದೋಷವನ್ನು ತೋರಿಸಿಕೊಟ್ಟಿರುವದು ಇವರ ಲಕ್ಷ್ಯಕ್ಕೇ ಬಂದಿರುವದಿಲ್ಲ. ಹೀಗೆ ಅನೇಕರೀತಿಯಲ್ಲಿ ಈ ಪ್ರಸ್ಥಾನವು ಭಾಷ್ಯಕ್ಕಿಂತ ತೀರ ಭಿನ್ನವಾಗಿದ್ದರೂ ಬಹಳ ಜನರು ಇವರ ಮತವನ್ನು ಆಚಾರ್ಯರದೆಂದೇ ಭಾವಿಸುವಷ್ಟರಮಟ್ಟಿಗೆ ಈಗಿನ ಅದ್ವೈತವೇದಾಂತದಲ್ಲಿ ಇದು ತನ್ನ ಸ್ಥಾನವನ್ನು ಕಲ್ಪಿಸಿಕೊಂಡಿರುತ್ತದೆ. (15–33)

ಇಲ್ಲಿಂದ ಮುಂದಕ್ಕೆ ಹೊರತೋರಿಕೊಂಡ ಗ್ರಂಥಗಳೆಲ್ಲವೂ ಇದುವರೆಗೆ ತೋರಿಸುತ್ತಾ ಬಂದ ದೋಷಗಳನ್ನು ಒಳಗೊಂಡೇ ಇರುತ್ತದೆ. ಮೂಲಗ್ರಂಥಕ್ಕೂ ವ್ಯಾಖ್ಯಾನಗಳಿಗೂ ಹೋಲಿಸಿ ನಿಜವನ್ನು ಕಂಡು

ಹಿಡಿಯುವದಕ್ಕೆ ಯಾರೊಬ್ಬರೂ ಪ್ರಯತ್ನಿಸಲಿಲ್ಲ. ಆ ಗ್ರಂಥಗಳಲ್ಲಿ ಮುಖ್ಯವಾಗಿ ಮಾಧ್ವರಾಮಾನುಜಮತಗಳವರು ಹೇಳಬಹುದಾದ ಅದ್ವೈತದ ಮೇಲಿನ ಆಕ್ಷೇಪಗಳನ್ನು ಪರಿಹರಿಸುವ ತರ್ಕದ ರೀತಿಯೇ ಹೇರಳವಾಗಿರುವದು ಕಂಡುಬರುತ್ತದೆ ಮತ್ತೆ ಕೆಲವರು ಕೊನೆಗೆ ಅದ್ವೈತವೇ ನಿಲ್ಲುವದೆಂಬ ಬಲವಾದ ಶ್ರದ್ಧೆಯನ್ನು ಇಟ್ಟುಕೊಂಡು ಹೇಗೋ ತಮಗೆ ತೋಚಿದ ಒಂದು ಪ್ರಕ್ರಿಯೆಯನ್ನು ಸಿದ್ಧಾಂತಕ್ಕೆ ಗಂಟುಹಾಕಿ ಸಾಮಾನ್ಯ ಜನರಿಗೆ ಬೋಧಿಸುವಂಥ ಗ್ರಂಥಗಳನ್ನು ರಚಿಸಿರುತ್ತಾರೆ. ಭಾಷ್ಯವು ಪಂಡಿತರ ಸ್ವತ್ತಾಗಲು ಈ ಚಿಕ್ಕ ಗ್ರಂಥಗಳೇ ಹೆಚ್ಚು ಪ್ರಚಾರಕ್ಕೆ ಬಂದವು. ಒಟ್ಟಿನಲ್ಲಿ ಪಂಚಪಾದಿಕೆಯನ್ನು ಮೊದಲುಗೊಂಡು ಈವರೆಗೂ ವೇದಾಂತಸಂಪ್ರದಾಯವು ಅವನತಿಯನ್ನು ಹೊಂದುತ್ತಲೇ ಬಂದಿದ್ದು ಇದರ ಫಲವಾಗಿ ಪ್ರಚಲಿತವೇದಾಂತವು ಯಾವ ಹಾದಿಯನ್ನು ಹಿಡಿಯಿತೆಂಬುದನ್ನು ಈಗ ತೋರಿಸುತ್ತೇನೆ. (34–54)

ಆತ್ಮನನ್ನು ಆಶ್ರಯಿಸಿಕೊಂಡಿರುವ ತ್ರಿಗುಣಾತ್ಮಕವಾದ ಪ್ರಕೃತಿಯೇ ಜಗತ್ತಿಗೆ ಕಾರಣವಾದ ಮೂಲಾವಿದ್ಯೆಯೆಂದು ಹೇಳಲ್ಪಡುವದು. ಆ ಪ್ರಕೃತಿಯು ಸತ್ತ್ವಪ್ರಧಾನವಾಗಿ ಮಾಯೆ ಎಂತಲೂ ರಜೋಪ್ರಧಾನವಾಗಿ ಅವಿದ್ಯೆ ಎಂತಲೂ ಎರಡು ಬಗೆಯಾಗಿರುವದು. ಮಾಯೆಯಲ್ಲಿ ಪ್ರತಿಬಿಂಬಿಸಿದ ಆತ್ಮಚೈತನ್ಯವೇ ಈಶ್ವರನು. ಅವಿದ್ಯೆಯಲ್ಲಿ ಪ್ರತಿಬಿಂಬಿಸಿದ ಚೈತನ್ಯವೇ ಜೀವನು. 'ತತ್ತ್ವಮಸಿ' ವಾಕ್ಯದಲ್ಲಿ ಈಶ್ವರನೇ ತತ್ಪದ ವಾಚ್ಯಾರ್ಥನೂ ಜೀವನೇ ತ್ವಂಪದವಾಚ್ಯಾರ್ಥನೂ ಎನಿಸಿದ್ದು, ಆತ್ಮಜ್ಞಾನದಿಂದ ಮಾಯೆ, ಅವಿದ್ಯೆ–ಎಂಬೀ ಉಪಾಧಿದ್ವಯಗಳನ್ನು ಕಳೆಯಲಾಗಿ ಉಳಿಯುವ ಬ್ರಹ್ಮವೇ 'ಅಸಿ' ಪದದ ಲಕ್ಷ್ಯಾರ್ಥವಾಗಿರುವದು. (55–59)

ಆತ್ಮನಲ್ಲಿ ಹುಟ್ಟಿದ ಅಜ್ಞಾನವು ಅವನನ್ನೇ ಆವರಿಸಿಕೊಂಡು ವಿಕ್ಷೇಪರೂಪವನ್ನು ತಾಳಿದಾಗ ಅವನೇ ಚಿದಾಭಾಸನೆಂದು ಹೇಳಲ್ಪಡುವನು. ಅನಂತರ ಬ್ರಹ್ಮವಿದ್ಯೆಯೆಂಬ ಪರೋಕ್ಷಜ್ಞಾನವೂ ನಾನೇ ಬ್ರಹ್ಮವೆಂಬ ಅಪರೋಕ್ಷಜ್ಞಾನವೂ ಉಂಟಾಗಲು ಚಿದಾಭಾಸನಾದ ಜೀವನು ಶೋಕನಿವೃತ್ತಿಯನ್ನೂ ನಿರಂಕುಶತೃಪ್ತಿಯನ್ನೂ ಹೊಂದುವನು. ಜ್ಞಾನದಿಂದ ಅಜ್ಞಾನವು ತೊಲಗಿ ತನ್ನ ಸ್ವರೂಪದಲ್ಲಿ ನೆಲೆನಿಲ್ಲುವದೇ ಮೋಕ್ಷವು. ಮೋಕ್ಷಕ್ಕೆ ಸಮಾಧಿಯು ಬೇಕೆಂದು ಕೆಲವರೂ ಕೇವಲ ಜ್ಞಾನವೇ ಸಾಕಾಗಿರುವದೆಂದು

ಕೆಲವರೂ ಇಲ್ಲಿ ಒಬ್ಬೊಬ್ಬರು ಒಂದೊಂದು ಬಗೆಯಾಗಿ ಹೇಳುತ್ತಿರುವರು. ಮತ್ತೊಂದು ಸುಪ್ರಸಿದ್ಧವಾದ ಗ್ರಂಥದಲ್ಲಿ ಒಂದುಕಡೆ ಸಮಾಧಿಯನ್ನು ಹೊಗಳಿರುವದೂ ಮತ್ತೊಂದುಕಡೆ ತೆಗಳಿರುವದೂ ಕಂಡು ಬರುತ್ತದೆ. ಹೀಗೆ ಆಚಾರ್ಯರ ತರುವಾಯ ನಾನಾವಿಧವಾಗಿ ಬೋಧಕ್ರಮವು ರೂಢಿಯಲ್ಲಿ ಬಂದಿದ್ದು ಈಗ ಈ ಬೋಧೆಯಲ್ಲಿರುವ ದೋಷವನ್ನು ಮನಗಾಣಿಸುತ್ತೇನೆ. (60–69)

ಜಗತ್ಕಾರಣವಾದ ಮೂಲಾವಿದ್ಯೆಯು ಆತ್ಮನನ್ನಾಶ್ರಯಿಸಿದಬಳಿಕ ಅದಕ್ಕೆ ನಾಶವನ್ನು ಒಪ್ಪುವದು ಹೇಗೆ? ಜ್ಞಾನವಾದರೋ ಬುದ್ಧಿಯಲ್ಲಿ ತೋರಿಕೊಳ್ಳುವ ವೃತ್ತಿಯು. ಅದರಿಂದ ಬುದ್ಧಿಯಾಚೆಗಿರುವ ಅಜ್ಞಾನಕ್ಕೆ ಹಾನಿಯು ತಟ್ಟಲಾರದಷ್ಟೆ. ಇನ್ನು ತತ್ತ್ವಮಸಿವಾಕ್ಯಕ್ಕೆ ಆಚಾರ್ಯರು ಈ ರೀತಿ ಅರ್ಥಮಾಡಿರುವದಿಲ್ಲವೆನ್ನುವದಕ್ಕೆ ಛಾಂದೋಗ್ಯಭಾಷ್ಯದಲ್ಲಿ ಅವರು ಇತ್ತಿರುವ ವಿವರಣೆಯನ್ನು ನೋಡಿದರೆ ಗೊತ್ತಾಗುತ್ತದೆ. (70–72)

ಅಜ್ಞಾನಾವರಣಗಳೆರಡೂ ಆತ್ಮನನ್ನು ಆವರಿಸಿದ್ದಮೇಲೆ ಅದ್ವೈತ ಭಾವವೇ ಇಲ್ಲದಂತಾಗುತ್ತದೆ. ಮತ್ತು ವಿಕ್ಷೇಪಪೂರ್ವದಲ್ಲಿಯೇ ಆತ್ಮನಲ್ಲಿ ಆದರ ಸಂಸ್ಕಾರವು ಇದ್ದಂತಾಗುತ್ತದೆ. ಹೀಗಿದ್ದರೂ ಆತ್ಮನು ಅವುಗಳಿಗೆ ಆಶ್ರಯಮಾತ್ರನಾಗಿರುವದರಿಂದ ಅವನು ಯಾವಾಗಲೂ ಅದ್ವಯನೇ, ಪರಿಶುದ್ಧನೇ ಎಂದು ಹೇಳುವದು ನ್ಯಾಯಸಮ್ಮತನಾಗಲಾರದು. ಅವು ಆತ್ಮನಲ್ಲಿ ಕಲ್ಪಿತ ಎಂದು ಹೇಳುವದಾದರೆ ಅಜ್ಞಾನವು ಉಪಾದಾನ ಕಾರಣವೆಂಬ ಮಾತನ್ನು ಅಲ್ಲಗಳೆದಂತಾಗುವದು. ಹೀಗೆ ಹಲವು ವಿಧದ ದೋಷದಿಂದ ಕೂಡಿರುವ ಈ ಪ್ರಕ್ರಿಯೆಯು ಭಾಷ್ಯಕ್ಕೆ ಎಂದಿಗೂ ಹೊಂದ ಲಾರದು. ಪಂಡಿತರುಗಳುಕೂಡ ಈ ವಿಷಯದಲ್ಲಿ ಒಂದು ನಿರ್ಣಯಕ್ಕೆ ಬರಲಾರದವರಾಗಿರುತ್ತಾರೆ. ಜಿಜ್ಞಾಸುಗಳು ದಿಕ್ಕೆಟ್ಟಿರುತ್ತಾರೆ. (73–80)

ಧರ್ಮಕ್ಕೆ ಚ್ಯುತಿಬಂದಾಗ ತಾನೇ ಅವತರಿಸುವೆನೆಂದು ಭಗವಂತನು ಹೇಳಿದಪ್ರಕಾರ ಈಗ ಸಾವಿರಾರು ವರ್ಷಗಳ ಹಿಂದೆಯೇ ಶ್ರೀಶಂಕರರ ಅವತಾರವಾಯಿತೆಂತಲೂ ಮತ್ತೆ ಈಗ ಅವರೇ ಶ್ರೀಗಳವರ ರೂಪದಲ್ಲಿ ಪ್ರಕಟವಾಗಿರುವರೆಂತಲೂ ತಿಳಿಯುವದರಲ್ಲಿ ಅತಿಶಯೋಕ್ತಿಯೇನೂ ಇಲ್ಲ. ಶ್ರೀಸುರೇಶ್ವರಾಚಾರ್ಯರಿಂದೀಚೆಗೆ ವೇದಾಂತದಲ್ಲಿ ಕಲಬೆರಕೆಯಾಗಿದ್ದ

ಅಸಂಬದ್ಧತರ್ಕವನ್ನು ಬೇರ್ಪಡಿಸಿ ಅನುಭವಾನುಸಾರಿಯಾದ ತತ್ತ್ವವಿಚಾರದ ಕ್ರಮವನ್ನು ಆಚಾರ್ಯರ ರೀತಿಯಿಂದ ಮೊಟ್ಟಮೊದಲಿಗೆ ತೋರಿಸಿಕೊಟ್ಟ ಶ್ರೇಯಸ್ಸು ಶ್ರೀಗಳವರಿಗೇ ಸಲ್ಲುತ್ತದೆ. ತಮ್ಮ ಜೀವನವನ್ನೇ ಇದಕ್ಕಾಗಿ ಮುಡುಪಿಟ್ಟು ಮರೆಯಾಗಿದ್ದ ಭಾಷ್ಯಗ್ರಂಥಗಳನ್ನು ಬೆಳಕಿಗೆ ಹಿಡಿದು ಅವುಗಳಲ್ಲಿರುವ ಸಾರವನ್ನು ಪಂಡಿತರಿಗೂ ಸಾಮಾನ್ಯಜಿಜ್ಞಾಸುಗಳಿಗೂ ಸಂಸ್ಕೃತ, ಇಂಗ್ಲಿಷ್, ಕನ್ನಡ ಭಾಷೆಗಳ ಮೂಲಕ ಪಾನ ಮಾಡಿಸಿದ ಶ್ರೀಗಳವರ ಕೀರ್ತಿಯು ಈಗಾಗಲೇ ನಾಡಿನಾದ್ಯಂತವೂ ವ್ಯಾಪಿಸಿದೆ. (81–107)

ಪ್ರಕೃತ ಮಾಯೆ, ವಿದ್ಯಾವಿದ್ಯೆ– ಈ ಶಬ್ದಗಳಿಗೆ ಭಾಷ್ಯಕಾರರು ಹೇಳಿದ ಅರ್ಥವನ್ನು ಕೈಬಿಟ್ಟದ್ದರಿಂದ ಅನುಭವವು ಹಿಂದುಳಿದು ತರ್ಕವು ಮುಂದಾಯಿತು ಎಂದು ಇದುವರೆಗೆ ಹೇಳಿದ್ದಾಯಿತಷ್ಟೆ. ಹಾಗಾದರೆ ವೇದಾಂತದಲ್ಲಿ ತರ್ಕಕ್ಕೆ ಯಾವ ಸ್ಥಾನವೂ ಇಲ್ಲವೆ? ಎಂಬ ಶಂಕೆಯುತ್ಪನ್ನವಾಗಲಾಗಿ ಅದಕ್ಕೆ ಉತ್ತರವನ್ನು ಈ ಮುಂದಿನ ಅಧ್ಯಾಯದಲ್ಲಿ ಹೇಳಲಾಗುತ್ತದೆ. (108–112)

## ಆರನೆಯ ಅಧ್ಯಾಯ

ವೇದಾಂತಶಾಸ್ತ್ರದಲ್ಲಿ ಅನುಭವವೇ ಪ್ರಧಾನವಾದರೂ ತರ್ಕಕ್ಕೆ ಎಡೆಯೇ ಇಲ್ಲವೆಂದು ತಿಳಿಯಬಾರದು. ಆಚಾರ್ಯನಿಂದ ಕೇಳಿದ್ದನ್ನು ಮನನಮಾಡುವದಕ್ಕಾಗಿ ಶ್ರುತ್ಯುಕ್ತತರ್ಕವು ಬೇಕೆಂಬುದಾಗಿ ಆಚಾರ್ಯರು ತಿಳಿಸಿರುತ್ತಾರೆ. ಆ ತರ್ಕದಿಂದ ವಿಚಾರಮಾಡುವದನ್ನೇ ಮನನ ಎಂದು ಕರೆದಿರುತ್ತಾರೆ. ಮಿಕ್ಕ ಯಾವ ತರ್ಕಗಳೂ ಇಲ್ಲಿ ಉಪಯೋಗಕ್ಕೆ ಬರಲಾರವು. (1–8)

ತರ್ಕವು ಮೂರು ಬಗೆಯಾಗಿರುತ್ತದೆ. ನೀರಹಾವು ಹಾವೇ ಆಗಿದ್ದರೂ ವಿಷವಿಲ್ಲದಿರುವದರಿಂದ ಅದರಂತೆ ನಾಗರಹಾವಿಗೂ ವಿಷವಿರಲಾರದು; ಅಥವಾ ನಾಗರಹಾವಿನಂತೆ ನೀರಹಾವು ಇದ್ದಮಾತ್ರದಿಂದ ಅದರಂತೆ ಇದೂ ಸವಿಷವಾಗಿರುವದು– ಎಂದು ಸಾಧಿಸುವದು ಒಂದು ಬಗೆಯ ಶುಷ್ಕತರ್ಕವು. ಕೇವಲತರ್ಕ, ಶುಷ್ಕತರ್ಕ, ಕುತರ್ಕ– ಇವೆಲ್ಲ ಅನುಭವ ಸಮ್ಮತಿಯಿಲ್ಲದ ತರ್ಕಕ್ಕೆ ಹೆಸರುಗಳು. (8–16)

ವಾದಿಗಳು ಒಪ್ಪಿರುವ ಎರಡನೆಯ ಬಗೆಯ ತರ್ಕವು ಪ್ರಮಾಣತರ್ಕವೆನಿಸಿಕೊಳ್ಳುವದು. ಅಡಿಗೆಯ ಮನೆಯಲ್ಲಿ ಕಂಡ ಹೊಗೆಯ ಗುರುತಿನಿಂದ ಮತ್ತೊಂದು ಕಡೆ ಹೊಗೆಯು ಕಂಡಾಗ ಅಲ್ಲಿ ಬೆಂಕಿಯಿರಬೇಕೆಂದು ಊಹಿಸುವೆವು. ನಮ್ಮ ಊಹೆಯು ಸರಿಯೆನ್ನುವದಕ್ಕೆ ಬೆಂಕಿಯಿಲ್ಲದಿದ್ದರೆ ಹೊಗೆಯೂ ಇರಲಾರದು ಎಂಬ ಪೋಷಕತರ್ಕವನ್ನುಪಯೋಗಿಸುವೆವು. ಇದನ್ನೇ ಪ್ರಮಾಣಾನುಗ್ರಾಹಕತರ್ಕ ಎನ್ನುವರು. ಲೋಕವ್ಯವಹಾರದಲ್ಲಿ ಎಲ್ಲರೂ ಈ ತರ್ಕವನ್ನೇ ಬಹಳವಾಗಿ ಮೆಚ್ಚುತ್ತಾರೆ. ದೇಶ, ಕಾಲ, ನಿಮಿತ್ತ– ಮುಂತಾದ ಕೆಲವು ಮೂಲನಿಯಮಗಳಿಗೆ ಒಳಪಟ್ಟೇ ಈ ತರ್ಕವನ್ನು ಮಾಡಬೇಕಾಗಿರುತ್ತದೆ. ಇದಕ್ಕನುಸರಿಸಿ ಕೆಲವು ದೋಷಗಳಿದ್ದರೆ ತರ್ಕವು ಸರಿಯಲ್ಲ ಎಂದು ತಾರ್ಕಿಕರು ನಿಶ್ಚಯಿಸುತ್ತಾರೆ. ತನ್ನ ಹೆಗಲಮೇಲೆ ತಾನೇ ಕುಳಿತುಕೊಂಡನು; ಗಿಡದಿಂದ ಬೀಜವು ಹುಟ್ಟಿತು, ಬೀಜದಿಂದ ಗಿಡವು ಹುಟ್ಟಿತು; ಆಶೆಯಿಂದ ಕರ್ಮವೂ ಕರ್ಮದಿಂದ ಭೋಗವೂ ಭೋಗದಿಂದ ಆಶೆಯೂ ಹೆಚ್ಚುವದು; ಇದಕ್ಕೆ ಅದು ಕಾರಣ, ಅದಕ್ಕೆ ಇನ್ನೊಂದು ಕಾರಣ, ಇನ್ನೊಂದಕ್ಕೆ ಮತ್ತೊಂದು ಕಾರಣ– ಎಂಬೀ ಉದಾಹರಣೆಗಳನ್ನು ನಮ್ಮ ದೇಶದ ತರ್ಕದಲ್ಲಿ ಹೇಳುವ ಆತ್ಮಾಶ್ರಯ, ಅನ್ಯೋನ್ಯಾಶ್ರಯ, ಚಕ್ರಿಕಾಪತ್ತಿ, ಅನವಸ್ಥಾ– ಎಂಬ ತರ್ಕದೋಷಗಳಿಗೆ ಉದಾಹರಣೆಯಾಗಿ ಕೊಡಬಹುದು. ಇದರಂತೆ ಪಾಶ್ಚಾತ್ತ್ಯರೂ ಕೆಲವು ತರ್ಕನಿಯಮಗಳನ್ನು ಮಾಡಿಕೊಂಡಿರುತ್ತಾರೆ. ಮುಖ್ಯವಾಗಿ ಪ್ರತ್ಯಕ್ಷವನ್ನೇ ಆಧಾರವಾಗಿಟ್ಟುಕೊಂಡು ನಡೆಯುವ ಈ ತರ್ಕವು ಪ್ರತ್ಯಕ್ಷಕ್ಕೆ ವಿರೋಧವಾದರೆ ತಪ್ಪಾಗುತ್ತದೆ. ಉದಾಹರಣೆಗೆ ಹೊಗೆಸೊಪ್ಪು ಸೇದುವವನ ಮುಖದಿಂದ ಹೊರಟ ಹೊಗೆಯನ್ನು ಕಂಡ ಗುರುತಿನಿಂದ ಚಳಿಯಲ್ಲಿ ಶಾಸ್ತ್ರಿಗಳ ಮುಖದಿಂದ ಹೊರಟ ಆವಿಯನ್ನು ಕಂಡು ಅವರು ಹೊಗೆಸೊಪ್ಪು ಸೇದಿರುತ್ತಾರೆಂದು ತರ್ಕಿಸುವದು ತಪ್ಪಾಗುತ್ತದೆ. (17–40)

ಬರಿಯ ಪುರುಷಬುದ್ಧಿಯಿಂದ ಕಲ್ಪಿತವಾದ ಸ್ವತಂತ್ರತರ್ಕಕ್ಕೆ ನಿಲುಗಡೆಯಿರುವದಿಲ್ಲ. ಇಂದೊಬ್ಬ ಸ್ಥಾಪಿಸಿದ್ದನ್ನು ಮುಂದೆ ಬರುವ ಮತ್ತೊಬ್ಬನು ತನ್ನ ಯುಕ್ತಿಯಿಂದ ಕಿತ್ತುಹಾಕಬಹುದು. ಅದಕ್ಕೂ ಮುಂದಿನವನು ಅದನ್ನೂ ಕಿತ್ತುಹಾಕಬಹುದು. ಹೀಗೆ ಕೊನೆಯಿಲ್ಲದೆ ಸಾಗಿರುವ ಇದರಿಂದ ಪರಮಾರ್ಥವು ಸಿಗಲಾರದಷ್ಟೆ? ಹಿಂದಿನಕಾಲದ, ಈಗಿನ, ಮತ್ತು ಮುಂದೆ ಬರಲಿರುವ ತಾರ್ಕಿಕರನ್ನೆಲ್ಲ ಒಟ್ಟುಗೂಡಿಸಿ ಇದೇ ಸರಿಯಾದ

ಜ್ಞಾನವೆಂದು ನಿರ್ಣಯಿಸುವದಕ್ಕೂ ಆಗುವಹಾಗಿಲ್ಲ. ಆದ್ದರಿಂದಲೇ ತರ್ಕಶರಣರಾದ ನಮ್ಮ ದೇಶದ ದರ್ಶನಕಾರರೂ ಪಾಶ್ಚಾತ್ತ್ಯತತ್ತ್ವಶಾಸ್ತ್ರಜ್ಞರೂ ಒಬ್ಬೊಬ್ಬರು ಒಂದೊಂದು ಸಿದ್ಧಾಂತಕ್ಕೆ ಬಂದುನಿಂತಿದ್ದಾರೆ. ಈ ವಿಚಾರಕರಲ್ಲಿ ಪ್ರತಿಯೊಬ್ಬರೂ ಒಂದೊಂದು ದೃಷ್ಟಿಕೋನವನ್ನು ಅವಲಂಬಿಸಿ ತತ್ತ್ವವನ್ನು ವಿಚಾರಮಾಡಿದ್ದರಿಂದ ಅವರ ದರ್ಶನಗಳೂ ಬೇರೆಬೇರೆಯಾದವಲ್ಲದೆ ಇವರಲ್ಲಿ ಯಾರೊಬ್ಬರಿಗೂ ಪರಮಾರ್ಥತತ್ತ್ವವು ದಕ್ಕಿರುವದಿಲ್ಲ. (41–58)

ಹೊಸಹೊಸ ಶೋಧಗಳಿಂದ ಎಲ್ಲರನ್ನೂ ಬೆರಗುಮಾಡುತ್ತಿರುವ ಆಧುನಿಕವಿಜ್ಞಾನ ಶಾಸ್ತ್ರಕ್ಕೂ ಪರಮಾರ್ಥದ ಹಾದಿ ಸಿಕ್ಕದೆಇರುತ್ತದೆ. ವಸ್ತುಗಳನ್ನು ಬಗೆಬಗೆಯಾಗಿ ನಿಟ್ಟಿಸಿ ನೋಡಿ, ಬಗೆಬಗೆಯ ಪ್ರಯೋಗಗಳಿಂದ ಅವುಗಳ ಸ್ವಭಾವವನ್ನು ಪರೀಕ್ಷಿಸಿ, ಹಾಗೆ ಪರೀಕ್ಷಿಸಿ ಕಂಡುಕೊಂಡದ್ದನ್ನು ಮತ್ತೊಂದು ತತ್ತ್ವಕ್ಕೆ ಹೊಂದುಗಡೆಮಾಡುವದೇ ಲೌಕಿಕ ವಿಜ್ಞಾನಶಾಸ್ತ್ರದ ಪ್ರಕ್ರಿಯೆ. ಹೀಗಿದ್ದರೂ ಈ ಶಾಸ್ತ್ರದಲ್ಲಿಕೂಡ ಎಷ್ಟೋ ಅಭಿಪ್ರಾಯಗಳು ಈಗ ಬದಲಾಯಿಸಿವೆ. ನೀರು ಎಂಬುದು ಒಂದೇ ಪದಾರ್ಥ ಎಂದು ಸಾರಿದ್ದ ವಿಜ್ಞಾನಿಗಳು ಮತ್ತೊಮ್ಮೆ ಪರಿಶೋಧನೆಯಿಂದ ಅದು ಎರಡು ಅನಿಲಗಳ ಸಂಯೋಗ ಎಂದು ಕಂಡುಹಿಡಿದರು. ಇದರಂತೆಯೇ ಪರಮಾಣುವನ್ನು 'ಅಖಂಡ್ಯ' ಎಂದು ಹೆಸರಿಸಿದ್ದ ವಿಜ್ಞಾನಿಗಳು ಅದನ್ನು ಒಡೆಯಬಹುದೆಂದು ಕಾಲಾಂತರದಲ್ಲಿ ಶೋಧಿಸಿದರು. ಈ ಶೋಧದಿಂದ ಇಂದಿನ ಜಗತ್ತು ಅಣ್ವಸ್ತ್ರಗಳ ಭಯದಿಂದ ತತ್ತರಿಸುವಂತಾಯಿತು. (59–66)

ಭೌತಿಕವಾದದಲ್ಲೆಲ್ಲ ಒಂದು ಮುಖ್ಯದೋಷವೇನೆಂದರೆ ಮನಸ್ಸಿನ ಅಥವಾ ವಿಷಯಿಯ ಸ್ವರೂಪವನ್ನು ಕಂಡುಹಿಡಿಯುವದಕ್ಕೆ ಹೊರಟು ಅದನ್ನು ವಿಚಾರಕನ ನಿರೀಕ್ಷಣಪರೀಕ್ಷಣಗಳಿಗೆ ವಿಷಯವಾದ ಒಂದು ಹೊರಗಿನ ವಸ್ತುವೆಂದು ಮೊದಲೇ ಕಲ್ಪನೆಮಾಡಿಕೊಂಡಿರುವದು. ಇದರಂತೆ ಕನಸುನಿದ್ರೆಗಳನ್ನು ಎಚ್ಚರದ ಭೇದದೃಷ್ಟಿಯಿಂದ ಅಳೆಯಲು ಹೊರಟಿರುವದು. ಹೀಗೆ ಮಾಡುವದರಿಂದ ಪರಮಾರ್ಥವು ಸಿಕ್ಕಲಾರದು. ಒಟ್ಟಿನಲ್ಲಿ ಈ ವಿಜ್ಞಾನಶಾಸ್ತ್ರವು ಲೌಕಿಕದಲ್ಲಿ ಕೆಲವೊಂದು ಸೌಕರ್ಯವನ್ನು ಕಲ್ಪಿಸಿಕೊಡಬಹುದೇ ಹೊರತು ಪರಮಾರ್ಥತತ್ತ್ವನಿರ್ಣಯಕ್ಕೆ ಇದರಿಂದ ಸಹಾಯವಾಗಲಾರದು. ಪರಮಾರ್ಥವು ಈ ವಿಜ್ಞಾನಕ್ಕೆ ನಿಲುಕದ ಅನುಭವಗಮ್ಯವಾದ ತತ್ತ್ವವಾಗಿದೆ. (67–80)

ವೇದಾಂತದ ಹೊರತು ಮಿಕ್ಕ ದರ್ಶನಗಳ ದೃಷ್ಟಿಯು ಅಪೂರ್ಣವಾಗಿರುವದರಿಂದಲೇ ಅವು ನೆಲೆಗೆ ನಿಂತಿರುವದಿಲ್ಲ. ಪರಮಾರ್ಥತತ್ತ್ವನಿರ್ಣಯಕ್ಕೆ ಶ್ರೌತತರ್ಕವೇ ಬೇಕು. ಪುರುಷರ ಬುದ್ಧಿಯು ಒಂದೇ ಸಮವಾಗಿರುವದಿಲ್ಲವಾದ್ದರಿಂದ ಅದು ಒಂದು ಸಿದ್ಧಾಂತವನ್ನು ಮುಟ್ಟಿಯೇತೀರೀತೆಂಬ ಆಶೆಯಿಲ್ಲ. ಆದ್ದರಿಂದ ಆಗಮಸಂಪತ್ತುಳ್ಳ ಆಚಾರ್ಯನ ಉಪದೇಶದ ಆಧಾರವಿಲ್ಲದ ಬರಿಯ ತರ್ಕಕ್ಕೆ ತತ್ತ್ವವು ನಿಲುಕುವದಿಲ್ಲವೆಂದು ಶ್ರುತಿಯಲ್ಲಿ ಹೇಳಿದೆ. (81–87)

ಮೂರನೆಯ ಬಗೆಯ ಶ್ರೌತತರ್ಕವು ಕಾಲದೇಶಾದಿಗಳ ನಿಯಮಕ್ಕೆ ಒಳಪಟ್ಟಿರುವದಿಲ್ಲ. ಅದಕ್ಕೆ ಸಾಕ್ಷಿಯ ಅನುಭವವೇ ಆಶ್ರಯ. ಸಾಕ್ಷ್ಯನುಭವದಲ್ಲಿ ನಮ್ಮ ಬುದ್ಧಿಯು ಕರಗುವಂತೆ ಮಾಡುವದೇ ಆ ತರ್ಕದ ಉದ್ದೇಶ. ನಮ್ಮ ಬುದ್ಧಿಗೆ ಹೊರನೋಟವೇ ಸ್ವಾಭಾವಿಕವಾಗಿರುವದರಿಂದ ಅದನ್ನು ತಪ್ಪಿಸಿ ಒಳನೋಟವನ್ನು ತಂದುಕೊಡುವ ಶ್ರೌತತರ್ಕವು ಗುರುಶಾಸ್ತ್ರಗಳ ಉಪದೇಶವಿಲ್ಲದಿದ್ದರೆ ತಿಳಿಯಲಾರದು. (88–100)

ಶ್ರುತಿಯು ಲೌಕಿಕಶಬ್ದಗಳಿಂದಲೇ ಅಲೌಕಿಕಾನುಭವವನ್ನು ತಿಳಿಸಿಕೊಟ್ಟಿರುತ್ತದೆ. ಜಿಜ್ಞಾಸುವು ಆ ಶಬ್ದಗಳ ಜಾಡನ್ನೇ ಹಿಡಿದು ತನ್ನಲ್ಲಿಯೇ ಹಿಂದಕ್ಕೆ ಸರಿದು ನೋಡಿಕೊಂಡಾಗ ಸಾಕ್ಷಿಯೇ ಆಗಿರುತ್ತಾನೆ. ಶ್ರುತಿಯಲ್ಲಿ ಹೇಳಿರುವ ದೃಷ್ಟಾಂತಗಳನ್ನು ಚೆನ್ನಾಗಿ ವಿಚಾರಮಾಡುವದರಿಂದಲೂ ಇದೇ ರೀತಿಯ ಅನುಭವವುಂಟಾಗುತ್ತದೆ. ಈಗ ಶ್ರುತಿಯಲ್ಲಿ ಹೇಳಿರುವಂಥ ತರ್ಕವನ್ನು ತಿಳಿಸುವದಕ್ಕೆ ಇಲ್ಲಿ ಕೆಲವು ಉದಾಹರಣೆಗಳನ್ನು ಕೊಡಬಹುದು. ಎಚ್ಚರವಿದ್ದಾಗ ಕನಸಿರುವದಿಲ್ಲ, ಕನಸಿದ್ದಾಗ ಎಚ್ಚರವಿರುವದಿಲ್ಲ; ಇವೆರಡೂ ಇದ್ದಾಗಲೂ ಇಲ್ಲದಿದ್ದಾಗಲೂ ತಾನು ಏನೂ ಆಗದೆ ಹಾಗೇ ಇರುತ್ತಾನೆ; ಇದರಿಂದ ತನ್ನಲ್ಲಿ ಅವಸ್ಥೆಗಳ ಧರ್ಮಗಳಿಲ್ಲ– ಎಂದು ತಿಳಿಯುವದು ಒಂದು ತರ್ಕವು. ಗಾಢನಿದ್ರೆಯಲ್ಲಿ ಪ್ರಪಂಚವೆಲ್ಲವನ್ನೂ ಬಿಟ್ಟು ಆತ್ಮನಲ್ಲಿ ಒಂದಾಗಿರುವದರಿಂದ ಪ್ರಪಂಚರಹಿತನಾದ ಆತ್ಮನೇ ತಾನೆಂದು ನಿರ್ಣಯಿಸುವದು ಮತ್ತೊಂದು ತರ್ಕವು. ಪ್ರಪಂಚವು ಬ್ರಹ್ಮದಿಂದ ಉಂಟಾಗಿರುವದರಿಂದ– ಕಾರ್ಯವು ಕಾರಣಕ್ಕಿಂತ ಬೇರೆಯಾಗಿರುವದಿಲ್ಲವೆಂಬ ನಿಯಮದಂತೆ– ಪ್ರಪಂಚವು ಬ್ರಹ್ಮಕ್ಕಿಂತ ವ್ಯತಿರಿಕ್ತವಾಗಿಲ್ಲ– ಎಂಬುದು ಇನ್ನೊಂದು ತರ್ಕವು. (101–115)

ಇಲ್ಲಿರುವ ಶಬ್ದಗಳು ಲೌಕಿಕವೇ ಆಗಿದ್ದರೂ ರೂಢಿಯಲ್ಲಿರುವ ಅರ್ಥವು ಅವುಗಳಿಗೆ ಹೊಂದುವದಿಲ್ಲ. ಹೇಗೆಂದರೆ 'ಎಚ್ಚರವಿದ್ದಾಗ ಕನಸಿರುವದಿಲ್ಲ" ಎಂಬೀ ವಾಕ್ಯದಲ್ಲಿ 'ಆಗ' ಎಂಬ ಕಾಲವಾಚಕಶಬ್ದವು ಕಾಲವನ್ನು ತಿಳಿಸುವದಿಲ್ಲ, ಮತ್ತೇನೆಂದರೆ ಕಾಲಾತೀತವಾದ ಅನುಭವವನ್ನೇ ಅದು ನಿರ್ದೇಶಿಸುವದು. 'ಗಾಢನಿದ್ರೆಯಲ್ಲಿ ಮತ್ತೊಂದೇನೂ ಇರುವದಿಲ್ಲ' ಎಂಬೀ ವಾಕ್ಯದಲ್ಲಿ 'ಅಲ್ಲಿ' ಎಂಬುದು ದೇಶವಾಚಕಶಬ್ದವಾಗಿರುವದಿಲ್ಲ. ಅದೂಕೂಡ ದೇಶಾತೀತವಾದ ಗಾಢನಿದ್ರೆಯ ಅನುಭವವನ್ನೇ ನಿರ್ದೇಶಿಸುತ್ತದೆ. ಗಾಢನಿದ್ರೆಯಲ್ಲಿ ದೇಶಕಾಲಗಳು ಇರುವದಿಲ್ಲವೆಂಬುದು ನಮ್ಮೆಲ್ಲರ ಅನುಭವವು. ಆದ್ದರಿಂದ ಈ ಶಬ್ದಗಳು ನಮ್ಮ ಬುದ್ಧಿಯನ್ನು ಆ ಅನುಭವದಲ್ಲಿ ಮುಳುಗಿಸುವದಕ್ಕಾಗಿಯೇ ಬಂದಿವೆಯೆಂದು ತಿಳಿಯಬೇಕು. ಕಾರ್ಯಕಾರಣಗಳು ಎಂಬ ಶಬ್ದಕ್ಕೆ ಲೌಕಿಕದಲ್ಲಿ ಬೇರೆಯ ಅರ್ಥವಿದ್ದರೂ ಇಲ್ಲಿ ಕಾರ್ಯವೆಂದರೆ ಹುಸಿತೋರಿಕೆಯೆಂದೂ ಕಾರಣವೆಂದರೆ ತೋರುವದರ ಪರಮಾರ್ಥವೆಂದೂ ಅರ್ಥಮಾಡಿದೆ. ಹೀಗೆ ಅನುಭವಾನುಸಾರಿಯಾದ ಅರ್ಥವನ್ನು ತೋರಿಸಿಕೊಡುವದರಿಂದಲೇ ಶ್ರೌತತರ್ಕವು ಅಬಾಧ್ಯವೆನಿಸಿದೆ. (116–128)

ಈ ತರ್ಕವು ಕೇವಲತರ್ಕಕ್ಕೆ ವಿರುದ್ಧವಾಗಿರಬಹುದು, ಆದರೆ ಅನುಭವಕ್ಕಂತೂ ಹೊಂದುಗೆಯಾಗಿದೆ. ಉದಾಹರಣೆಗೆ ಆತ್ಮನು ಇದ್ದಂತೆಯೂ ಇದಾನೆ, ಪ್ರಪಂಚವಾಗಿಯೂ ತೋರಿಕೊಂಡಿದಾನೆ ಎಂಬ ಮಾತಿನಲ್ಲಿ ತಾರ್ಕಿಕರು ಆತ್ಮಾಶ್ರಯದೋಷವನ್ನು ತೋರಿಸಬಹುದು. ಆದರೆ ತಾನೊಬ್ಬನೇ ಇದ್ದು ಕನಸಿನಲ್ಲಿ ಎಲ್ಲವೂ ತಾನೇ ಆಗಿರುವದನ್ನು ಜ್ಞಾಪಿಸಿಕೊಂಡರೆ ಕೇವಲತರ್ಕಕ್ಕೆ ಶ್ರೌತತರ್ಕವು ಮಣಿಯಲಾರದೆಂಬುದನ್ನು ಒಪ್ಪಲೇಬೇಕಾಗುತ್ತದೆ. (129–135)

ಭಾಷ್ಯಪ್ರಕ್ರಿಯೆಯನ್ನು ತಿಳಿದುಕೊಳ್ಳುವದಕ್ಕೆ ಅನುಭವಾನುಸಾರಿಯಾದ ಈ ತರ್ಕವೊಂದೇ ಸಾಕು. ಮಿಕ್ಕ ತರ್ಕಗಳ ಗೋಜೇ ಬೇಕಿರುವದಿಲ್ಲ. ತತ್ತ್ವಪಕ್ಷಪಾತಿಗಳಾದ ಜಿಜ್ಞಾಸುಗಳು ವಾದಿಗಳ ಬಲೆಯಲ್ಲಿ ಸಿಲುಕಬಾರದೆಂಬ ಉದ್ದೇಶದಿಂದಲೇ ಭಾಷ್ಯಗಳಲ್ಲಿ ತಾರ್ಕಿಕರೊಂದಿಗೆ ಚರ್ಚೆಮಾಡಿರುತ್ತದೆಯೇ ಹೊರತು ವಾದಿಸುವ ಚಟದಿಂದ ಅಥವಾ ಮತ್ತೊಬ್ಬರಲ್ಲಿರುವ

ಅಸೂಯಾಮಾತ್ಸರ್ಯಗಳಿಂದಲ್ಲ. ನಿಜವಾಗಿಯೂ ಯಾವದೊಂದು ವಿವಾದಕ್ಕಾಗಲಿ ವಿರೋಧಕ್ಕಾಗಲಿ ಎಡೆಗೊಡದ ಅದ್ವೈತದರ್ಶನವು ತಮ್ಮದೆಂದು ಆಚಾರ್ಯರೇ ಮಾಂಡೂಕ್ಯಕಾರಿಕೆಯ ಭಾಷ್ಯದಲ್ಲಿ ಹೇಳಿಕೊಂಡಿರುತ್ತಾರೆ. (136–143)

ಇದನ್ನು ಮರೆತದ್ದರಿಂದಲೇ ಶ್ರೀಸುರೇಶ್ವರಾಚಾರ್ಯರಿಂದೀಚೆಗೆ ಬರೆದ ಅನುಶಾಂಕರರೆಲ್ಲರೂ ವೇದಾಂತದಲ್ಲಿ ಅತಿಯಾದ ತರ್ಕವನ್ನು ಬೆರೆಸಿ ಹಾನಿಮಾಡಿದರಲ್ಲದೆ ತರ್ಕಶಾಸ್ತ್ರವನ್ನು ಓದದಿದ್ದರೆ ಭಾಷ್ಯವೇ ತಿಳಿಯುವದಿಲ್ಲವೆಂಬ ಭ್ರಾಂತಿಗೆ ಜಿಜ್ಞಾಸುಗಳು ಪಕ್ಕಾಗುವಂತೆ ಮಾಡಿದರು. ಇದೀಗ ಶ್ರೀಗಳವರ ಪರಿಶ್ರಮದಿಂದ ಭಾಷ್ಯಗಳು ಕನ್ನಡದಲ್ಲಿ ಅವತರಿಸಲು ಜಿಜ್ಞಾಸುಗಳ ಈ ಭ್ರಾಂತಿಯು ದೂರವಾಗಲವಕಾಶವಾಯಿತು. ಸಂಸ್ಕೃತದ ಪರಿಚಯ ಸ್ವಲ್ಪ ಇದ್ದರೂ ಸಾಕು. ತಿಳಿಯಬೇಕೆನ್ನುವವರಿಗೆ ಭಾಷ್ಯಗಳು ಅತಿಸುಲಭ. ಅಂಥ ಭಾಷ್ಯಗಳ ಆಧಾರದಿಂದಲೇ ಇನ್ನುಮುಂದೆ ವೇದಾಂತಗಳಲ್ಲಿ ಬಂದಿರುವ ಪ್ರಕ್ರಿಯೆಗಳ ಬಗೆಗೆ ವಿವರಿಸಲೆತ್ನಿಸುತ್ತೇನೆ. ಸಾವಧಾನದಿಂದ ಕೇಳಿಕೊಳ್ಳಿ. (144–154)

## ಏಳನೆಯ ಅಧ್ಯಾಯ

ನಮ್ಮೆಲ್ಲರಲ್ಲಿಯೂ ಅತ್ಯಂತ ಒಳಗಿರುವ ಆತ್ಮತತ್ತ್ವವೇ ಈ ಸಮಗ್ರವಿಶ್ವದ ತಿರುಳಾಗಿದೆ. ಈ ಆತ್ಮನನ್ನೇ ಕಂಡುಕೊಳ್ಳಬೇಕು. ಇದೇ ಪರಮಸತ್ಯವು. ಇದನ್ನರಿತವನು ಈಗಲೇ ಪರಬ್ರಹ್ಮವಾಗುತ್ತಾನೆ. ಆದ್ದರಿಂದ ಈ ಆತ್ಮನನ್ನೇ ಕುರಿತು ಕೇಳಬೇಕು, ಮನನ ಮಾಡಬೇಕು, ಏಕಾಗ್ರತೆಯಿಂದ ನಿರೀಕ್ಷಿಸಬೇಕು. ಇದರಿಂದ ಆತ್ಮವಿಜ್ಞಾನವು ಪ್ರಾಪ್ತವಾಗುವದು. ಈ ವಿಜ್ಞಾನದಿಂದ ಶೋಕಮೋಹಗಳು ಈಗಲೇ ತೊಲಗುವವು– ಎಂದು ಸಕಲ ಶ್ರುತಿಸ್ಮೃತಿಗಳೂ ಒಕ್ಕೊರಲಿನಿಂದ ಹೇಳುತ್ತಿವೆ. (1–11)

ಆತ್ಮಜ್ಞಾನವುಂಟಾಗುವದಕ್ಕೆ ಶ್ರವಣಮನನನಿದಿಧ್ಯಾಸನಗಳೇ ನೇರಾದ ಸಾಧನಗಳು. ಈ ಮೂರು ಹೊಂದುಗಡೆಯಾದರೇ ಆತ್ಮಜ್ಞಾನನಿಷ್ಠೆಯು ಅನುಭವವೇದ್ಯವಾಗುವದು. ಆದರೆ ಉತ್ತಮಾಧಿಕಾರಿಯಾದವನಿಗೆ ಶ್ರವಣ ವೊಂದೇ ಸಾಕು. ಅನುಭವಿಯಾದ ಆಚಾರ್ಯನು ಹೇಳಿದರೆ ಆ ಕೂಡಲೆ

ಅವನು ತತ್ತ್ವದಲ್ಲಿ ನೆಲೆನಿಲ್ಲಲು ಸಮರ್ಥನಾಗುತ್ತಾನೆ. ಮುಂದೆ ಅವನು ಯಾವ ಸಾಧನವನ್ನೂ ಮಾಡಬೇಕಾದದ್ದಿರುವದಿಲ್ಲ. ಏಕೆಂದರೆ ಅವನ ದೃಷ್ಟಿಯಿಂದ ಆತ್ಮನಿಗಿಂತ ಬೇರೆಯಾಗಿ ಮತ್ತೆ ಯಾವದೂ ಇರುವದೇಇಲ್ಲ. (12–24)

ಚಿತ್ತದಲ್ಲಿ ಪ್ರತಿಬಂಧವುಳ್ಳ ಮಧ್ಯಮಾಧಿಕಾರಿಗೆ ಶ್ರವಣಮಾತ್ರದಿಂದಲೇ ಆತ್ಮದರ್ಶನವಾಗಲಾರದು. ಅವನು ಮತ್ತೆಮತ್ತೆ ಮನನವನ್ನೂ ಮಾಡುತ್ತಿರಬೇಕಾಗುವದು. ಅದರಿಂದಲೂ ಆಗದಿದ್ದರೆ ನಿದಿಧ್ಯಾಸನವನ್ನೂ ಮಾಡಬೇಕು. ನಿದಿಧ್ಯಾಸನದ ವಿಚಾರವನ್ನು ಮುಂದೆ ತಿಳಿಸಲಾಗುತ್ತದೆ. ಸದ್ಯಕ್ಕೆ ಶ್ರವಣವೆಂದರೇನೆಂದು ನೋಡೋಣ. (25–28)

ಶ್ರವಣವೆಂದರೆ ಆತ್ಮವಿಷಯಕವಾದ ಅನುಭವವನ್ನು ಕೇಳುವಾಗ ಅದರ ಕಡೆಗೇ ಅವಧಾನವನ್ನು ಮಾಡುವದು. ಲೋಕದಲ್ಲಿಯೂ ನೋಡು, ಕೇಳು– ಮುಂತಾದ ಶಬ್ದಗಳಿಗೆ ಅತ್ತಕಡೆಗೆ ಅವಧಾನವನ್ನು ಮಾಡಬೇಕು ಎಂಬುದಿಷ್ಟೇ ಅರ್ಥವಿರುತ್ತದೆ. ಅನ್ಯವಸ್ತುವಿನ ಬಗ್ಗೆ ಕೇಳುವಾಗ ಆ ವಸ್ತುವೇ ನಾವಾದಂತೆ ಪರತತ್ತ್ವವೇ ತಾನಾಗಿ ಆ ಅನುಭವದಲ್ಲಿಯೇ ನಿಲ್ಲಬೇಕು; ಅದು ನಿಜವಾದ ಶ್ರವಣ, ಹೀಗೆ ಅನುಭವವನ್ನು ಕಂಡುಕೊಳ್ಳುವದಕ್ಕಾಗಿ ಶ್ರುತಿಯಲ್ಲಿ ಅನೇಕ ಪ್ರಕ್ರಿಯೆಗಳಿವೆ. ಅವುಗಳಲ್ಲಿ ಅವಸ್ಥಾತ್ರಯವಿವೇಕವೂ ಒಂದು. (29–34)

ಮೊದಲು ಮೂರವಸ್ಥೆಗಳನ್ನು ಒಪ್ಪಿಕೊಂಡಂತೆ ಮಾಡಿ, ಅನಂತರ ಅವುಗಳನ್ನು ಅಲ್ಲಗಳೆದು ಅದ್ವಯಾತ್ಮನನ್ನು ತೋರಿಸಿಕೊಡುವದು ಈ ಪ್ರಕ್ರಿಯೆಯ ವೈಶಿಷ್ಟ್ಯ. ಮಾಂಡೂಕ್ಯೋಪನಿಷತ್ತು ಇದಕ್ಕಾಗಿಯೇ ಮೀಸಲಾಗಿದೆ. ಗೌಡಪಾದರು ಮಾಂಡೂಕ್ಯದ ಮೇಲೆ ವಿವರಣರೂಪವಾದ ಕಾರಿಕೆಗಳನ್ನು ಬರೆದು ನಮ್ಮಗಳಿಗೆ ಅನುಗ್ರಹಮಾಡಿರುತ್ತಾರೆ. ಕಾರಿಕೆಗೂ ಉಪನಿಷತ್ತಿಗೂ ಶಂಕರರು ಭಾಷ್ಯವನ್ನು ರಚಿಸಿರುತ್ತಾರೆ. ಶ್ರೀಗಳು ಅದೆಲ್ಲವನ್ನೂ ಕನ್ನಡಕ್ಕೆ ಅನುವಾದಿಸಿರುವರಲ್ಲದೆ ಅವಸ್ಥಾತ್ರಯಪ್ರಕ್ರಿಯೆಯ ಮಹತ್ವವನ್ನು ಮನಗಾಣಿಸಿ ಕೊಡುವ ಕೆಲವು ಸ್ವತಂತ್ರಗ್ರಂಥಗಳನ್ನೂ ರಚಿಸಿರುವರು. ಆ ಎಲ್ಲ ಗ್ರಂಥಗಳ ಸಾರವನ್ನು ಇಲ್ಲಿ ಸಂಕ್ಷೇಪವಾಗಿ ತಿಳಿಸಲೆತ್ನಿಸುತ್ತೇನೆ. (35–42)

ಓಂಕಾರ, ಬ್ರಹ್ಮ, ಆತ್ಮ– ಈ ಮೂರೂ ಒಂದೇ ತತ್ತ್ವಕ್ಕೆ ಹೆಸರುಗಳು. ಯಾವನು ಇದನ್ನು ಅರಿತುಕೊಳ್ಳುವನೋ ಅವನು ಓಂಕಾರವೇ ಆಗುವನು. ಆತ್ಮನಲ್ಲಿ ನಿಜವಾಗಿ ಯಾವ ಭೇದವೂ ಇರುವದಿಲ್ಲ. ಆದರೂ ಅವನನ್ನು ತಿಳಿಸಿಕೊಡುವದಕ್ಕಾಗಿ ಶ್ರುತಿಯು ಓಂಕಾರವನ್ನು ಅಭಿಧಾನವೆಂತಲೂ ಆತ್ಮನನ್ನು ಅಭಿಧೇಯವೆಂತಲೂ ಕರೆದು ಆತ್ಮನಲ್ಲಿ ನಾಲ್ಕು ಪಾದಗಳನ್ನು ಆರೋಪಿಸಿರುತ್ತದೆ. (43–47)

ಮೊದಲನೆಯದೇ ವೈಶ್ವಾನರಪಾದ ಅರ್ಥಾತ್ ಎಚ್ಚರದವಸ್ಥೆಯು. ಇದನ್ನಿಲ್ಲಿ ತಿಳಿಯುವ ಗುಟ್ಟನ್ನು ವಿವರಿಸಿರುತ್ತದೆ. ಸಾಮಾನ್ಯವಾಗಿ ಜನರು ಈ ಪ್ರಪಂಚದಲ್ಲಿ ನಾನು ಕೆಲವು ವರ್ಷಗಳ ಹಿಂದೆ ಒಂದು ಮೂಲೆಯಲ್ಲಿ ಹುಟ್ಟಿಬೆಳೆದು ಇದರಲ್ಲಿ ಎಡೆಯಾಡುತ್ತಿರುವೆನು, ಇನ್ನು ಸ್ವಲ್ಪ ಕಾಲದಮೇಲೆ ನಾನು ಸತ್ತು ಈ ಪ್ರಪಂಚವನ್ನು ಬಿಟ್ಟುಹೋಗುವೆನು; ಈ ಪ್ರಪಂಚವು ಎಂದು ಮೊದಲಾಯತೋ ಎಂದಿಗೆ ಕೊನೆಗಾಣುವದೋ ಯಾರಿಗೂ ತಿಳಿಯದು– ಎಂದು ಭಾವಿಸಿಕೊಂಡಿರುತ್ತಾರೆ. ಆದರೆ ಸರಿಯಾಗಿ ನೋಡಿದರೆ ಎಚ್ಚರ ಕನಸುಗಳೆರಡೂ ತನ್ನಲ್ಲಿ ತೋರಿಕೊಳ್ಳುವವಾಗಿದ್ದು ಅವುಗಳಲ್ಲಿ ಕಾಣುವ ನಾನು ಮತ್ತು ಪ್ರಪಂಚಕ್ಕೆ ತಾನೇ ಆಧಾರನಾಗಿರುವನು; ಎಂದರೆ ಪ್ರಪಂಚದಲ್ಲಿ ತಾನಲ್ಲ, ತನ್ನೊಳಗೆ ಪ್ರಪಂಚವಿದ್ದು ಅದನ್ನೆಲ್ಲ ತಾನೇ ವ್ಯಾಪಿಸಿರುವನು. ಇದನ್ನು ವೇದಾಂತವು ನಮಗೆ ತಿಳಿಸಿಕೊಡುತ್ತದೆ. ನಾನೆಂಬುದನ್ನು ಬಿಟ್ಟು ತಾನಾಗಿ ನೋಡುವದೇ ವೇದಾಂತದ ದೃಷ್ಟಿ. ಹೀಗೆ ನೋಡಿದಾಗ ಇಡೀ ಎಚ್ಚರದವಸ್ಥೆಯು ಉಪಾಧಿಯಾಗುಳ್ಳ ವೈಶ್ವಾನರನೇ ತಾನು ಎಂಬ ಅರಿವು ಮೂಡುತ್ತದೆ. (48–60)

ಎಚ್ಚರವೆಂದರೆ ನಮ್ಮ ಇಂದ್ರಿಯಗಳಿಗೂ ಮನಸ್ಸಿಗೂ ಗೋಚರ ವಾಗುವದೆಲ್ಲ ಇದರೊಳಗೆ ಅಡಕವಾಗಿರುತ್ತದೆ. ಮಾನವರು, ಪ್ರಾಣಿಗಳು, ವಸ್ತುಗಳು, ಕಾಲದೇಶಾದಿ ಭಾವಗಳು, ಸೂರ್ಯಚಂದ್ರರು, ನಕ್ಷತ್ರಗಳು, ದೇವತೆಗಳು; ಇಷ್ಟೇ ಅಲ್ಲ, ಇವುಗಳ ಜೊತೆಗೆ ನಮ್ಮ ಶರೀರ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ– ಇವೆಲ್ಲವೂ ಈ ಅವಸ್ಥೆಯೊಳಗೆ ಸೇರಿಬಿಟ್ಟಿರುತ್ತವೆ. ಹೀಗಾದರೇ ಶ್ರುತಿಯು ವರ್ಣಿಸಿರುವ ದ್ಯುಲೋಕವೇ ಮುಂತಾದ ಏಳು ಅಂಗಗಳೂ ಇಂದ್ರಿಯಪ್ರಾಣಾಂತಃಕರಣರೂಪವಾದ ಹತ್ತೊಂಬತ್ತು ಮುಖ ಗಳೂ ವೈಶ್ವಾನರನಿಗೆ ಒಪ್ಪುವವು. (61–71)

ವಿಶ್ವ ಮತ್ತು ವೈಶ್ವಾನರರು ಬೇರೆಬೇರೆಯಲ್ಲ. ಒಂದೊಂದು ದೇಹಕ್ಕೆ ಒಬ್ಬೊಬ್ಬ ಆತ್ಮವನ್ನು ಕಲ್ಪಿಸುವದು ಸಾಂಖ್ಯರ ವಿಚಾರದೃಷ್ಟಿ. ಆದರೆ ತಾನೆಂಬ ದೃಷ್ಟಿಯನ್ನನುಸರಿಸಿದಾಗ ಸಮಸ್ತವಿಶ್ವವನ್ನೂ ತಾನೊಬ್ಬನೇ ಧರಿಸಿರುತ್ತಾನೆ. ಇಲ್ಲಿ ವ್ಯಷ್ಟಿ, ಸಮಷ್ಟಿ– ಎಂಬ ಭಾವವೇ ಸಲ್ಲದು. ಈಚಿನ ವೇದಾಂತಗ್ರಂಥಗಳಲ್ಲಿ ವಿಶ್ವನೆಂದರೆ ಅವಿದ್ಯೋಪಾಧಿಕನಾದ ವ್ಯಷ್ಟಿಜೀವನೆಂತಲೂ ವೈಶ್ವಾನರನೆಂದರೆ ಮಾಯೋಪಾಧಿಕನಾದ ಸಮಷ್ಟಿ ಈಶ್ವರನೆಂತಲೂ ಹೇಳುವ ವಾಡಿಕೆಯು ಪ್ರಚಾರದಲ್ಲಿದೆ. ಇದಲ್ಲದೆ ಈಶ್ವರನು ಪರೋಕ್ಷನೆಂತಲೂ ಜೀವನು ಅಪರೋಕ್ಷನೆಂತಲೂ ಹೇಳುತ್ತಾರೆ. ಆದರೆ ಭಾಷ್ಯದಲ್ಲಿ ಇದಾವದೂ ಕಂಡುಬರುವದಿಲ್ಲ. ಅಲ್ಲಿ ಈ ಪ್ರತ್ಯಗಾತ್ಮನನ್ನೇ ಈಶ್ವರನೆಂದು ಕರೆದಿದೆ. ಈಗ ಶ್ರೀಗಳು ನನಗೆ ತಿಳಿಸಿರುವ ಇನ್ನೊಂದು ಮುಖ್ಯ ವಿಚಾರವನ್ನು ಇಲ್ಲಿ ತಿಳಿಸುತ್ತೇನೆ. (72–82)

ಜಾಗರಿತಾವಸ್ಥೆಯ ಸಾಕ್ಷಿಯಾದ ವೈಶ್ವಾನರನು ಎಚ್ಚರದ ದೃಶ್ಯಪ್ರಪಂಚವನ್ನೆಲ್ಲ ಬೆಳಗುತ್ತಾನಷ್ಟೆ. ಸಾಕ್ಷಿ ಎನ್ನುವ ಶಬ್ದವನ್ನು ಲೌಕಿಕರು ತನ್ನ ಕಣ್ಣಿನಿಂದಲೇ ನೋಡುವವನು ಎಂಬರ್ಥದಲ್ಲಿ ಬಳಸುತ್ತಾರೆ. ಹೀಗೆ ನೋಡುವದಕ್ಕೂ ನೋಡಿಸಿಕೊಳ್ಳುವದಕ್ಕೂ ದೇಶಕಾಲಾದಿಗಳ ಆಧಾರವಿರ ಬೇಕು. ಆದರೆ ಆತ್ಮನು ಎಚ್ಚರವನ್ನು ಬೆಳಗುತ್ತಾನೆಂದರೆ ಹೀಗಲ್ಲ. ದೇಶಕಾಲಗಳೆಲ್ಲವೂ ಎಚ್ಚರದಲ್ಲಿಯೇ ಸೇರಿರುತ್ತವೆಯಲ್ಲದೆ ಅವಸ್ಥೆಯನ್ನೆಲ್ಲ ಸಂಪೂರ್ಣವಾಗಿ ಆತ್ಮನೇ ವ್ಯಾಪಿಸಿಬಿಟ್ಟಿರುತ್ತಾನೆ. ಆತ್ಮನಿಗೂ ಅವಸ್ಥೆಗೂ ಮಧ್ಯೆ ಯಾವ ಅಂತರವೂ ಇರುವದೇಇಲ್ಲ. ಈ ಅನುಭವದಲ್ಲಿ ನಿಂತು ನೋಡಿದಾಗ ಅವಸ್ಥೆಯು ಕಾಣುವದೇ ಇಲ್ಲ, ಎಲ್ಲೆಲ್ಲಿಯೂ ಸ್ವಯಂಪ್ರಕಾಶನಾದ ಆತ್ಮನೇ ತುಂಬಿರುತ್ತಾನೆ. ಇವನನ್ನೇ ತುರೀಯನೆಂದು ಮುಂದೆ ಶ್ರುತಿಯು ತಿಳಿಸಿಕೊಡುತ್ತದೆ. ಅರ್ಥಾತ್ ಸಾಕ್ಷಿಯಾದ ಆತ್ಮನನ್ನು ನಿಶ್ಚಯಿಸಿ ನೋಡುವಾಗ ಅವಸ್ಥೆಯಾಗಲಿ ಪ್ರಪಂಚವಾಗಲಿ ತೋರುವದೇಇಲ್ಲ; ಅವಸ್ಥೆಯನ್ನು ಕಾಣುವಾಗ ಸಾಕ್ಷಿಯ ಅನುಭವವೇ ಇರುವದಿಲ್ಲ. ಆದ್ದರಿಂದ ಅವಸ್ಥೆ ಮತ್ತು ಸಾಕ್ಷಿ ಎಂದು ಎರಡಿಲ್ಲ. ಇರುವದು ಆತ್ಮನೊಬ್ಬನೇ. ಇವನನ್ನೇ ಎಚ್ಚರದ ದೃಷ್ಟಿಯಿಂದ ವೈಶ್ವಾನರನೆಂದು ಶ್ರುತಿಯಲ್ಲಿ ಕರೆದಿರುತ್ತದೆ. ಎಚ್ಚರದ ದೃಷ್ಟಿಯನ್ನು ಬಿಟ್ಟು ನೋಡಿದಾಗ ಇವನೇ ತುರೀಯನಾಗಿರುತ್ತಾನೆ.

(83–100)

ಮುಂದೆ ತೈಜಸಪಾದವನ್ನು ವಿಚಾರಮಾಡುವ ಮೊದಲು ಒಂದು ವಿಷಯವನ್ನು ಅರಿತುಕೊಳ್ಳುವದವಶ್ಯ. ಕನಸನ್ನು ಎಚ್ಚರದ ದೃಷ್ಟಿಯಿಂದ ನೋಡುವದು ಸಾಮಾನ್ಯ. ಆದರೆ ಕನಸನ್ನು ಕನಸಿನನುಭವದ ದೃಷ್ಟಿಯಿಂದಲೇ ನೋಡಬೇಕು. ಆಗ ಎಚ್ಚರಕನಸುಗಳೆರಡೂ ಆತ್ಮನಲ್ಲಿ ತೋರಿಹಾರುವ ಹುಸಿತೋರಿಕೆಗಳಾಗಿ ಕಂಡುಬರುತ್ತವೆ. (101–105)

ಶ್ರುತಿಯು ಇಲ್ಲಿ ಮೊದಲು ದೇಹದಲ್ಲಿ ಕನಸಾಗುವದು ಎಂಬ ಆರೋಪದೃಷ್ಟಿಯನ್ನನುಸರಿಸಿ ಎರಡನೆಯ ಪಾದವೆನಿಸಿದ ತೈಜಸನನ್ನು ಒಳಅರಿವಿನವನು ಎಂದು ವರ್ಣಿಸಿರುತ್ತದೆ. ಒಳಅರಿವು ಎಂದರೆ ಎಚ್ಚರದ ಮನಸ್ಸಿನ ವಾಸನೆ ಎಂದರ್ಥ. ಎಚ್ಚರದಲ್ಲಿ ಕಾಣುವದೆಲ್ಲವೂ ಸತ್ಯ, ಕನಸಿನಲ್ಲಿ ಕಾಣುವದೆಲ್ಲವೂ ಮಿಥ್ಯೆ– ಎಂಬ ಲೌಕಿಕರ ಗ್ರಹಿಕೆಯನ್ನನುಸರಿಸಿ ಕನಸಿನವಸ್ಥೆಗೆ ಹೋದಾಗ ಅಲ್ಲಿ ಎಲ್ಲವೂ ತಾನೇ ಆಗಿರುತ್ತಾನೆ. ಇದನ್ನು ಕಂಡುಕೊಂಡಾಗ ಎಚ್ಚರಕನಸುಗಳೆರಡೂ ಒಂದೇ ಬಗೆಯ ಅವಸ್ಥೆಗಳು ಎಂಬುದನ್ನು ತಿಳಿಸುವದಕ್ಕಾಗಿ ಶ್ರುತಿಯು ತೈಜಸನನ್ನು ಸಪ್ತಾಂಗನೆಂದೂ ಏಕೋನವಿಂಶತಿ ಮುಖನೆಂದೂ ವರ್ಣಿಸಿರುತ್ತದೆ. ಈ ವರ್ಣನೆಯಿಂದ ಕನಸು ಎಚ್ಚರದ ವಾಸನೆಯಿಂದಾಗುವದೆಂಬ ಮೊದಲಿನ ಆರೋಪವನ್ನು ಅಲ್ಲಗಳೆದಂತಾಗಿ ರುತ್ತದೆ. ಮಾಂಡೂಕ್ಯದ ವೈತಥ್ಯಪ್ರಕರಣದಲ್ಲಿ ಈ ಎರಡು ಅವಸ್ಥೆಗಳನ್ನೂ ಸಮಾನವೆಂದು ಉಪಪಾದಿಸಿರುತ್ತದೆಯಲ್ಲದೆ ಅಲಾತಶಾಂತಿಯಲ್ಲಿ ಇವೆರಡೂ ಭ್ರಾಂತಿಕಲ್ಪಿತವೆಂದೂ ಆತ್ಮನನ್ನು ಅರಿತಾಗ ಈ ಭ್ರಾಂತಿಯು ತೊಲಗುತ್ತದೆಯೆಂದೂ ಹೇಳಿರುತ್ತದೆ. (106–118)

ಸಾಮಾನ್ಯವಾಗಿ ಲೌಕಿಕರು ಕನಸಿನ ಬಗ್ಗೆ ತಿಳಿದಿರುವದೇನೆಂದರೆ: ಕನಸು ಮಿಥ್ಯೆ, ಎಚ್ಚರವಾದರೊ, ಒಂದೇ ಬಗೆಯಾಗಿರುತ್ತದೆ; ಆದರೆ ಕನಸುಗಳು ದಿನಕ್ಕೊಂದು ಬಗೆಯಾಗಿರುತ್ತವೆ, ಅಷ್ಟೇ ಅಲ್ಲ; ಒಂದೇ ದಿನದಲ್ಲಿ ಅನೇಕ ಕನಸುಗಳಾಗಬಹುದು. ಎಚ್ಚರವು ನಮ್ಮೆಲ್ಲರಿಗೂ ಸಮಾನವಾಗಿರುತ್ತದೆ; ಆದರೆ ಕನಸುಗಳು ನಮಗೆ ಒಬ್ಬೊಬ್ಬರಿಗೇ ಬೇರೆಬೇರೆಯಾಗಿ ಆಗುತ್ತಿರುತ್ತವೆ. ಎಚ್ಚರದಲ್ಲಿಯ ವಸ್ತುಗಳು ಉಪಯುಕ್ತವಾಗಿರುತ್ತವೆ; ಆದರೆ ಕನಸಿನಲ್ಲಿ ಎಲ್ಲವೂ ಬರಿಯ ತೋರಿಕೆಯಾಗಿರುತ್ತದೆ. ಎಚ್ಚರದಲ್ಲಿ ಒಂದು ಗೊತ್ತಾದ ನಿಯಮ ವಿರುತ್ತದೆ; ಆದರೆ ಕನಸಿಗೆ ಯಾವ ನಿಯಮವೂ ಇರುವದಿಲ್ಲ. ಇನ್ನು ಎಚ್ಚರದ

ವಾಸನೆಗಳಿಂದಲೇ ಕನಸಿನಲ್ಲಿ ಬಗೆಬಗೆಯ ದೃಶ್ಯಗಳ ಅನುಭವ ವಾಗುವದೆನ್ನುವದಕ್ಕೆ ಸ್ವಪ್ನಫಲವನ್ನು ತಿಳಿಸುವ ಶಾಸ್ತ್ರವೂ ದೇವತೋಪಾಸಕನಿಗೆ ಕನಸಿನಲ್ಲಿ ಆಗುವ ದೇವತಾದರ್ಶನವೂ ಸಾಧಕವಾಗಿರುತ್ತವೆ. ಇದಲ್ಲದೆ ಈಚೆಗೆ ಮನಃಶಾಸ್ತ್ರಜ್ಞರೂ ವೈದ್ಯರೂ ಕೂಡ ಕನಸುಗಳನ್ನು ಪರೀಕ್ಷಿಸತೊಡಗಿದ್ದಾರೆ. ಇದರಿಂದ ಕನಸು ಮಿಥ್ಯೆ ಹಾಗೂ ಎಚ್ಚರದ ವಾಸನೆಯಿಂದಾದದ್ದು ಎನ್ನುವದೇ ಸರಿ. ಇದಕ್ಕೆ ಹೊರತಾಗಿ ಎಚ್ಚರ, ಕನಸು– ಇವೆರಡೂ ಸತ್ಯ, ಇಲ್ಲದಿದ್ದರೆ ಎರಡೂ ಮಿಥ್ಯೆಯೆನ್ನುವದು ಸರಿಯಾಗಲಾರದು. ಇದು ಲೌಕಿಕರೆಲ್ಲರ ಆಕ್ಷೇಪ. (119–128)

ಆದರೆ ಸರಿಯಾಗಿ ವಿಚಾರಮಾಡಿನೋಡಿದಾಗ ಎಚ್ಚರದಲ್ಲಿದ್ದಾಗ ನಾವು ಕನಸನ್ನು ಕನಸೆಂದು ಭಾವಿಸುತ್ತೇವೆಯೇ ಹೊರತು ಕನಸಿನಲ್ಲಿದ್ದಾಗ ಅದು ಎಚ್ಚರವೆಂದೇ ತೋರುತ್ತಿರುತ್ತದೆ. ಇಲ್ಲಿಯಂತೆ ಅಲ್ಲಿಯೂ ಕಾಲವು ಒಂದೇಸಮನೆ ಪ್ರವಹಿಸುತ್ತಿರುವದೇ ಹೊರತು ಅದು ಕ್ಷಣಿಕವೆಂದು ಆಗ ನಾವು ಎಣಿಸುವದೇಇಲ್ಲ. ಅಲ್ಲಿ ತೋರುವ ಕಾಲದೇಶಗಳೂ ಕಾರ್ಯಕಾರಣಗಳೂ ನಮಗೆ ಆಗ ಸತ್ಯವೆಂದೇ ಕಂಡುಬರುತ್ತವೆ. ಇಲ್ಲಿಯಂತೆ ಅಲ್ಲಿರುವ ಆ ಜಗತ್ತು ಅಲ್ಲಿಯ ಜನರೆಲ್ಲರಿಗೂ ಸಮಾನವಾಗಿಯೇ ಇರುತ್ತದೆ. ಇಲ್ಲಿರುವ ವಸ್ತುಗಳು ಇಲ್ಲಿಗೆ ಉಪಯುಕ್ತವಾದರೆ ಅಲ್ಲಿಯ ವಸ್ತುಗಳು ಅಲ್ಲಿಗೆ ಉಪಯುಕ್ತ ವಾಗಿರುತ್ತವೆ. ಅವು ಇಲ್ಲಿ ವ್ಯರ್ಥವಾದರೆ ಇವು ಅಲ್ಲಿ ವ್ಯರ್ಥ. ಇಲ್ಲಿರುವ ನಿಯಮ ಅಲ್ಲಿಲ್ಲವಾದರೆ ಅಲ್ಲಿರುವ ನಿಯಮ ಇಲ್ಲಿಯೂಇಲ್ಲ. ಆದ್ದರಿಂದ ಇಲ್ಲಿಯದು ಇಲ್ಲಿಗೇ ಸರಿ, ಅಲ್ಲಿಯದು ಅಲ್ಲಿಗೇ ಸರಿ. ಒಟ್ಟಿನಲ್ಲಿ ಎರಡೂ ಒಂದನ್ನೊಂದು ಬಿಟ್ಟುಹೋಗುತ್ತವೆಯಾದ್ದರಿಂದ ಎರಡೂ ಸಮವಾಗಿಯೇ ಮಿಥ್ಯೆಯಾಗಿರುತ್ತವೆ. (129–139)

ಇನ್ನು ಕನಸು ಎಚ್ಚರದ ವಾಸನೆಯಿಂದಾಗುವದೆಂಬ ವಾದವು ವ್ಯವಹಾರದೃಷ್ಟಿಯಿಂದ ಸರಿಯಾದರೂ ತತ್ತ್ವವನ್ನು ನಿರ್ಣಯಿಸುವಾಗ ಇದಕ್ಕೆ ಯಾವ ಬೆಲೆಯೂ ಇಲ್ಲ. ಏಕೆಂದರೆ ಜಾಗ್ರತ್ಸ್ವಪ್ನಗಳಿಗೆ ಕಾರ್ಯಕಾರಣ ಸಂಬಂಧವನ್ನು ಕಲ್ಪಿಸುವದಕ್ಕೇ ಆಗುವಂತಿಲ್ಲ. ಒಮ್ಮೆ ಎಚ್ಚರವು ಕನಸಿಗೆ ಕಾರಣವೆಂದು ಕಂಡುಬಂದರೆ ಮತ್ತೊಮ್ಮೆ ಕನಸೇ ಎಚ್ಚರುವದಕ್ಕೆ ಕಾರಣವಾಗಬಹುದು. ಇದು ಹೇಗೇ ಕಂಡುಬಂದರೂ ಸತ್ಯದಿಂದ ಮಿಥ್ಯೆಯಾಗಲಿ, ಮಿಥ್ಯೆಯಿಂದ ಸತ್ಯವಾಗಲಿ ಹುಟ್ಟಲಾರದು. ಅಥವಾ

ಸತ್ಯದಿಂದ ಸತ್ಯವೂ ಮಿಥ್ಯೆಯಿಂದ ಮಿಥ್ಯೆಯೂ ಹುಟ್ಟಲಾರದು. ಆದ್ದರಿಂದ ಹುಟ್ಟುವದೆಂಬುದೇ ಸುಳ್ಳು– ಎಂದು ಸ್ಪಷ್ಟವಾಗುತ್ತದೆ. (140–149)

ಎಚ್ಚರಕನಸುಗಳೆರಡೂ ತಾವು ತೋರಿಕೊಳ್ಳುವ ಮುನ್ನವೂ ಅಡಗಿದನಂತರವೂ ಕಾಣಿಸಿಕೊಳ್ಳದೆ ಮಧ್ಯೆ ಮಾತ್ರ ಇರುವಂತೆ ಕಂಡು ಬರುತ್ತವೆ. ಇದೇ ಮಿಥ್ಯೆಯ ಲಕ್ಷಣ. ಇಲ್ಲಿ ಮೊದಲುಕೊನೆಯೆನ್ನುವದು ಕಾಲವಾಚಕಶಬ್ದವಲ್ಲ, ಸಾಕ್ಷಿಯನುಭವವನ್ನೇ ಅದು ತೋರಿಸಿಕೊಡುತ್ತದೆ. ಅದನ್ನು ಗುರುತಿಸಿದಾಗ ಎಚ್ಚರಕನಸುಗಳು ತಾವು ತೋರಿಕೊಳ್ಳುವ ರೂಪ ದಿಂದ ಪರಮಾರ್ಥಸತ್ಯವಲ್ಲ, ತಮ್ಮನ್ನು ಬೆಳಗುವ ಸಾಕ್ಷಿಚೈತನ್ಯಕ್ಕಿಂತ ಬೇರೆಯಾದ ಅಸ್ತಿತ್ವ ಅವಕ್ಕೆ ಇಲ್ಲವೇಇಲ್ಲ ಎಂದು ನಿಶ್ಚಯವಾಗುತ್ತದೆ. ಎಚ್ಚರ, ಕನಸು– ಎಂದು ಕನವರಿಸುವದೇ ಕನಸು; ನಮ್ಮ ಆತ್ಮನೊಬ್ಬನೇ ನಿಜವಾಗಿ ಇರುವವನು ಎಂದು ತಿಳಿಯುವದೇ ಎಚ್ಚರ. ವಿಶ್ವತೈಜಸರ ರೂಪದಲ್ಲಿರುವ ಆತ್ಮನು ಯಾವಾಗಲೂ ಅಜಾದ್ವಯನಾಗಿಯೇ ಇರುತ್ತಾನೆ. ಹೀಗೆಂದು ಅರಿತವನು ಆ ಅವಸ್ಥೆಗಳ ದೃಶ್ಯಗಳ ಆಗುಹೋಗುಗಳಿಂದ ಎಂದಿಗೂ ಶೋಕಿಸುವದಿಲ್ಲ. (150–163)

ದ್ವೈತವು ಹುಸಿ ಎಂದದ್ದರಿಂದಲೇ ಉತ್ತಮಾಧಿಕಾರಿಗೆ ಆತ್ಮನಿಶ್ಚಯವುಂಟಾಗುತ್ತದೆ. ಆತ್ಮನನ್ನು ಬೇರೆಯಾಗಿ ಅವನಿಗೆ ತಿಳಿಸಿಕೊಡಬೇಕಾದದ್ದೇ ಇರುವದಿಲ್ಲ. ಏಕೆಂದರೆ ತಾನಲ್ಲದ್ದನ್ನು ಕಳೆಯುವದೇ ತನ್ನನ್ನರಿತುಕೊಳ್ಳುವದಕ್ಕೆ ಉಪಾಯವಾಗಿರುತ್ತದೆ, ಹೀಗಿದ್ದರೂ ಕೆಲವರು ದ್ವೈತವೇನೋ ಹುಸಿಯಾಯಿತು. ಆದರೆ ತಾನು ಅದ್ವಯನೆಂಬುದು ಹೇಗೆ? ಎಂದು ಕೇಳುತ್ತಾರೆ. ಅಂಥವರಿಗಾಗಿ ಶ್ರುತಿಯು ನಿದ್ರೆಯ ಅನುಭವವನ್ನು ತೋರಿಸುತ್ತದೆ. ಮುಂದಿನ ಅಧ್ಯಾಯದಲ್ಲಿ ಅದರ ವಿವರವನ್ನು ತಿಳಿಸುವದಕ್ಕೆ ಯತ್ನಿಸುತ್ತೇನೆ. (164–171)

## ಎಂಟನೆಯ ಅಧ್ಯಾಯ

ತನಿನಿದ್ರೆಯ ಅನುಭವವನ್ನು ಮನದಂದರೆ ಮೂರವಸ್ಥೆಗಳಿವೆ ಎಂಬ ತಪ್ಪುತಿಳಿವಳಿಕೆಯೇ ದೂರಾಗುತ್ತದೆ. ಆ ಅನುಭವವನ್ನು ತೋರಿಸಿಕೊಡು ವದಕ್ಕಾಗಿಯೇ ಶ್ರುತಿಯು ಆತ್ಮನ ಮೂರನೆಯ ಪಾದವೆನಿಸಿದ ಪ್ರಾಜ್ಞಪಾದ ವನ್ನು 'ಸುಷುಪ್ತಸ್ಥಾನಃ ಏಕೀಭೂತಃ ಪ್ರಜ್ಞಾನಘನ ಏವ'– ಎಂಬಿತ್ಯಾದಿ

ವಿಶೇಷಣಗಳಿಂದ ಮೊದಲು ಆರೋಪದೃಷ್ಟಿಯಿಂದ ವರ್ಣಿಸಲಾರಂಭಿಸಿ ರುತ್ತದೆ. ಎಚ್ಚರಕನಸುಗಳಿಲ್ಲದ ಕೇವಲ ಗಾಢನಿದ್ರೆಯ ಅನುಭವವನ್ನೇ ಶ್ರುತಿಯಲ್ಲಿ 'ಸುಷುಪ್ತಸ್ಥಾನ'ವೆಂದಿರುತ್ತದೆ. ಹಿಂದೆ ಜಾಗ್ರತ್ಸ್ವಪ್ನಗಳಲ್ಲಿ ದ್ವೈತವೆಲ್ಲವೂ ಆಗಿದ್ದ ತಾನೇ ಈಗ ಸುಷುಪ್ತಿಯಲ್ಲಿ ಒಂದಾಗಿರುತ್ತಾನೆ: ಇದೇ 'ಏಕೀಭೂತ' ಎಂಬ ಮಾತಿಗೆ ಅರ್ಥವು. ಇದರಂತೆ ಜಾಗ್ರತ್ಸ್ವಪ್ನಗಳಲ್ಲಿ ಬಿಡಿಯರಿವಾದ ತಾನೇ ಸುಷುಪ್ತಿಯಲ್ಲಿ ಅರಿವಿನ ಗಟ್ಟಿಯಾಗಿರುತ್ತಾನೆ; ಇದೇ 'ಪ್ರಜ್ಞಾನಘನ' ಎಂಬ ಮಾತಿಗೆ ಅರ್ಥವು. ನೀರು ಅಲೆಗಳಾದಾಗ ಅನೇಕವಾದಂತೆಯೂ ಅಲೆಗಳಿಲ್ಲದಾಗ ಒಂದೇ ಆಗಿರುವಂತೆಯೂ ಕಾಣುವ ದೃಷ್ಟಾಂತವನ್ನು ಇಲ್ಲಿ ಏಕೀಭೂತನೆಂಬ ಮಾತಿಗೆ ಅನ್ವಯಿಸಿಕೊಳ್ಳಬಹುದು. ಇದರಂತೆ ಚಿನ್ನದ ಆಭರಣವನ್ನು ಕರಗಿಸಲು ಅದು ಚಿನ್ನದ ಗಟ್ಟಿಯೇ ಆಗಿರುವ ದೃಷ್ಟಾಂತವನ್ನು ಪ್ರಜ್ಞಾನಘನನೆಂಬ ಮಾತಿಗೆ ಅನ್ವಯಿಸಿಕೊಳ್ಳಬಹುದು. ಒಟ್ಟಿನಲ್ಲಿ ಪ್ರಜ್ಞಾನಘನನೆಂಬ ಮಾತಿಗೆ ಅರಿವಿನ ಗಟ್ಟಿಯೆಂಬುದೇ ಸರಿಯಾದ ಅರ್ಥವು. ಆದ್ದರಿಂದಲೇ ಭಾಷ್ಯಕಾರರು 'ಏವ' ಎಂಬ ಶಬ್ದವನ್ನು ಇಲ್ಲಿ ಉಪಯೋಗಿಸಿ ರುತ್ತಾರೆ. (1–17)

ನಾನು, ಮಿಕ್ಕದ್ದು– ಎಂಬ ಆಯಾಸದ ದುಃಖವು ಇಲ್ಲದಿರುವ ದರಿಂದ ಪ್ರಾಜ್ಞನು 'ಆನಂದಮಯ'ನೆನಿಸಿರುತ್ತಾನೆ. ಆನಂದಮಯನೆಂದರೆ ಆನಂದಪ್ರಚುರನೇ ಹೊರತು ಆನಂದವೇ ಎಂದಲ್ಲ. ಏಕೆಂದರೆ ಇದು ಆತ್ಯಂತಿಕಸುಖವಲ್ಲ, ಎಚ್ಚರವಾಗುತ್ತಲೂ ಕೊನೆಗಾಣುತ್ತದೆ. ಸುಷುಪ್ತಿಯಲ್ಲಿ ಕೆಲವರು ಆನಂದಮಯಕೋಶವಿದೆ ಎನ್ನುತ್ತಾರೆ. ಆದರೆ ಇದು ಸರಿಯಲ್ಲ. ಕೋಶವೆನ್ನಿಸಿಕೊಳ್ಳಲು ಪ್ರಿಯ, ಮೋದ, ಪ್ರಮೋದ– ಎಂಬ ವೃತ್ತಿಗಳು ಇರಬೇಕು. ಎಚ್ಚರಕನಸುಗಳಲ್ಲಿ ಮಾತ್ರವೇ ಈ ವೃತ್ತಿಗಳು ತೋರುವವೇ ಹೊರತು ಸುಷುಪ್ತಾವಸ್ಥೆಯಲ್ಲಿ ಯಾವದೊಂದು ವೃತ್ತಿಯೂ ಭಾಸಿಸುವದಿಲ್ಲ. ಆದ್ದರಿಂದ ತೈತ್ತಿರೀಯದಲ್ಲಿ ಮಯ ಎಂಬ ಪ್ರತ್ಯಯವನ್ನು ವಿಕಾರಾರ್ಥದಲ್ಲಿ ಉಪಯೋಗಿಸಿ ಆನಂದಮಯಕೋಶವನ್ನು ತಿಳಿಸಿದೆಯೆಂದೂ ಇಲ್ಲಿ ಕೋಶವನ್ನು ಹೇಳಿಲ್ಲವೆಂದೂ ತಿಳಿಯಬೇಕು. (18–27)

ಸುಷುಪ್ತಿಯಲ್ಲಿ ಆತ್ಮನು ಆನಂದಮಯನಾಗಿ ಆನಂದವನ್ನು ಭೋಗಿಸುತ್ತಿರುತ್ತಾನಾದ್ದರಿಂದ 'ಆನಂದಭುಕ್' ಎನಿಸಿರುತ್ತಾನೆ. ಎಚ್ಚರ

ದಲ್ಲಿಯೂ ಕನಸಿನಲ್ಲಿಯೂ ನಮಗೆ ಆನಂದವು ಹೊಸದಾಗಿ ಬರಬೇಕಾಗಿರುತ್ತದೆ; ನಿದ್ರೆಯಲ್ಲಿ ಹಾಗಲ್ಲ, ನಾವೇ ಆನಂದಸ್ವರೂಪರಾಗಿರುತ್ತೇವೆ. ಅಲ್ಲಿ ಭೋಕ್ತೃಭೋಗಭೋಗ್ಯ ಎಲ್ಲವೂ ಒಂದೇ ಆಗಿರುತ್ತದೆ. ಇದನ್ನರಿಯದವರು ಸುಷುಪ್ತಿಕಾಲದಲ್ಲಿ ಪ್ರಾಜ್ಞಜೀವನು ಸ್ವರೂಪಭೂತವಾದ ಬ್ರಹ್ಮಾನಂದವನ್ನು ಅಜ್ಞಾನಮಯವೃತ್ತಿಗಳಿಂದ ಅನುಭವಿಸುತ್ತಿರುವನು ಎಂದು ಅಲ್ಲಿ ತ್ರಿಪುಟಿಕಲ್ಪನೆಯನ್ನು ಮಾಡಿಕೊಂಡಿರುವರು. ಈ ಕಲ್ಪನೆಯು ಭಾಷ್ಯ ಮತ್ತು ಅನುಭವಕ್ಕೆ ಹೊರತಾಗಿದೆಯೆಂಬುದನ್ನು ಬರಿನಿದ್ರೆಯ ಅನುಭವವನ್ನು ಲಕ್ಷ್ಯಕ್ಕೆ ತೆಗೆದುಕೊಂಡಮಾತ್ರದಿಂದಲೇ ಅರಿತುಕೊಳ್ಳಬಹುದು. (28–39)

ಎಚ್ಚರಕನಸುಗಳಿಗೆ ನಿದ್ರೆಯೇ ದ್ವಾರವಾದ್ದರಿಂದ ಸುಷುಪ್ತಾತ್ಮನನ್ನು 'ಚೇತೋಮುಖನು' ಎಂದಿದೆ. ಜ್ಞಾನವೆಲ್ಲವೂ ಗಾಢನಿದ್ರೆಯ ಮೂಲಕವೇ ಹೊರಬರಬೇಕಾಗಿರುವದರಿಂದಲೂ ಪ್ರಾಜ್ಞನು ಚೇತೋಮುಖನು ಎಂದಾದರೂ ಅರ್ಥಮಾಡಬಹುದು. (40–42)

ಸೂತ್ರಭಾಷ್ಯದಲ್ಲಿ ಪರಮಾತ್ಮವಾಚಕವೆಂದು ವರ್ಣಿಸಲಾದ 'ಪ್ರಾಜ್ಞ'ಶಬ್ದಕ್ಕೆ ಅರಿವಿನ ಸ್ವರೂಪದವನು ಎಂದೇ ಅರ್ಥ. ನಿದ್ರೆಯಲ್ಲಿ ಬರಿಯರಿವಾಗಿದ್ದ ಇವನೇ ಎಚ್ಚರಕನಸುಗಳಲ್ಲಿ ಎಲ್ಲವನ್ನೂ ಅರಿಯುತ್ತಾನೆ. ಅರಿಯುವ ಕ್ರಿಯೆಯು ಇವನಲ್ಲಿ ಆರೋಪಮಾತ್ರ, ಅರಿವಿನ ಸ್ವರೂಪದವನು ಎಂಬುದೇ ಪರಮಾರ್ಥ. ಸುಷುಪ್ತಿಯಲ್ಲಿ ಆತ್ಮನು ಅರಿಯುವವನಾಗಿದ್ದುಕೊಂಡೇ ಏನನ್ನೂ ಅರಿಯುವದಿಲ್ಲ; ಏಕೆಂದರೆ ಅರಿಯುವದಕ್ಕೆ ಆಗ ತನಗಿಂತ ಬೇರೆಯಾಗಿ ಏನೂ ಇರುವದಿಲ್ಲ– ಎಂದು ಶ್ರುತಿಯೊಂದು ತಿಳಿಸುತ್ತದೆ. ಇದರಿಂದ ಈಚಿನವರು ಪ್ರಾಜ್ಞಶಬ್ದಕ್ಕೆ ಪ್ರಾಯೇಣ–ಅಜ್ಞ ಎಂಬ ಅರ್ಥವನ್ನು ಮಾಡಿದ್ದು ವ್ಯರ್ಥವೇ ಎಂಬುದು ವ್ಯಕ್ತವಾಗುತ್ತದೆ. (೪೩–೫೨)

ಆತ್ಮನ ವಶದಲ್ಲಿಯೇ ಪ್ರಪಂಚವಿರುತ್ತದೆ, ಆತ್ಮಚೈತನ್ಯದಿಂದಲೇ ಅದು ಬೆಳಗುತ್ತಿರುತ್ತದೆ; ಆ ಆತ್ಮನೇ ಎಲ್ಲಾ ಭೂತಗಳಿಗೂ ಆತ್ಮನಾಗಿರುತ್ತಾನೆ. ಆದ್ದರಿಂದ ಸುಷುಪ್ತಾತ್ಮನನ್ನು ಸರ್ವಜ್ಞನು, ಸರ್ವೇಶ್ವರನು, ಅಂತರ್ಯಾಮಿ– ಎಂದುಮುಂತಾಗಿ ಶ್ರುತಿಯಲ್ಲಿ ವರ್ಣಿಸಿರುತ್ತದೆ. (53–56)

ಇದುವರೆಗೂ ವ್ಯವಹಾರದೃಷ್ಟಿಯನ್ನವಲಂಬಿಸಿ ನಮಗೆಲ್ಲರಿಗೂ ಎಚ್ಚರ, ಕನಸು, ತನಿನಿದ್ರೆ–ಎಂಬ ಮೂರು ಅವಸ್ಥೆಗಳು ಆಗುತ್ತಿರುವವೆಂತಲೂ

ಅವುಗಳಿಗೆ ವಿಶ್ವ, ತೈಜಸ, ಪ್ರಾಜ್ಞ– ಇವರು ಆತ್ಮರಾಗಿರುವರೆಂತಲೂ ಇವರುಗಳಿಗೆ ಕ್ರಮವಾಗಿ ಹೊರಅರಿವು, ಒಳ ಅರಿವು, ಒಳಹೊರಗೆ ಎಂಬ ಭೇದವಿಲ್ಲದ ಅರಿವು– ಸ್ವಭಾವವಾಗಿರುವದೆಂತಲೂ ವರ್ಣಿಸಿದ್ದಾಯಿತು. ಆದರೆ ನಿಜವಾಗಿಯೂ ವಿಶ್ವಾದಿಗಳು ಮೂವರಲ್ಲ; ಒಬ್ಬ ಆತ್ಮನೇ ಮೂರವಸ್ಥೆಗಳಲ್ಲಿಯೂ ಮೂರು ಬಗೆಯಾಗಿರುವಂತೆ ತೋರುತ್ತಿರುವನು. (57–62)

ಎಚ್ಚರದ ಅವಸ್ಥೆಯಲ್ಲಿಯೇ ವಿಶ್ವನೇ ಮೊದಲಾದ ಮೂವರ ಅನುಭವವನ್ನೂ ಈ ನಮ್ಮ ದೇಹದಲ್ಲಿಯೇ ಕಂಡುಕೊಳ್ಳಲು ಬರುತ್ತದೆ. ಹೇಗೆಂದರೆ: ಇಂದ್ರಿಯಗಳೆಂಬ ಉಪಾಧಿಯಿಂದ ಹೊರಗಿನ ವಿಷಯಗಳನ್ನು ಅರಿಯುವಾಗ ಇಂದ್ರಿಯಗಳಲ್ಲಿಯೇ ವಿಶ್ವನ ಅನುಭವವಾಗುತ್ತದೆ. ಇಂದ್ರಿಯಗಳಿಂದ ಹೊರಗಿನ ವಿಷಯಗಳನ್ನು ನೋಡುವದನ್ನು ಬಿಟ್ಟು ಮನಸ್ಸಿನಲ್ಲಿಯೇ ದೃಗ್ದೃಶ್ಯಗಳನ್ನು ಕಲ್ಪಿಸಿಕೊಳ್ಳುತ್ತಿರುವಾಗ ಅಲ್ಲಿಯೇ ತೈಜಸನ ಅನುಭವವಾಗುತ್ತದೆ. ಇಂದ್ರಿಯ ಮತ್ತು ಮನಸ್ಸಿನ ವ್ಯಾಪಾರವನ್ನೆಲ್ಲ ಬಿಟ್ಟು ತನ್ನ ಸ್ವರೂಪದಲ್ಲಿರುವಾಗ ಈ ಹೃದಯದಲ್ಲಿಯೇ ಪ್ರಾಜ್ಞನ ಅನುಭವವಾಗುತ್ತದೆ. ಹೀಗೆ ಒಬ್ಬ ಪರಮಾತ್ಮನೇ ಮೂರು ಬಗೆಯಿಂದ ಈ ನಮ್ಮ ಜಾಗ್ರದ್ದೇಹದಲ್ಲಿ ಇದ್ದುಕೊಂಡಿರುತ್ತಾನೆ. ಇವನ ನಿಜವಾದ ನಿರುಪಾಧಿಕವಾದ ಸ್ವರೂಪವೇ ತುರೀಯವು ಎಂದು ಶ್ರುತಿಯು ಹೇಳುತ್ತದೆ. (63–68)

ಮೂರವಸ್ಥೆಗಳ ಅನುಭವಕ್ಕಿಂತ ಬೇರೆಯಾದ ಅನುಭವವೇ ಮನುಷ್ಯನಿಗಿರುವದಿಲ್ಲವಾದ್ದರಿಂದ ತುರೀಯವು ಶೂನ್ಯವೆಂದೇಕೆ ಕಲ್ಪಿಸಬಾರದು?– ಎಂಬ ಶಂಕೆಯು ಸರಿಯಲ್ಲ. ಏಕೆಂದರೆ ಅವಸ್ಥೆಗಳೆಲ್ಲವೂ ಮಿಥ್ಯೆ, ಎಂದರೆ ಆಯಾ ಕಾಲದಲ್ಲಿ ಮಾತ್ರ ತೋರಿಹಾರುವವುಗಳಾಗಿರುತ್ತವೆ. ಹುಸಿತೋರಿಕೆಗಳಾದರೋ ಅಧಿಷ್ಠಾನವಿಲ್ಲದೆ ತೋರಿಕೊಳ್ಳಲಾರವು. ಆದ್ದರಿಂದ ಅವಸ್ಥೆಗಳು ತೋರಿಹಾರುವದಕ್ಕೆ ಆಧಾರವಾದ ತುರೀಯವು ಶೂನ್ಯವಲ್ಲವೆಂದಾಯಿತು. ಇದರಂತೆಯೇ ತುರೀಯವು ನಿಷ್ಪ್ರಯೋಜಕವಸ್ತುವಲ್ಲವೆಂತಲೂ ತಿಳಿದುಕೊಳ್ಳಬೇಕು. ಏಕೆಂದರೆ ತುರೀಯನು ಅದ್ವಿತೀಯನಾದ ಆತ್ಮನು ಎಂದು ನಿಶ್ಚಯವಾದರೆ ಮೊದಲು ತೋರುತ್ತಿದ್ದ ಅನರ್ಥರೂಪವಾದ ಪ್ರಪಂಚವೆಲ್ಲ ಹೋಗಿಬಿಡುವದೆಂದಾಗುವದು. (69–77)

ಮೂರು ಅವಸ್ಥೆಗಳಿಗಿಂತ ತುರೀಯನು ಬೇರೆಯೆಂದಾದರೆ ಆ ತುರೀಯದ ಅವಸ್ಥೆಯನ್ನು ಸೇರುವದು ಹೇಗೆ? ಎಂದು ಶಂಕಿಸಬಾರದು.

ಮೂರು ಅವಸ್ಥೆಗಳಲ್ಲಿಯೂ ಇರುವ ಆತ್ಮನ ಪರಮಾರ್ಥಸ್ವರೂಪವೇ ತುರೀಯನು, ಅದು ಬೇರೊಂದು ಅವಸ್ಥೆಯಲ್ಲಿ ಕಾಣಬೇಕಾದ ಸ್ವರೂಪವಲ್ಲ ಮೂರವಸ್ಥೆಗಳಿಗಿಂತ ಅದು ಬೇರೆಯಾಗಿದ್ದರೆ ತುರೀಯವನ್ನು ತಿಳಿಯುವದಕ್ಕೆ ದ್ವಾರವೇ ಇಲ್ಲದೆಹೋಗುತ್ತಿತ್ತು. ಹಾಗಿಲ್ಲದ್ದರಿಂದಲೇ ಶ್ರುತಿಯು ಮಿಥ್ಯಾಜ್ಞಾನ ವನ್ನು ಕಳೆಯುವದರ ಮೂಲಕ ತುರೀಯನನ್ನು ತೋರಿಸಿಕೊಡುತ್ತದೆ.
(78–86)

ಒಳಅರಿವು, ಹೊರಅರಿವು, ಒಳಹೊರಗಿಲ್ಲದ ಅರಿವು– ಈ ಯಾವ ಧರ್ಮಗಳೂ ತುರೀಯನಿಗೆ ಸೇರಿಲ್ಲ. ಹೀಗೆಯೇ ಜಾಗ್ರತ್ಸ್ವಪ್ನ ಸುಷುಪಿತಗಳಿಗೂ ಅವನಸ್ವರೂಪಕ್ಕೆ ನಿಜವಾಗಿ ಸೇರಿಲ್ಲ. ತುರೀಯನನ್ನರಿಯ ದಿರುವಾಗ ಮಾತ್ರ ಕಾಣಿಸಿಕೊಳ್ಳುವ ಅವು ಮಿಥ್ಯೆಯಾಗಿರುತ್ತವೆ; ತುರೀಯನೊಬ್ಬನೇ ಸತ್ಯನು. ಆದರೆ ನಿತ್ಯವೂ ನಮ್ಮ ಅನುಭವದಲ್ಲಿರುವ ಮೂರವಸ್ಥೆಗಳನ್ನು ಇಲ್ಲವೆಂದು ತಿಳಿಯುವದು ಹೇಗೆ? ಎಂದು ಆಕ್ಷೇಪಿಸಿದರೆ ಚೈತನ್ಯವು ಯಾವಾಗಲೂ ಒಂದೇ ಇರುತ್ತಿದ್ದರೂ ಅವಸ್ಥೆಗಳು ಒಂದನ್ನೊಂದು ಬಿಟ್ಟುಹೋಗುವದರಿಂದ ಹಗ್ಗದಲ್ಲಿ ತೋರುವ ಹಾವುಹೂಮಾಲೆಗಳಂತೆ ಅವು ಅಸತ್ಯವಾಗಿರುತ್ತವೆ. ಆದ್ದರಿಂದಲೇ ಅವು ಇಲ್ಲವೆಂದು ತಿಳಿಯಬೇಕು
(87–93)

ನಿದ್ರೆಯಲ್ಲಿ ಚೈತನ್ಯವೂ ಇಲ್ಲವಾಗುವದಲ್ಲ! ಹಾಗಿದ್ದ ಮೇಲೆ ಆತ್ಮನು ನಿತ್ಯ, ಅವಸ್ಥೆಗಳು ಮಿಥ್ಯೆ ಎನ್ನುವದು ಸರಿಯೇ?– ಎಂದು ಯಾರಾದರೂ ಕೇಳಬಹುದು. ಆದರೆ ನಿದ್ರೆಯಲ್ಲಿ ಚೈತನ್ಯವು ಇಲ್ಲದಂತಾಗುವದಿಲ್ಲ. ಯಾವ ಅನುಭವಕ್ಕೆ ಸುಷುಪ್ತಿಯು ಬರುತ್ತದೆಯೋ ಅದೇ ಚೈತನ್ಯಸ್ವರೂಪವು. ಆ ಸ್ವರೂಪವು ಹೇಗಿರುವದೆಂದು ಕೇಳಿದರೆ ಶ್ರುತಿಯು ಅದನ್ನು ಜ್ಞಾತೃತ್ವವಿಲ್ಲದ್ದು, ಜಡವಲ್ಲದ್ದು, ಕಾಣಲ್ಪಡದ್ದು, ವ್ಯವಹಾರಕ್ಕೆ ಸಿಕ್ಕದ್ದು, ಕರ್ಮೇಂದ್ರಿಯಗಳಿಂದ ಹಿಡಿಯುವದಕ್ಕೆ ಆಗದ್ದು, ಹೆಗ್ಗುರುತಿಲ್ಲದ್ದು, ಯೋಚಿಸುವದಕ್ಕಾಗದ್ದು, ಶಬ್ದಗಳಿಂದ ಹೇಳುವುದಕ್ಕೆ ಬಾರದ್ದು–ಎಂದು ವರ್ಣಿಸಿರುತ್ತದೆ. (94–99)

ತುರೀಯಸ್ವರೂಪವನ್ನರಿತುಕೊಳ್ಳುವುದಕ್ಕೆ ಏಕಾತ್ಮ ಪ್ರತ್ಯಯವೊಂದೇ ಸಾಧಕವಾಗಿರುತ್ತದೆ, ಎಂದರೆ ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಮೂರು ಅವಸ್ಥೆಗಳಲ್ಲಿಯೂ ಆತ್ಮಚೈತನ್ಯವೊಂದೇ ಇರುವುದೆಂಬ ಅನುಭವವನ್ನನುಸರಿಸಿ

ನೋಡಿದಕೂಡಲೇ ಇದರಲ್ಲಿ ನಿಂತುಕೊಳ್ಳಬಹುದಾಗಿರುತ್ತದೆ. ಹೀಗೆ ಸ್ಥಾನತ್ರಯಕ್ಕೂ ಒಂದೇ ಆಗಿರುವ ತನ್ನ ಸ್ವರೂಪವನ್ನು ಗ್ರಹಿಸಿದ ಪ್ರತ್ಯಯವಾದ್ದರಿಂದ ಇದು ಏಕಾತ್ಮಪ್ರತ್ಯಯವೆನಿಸಿದೆ. ಬೆಂಕಿಯ ರಾಶಿಯಲ್ಲಿ ಬಿದ್ದು ಸುಟ್ಟುಹೋದ ಕಟ್ಟಿಗೆಯ ತುಂಡು ಕಟ್ಟಿಗೆಯ ಆಕಾರವಾಗಿ ಕಂಡರೂ ಬೆಂಕಿಯೇ ಆಗಿರುವಂತೆ– ಹೊರನೋಟಕ್ಕೆ ಈ ಪ್ರತ್ಯಯವು ವೃತ್ತಿಯಂತೆ ಕಂಡುಬಂದರೂ ನಿಜವಾಗಿ ಆತ್ಮನೇ ಆಗಿರುತ್ತದೆ. ಏಕೆಂದರೆ ಯಾವಾಗ 'ನಾನು', 'ಇದು'– ಎಂಬ ರೂಪವನ್ನು ಮನಸ್ಸು ತಾಳುತ್ತದೆಯೊ ಆಗಲೇ ಅದನ್ನು ವೃತ್ತಿ ಎಂದು ಕರೆಯುವದು ಯೋಗ್ಯವಾಗಿದೆ. ಆದರೆ ಇದು ಆ ಬಗೆಯದಾಗಿರದೆ 'ತಾನು' ಎಂಬ ನಿರ್ವಿಕಾರವಾದ ಚೈತನ್ಯವನ್ನನು ಸರಿಸಿದ್ದಾದ್ದರಿಂದ ಪ್ರತ್ಯಯವೇ ಆದರೂ ಇದರಲ್ಲಿ ಒಂದು ವಿಶೇಷವಿರುತ್ತದೆ. (100–110)

ನಾನು ಎಂಬುದನ್ನು ಕೈಬಿಟ್ಟು ತಾನೆಂಬ ಈ ಪ್ರತ್ಯಯವನ್ನನುಸರಿಸಿ ನೋಡಿದಾಗ ತುರೀಯನಲ್ಲಿ ಅವಸ್ಥೆಗಳೇ ಇರುವದಿಲ್ಲ. ಇದರಿಂದ ಈ ಸ್ವರೂಪವು ಶಾಂತವೂ ಮಂಗಲವೂ ಅದ್ವಯವೂ ಆಗಿರುವದು. ಮಿಥ್ಯೆಯಾದ ಮೂರವಸ್ಥೆಗಳ ದೃಷ್ಟಿಯಿಂದ ಇದನ್ನು ನಾಲ್ಕನೆಯದು ಎಂದಿದೆಯೇ ಹೊರತು ನಿಜವಾಗಿ ನಾಲ್ಕು ಎಂಬ ಸಂಖ್ಯೆ ಇಲ್ಲಿ ವಿವಕ್ಷಿತವಲ್ಲ. ಇವನಲ್ಲಿ ಅವಿದ್ಯಾಕಲ್ಪಿತವಾದ ಯಾವ ಉಪಾಧಿಯೂ ಇಲ್ಲವಾದ್ದರಿಂದ ಈ ಸ್ವರೂಪವನ್ನು ಅರಿತುಕೊಂಡಮಾತ್ರದಿಂದ ಸರ್ವದುಃಖಗಳೂ ತೊಲಗುವವು. ಈತನನ್ನು ತಿಳಿದುಕೊಳ್ಳದೆ ಎಂದಿಗೂ ಸಂಸಾರದುಃಖವು ತೊಲಗಲಾರದು. ಆತ್ಮನಲ್ಲಿ ಅವಿದ್ಯೆಯಿದೆ ಎಂಬುದೂ ಈ ಅವಿದ್ಯೆಯು ವಿದ್ಯೆಯಿಂದ ಹೋಗುವದೆಂಬುದೂ ಪರಮಾರ್ಥವಲ್ಲ. ಆದರೆ ವ್ಯವಹಾರ ದೃಷ್ಟಿಯಿಂದ ಈ ತುರೀಯನನ್ನು ತಿಳಿದವರಿಗೆ ತುರೀಯಾತ್ಮನು ನಿತ್ಯನಿವೃತ್ತದುಃಖನು, ವಿಭುವು, ದೇವನು–ಎಂಬೀ ಅರಿವು ಸ್ಫುಟವಾಗುವದು. (110–122)

ವಿಶ್ವತೈಜಸಪ್ರಾಜ್ಞರೂಪಗಳ ಸಾಮಾನ್ಯವಿಶೇಷಭಾವವನ್ನು ತಿಳಿಸುವದರ ಮೂಲಕ ತುರೀಯಾತ್ಮನ ತತ್ತ್ವವನ್ನು ಇಲ್ಲಿ ತಿಳಿಸಲಾಗುವದು. ತಪ್ಪುತಿಳಿವಳಿಕೆಯೇ ಸ್ವಪ್ನವು, ತತ್ತ್ವವನ್ನು ಅರಿಯದಿರುವದೇ ನಿದ್ರೆಯು– ಎಂದು ಗೌಡಪಾದರು ಹೇಳಿರುತ್ತಾರೆ. ಆದ್ದರಿಂದ ಆತ್ಮಸ್ವರೂಪವನ್ನು ಅರಿಯದಿರುವ ನಿದ್ರೆಯು ಮೂರು ಅವಸ್ಥೆಗಳಲ್ಲಿಯೂ ಇದೆಯೆನ್ನಬಹುದು.

ಇವು ಮೂರರೊಳಗೆ ಸುಷುಪ್ತಿಯಲ್ಲಿ ಕೇವಲ ತತ್ತ್ವಾಗ್ರಹಣವು ಇದೆ; ಜಾಗ್ರತ್ಸ್ವಪ್ನಗಳಲ್ಲಿ ಅನ್ಯಥಾಗ್ರಹಣವೇ ಮುಖ್ಯವಾಗಿದೆ. ತತ್ತ್ವವನ್ನು ತಿಳಿಯದಿರುವದೇ ಅದನ್ನು ತಪ್ಪಾಗಿ ತಿಳಿದುಕೊಳ್ಳುವದಕ್ಕೆ ಕಾರಣವಾದ್ದರಿಂದ ಈ ಅರ್ಥದಲ್ಲಿಯೇ ಅಗ್ರಹಣವನ್ನು ಕಾರಣಾವಿದ್ಯೆಯೆಂದೂ ಅನ್ಯಥಾಗ್ರಹಣ ವನ್ನು ಕಾರ್ಯಾವಿದ್ಯೆಯೆಂದೂ ಇಲ್ಲಿ ಕರೆದಿದೆ. ಕಾರ್ಯವೆಂದರೆ ಅಧ್ಯಾಸ, ಕಾರಣವೆಂದರೆ ಅದಕ್ಕೆ ನಿಮಿತ್ತವಾಗಿರುವದು. (123–132)

ಕಾರಣಾವಿದ್ಯೆಯನ್ನೇ ಈಚಿನ ವೇದಾಂತಿಗಳು ಕೆಲವರು ಮೂಲಾವಿದ್ಯೆಯೆಂತಲೂ ಮತ್ತೆ ಕೆಲವರು ಕಾರಣಶರೀರವೆಂತಲೂ ಹೇಳುತ್ತಿರು ತ್ತಾರೆ. ಆದರೆ ತತ್ತ್ವವನ್ನರಿಯದಿರುವದಲ್ಲದೆ ಮತ್ತೊಂದು ಕಾರಣಾವಿದ್ಯೆ ಯಿರುವದೆಂಬ ಪ್ರಕ್ರಿಯೆಗೆ ಕಾರಿಕೆಯಲ್ಲಾಗಲಿ ಭಾಷ್ಯದಲ್ಲಾಗಲಿ ಯಾವ ಆಧಾರವೂ ಇಲ್ಲ. ಸುಷುಪ್ತಿಯಲ್ಲಿ ದೇಹಾದಿಗಳು ಇರುವದಿಲ್ಲವೆನ್ನುವದು ನಮ್ಮ ನಿತ್ಯದ ಅನುಭವವೇ ಆಗಿರುವದರಿಂದ ಅಲ್ಲಿ ಅಜ್ಞಾನಾತ್ಮಕವಾದ ಕಾರಣ ದೇಹವಿರುವದೆಂದು ಭಾವಿಸಿವದು ಸರಿಯಲ್ಲ. ಆದ್ದರಿಂದ ಇಲ್ಲಿ ಕಾರಣಾವಿದ್ಯೆಯೆಂದರೆ ಆತ್ಮವನ್ನು ಅರಿಯದೆ ಇರುವದೆಂಬ ಜ್ಞಾನಾಭಾವನೇ; ಅದೇ ಪ್ರಾಜ್ಞನಾಗಿರುವದಕ್ಕೆ ನಿಮಿತ್ತವಾಗಿರುತ್ತದೆ. (133–143)

ಸುಷುಪ್ತಿಯಲ್ಲಿ ಅಜ್ಞಾನವಿರುವದೆಂದಾದರೆ ಅಲ್ಲಿರುವ ನಮ್ಮ ಸ್ವರೂಪವು ಸರ್ವಜ್ಞನು, ಬ್ರಹ್ಮನು– ಎಂದು ಮುಂತಾಗಿ ಶ್ರುತಿಯಲ್ಲಿ ಹೇಳಿ ರುವದು ಹೇಗೆ ಸರಿ?– ಎಂದು ಯಾರಿಗಾದರೂ ಶಂಕೆಯುಂಟಾಗಬಹುದು. ಶ್ರುತಿ ಮತ್ತು ಬ್ರಹ್ಮನಿಷ್ಠರ ದೃಷ್ಟಿಯಲ್ಲಿ ಸುಷುಪ್ತಿಯು ಶುದ್ಧಬ್ರಹ್ಮವೇ ಆಗಿದೆ. ಆದರೆ ಸಾಪೇಕ್ಷದೃಷ್ಟಿಯಿಂದ ಈ ಸುಷುಪ್ತಾತ್ಮನಲ್ಲಿ ಅವ್ಯಾಕೃತಜಗದ್ಬೀಜವು ಆರೋಪಿಸಲ್ಪಟ್ಟಾಗ ಇವನೇ ಈಶ್ವರ ಅಥವಾ ಸರ್ವಜ್ಞನೆನಿಸಿಕೊಳ್ಳುತ್ತಾನೆ. ಲೋಕದೃಷ್ಟಿಯಿಂದ ಇವನಲ್ಲಿ ಅಜ್ಞಾನವನ್ನು ಒಪ್ಪಿದಾಗ ಇವನೇ ಪ್ರಾಜ್ಞನೆನಿಸಿ ಕೊಳ್ಳುತ್ತಾನೆ. ಹೀಗೆ ಈಶ್ವರತ್ವವೂ ಅವಿದ್ಯಾಬೀಜಸದ್ಭಾವವೂ ಬೇರೆಬೇರೆ ದೃಷ್ಟಿಯಿಂದ ಸುಷುಪ್ತಾತ್ಮನಲ್ಲಿ ಕಲ್ಪಿಸಲ್ಪಟ್ಟಿರುತ್ತವೆ ಎಂಬುದನ್ನು ಮರೆಯ ಬಾರದು. (144–153)

ದ್ವೈತವನ್ನು ಅರಿಯದಿರುವದು ಪ್ರಾಜ್ಞ, ತುರ್ಯ–ಇಬ್ಬರಿಗೂ ಸಮಾನವಾಗಿರುತ್ತದೆ. ಆದರೆ ಪ್ರಾಜ್ಞನು ಬೀಜನಿದ್ರೆಯಿಂದ ಕೂಡಿರುತ್ತಾನೆ; ಆ

ಬೀಜವೇ ದ್ವೈತವು ತೋರುವದಕ್ಕೆ ಕಾರಣವು. ತುರ್ಯಾತ್ಮನಿಗೆ ದ್ವೈತಗ್ರಹಣದ ಸಂಭವವು ಯಾವಾಗಲೂ ಇಲ್ಲವೇ ಇಲ್ಲ. ಅವನು ಎಲ್ಲಾ ಅವಸ್ಥೆಗಳಲ್ಲಿಯೂ ಇರಬಲ್ಲನು. ಅದನ್ನು ಅರಿತುಕೊಳ್ಳದೆ ಇರುವ ಅಜ್ಞಾನದಿಂದಲೇ ನಾವು ವಿಶ್ವತೈಜಸಾದಿರೂಪವಾಗಿ ಕಾಣುತ್ತೇವೆ. (154–158)

ಇಲ್ಲಿ ಕೆಲವರು ವ್ಯಾಖ್ಯಾನಕಾರರು 'ಸುಷುಪ್ತಿಯಲ್ಲಿ ಅಜ್ಞಾನವಿರುವದರಿಂದ ಅಲ್ಲಿ ಜೀವನು ತನ್ನ ನಿಜವಾದ ಸ್ವರೂಪವನ್ನು ಹೊಂದುವದಿಲ್ಲ. ಅಜ್ಞಾನದಲ್ಲಿಯೇ ಅವನು ಸೇರಿಹೋಗುತ್ತಾನಾದ್ದರಿಂದ ಮತ್ತೆ ಎಚ್ಚರುವದಕ್ಕೆ ಅದೇ ಕಾರಣವಾಗಿರುತ್ತದೆ. ನಿರ್ವಿಕಲ್ಪಸಮಾಧಿಯಲ್ಲಿ ಅಜ್ಞಾನವು ಸಂಪೂರ್ಣವಾಗಿ ಹೋಗಿಬಿಡುತ್ತದೆ, ಆದ್ದರಿಂದ ಅಲ್ಲಿಯೇ ಆತ್ಮನ ನಿಜವಾದ ರೂಪವನ್ನು ಕಂಡುಕೊಳ್ಳಬಹುದು. ಈ ಸಮಾಧ್ಯವಸ್ಥೆಯೇ ತುರೀಯಾವಸ್ಥೆ' ಎಂದು ಹೇಳುತ್ತಿರುತ್ತಾರೆ. ಆದರೆ ಈ ಅಭಿಪ್ರಾಯವು ಭಾಷ್ಯಕಾರರಿಗೆ ಸಮ್ಮತವಿಲ್ಲ. ಇದಕ್ಕೆ ಬದಲಾಗಿ 'ಸುಷುಪ್ತಿಯಲ್ಲಿ ಜೀವನು ಬ್ರಹ್ಮವನ್ನೇ ಹೊಂದುವ'ನೆಂದು ಸ್ಪಷ್ಟವಾಗಿ ಹೇಳುವ ಶ್ರುತ್ಯನುಸಾರಿಯಾದ ವಾಕ್ಯಗಳು ಭಾಷ್ಯದಲ್ಲಿ ಹೇರಳವಾಗಿ ಕಂಡುಬರುತ್ತವೆ. (159–167)

ಹೀಗಿದ್ದರೆ ಸುಷುಪ್ತಿಯಲ್ಲಿ ಬ್ರಹ್ಮವನ್ನು ಸೇರಿದ ಜೀವನು ಮತ್ತೆ ಎಚ್ಚರವುದೇತಕ್ಕೆ? ಎಂದು ಅವರು ಆಕ್ಷೇಪಿಸುತ್ತಾರೆ. ಮತ್ತು ಸುಷುಪ್ತಿಯಲ್ಲಿ ಜೀವಬ್ರಹ್ಮವಿಭಾಗಕ್ಕೆ ಕಾರಣವಾದ ಅವಿದ್ಯೆಯಿರುವದೆನ್ನುವದಕ್ಕೆ ಆಧಾರವಾಗಿ ಛಾಂದೋಗ್ಯ, ಕೈವಲ್ಯೋಪನಿಷತ್ತಿನ ವಾಕ್ಯಗಳನ್ನೂ ಸುಷುಪ್ತಿಯ ಅನುಭವದ ಪರಾಮರ್ಶವನ್ನೂ ಉದಾಹರಿಸುತ್ತಾರೆ. ಆದರೆ ಸಿದ್ಧಾಂತವನ್ನು ಸರಿಯಾಗಿ ತಿಳಿಯದ್ದರಿಂದಲೇ ಈ ಆಕ್ಷೇಪವು ಎದ್ದುಕೊಂಡಿದೆ. ಏಕೆಂದರೆ ಜೀವನು ಯಾವಾಗಲೂ ಬ್ರಹ್ಮಸ್ವರೂಪನಾಗಿಯೇ ಇರುವದರಿಂದ ಅವನು ಬ್ರಹ್ಮದೊಡನೆ ಸೇರದಿರುವ ಕಾಲವೇ ಇಲ್ಲ. ಆದರೆ ಎಚ್ಚರಕನಸುಗಳಲ್ಲಿ ಉಪಾಧಿಗಳ ಸಂಬಂಧದಿಂದ ಬೇರೊಂದು ರೂಪವಾದಂತೆ ತೋರುವದೆಂಬುದನ್ನಿಟ್ಟುಕೊಂಡು ಸುಷುಪ್ತಿಯಲ್ಲಿ ಉಪಾಧಿಗಳು ಇಲ್ಲವಾಗುವದರಿಂದ ಸ್ವರೂಪವನ್ನು ಹೊಂದುತ್ತಾನೆಂದು ಹೇಳಲಾಗುವದು. ಇನ್ನು ಛಾಂದೋಗ್ಯದಲ್ಲಿ 'ತಾವು ಬ್ರಹ್ಮವೆಂಬುದನ್ನರಿಯದೆ ಸರ್ವರೂ ಅನೃತವನ್ನು ಹೊದ್ದಿರುತ್ತಾರೆ' ಎಂಬಲ್ಲಿ ಬಹುವಚನವಿರುವದರಿಂದ ಜಾಗ್ರತ್ತಿನ ವ್ಯವಹಾರದಲ್ಲಿರುವ ಅವಿದ್ಯೆಯನ್ನೇ

ಅಲ್ಲಿ ಹೇಳಿದೆಯೆನ್ನಬೇಕು; ಏಕೆಂದರೆ ಸುಷುಪ್ತಿಯಲ್ಲಿ ಬಹುವಚನಕ್ಕೆ ಅವಕಾಶವಿರುವದಿಲ್ಲ. ಇದರಂತೆ ಕೈವಲ್ಯದ ವಾಕ್ಯಕ್ಕೂ ಸರಿಯಾದ ಅರ್ಥವನ್ನು ಮಾಡಿಕೊಳ್ಳಬೇಕು. ನಿದ್ರೆಯಲ್ಲಿ ತಮಸ್ಸಿರುವದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅಲ್ಲಿ ಜೀವತ್ವವೇ ಇಲ್ಲ. ಒಂದುವೇಳೆ ಜೀವತಮಗಳೆರಡೂ ಅಲ್ಲಿವೆ ಎನ್ನುವದಾದರೆ ಎಲ್ಲವೂ ಅಡಗಿದ ಸ್ಥಿತಿಯೇ ನಿದ್ರಾವಸ್ಥೆಯು ಎಂಬ ಮಾತು ಸುಳ್ಳಾಗುವದು. ಆದ್ದರಿಂದ ನಿದ್ರೆಯ ಶುದ್ಧಬ್ರಹ್ಮವೇ ಆಗಿರುವಲ್ಲಿ ಆ ಬ್ರಹ್ಮವನ್ನು ತಮಸ್ಸೆಂದು ತಿಳಿಯುವದೇ ನಿದ್ರೆ ಅಥವಾ ಮುಸುಕು. ಈ ಶಬ್ದಗಳು ಜಾಗ್ರತ್ತಿಗೆ ಮಾತ್ರ ಮಿಸಲು. ನಿದ್ರೆಯಲ್ಲಿಲ್ಲ ಎಂಬುದನ್ನು ಅರಿತುಕೊಳ್ಳಬೇಕು. (168–186)

ಇನ್ನು ಸುಷುಪ್ತಿಯಿಂದ ಜೀವನು ಎದ್ದುಬರುವಂತೆ ನಿರ್ವಿಕಲ್ಪ ಸಮಾಧಿಯಿಂದಲೂ ಎದ್ದುಬರುವದರಿಂದ ಅಲ್ಲಿಯೂ ಅಜ್ಞಾನ ದೆಶೆಯನ್ನು ಒಪ್ಪಬೇಕಾಗುವದು. ಇದರಿಂದ ಜ್ಞಾನಕ್ಕೆ ಅತ್ಯವಶ್ಯವೆಂದು ಹೇಳುವ ಸಮಾಧಿಕಲ್ಪನೆ ವ್ಯರ್ಥವೆಂದೇ ಆಗುವದು. (187–188)

ಪ್ರಕೃತ ಜಾಗ್ರತ್ಸ್ವಪ್ನಸುಷುಪ್ತಿಗಳಲ್ಲಿ ತತ್ತ್ವವನ್ನು ಅರಿಯದಿರುವದೆಂಬ ನಿದ್ರೆಯು ಇದ್ದೇಇರುತ್ತದೆ; ಸ್ವಪ್ನಜಾಗರಿತಗಳಲ್ಲಿ ಆತ್ಮನಿಗಿಂತ ಬೇರೆಯಾದ ಅನಾತ್ಮದೃಶ್ಯವನ್ನು ಕಾಣುವದೆಂಬ ಸ್ವಪ್ನವೂ ಇರುತ್ತದೆ. ಈ ನಿದ್ರೆಯಾಗಲಿ ಕನಸಾಗಲಿ ಇಲ್ಲದೆ ತನ್ನ ಚೈತನ್ಯ ಸ್ವರೂಪವಾದ ಎಚ್ಚರದಲ್ಲಿಯೇ ಇರುವವನು ತುರೀಯನು. ಈ ರೀತಿ ಅಜ್ಞಾನವೂ ಅನ್ಯಥಾ ಜ್ಞಾನವೂ ತುರೀಯನಲ್ಲಿ ನಿಜವಾಗಿಲ್ಲವೆಂದು ಯಾರು ಅರಿತುಕೊಳ್ಳುವರೋ ಅವರೇ ನಿಜವಾಗಿ ಆತ್ಮಸ್ವರೂಪವನ್ನು ಅರಿತುಕೊಂಡವರು. (189–197)

# ಒಂಬತ್ತನೆಯ ಅಧ್ಯಾಯ

ತತ್ತ್ವವನ್ನರಿಯದಿರುವ ನಿದ್ರೆ, ಅದನ್ನು ಮತ್ತೊಂದು ರೂಪದಿಂದ ತಪ್ಪಾಗಿ ತಿಳಿದುಕೊಳ್ಳುವದೆಂಬ ಕನಸು– ಈ ಎರಡೂ ವಿಪರ್ಯಾಸಗಳೇ. ಇವುಗಳನ್ನು ಒಂದೊಂದಾಗಿ ಅಲ್ಲಗಳೆದುಕೊಂಡಂತೆಲ್ಲ ತುರೀಯಪ್ರಾಪ್ತಿಗೆ ಹತ್ತಿರಹತ್ತಿರವಾಗುವೆವು ಎಂಬುದು ಹೇಗೆಂಬುದನ್ನು ಮಾಂಡೂಕ್ಯರಹಸ್ಯ ವಿವೃತಿಯಂತೆ ಇಲ್ಲಿ ತೋರಿಸಿಕೊಡಲಾಗುವದು. (1–3)

(೧) ಎಚ್ಚರಕನಸುಗಳಲ್ಲಿ ಅಧ್ಯಾಸದಿಂದಾಗಿರುವ ಪ್ರಮಾತೃರೂಪವು

ತೋರುತ್ತಿದ್ದರೂ ಅದು ವ್ಯಭಿಚರಿತವಾಗುವದರಿಂದ ಪರಮಾರ್ಥವಾಗಿ ಆಯಾ ಅವಸ್ಥೆಯ ಸಾಕ್ಷಿಯಾಗಿರುವ ಚಿನ್ಮಾತ್ರಸ್ವರೂಪನೇ ತಾನೆಂಬ ಅರಿವು ಉಂಟಾಗಲು 'ನಾನು ಇಂಥವನು' ಎಂಬ ಪ್ರಮಾತೃತ್ವರೂಪವಾದ ಸ್ವಪ್ನ ವಿಪರ್ಯಾಸವು ಕ್ಷಯವಾಗುವದು. (೨) ಎಚ್ಚರದ ದೃಷ್ಟಿಯಿಂದ ಏನನ್ನೂ ಕಾಣದಿರುವದೆಂಬ ಅಗ್ರಹಣವು ಸುಷುಪ್ತಿಯಲ್ಲಿರುತ್ತದೆಯಾದರೂ ಅಲ್ಲಿ ಅರಿಯುವದಕ್ಕೆ ಮತ್ತೊಂದೇನೂ ಇರಲಿಲ್ಲ- ಎಂಬ ಅರಿವು ಉಂಟಾಗಲು ಅಗ್ರಹಣ ರೂಪವಾದ ನಿದ್ರಾವಿಪರ್ಯಯವು ಕ್ಷಯವಾಗುವದು. (೩) ಎಚ್ಚರಸ್ವಪ್ನಗಳ ದೃಷ್ಟಿಯಿಂದ ನಿದ್ರೆಯಲ್ಲಿ ಅವ್ಯಾಕೃತಜಗದ್ಬೀಜವನ್ನು ಆರೋಪಿಸಿ ತ್ತಾದರೂ ಜಗತ್ತೆನ್ನುವದು ಇಲ್ಲವೇಇಲ್ಲ, ಇದರ ತತ್ತ್ವ ಆತ್ಮನೇ- ಎಂಬ ಅರಿವು ಉಂಟಾಗಲು ಬೀಜಸದ್ಭಾವರೂಪವಾದ ನಿದ್ರಾವಿಪರ್ಯಯವು ತೊಲಗು ವದು. (೪) ಎಚ್ಚರಕನಸುಗಳಲ್ಲಿ ಕಾಣುತ್ತಿರುವ ಜೀವರುಗಳು ತೋರುತ್ತಿರುವ ರೂಪದಿಂದ ಬೇರೆಬೇರೆಯಾಗಿ ಕಂಡರೂ ಜಾಗ್ರದವಸ್ಥೆಯಲ್ಲಿ ಕಾಣಬರುವ ಜೀವರುಗಳಿಗೆಲ್ಲ ವಿಶ್ವನೊಬ್ಬನೇ, ಸ್ವಪ್ನಾವಸ್ಥೆಯಲ್ಲಿ ಕಾಣಬರುವ ಜೀವರುಗಳಿಗೆಲ್ಲ ತೈಜಸನೊಬ್ಬನೇ ಆತ್ಮನು- ಎಂಬ ಅರಿವು ಉಂಟಾಗಲು ಅನೇಕಾತ್ಮಗ್ರಹಣರೂಪವಾದ ಸ್ವಪ್ನವಿಪರ್ಯಾಸವು ತೊಲಗುವದು. (೫) ಜಾಗ್ರದ್ದೃಷ್ಟಿಯಿಂದ ನೋಡಿದಾಗ ಜಾಗ್ರದಾದ್ಯವಸ್ಥೆಗಳು ಬೇರೆಬೇರೆಯೆಂದೂ ಸತ್ಯವಾಗಿರುವವೆಂದೂ ತೋರಿದರೂ ಅವು ಅನ್ಯೋನ್ಯವ್ಯಭಿಚರಿತವಾಗುವ ವೆಂಬ ಅರಿವು ಉಂಟಾಗಲು ಅವಸ್ಥಾತ್ರಯಭೇದಸತ್ಯತ್ವಗ್ರಹಣರೂಪವಾದ ಸ್ವಪ್ನವಿಪರ್ಯಾಸವು ಕ್ಷಯವಾಗುವದು. (೬) ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಉಪಾಧಿಗಳ ಭೇದದಿಂದ ವಿಶ್ವತೈಜಸಪ್ರಾಜ್ಞರೆಂಬ ಭೇದವು ತೋರಿ ಬರುತ್ತಿದ್ದರೂ ಯಾವ ಉಪಾಧಿಯೂ ಇಲ್ಲದ ಅವರ ಪಾರಮಾರ್ಥಿ ಕರೂಪದಿಂದ ಎಲ್ಲರೂ ಒಬ್ಬನೇ ಎಂಬ ಅರಿವು ಉಂಟಾಗಲು ವಿಶ್ವದಿಭೇದವನ್ನು ಕಾಣುವ ವಿಪರ್ಯಾಸವು ಕ್ಷಯವಾಗುವದು. (೭) ಅವಸ್ಥಾತ್ರಯ ಸಾಕ್ಷಿಯಾಗಿರುವ ಒಬ್ಬನೇ ಆತ್ಮನಿಗೆ ಪ್ರಮಾತೃದೃಷ್ಟಿಯಿಂದ ಸದ್ವಿತೀಯತ್ವವು ತೋರುತ್ತಿದ್ದರೂ ತಾನು ಅದ್ವಿತೀಯಚಿನ್ಮಾತ್ರನಾದ ತುರೀಯನೇ- ಎಂಬ ಅರಿವು ಉಂಟಾಗಲು ಸದ್ವಿತೀಯಾತ್ಮತ್ವಗ್ರಹಣವೆಂಬ ಸ್ವಪ್ನವಿಪರ್ಯಾಸವು ಕ್ಷೀಣವಾಗುವದು. (4-29)

ಮನಸ್ಸನ್ನು ಸಮಾಧಾನಗೊಳಿಸಿಕೊಂಡು ಆಚಾರ್ಯನು ಹಿಂದೆ

ಹೇಳಿದ ಆಗಮಾರ್ಥವನ್ನು ವಿಚಾರಮಾಡಿ, ತರ್ಕದಿಂದಲೂ ನಿಶ್ಚಯಿಸಿ, ತನ್ನ ಅನುಭವಕ್ಕೆ ತಂದುಕೊಳ್ಳುವದೇ ಮನನವು. ಇಂಥ ಮನನವು ಮುಗಿದು ಜಿಜ್ಞಾಸು ತನ್ನಲ್ಲಿಯೇ ನಿಂತಾಗ ಅವನಿಗೆ ಮುಂದೆ ಯಾವ ಕ್ರಿಯೆಯೂ ಉಳಿದಿರುವದಿಲ್ಲ. ಮನನಕ್ಕೆ ಮನಸ್ಸು ಒಲಿದಾಗಲೇ ವಿಚಾರವು ಚೆನ್ನಾಗಿ ಸ್ಫುರಿಸಿ ತನ್ನ ನಿಶ್ಚಯವು ತನಗಾಗುವದು. (30–36)

ಶುದ್ಧಾಂತಃಕರಣ, ಐಕಾಗ್ರ್ಯ, ಮೇಧಾಶಕ್ತಿ– ಇವು ಮೂರೂ ಮನನಕ್ಕೇ ಸಾಧನಗಳು. ಶ್ರವಣಕಾಲದಲ್ಲಿದ್ದ ಏಕಾಗ್ರತೆಯು ಮನನ ಮಾಡುವಾಗ ಯಾರಿಗೆ ಇರುವದಿಲ್ಲವೋ ಅವರಿಗೆ ಮನನದಿಂದ ಪೂರ್ಣತೃಪ್ತಿಯು ದೊರಕುವದಿಲ್ಲವಾದ್ದರಿಂದ ಅಂಥವರು ನಿದಿಧ್ಯಾಸನವನ್ನೂ ಮಾಡಬೇಕಾಗುವದು. ಶ್ರವಣಮನನಗಳು ಸಾಂಖ್ಯವೆನಿಸಿಕೊಂಡರೆ ನಿದಿಧ್ಯಾಸನವು ಯೋಗವೆನಿಸಿಕೊಳ್ಳುವದು. ಇದರಲ್ಲಿ ವಿಚಾರಕ್ಕಿಂತಲೂ ಏಕಾಗ್ರತೆಗೇ ಪ್ರಾಶಸ್ತ್ಯ ಹೆಚ್ಚು. (37–46)

ಆಚಾರ್ಯರು ವೈದಿಕವಾದ ಜ್ಞಾನಧ್ಯಾನಗಳನ್ನೇ ಸಾಂಖ್ಯ ಮತ್ತು ಯೋಗಶಬ್ದದಿಂದ ಕರೆದಿರುತ್ತಾರೆ. ಅವೈದಿಕವಾದ ಕಾಪಿಲಸಾಂಖ್ಯ ಹಾಗೂ ಪಾತಂಜಲಯೋಗವನ್ನು ದ್ವೈತದರ್ಶನಗಳೆಂದು ಭಾಷ್ಯದಲ್ಲಿ ನಿಂದಿಸಿದ್ದರೂ ಯಾವ ಅಂಶದಲ್ಲಿ ವೇದಕ್ಕೆ ವಿರುದ್ಧವಾಗಿಲ್ಲವೋ ಆ ಅಂಶದಲ್ಲಿ ಅವುಗಳನ್ನೂ ಅನುಸರಿಸಬಹುದು ಎಂಬುದಾಗಿ ಅವರು ಸಮ್ಮತಿಸಿರುತ್ತಾರೆ. ಇದನ್ನು ತಿಳಿಯದೆ ಕೆಲವರು ಅಧ್ಯಾತ್ಮಸಾಧನೆಗೆ ಪಾತಂಜಲಯೋಗವೆಲ್ಲವನ್ನೂ ವಿಧಿಸುತ್ತ ವೇದಾಂತದರ್ಶನವನ್ನೇ ಹದಗೆಡಿಸಿರುವರು. (47–53)

ಉಪಾಸನೆ, ಧ್ಯಾನ, ಚಿಂತನ– ಎಂಬೀ ಮಾನಸಿಕಕ್ರಿಯೆಗೆ ಏಕಾಗ್ರತೆಯೇ ಬೇಕಾಗಿರುತ್ತದೆ. ಆದ್ದರಿಂದ ಇದನ್ನು ಕುಳಿತುಕೊಂಡೇ ಮಾಡಬೇಕು. ಏಕೆಂದರೆ ಓಡಾಡುತ್ತಿರುವವನಿಗೆ ಚಿತ್ತವಿಕ್ಷೇಪವಾಗುತ್ತದೆ; ನಿಂತುಕೊಂಡಿದ್ದರೆ ಮನಸ್ಸು ಸೂಕ್ಷ್ಮವಸ್ತುವನ್ನು ನಿರೀಕ್ಷಣೆಮಾಡುವದಕ್ಕೆ ಆಗುವದಿಲ್ಲ; ಮಲಗಿಕೊಂಡಿದ್ದರೆ ನಿದ್ರೆ ಬರಬಹುದು. ಆದ್ದರಿಂದಲೇ ಉಪಾಸನೆಗೆ ಯಾವದಾದರೊಂದು ಸ್ಥಿರವಾದ ಆಸನವನ್ನು ಅಳವಡಿಸಿಕೊಳ್ಳುವದುಚಿತವಾಗಿದೆ. ಆಸನವು ಶುಚಿಯಾದ ಪ್ರದೇಶದಲ್ಲಿರಬೇಕು; ಅದು ಸ್ವಭಾವವಾಗಿ ಬಿರುಗಾಳಿಯಿಲ್ಲದ ನದೀತೀರವೇ ಮುಂತಾದ ಶುದ್ಧಪ್ರದೇಶ

ದಲ್ಲಿದ್ದರೂ ಆಯಿತು, ತಾನೇ ಸಾರಿಸಿಗುಡಿಸಿ ಚೊಕ್ಕಟವಾಗಿರಿಸಿಕೊಂಡ ಪ್ರದೇಶ ವಾದರೂ ಆಯಿತು. ಇದಕ್ಕೆ ದಿಕ್ಕಾಲಗಳ ನಿಯಮವೇನೂ ಇರುವದಿಲ್ಲ; ಮನಸ್ಸಿಗೆ ಹೇಗಿದ್ದರೆ ಏಕಾಗ್ರತೆ ಬರುವದೋ ಹಾಗೆ ಇದ್ದರಾಯಿತು.

(54–64)

ಕರ್ಮಯೋಗವು ಧ್ಯಾನಯೋಗಕ್ಕೆ ಹೋಗುವೆನೆಂದಿಚ್ಛಿಸುವವನಿಗೆ ಉತ್ತಮಸಾಧನವಾಗಿರುತ್ತದೆ. ಈಗ ಈ ಸಾಧಕನಿಗೆ ಶಮೆಯೇ ಮುಖ್ಯವು. ಇದರೊಂದಿಗೆ ಏಕಾಂತವಾಸ, ಇಂದ್ರಿಯನಿಗ್ರಹ, ಪರಮಾತ್ಮನಲ್ಲಿ ಪ್ರೀತಿ– ಇವುಗಳೂ ಇರಬೇಕು. ಆಹಾರವಿಹಾರಾದಿಗಳನ್ನು ಯೋಗಶಾಸ್ತ್ರದಲ್ಲಿ ಹೇಳಿರುವಂತೆ ತಿದ್ದಿಕೊಂಡರೆ ಚಿತ್ತಚಾಂಚಲ್ಯವೂ ದೇಹಾಲಸ್ಯವೂ ಇಲ್ಲದಂತಾಗುವವು. ಹೀಗೆ ಎಲ್ಲ ಸಿದ್ಧತೆಯನ್ನೂ ಮಾಡಿಕೊಂಡನಂತರ ಧ್ಯಾನಕ್ಕಾರಂಭಿಸಬೇಕು. (65–71)

ಇಲ್ಲಿ ಹಿಂದೆ ಶ್ರವಣಮನನಗಳಿಂದುಂಟಾದ ಅರಿವನ್ನು ಅನುಭವಕ್ಕೆ ಹೊಂದಿಸಿ ನೋಡಿಕೊಳ್ಳಬೇಕು. ಹೇಗೆಂದರೆ, ಸ್ವಪ್ನದಲ್ಲಿ ಎಲ್ಲವೂ ತಾನೇ ಆಗಿದ್ದನು. ಅಲ್ಲಿ ಕಂಡ ದ್ವೈತವೆಲ್ಲವೂ ಮನಸ್ಸಿನ ಅಲುಗಾಟಮಾತ್ರವಾಗಿದ್ದಿತು. ಆ ಮನಸ್ಸೂ ಸಹ ತನಗಿಂತ ಬೇರೆಯಾಗಿರಲಿಲ್ಲ. ಇದರಂತೆ ಎಚ್ಚರದ ದ್ವೈತಕ್ಕೆ ಕಾರಣವಾದ ಮನಸ್ಸೂ ತನಗಿಂತ ಬೇರೆಯಲ್ಲವಾದ್ದರಿಂದ ತಾನೊಬ್ಬನೇ ಸತ್ಯನು, ಮಿಕ್ಕದ್ದೆಲ್ಲವೂ ಮಿಥ್ಯೆಯು– ಈ ರೀತಿಯ ಆತ್ಮಸತ್ಯಾನುಬೋಧದಿಂದ ಸಂಕಲ್ಪವು ತಪ್ಪಿಹೋದರೆ ಅಮನಸ್ತೆಯಾಗುತ್ತದೆ. ಸಾಧಕನಾದವನು ಏಕಾಂತದಲ್ಲಿ ಕುಳಿತುಕೊಂಡು ಇದನ್ನು ಮತ್ತೆಮತ್ತೆ ಅಭ್ಯಾಸಮಾಡುತ್ತಿರಬೇಕು.

(71–77)

ಧ್ಯಾನಯೋಗದ ಫಲವೆಂದರೆ ಸರ್ವಾತ್ಮದರ್ಶನವೇ. ಆದ್ದರಿಂದ 'ಬತ್ತವನ್ನು ಕುಟ್ಟಬೇಕು' ಎಂದು ಶಾಸ್ತ್ರದಲ್ಲಿ ವಿಧಿಸಿರುವಲ್ಲಿ ಹೇಗೆ ಅಕ್ಕಿಯಾಗುವವರೆಗೂ ಕುಟ್ಟಬೇಕೋ ಅದರಂತೆ ಆತ್ಮದರ್ಶನವು ಆಗುವ ವರೆಗೂ ಶ್ರವಣಾದಿಗಳನ್ನು ಆವೃತ್ತಿಮಾಡಬೇಕು. ಆತ್ಮದರ್ಶನವಾದಮೇಲೆ ಮಾಡತಕ್ಕದ್ದು ಏನೂ ಇರುವದಿಲ್ಲ. ಮನಸ್ಸಿನಲ್ಲಿ ಬೇಸರವಿಲ್ಲದೆ ಮಾಡುವ ಸ್ಥಿರಪ್ರಯತ್ನದಿಂದಲೇ ಈ ಯೋಗವು ಕೈಗೂಡುವದು. ಇದನ್ನು ಮಾಡುವಾಗ ಒದಗಬಹುದಾದ ವಿಘ್ನಗಳನ್ನೂ ಅವುಗಳ ಪರಿಹಾರೋಪಾಯವನ್ನೂ ಕಾರಿಕೆಯಲ್ಲಿ ಸೂಚಿಸಿರುವರು. (78–87)

ವಿಕ್ಷೇಪ, ಲಯ, ಕಷಾಯ, ರಸಾಸ್ವಾದ– ಎಂಬೀ ನಾಲ್ಕು ಯೋಗಕ್ಕೆ ಪ್ರತಿಬಂಧಕಗಳು. ಆತ್ಮನನ್ನು ಮರೆತು ವಿಷಯಗಳ ಕಡೆಗೆ ಮನಸ್ಸು ಧಾವಿಸುವದೇ ವಿಕ್ಷೇಪವೆಂಬ ದೋಷವು. ಇದಕ್ಕೆ ವೈರಾಗ್ಯವೊಂದೇ ಮದ್ದು. ಆದ್ದರಿಂದ ದ್ವೈತವೆಲ್ಲವೂ ದುಃಖವೇ ಎಂದು ಅರಿತುಕೊಂಡು ಮನಸ್ಸನ್ನು ಕಾಮಭೋಗದಿಂದ ಹಿಮ್ಮೆಟ್ಟಿಸಬೇಕು. 'ಇದೆಲ್ಲವೂ ಅಜಾದ್ವಯಬ್ರಹ್ಮವೇ' ಎಂಬ ಶಾಸ್ತ್ರೋಕ್ತಿಯನ್ನು ಮನಸ್ಸಿನಲ್ಲಿ ಹೊರಳಾಡಿಸುತ್ತಿದ್ದರೂ ಆಗ ಮನಸ್ಸಿಗೆ ವಿಷಯವೇ ಇಲ್ಲವೆಂಬ ನಿಶ್ಚಯವಾಗಿ ಕಾಮಭೋಗದ ಲಾಲಸೆಯು ಇಲ್ಲವಾಗುವದು. (88–91)

ಧ್ಯಾನಕ್ಕೆ ಕುಳಿತಾಗ ಚಿತ್ತವು ಸುಷುಪ್ತಾವಸ್ಥೆಯನ್ನು ಹೊಂದುವದೇ ಲಯವೆಂಬ ದೋಷವು. ಆಹಾರನಿದ್ರೆಗಳನ್ನು ಸಮಸ್ಥಿತಿಯಲ್ಲಿಟ್ಟು ಕೊಳ್ಳುವದರಿಂದ ಈ ದೋಷವನ್ನು ಗೆಲ್ಲಬಹುದು. ಲಯವಿಕ್ಷೇಪಗಳೆರಡೂ ಇಲ್ಲದಿರುವಾಗ ಚಿತ್ತವು ಸಕಷಾಯವಾಗಿರಬಹುದು; ಎಂದರೆ ವಿಷಯ ವಾಸನೆಯ ರೂಪದ ಬೀಜದಿಂದ ಕೂಡಿರಬಹುದು. ಆಗ ವಿವೇಕಾಭ್ಯಾಸವನ್ನು ಮಾಡುತ್ತಾ ಚಿತ್ತವನ್ನು ಎಚ್ಚರದಲ್ಲಿಟ್ಟುಕೊಳ್ಳಬೇಕು. (92–96)

ವಿವೇಕಪೂರ್ವಕವಾಗಿ ವಿಚಾರಮಾಡುವಾಗ ಏಕಾಗ್ರತೆಯಿಂದ ಒಂದು ವಿಧವಾದ ಆನಂದವು ಮನಸ್ಸಿನಲ್ಲಿ ಮಿಂಚತೊಡಗುವದು. ಇದೇ ರಸಾಸ್ವಾದವು. ಇದನ್ನೂ ಸಹ ಮೀರಿಹೋದಾಗಲೇ ತತ್ತ್ವದಲ್ಲಿ ಸರಿಯಾಗಿ ನೆಲೆನಿಲ್ಲುವೆವು. ವೃತ್ತಿಯಲ್ಲಿ ಉಂಟಾಗುವ ಈ ಆನಂದವು ಮನಸ್ಸಿಗೆ ಸಂಬಂಧಿಸಿದ ಹುಸಿತೋರಿಕೆಯಾಗಿದೆ, ನಾನು ಇದಕ್ಕೆ ಸಾಕ್ಷಿಯಾಗಿದ್ದೇನೆ– ಎಂದು ನಿಶ್ಚಯಿಸುವದೇ ಇದರಿಂದ ಪಾರಾಗುವದಕ್ಕೆ ಉಪಾಯವು. ಹೀಗೆ ಎಲ್ಲಾಬಗೆಯ ಅಡ್ಡಿಗಳನ್ನೂ ಕಳೆದುಕೊಂಡಮೇಲೆಯೇ ಚಿತ್ತವು ಆತ್ಮನಲ್ಲಿ ಏಕೀಭಾವವನ್ನು ಪಡೆದುಕೊಳ್ಳುತ್ತದೆ. ಆಗ ಅದನ್ನು ಅಲುಗಾಡಿಸಬಾರದು; ಇದರಿಂದ ಜ್ಞಾನವೂ ಶಾಂತಿಯೂ ಉಂಟಾಗುತ್ತವೆ. ಗೀತೆಯಲ್ಲಿ ಈ ಎಲ್ಲ ಉಪಾಯವನ್ನೂ ಎರಡು ವಿಭಾಗ ಮಾಡಿ ಅಭ್ಯಾಸ, ವೈರಾಗ್ಯ– ಎಂದು ಕರೆದಿರುತ್ತದೆ. ಹೊರಹೊರಟ ಚಿತ್ತವನ್ನು ಪ್ರಯತ್ನಪೂರ್ವಕವಾಗಿ ಒಳಗೆಳೆದು ತರುವದು ವೈರಾಗ್ಯವೆಂತಲೂ ಅದನ್ನು ಆತ್ಮನಲ್ಲಿಯೇ ಬೆರೆಯುವಂತೆ ಮಾಡುವದು ಅಭ್ಯಾಸವೆಂತಲೂ ಹೇಳಿಸಿಕೊಳ್ಳುವವು. ಆಧ್ಯಾತ್ಮಯೋಗ ವೆಂದರೂ ಇದೇ ಆಗಿದೆ. (97–106)

ಈ ಯೋಗದಲ್ಲಿ ಇಂದ್ರಿಯಗಳನ್ನು ಮನಸ್ಸಿನಲ್ಲಿಯೂ, ಮನಸ್ಸನ್ನು ಬುದ್ಧಿಯಲ್ಲಿಯೂ, ಬುದ್ಧಿಯನ್ನು ಅಹಂಕಾರದಲ್ಲಿಯೂ, ಅಹಂಕಾರವನ್ನು ಸಾಕ್ಷಿಯಾದ ಆತ್ಮನಲ್ಲಿಯೂ ಲಯಮಾಡಿಕೊಳ್ಳಬೇಕು. ಹೇಗೆಂದರೆ ಶಬ್ದಸ್ಪರ್ಶಾದಿವಿಷಯಗಳು ನಮ್ಮ ಹೊರಗಿರುವವಷ್ಟೆ. ಅವುಗಳು ಇವೆ ಎಂಬುದಕ್ಕೆ ನಮ್ಮ ಇಂದ್ರಿಯಗಳೇ ಪ್ರಮಾಣಗಳು. ಇಂದ್ರಿಯಗಳನ್ನು ಬಿಟ್ಟರೆ ವಿಷಯಗಳಿಗೆ ಅಸ್ತಿತ್ವವೇ ಇಲ್ಲ. ಇಂದ್ರಿಯಗಳು ವಿಷಯಗಳನ್ನು ವ್ಯಾಪಿಸಿ ರುತ್ತವೆ, ವಿಷಯಗಳು ಇಂದ್ರಿಯಗಳನ್ನು ವ್ಯಾಪಿಸಲಾರವು. ಆದ್ದರಿಂದ ವಿಷಯಗಳಿಗೆ ಇಂದ್ರಿಯಗಳೇ ಆತ್ಮವು– ಎಂದು ನಿಶ್ಚಯಿಸಬೇಕು. ಈ ಕ್ರಮದಿಂದ ವಿಷಯಗಳನ್ನು ಇಂದ್ರಿಯಗಳಲ್ಲಿ ಲಯಿಸಿದರೆ ವಿಷಯ ಸುಖದಾಹವು ತೊಲಗುವದು. (107–113)

ಮನಸ್ಸು ಇಂದ್ರಿಯಗಳನ್ನು ವ್ಯಾಪಿಸುತ್ತದೆ; ಇಂದ್ರಿಯಗಳು ಮನಸ್ಸನ್ನು ವ್ಯಾಪಿಸಲಾರವು. ಮನಸ್ಸು ಆಲೋಚಿಸಬಲ್ಲದು; ಇಂದ್ರಿಯಗಳು ಈ ಕೆಲಸ ಮಾಡಲಾರವು. ಮನಸ್ಸನ್ನು ಬಿಟ್ಟರೆ ಇಂದ್ರಿಯಗಳಿಗೆ ಅಸ್ತಿತ್ವವೇ ಇಲ್ಲ. ಆದ್ದರಿಂದ ವಿಷಯ ಹಾಗೂ ಇಂದ್ರಿಯಗಳಿಗೆ ಮನಸ್ಸೇ ಆತ್ಮವು. ಹೀಗೆಂದು ನಿಶ್ಚಯಿಸಿ ಮನಸ್ಸೇ ತಾನಾಗಿ ನಿಲ್ಲಬೇಕು. (114–116)

ಇದರಂತೆ ಮನಸ್ಸಿಗೆ ಬುದ್ಧಿಯೇ ಆತ್ಮವು, ಬುದ್ಧಿಗೆ ಅಹಂಕಾರವೇ ಆತ್ಮವು, ಅಹಂಕಾರಕ್ಕೆ ತಾನೇ ಆತ್ಮನು– ಎಂದು ನಿಶ್ಚಯಿಸಿ ತನ್ನಲ್ಲಿಯೇ ನೆಲೆನಿಲ್ಲಬೇಕು. ತಾನು ಎನ್ನುವದರ ಆಚೆಗೆ ಮತ್ತೆ ಯಾವದೂ ಇಲ್ಲ. ಇದನ್ನು ಅರಿತುಕೊಳ್ಳುವದೇ ನಿಜವಾದ ಜ್ಞಾನ ಅಥವಾ ಮುಕ್ತಿ. (117–123)

ಎಲ್ಲವನ್ನೂ ಅರಿಯಬಲ್ಲ ಆತ್ಮನನ್ನು ಅರಿಯುವದಕ್ಕೆ ಮತ್ತೊಂದು ಸಾಧನವೇ ಇಲ್ಲ. ಆದ್ದರಿಂದಲೇ ಆತ್ಮನನ್ನು ವಿಷಯೀಕರಿಸುವೆವೆನ್ನುವವರಿಗೆ ಆತ್ಮತತ್ತ್ವವು ತಿಳಿಯದು ಎಂದು ಶ್ರುತಿ ಹೇಳುತ್ತಿದೆ. ಇಲ್ಲಿ ವೇದಾಂತವಾಕ್ಯದಿಂದ ಆತ್ಮಾನುಭವವುಂಟಾಗುವದೆಂದು ಹೇಳುವದೂ ಸರಿಯಲ್ಲ. ಏಕೆಂದರೆ ಆತ್ಮನು ಅನುಭವರೂಪನಾಗಿರುತ್ತಾನೆ ಎಂದು ತಿಳಿದುಕೊಳ್ಳುವಾಗ ಅಂತಃಕರಣ ವೃತ್ತಿಯು ಆತ್ಮಚೈತನ್ಯದಂತೆಯೇ ತೋರುತ್ತಾ ಹುಟ್ಟಿಕೊಳ್ಳುತ್ತದೆ; ಆ ಚಿದಾಭಾಸವೃತ್ತಿಯನ್ನೇ 'ವಿಜ್ಞಾನ' ಎಂದು ಕರೆಯುತ್ತಾರೆ. ಆ ವೃತ್ತಿಯನ್ನೂ ಆತ್ಮನೇ ಬೆಳಗುತ್ತಾನಾದ್ದರಿಂದ ಆತ್ಮನೂ ಏತಕ್ಕೂ ವಿಷಯನೇ ಆಗುವಂತಿಲ್ಲ. ಆದ್ದರಿಂದ ಅವಿದ್ಯೆಯಿಂದ ಆರೋಪಿತವಾಗಿರುವದನ್ನು ಅಲ್ಲಗಳೆಯುವದೊಂದೇ ಆತ್ಮನು ವಿಷಯದಲ್ಲಿ ಮಾಡತಕ್ಕದ್ದೇ ಹೊರತು

ಆತ್ಮಜ್ಞಾನಕ್ಕಾಗಿ ಪ್ರಯತ್ನವನ್ನು ಮಾಡಬೇಕಾದದ್ದಿರುವದಿಲ್ಲ. ಅನಾತ್ಮವನ್ನೆಲ್ಲ ಅಲ್ಲಗಳೆದಾಗ ಸಾಧಕನು ತಾನೇ ಆತ್ಮನಾಗಿ ನಿಂತಿರುತ್ತಾನೆ. (124–140)

ಒಮ್ಮೆ ಆತ್ಮನನ್ನು ಗುರುತಿಸಿದ ಬಳಿಕ ಅನಾತ್ಮವೆನ್ನುವದು ಉಳಿಯುವದೇ ಇಲ್ಲ. ಈ ಜಗತ್ತು, ಇಂದ್ರಿಯ, ಮನಸ್ಸು- ಎಂಬಿವೆಲ್ಲವೂ ಆತ್ಮನೇ ಆಗಿಬಿಡುತ್ತವೆ. ಆಗ ತಾನು ತನ್ನನ್ನರಿಯದಿದ್ದುದಿಲ್ಲ, ಅರಿತದ್ದಿಲ್ಲ. ಇಲ್ಲಿಗೆ ಮಾತು ವಿಚಾರಗಳೆರಡೂ ಲಯವಾದ 'ತಾನೇ' ತುರೀಯನು. ಈ ಅರಿವು ಸಹಜವಾಗಿ ನಿಲೆನಿಂತಿರುವದೇ ಜ್ಞಾನನಿಷ್ಠೆಯು. ಮುಂದಿನ ಅಧ್ಯಾಯದಲ್ಲಿ ಈ ಜ್ಞಾನನಿಷ್ಠೆಯನ್ನು ಕುರಿತು ವಿಶದವಾಗಿ ತಿಳಿಸಲೆತ್ನಿಸುತ್ತೇನೆ. (141–151)

# ಹತ್ತನೆಯ ಅಧ್ಯಾಯ

ಶಾಸ್ತ್ರಾಚಾರ್ಯರ ಉಪದೇಶದಿಂದ ವಸ್ತುತತ್ತ್ವವನ್ನೇ ಪರೀಕ್ಷಿಸಿ ನೋಡುವದರಿಂದ ತಾನು ನಿತ್ಯನಿರವಸ್ಥನಾದ ಆತ್ಮನೇ ಎಂಬ ಜ್ಞಾನ ವುಂಟಾಗುತ್ತದೆ. ಆ ಜ್ಞಾನದಲ್ಲಿ ಸಹಜವಾಗಿ ನೆಲೆನಿಲ್ಲುವಿಕೆಯೇ ತುರೀಯಾಪ್ತಿ. ಈ ರಹಸ್ಯವನ್ನರಿಯದೆ ಕೆಲವರು ತುರೀಯಾವಸ್ಥೆ ಎಂಬ ನಾಲ್ಕನೆಯ ಅವಸ್ಥೆಯೊಂದಿದೆಯೆಂದೂ ಅದು ನಿರ್ವಿಕಲ್ಪಸಮಾಧಿಯೆಂದೂ ಅದನ್ನು ಹೊಂದುವದೇ ತುರೀಯಾಪ್ತಿಯೆಂದೂ ಕಲ್ಪಿಸಿಕೊಂಡಿರುತ್ತಾರೆ. ಮತ್ತೆ ಕೆಲವರು ಬರಿಯ ಸಮಾಧಿಯು ವ್ಯರ್ಥವೆಂದೂ ಅದರ ಅನಂತರ ಜ್ಞಾನವಾಗಬೇಕೆಂದೂ ವಾದಿಸುತ್ತಿರುತ್ತಾರೆ. ಹೀಗಾಗಿ ಬೋಧನಾಕ್ರಮವು ಒಂದು ವ್ಯವಸ್ಥೆಗೆ ಬಾರದೆ ಕೆಲವೊಂದು ಗ್ರಂಥಗಳಲ್ಲಿ ಒಮ್ಮೆ ಸಮಾಧಿಯು ಅವಶ್ಯವೆಂದು ಹೇಳಿದರೆ ಮತ್ತೊಮ್ಮೆ ಅದು ಬೇಡವೆಂದು ಹೇಳಿರುವದೂ ಕಂಡುಬರುತ್ತಿದೆ. ಕೆಲವರು ಯೋಗಶಾಸ್ತ್ರದಲ್ಲಿ ಹೇಳಿರುವ ಸಪ್ತಭೂಮಿಕೆಗಳನ್ನು ವೇದಾಂತಕ್ಕೆ ಗಂಟುಹಾಕಿದರೆ ಮತ್ತೆ ಕೆಲವರು ಜ್ಞಾನಾಭಿಮಾನಿಗಳು ಅವುಗಳಿಗೆ ಜ್ಞಾನಪರವಾದ ಅರ್ಥವನ್ನು ಕಲ್ಪಿಸಿ ತುರ್ಯಾತೀತವೆಂಬ ಅವಸ್ಥೆಯನ್ನೂ ಅವುಗಳೊಂದಿಗೆ ಸೇರಿಸಿರುವರು. ಇನ್ನೂ ಕೆಲವರು ಶ್ರುತಿಯಲ್ಲಿ ಹೇಳಿರುವ ಶ್ರವಣಮನನನಿದಿಧ್ಯಾಸನಗಳು ಧಾರಣಾಧ್ಯಾನಗಳೇ ಎಂದೂ ದರ್ಶನವೆಂದರೆ ಸಾಕ್ಷಾತ್ಕಾರವೇ ಎಂದೂ ಹೇಳುತ್ತಿರುವರು. ಹೀಗೆ ಜ್ಞಾನನಿಷ್ಠೆ ಮತ್ತು ಯೋಗಾದಿಶಬ್ದಗಳ ಬಗೆಗೆ ವಿವಿಧ ಅಭಿಪ್ರಾಯಗಳು ಹೊರತೋರಿಕೊಂಡು ಇದರಿಂದ ಜಿಜ್ಞಾಸುಗಳು ಗೊಂದಲದಲ್ಲಿ ಸಿಕ್ಕಿ ನರಳುವದಕ್ಕೆ ಅವಕಾಶವಾಗಿರುತ್ತದೆ. ಇವಕ್ಕೆಲ್ಲ ಭಾಷ್ಯಪಠನವೊಂದೇ ಮದ್ದು. (1–17)

ಭಾಷ್ಯಕಾರರ ಮತದಂತೆ ಕಲ್ಪಿತವಾದ ಮೂರವಸ್ಥೆಗಳ ದೃಷ್ಟಿಯಿಂದ ನಾಲ್ಕನೆಯದಾದ ತುರೀಯವು ಒಂದು ಅವಸ್ಥೆಯೇ ಅಲ್ಲ. ಇನ್ನು ತುರ್ಯಾತೀತವೆಂಬ ಇದಕ್ಕಿಂತಲೂ ಹೆಚ್ಚಿನದಾದ ಅವಸ್ಥೆಯೊಂದುಂಟು ಎಂದು ಕಲ್ಪಿಸುವದು ಸತ್ಯಕ್ಕೆ ಅತಿದೂರವಾದ ಮಾತು. ಭೋಗವೂ ಮೋಕ್ಷವೂ ಅಂತಃಕರಣನಿಮಿತ್ತವಾಗಿರುವದರಿಂದ ಅಂತಃಕರಣವನ್ನು ಸಮಾಧಿಯೆಂದು ಗೀತೆಯಲ್ಲಿ ಕರೆದಿದೆ. ಈ ಅಂತಃಕರಣವು ಆತ್ಮನಲ್ಲಿ ಸಮಾಧಾನವನ್ನು ಹೊಂದುವದರಿಂದ ಆತ್ಮನಿಗೂ ಸಮಾಧಿಯೆಂಬ ಗೌಣನಾಮವುಂಟು.

(18–22)

ಇದರಂತೆ ಯೋಗವೆಂದರೆ ನಿಜವಾಗಿ ಸಮ್ಯಗ್ದರ್ಶನವೇ, ಅದಕ್ಕೆ ಸಾಧನವಾಗಿರುವದರಿಂದ ಧ್ಯಾನಯೋಗವೂ ಕರ್ಮಯೋಗವೂ ಯೋಗವೆನಿಸಿರುತ್ತವೆ ಎಂದು ಗೀತಾಭಾಷ್ಯದಲ್ಲಿ ಆಚಾರ್ಯರು ತಿಳಿಸಿರುತ್ತಾರೆ. ಭಾಷ್ಯದಲ್ಲಿ ಇಷ್ಟು ಸ್ಪಷ್ಟವಾಗಿ ತಿಳಿಸಿರುವ ಅರ್ಥಗಳನ್ನು ಕೈಬಿಟ್ಟು ಬೇರೆ ಬಗೆಯಾಗಿ ಅರ್ಥಮಾಡುವದಾದರೆ ಅನುಭವವನ್ನು ಕಂಡುಕೊಳ್ಳುವದಕ್ಕೇ ಆಗುವದಿಲ್ಲ. ಇನ್ನು ಸಪ್ತಭೂಮಿಕೆಗಳ ವಿಚಾರವಾಗಲಿ ಯೋಗಸಮಾಧಿಯ ವಿಚಾರವಾಗಲಿ ಭಾಷ್ಯದಲ್ಲೆಲ್ಲೂ ಕಂಡುಬರುವದಿಲ್ಲ. ಗೀತೆಯ ಎಂಟನೆಯ ಅಧ್ಯಾಯದಲ್ಲಿ ಧಾರಣಾಯೋಗವನ್ನು ಹೇಳಿದ್ದರೂ ಅದು ಈ ಜ್ಞಾನಕ್ಕೆ ಎಳ್ಳಷ್ಟೂ ಸಂಬಂಧಿಸಿರುವದಿಲ್ಲ. ಧ್ಯಾನಯೋಗದಲ್ಲಿ ಚಿತ್ತಭೂಮಿಕೆಗಳ ವಿಚಾರವು ಬಂದಿದ್ದರೂ ಅಲ್ಲಿ ಹೇಳಿರುವದು ಸಪ್ತಭೂಮಿಕೆಗಳನ್ನಲ್ಲ. ಅಧ್ಯಾತ್ಮಯೋಗದಲ್ಲಿ ಹೇಳಿದ ವಾಕ್ಕು, ಮನಸ್ಸು– ಮುಂತಾದವುಗಳನ್ನೇ ಅಲ್ಲಿ ಭೂಮಿಕೆಗಳೆಂದಿದೆ. ಈ ಅಧ್ಯಾತ್ಮಯೋಗವನ್ನೇ ಸಮಾಧಿಯೋಗ, ನಿದಿಧ್ಯಾಸನ, ಧ್ಯಾನಯೋಗ– ಎಂದು ಆಚಾರ್ಯರು ಕರೆದಿರುತ್ತಾರೆ.

(23–38)

ಒಟ್ಟಿನಲ್ಲಿ ವಿವೇಕ, ವೈರಾಗ್ಯ, ಐಕಾಗ್ರ್ಯ– ಇವು ಮೂರು ಆತ್ಮನನ್ನು ನೇರಾಗಿ ಅರಿತು ಕಂಡುಕೊಳ್ಳುವ ಜ್ಞಾನಕ್ಕೇ ಸಾಧನಗಳು. ಆದರೆ ವೇದವನ್ನು ಬಿಟ್ಟ ಜ್ಞಾನದಿಂದಲಾಗಲಿ ಧ್ಯಾನದಿಂದಲಾಗಲಿ ನಿಃಶ್ರೇಯಸವು ಸಿಕ್ಕುವದಿಲ್ಲ. ಏಕೆಂದರೆ ಶ್ರುತಿಗಳೆಲ್ಲವೂ ಬ್ರಹ್ಮಾತ್ಮಜ್ಞಾನವೇ ಮೋಕ್ಷಸಾಧನವೆಂದು ಹೇಳುತ್ತವೆ. ಮೋಕ್ಷವು ಹೊಸದಾಗಿ ಉಂಟುಮಾಡಿಕೊಳ್ಳತಕ್ಕದ್ದಲ್ಲ, ವಿಕಾರ್ಯವಲ್ಲ, ಆಪ್ಯವಲ್ಲ, ಸಂಸ್ಕಾರ್ಯವೂ ಅಲ್ಲ. ಅದು ನಿತ್ಯಪ್ರಾಪ್ತವಾಗಿರುವ ಆತ್ಮಸ್ವರೂಪವೇ

ಆಗಿರುತ್ತದೆ. ಜ್ಞಾನಕ್ಕೆ ಅಜ್ಞಾನವನ್ನು ಕಳೆಯುವದೇ ಕೆಲಸ. ಅಷ್ಟುಮಾತ್ರದಿಂದ ಮೋಕ್ಷಫಲವಾಗಿಯೇತೀರುತ್ತದೆ. ಜ್ಞಾನವೇ ಮೋಕ್ಷಕ್ಕೆ ಏಕೈಕಸಾಧನವು.

(39–76)

ಜ್ಞಾನಕ್ಕಾಗಿ ಮಾಡುವ ಧ್ಯಾನಾದಿಸಾಧನೆಯಿಂದ ಜ್ಞಾನನಿಷ್ಠೆ ಯುಂಟಾಗುತ್ತದೆ. ನಿಷ್ಠೆ ಎಂದರೆ ಪರ್ಯವಸಾನವು, ಕೊನೆಗಾಣುವಿಕೆಯು ಎಂದರ್ಥ. ಜ್ಞಾನವು ಬಂದರೆ ನಿಷ್ಠೆಯು ತಾನಾಗಿಯೇ ಬರುತ್ತದೆ. ಜ್ಞಾನ ಬೇರೆ, ನಿಷ್ಠೆ ಬೇರೆ– ಎಂದು ತಿಳಿಯಬಾರದು. ಮತ್ತು ಜ್ಞಾನದಲ್ಲಿ ದೃಢಾಪರೋಕ್ಷ, ಅದೃಢಾಪರೋಕ್ಷ– ಎಂಬ ಭೇದವನ್ನು ಕಲ್ಪಿಸುವದೂ ಸರಿಯಲ್ಲ. ಏಕೆಂದರೆ ನಿತ್ಯಾಪರೋಕ್ಷನಾಗಿರುವ ಆತ್ಮನ ಪ್ರತ್ಯಯವೇ ಜ್ಞಾನವು. ಅಜ್ಞನಿಗೆ ದೇಹವೇ ತಾನೆಂಬ ಜ್ಞಾನವಿರುವಂತೆಯೇ ಆತ್ಮನೇ ತಾನೆಂಬ ಈ ಜ್ಞಾನವು ಸಹಜವಾಗಿ ನಿಂತಿರುವದೇ ಜ್ಞಾನನಿಷ್ಠೆಯು. ಹೀಗೆ ಸಹಜವಾಗಿ ನಿಲ್ಲುವದೇ ಜ್ಞಾನವು ಪರಿಪಕ್ವವಾಗಿ ಪ್ರತಿಪಕ್ಷವಿಹೀನವಾದದ್ದರ ಗುರುತು. ಹೊರಗೆ ಜಗತ್ತು ತೋರುತ್ತಿದ್ದರೂ ಒಳಗೆ ಕಲ್ಪನೆಗಳು ಏಳುತ್ತಿದ್ದರೂ ಅವುಗಳ ಆತಂಕವಿಲ್ಲದೆ ಬುದ್ಧಿಯು ಅರಿವಿನಲ್ಲಿ ಮುಳುಗಿ ಒಂದಾಗುವದೇ ಪರಿಪಾಕವು. ಅಜ್ಞಾನದ ಅಥವಾ ಅದರ ಕಾರ್ಯದ ಅಡಚಣೆಯಿಲ್ಲದಿರುವದೇ ಪ್ರತಿಪಕ್ಷವಿಹೀನವು. ಬಾಹ್ಯದೃಷ್ಟಿಯ ಜನರಿಗೆ ಜ್ಞಾನಿಯಲ್ಲಿ ಬುದ್ಧೀಂದ್ರಿಯಗಳೂ ಸುಖದುಃಖಾ ದಿವೇದನೆಗಳೂ ಇರುವಂತೆ ಕಂಡುಬಂದರೂ ಜ್ಞಾನಿಗೆ ಮಾತ್ರ ಅವೆಲ್ಲವೂ ಆತ್ಮನೇ ಆಗಿರುತ್ತದೆ. ಜ್ಞಾನಿಯಲ್ಲಿ ಸಹಜವಾಗಿರುವ ಈ ವೃತ್ತಿಯು ಸಾಧಕನಿಗೆ ಅಭ್ಯಾಸದಿಂದ ಬರುವದಾಗಿರುತ್ತದೆ. ಮೇಲುನೋಟಕ್ಕೆ ಆತ್ಮಪ್ರತ್ಯಯವು ವೃತ್ತಿಯಂತೆ ಕಂಡುಬಂದರೂ ನಿಜವಾಗಿ ಅದು ಆತ್ಮನೇ ಆಗಿರುತ್ತದೆ. ಜ್ಞಾನಿಯ ಅಂತಃಕರಣವು ಆತ್ಮನೇ ಆಗಿರುವದರಿಂದ ಅವನಿಗೆ ಮೊದಲಿನಂತೆ ಸಂಸಾರವಿರುವದಿಲ್ಲವೆನ್ನುವದು ಸ್ವಾನುಭವವು. ಈ ಬಗೆಯ ನಿಷ್ಠೆಯನ್ನೇ ಚತುರ್ಥೀ ಭಕ್ತಿ, ಪರಾಭಕ್ತಿ– ಎಂದು ಕರೆದಿರುತ್ತಾರೆ.

(77–99)

ಮುಮುಕ್ಷುಗಳಾದವರು ಆತ್ಮಜ್ಞಾನನಿಷ್ಠೆಯನ್ನು ಪಡೆಯುವದಕ್ಕೆ ಶಾಸ್ತ್ರಾಚಾರ್ಯರ ಉಪದೇಶ, ಚಿತ್ತಶುದ್ಧಿ, ಅಮಾನಿತ್ವಾದಿಗಳು, ಸರ್ವಕರ್ಮಸಂನ್ಯಾಸ, ಆತ್ಮಾನುಭವ ನಿಶ್ಚಯ– ಇವುಗಳನ್ನು ಸಾಧಿಸುವದಕ್ಕೆ

ಯತ್ನಿಸಬೇಕು. ಜ್ಞಾನಿಗೆ ಯಾವದು ಸ್ವಭಾವವೋ ಸಾಧಕನಿಗೆ ಅದನ್ನೇ ಸಾಧನೆಯಾಗಿ ವಿಧಿಸಿರುವದರಿಂದ ಇಲ್ಲಿ ಸಾಧ್ಯಸಾಧನಗಳೆರಡೂ ಒಂದೇ ಆಗಿರುತ್ತವೆಯೆಂಬುದು ವಿಶೇಷವು. ಸಾಧನಸ್ಥಿತಿಯಲ್ಲಿರುವಾಗ ಸಾಧಕನೆನಿಸಿ ಕೊಂಡವನೇ ಸಿದ್ಧನಾದಾಗ ಜ್ಞಾನಿಯೆನಿಸಿಕೊಳ್ಳುತ್ತಾನೆ. (100–106)

ನಿಷ್ಠೆಯ ಫಲವಾದ ಸರ್ವಾತ್ಮಭಾವವು ಅಳವಟ್ಟಾಗ ಜ್ಞಾನಿಯ ದೃಷ್ಟಿಯಲ್ಲಿ ಸಶರೀರತ್ವವಾಗಲಿ, ಜೀವಭಾವವಾಗಲಿ, ಜ್ಞಾನಾಜ್ಞಾನವಾಗಲಿ– ಎಂದಿಗೂ ಇಲ್ಲವೇಇಲ್ಲ. ಅವನು ಅಶರೀರಿಯಾದ, ಅಪ್ರಾಣನಾದ ಆತ್ಮನೇ ಆಗಿರುತ್ತಾನೆ. ನಮ್ಮ ಅಂತಃಕರಣದಲ್ಲಿ ಉಂಟಾಗುವ ಸುಖದುಃಖಗಳು ನಮಗೇ ವೇದ್ಯವಾಗುವಂತೆ ಜ್ಞಾನದಲ್ಲಿ ನೆಲೆನಿಂತಿರುವದಕ್ಕೆ ಜ್ಞಾನಿಯೊಬ್ಬನೇ ಸಾಕ್ಷಿ. ಈ ನಿಷ್ಠೆಯನ್ನೇ ಪರಮಾರ್ಥಸಂನ್ಯಾಸವೆಂದು ಆಚಾರ್ಯರು ಗೀತಾಭಾಷ್ಯದಲ್ಲಿ ಕರೆದಿರುತ್ತಾರೆ. (107–117)

ಸಾಧಕರಿಗಾಗಿ ವಿಧಿಸಿದ ಸಂನ್ಯಾಸದ ಬಗೆಗಳನ್ನು ಮುಂದೆ ತಿಳಿಸಲಾಗುವುದು. ಸದ್ಯಕ್ಕೆ ಮುಂದಿನ ಅಧ್ಯಾಯದಲ್ಲಿ ಜ್ಞಾನಿಗಳ ಇರುವಿಕೆಯನ್ನು ಕುರಿತು ಹೇಳಲಾಗುವದು. (118–120)

# ಹನ್ನೊಂದನೆಯ ಅಧ್ಯಾಯ

ತಾನೊಬ್ಬನೇ ಸತ್ಯ, ಹೊರಗಿನ ವಿಷಯಗಳು ಹುಸಿತೋರಿಕೆ ಎಂದು ಅರಿತುಕೊಂಡಿರುವ ಜ್ಞಾನಿಯು ಕಾಮದಿಂದ ಬಿಡುಗಡೆಹೊಂದಿರುತ್ತಾನೆ. ಹೃದಯಕ್ಕೆ ಗಂಟು ಬಿದ್ದಿದ್ದ ಕಾಮಗಳು ತೊಲಗಲು ಸಂಶಯಗಳು ಕತ್ತರಿಸಿಹೋಗುವವು, ಎಲ್ಲಾ ಕರ್ಮಗಳೂ ಕ್ಷಯವಾಗುವವು ಎಂದು ಶ್ರುತಿಸ್ಮೃತಿಗಳಲ್ಲಿ ಹೇಳಿರುತ್ತದೆ. ಆದ್ದರಿಂದ ಜ್ಞಾನಿಗೆ ಇನ್ನುಮುಂದೆ ಮಾಡತಕ್ಕದ್ದು ಏನೂ ಉಳಿಯುವದಿಲ್ಲ; ಅವನು ಸಂನ್ಯಾಸಿಯೇ ಆಗುವನು. ಶರೀರಸ್ಥಿತಿಗಾಗಿ ಮಾಡುವ ಭಿಕ್ಷಾಟನಾದಿಗಳಲ್ಲಿಕೂಡ ಅವನಿಗೆ ಕರ್ತೃತ್ವಬುದ್ಧಿಯಿರುವದಿಲ್ಲ ವಾದ್ದರಿಂದ ಅವು ಕರ್ಮವೇ ಅಲ್ಲ. ತನ್ನ ದೇಹಯಾತ್ರೆಗೆ ಆಗುವಷ್ಟು ದೊರೆಯಲಿ, ದೊರೆಯದಿರಲಿ– ಅವನ ಮನಸ್ಸು ಏರುಪೇರುಗಳಿಲ್ಲದೆ ಇರುತ್ತದೆ. ಸ್ತುತಿನಮಸ್ಕಾರಗಳನ್ನು ಬಯಸದ ನಿಸ್ಸಂಗನಾದ ಜ್ಞಾನಿಗೆ ಬ್ರಹ್ಮವೇ ಆಶ್ರಯಸ್ಥಾನವು. ಅದರ ಹೊರತು ಮತ್ತೆಯಾವ ಮನೆಯನ್ನೂ ಅವನು ನೆಚ್ಚಿಕೊಂಡಿರುವದಿಲ್ಲ.

ಜ್ಞಾನಪರಿಪಾಕಕ್ಕೆ ಪಾರಿವ್ರಾಜ್ಯವೇ ಪ್ರಶಸ್ತಸಾಧನವು. ಅದರಿಂದಾದ ಜ್ಞಾನನಿಷ್ಠೆಯು ಪರಮಾರ್ಥಸಂನ್ಯಾಸದಲ್ಲಿ ಪರ್ಯವಸಾನವಾಗುತ್ತದೆ. ಮನುಷ್ಯಲೋಕಾದಿ ಸಾಧ್ಯಗಳಲ್ಲಿಯೂ ಅವುಗಳ ಸಾಧನದಲ್ಲಿಯೂ ವಿರಕ್ತರಾದ ಮುಮುಕ್ಷುಗಳು ಪ್ರವ್ರಜನಮಾಡಿಯೇ ತೀರುತ್ತಾರೆ; ಎಂದರೆ ಆತ್ಮೇಚ್ಛೆಯುಳ್ಳವರು- ಸಂನ್ಯಾಸಮಾಡಲೇಬೇಕು ಎಂದರ್ಥ. ಜ್ಞಾನಿಗಂತೂ ಕಾಮವಿಲ್ಲದ್ದರಿಂದ ಸಹಜವಾಗಿಯೇ ಸಂನ್ಯಾಸವು ಬಂದೊದಗುತ್ತದೆ. ಹೀಗೆ ಸಂನ್ಯಾಸವು ಸಾಧನ ಹಾಗೂ ಸಾಧ್ಯ ಎರಡೂ ಆಗಿವೆ. (15–21)

ಯಾರಿಗೆ ಬಾಲ್ಯದಲ್ಲಿಯೇ ವೈರಾಗ್ಯವು ಬಲಿತುಕೊಂಡಿರುವದೋ ಅವರು ಗೃಹಸ್ಥಧರ್ಮವನ್ನು ಕೈಗೊಳ್ಳದೆ ನೇರವಾಗಿ ಸಂನ್ಯಾಸಧರ್ಮವನ್ನೇ ಸ್ವೀಕರಿಸುವರು. ಇದಕ್ಕೆ ವಾಮದೇವ, ಶುಕ, ಸಂವರ್ತ, ದತ್ತ, ಶಂಕರ, ರಮಣ- ಇವರೇ ಸಾಕ್ಷಿ. ಮತ್ತೆ ಕೆಲವರು ಗಾರ್ಹಸ್ಥ್ಯದಿಂದ ಕ್ರಮ ಸಂನ್ಯಾಸವನ್ನು ಹೊಂದುವರು. (22–27)

ಕರ್ಮದಿಂದ ಆಗಬೇಕಾದ ಪ್ರಯೋಜನವು ಯಾವದೂ ಇಲ್ಲವಾದ್ದರಿಂದ ಜ್ಞಾನಿಯು ಸಹಜವಾಗಿ ಸಂನ್ಯಾಸವನ್ನೇ ಅವಲಂಬಿಸುವ ನೆಂಬುದು ನಿಜ. ಆದರೆ ಯಾವದಾದರೊಂದು ನಿಮಿತ್ತದಿಂದ ಅವನು ಗೃಹಸ್ಥನಾಗಿಯೇ ಉಳಿದರೂ ಅವನು ಗತಸಂಗನಾಗಿರುತ್ತಾನೆ, ತತ್ತ್ವಜ್ಞಾನದಲ್ಲಿಯೇ ನೆಲೆನಿಂತಿರುತ್ತಾನೆ. ಆದ್ದರಿಂದ ಅವನ ಕರ್ಮವೆಲ್ಲವೂ ಸಮಗ್ರವಾಗಿ ಲಯವಾಗಿಬಿಡುತ್ತದೆ, ಎಂದರೆ ಜ್ಞಾನಿಯು ಮಾಡುವ ಕರ್ಮವು ಅಕರ್ಮವೇ, ಅದೆಲ್ಲವೂ ಅವನ ದೃಷ್ಟಿಯಿಂದ ಬ್ರಹ್ಮವೇ ಆಗಿರುತ್ತದೆ. (28–34)

ಜ್ಞಾನಿಗಳು ಪರಮಹಂಸರಾಗಿರಲಿ, ಗೃಹಸ್ಥರಾಗಿರಲಿ- ಇಬ್ಬರಿಗೂ ಮುಕ್ತಿಜ್ಞಾನಗಳು ಸಮಾನ. ಇವರು ತಮತಮಗುಚಿತವಾದ ಕರ್ಮಗಳಲ್ಲಿ ತೊಡಗಿರುವಂತೆ ಕಂಡುಬಂದರೂ ಅಧರ್ಮಾಚರಣೆಯು ಇವರಲ್ಲಿರುವದೇ ಇಲ್ಲ. ಜ್ಞಾನಿಯು ಮಾಡುವ ಕರ್ಮವು ಲೋಕಸಂಗ್ರಹಕ್ಕಾಗಿ. ಆದ್ದರಿಂದ ಜ್ಞಾನಿಯನ್ನೇ ಮಾದರಿಯಾಗಿಟ್ಟುಕೊಳ್ಳುವವರಿಗೆ ಸುಖಶಾಂತಿಗಳು ಕಟ್ಟಿಟ್ಟಬುತ್ತಿ ಯಾಗುವವು. ಜನಕ, ಧರ್ಮವ್ಯಾಧ, ಯಾಜ್ಞವಲ್ಕ್ಯ, ಶ್ರೀಕೃಷ್ಣನೇ- ಮುಂತಾದ ಇನ್ನೂ ಅನೇಕ ಜ್ಞಾನಿಗಳು ಗೃಹಸ್ಥರಾಗಿಯೇ ಇದ್ದುಕೊಂಡು ಲೋಕಸಂಗ್ರಹಕ್ಕಾಗಿ ಕರ್ಮವನ್ನು ಆಚರಿಸಿ ತೋರಿಸಿರುತ್ತಾರೆ. ತೋರಿಕೆಗೆ

ಜ್ಞಾನಿಗಳು ಎರಡು ಬಗೆಯಾಗಿ ಕಂಡರೂ ಅವರು ಕೇವಲಾತ್ಮನೇ ಆಗಿರುತ್ತಾರೆ. (35–45)

ವಿವೇಕವೈರಾಗ್ಯಾದಿಸಾಧನಗಳಿಂದ ಜ್ಞಾನವು ಯಾರಿಗೆ ಯಾವಾಗ ಬೇಕಾದರೂ ಉಂಟಾಗಬಹುದು. ವಾಮದೇವನಾದರೋ ಮಹಾತ್ಮನಾಗಿದ್ದನು; ಆದರೆ ಈ ಯುಗದವರಿಗೆ ಅದರಲ್ಲಿಯೂ ಅಲ್ಪವೀರ್ಯರಾದ ಮನುಷ್ಯರಿಗೆ ಆಗುವದು ಸಾಧ್ಯವೇ?– ಎಂದು ಕೆಲವರು ಆಕ್ಷೇಪಿಸಬಹುದು. ಆದರೆ ಜ್ಞಾನದಲ್ಲಿ ಸ್ವಭಾವತಾರತಮ್ಯವಿಲ್ಲದ್ದರಿಂದ ಈಗಲೂ ಅದರಿಂದ ಅಜ್ಞಾನವು ತೊಲಗಿ ಸುಜ್ಞಾನನಿಷ್ಠೆಯು ನೆಲಸಬಹುದಾಗಿದೆ. ಜ್ಞಾನಿಯು ಸರ್ವಥಾ ಕೃತಕೃತ್ಯನು. ಇದನ್ನರಿಯದವರು ಜ್ಞಾನಿಗಳಲ್ಲಿ ಬ್ರಹ್ಮವಿದ್, ಬ್ರಹ್ಮವಿದ್ವರ– ಎಂದುಮುಂತಾಗಿ ಭೇದವನ್ನು ಕಲ್ಪಿಸಿಕೊಂಡಿರುತ್ತಾರೆ. ಇದಕ್ಕೆ ಭಾಷ್ಯಾಧಾರವೇನೂಇಲ್ಲ. (46–55)

ಜ್ಞಾನಿ ಎನ್ನುವ ಮಾತನ್ನು ಶ್ರುತಿಯು ಮತ್ತೊಬ್ಬರಿಗೆ ಉಪದೇಶಿಸುವದಕ್ಕಾಗಿ ಕಲ್ಪಿಸಿಕೊಂಡದ್ದೇ ಹೊರತು ಜ್ಞಾನಿಯು ತಾನು ಜ್ಞಾನಿಯೆಂದೇನೂ ಅಹಂಕಾರಪಡುವದಿಲ್ಲ. ನಿಜವಾಗಿ ಜ್ಞಾನಿಯು ಭಗವಂತನ ಆತ್ಮನೇ. ಆತ್ಮನಿಗೆ ಶರೀರವಿರುವದೆಂಬುದು ಹೊಂದುವದಿಲ್ಲವಾದ್ದರಿಂದ ಸತ್ತಬಳಿಕವೇ ಮೋಕ್ಷವು ದೊರೆಯುವದೆಂಬ ಕಲ್ಪನೆಯೂ ಸರಿಯಲ್ಲ. ಅವನು ನಿತ್ಯಮುಕ್ತನೇ ಆಗಿರುತ್ತಾನೆ. ಜ್ಞಾನಿಯ ಶರೀರವನ್ನು ಕಂಡು ಭ್ರಾಂತರಾಗಿರುವವರಿಗೆ ಅವನು ಜ್ಞಾನಿಯೆಂದೂ ಅವನ ಚರ್ಯೆಯನ್ನು ಅನುಸರಿಸಬೇಕೆಂದೂ ಶ್ರುತಿಯು ಬೋಧಿಸುತ್ತದೆ. (56–64)

ಇದರಂತೆಯೇ ಜ್ಞಾನಿಗೆ ಪ್ರಾರಬ್ಧಕರ್ಮವಿದೆಯೆಂಬುದೂ ವ್ಯವಹಾರದೃಷ್ಟಿಯಿಂದಲೇ ಎಂಬುದನ್ನು ಭಾಷ್ಯಕಾರರು ಸ್ಪಷ್ಟಗೊಳಿಸಿರುತ್ತಾರೆ. ಅದು ಸತ್ಯವೆಂದು ಜ್ಞಾನಿಯು ಎಂದಿಗೂ ಎಣಿಸನು. ಇದನ್ನರಿಯದವರು ಅವನಲ್ಲಿ ಪ್ರಾರಬ್ಧವನ್ನು ಆರೋಪಿಸುತ್ತಾರಾದ್ದರಿಂದ ಅವರ ದೃಷ್ಟಿಯಿಂದಲೇ ಪ್ರವೃತ್ತಿಪರ ಮತ್ತು ನಿವೃತ್ತಿಪರ ಎಂಬೀ ಎರಡು ಬಗೆಯ ಪ್ರಾರಬ್ಧವನ್ನು ಶಾಸ್ತ್ರದಲ್ಲಿ ಒಪ್ಪಿ ಹೇಳಿರುತ್ತದೆ. (65–69)

ಜ್ಞಾನಿಯು ಹೇಗಿದ್ದರೂ ಯಥೇಷ್ಟಚೇಷ್ಟೆಯಲ್ಲಿ ಪ್ರವರ್ತಿಸಲಾರನು. ಏಕೆಂದರೆ ಯಥೇಷ್ಟಪ್ರವೃತ್ತಿಗೆ ಕಾಮವೇ ಕಾರಣವಾಗಿರುತ್ತದೆ. ಕಾಮವು

ತೊಲಗಿದ ಬಳಿಕ ಹೀನಕೃತ್ಯಕ್ಕೆ ಕಾರಣವೇ ಇರುವದಿಲ್ಲ. ಧರ್ಮವನ್ನೇ ಬಹಳ ಭಾರವೆಂದು ಬಿಟ್ಟಿರುವ ಜ್ಞಾನಿಯು ಅಧರ್ಮಕ್ಕೆ ಕೈಹಾಕುವನೆ? ಮುಮುಕ್ಷುವಾದಾಗಲೇ ಧರ್ಮಪರನಾದವನು ಜ್ಞಾನಿಯಾದ ಬಳಿಕ ಅಧರ್ಮಿಯಾಗುವನೆ? ಇದು ಎಂದಿಗೂ ಸಾಧ್ಯವಿಲ್ಲ. ಹಾಗೆ ಒಪ್ಪುವದಾದಲ್ಲಿ ರಾತ್ರಿಯಲ್ಲಿಯೇ ಭಾವಿಗೆ ಬೀಳದವನು ಸೂರ್ಯೋದಯವಾದ ಬಳಿಕ ಬಿದ್ದಾನೆಂದು ಹೇಳಿದಂತಾಗುತ್ತದೆ. ಆದ್ದರಿಂದ ಜ್ಞಾನಿಯಲ್ಲಿ ನಿಷಿದ್ಧಾಚರಣೆಯು ಇಲ್ಲವೇಇಲ್ಲವೆಂಬುದನ್ನು ಸಾಧಕರು ಮೊಟ್ಟಮೊದಲು ತಿಳಿಯಬೇಕಾದದ್ದು ಅವಶ್ಯವು. ತಮ್ಮತಮ್ಮ ಧರ್ಮದಲ್ಲಿ ತೊಡಗಿರುವದೇ ಜ್ಞಾನಿಗಳ ಸ್ವಭಾವವು. (70–78)

ಅಜ್ಞಾನಿಗೆ ಕುರುಹಾದ ರಾಗವು ಜ್ಞಾನಿಯಲ್ಲಿ ತೋರಿದರೂ ಬಾಧಕವಿಲ್ಲ– ಎಂಬ ಸುರೇಶ್ವರರ ವಚನಕ್ಕೆ ಕೆಲವರು ಅಪಾರ್ಥವನ್ನು ಕಲ್ಪಿಸುತ್ತಿದ್ದಾರೆ. ಆದರೆ ಹಿಂದೆ ಹೇಳಿದಂತೆ ಏನಾದರೊಂದು ನಿಮಿತ್ತದಿಂದ ಜ್ಞಾನಿಯು ಗೃಹಸ್ಥನಾಗಿಯೇ ಉಳಿದಾಗ ಅವನು ಮೊದಲಿನಂತೆಯೇ ಕರ್ಮದಲ್ಲಿ ಪ್ರವರ್ತಿಸಬೇಕಾಗುತ್ತದೆ. ಆಗ ಶರೀರಾದಿಗಳಿಗೆ ಸ್ವಾಭಾವಿಕವಾದ ರಾಗಾದಿದೋಷಗಳು ಅವನಲ್ಲಿ ಕಂಡುಬರಬಹುದು. ಪರಮಹಂಸ ಜ್ಞಾನಿಯಲ್ಲಿಯೂ ಭಿಕ್ಷೆ, ಶೌಚಾದಿಗಳ ಸಮಯದಲ್ಲಿ ಅವು ಕಂಡುಬರಬಹುದು. ಹೀಗಿದ್ದರೂ ಸರ್ವತ್ರಬ್ರಹ್ಮಬುದ್ಧಿಯಿಂದೊಡಗೂಡಿರುವ ಅವರಿಬ್ಬರಿಗೂ ಅವುಗಳಿಂದ ಯಾವ ಬಾಧಕವೂ ಇರಲಾರದು– ಎಂಬುದು ಆ ವಚನದ ತಾತ್ಪರ್ಯವು. ಇದನ್ನು ತಿಳಿಯದೆ ಮಿಕ್ಕವರು ತಾವು ಜ್ಞಾನಿಗಳೆಂದುಕೊಂಡು ರಾಗಾದಿವಶರಾಗಿ ಯಥೇಷ್ಟಾಚರಣೆಗೆ ಪ್ರಯತ್ನಿಸಿದರೆ ಪತಿತರಾಗುವರು; ಏಕೆಂದರೆ ರಾಗಭಯಕ್ರೋಧಗಳನ್ನು ತೊಲಗಿಸಿಕೊಂಡವರೇ ಅದ್ವಯಾತ್ಮನನ್ನು ಬಲ್ಲವರು ಎಂಬುದಾಗಿ ಕಾರಿಕೆಯಲ್ಲಿಯೂ ಗೀತೆಯಲ್ಲಿಯೂ ತಿಳಿಸಿರುತ್ತದೆ. ಪುರಾಣಕಾಲದಲ್ಲಿದ್ದ ಋಷಿಗಳಲ್ಲಿಯೂ ಜನರನ್ನು ಸರಿಯಾದ ಹಾದಿಗೆ ತಿರುಗಿಸುವದಕ್ಕಾಗಿ ಕ್ರೋಧಮೋಹಗಳು ತೋರಿಕೊಂಡದ್ದುಂಟು. ಆದರೆ ಅದರ ಉದ್ದೇಶವನ್ನು ಅರ್ಥಮಾಡಿಕೊಳ್ಳದೆ ಅಂಥ ಉದಾಹರಣೆಗಳನ್ನೇ ತೋರಿಸಿ ಅನೀತಿಮಾರ್ಗಕ್ಕಿಳಿಯುವದೂ ಇಳಿಸುವದೂ ಭಂಡತನವಲ್ಲವೆ? (79–91)

ಯಾವನಾದರೊಬ್ಬ ಜ್ಞಾನಿಯು ಗೃಹಸ್ಥಾಶ್ರಮದಲ್ಲಿಯೇ ಉಳಿದುಕೊಂಡಿದ್ದರೆ ಅವನಿಗೆ ಧರ್ಮವೊಂದೇ ನಿಮಿತ್ತವಾಗಿರುತ್ತದೆ.

ಉದಾಹರಣೆಗೆ ತಾನು ಹೊರಟುಹೋಗುವದರಿಂದ ರಾಜ್ಯದಲ್ಲಿ ಧರ್ಮಕ್ಕೇ ಚ್ಯುತಿಬರುವ ಸಂಭವವಿರಬಹುದು; ಅಥವಾ ವೃದ್ಧಮಾತಾಪಿತೃಗಳ ಸೇವೆಗೆ ಯಾರೂ ಇಲ್ಲದಿರಬಹುದು; ಒಂದುವೇಳೆ ದೇಹಸ್ಥಿತಿಯೇ ಹೊರಹೊರಡು ವದಕ್ಕೆ ಪ್ರತಿಕೂಲವಾಗಿರಬಹುದು. ಇಂಥ ಸಂದರ್ಭಗಳಲ್ಲಿ ಅವನು ಮೊದಲಿನಂತೆ ಕರ್ಮವನ್ನು ಮಾಡಿಕೊಂಡೇ ಇದ್ದುಬಿಡುತ್ತಾನೆ. ಇದನ್ನರಿಯದೆ ಕೆಲವರು ನಿಮಿತ್ತ ಎನ್ನುವ ಶಬ್ದಕ್ಕೆ ಸ್ವೇಚ್ಛಾದಿ ಬಗೆಬಗೆಯ ಪ್ರಾರಬ್ಧವೆಂಬ ಅರ್ಥವನ್ನು ಕಲ್ಪಿಸಿಕೊಂಡು ಜ್ಞಾನವು ಉಂಟಾದ ಬಳಿಕ ಹೇಗೆ ಇಷ್ಟವೋ ಹಾಗೆ ಪ್ರವರ್ತಿಸಬಹುದು, ಅದರಿಂದ ಯಾವ ಬಾಧಕವೂ ಉಂಟಾಗದು, ಜ್ಞಾನಿಯು ಹೇಗಿದ್ದರೂ ಕೃತಕೃತ್ಯನೇ– ಎಂದು ಹೇಳತೊಡಗಿದ್ದಾರೆ. ಮತ್ತೆ ಕೆಲವರು ಜ್ಞಾನಿಯ ಮಹಿಮೆಯನ್ನು ಹೊಗಳಿರುವ ಶ್ರುತಿಗಳಿಗೆ ತಮ್ಮದೇ ಆದ ಅರ್ಥವನ್ನೂ ಕಲ್ಪಿಸಿಕೊಂಡಿರುತ್ತಾರೆ. (92–103)

ಕ್ರಮಮುಕ್ತಿಯನ್ನು ಹೊಂದುವ ಉಪಾಸಕನು ದೇವತೆಗಳ ನೆರವಿನಿಂದ ಬ್ರಹ್ಮಲೋಕವನ್ನು ಪಡೆಯುತ್ತಾನೆಂದೂ ಅಲ್ಲಿ ತನಗೆ ಬೇಕಾದದ್ದನ್ನು ತಿನ್ನುತ್ತಿರುವದು, ಆಡುತ್ತಿರುವದು, ಸಂಕಲ್ಪಮಾತ್ರದಿಂದ ಸಿದ್ಧರಾದ ಸ್ತ್ರ್ಯಾದಿಗಳೊಡನೆ ಸುಖಿಸುತ್ತಿರುವದು– ಮುಂತಾದ ಐಶ್ವರ್ಯವನ್ನು ಅನುಭವಿಸುತ್ತಾನೆಂದೂ ಛಾಂದೋಗ್ಯದಲ್ಲಿ ಹೇಳಿದೆ. ಬ್ರಹ್ಮನ ಆ ಕಲ್ಪಮುಗಿಯುವವರೆಗೆ ಅಲ್ಲಿದ್ದುಕೊಂಡು ಅನಂತರ ಬ್ರಹ್ಮನಿಂದಲೇ ಅವನು ಜ್ಞಾನವನ್ನು ಹೊಂದುತ್ತಾನೆಂದೂ ಹೇಳಿದೆ. ಹೀಗೆ ಕೊನೆಯಲ್ಲಿ ಮುಕ್ತಿಯನ್ನು ಪಡೆಯುವ ಯೋಗ್ಯತೆಯು ಇವನಿಗಿರುತ್ತದೆಯಾದ್ದರಿಂದ ಇವನನ್ನು ಮೊದಲೇ ಮುಕ್ತನೆಂದು ಶ್ರುತಿಯಲ್ಲಿ ಕರೆದಿದೆ. ಜ್ಞಾನಿ, ಮುಕ್ತ– ಎಂಬ ಪದಗಳು ಬ್ರಹ್ಮಲೋಕದಲ್ಲಿರುವವನಿಗೂ ಇಲ್ಲಿಯೇ ಬ್ರಹ್ಮವನ್ನು ತಿಳಿದವನಿಗೂ ಅನ್ವಯಿಸು ತ್ತವೆ ಎಂಬುದನ್ನು ಇಲ್ಲಿ ಅವಶ್ಯವಾಗಿ ಗಮನಿಸಬೇಕು. ಪ್ರಕೃತ ಮುಕ್ತನು ಸರ್ವಾತ್ಮನಾಗಿರುವದರಿಂದ ದೇವತೆಗಳಲ್ಲಾಗಲಿ ಯೋಗಿಗಳಲ್ಲಾಗಲಿ ಇರುವ ಸಿದ್ಧಿಯೂ ಮುಕ್ತನದೇ ಎಂದು ಸರ್ವಾತ್ಮಭಾವವನ್ನು ಹೊಗಳುವದಕ್ಕೆ ಈ ಶ್ರುತಿಯು ಬಂದಿದೆ ಎಂದು ತಿಳಿಯಬೇಕು. ನಿಜವಾಗಿ ಜ್ಞಾನಿಗೆ ಇದಾವದೂ ಇಲ್ಲವಾದರೂ ಅಜ್ಞಾನಿಗಳ ಸಮಾಧಾನಕ್ಕಾಗಿ ಹೀಗೆ ಹೇಳಿರುತ್ತದೆ.

(104–109)

ಈ ರಹಸ್ಯವನ್ನರಿಯದೆ ಸದ್ಯೋಮುಕ್ತನಾದ ಜ್ಞಾನಿಯು ಈ

ಲೋಕದಲ್ಲಿ ಸ್ವೇಚ್ಛೆಯಾಗಿ ವಿಹರಿಸಬಹುದೆಂತಲೂ ಈ ಜ್ಞಾನಿಯಿಂದ ಮಾಡಲ್ಪಟ್ಟ ಮಾತೃವಧೆ, ಪಿತೃವಧೆ, ಚೋರತನ– ಮುಂತಾದ ದುಷ್ಕೃತ್ಯಗಳಿಂದುಂಟಾದ ಪಾಪವು ಆತನಿಗಾಗತಕ್ಕ ಮೋಕ್ಷವನ್ನು ಕೆಡಿಸಲಾರ ದೆಂತಲೂ ಬೋಧಿಸುವವರ ಬಣವು ಈಗ ಹೆಚ್ಚಾಗಿದೆ. ಅಂಥವರು ಪುರಾಣ ಕಥೆಗಳ ಮತ್ತು ಶ್ರುತಿಗಳ ಕಲ್ಪಿತ ಆಧಾರವನ್ನು ತೋರಿಸುವದರ ಮೂಲಕ ಜನರನ್ನು ವಂಚಿಸಿ ಸ್ವೇಚ್ಛಾಚಾರಕ್ಕೆ ಅಪ್ಪಣೆಚೀಟಿಯನ್ನು ಪಡೆದವರಂತೆ ವರ್ತಿಸುತ್ತಿರುತ್ತಾರೆ. ಧರ್ಮದಲ್ಲಿ ಜನರಿಗೆ ಆಸ್ಥೆಯೇ ಇಲ್ಲವಾಗುತ್ತಿರುವ ಇಂದಿನ ಕಾಲದಲ್ಲಿ ಇಂತಹ ವೇದಾಂತ ಬೋಧವು ಬಹುಜನಕ್ಕೆ ಪ್ರಿಯವಾಗುವದರಲ್ಲಿ ಆಶ್ಚರ್ಯವೇನಿಲ್ಲ. ಭಾಷ್ಯಗಳನ್ನು ಕಣ್ತೆರೆದು ನೋಡುವದರಿಂದ ಮಾತ್ರವೇ ಈ ಭ್ರಾಂತಿಯು ದೂರವಾಗಬಲ್ಲದು. (120–128)

ಭಾಷ್ಯಕಾರರ ಪ್ರಕಾರ ಜ್ಞಾನಿಯು ಪ್ರವೃತ್ತಿಮಾರ್ಗದಲ್ಲಿರಲಿ ಅಥವಾ ನಿವೃತ್ತಿಮಾರ್ಗದಲ್ಲಿರಲಿ ಅವನಿಗೆ ಧರ್ಮವು ಸಹಜವಾಗಿರುತ್ತದೆ. ಸಾಧಕನಿಗೂ ಕೂಡ ಧರ್ಮವು ಅಷ್ಟೇ ಮುಖ್ಯವಾದುದು ಎಂಬುದನ್ನು ತೈತ್ತಿರೀಯ, ಕಠ, ಗೀತಾಭಾಷ್ಯಾದಿಗಳಲ್ಲಿ ಅವರು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಆದ್ದರಿಂದ ಸಾಧಕರಾದವರು ವೇದಾಂತವನ್ನು ಅರಿತುಕೊಂಡು ಧರ್ಮಮಾರ್ಗದಲ್ಲಿ ನಡೆಯುವದಕ್ಕೆ ಪ್ರಯತ್ನಿಸಬೇಕು. ವೇದಾಂತದ ಕೆಲವು ಮಾತುಗಳನ್ನು ಕಲಿತಮಾತ್ರದಿಂದ ನಾನು ಜ್ಞಾನಿ ಎಂಬ ಭಾವನೆಯನ್ನು ತಾಳಬಾರದು. ಭಗವಂತನ ನಾಮಸ್ಮರಣೆ, ಸಾಧುಸಂತರ ಸಹವಾಸ, ತನ್ನನ್ನೇತಾನು ಪರೀಕ್ಷಿಸಿಕೊಳ್ಳುವದು, ಇಂದ್ರಿಯದಮನ, ವೈರಾಗ್ಯಭಕ್ತಿಶ್ರದ್ಧೆಗಳು– ಇವೇ ಮುಂತಾದ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವದಕ್ಕೆ ಯತ್ನಿಸಬೇಕು. ಭಗವಂತನ ಉಪಾಸನೆಯಿಂದ ಇಂಥ ಒಳ್ಳೆಯ ಮಾರ್ಗದಲ್ಲಿ ಗತಿಯು ಸಿಕ್ಕುತ್ತದೆ. ಆದ್ದರಿಂದ ಮುಂದಿನ ಅಧ್ಯಾಯದಲ್ಲಿ ಉಪಾಸನೆಯ ವಿವರವನ್ನು ತಿಳಿಸಲಾಗುತ್ತದೆ. (129–144)

## ಹನ್ನೆರಡನೆಯ ಅಧ್ಯಾಯ

ಶ್ರುತಿಯಲ್ಲಿ ವೇದನೆ, ಉಪಾಸನೆ– ಈ ಎರಡು ಶಬ್ದಗಳನ್ನೂ ಪರ್ಯಾಯವಾಗಿಯೇ ಬಳಸಿರುತ್ತದೆ. ವೇದನೆ ಅಥವಾ ಜ್ಞಾನ ಎಂದರೆ ವಸ್ತುತಂತ್ರವಾದದ್ದು, ಉಪಾಸನೆ ಎಂದರೆ ಭಾವನಾರೂಪವಾದದ್ದು.

ಇವೆರಡಕ್ಕೂ ಶಾಸ್ತ್ರ, ಮನೋವೃತ್ತಿಗಳು ಸಮಾನವಾಗಿರುತ್ತವೆ. ಆದ್ದರಿಂದಲೇ ಈ ಎರಡು ಶಬ್ದಗಳನ್ನೂ ಎರಡರ್ಥದಲ್ಲಿಯೂ ಉಪಯೋಗಿಸುತ್ತಾರಾದ್ದರಿಂದ ಯಾವ ಸಂದರ್ಭದಲ್ಲಿ ಯಾವ ಅರ್ಥವನ್ನು ಸ್ವೀಕರಿಸಬೇಕೆಂಬುದನ್ನು ಭಾಷ್ಯಾಧಾರದಿಂದ ಗೊತ್ತುಪಡಿಸಬೇಕಾಗುತ್ತದೆ. ಉದಾಹರಣೆಗೆ 'ಆತ್ಮನೆಂದೇ ಉಪಾಸನೆಮಾಡಬೇಕು' (ಬೃ. ೧-೪-೭) ಎಂಬಲ್ಲಿ ಜ್ಞಾನವನ್ನೂ ವೈಶ್ವಾನರವಿದ್ಯೆಯನ್ನು (ಛಾಂ. ೫-೧೧-೧) ಉಪದೇಶಿಸಿರುವಲ್ಲಿ ಉಪಾಸನೆಯನ್ನೂ ಹೇಳಿದೆಯೆಂದು ಭಾಷ್ಯದ ಆಧಾರದಿಂದಲೇ ನಮಗೆ ತಿಳಿದು ಬರುತ್ತದೆ. (1–10)

ಶಾಸ್ತ್ರದಲ್ಲಿ ಹೇಳಿರುವಂತೆ ಉಪಾಸ್ಯವಾದ ವಸ್ತುವನ್ನು ಮನಸ್ಸಿಗೆ ವಿಷಯವಾಗಿ ಮಾಡಿಕೊಂಡು, ಅದು ಇಲ್ಲಿಯೇ ಇರುವದೆಂದು ಭಾವಿಸಿ ಎಣ್ಣೆಯ ಧಾರೆಯಹಾಗೆ ಕಡಿವಡೆಯದೆ ದೀರ್ಘಕಾಲದವರೆಗೂ ಅದರಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊಳ್ಳುವದೇ ಉಪಾಸನೆಯೆಂದು ಅಕ್ಷರೋಪಾಸನೆಯ ಸಂದರ್ಭದಲ್ಲಿ ಉಪಾಸನೆಗೆ ಲಕ್ಷಣವನ್ನು ಹೇಳಿದೆ. ಅಕ್ಷರೋಪಾಸನೆಯು ವಸ್ತುತಂತ್ರವಾಗಿದ್ದು ಏಕಾತ್ಮಪ್ರತ್ಯಯಸಾರನಾದ ಆತ್ಮನನ್ನು ಲಕ್ಷಿಸುವದೇ ಇಲ್ಲಿ ವಿಷಯೀಕರಣವು, ಮಿಕ್ಕ ಪ್ರತ್ಯಯಗಳನ್ನು ಹಿಂತಳ್ಳಿ ಆತ್ಮನಲ್ಲಿ ಒಂದಾಗುವದೇ ಸಾಮೀಪ್ಯವು, ಆ ಭಾವನೆಯು ಶರೀರವಿರುವತನಕ ಜ್ಞಾನಿಯಲ್ಲಿ ಸಹಜವಾಗಿರುವದೇ ಸಾಂತತ್ಯವು. ಇದು ವಸ್ತುತಂತ್ರ ಉಪಾಸನೆಯ ರೀತಿಯಾಗಿದೆ. (11–22)

ಮಿಕ್ಕ ಉಪಾಸನೆಗಳೆಲ್ಲವೂ ಕರ್ತೃತಂತ್ರವಾಗಿದ್ದು ಅವಿದ್ಯೆಯ ಕ್ಷೇತ್ರಕ್ಕೇ ಸೇರಿದವುಗಳಾಗಿವೆ. ಅವುಗಳಲ್ಲಿ ಕರ್ಮಾಂಗವಾದ ಉಪಾಸನೆಗಳು, ಸಗುಣಬ್ರಹ್ಮೋಪಾಸನೆಗಳು, ಪ್ರತೀಕೋಪಾಸನೆಗಳು, ಜ್ಞಾನಕ್ಕೋಸ್ಕರವಾಗಿ ಹೇಳಿದ ಅಹಂಗ್ರಹೋಪಾಸನೆಗಳು– ಮುಂತಾಗಿ ಹಲವು ವಿಧಗಳುಂಟು. ಆದರೆ ವೇದಾಧ್ಯಯನವಿಲ್ಲದವರಿಗೆ ಈ ಉಪಾಸನೆಗಳನ್ನು ಮಾಡುವದಕ್ಕಾಗುವದಿಲ್ಲ. (23–27)

ವಿಧ್ಯುಕ್ತವಾದ ಉಪಾಸನೆಗಳಲ್ಲಿ ಗೀತೆಯಲ್ಲಿ ಹೇಳಲ್ಪಟ್ಟ ಓಂಕಾರೊಪಾಸನೆಯೂ ಒಂದು. ಇದರಲ್ಲಿ ಉಪಾಸಕನಾದವನು ಸರ್ವಕರ್ಮಗಳನ್ನೂ ಸಂನ್ಯಾಸಮಾಡಿ ಓಂಕಾರವನ್ನೇ ಬ್ರಹ್ಮಬುದ್ಧಿಯಿಂದ ಸಂತತವೂ ಚಿಂತಿಸುತ್ತಿರಬೇಕಾಗುತ್ತದೆ. ಇಂದ್ರಿಯಮನಗಳನ್ನು ಬಿಗಿಹಿಡಿದುಕೊಂಡು,

ಪ್ರಾಣವನ್ನು ನಾಭಿಯಿಂದ ಕ್ರಮೇಣ ಏರಿಸುತ್ತಾ ಮೂರ್ಧಪ್ರದೇಶ ದಲ್ಲಿಟ್ಟುಕೊಂಡು, ಅಲ್ಲಿಯೇ ಚಿತ್ತವೃತ್ತಿಯನ್ನು ನಿಲ್ಲಿಸಿಕೊಂಡು, ಓಂ ಎಂಬುದನ್ನೇ ಸಂತತವಾಗಿ ಚಿಂತಿಸುತ್ತಾ ಈ ಉಪಾಸಕನು ಇದ್ದುಕೊಂಡಿರು ವನು. ಮರಣಕಾಲದಲ್ಲಿ ಈ ಚಿಂತನೆಯೊಂದಿಗೆ ಬ್ರಹ್ಮಲೋಕಕ್ಕೆ ಹೋಗುವ ಮಾರ್ಗದ ಭಾವನೆಯನ್ನೂ ಮಾಡಿಕೊಳ್ಳುತ್ತ ನೆತ್ತಿಯಿಂದ ಪ್ರಾಣವನ್ನು ತ್ಯಜಿಸಲು ಅರ್ಚಿರಾದಿದೇವತೆಗಳು ಇವನನ್ನು ಸೂರ್ಯಲೋಕದ ಮೂಲಕ ಬ್ರಹ್ಮಲೋಕಕ್ಕೆ ಕೊಂಡೊಯ್ಯುವರು. ಅಲ್ಲಿ ಈ ಉಪಾಸಕನು ಅಪರಿಮಿತ ಭೋಗವನ್ನನುಭವಿಸಿ ಕಲ್ಪಾಂತದಲ್ಲಿ ಜ್ಞಾನವನ್ನು ಪಡೆದು ಬ್ರಹ್ಮನೊಡನೆ ಮುಕ್ತಿ ಯನ್ನೈದುವನು. ಇದಿಷ್ಟೂ ಕ್ರಮಮುಕ್ತಿಗೆ ಸಾಧನವಾದ ಓಂಕಾರೋಪಾಸನೆಯ ವರ್ಣನೆಯು. ಗೀತೆಯಲ್ಲಿಯೇ ಅಲ್ಲದೆ ಶ್ರುತಿಗಳಲ್ಲಿಯೂ ಈ ಉಪಾಸನಾ ವಿಧಿಯು ಕಂಡುಬರುತ್ತದೆ. (28–43)

ವೈದಿಕಾಚಾರಗಳು ಹ್ರಾಸವಾಗುತ್ತಿರುವ ಈ ಕಾಲದಲ್ಲಿ ಇವುಗಳನ್ನು ಆಚರಿಸುವದು ಸುಲಭಸಾಧ್ಯವಲ್ಲ. ಇದನ್ನು ಊಹಿಸಿಯೇ ವ್ಯಾಸಾದಿಋಷಿಗಳು ಸಗುಣೋಪಾಸನೆಯಂಥ ಹಗುರವಾದ ಹಲವು ಉಪಾಸನಾಪ್ರಕಾರಗಳನ್ನು ತಿಳಿಸಿಕೊಟ್ಟಿರುತ್ತಾರೆ. ಸಾಧಕರ ಅನುಗ್ರಹಕ್ಕಾಗಿ ಭಗವಂತನು ಮಾಯಾಮಯ ವಾದ ಅನೇಕರೂಪಗಳನ್ನು ಧರಿಸುತ್ತಾನಷ್ಟೆ. ಅಂತಹ ಯಾವದಾದರೊಂದು ರೂಪವನ್ನು ಆಶ್ರಯಿಸಿ ಅದರ ಮರೆಯಲ್ಲಿರುವ ಭಗವಂತನನ್ನು ಆರಾಧಿಸು ವದು ಸುಲಭವೂ ಆಗಿರುತ್ತದೆ. ಆದರೆ ಸತತಚಿಂತನೆ, ಸಾನ್ನಿಧ್ಯಭಾವನೆ, ಉತ್ಕಟವಾದ ಪ್ರೀತಿ– ಇವುಗಳು ಇಲ್ಲಿಯೂ ಬೇಕು. ಏಕೆಂದರೆ ಉಪಾಸನೆಯ ಮೂಲತತ್ತ್ವಗಳೇ ಇವು. ಭಕ್ತಿಯಿಲ್ಲದೆ ಮಾಡುವ ಧ್ಯಾನ, ಉಪಾಸನಾದಿ ಗಳೆಲ್ಲವೂ ವ್ಯರ್ಥ. ಆದ್ದರಿಂದಲೇ ಗೀತೆಯ ಧ್ಯಾನಯೋಗದ ಕೊನೆಯಲ್ಲಿ ಭಗವಂತನು 'ಯೋಗಿಗಳಲ್ಲೆಲ್ಲ ನನ್ನ ಭಕ್ತನು ಶ್ರೇಷ್ಠನು' ಎಂದಿರುತ್ತಾನೆ. (44–56)

ಭಕ್ತಿ ಎಂದರೆ ಪರಮೇಶ್ವರನ ಮಾಹಾತ್ಮ್ಯವನ್ನು ಅರಿತುಕೊಂಡಿ ದ್ದರಿಂದುಂಟಾಗುವ ಪ್ರೇಮವು. ಹೊರಗೆ ವಿಭೂತಿಗಳ ಉಪಾಸನೆ, ಒಳಗೆ ಮಾನಸಪೂಜೆ, ಸಂಭಾಷಣೆ, ಶರಣಾಗತಿ– ಇವುಗಳೆಲ್ಲವೂ ಭಕ್ತಿಯ ಪ್ರಕಾರಗಳೇ. ಭಕ್ತನು ಅಷ್ಟಸಾತ್ತ್ವಿಕಭಾವದಿಂದೊಡಗೂಡಿ ಭಗವನ್ನಾಮವನ್ನು

ಜಪಿಸುತ್ತ ಆ ಆನಂದದಲ್ಲಿಯೇ ಮೈಮರೆತಿರುವನು. ಭಗವಂತನ ಹೊರತು ಅವನಿಗೆ ಮತ್ತಾವುದೂ ಬೇಕಿರುವದಿಲ್ಲ. ಇದೇ ಭಗವನ್ನಿಷ್ಠೆಯು. ಸಾಧನ ರೂಪವಾದ ಈ ನಿಷ್ಠೆಯಿಂದ ಜ್ಞಾನನಿಷ್ಠಾರೂಪವಾದ ಪರಭಕ್ತಿಯನ್ನೂ ಸಂಪಾದನೆ ಮಾಡಿಕೊಳ್ಳಬಹುದು. ಈ ಸಾಧ್ಯಸಾಧನಗಳೆರಡನ್ನೂ ಸಾಧಿಸುವ ಬಗೆಯನ್ನು ಮುಂದೆ ಭಾಷ್ಯದ ಆಧಾರದಿಂದ ವಿವರಿಸಲಾಗುವದು.

(57–70)

ಮನುಷ್ಯನಲ್ಲಿ ಸಹಜವಾಗಿಯೇ ಅವಿದ್ಯಾಕಾಮಗಳು ಇದ್ದುಕೊಂಡಿ ರುತ್ತವೆಯಷ್ಟೆ. ಇವುಗಳನ್ನು ಪ್ರಯತ್ನದಿಂದ ಗೆದ್ದುಕೊಳ್ಳದೆ ಮಹಾತತ್ತ್ವದಲ್ಲಿ ನೆಲೆನಿಲ್ಲುವದು ಅಸಾಧ್ಯವು. ಲೌಕಿಕದೃಷ್ಟಿಯಿಂದ ಎಂಥ ವಿವೇಕಿಯೇ ಆಗಿರಲಿ, ಎಷ್ಟೇ ದೂರದೃಷ್ಟಿಯುಳ್ಳವನಾಗಿರಲಿ– ಭಾವನಾವಶನಾಗಿಯೇ ವ್ಯವಹರಿ ಸುತ್ತಿರುತ್ತಾನೆ. ಕೆಲವುಸಲ ವಿವೇಕವು ಸುಳಿದಾಡಿ ಹೋದರೂ ಸಮಯಕ್ಕದು ಒದಗುವದಿಲ್ಲ, ಮತ್ತು ಯಾವ ಗುಣದಿಂದ ತಪ್ಪಿಸಿಕೊಳ್ಳಬೇಕೆಂದು ಪ್ರಯತ್ನಿಸು ವೆವೋ ಅದರ ಹಾವಳಿಯು ಇನ್ನಷ್ಟು ಬಲವಾಗುವ ಸಂಭವವೇ ಹೆಚ್ಚಾಗಿರು ತ್ತದೆ. ಆದ್ದರಿಂದ 'ಶಕ್ತಿಯಿಂದಾಗದ್ದನ್ನು ಯುಕ್ತಿಯಿಂದ ಸಾಧಿಸಬೇಕು' ಎಂಬ ದೊಡ್ಡವರ ವಚನದಂತೆ ಕಾಮವನ್ನು ಉಪಾಯದಿಂದ ನಿಗ್ರಹಿಸಲೆತ್ನಿಸಬೇಕು. ಅದಕ್ಕೆ ಒಂದೇಒಂದು ಸುಲಭವಾದ ಉಪಾಯವೆಂದರೆ ಭಕ್ತಿ, ಭಕ್ತಿಯಿಂದ ಅಸಾಧ್ಯವಾದದ್ದೂ ಸಾಧ್ಯವಾಗಿ ಪರಿಣಮಿಸುತ್ತದೆ. (71–84)

ನಮ್ಮ ಹೃದಯದಲ್ಲಿ ಎದ್ದುಕೊಳ್ಳುವ ಕಾಮನೆಗಳ ಪರಿಪೂರ್ತಿಗಾಗಿ ಭಗವಂತನನ್ನು ಶರಣುಹೊಗುವದೇ ಭಕ್ತಿಯ ಮೊದಲ ಮೆಟ್ಟಿಲು. ಹೀಗೆ ಕಾಮನೆಯ ನಿಮಿತ್ತದಿಂದ ಪರಮಾತ್ಮನ ಕಡೆಗೆ ತಿರುಗಿದ ಕಾಮಿಗಳು ಸ್ವಲ್ಪಕಾಲದಲ್ಲಿಯೇ ನಿಷಿದ್ಧಕರ್ಮಗಳನ್ನು ಬಿಡುವವರಾಗುವರು. ಅನಂತರ ಸರ್ವಕಾಮನೆಗೂ ಫಲಕ್ಕೂ ಪರಮಾತ್ಮನೇ ಆಧಾರನು– ಎಂದು ನಂಬಿ ಅವನನ್ನೇ ಮನಃಪೂರ್ವಕವಾಗಿ ಆರಾಧಿಸುವರು. (85–91)

ಸರ್ವಕಾಮಗಳ ದಾತೃವೂ ವಿಶ್ವೇಶ್ವರನೂ ಆದ ಭಗವಂತನ ಸ್ಮರಣೆಯೊಂದಿದ್ದರೆ ಸಾಕು; ಈ ಕಾಮನೆಗಳು ಇದ್ದರೇನು, ಹೋದರೇನು?– ಎಂಬ ನಿರ್ಧಾರ ಬಂದಾಗ ಭಕ್ತನು ಯಾವ ದುಃಖಕ್ಕೂ ಹೆದರದೆ ಭಗವಂತನಲ್ಲಿ ಸ್ಥಿರವಾದ ಭಾವನೆಯನ್ನು ಪಡೆದವನಾಗಿರುತ್ತಾನೆ. ಅಂದರೆ

ಇಲ್ಲಿಯವರೆಗೆ "ವಿಭೂತಿ" ಉಪಾಸಕನಾಗಿದ್ದವನು ಇನ್ನುಮೇಲೆ ವಿಶ್ವರೂಪೋಪಾಸಕನಾಗುತ್ತಾನೆ. (92–101)

ವಿಶ್ವರೂಪೋಪಾಸಕನು ತನ್ನ ಎಲ್ಲಾ ಕರ್ಮಗಳನ್ನೂ ಭಗವಂತನಿಗೆ ಅರ್ಪಿಸುತ್ತಾನಲ್ಲದೆ ಕುಳಿತರೆ, ಎದ್ದರೆ, ಹೊರಳಿದರೆ, ಬಿದ್ದರೆ, ಇದ್ದರೆ, ಸತ್ತರೆ– ಏನಾದರೂ ತಾನು ಭಗವಂತನಲ್ಲಿಯೇ ಇರುವೆನೆಂಬ ದೃಢನಂಬಿಕೆಯು ಅವನಲ್ಲಿ ಉಂಟಾಗುತ್ತದೆ. ಸಂತತವೂ ನಾಮಸ್ಮರಣೆಮಾಡುತ್ತಾ ಅದರಲ್ಲಿಯೇ ಅವನು ಆನಂದಿತನಾಗಿರುತ್ತಾನೆ. ನಾನು, ನನ್ನದು– ಎಂಬುದರಲ್ಲಿಯ ಅಭಿನಿವೇಶವು ಅವನಲ್ಲಿ ಕಿಂಚಿತ್ತೂ ಇರುವದಿಲ್ಲ. ತನ್ನನ್ನು ದ್ವೇಷಿಸುವವರನ್ನೂ ಸಹ ಅವನು ಭಗವಂತನ ರೂಪದಿಂದಲೇ ಕಾಣುತ್ತಾನೆ. ಎದುರಿಗೆ ಕಾಣುವ ಭವ್ಯಪ್ರಪಂಚ, ಪಂಚಮಹಾಭೂತಗಳು, ಎಲ್ಲಾ ಜೀವರುಗಳು, ಗ್ರಹನಕ್ಷತ್ರಾದಿ ಗಳು, ಸಮುದ್ರಗಿರಿಭುವನಾದಿಗಳು, ವಿದ್ಯುತ್ತೇ ಮೊದಲಾದ ಅನೇಕ ಶಕ್ತಿವಿಶೇಷಗಳು–ಈ ಎಲ್ಲವೂ ಅವನ ದೃಷ್ಟಿಯಲ್ಲಿ ಭಗವಂತನ ಆವಿರ್ಭಾವವೇ ಆಗಿರುತ್ತವೆಯಲ್ಲದೆ ಅವನು ಯಾವದನ್ನು ಕಾಣುತ್ತಾನೋ, ಕೇಳುತ್ತಾನೋ ಅಥವಾ ಮುಟ್ಟುತ್ತಾನೋ ಅದೆಲ್ಲವೂ ಹರಿಮಯವೇ ಆಗಿರುತ್ತದೆ. ಇಂಥ ಅನನ್ಯಭಕ್ತನಿಗೆ ಜ್ಞಾನವು ಬಹಳ ಸುಲಭದಲ್ಲಾಗುತ್ತದೆಯೆಂದು ಆಚಾರ್ಯರು ತಿಳಿಸಿರುತ್ತಾರೆ. ಕೇವಲ ಭಕ್ತಿಯೊಂದರಿಂದಲೇ ಸಾಧನಚತುಷ್ಟಯವನ್ನು ಸಾಧಿಸಬಹುದು. ಭಕ್ತಿಯು ಪಕ್ವವಾದಾಗ ಮೂರವಸ್ಥೆಗಳೂ ಭಗವಂತನ ವಿಭೂತಿಗಳೇ ಆಗಿ ತೋರುತ್ತವೆಯಲ್ಲದೆ ವಾಸುದೇವನ ಹೊರತು ಬೇರಾವದೂ ಇಲ್ಲವೆಂಬ ತಿಳಿವಳಿಕೆಯೂ ಮೂಡುತ್ತದೆ. ಈ ಜ್ಞಾನವನ್ನೇ ಜ್ಞಾನನಿಷ್ಠೆ, ಪರಾಭಕ್ತಿ– ಎಂದು ಭಾಷ್ಯಗಳಲ್ಲಿ ವರ್ಣಿಸಿರುತ್ತದೆ. (102–126)

ಜ್ಞಾನಿಭಕ್ತರು ಭಗವಂತನು ನಿರ್ಗುಣನೆಂದು ತಿಳಿದಿದ್ದರೂ ತಮ್ಮ ಆನಂದಕ್ಕಾಗಿ ಅವನ ಸಗುಣರೂಪವನ್ನು ಕಲ್ಪಿಸಿಕೊಂಡು ನಲಿಯುವರು. ಹಿಂದೆ ಸಗುಣಾರಾಧನೆಯನ್ನು ಮಾಡಿದ್ದರ ಸಂಸ್ಕಾರವು ಈಗಲೂ ಅವರಲ್ಲುಳಿದುಕೊಂಡಿರುವದೇ ಇದಕ್ಕೆ ಕಾರಣ. ತಮ್ಮ ಆತ್ಮನಾದ ಭಗವಂತನು ತನ್ನ ಅವತಾರವಿಶೇಷಗಳಲ್ಲಿ ಹೊರಪಡಿಸಿರುವ ಗುಣಗಳನ್ನು ಸ್ಮರಿಸಿಕೊಂಡು ಮನದಲ್ಲಿಯೇ ಅವರು ಆನಂದಿಸುವರು. ತಾನೊಬ್ಬನೇ ಇದೆಲ್ಲವೂ ಆಗಿರುವ ಭಗವಂತನಿಗೆ ಯಾವದುತಾನೆ ಅಸಾಧ್ಯ? ಅವನು ನಿರ್ಗುಣನಾಗಿದ್ದೂ ಸಗುಣನಾಗಿ ತೋರಿಕೊಳ್ಳಬಲ್ಲನು; ಸಗುಣನಿರ್ಗುಣಗಳೆರಡರಲ್ಲಿ ಯಾವ

ಭೇದವೂ ಇಲ್ಲ ಎಂಬುದನ್ನು ಅವರು ಬಲ್ಲರು. ಆದ್ದರಿಂದಲೇ ಅಂತಃಕರಣವು ಹೊರಬಂದಾಗ ಸಗುಣರೂಪದಿಂದಲೂ ಒಳಸರಿದಾಗ ನಿರ್ಗುಣರೂಪ ದಿಂದಲೂ ಭಗವಂತನನ್ನು ಆರಾಧಿಸಿ ಜ್ಞಾನಿಗಳು ತಮ್ಮ ಜೀವನವನ್ನು ಆನಂದಮಯವಾಗಿ ಮಾಡಿಕೊಂಡಿರುವರಲ್ಲದೆ ಇತರರಿಗೂ ಆದರ್ಶ ರಾಗಿರುವರು. (126–141)

ವೇದೋಕ್ತಕರ್ಮಗಳನ್ನು ಆಚರಿಸುವದು ದುಸ್ಸಾಧ್ಯವಾಗಿರುವ ಈ ಕಲಿಯುಗದಲ್ಲಿ ಭಕ್ತಿಯೇ ಅತ್ಯಂತಸುಲಭಸಾಧನವೆಂದು ಸಂತಶರಣ ಜನರೆಲ್ಲರೂ ಸಾರಿರುವರಲ್ಲದೆ ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ವಿಧಾನವನ್ನೂ ತೋರಿಸಿಕೊಟ್ಟಿರುವರು. ಭಕ್ತಿಮಾಡುವದಕ್ಕೆ ಯಾರೂ ತಮ್ಮ ಜಾತಿಕುಲಗಳನ್ನು ಬಿಡಬೇಕಾದದ್ದಿಲ್ಲ. ಎಲ್ಲರೂ ತಮ್ಮತಮ್ಮ ಧರ್ಮದಲ್ಲಿದ್ದು ಕೊಂಡೇ ಅದನ್ನು ಸಾಧಿಸಬಹುದು. (142–145)

ಯಾರು ಭಕ್ತಿಯ ಮಹಿಮೆಯನ್ನು ಅರಿತಿರುವದಿಲ್ಲವೋ ಅವರ ಜೀವನವು ನಿಜವಾಗಿಯೂ ವ್ಯರ್ಥವೇ ಸರಿ. ಭಕ್ತಿಯೊಂದಿದ್ದರೆ ಮುಕ್ತಿಯು ತಾನಾಗಿಯೇ ಕೈಗೂಡುವದು. ಸಕಲಸದ್ಗುಣಗಳು ಬೆಳೆಯುವದಕ್ಕೂ ದುರ್ಗುಣಗಳು ಅಳಿಯುವದಕ್ಕೂ ಭಕ್ತಿಯೇ ಕಾರಣ. ಭಕ್ತಿಯ ಮಹಿಮೆಯನ್ನು ಗೀತೆಯಲ್ಲಿ ಬಹಳವಾಗಿ ಹೊಗಳಿರುತ್ತದೆ. ಉಪಾಸನೆಯಲ್ಲಿ ಸವಿಯು ಹುಟ್ಟಲು ಭಕ್ತಿಯೆಂಬ ಒಗ್ಗರಣೆ ಬೇಕೇಬೇಕು. (146–168)

ಈವರೆಗೆ ಉಪಾಸನೆಯ ತತ್ತ್ವವನ್ನು ಹೇಳಿದ್ದಾಯಿತಷ್ಟೆ. ಇನ್ನುಮುಂದೆ ಗೀತೆಯಲ್ಲಿ ಬಂದಿರುವ ಕರ್ಮಯೋಗದ ವಿಚಾರವನ್ನು ವಿವರಿಸಲಾಗುವದು. (169–170)

## ಹದಿಮೂರನೆಯ ಅಧ್ಯಾಯ

ಭಗವದ್ಗೀತೆಯು ಮುಖ್ಯವಾಗಿ ವೇದೋಕ್ತವಾದ ಪ್ರವೃತ್ತಿನಿವೃತ್ತಿ ಧರ್ಮಗಳನ್ನೂ ವಾಸುದೇವನೆಂಬ ಪರಬ್ರಹ್ಮತತ್ತ್ವವನ್ನೂ ನಿಃಶ್ರೇಯಸವೆಂಬ ಪ್ರಯೋಜನವನ್ನೂ ತಿಳಿಸುತ್ತದೆ. ಇವು ಮೂರೂ ಗೀತೆಯ ಸಾರವೆಂದು ತಿಳಿಯಬಹುದು. ಇಲ್ಲಿ ಎರಡು ವಿಧವಾದ ಧರ್ಮವೇ ಸಾಧನವು. ಪರಬ್ರಹ್ಮತತ್ತ್ವವೇ ಸಾಧ್ಯವು, ಅದರಿಂದುಂಟಾಗುವದೇ ಮೋಕ್ಷವೆಂಬ ಫಲವು– ಎಂದರಿತುಕೊಳ್ಳಬೇಕು. (1–8)

ಜ್ಞಾನನಿಷ್ಠೆಯನ್ನು ಹೊಂದುವದಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಡುವ ವಿರಕ್ತರ ಧರ್ಮವೇ ನಿವೃತ್ತಿಲಕ್ಷಣಧರ್ಮವು. ಮೋಕ್ಷಕ್ಕೆ ನೇರಸಾಧನವಾದ ಇದನ್ನು ಸಾಂಖ್ಯಶಬ್ದದಿಂದಲೂ ಕರೆದಿರುತ್ತದೆ. ಪ್ರವೃತ್ತಿ ಲಕ್ಷಣಧರ್ಮವೆಂದರೆ ಆಯಾ ವರ್ಣದವರೂ ಆಶ್ರಮದವರೂ ಮಾಡ ಬೇಕೆಂದು ವಿಧಿಸಿರುವ ಧರ್ಮವು; ಅದಕ್ಕೆ ಅಭ್ಯುದಯವೇ ಫಲವು. ಹೀಗೆ ಅಭ್ಯುದಯಕ್ಕೆ ಅಥವಾ ಬಂಧಕ್ಕೆ ಕಾರಣವಾದ ಕರ್ಮವನ್ನು ಮೋಕ್ಷಕ್ಕೆ ಕಾರಣವಾಗಿ ಮಾಡಿಕೊಳ್ಳುವ ಕೌಶಲ್ಯವೇ ಯೋಗವೆನಿಸಿರುತ್ತದೆ. ಕರ್ಮ ಯೋಗವು ಚಿತ್ತಶುದ್ಧಿ, ಜ್ಞಾನಪ್ರಾಪ್ತಿ, ಜ್ಞಾನನಿಷ್ಠೆ– ಎಂಬ ಕ್ರಮದಿಂದ ಮೋಕ್ಷಕ್ಕೆ ಕಾರಣವಾಗಿರುತ್ತದೆ. ಕೆಲವರು ಕರ್ಮಯೋಗದಿಂದ ಚಿತ್ತಶುದ್ಧಿಯನ್ನು ಹೊಂದಿದಬಳಿಕ ನಿವೃತ್ತಿಪರರಾಗಿ ಧ್ಯಾನಯೋಗದ ಮೂಲಕ ಜ್ಞಾನನಿಷ್ಠೆಯನ್ನು ಪಡೆಯುತ್ತಾರೆ. ಮತ್ತೆ ಕೆಲವರು ಕರ್ಮಯೋಗದಿಂದ ಚಿತ್ತಶುದ್ಧಿಯಾದ ಬಳಿಕವೂ ಕಾರಣಾಂತರದಿಂದ ಪ್ರವೃತ್ತಿಪರರಾಗಿಯೇ ಇದ್ದುಕೊಂಡು ಜ್ಞಾನನಿಷ್ಠೆಯನ್ನು ಪಡೆಯುತ್ತಾರೆ. ಹೀಗೆ ಸರಿಯಾಗಿ ಆಚರಿಸಿದ ಕರ್ಮ ಸಂನ್ಯಾಸ ಮತ್ತು ಕರ್ಮಯೋಗ– ಇವೆರಡಕ್ಕೂ ಒಂದೇ ಫಲ ಎಂಬುದನ್ನು ತಿಳಿದುಕೊಂಡವನೇ ನಿಜವಾದ ವಿವೇಕಿಯು. (9–24)

ಆತ್ಮಜ್ಞಾನನಿಷ್ಠೆಯನ್ನೇ ಮುಖ್ಯಾರ್ಥದಲ್ಲಿ 'ಯೋಗ' ಎಂದು ಆಚಾರ್ಯರು ಕರೆದಿರುತ್ತಾರೆ. ಅದಕ್ಕೆ ಸಾಧನವಾಗಿರುವದರಿಂದ ಕರ್ಮ ಯೋಗವೂ ಧ್ಯಾನಯೋಗವೂ ಯೋಗವೆನಿಸಿರುತ್ತವೆಯಷ್ಟೆ. ಜ್ಞಾನಕ್ಕೆ ಬಹಿರಂಗಸಾಧನವಾದ ಕರ್ಮಯೋಗವನ್ನು ಮೊದಲು ಚೆನ್ನಾಗಿ ಆಚರಿಸುವದರಿಂದಲೇ ಅಂತರಂಗಸಾಧನವಾದ ಧ್ಯಾನಯೋಗಕ್ಕೆ ಅರ್ಹತೆಯು ಬರುತ್ತದೆ. ಧ್ಯಾನಯೋಗದ ವಿಚಾರವನ್ನು ಈ ಹಿಂದೆಯೇ ತಿಳಿಸಿರುವದರಿಂದ ಈಗ ಕರ್ಮಯೋಗದ ವಿಚಾರವನ್ನು ಮಾತ್ರ ತಿಳಿಸಲಾಗುವದು. (25–32)

ಕರ್ಮವೆಂದರೆ ಇಲ್ಲಿ ದೇಹೇಂದ್ರಿಯಗಳ ವ್ಯಾಪಾರವಲ್ಲ, ಶಾಸ್ತ್ರದಲ್ಲಿ ಮಾಡಬೇಕೆಂದು ವಿಧಿಸಿರುವದೇ ಕರ್ಮವು; ಶಾಸ್ತ್ರದಲ್ಲಿ ಮಾಡಕೂಡದೆಂದು ನಿಷೇಧಿಸಿರುವದೇ ವಿಕರ್ಮವು; ಶಾಸ್ತ್ರೋಕ್ತಕರ್ಮಗಳನ್ನು ಮೋಹದಿಂದಲೋ ದೇಹಕ್ಕೆ ತೊಂದರೆಯಾಗುವದೆಂಬ ಭಯದಿಂದಲೋ ಬಿಟ್ಟುಬಿಡುವದು ಅಕರ್ಮವು. ಕರ್ಮವನ್ನು ಮಾತ್ರ ಮಾಡಿ ಮಿಕ್ಕೆರಡನ್ನೂ ಬಿಟ್ಟವನಿಗೆ ಒಳ್ಳೆಯ ಗತಿಯುಂಟಾಗುವದು. ವಿಕರ್ಮವನ್ನು ಮಾಡಿದವನಿಗೆ ದುರ್ಗತಿಯುಂಟಾಗು

ವದು. ಹೀಗೆ ಕರ್ಮವಿಕರ್ಮಗಳಿಗೆ ಸಂಸಾರದಲ್ಲಿ ತಿರುಗುತ್ತಿರುವದೇ ಫಲವು. (33–38)

ಕರ್ಮವು ಯೋಗವಾಗಬೇಕಾದರೆ (೧) ಫಲತ್ಯಾಗ (೨) ಅಹಂಕಾರತ್ಯಾಗ (೩) ಸಮತ್ವಬುದ್ಧಿ (೪) ಈಶ್ವರಾರ್ಪಣೆ– ಎಂಬೀ ನಾಲ್ಕನ್ನು ಅದಕ್ಕೆ ಸೇರಿಸಬೇಕು. ಅಹಂಕಾರತ್ಯಾಗವೆಂದರೆ ಯಾವದೇ ಕರ್ಮಮಾಡುವಾಗ 'ನಾನು ಇದನ್ನು ಮಾಡುವೆನು' ಎಂಬುದಕ್ಕೆ ಬದಲಾಗಿ 'ಈಶ್ವರನ ಆಳಾದ ನಾನು ಅವನ ಆಜ್ಞೆಯಂತೆ ಈ ಕರ್ಮವನ್ನು ಮಾಡಿ ಇದನ್ನವನಿಗೊಪ್ಪಿಸುವೆನು' ಎಂಬ ಭಾವವನ್ನೆಬ್ಬಿಸಿಕೊಳ್ಳುವದು. ಫಲತ್ಯಾಗವೆಂದರೆ ಕರ್ಮಕ್ಕೆ ಈ ಫಲವಾಗಲಿ ಎಂಬ ಸಂಕಲ್ಪವನ್ನು ತ್ಯಜಿಸಿ 'ಫಲವಾಗಲಿ ಆಗದಿರಲಿ ಈಶ್ವರನ ಆಜ್ಞೆಯಂತೆ ಒಳ್ಳೆಯದನ್ನೇ ಮಾಡುವೆನು'– ಎಂಬ ಭಾವವನ್ನು ಮನಸ್ಸಿನಲ್ಲಿ ತಂದುಕೊಳ್ಳುವದು. ಸಮತ್ವಬುದ್ಧಿಯೆಂದರೆ ಸಿದ್ಧಿಯಾಗಲಿ ಆಗದಿರಲಿ, ದುಃಖವೇ ಬರಲಿ ಸುಖವೇ ಬರಲಿ, ಅದರಿಂದ ಮನಸ್ಸಮಾಧಾನವನ್ನು ಕಳೆದುಕೊಳ್ಳದೆ ಪರಮೇಶ್ವರನನ್ನೇ ನಂಬಿಕೊಂಡು ಧರ್ಮಾಚರಣೆಯಲ್ಲಿ ತೊಡಗುವದು. ಈಶ್ವರಾರ್ಪಣವೆಂದರೆ ಸರ್ವಕರ್ಮಗಳನ್ನೂ ದಾಸ್ಯಭಾವದಿಂದ ಪರಮಾತ್ಮನಿಗರ್ಪಿಸುವದು. ಇದೇ ಕರ್ಮಯೋಗದಲ್ಲಿ ಮುಖ್ಯವಾದ ಅಂಗವು. ಹೀಗೆ ನಾಲ್ಕು ಅಂಗಗಳಿಂದೊಡಗೂಡಿದ ಕರ್ಮಯೋಗವನ್ನಾಚರಿಸುವದರಿಂದ ಚಿತ್ತವು ಬೇಗನೆ ಶುದ್ಧವಾಗುವದು. (39–52)

ಆಚಾರ್ಯರು ಭಾಷ್ಯದಲ್ಲಿ ಮೂರುಬಗೆಯ ಸಂನ್ಯಾಸವನ್ನು ತಿಳಿಸಿದ್ದು ಅವುಗಳಲ್ಲಿ ಜ್ಞಾನನಿಷ್ಠೆಯೆಂಬ ಪರಮಾರ್ಥಸಂನ್ಯಾಸವೇ ಮೊದಲನೆಯದು. ಅದನ್ನು ಪಡೆಯುವದಕ್ಕಾಗಿ ಗೃಹಸ್ಥಾಶ್ರಮಕರ್ಮಗಳನ್ನು ಕೈಬಿಟ್ಟು ಮುಮುಕ್ಷುಗಳು ಸ್ವೀಕರಿಸುವ ಸಂನ್ಯಾಸಕ್ಕೆ ಮುಮುಕ್ಷು ಆಶ್ರಮಸಂನ್ಯಾಸವೆಂದು ಹೆಸರು. ಇದಕ್ಕೆ ಹೆಚ್ಚಿನ ವೈರಾಗ್ಯವು ಬೇಕಾಗುವದರಿಂದ ಅದಿಲ್ಲದವರಿಗೆ ಮೂರನೆಯದಾದ ಫಲತ್ಯಾಗರೂಪಸಂನ್ಯಾಸವನ್ನು ಹೇಳಿರುತ್ತದೆ. ಇದೇ ಕರ್ಮಯೋಗವು. ಕರ್ಮಯೋಗಿಯು ಕರ್ಮದ ಫಲವನ್ನು ತ್ಯಾಗ ಮಾಡುತ್ತಾನಾದ್ದರಿಂದ ಇವನನ್ನು ಸಂನ್ಯಾಸಿಯೆಂದು ಕರೆದಿರುತ್ತದೆ. ಬರಿಯ ಕರ್ಮಗಳನ್ನು ಬಿಟ್ಟಮಾತ್ರದಿಂದ ಯಾರೂ ಸಂನ್ಯಾಸಿ ಅಥವಾ ಯೋಗಿಯೆನಿಸಿಕೊಳ್ಳಲಾರರು. ಫಲತ್ಯಾಗವೇ ಇಲ್ಲಿ ಮುಖ್ಯವು.

ಕರ್ಮಯೋಗಿಯು 'ಈಶ್ವರನ ಭೃತ್ಯನು ನಾನು; ಅವನು ಪ್ರೀತನಾದರೆ ನನಗೆ ಅಷ್ಟೇ ಸಾಕು' ಎಂದು ಭಕ್ತಿಯೋಗಕ್ಕೂ ಹತ್ತಿರವಾಗುತ್ತಾನೆ. ಹೀಗೆ ಸಂನ್ಯಾಸ, ಯೋಗ, ಭಕ್ತಿಯಿಂದೊಡಗೂಡಿದ ಕರ್ಮಯೋಗವು ಸಾಧನಗಳಲ್ಲೆಲ್ಲ ಶ್ರೇಷ್ಠವೂ ಈ ಕಾಲದಲ್ಲಿ ಆಚರಿಸುವದಕ್ಕೆ ಸುಲಭವೂ ಆದ ಸಾಧನವಾಗಿರುತ್ತದೆ. ಆದ್ದರಿಂದಲೇ ಗೀತೆಯಲ್ಲಿ ಭಗವಂತನು ಮತ್ತೆಮತ್ತೆ ಅರ್ಜುನನಿಗೆ ಇದನ್ನೇ ಉಪದೇಶಿಸಿರುವದು ಕಂಡುಬರುತ್ತದೆ. 'ನನಗೋಸ್ಕರ ಕರ್ಮವನ್ನು ಮಾಡುವದಕ್ಕಾಗದಿದ್ದರೆ ನೀನು ಮಾಡುವ ಕರ್ಮವನ್ನೇ ನನಗರ್ಪಿಸು' ಎಂದು ಭಗವಂತನು ಹೇಳಿರುತ್ತಾನೆ. ಇದಕ್ಕಿಂತಲೂ ಸುಲಭವಾದ ಸಾಧನವು ಇನ್ನೊಂದುಂಟೆ? ನಾವು ಮಾಡುವದ ರಲ್ಲಿ ಕೆಟ್ಟಕರ್ಮಗಳೂ ಕೂಡಿಕೊಂಡಿರುತ್ತವೆ. ಅವುಗಳನ್ನು ನಾವಾಗಿಯೇ ಬಿಡುವದು ಕಷ್ಟಸಾಧ್ಯವಾದ್ದರಿಂದ ಪರಮಾತ್ಮನಿಗೇ ಅವುಗಳನ್ನೂ ಒಪ್ಪಿಸಿ ಅಂತಹ ದುರಿತಕರ್ಮಗಳಿಂದ ಬಿಡಿಸಲು ಅವನನ್ನೇ ಮೊರೆ ಹೊಗಬೇಕು. ಯಾವನು ಎಷ್ಟೇ ಪಾಪವನ್ನು ಮಾಡಿರಲಿ, ನೀನೇ ಶರಣು ಎಂದು ಭಗವಂತನ ಕಡೆಗೆ ತಿರುಗಿದರೆ ಸಾಕು, ಅವನು ಸಾಧುವಾದನೆಂದೇ ತಿಳಿಯಬೇಕು. ಬೇಗಬೇಗನೆ ಅವನು ಧರ್ಮಾತ್ಮನಾಗುವನು, ಕೊನೆಗೆ ಜ್ಞಾನಸಾಧನಗಳಿಂದ ಜ್ಞಾನನಿಷ್ಠೆಯಲ್ಲಿ ನೆಲೆನಿಲ್ಲುವದಕ್ಕೂ ಅವನು ಸಮರ್ಥನಾಗುವನು. (53–90)

ಸರ್ವಕರ್ಮಫಲತ್ಯಾಗವು ಜ್ಞಾನಿಗೆ ಸಹಜವಾಗಿರುತ್ತದೆ; ಆದರೆ ಅಜ್ಞಾನಿಗೆ ಅದನ್ನೇ ಸಾಧನವಾಗಿ ಇಲ್ಲಿ ವಿಧಿಸಿರುತ್ತದೆ. ಜ್ಞಾನಿಯ ಲಕ್ಷಣಗಳೇ ಸಾಧಕರಿಗೆ ಸಾಧನಗಳಾಗಿ ವಿಧಿಸಲ್ಪಟ್ಟಿರುವದರಿಂದ ಜ್ಞಾನಿಯ ಸರ್ವ ಕರ್ಮಫಲತ್ಯಾಗಕ್ಕೂ ಈ ಕರ್ಮಯೋಗಕ್ಕೂ ಸಾಮ್ಯವಿದೆಯೆಂಬುದನ್ನು ಭಾಷ್ಯದಲ್ಲಿ ಅಗಸ್ತ್ಯನ ದೃಷ್ಟಾಂತದ ಮೂಲಕ ತಿಳಿಸಿಕೊಟ್ಟಿರುತ್ತಾರೆ. ಆತ್ಮನೇ ಸತ್ಯನೆಂದು ಅರಿತುಕೊಂಡಿರುವ ಜ್ಞಾನಿಯಲ್ಲಿ ಅಹಂಕಾರಕ್ಕೆ ಅಸ್ಪದವೇ ಇಲ್ಲದ್ದರಿಂದ ಅಹಂಕಾರತ್ಯಾಗವು ಜ್ಞಾನಿಗೆ ಸಹಜವಾಗಿರುತ್ತದೆ. ಆದರೆ ಅಜ್ಞಾನಿಯು 'ನಾನು ಮಾಡುವವನಲ್ಲ, ಈಶ್ವರನ ಕೃಪೆಯಿಂದಲೇ ಇದೆಲ್ಲವೂ ನಡೆಯುತ್ತದೆ' ಎಂಬ ಭಾವನೆಯಿಂದ ಅಹಂಕಾರತ್ಯಾಗಮಾಡುತ್ತಾನೆ. ಪಡೆಯಬೇಕಾದದ್ದು ಯಾವದೂ ಇಲ್ಲವಾದ್ದರಿಂದ ಜ್ಞಾನಿಗೆ ಫಲತ್ಯಾಗವು ಸಹಜವಾಗಿರುತ್ತದೆ; ಆದರೆ ಅಜ್ಞಾನಿಯು ಪಡೆಯಬೇಕಾದ ಫಲವನ್ನು ಪ್ರಯತ್ನಪೂರ್ವಕವಾಗಿ ತ್ಯಾಗಮಾಡುತ್ತಾನೆ. ಸರ್ವತ್ರ ಬ್ರಹ್ಮಬುದ್ಧಿಯಿಂದೊಡ

ಗೂಡಿರುವ ಜ್ಞಾನಿಗೆ ಸಿದ್ಧ್ಯಸಿದ್ಧಿಗಳಲ್ಲಿ, ಸುಖದುಃಖಗಳಲ್ಲಿ ಸಮತ್ವಬುದ್ಧಿಯು ತಾನಾಗಿಯೇ ಇದ್ದುಕೊಂಡಿರುತ್ತದೆ; ಆದರೆ ಅಜ್ಞಾನಿಯು ತನಗುಂಟಾಗುವ ಸುಖದುಃಖಗಳನ್ನು ಪರಮಾತ್ಮನಿಗರ್ಪಿಸಿ ಸಮತೆಯನ್ನು ತಾಳುತ್ತಾನೆ. ಈ ಜಗತ್ತೆಲ್ಲವೂ ಈಶ್ವರನಿಂದ ವ್ಯಾಪ್ತವಾಗಿರುತ್ತದೆಂಬುದನ್ನು ಅನುಭವದಿಂದ ಕಂಡುಕೊಂಡ ಜ್ಞಾನಿಯು ಮಾಡುವದೆಲ್ಲವೂ ಮುಖ್ಯಾರ್ಥದಲ್ಲಿ ಈಶ್ವರಾರ್ಪಣ ವಾಗಿರುತ್ತದೆ; ಆದರೆ ಅಜ್ಞಾನಿಯು ಭಕ್ತಿಯಿಂದೊಡಗೂಡಿ ತಾನು ಮಾಡುವದೆಲ್ಲವನ್ನೂ ಈಶ್ವರನಿಗೆ ಅರ್ಪಿಸುತ್ತಾನೆ. ಹೀಗೆ ಎರಡರಲ್ಲೂ ಹೋಲಿಕೆಯಿರುವದರಿಂದ ಈ ಸರ್ವಕರ್ಮಫಲತ್ಯಾಗವನ್ನು ಭಗವಂತನು ಗೀತೆಯಲ್ಲಿ ಹೊಗಳಿರುತ್ತಾನೆ. (91–116)

ಕರ್ಮಯೋಗವು ಧ್ಯಾನ, ಭಕ್ತಿ, ವೈರಾಗ್ಯಗಳಿಗೆ ಮೂಲವಾಗಿರುವದ ರಿಂದ ಇದನ್ನು ಕಡಿಮೆಯ ತರಗತಿಯ ಸಾಧನವೆಂದು ಹಳಿಯದೆ ಪ್ರತಿಯೊಬ್ಬರೂ ಆಚರಿಸಿ ಮನಃಶುದ್ಧಿಯನ್ನು ಪಡೆಯಬೇಕು. ಇದೇ ಶ್ರೀಗಳ ಉಪದೇಶದ ಸಾರಾಂಶವಾಗಿದೆ. (117–127)

## ಹದಿನಾಲ್ಕನೆಯ ಅಧ್ಯಾಯ

ಬ್ರಹ್ಮನಿಷ್ಠರ ಚರಣಗಳನ್ನು ಸ್ಮರಿಸಿಪರಮಾರ್ಥಸಾಧಕರಿಗೆ ಇಲ್ಲಿ ಸಲಿಗೆಯ ಧ್ವನಿಯಲ್ಲಿ ಹಿತನುಡಿಗಳನ್ನು ಹೇಳಬಯಸುತ್ತೇನೆ. ಏನೆಂದರೆ ತಿಳಿಯದೆ ನಾವು ಅನೇಕಸಲ ತಪ್ಪು ಮಾಡುತ್ತೇವಾದರೂ ಅದನ್ನು ತಿದ್ದಿಕೊಳ್ಳುವದರಲ್ಲಿಯೇ ನಮ್ಮ ಶ್ರೇಯಸ್ಸಿದೆ. ಜಾತಿನೀತಿಗಳು ಕೆಟ್ಟಿರುವ ಈ ಕಾಲದಲ್ಲಿ ವೇದಾಂತದ ದೊಡ್ಡಮಾತುಗಳನ್ನು ಕಲಿತು ಅಡ್ಡದಾರಿಯನ್ನು ಹಿಡಿಯುವವರೇ ಹೆಚ್ಚು ಮಂದಿ. ಆದರೆ ಸಾಧಕರು ಅಂಥ ತಪ್ಪನ್ನು ಎಂದಿಗೂ ಮಾಡದಿರಬೇಕು. ವೇದಾಂತವೆಂಬುದು ಕೇವಲ ಇತರರಿಗೆ ಉಪದೇಶಿ ಸುವದಕ್ಕಾಗಿ ಇಲ್ಲ, ಮತ್ತೇನೆಂದರೆ ನಮ್ಮ ಜೀವನಕ್ಕೆ ಆ ತತ್ತ್ವವನ್ನು ಇಳಿಸಿಕೊಂಡು ಪ್ರತಿನಿತ್ಯ ಆಚರಣೆಯಲ್ಲಿ ಅದನ್ನು ತರಬೇಕು. ಯಾರು ತಮ್ಮ ಜೀವನವನ್ನೇ ಅದಕ್ಕಾಗಿ ಮುಡಿಪಿಟ್ಟಿರುವರೋ ಅಂಥ ವಿರಾಗಿಗಳಿಗೆ ಯಾವ ತೊಂದರೆಯೂ ಇಲ್ಲ. ಪ್ರವೃತ್ತಿಮಾರ್ಗದಲ್ಲಿದ್ದು ಮೋಕ್ಷವನ್ನು ಬಯಸುವವರು ತಮ್ಮ ಕೈಲಾದಮಟ್ಟಿಗೂ ವರ್ಣಾಶ್ರಮಧರ್ಮಗಳನ್ನು ಪಾಲಿಸಲು ಯತ್ನಿಸಬೇಕು. ಏಕೆಂದರೆ ಶ್ರೀಹರಿಯು ಧರ್ಮಕ್ಕೇ ಒಲಿಯುವನೆಂದು

ಮಹಾತ್ಮರು ಅಪ್ಪಣೆಕೊಡಿಸಿರುತ್ತಾರೆ. ಆದ್ದರಿಂದ ಅಂಥ ಭಗವದ್ಭಕ್ತರ ಸಂಗವನ್ನೇ ಮಾಡಬೇಕು. 'ಯಾವನು ಬ್ರಹ್ಮವು ಇದೆ ಎಂದು ನಂಬುತ್ತಾನೋ ಅವನು ಆ ಬ್ರಹ್ಮವನ್ನು ಅರಿಯುವದಕ್ಕೆ ಕಾರಣವಾಗಿರುವ ವರ್ಣ, ಆಶ್ರಮ–ಮುಂತಾದವುಗಳ ವ್ಯವಸ್ಥೆ ಎಂಬ ಸನ್ಮಾರ್ಗದಲ್ಲಿ ಶ್ರದ್ಧೆಯುಳ್ಳವನಾಗಿ ಅದನ್ನು ಸರಿಯಾಗಿ ನಂಬಿ ನಡೆಯುತ್ತಾನೆ. ಬ್ರಹ್ಮವು ಇದೆ ಎಂದು ನಂಬದವನು ಅದನ್ನು ಹೊಂದುವ ಮಾರ್ಗವನ್ನೂ ಶ್ರದ್ಧೆಯಿಂದ ಅನುಸರಿಸಲಾರನು' ಎಂದು ತೈತ್ತಿರೀಯಭಾಷ್ಯದಲ್ಲಿ ಆಚಾರ್ಯರು ಹೇಳಿರುತ್ತಾರೆ. ಈ ಮಾತನ್ನು ಲಕ್ಷಿಸಿ ನಾವು ಆಸುರಸಂಪತ್ತನ್ನು ತ್ಯಜಿಸಿ ದೈವ ಸಂಪತ್ತಿನ ಗುಣವನ್ನು ಅಳವಡಿಸಿಕೊಳ್ಳುವದಕ್ಕೆ ಯತ್ನಿಸಬೇಕು. ನಿಜವಾದ ಭಕ್ತನ ಗುಣಗಳನ್ನೂ ಪ್ರಯತ್ನಪೂರ್ವಕವಾಗಿ ಸಂಪಾದಿಸಬೇಕು. ಕಾಯಿಕ, ವಾಚಿಕ, ಮಾನಸಿಕ ತಪಸ್ಸನ್ನು ಮಾಡಬೇಕು. ಮುಖ್ಯವಾಗಿ ನಮ್ಮನಮ್ಮ ಯೋಗ್ಯತೆಗೆ ತಕ್ಕ ಮೆಟ್ಟಿಲಿನಲ್ಲಿದ್ದುಕೊಂಡು ಆಯಾ ಸಾಧನವನ್ನು ಕೈಗೊಳ್ಳಬೇಕು. (1–37)

ಸಾಧಕರಾದವರು ಸದ್ಗುರುವನ್ನು ಹುಡುಕುವಾಗ ದುರಾಚಾರಿಗಳನ್ನು ಮೊದಲು ದೂರವಾಗಿರಿಸಬೇಕು. ಶಾಸ್ತ್ರತಿರಸ್ಕಾರವನ್ನು ಮಾಡುವಾತನು ಯಾವನೂ ಸದ್ಗುರುವಾಗಲಾರನೆಂದೇ ನೆರೆನಂಬಬೇಕು. ಯಾವನು ತಾನು ಮಹಾತ್ಮನೆಂದು ತನ್ನನ್ನು ತಾನೇ ಹೊಗಳಿಕೊಳ್ಳುತ್ತಿರುವನೋ ಅಥವಾ ಶಿಷ್ಯರಿಂದ ಸ್ತುತಿನಮಸ್ಕಾರಾದಿಗಳನ್ನು ಮಾಡಿಸಿಕೊಳ್ಳುತ್ತಿರುವನೋ ಅವನು ನಿಶ್ಚಯವಾಗಿಯೂ ಸಾಧುವೇಷಧಾರಿಯೆಂದೇ ತಿಳಿಯಬೇಕು. ಅಂಥವರ ವಿಷಯದಲ್ಲಿ ಎಚ್ಚರಿಕೆಯಿಲ್ಲದಿದ್ದರೆ ಸಾಮಾನ್ಯರು ಮೋಸಹೋಗಿ ಗುಂಡಿಗೆ ಬೀಳುವ ಸಂಭವವೇ ಹೆಚ್ಚಾಗಿರುತ್ತದೆ. ಆದ್ದರಿಂದ ಧೂರ್ತಲಕ್ಷಣಗಳಲ್ಲಿ ಮುಖ್ಯವಾದ ಕೆಲವನ್ನು ಮಾತ್ರ ಇಲ್ಲಿ ತಿಳಿಸಿರುತ್ತೇನೆ. ನಿಜವಾಗಿಯೂ ಸದ್ಗುರುವು ಸಿಗಬೇಕಾದರೆ ಈಶ್ವರಾನುಗ್ರಹವೂ ಪುಣ್ಯಫಲವೂ ಕೂಡಿಬಂದಿರಬೇಕು. (38–48)

ಯಾವನು ಶಾಸ್ತ್ರಾರ್ಥವನ್ನು ತಾನು ಅನುಭವಕ್ಕೆ ತಂದುಕೊಂಡಿರುವನೋ, ಯಾವನು ಶಾಸ್ತ್ರದ ಅರ್ಥವನ್ನು ಮತ್ತೊಬ್ಬರಿಗೆ ತಿಳಿಯಪಡಿಸಬಲ್ಲನೋ, ಮತ್ತು ಯಾವನು ತನ್ನಂತೆಯೇ ಶಿಷ್ಯನಿಗೂ ಆತ್ಮಾನುಭವವುಂಟಾಗುವಂತೆ ಮಾಡಬಲ್ಲನೋ– ಅಂಥವನು ನಿಜವಾದ ಸದ್ಗುರುವು. ಆಶೆಕಪಟಗಳಿಲ್ಲದೆ, ದ್ವೇಷಮತ್ಸರವಿಲ್ಲದೆ, ವಿಷಯಗಳಿಗೆ ದಾಸನಾಗದೆ, ವೈರಾಗ್ಯಪರನಾಗಿ, ಶಿಷ್ಯರು ಉದ್ಧಾರವಾಗಲೆಂಬ ಒಂದೇ

ಹಾರ್ೈಕೆಯಿಂದ ಪರಮಾರ್ಥವನ್ನು ಉಪದೇಶಿಸುವ ಗುರುವು ದೊರಕುವದು ಬಹಳ ದುರ್ಲಭವು. ಅಂಥ ಸದ್ಗುರುವನ್ನೇ ದಯಪಾಲಿಸೆಂದು ಅ ಭಗವಂತನನ್ನು ದಿನದಿನವೂ ಪ್ರಾರ್ಥಿಸುತ್ತಿರಬೇಕು. (49–59)

ಸಾಧಕರಾದವರು ಸತ್ತ್ವ, ರಜ, ತಮ– ಈ ಗುಣಗಳ ಸ್ವರೂಪ ಹಾಗೂ ಕಾರ್ಯಗಳನ್ನು ಗೀತೋಕ್ತಿಯಿಂದ ಮನನಮಾಡಿ ತಮವನ್ನು ರಜದಿಂದಲೂ ರಜಸ್ಸನ್ನು ಸತ್ತ್ವದಿಂದಲೂ ಗೆಲ್ಲುವ ಪ್ರಯತ್ನವನ್ನು ಮಾಡುತ್ತಿರಬೇಕು. ಚಿತ್ತಶುದ್ಧಿಗೆ ಹೇತುವೆಂದು ಶಾಸ್ತ್ರವು ವಿಧಿಸಿರುವ ಯಜ್ಞದಾನತಪೋರೂಪವಾದ ಕರ್ಮವನ್ನು ಎಂದಿಗೂ ಬಿಡಬಾರದು. ಆಶ್ರಮಿತ್ವವು ಅನಾಶ್ರಮಿತ್ವಕ್ಕಿಂತ ಮೇಲು ಎಂಬುದಕ್ಕೆ ಶ್ರುತಿಸ್ಮೃತಿಗಳ ಬೆಂಬಲವಿದೆ. ಆದ್ದರಿಂದ ನಾಸ್ತಿಕರ ಸಂಗವನ್ನು ಬಿಟ್ಟು ಆಸ್ತಿಕ್ಯಭಾವನೆಯಿಂದ ವೇದಮಾರ್ಗವನ್ನು ಅನುಸರಿಸಬೇಕು. (60–68)

ಚಿತ್ತಶುದ್ಧಿಗೆ ವೈದಿಕಕರ್ಮವು ಸಹಕಾರಿಯಾದರೂ ಅದನ್ನು ಸಾಧಿಸದವರಿಗೆ ಸತ್ಯ, ಶೌಚ, ಅಹಿಂಸೆ, ಅಮಾನಿತ್ವಾದಿಗಳು ಸಾಧಕವಾಗಿರುತ್ತವೆ. ವಿದುರ, ಧರ್ಮವ್ಯಾಧ, ಸಂವರ್ತನೇ ಮೊದಲಾದವರು ಆಶ್ರಮಕರ್ಮವಿಲ್ಲದೆಯೇ ಬ್ರಹ್ಮಜ್ಞಾನಿಗಳಾಗಿದ್ದರೆಂದು ತಿಳಿದುಬರುತ್ತದೆ. ಆದ್ದರಿಂದ ಮನುಷ್ಯಮಾತ್ರಕ್ಕೆ ಹೇಳಿರುವ ಜಪ, ಉಪವಾಸ, ದೇವತಾರಾಧನೆ– ಇಂಥ ಬೇರೆಬೇರೆಯ ಧರ್ಮಗಳಿಂದಲೂ ಜ್ಞಾನಕ್ಕೆ ಸಹಾಯವಾಗಬಹುದು. 'ಮತ್ತೊಂದು ಕರ್ಮವನ್ನು ಮಾಡಲಿ ಬಿಡಲಿ ಬ್ರಾಹ್ಮಣನು ಜಪದಿಂದಲೇ ಸಂಸಿದ್ಧನಾಗುವನು' ಎಂದು ಸ್ಮೃತಿಯೂ ಇದೆ. ಆದ್ದರಿಂದ ಪರಮಾರ್ಥ ಸಾಧಕರು ವರ್ಣಾಶ್ರಮಧರ್ಮವನ್ನು ಪಾಲಿಸಲಾಗದಿದ್ದರೂ ಜಪ, ಸ್ತೋತ್ರ, ಪಾರಾಯಣೇತ್ಯಾದಿನಿತ್ಯಕರ್ಮಗಳನ್ನು ಬಿಡಲಾಗದು. ಒಳಗೆ ಕಾಮಗಳಿರುವ ವರೆಗೂ ಅವುಗಳನ್ನು ಗೆಲ್ಲಲು ಧರ್ಮವನ್ನು ಅನುಷ್ಠಾನಮಾಡುತ್ತಲೇ ಇರಬೇಕು. ಹೀಗೆ ಭಗವಂತನನ್ನು ಅನನ್ಯವಾಗಿ ನಂಬಿ ಸನ್ಮಾರ್ಗದಲ್ಲಿ ಬಿಡದೆ ನಡೆಯುತ್ತಿರುವ ಸಾಧಕನಿಗೆ ಉತ್ತಮಗತಿಯುಂಟಾಗುವದು. (69–96)

ಕೊನೆಯದಾಗಿ ನಾನು ಸಾಧಕರಲ್ಲಿ ಪ್ರಾರ್ಥಿಸುವದಿಷ್ಟೆ: ಸಾಧಕರ ಅನುಗ್ರಹಾರ್ಥವಾಗಿ ಆಗಿಂದಾಗ್ಗೆ ಜಪಯಜ್ಞಗಳನ್ನು ಏರ್ಪಡಿಸಿದ್ದಲ್ಲದೆ ಅಲ್ಲಲ್ಲಿ ಸಂಚರಿಸಿ ಮುಮುಕ್ಷುಗಳಿಗೆ ಉಪದೇಶಮಾಡಿದ, ಈಗಲೂ ಮಾಡುತ್ತಲಿರುವ

ಶ್ರೀಗಳಂಥ ಅನುಭಾವಿಗಳು ಜಗತ್ತಿನಲ್ಲಿ ದೊರಕುವದು ಅತಿವಿರಳ. ಅಂಥವರ ಉಪದೇಶವನ್ನು ಒಮ್ಮೆಯಾದರೂ ಕೇಳಿ ಅಥವಾ ಅವರ ಗ್ರಂಥಗಳನ್ನಾದರೂ ಓದಿ ಸಾಧಕರು ಕೃತಾರ್ಥರಾಗಬೇಕು. (97–102)

# ಹದಿನೈದನೆಯ ಅಧ್ಯಾಯ

ಬ್ರಹ್ಮಸೂತ್ರವನ್ನು ಬರೆದ ಭಗವಾನ್ ಬಾದರಾಯಣರನ್ನೂ ಅದಕ್ಕೆ ಭಾಷ್ಯವನ್ನು ರಚಿಸಿದ ಸಾಕ್ಷಾತ್ ಶಂಕರರನ್ನೂ ಭಕ್ತಿಯಿಂದ ವಂದಿಸುತ್ತೇನೆ. ಅಮರಕೃತಿಯೆನಿಸಿದ ಭಾಷ್ಯವು ನಿರ್ದೋಷವಾದ ವೇದಾಂತತತ್ತ್ವವನ್ನು ಶ್ರುತಿಯುಕ್ತ್ಯನುಭವಗಳ ಆಧಾರದಿಂದ ಸುಲಭವಾಗಿ ಮನಗಣಿಸಿಕೊಡುವ ದಿವ್ಯಸಾಧನವಾಗಿದೆ. ಭಕ್ತಿ, ವೈರಾಗ್ಯ, ಸದ್ಧರ್ಮ, ಶ್ರೌತತರ್ಕಗಳ ನೆಲವೀಡಾದ ಭಾಷ್ಯವು ಜಿಜ್ಞಾಸುಗಳ ಆಶ್ರಯಸ್ಥಾನವೇ ಹೊರತು ತಾರ್ಕಿಕರಿಗೂ ನಾಸ್ತಿಕರಿಗೂ ಇದರಲ್ಲಿ ಪ್ರವೇಶವಿಲ್ಲ. ಸಮುದ್ರದಂತೆ ಬಹುಗಂಭೀರವೂ ರಮಣೀಯವೂ ಆದ ಇಂಥ ಭಾಷ್ಯವನ್ನು ರಚಿಸಿದ್ದರಿಂಲೇ ಶಂಕರರ ಕೀರ್ತಿಯೂ ಹರಡುವದಕ್ಕೆ ಅವಕಾಶವಾಯಿತೆನ್ನುವದರಲ್ಲಿ ಸಂಶಯವಿಲ್ಲ. (1–11)

ಆಚಾರ್ಯರ ಕಾಲಕ್ಕೆ ವೈದಿಕರೆಲ್ಲರೂ ಅದ್ವೈತಿಗಳೇ ಆಗಿದ್ದರೇ ಹೊರತು ಈಗಿನಂತೆ ವೇದವನ್ನು ಒಪ್ಪಿಯೂ ದ್ವೈತಾದಿಮತಗಳನ್ನು ಮಂಡಿಸುವವರು ಯಾರೂ ಇರಲಿಲ್ಲ. ಸಾಂಖ್ಯ, ವೈಶೇಷಿಕ, ಪಾತಂಜಲ ಮುಂತಾದ ಅವೈದಿಕರೇ ಆಗ ದ್ವೈತಿಗಳೆನಿಸಿಕೊಂಡಿದ್ದರಲ್ಲದೆ ಅದ್ವೈತಿಗಳಲ್ಲಿಯೇ ಅನೇಕ ಪಂಗಡಗಳಿದ್ದವೆಂದೂ ಗೊತ್ತಾಗುತ್ತದೆ. ಕರ್ಮದಿಂದ ಮೋಕ್ಷ, ಜ್ಞಾನಕರ್ಮಸಮುಚ್ಚಯದಿಂದ ಮೋಕ್ಷ, ವಾಸನಾಕ್ಷಯದಿಂದ ಮೋಕ್ಷ, ಪ್ರಸಂಖ್ಯಾನದಿಂದ ಮೋಕ್ಷ, ಸಮಾಧಿಯಿಂದ ಮೋಕ್ಷ– ಹೀಗೆ ನಾನಾರೀತಿ ಹೇಳುತ್ತಿದ್ದ ಅದ್ವೈತಿಗಳನ್ನು ನಿಗ್ರಹಿಸುವದಕ್ಕಾಗಿಯೇ ಆಚಾರ್ಯರು ಭಾಷ್ಯ ವನ್ನು ರಚಿಸಬೇಕಾಯಿತು. ವೇದವು ವಿಧಿಪರವೆಂದೂ ಅದಕ್ಕೆ ಲೋಕಾಂತರ ದಲ್ಲಿ ಫಲವಾಗುವದೆಂದೂ ಹೇಳುತ್ತಿದ್ದ ವಾದಿಗಳನ್ನು ಖಂಡಿಸಿ, ವೇದವು, ಕೇವಲ ವಿಧಿಪರವಲ್ಲ, ಅದು ವಸ್ತುಪರವೂ ಆಗಿದೆಯೆಂಬುದನ್ನು ಅವರು ಭಾಷ್ಯದಲ್ಲಿ ತೋರಿಸಿರುತ್ತಾರೆ. ಮೋಕ್ಷವನ್ನು ಪಡೆಯುವದಕ್ಕೆ ಜ್ಞಾನವು ಒಂದೇ ಸಾಕು, ಜ್ಞಾನವಾದಮೇಲೆ ಮತ್ತೆ ಯಾವ ಸಾಧನವನ್ನೂ ಮಾಡಬೇಕಾದದ್ದಿಲ್ಲ, ಆಗಲೇ ತಾನು ಮುಕ್ತ, ಜೀವಂತಮುಕ್ತಿಯೇ ಮುಖ್ಯಮುಕ್ತಿ– ಎಂಬುದನ್ನು

ಅನುಭವಪೂರ್ವಕವಾಗಿ ತೋರಿಸುತ್ತ ಹಿಂದಿನಿಂದಲೂ ಬಂದ ಪರಿಶುದ್ಧ ಸಂಪ್ರದಾಯದ ಮಹತ್ತ್ವವನ್ನು ಆಚಾರ್ಯರು ಎತ್ತಿಹಿಡಿದಿರುತ್ತಾರೆ. ಭಾಷ್ಯದಲ್ಲಿ ಅಲ್ಲಲ್ಲಿ ಬೌದ್ಧಾದಿಮತಗಳ ಖಂಡನೆಯು ಬಂದಿರುತ್ತದೆಯಾದರೂ ಅದೇ ಅವರ ಗುರಿಯಾಗಿರಲಿಲ್ಲ, ಪರಿಶುದ್ಧವಾದ ಅದ್ವೈತವನ್ನು ತಿಳಿಸುವದಕ್ಕಾಗಿಯೇ ಅವರು ಭಾಷ್ಯವನ್ನು ರಚಿಸಿದರೆಂಬುದು ಭಾಷ್ಯಾಭ್ಯಾಸಿಗಳಿಗೆಲ್ಲ ಗೊತ್ತಿರುವ ವಿಷಯವಾಗಿದೆ. (12–29)

ವಾರ್ತಿಕಕಾರರ ಅನಂತರ ಮತ್ತೆ ಆಚಾರ್ಯರಿಂದ ಹಿಂದೆ ಖಂಡಿಸಲ್ಪಟ್ಟ ಮತಗಳು ಅದ್ವೈತಸಂಪ್ರದಾಯದಲ್ಲಿ ಸೇರಿಹೋಗಿ ಆ ಸಂಪ್ರದಾಯವು ಹದಗೆಟ್ಟುಹೋಯಿತು. ಭಾಷ್ಯಕ್ಕೆ ಹಲವಾರು ವ್ಯಾಖ್ಯಾನ ಗಳಾದವು; ಚಿಕ್ಕಮುಟ್ಟಗ್ರಂಥಗಳು ಎಷ್ಟೋ ಆಚಾರ್ಯರ ಹೆಸರಿನಲ್ಲಿ ಬೆಳಕಿಗೆ ಬಂದವು. ಪಂಡಿತರು ಭಾಷ್ಯವನ್ನು ಕೈಬಿಟ್ಟು ತರ್ಕಕರ್ಕಶವಾದ ಗ್ರಂಥಗಳನ್ನೋದಲಾರಂಭಿಸಿದರು; ಇಂಗ್ಲಿಷನ್ನು ಕಲಿತವರು ಪರದೇಶದ ತತ್ತ್ವಶಾಸ್ತ್ರವನ್ನು ಓದುವ ವ್ಯಾಮೋಹವನ್ನು ಬೆಳಸಿಕೊಂಡರು. ತರ್ಕದಿಂದ ಯಾವದೊಂದೂ ನಿರ್ಣಯಕ್ಕೆ ಬರಲಾಗದಿದ್ದರೂ ಅದನ್ನೊಂದು ಶಾಸ್ತ್ರವೆಂದು ಕರೆದರು. ಇದರಿಂದ ಜಿಜ್ಞಾಸುಗಳು ದಿಕ್ಕುಗೆಟ್ಟು ನಿಲ್ಲುವಂತಾಯಿತು. ಇಂಥ ಗೊಂದಲಮಯಪರಿಸ್ಥಿತಿಯಲ್ಲಿ ಶಂಕರರೇ ಮತ್ತೊಮ್ಮೆ ಶ್ರೀಗಳವರ ರೂಪದಲ್ಲಿ ಅವತರಿಸಿ ಭಾಷ್ಯಗಳನ್ನು ಬೆಳಕಿಗೆ ಹಿಡಿದು ಜನರ ಮಂಕುತನವನ್ನು ದೂರಮಾಡಿದರು. ಶ್ರೀಗಳ ಈ ಉಪಕಾರವನ್ನು ಮನಃಪೂರ್ವಕವಾಗಿ ಸ್ಮರಿಸುತ್ತೇನೆ. ಜಿಜ್ಞಾಸುಗಳು ಅವರ ಇತರ ಗ್ರಂಥಗಳನ್ನೂ ಓದಿ ಭಾಷ್ಯಕ್ಕೂ ಅನುಭವಕ್ಕೂ ಒರೆಹಚ್ಚಿ ನೋಡಬೇಕು. (30–45)

ಬೆಳ್ಳಗಿರುವದೆಲ್ಲ ಹಾಲೆಂದು ತಿಳಿದುಕೊಂಡಿದ್ದ ಅಶ್ವತ್ಥಾಮನಂತೆ ಭಾಷ್ಯಬಾಹಿರವಾದ ದೋಷಗಳನ್ನೂ ಗುಣವೆಂದೇ ಭ್ರಮಿಸಿದ್ದ ನನಗೆ ಶ್ರೀಗಳವರ ದಯದಿಂದ ಸರಿಯಾದ ತಿಳಿವಳಿಕೆಯುಂಟಾಗಲು ಅದನ್ನೇ ಪದ್ಯರೂಪದಲ್ಲಿ ಇಲ್ಲಿ ಹೊರಗೆಡಹಿದ್ದೇನೆ. ಇದರಲ್ಲಿಯ ದೋಷಗಳೆಲ್ಲವೂ ಅಲ್ಪಮತಿಯಾದ ನನಗೆ ಸೇರಿದವುಗಳಾಗಿದ್ದು ಗುಣಗಳೆಲ್ಲವೂ ನನ್ನ ಆ ಗುರುವರ್ಯರಿಗೇ ಸೇರಿವೆ. ಯಾರು ಕೆಡುಕನ್ನು ಕಡೆಗಣಿಸಿ ಒಳಿತನ್ನು ಮಾತ್ರ ಸ್ವೀಕರಿಸುವರೋ ಅವರು ಆಚಾರ್ಯರ ಬೋಧದ ಸಾರಾಂಶವನ್ನು ಸವಿದು

ಆನಂದಿಸುವರು. ಹಿಂದೆ ಶ್ರೀಸುರೇಶ್ವರರು ತಮ್ಮ ತಿಳಿವಳಿಕೆಯನ್ನು ಒರೆಹಚ್ಚುವದಕ್ಕಾಗಿ ನೈಷ್ಕರ್ಮ್ಯಸಿದ್ಧಿ ಎಂಬ ಗ್ರಂಥವನ್ನು ರಚಿಸಿದಂತೆ ಈಗ ನಾನಾದರೂ ನನ್ನ ತಿಳಿವಳಿಕೆಯ ಮಟ್ಟವನ್ನು ಪರೀಕ್ಷಿಸುವದಕ್ಕಾಗಿಯೇ ಬ್ರಹ್ಮಜ್ಞರಿಗೆ ಈ ಗ್ರಂಥವನ್ನು ಅರ್ಪಿಸಿರುವೆನಲ್ಲದೆ ಇದರಲ್ಲಿ ಕೀರ್ತಿ, ಲಾಭ, ಪೂಜಾದಿಗಳ ಆಶೆಯು ಎಳ್ಳಷ್ಟೂ ಇಲ್ಲ. ಸಾಕ್ಷಾತ್ ದತ್ತಾತ್ರೇಯನೇ ಶ್ರೀಗಳ ರೂಪದಲ್ಲಿ ಬಂದು ಅನುಗ್ರಹಿಸಿದ್ದರ ಫಲವಾಗಿ ಭಾಷ್ಯಗಳ ಸಾರವನ್ನು ಮೊದಲು ಗದ್ಯದಲ್ಲೂ ಅನಂತರ ಭಾಮಿನಿಯಲ್ಲೂ ಬರೆಯಲು ಪ್ರಯತ್ನಿಸಿ ಕೈಸಾಗದೆ ಸುಮ್ಮನೆ ಕುಳಿತಿರಲು ಇದ್ದಕ್ಕಿದ್ದ ಹಾಗೆ ಸರ್ವಜ್ಞನ ಕರುಣೆಯಿಂದ ತ್ರಿಪದಿಯು ನನ್ನಲ್ಲಿ ಸ್ಫುರಿಸಿ ಹೊಸ ಉತ್ತೇಜನವನ್ನು ನೀಡಿತು. ಆ ಉತ್ಸಾಹದ ಭರದಲ್ಲಿಯೇ ವಿಶ್ವಾವಸುಸಂವತ್ಸರದ ಪುಷ್ಯಮಾಸದಲ್ಲಿ ಈ ಗ್ರಂಥವನ್ನು ಬರೆಯಲಾರಂಭಿಸಿ ಕೆಲವೇ ತಿಂಗಳುಗಳಲ್ಲಿ ಮುಗಿಸಿ ಪರಾಭವಸಂವತ್ಸರದ ಶ್ರಾವಣಮಾಸದಲ್ಲಿ ಶ್ರೀಗಳವರ ಚರಣದಲ್ಲಿ ಇದನ್ನಿಟ್ಟು ಹೊಸದಾಗಿ ಮಗಳನ್ನು ಗಂಡನಮನೆಗೆ ಕಳುಹಿಸಿಕೊಟ್ಟ ತಂದೆಯಂತೆ ನನ್ನಲ್ಲಿಯೇ ಸುಖಿಸಿದೆನು. ಶ್ರೀಗಳು ಇದನ್ನು ಮೆಚ್ಚಿ ಸ್ವೀಕರಿಸಿದ ದಿನವೇ ನನ್ನ ಬಾಳಿನಲ್ಲಿ ಅತ್ಯಂತ ಮಹತ್ತ್ವದ ದಿನವು. ನಾನು ವರಕವಿಯಲ್ಲ, ಕವಿತೆಯ ನಿಯಮಗಳು ನನಗೆ ಗೊತ್ತಿಲ್ಲ. ಈ ಕವಿತೆಯು ಸರ್ವಜ್ಞನಿಗೆ ಸೇರಿದ್ದು, ಇದರಲ್ಲಿಯ ಸವಿಯು ಬ್ರಹ್ಮಜ್ಞರದ್ದು. ತತ್ತ್ವವು ಶಂಕರರ ಭಾಷ್ಯದ್ದು. ಪ್ರೇರಣೆಯು ದತ್ತಗುರುವಿನದು. ಇದನ್ನು ಬರೆಯುವದಕ್ಕೆ ಸಹಕರಿಸಿದವಳು ಒಬ್ಬ ಗುರುಭಗಿನಿಯಾಗಿರುತ್ತಾಳೆ. ತಾನಾಗಿ ದೊರೆತ ಈ ದೈವಯೋಗವೇ ನಾನು ಈ ಗ್ರಂಥವನ್ನು ಬರೆದು ಮುಗಿಸುವದಕ್ಕೆ ಕಾರಣವಾಯಿತಲ್ಲದೆ ಬೇರೆಯಲ್ಲ. (46–106)

ಈ ಗ್ರಂಥವನ್ನು ಓದುವವರಿಗೆ ಯಾವಯಾವ ಫಲಗಳಾಗುವವೆಂದರೆ: ಭಾಷ್ಯಪಠಣದಲ್ಲಿ ಆಸಕ್ತಿಯೂ ಶಂಕರರ ಚರಣದಲ್ಲಿ ಭಕ್ತಿಯೂ ಶ್ರೀಗಳವರ ಬೋಧವನ್ನು ಕೇಳಬೇಕೆಂಬ ತವಕವೂ ಸದಾಚಾರದಲ್ಲಿ ಪ್ರೀತಿಯೂ ಹೆಚ್ಚುವದು. ಮತ್ತು ಸಜ್ಜನರ ಸಹವಾಸವು ದೊರೆತು, ಸಂಶಯಗಳೆಲ್ಲವೂ ಕತ್ತರಿಸಿ, ವೇಷಧಾರಿಗುರುಗಳಲ್ಲಿ ಬೇಸರವು ಹುಟ್ಟಿ, ತನ್ನ ದೋಷಗಳನ್ನು ತಿದ್ದಿಕೊಳ್ಳುವ ಮನಸ್ಸಾಗುವದು. ಸಂಸಾರದಲ್ಲಿ ಬೆಂದವರಿಗೆ ಭಕ್ತಿರಸಲೇಪನವಾಗುವದಲ್ಲದೆ ಧರ್ಮದಲ್ಲಿ ಪ್ರೇಮವೂ ಕರ್ಮದಲ್ಲಿ ಶ್ರದ್ಧೆಯೂ ಹೆಚ್ಚಿ ಮನಸ್ಸು ನಿರ್ಮಲವಾಗುವದು, ದೇಹವು ಪಾವನವಾಗುವದು, ಪಾಪವೆಲ್ಲವೂ ನಶಿಸಿಹೋಗುವದು. (107–121)

ಕೊನೆಯದಾಗಿ ಭಾಷ್ಯಕ್ಕೆ, ಪಂಥಕ್ಕೆ, ಜ್ಞಾನವರ್ಗಕ್ಕೆ, ಋಷಿಗಳಿಗೆ, ಶುದ್ಧವಾದ ಅದ್ವೈತಕ್ಕೆ, ಆದಿಗುರು ಶ್ರೀಶಂಕರರ ಪಾದಕಮಲಕ್ಕೆ, ಸುರೇಶ್ವರರ ಚರಣಕ್ಕೆ, ಶ್ರೀಸಚ್ಚಿದಾನಂದೇಂದ್ರಸರಸ್ವತಿಗಳಿಗೆ, ಅತ್ರಿನಂದನ ದತ್ತನಿಗೆ, ಶ್ರೀಪಾದ ಶ್ರೀವಲ್ಲಭರಿಗೆ, ನರಸಿಂಹಸರಸ್ವತಿಗಳಿಗೆ ಮಂಗಳವನ್ನು ಹಾಡಿ, ಬ್ರಹ್ಮಚೈತನ್ಯ, ಬ್ರಹ್ಮಾನಂದ, ಪರಮಹಂಸ, ಶಾರದಾದೇವಿ, ವಿವೇಕಾನಂದ, ರಾಮತೀರ್ಥ, ರಮಣಋಷಿ– ಇವರುಗಳಿಗೆ ಶುಭವನ್ನು ಕೋರಿ, ಕನ್ನಡನಾಡು, ನುಡಿ, ಜನ, ಭಾರತಾಂಬೆಗೆ ಜಯವನ್ನು ಹರಸಿ ಈ ಗ್ರಂಥವನ್ನು ಮುಗಿಸುತ್ತೇನೆ.

**–ಶ್ರೀಕೃಷ್ಣಾರ್ಪಣಮಸ್ತು–**

* * * * *

# ಕೆಲವು ಅಧ್ಯಾತ್ಮಗ್ರಂಥಗಳು

## (ಈ ಗ್ರಂಥಗಳೂ "ಶಂಕರದರ್ಶನ"ದಲ್ಲಿ ಪರಾಮೃಷ್ಟವಾಗಿವೆ)

೫. ಶಂಕರವೇದಾಂತಸಾರ: ಇದರಲ್ಲಿ ಶಂಕರವೇದಾಂತಸಿದ್ಧಾಂತದ ವಿಷಯಗಳನ್ನು ಪ್ರಸ್ಥಾನತ್ರಯಭಾಷ್ಯಗಳಲ್ಲಿ ಅಲ್ಲಲ್ಲಿ ಆಚಾರ್ಯರು ಒಂದೇ ವಿಷಯಕ್ಕೆ ಬರೆದಿರುವ ಅಭಿಪ್ರಾಯಗಳನ್ನೆಲ್ಲ ಒಂದುಕಡೆಗೆ ಕೂಡಿಸಿ ಪ್ರಮಾಣವಚನಗಳ ಮೂಲ ಸ್ಥಾನವನ್ನು ಸ್ಥಾನನಿರ್ದೇಶಸಮೇತವಾಗಿ ಬರೆದಿದೆ. ಆಯಾ ಸಂಸ್ಕೃತವಾಕ್ಯಗಳ ಅಭಿಪ್ರಾಯವನ್ನು ಗದ್ಯರೂಪವಾಗಿ ಸುಲಭಶೈಲಿಯಲ್ಲಿ ವಿವರಿಸಿದೆ. ಒಟ್ಟು ೨೮ ಪಾಠಗಳಿವೆ.

೬. ನೈಷ್ಕರ್ಮ್ಯಸಿದ್ಧಿ: ಈ ಗ್ರಂಥವು ಆಚಾರ್ಯರ ಬೆಂಬಳಿಯ ಶಿಷ್ಯರಾದ ಶ್ರೀ ಸುರೇಶ್ವರಾಚಾರ್ಯರು ಬರೆದಿರುವ ಗ್ರಂಥವಾದ್ದರಿಂದ ಶಾಂಕರಪ್ರಕ್ರಿಯೆಗೆ ತೀರ ಹತ್ತಿರವಿರುತ್ತದೆ. ಆತ್ಮನು ಸ್ವತಃಸಿದ್ಧನಾಗಿದ್ದರೂ ಅವನ ವಿಷಯದಲ್ಲಿರುವ ಅಜ್ಞಾನವನ್ನು ತೊಲಗಿಸುವದಕ್ಕೆ "ತತ್ತ್ವಮಸಿ" ಮುಂತಾದ ವೇದಾಂತವಾಕ್ಯವೇ ಬೇಕು. ವಾಕ್ಯಜನ್ಯ ಜ್ಞಾನವಾದಮೇಲೆ ಮಾಡಬೇಕಾದ ಸಾಧನವು ಯಾವದೂ ಇರುವದಿಲ್ಲ- ಎಂಬುದನ್ನು ಮನಗಾಣಿಸುವ ಅಮೋಘಪ್ರಕರಣವಿದು.

೭. ಉಪದೇಶಸಾಹಸ್ರಿ (ಗದ್ಯ-ಪದ್ಯ): ಪ್ರಕರಣಗಳು. ಸಂಪುಟ ೧ ಎಂಬ ಹೆಸರಿನಲ್ಲಿ ಪ್ರಕಾಶಿತವಾಗಿರುವ ಈ ಗ್ರಂಥದಲ್ಲಿ ಉಪದೇಶಸಾಹಸ್ರಿಯ ಗದ್ಯ-ಪದ್ಯ ಭಾಗಗಳೆರಡನ್ನೂ ಮೂಲ, ಅರ್ಥ, ಟಿಪ್ಪಣಿಸಮೇತ ವಿವರಿಸಲಾಗಿದೆ. ವಿಚಾರಶೈಲಿಯಲ್ಲಿ ಪ್ರಸ್ಥಾನತ್ರಯಭಾಷ್ಯಗಳೊಡನೆ ಸರಿತೂಗುವ ಗ್ರಂಥವಿದು. ಇದರ ಜೊತೆಗೆ ಅಪರೋಕ್ಷಾನುಭೂತಿ, ಅದ್ವೈತಾನುಭೂತಿ- ಎಂಬ ಎರಡು ಚಿಕ್ಕ ಪ್ರಕರಣಗಳನ್ನೂ ಈ ಗ್ರಂಥದಲ್ಲಿ ಸೇರಿಸಿದೆ.

೮. ಪಂಚಪಾದಿಕಾ- ೧ನೆಯ ವರ್ಣಕ: ಶ್ರೀಪದ್ಮಪಾದಾಚಾರ್ಯರು ಶ್ರೀಶಂಕರ ಭಗವತ್ಪಾದರವರ ಬ್ರಹ್ಮಸೂತ್ರಭಾಷ್ಯದಮೇಲೆ ರಚಿಸಿರುವ ಪ್ರಸಿದ್ಧವ್ಯಾಖ್ಯಾನದ ಮೊದಲನೆಯ ವರ್ಣಕವು ಇದು. ಅಧ್ಯಾಸಭಾಷ್ಯಭಾಗದ ವ್ಯಾಖ್ಯಾನವಿದೆ. ಶ್ರೀಗಳವರು ಇದನ್ನು ಮೂಲಸಮೇತವಾಗಿ ಕನ್ನಡಿಸಿ ಕ್ಲಿಷ್ಟವಿಷಯಗಳನ್ನು ಅಲ್ಲಲ್ಲಿಯೇ ವಿಶದಗೊಳಿಸುವ ಟಿಪ್ಪಣಿಗಳಿಂದ ಅಲಂಕರಿಸಿರುತ್ತಾರೆ. ವಿಚಾರಪ್ರಚೋದಕವಾದ ಪೀಠಿಕೆಯನ್ನೂ ಬರೆದಿರುತ್ತಾರೆ.

೯. ಪರಮಾರ್ಥಚಿಂತಾಮಣಿ: ಸ್ವತಂತ್ರವಿಚಾರಕ್ರಮದಿಂದ ವೇದಾಂತದ ಪ್ರಕ್ರಿಯೆಯನ್ನು ತಿಳಿಸುವ ಅಮೂಲ್ಯವಾದ ಪ್ರಕರಣವಿದು. ಪರಮಾರ್ಥವು ಸಚ್ಚಿದಾನಂದ ಸ್ವರೂಪವೆಂಬುದನ್ನು ಯುಕ್ತ್ಯನುಭವಗಳಿಂದ ಮನಗಾಣಬೇಕೆನ್ನುವ ವಿಚಾರದೃಷ್ಟಿಯ ಆಧುನಿಕಜಿಜ್ಞಾಸುಗಳಿಗೆ ಇದು ಅತ್ಯಂತಪ್ರಯೋಜಕರವಾಗಿರುತ್ತದೆ. ಇಡಿಯ ವಿಶ್ವದ ತಿರುಳನ್ನು ಗೊತ್ತುಪಡಿಸುವ ಮನನಕ್ರಮವು ಈ ಗ್ರಂಥದಲ್ಲಿದೆ.

ನಮ್ಮ ಇತರ ಪ್ರಕಟನೆಗಳ ವಿವರವಾದಪಟ್ಟಿಗೆ ಈ ವಿಳಾಸಕ್ಕೆ ಬರೆದುಕೊಳ್ಳಿ:

**ಕಾರ್ಯದರ್ಶಿ,**

**ಆಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.**

"ಬ್ರಹ್ಮಜ್ಞಕವಿ"

## ಶ್ರೀ ದೇವರಾಯ ಕುಲಕರ್ಣಿಯವರಿಂದ ರಚಿತವಾದ

## ಕೆಲವು ಕೃತಿಗಳು

೧. ಅನುಸಂಧಾನ: (ತ್ರಿಪದಿ ಪದ್ಯರೂಪದಲ್ಲಿ ಬ್ರಹ್ಮಜ್ಞವಚನಗಳು)

ಇದರಲ್ಲಿ ವೈರಾಗ್ಯ, ಭಕ್ತಿ, ಜ್ಞಾನಗಳ ಅನುಸಂಧಾನಕ್ರಮವನ್ನು ವಿವರಿಸಲಾಗಿದೆ. ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಈಚೆಗೆ ತಮ್ಮ ಅಧ್ಯಾತ್ಮವಿಚಾರಪರಪಕ್ವಾವಸ್ಥೆಯಲ್ಲಿ ರಚಿಸಿರುವ ಸಂಸ್ಕೃತಭಾಷೆಯಲ್ಲಿರುವ "ಗೀತಾಶಾಸ್ತ್ರಾರ್ಥವಿವೇಕಃ" ಎಂಬ ಗ್ರಂಥರತ್ನವನ್ನು ಚೆನ್ನಾಗಿ ಮನನಮಾಡಿ ಅದರ ಸಾರಭೂತವಾದ ಈ 'ಅನುಸಂಧಾನ' ಪದ್ಯಗಳನ್ನು 'ಬ್ರಹ್ಮಜ್ಞಕವಿ'ಗಳು ರಚಿಸಿರುತ್ತಾರೆ. ಇದರಲ್ಲಿ ಒಟ್ಟು ೧೮೦೦ ಪದ್ಯಗಳಿವೆ. ಅನುಭವಪ್ರಧಾನವಾಗಿ ಹೊರಬಿದ್ದಿರುವ ಈ ಕೃತಿಯು ಶಾಸ್ತ್ರಾರ್ಥವಿಚಾರಗಳ ಗಡಿಬಿಡಿಯಿಲ್ಲದೆ ನೇರಾಗಿ ಮುಮುಕ್ಷುಗಳನ್ನು ಆತ್ಮಾನುಸಂಧಾನಕ್ಕೆ ಒಯ್ಯುವ ಗ್ರಂಥ.

(ಇನ್ನೂ ಮುದ್ರಣವಾಗಿಲ್ಲ)

[ಸೂಚನೆ: ಈ ಗ್ರಂಥದ ಮುದ್ರಣಕ್ಕೆ ಬೇಕಾಗುವ ಖರ್ಚುವೆಚ್ಚಗಳನ್ನು ಉದಾರಾಶಯರಾದ ಮಹನೀಯರುಗಳು ಒದಗಿಸಿದಲ್ಲಿ ಗ್ರಂಥಕರ್ತರು ಈ ಪುಸ್ತಕವನ್ನೂ ಸಹ ಅಧ್ಯಾತ್ಮಪ್ರಕಾಶಕಾರ್ಯಾಲಯಕ್ಕೇ ಅರ್ಪಿಸಿಬಿಡಲು ಸಿದ್ಧರಾಗಿದ್ದಾರೆ.]

೨. ಶಂಕರಸ್ಮರಣ: (ಒಂದು ವಿಚಾರಪೂರ್ಣವಾದ ಗದ್ಯಶೈಲಿಯ ಕೃತಿ)

ಶ್ರೀಶಂಕರಭಗವತ್ಪಾದರವರ ಬಗ್ಗೆ ಮತ್ತು ಅವರ ಉಪದೇಶಗಳ ಬಗ್ಗೆ ಈಗ್ಗೆ ಜನರಲ್ಲಿ ಬೇರೂರಿರುವ ನಂಬಿಕೆಗಳನ್ನು ವಿಮರ್ಶಿಸಿ ಸಾರಾಸಾರವಿವೇಚನಾ ಪೂರ್ವಕವಾಗಿ ಸತ್ಯವಾದ ವಿಷಯಗಳನ್ನು ನಿರ್ಣಯಿಸಿ ಪ್ರಶ್ನೋತ್ತರರೂಪವಾಗಿ ಸರಳವಾದ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿರುವ ಗ್ರಂಥವಿದು. ಇದರ ಪಠನದಿಂದ ಮೂಢವಿಶ್ವಾಸಗಳು ಮಾಯವಾಗುವವಲ್ಲದೆ ಆಚಾರ್ಯವರ್ಯರ ಬಗ್ಗೆ ನಿಶ್ಚಲವಾದ ಭಕ್ತಿಯೂ ಉಂಟಾಗುವದು. ಗ್ರಂಥವು ಇಷ್ಟರಲ್ಲೇ ಹೊರಬೀಳಲಿದೆ.

ಇದೇ ಗ್ರಂಥಕರ್ತರ ಉಳಿದ ಕೃತಿಗಳ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ:


ದೇವರಾಯ ಕುಲಕರ್ಣಿ,

ನಂ. 14/ಎ (378) 6ನೇ ಕ್ರಾಸ

ನರಸಿಂಹರಾಜಕಾಲೋನಿ

ಬೆಂಗಳೂರು–19


ಬೆಂಗಳೂರು

10–1–70

## ಶ್ರೀ ಬ್ರಹ್ಮರ್ಷಿಕವಿ

# ಶ್ರೀ ದೇವರಾಯ ಕುಲಕರ್ಣಿ (ಹೊಂಬಳ)

[1922-1993]

ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ ಹೊಂಬಳ ಗ್ರಾಮದವರಾದ ಆಗರ್ಭ ಶ್ರೀಮಂತರಾದ ರಾಘವೇಂದ್ರರಾಯರ ಪುತ್ರರಾದ ಶ್ರೀ ದೇವರಾಯ ಕುಲಕರ್ಣಿಯವರು ತಾ॥ 2-12-1922ರಲ್ಲಿ ಜನಿಸಿದರು. ಅನಂತರ ಪ್ರಾಪ್ತವಯಸ್ಕರಾದಾಗ ಶ್ರೀ ಅಗ್ನಿಹೋತ್ರಿ ಶಂಕರಭಟ್ಟರೆಂಬ ಗುರುಗಳಲ್ಲಿ ಸಂಸ್ಕೃತಭಾಷೆ ಹಾಗೂ ಅರ್ವಾಚೀನವೇದಾಂತ ಸಂಪ್ರದಾಯದಂತೆ ಶಂಕರವೇದಾಂತಾಧ್ಯಯನ ಮಾಡಿದರು. 1954 ರಿಂದ ಹೊಳೆನರಸೀಪುರದ ಪೂಜ್ಯ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳ ಶಿಷ್ಯರಾಗಿ ಶಾಂಕರವೇದಾಂತವನ್ನು ಪ್ರಸ್ಥಾನತ್ರಯ ಶಂಕರಭಾಷ್ಯಾನುಸಾರವಾಗಿ ಅಧ್ಯಯನಮಾಡಿ ಪ್ರವಚನ ಹಾಗೂ ಗ್ರಂಥರಚನೆಗಳ ಮೂಲಕ ವೇದಾಂತತತ್ತ್ವ ಪ್ರಚಾರವನ್ನು ದೇಶ-ವಿದೇಶಗಳಲ್ಲಿ ಕೈಗೊಂಡರು. 1956ರಿಂದ ಬೆಂಗಳೂರು ನಗರದಲ್ಲಿ ನೆಲೆಸಿದ್ದರು.

ಸಂಸ್ಕೃತ, ಕನ್ನಡ, ಮರಾಠಿ, ತೆಲುಗು, ಇಂಗ್ಲಿಷ್ - ಭಾಷಾಭಿಜ್ಞರಾದ ಗ್ರಂಥಕರ್ತರು ತಮ್ಮ ಸಾವಿರಾರು ವೇದಾಂತಪ್ರವಚನಗಳ ಮೂಲಕ ಶಂಕರ ಸಿದ್ಧಾಂತವನ್ನು ಆಂಧ್ರ, ಕರ್ನಾಟಕ, ಮಹಾರಾಷ್ಟ್ರ ರಾಜ್ಯಗಳಲ್ಲಿ ಪ್ರಚಾರಮಾಡಿ ವಿದ್ವಾಂಸರ ಮೆಚ್ಚುಗೆಗೆ ಪಾತ್ರರಾಗಿದ್ದರು. ಕೆಲವು ವಿದೇಶೀಯ ಜಿಜ್ಞಾಸುಗಳಿಗೂ ಶಾಂಕರವೇದಾಂತವನ್ನು ಬೋಧಿಸಿದ್ದಾರೆ. ಸಾಧನಮಾರ್ಗದಲ್ಲಿಯೂ ಅನುಭವಿಗಳಾಗಿದ್ದು ಶ್ರೀ ದತ್ತಗುರುವಿನ ಉಪಾಸಕರೂ ಶಿಷ್ಟಾಚಾರ ಸಂಪ್ರದಾಯವಂತರೂ ಆಗಿದ್ದು ತಾ॥ 7-12-1993ರಂದು ತಮ್ಮ 72ನೆಯ ವಯಸ್ಸಿನಲ್ಲಿ ದೈವಾಧೀನರಾದರು. ಈ ಮಹನೀಯರ ಅಮೋಘವಾದ ಅಧ್ಯಾತ್ಮವಿದ್ಯಾ ಪ್ರಚಾರಸೇವೆಗೆ ಕಾರ್ಯಾಲಯದವರು ಕೃತಜ್ಞರಾಗಿರುತ್ತಾರೆ.

ಶ್ರೀಶಂಕರಾಚಾರ್ಯರು ಸಾವಿರ ವರ್ಷಗಳ ಹಿಂದೆಯೇ ಪ್ರಸ್ಥಾನತ್ರಯಗಳಿಗೆ ಭಾಷ್ಯವನ್ನು ರಚಿಸಿ ಪರಿಶುದ್ಧ ಅದ್ವೈತವೇದಾಂತದರ್ಶನವನ್ನು ಜಿಜ್ಞಾಸುಗಳಮುಂದೆ ಇಟ್ಟು ಲೋಕೋಪಕಾರಮಾಡಿರುವ ಸಂಗತಿ ಸರ್ವವಿದಿತ ವಾಗಿದೆ. ಅವರ ಗ್ರಂಥಗಳನ್ನು ನೇರಾಗಿ ಓದುವವರು ಕಡಿಮೆಯಾಗಿ ವ್ಯಾಖ್ಯಾನ ಪ್ರಸ್ಥಾನದ ಚಿಂತನೆಯೇ ಪ್ರಧಾನವಾಗಿದ್ದ ಕಾಲಘಟ್ಟದಲ್ಲಿ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು ಉದಿಸಿ ಶುದ್ಧಶಾಂಕರಪ್ರಕ್ರಿಯೆಯನ್ನು ಮತ್ತೆ ಲೋಕದಲ್ಲಿ ಬೆಳಗಿಸಿದರು. ಅವರ ಪರಂಪರೆಯಲ್ಲಿಯೇ ಶಾಂಕರಭಾಷ್ಯಗಳನ್ನು ಅಧ್ಯಯನಮಾಡಿ ಸಾರವನ್ನು ಗ್ರಹಣೆಮಾಡಿ ಶ್ರೀ ದೇವರಾಯ ಕುಲಕರ್ಣಿಗಳು ಈ **ಬ್ರಹ್ಮಜ್ಞವಚನಗಳು** ಎಂಬ ಪರ್ಯಾಪ್ತನಾಮವುಳ್ಳ **ಶಂಕರದರ್ಶನ** ಗ್ರಂಥವನ್ನು ರಚಿಸಿದರು.

ಕನ್ನಡದಲ್ಲಿ ಸರ್ವಜ್ಞಮಹಾಕವಿಯ ತ್ರಿಪದಿಪದ್ಯಗಳು ನೀತಿ, ಧರ್ಮ-ಮುಂತಾದ ಉತ್ತಮವಿಷಯಗಳನ್ನು ಒಳಗೊಂಡಿದ್ದು ಇಂದಿಗೂ ಜನಪ್ರಿಯವಾಗಿದ್ದು ಕನ್ನಡ ಸಾಹಿತ್ಯರಂಗದಲ್ಲಿ ವಿಶಿಷ್ಟಸ್ಥಾನಗಳಿಸಿವೆ. ಆದರೆ ವೇದಾಂತಸಿದ್ಧಾಂತವನ್ನೇ ಅದರಲ್ಲಿಯೂ ಶ್ರೀಶಂಕರಭಗವತ್ಪಾದರಿಗೆ ಸಮ್ಮತವಾದ ಅದ್ವೈತಸಿದ್ಧಾಂತ ಹಾಗೂ ಸಾಧನಗಳನ್ನೇ ಅಧಿಕರಿಸಿ ಪದ್ಯಶೈಲಿಯಲ್ಲಿ ಲಲಿತವಾಗಿ ರಚಿಸಲ್ಪಟ್ಟಿರುವ ಗ್ರಂಥಗಳು ಇಲ್ಲವೇಇಲ್ಲವೆನ್ನುವಷ್ಟು ವಿರಳವಾಗಿದೆ. ಈ ಗ್ರಂಥದಲ್ಲಿ ಆ ಕೊರತೆಯನ್ನು ನೀಗಿಸಿದೆ. ವಿಷಯಪ್ರತಿಪಾದನೆ ಹಾಗೂ ಪದ್ಯರಚನೆಯ ಶೈಲಿಗಳು ಸುಗಮವಾಗಿದ್ದು ಜನಸಾಮಾನ್ಯರಿಗೂ ಸಹ ಚೆನ್ನಾಗಿತಿಳಿಯುವಂತೆ ಈ ಪದ್ಯಗಳನ್ನು ರಚಿಸಿದ್ದಾರೆ.

ಈ ಗ್ರಂಥದಲ್ಲಿ ಶ್ರೀ ಶಂಕರರ ಪರಿಶುದ್ಧವೇದಾಂತಪ್ರಕ್ರಿಯೆ, ಈಗ ಸಾಮಾನ್ಯರಲ್ಲಿ ಹಬ್ಬಿರುವ ತಪ್ಪುಭಾವನೆ, ಅದರ ಕಾರಣಗಳು, ಅದಕ್ಕೆ ಪರಿಹಾರೋಪಾಯಗಳು – ಮುಂತಾದ ವಿಷಯಗಳನ್ನು ಲಕ್ಷಿಸಿ ಇಡೀ ಪ್ರಸ್ಥಾನತ್ರಯಭಾಷ್ಯಗಳನ್ನೇ ಗುರಿಪಡಿಸಿಕೊಂಡು ವಿಷಯವನ್ನು ಪ್ರತಿಪಾದಿಸಿದೆ. ಒಟ್ಟಿನಲ್ಲಿ ಪ್ರಸ್ಥಾನತ್ರಯಭಾಷ್ಯಗಳ ನೇರವಾದ ಅಭ್ಯಾಸ ಭಾಷ್ಯಕಾರರ ಮಾತುಗಳಿಂದಲೇ ಅದ್ವೈತತತ್ತ್ವ ಹಾಗೂ ಸಾಧನಗಳನ್ನು ತಿಳಿಯುವಕ್ರಮ ಇವೆರಡೂ ಮುಖ್ಯವಾಗಿ ತಿಳಿಯಬೇಕಾದದ್ದು ಅತ್ಯವಶ್ಯ. ಅದೇ ಉದ್ದೇಶದಿಂದ ಗ್ರಂಥವನ್ನು ಸಿದ್ಧಪಡಿಸಿದೆ. ಒಟ್ಟಿನಲ್ಲಿ ಈ ಗ್ರಂಥವು ಶಂಕರಹೃದಯವನ್ನು ತಿಳಿಯಬೇಕೆನ್ನುವವರಿಗೆ ಒಂದು ವರದಂತಿದೆ.

2018 ₹ 150/-